[1] 'ನನು ವಿಚಿತ್ರದೇಹ ಹೇತೂನಾಂ ಕರ್ಮಣಾಂ ಕೃತತ್ವಾತ್ ದೇಹ ವಿಶೇಷಪ್ರಾಪ್ತೌ ಕಿಂ ಕಾರಣಮತ ಆಹ ಯತೋಯತ ಇತಿ। ದೇಹಸ್ಯ ಪಂಚತ್ವ ಸಮಯೇ ಪಂಚಸು ಗುಣೇಷು ಭೂತೇಷು ಮಾಯಯಾ ನಾನಾದೇಹರೂಪೇಣ ರಚಿತೇಷು ದೈವೇನ ಫಲಾಭಿ ಮುಖೇನ ಕರ್ಮಣಾ ಚೋದಿತಂ ನಾನಾವಿಕಾರಾತ್ಮಕಂ ಮನೋ ಯಂ ಯಂ ದೇಹಂ ದೇವತಿರ್ಯಗಾದಿರೂಪಂ ಪ್ರತಿ ಧಾವತಿ ಧಾವಚ್ಚ ಸತ್ ಯಂ ಯಮಾಪ ಅಭಿನಿವೇಶೇನ ಪ್ರಾಪ್ತಂ ತತ್ರತತ್ರಾಸೌ ದೇಹೀ ಜಾಯತೇ। ನನು ಮನಸಃ ಕರ್ತೃತ್ವಾತ್ ತದೇವ ಜಾಯತಾಂ। ನ ತ್ವಕರ್ತಾऽಽತ್ಮೇತ್ಯತ ಆಹ ಪ್ರಪದ್ಯಮಾನ ಇತಿ । ತದೇವಾಹಮಿತಿ ಮನ್ಯಮಾನಸ್ತೇನ ಸಹ ಜಾಯತ ಇತಿ।
-ಶ್ರೀಧರ

ಯತೋ ಧಾವತಿ' ಎಂದು ವರ್ತಮಾನ ಕಾಲದ ಪ್ರಯೋಗವಿದೆ. 'ಆಪ' ಎಂದು ಭೂತಕಾಲ ಪ್ರಯೋಗ. 'ಯಂ ಯಂ ಪ್ರತಿ ಧಾವತಿ' ಎನ್ನುವಂತೆ 'ಯಂ ಯಂ ಆಪ್ನೋತಿ' ಎನ್ನಬೇಕಾಗಿತ್ತು.

ಇವರ ವ್ಯಾಖ್ಯಾನದಲ್ಲಿ 'ಪಂಚಸು' ಎನ್ನುವುದು ವ್ಯರ್ಥ. ಭೂತಗಳು ಪಂಚ ಎನ್ನುವುದು ಪ್ರಸಿದ್ಧ. ಅದನ್ನು ತಿರುಗಿ ಹೇಳಬೇಕಾಗಿಲ್ಲ. ನಮ್ಮ ವ್ಯಾಖ್ಯಾನದಲ್ಲಿ ಶರೀರಗಳು ದೇವ ಗಂಧರ್ವ ಪಿತೃ ಮನುಷ್ಯ ಅಸುರ ಎಂದು ಐದು ಬಗೆ ಎನ್ನುವುದು ಲೋಕದಲ್ಲಿ ಪ್ರಸಿದ್ಧವಿಲ್ಲ. ಗರುಡ ಪುರಾಣದಿಂದ ಸಿದ್ಧವಾಗುತ್ತದೆ. ಅದನ್ನು ಭಾಗವತ ಹೇಳಿದರೆ ಸಾರ್ಥಕವಾಗುತ್ತದೆ. 'ಆತ್ಮಪಂಚಸು' ಆತ್ಮ ಎಂದರೆ ದೇಹ ಎಂಬ ಅರ್ಥ ಪ್ರಸಿದ್ಧವೆ ಇದೆ. ದೇವಗಂಧರ್ವಾದಿ ಐದು ಬಗೆಯ ದೇಹಗಳಲ್ಲಿ ಎಂಬ ಅರ್ಥ ಸ್ವರಸವಾಗಿದೆ. 'ಆಪ ಪಂಚಸು' ಎಂಬ ಪಾಠದಲ್ಲಿ 'ಧಾವತಿ' ಎಂದ ಬಳಿಕ ತಿರುಗಿ 'ಆಪ' ಏಕೆ? 'ಧಾವತಿ' ಎಂದರೆ ಅಭಿಮಾನ ಪಡುತ್ತದೆ ಎಂದೇ ಅರ್ಥ. ತಿರುಗಿ 'ಆಪ' ಅಭಿಮಾನ ಪಡುತ್ತದೆ ಎನ್ನಬೇಕಾಗಿಲ್ಲ.

'ಸಹ ತೇನ ಜಾಯತೇ' ಮನಸಿನೊಂದಿಗೆ ಆತ್ಮ ಜನಿಸುತ್ತಾನೆ. ಎನ್ನುವುದು ವ್ಯರ್ಥ. ಆತ್ಮ ಮನಸಿನೊಂದಿಗೇ ಜನಿಸಬೇಕು ತಾನೆ? ಇದಕ್ಕೆ ಶ್ರೀಧರವ್ಯಾಖ್ಯಾನ ಹೀಗೆ ವಿವರಣೆ ನೀಡುತ್ತದೆ. ಮನಸ್ಸೇ ಕರ್ತೃ, ಮನಸ್ಸೇ ಹುಟ್ಟಬೇಕು, ಆತ್ಮ ಅಕರ್ತನಾದ್ದರಿಂದ ಏಕೆ ಹುಟ್ಟುತ್ತಾನೆ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಉತ್ತರವಾಗಿ 'ಪ್ರಪದ್ಯಮಾನಃ' ಮನಸ್ಸನ್ನು ತಾನೇ ಎಂದು ಭ್ರಮಿಸಿಕೊಂಡಿರುವುದರಿಂದ ಮನಸ್ಸು ಹುಟ್ಟುವಾಗ ತಾನೂ ಹುಟ್ಟುತ್ತಾನೆ ಎಂದು. ಇದು ಅದ್ವೈತ ಮತ ಪ್ರಕಾರವೂ ಕೂಡುವುದಿಲ್ಲ. ಮನಸ್ಸು ಜಡ. ಅದು ದೇಹಗಳನ್ನು ಆರಿಸಿಕೊಳ್ಳಬೇಕಾದರೆ ಚೇತನನಾದ ಆತ್ಮನೊಂದಿಗೆ ಬೆರೆತು ಒಂದಾಗಿರಬೇಕು. 'ಚಿದಚಿತ್ ಸಂವಲನ' ಎನ್ನುತ್ತಾರೆ. ಮನಸ್ಸಿನ ಯಾವ ಚಟುವಟಿಕೆಯೂ ಆತ್ಮನ ಸಂಪರ್ಕವಿಲ್ಲದೆ ನಡೆಯಲಾರದು. ಅದರಿಂದ ಮನಸ್ಸು ಹುಟ್ಟಲಿ. ಆತ್ಮ ಹುಟ್ಟುವುದೇಕೆ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಅಥವಾ ಮನಸ್ಸಿನೊಂದಿಗೆ ಬೆರೆತು ಒಬ್ಬ ಜೀವನಾಗಿರುವ ಆತ್ಮನೇ 'ಅಹಂಕಾರ' ಅಂದರೆ ಜೀವ. ಅವನು 'ಸಹ ತೇನ' ಮನಸಿನೊಂದಿಗೆ ಹುಟ್ಟುವುದು ಹೇಗೆ? ಇಬ್ಬರು ಬೇರೆ ಬೇರೆ ಜೀವರು ಇದ್ದರೆ ಒಬ್ಬ ಇನ್ನೊಬ್ಬ ನೊಂದಿಗೆ ಹುಟ್ಟಲು ಸಾಧ್ಯ. ನಮ್ಮ ವ್ಯಾಖ್ಯಾನದಲ್ಲಿ ಜೀವ ಪರಮಾತ್ಮನೊಂದಿಗೆ ಮುಖ್ಯಪ್ರಾಣನೊಂದಿಗೆ ಜನಿಸುತ್ತಾನೆ. ಅದರಿಂದ 'ಸಹ ತೇನ' ಶಬ್ದ ಶ್ರೀಧರವ್ಯಾಖ್ಯಾನ ಪ್ರಕಾರ ನೋಡಿದರೆ ವ್ಯರ್ಥವೆನಿಸುತ್ತದೆ.

[೧]ವಲ್ಲಭ ವ್ಯಾಖ್ಯಾನ ಪ್ರಕಾರ ನೋಡಿದರೆ 'ಮನಸ್ಸು ಬಯಸುವ ಶರೀರವೆ ಆತ್ಮನಿಗೆ ಸಿಗುತ್ತದೆ. ಮನಸ್ಸು ಉತ್ಕೃಷ್ಟವೆಂದು ಭಾವಿಸುವ ಶರೀರ ಮತ್ತು ವಿಷಯ ಪದಾರ್ಥ ಉತ್ಕೃಷ್ಟವೆಂದೇ ಎನಿಸುವುದು ಹೊರತು ಶರೀರ ವಿಷಯ ಪದಾರ್ಥಗಳಲ್ಲಿ ಇದು ಉತ್ಕೃಷ್ಟ ಇದು ನಿಕೃಷ್ಟ ಎಂದು ಸ್ವತಃ ವ್ಯತ್ಯಾಸವಿಲ್ಲ. ಅದರಿಂದ ಈ ಉತ್ಕೃಷ್ಟ ದೇಹ ರಕ್ಷಣೆಗಾಗಿ ದೇವಕಿಯನ್ನು ಕೊಲ್ಲುತ್ತೇನೆ ಎಂದು ಕಂಸ ಭಾವಿಸುವುದು ಉಚಿತವಲ್ಲ.'

ಆದರೆ ಮನಸ್ಸು ನಿಕೃಷ್ಟವಾದ ಶರೀರವನ್ನೂ ವಿಷಯಪದಾರ್ಥವನ್ನೂ ಉತ್ಕೃಷ್ಟವೆಂದು ಕರ್ಮಾಧೀನವಾಗಿ ಭ್ರಮಿಸುವ ಸಾಧ್ಯತೆ ಇದೆ. ಅದರಿಂದ ಈ ಭ್ರಮಪ್ರಯುಕ್ತವಾಗಿ ವಾಸ್ತವ ನಿಕೃಷ್ಟ ಶರೀರ, ನಿಕೃಷ್ಟ ವಿಷಯ ಪದಾರ್ಥವೆ ನನಗೆ ಜನ್ಮಾಂತರದಲ್ಲಿ ಸಿಗಬಹುದು. ಅದಕ್ಕೆ ನಾನೀಗ ಉತ್ಕೃಷ್ಟವಾದ ಈ ರಾಜ ಶರೀರ ರಕ್ಷಣೆಗಾಗಿ ಉತ್ಕೃಷ್ಟ ರಾಜ ವೈಭವ ರಕ್ಷಣೆಗಾಗಿ ದೇವಕಿಯನ್ನು ಕೊಲ್ಲುತ್ತೇನೆ ಎಂದು ಕಂಸ ಹೇಳಿದರೆ ವಸುದೇವನಲ್ಲಿ ಉತ್ತರವಿಲ್ಲ. ಮತ್ತು ಸ್ವತಃ ಎಲ್ಲ ಶರೀರಗಳೂ ವಿಷಯಪದಾರ್ಥಗಳೂ ಸಮಾನ ಎನ್ನುವುದೂ ವಸ್ತುಸ್ಥಿತಿಗೆ ವ್ಯತಿರಿಕ್ತವಾಗಿದೆ. ಎಲ್ಲ ಶರೀರಗಳೂ ವಿಷಯ ಪದಾರ್ಥಗಳೂ ತ್ರಿಗುಣಾತ್ಮಕವಾಗಿದ್ದು ಅವುಗಳಲ್ಲಿ ಸಾತ್ವಿಕ ರಾಜಸ ತಾಮಸ ಭೇದಗಳಿದ್ದೇ ಇವೆ. ಸಾತ್ವಿಕ ಉತ್ಕೃಷ್ಟ, ರಾಜಸ ತಾಮಸಗಳು ನಿಕೃಷ್ಟ.

ಹೀಗೆ ಪರಕೀಯರು ಭಾಗವತಕ್ಕೆ ಅಪವ್ಯಾಖ್ಯಾನ ಮಾಡುವರೆಂದು ಅಂದೇ ಸರ್ವಜ್ಞರಾದ ಶ್ರೀಮದಾಚಾರ್ಯರು ಭಾಗವತದ ನಿಜವಾದ ಆಂತರ್ಯವನ್ನು ಸ್ಪಷ್ಟವಾಗಿ ತೆರೆದು ತೋರಿಸಿದ್ದಾರೆ.

ಯತೋಯತೋ ಯತ್ರಯತ್ರ ಮನೋ ಧಾವತ್ಯಾತ್ಮಪಂಚಾನಾಂ
ಮಧ್ಯೇ ತತ್ರತತ್ರ ತೇನ ದೈವೇನ ಸಹ ಜಾಯತೇ ಗುಣಾನುಬದ್ಧಃ ಸನ್ ।
'ದೈವ ಗಾಂಧರ್ವ ಪಿತ್ರ್ಯೇಷು ಮಾನುಷೇಷ್ವಾಸುರೇಷು ಚ
ಯತ್ರಯತ್ರ ಮನೋ ಯಾತಿ ತತ್ರತತ್ರೋಪಜಾಯತೇ ।
ಸ್ವಗುಣಸ್ಯಾನುಸಾರೇಣ ಸತ್ವಾದಿವಿನಿಬಂಧನಃ ॥' ಇತಿ ಗಾರುಡೇ ।

---

೧ ಮನಶ್ಚ ಯದಾ ಯದ್ ಭಾವಯಿಷ್ಯತಿ ತಾದೃಶೋ ದೇಹೋ ಭವಿಷ್ಯತಿ ಯಚ್ಚ ತ್ಯಕ್ಷ್ಯತಿ ತದ್‌ಗಮಿಷ್ಯತಿ। ವಿಷಯಾಸ್ತು ಸಮಾ ಏವ। ಏವಮಪಿ ಸತಿ ಯಮೇವಾರ್ಥಂ ಮನ ಉತ್‌ಕೃಷ್ಟತ್ವೇನ ಮನ್ಯತೇ ತದಸ್ಮಾದುತ್‌ಕೃಷ್ಟಮೇವ ಭವತೀತಿ ನೋತ್‌ಕೃಷ್ಟ ದೇಹರಕ್ಷಾರ್ಥಮಿಯಂ ಮಾರಣೀಯೇತ್ಯರ್ಥಃ । -ವಲ್ಲಭಃ

'ದೇವಾದಿತ್ವಂ ಯೋಗ್ಯತಯಾ ತತ್‌ಸಕಾಶಸ್ತ್ವನುಸ್ಮೃತೇಃ।
ಶ್ವೇತದ್ವೀಪಾದಿ ತತ್ರಾಪಿ ಯೋಗ್ಯತಾಮಪ್ಯಪೇಕ್ಷ್ಯ ತು।
ವಿಷ್ಣೋಃ ಸ್ಥಾನಂ ವಿನಾಽನ್ಯತ್ರ ವಾಯುಶಕ್ರಾದಿನಾಮಪಿ।
ತ್ರೈಲೋಕ್ಯದೇಶಭೇದೇಷು ಯೋಗ್ಯತಾ ನ ತ್ವಪೇಕ್ಷಿತಾ ॥'

ಇತಿ ನಾರದೀಯೇ।

'ಯತೋಯತಃ' ಎಂದರೆ ಎಲ್ಲೆಲ್ಲಿ ಎಂದರ್ಥ. ಇದು ಸಾರ್ವವಿಭಕ್ತಿಕ ತಸಿ ಪ್ರತ್ಯಯಾಂತ ಶಬ್ದ. ಸಪ್ತಮೀ ವಿಭಕ್ತಿಯ ಅರ್ಥದಲ್ಲಿ ಇದೆ. ಆತ್ಮ ಪಂಚಸು ಎಂದರೆ ನಿರ್ಧಾರಣ ಸಪ್ತಮಿಯಾದ್ದರಿಂದ ಐದು ಬಗೆಯ ಶರೀರಗಳ ಮಧ್ಯದಲ್ಲಿ ಮನಸ್ಸು ಯಾವ ಯಾವುದನ್ನು ಆಶಿಸುವುದೋ ಆಯಾ ಶರೀರದಲ್ಲಿ ದೈವದೊಂದಿಗೆ ಅಂದರೆ ಹರಿಯೊಂದಿಗೆ ಮತ್ತು ವಾಯುವಿನೊಂದಿಗೆ ಜನಿಸುತ್ತಾನೆ. ಆದರೆ ಇದು ಜೀವಸ್ವರೂಪಭೂತವಾದ ಗುಣಕ್ಕೆ ಮತ್ತು ಪ್ರಾಕೃತ ಗುಣಕ್ಕೆ ಅನುಸಾರವಾಗಿರುತ್ತದೆ. ಹೊರತು ಮರಣಕಾಲದಲ್ಲಿ ಮನಸ್ಸು ಬಯಸಿದ ಮಾತ್ರಕ್ಕೆ ದೇವಾದಿ ಶರೀರ ಸಿಗುವುದಿಲ್ಲ.

'ದೇವ ಗಂಧರ್ವ ಪಿತೃ ಮನುಷ್ಯ ಅಸುರ ಶರೀರಗಳ ಮಧ್ಯದಲ್ಲಿ ಮನಸ್ಸು ಯಾವ ಯಾವ ಶರೀರವನ್ನು ಮರಣಕಾಲದಲ್ಲಿ ನೆನೆಯುವುದೋ ಆಯಾ ಶರೀರದಲ್ಲಿ ಜೀವ ಹುಟ್ಟುತ್ತಾನೆ. ಆದರೆ ಸತ್ವ ಮುಂತಾದ ಪ್ರಾಕೃತಗುಣಬಂಧನಕ್ಕೊಳಗಾಗಿರುವ ಜೀವನು ಆ ಗುಣಗಳಿಗನುಸಾರ ವಾಗಿಯೂ ಸ್ವರೂಪಭೂತಗುಣಾನುಸಾರವಾಗಿಯೂ ದೇವಾದಿ ಶರೀರ ಭಾಗಿಯಾಗುತ್ತಾನೆ' ಎಂದು ಗರುಡಪುರಾಣ ಹೇಳಿದೆ.

'ಸ್ವರೂಪದಿಂದ ಸಾತ್ವಿಕನಾದ ಉತ್ತಮಾಧಿಕಾರಿಗೆ ದೇವಶರೀರ, ಅಧಮಾಧಿ ಕಾರಿಗೆ ಗಂಧರ್ವಶರೀರ, ಮಧ್ಯಮಾಧಿಕಾರಿಗೆ ಪಿತೃಶರೀರ, ರಾಜಸನಾದ ನಿತ್ಯಸಂಸಾರಿಗೆ ಮನುಷ್ಯಶರೀರ, ತಾಮಸನಾದ ತಮೋಯೋಗ್ಯನಿಗೆ ಅಸುರಶರೀರ ಎಂದು ಸ್ವರೂಪ ಗುಣಾನುಸಾರವಾಗಿಯೇ ಶರೀರಪ್ರಾಪ್ತಿ. ಸ್ವರೂಪಗುಣಕ್ಕೆ ವ್ಯತಿರಿಕ್ತವಾಗಿ ದೇವಾದಿಶರೀರವನ್ನು ನೆನೆದರೆ ದೇವಾದಿಶರೀರ ಲಭಿಸಲಾರದು. ಆದರೆ ದೇವಾದಿಗಳ ಸಾಮೀಪ್ಯ ದೊರಕೀತು. ದೇವಾದಿ ಶರೀರ ಪ್ರಾಪ್ತಿ ಯೋಗ್ಯತೆ ಇಲ್ಲದವರಿಗೆಲ್ಲರಿಗೂ ದೇವಾದಿ ಸಾಮೀಪ್ಯ ದೊರಕುವ ನಿಯಮವಿಲ್ಲ. ವಿಷ್ಣುವಿನ ಶ್ವೇತದ್ವೀಪಾದಿಗಳು ಮತ್ತು ವಾಯು ಇಂದ್ರ ಮೊದಲಾದ ದೇವತೆಗಳ

ಸಾಮೀಪ್ಯ ಯೋಗ್ಯತೆ ಉಳ್ಳವರಿಗೆ ಮಾತ್ರ. ಭೂಲೋಕ ಭುವರ್ಲೋಕ ಸ್ವರ್ಗಲೋಕವೆಂಬ ಮೂರು ಲೋಕಗಳಲ್ಲಿರುವ ಬೇರೆ ಸ್ಥಾನಗಳ ಪ್ರಾಪ್ತಿಗೆ ಯೋಗ್ಯತೆ ಇರಬೇಕಾಗಿಲ್ಲ' ಎಂದು ನಾರದೀಯ ಪುರಾಣ ಹೇಳಿದೆ.

'ದೈವಚೋದಿತಂ ಮನಃ' ಎಂಬಲ್ಲಿ ಅದೃಷ್ಟವನ್ನೂ ಅದೃಷ್ಟನಿಯಾಮಕನಾದ ಶ್ರೀಹರಿಯನ್ನೂ, ಜೊತೆಗೆ ವಾಯುವನ್ನೂ ದೈವಪದದಿಂದ ಇಟ್ಟುಕೊಂಡು 'ತೇನ ಸಹ ಜಾಯತೇ' ಎಂಬುದರಿಂದ ಹರಿಯೊಂದಿಗೆ ವಾಯುವಿನೊಂದಿಗೆ ಜನಿಸುತ್ತಾನೆ ಎಂದು ಅರ್ಥಗ್ರಹಿಸಬೇಕು.

ತ್ರೈಲೋಕ್ಯ ಸ್ಥಾನ ಪ್ರಾಪ್ತಿಗೆ ಯೋಗ್ಯತೆ ಬೇಕಾಗಿಲ್ಲ ಎನ್ನುವುದರಿಂದ ಮಹರಾದಿ ಲೋಕಪ್ರಾಪ್ತಿಗೆ ಯೋಗ್ಯತೆ ಆವಶ್ಯಕವೆಂದು ಸೂಚಿತವಾಗುತ್ತದೆ.

❖❖❖

ದೇವಕಿಯ ಎಂಟನೆ ಗರ್ಭವೇ ನಿನಗೆ ಮೃತ್ಯು ಎಂದು ಅಶರೀರವಾಣಿ ಹೇಳಿದ್ದನ್ನು ಕೇಳಿ ಕಂಸ ದೇವಕಿಯನ್ನು ಕೊಲ್ಲಲು ಹೊರಟಾಗ ವಸುದೇವ ತಡೆದು ಹೇಳುತ್ತಾನೆ-

ಜ್ಯೋತಿರ್ಯಥೈವೋದಕಪಾರ್ಥಿವೇಷ್ವದಃ
ಸಮೀರವೇಗಾನುಗತಂ ವಿಭಾವ್ಯತೇ ।
ಏವಂ ಸ್ವಮಾಯಾರಚಿತೇಷ್ವಸೌ ಪುಮಾನ್
ಗುಣೇಷು ರಾಗಾನುಗತೋ ವಿಮುಹ್ಯತಿ ॥ ೪೩ ॥

ಸೂರ್ಯಚಂದ್ರಾದಿ ಜ್ಯೋತಿಯು ನೀರುತುಂಬಿದ ಮಣ್ಣಿನ ಪಾತ್ರೆಗಳಲ್ಲಿ ಪ್ರತಿಫಲಿಸಿದರೆ ಗಾಳಿಯ ವೇಗಕ್ಕೆ ಅನುಸಾರವಾಗಿ ಚಲಿಸಿ ನಾನಾ ರೂಪಗಳಿಂದ ಗೋಚರವಾಗುತ್ತದೆ. ಹಾಗೆಯೇ ಸಂಸಾರಿಜೀವನು ಪರಮಾತ್ಮನ ಇಚ್ಛೆಯಿಂದ ನಿರ್ಮಿತವಾದ ತ್ರಿಗುಣಾತ್ಮಕ ಲಿಂಗಶರೀರಗಳಲ್ಲಿ ಸೇರಿಹೋಗಿದ್ದು ವಿಷಯಪದಾರ್ಥಗಳ ಮೇಲಿನ ಅಭಿಮಾನದಿಂದ ನಾನಾ ಮೋಹವಿಕಾರಉಳ್ಳವನಾಗಿ ಗೋಚರಿಸುತ್ತಾನೆ. ಮುಕ್ತಜೀವನು ವಿಷಯ ಪದಾರ್ಥಗಳಲ್ಲಿ ಅಭಿಮಾನರಹಿತನಾದ್ದರಿಂದ ಹಾಗಾಗುವುದಿಲ್ಲ. ಗಾಳಿಯ ವೇಗಕ್ಕೆ ಸಿಲುಕದಿರುವ, ಮಣ್ಣಿನ ಪಾತ್ರೆಯ ಸಂಬಂಧವಿಲ್ಲದೆ ಮಣ್ಣಿನಂತೆ ನಿಶ್ಚಲವೆ ಆಗಿರುವ, ಆಳವಾದ ಸರೋವರ ಜಲ ಗಾಳಿಯ ವೇಗಕ್ಕೆ ಸಿಲುಕುವುದಿಲ್ಲ. ಅದರಲ್ಲಿ ಜ್ಯೋತಿ ಪ್ರತಿಫಲಿಸಿದರೆ ನಿಶ್ಚಲ

ಏಕಾಕಾರವಾಗಿಯೇ ಕಾಣುತ್ತದೆ. ಹಾಗೇ ವಿಷಯ ಪದಾರ್ಥಗಳ ಬಗ್ಗೆ ಅಭಿಮಾನವನ್ನು ತೊರೆದಿರುವ ಮುಕ್ತನು ತ್ರಿಗುಣಾತ್ಮಕವಲ್ಲದ ಸ್ವರೂಪಶರೀರದಲ್ಲಿದ್ದು ಮೋಹರಹಿತನಾಗಿಯೇ ಇರುತ್ತಾನೆ.

'ಮರಣೋತ್ತರದಲ್ಲಿ ಯಾವುದಾದರೊಂದು ಶರೀರ ಬರುತ್ತದೆ, ನಿಜ. ಆದರೆ ಅತ್ಯಂತ ಪ್ರಿಯವಾದ ನನ್ನ ಈಗಿನ ರಾಜಶರೀರ ಮುಂದೆ ಬರುತ್ತದೆ ಎಂದು ಹೇಳಲಾಗದು. ಅದರಿಂದ ಈ ಶರೀರವನ್ನು ರಕ್ಷಿಸುವುದಕ್ಕಾಗಿ ಅಕೃತ್ಯವನ್ನಾದರೂ ಮಾಡುವೆನು ಎಂದು ಕಂಸ ಹೇಳಿದರೆ ವಸುದೇವನ ಉತ್ತರ ಹೀಗಿದೆ- ನೀರು ಗಾಳಿಯಲ್ಲಿ ಚಲಿಸುವಾಗ ಅದರಲ್ಲಿ ಬೀಳುವ ಸೂರ್ಯನ ಪ್ರತಿಬಿಂಬವೂ ಚಲಿಸುತ್ತದೆ. ಹಾಗೇ ತನ್ನ ಅವಿದ್ಯೆಯಿಂದಾಗಿರುವ ಶರೀರದಲ್ಲಿ ಸೇರಿಕೊಂಡಿರುವ ಜೀವ ಅದರಲ್ಲಿ ಅಭಿಮಾನಪಟ್ಟು ಮೋಹಕ್ಕೊಳಗಾಗುತ್ತಾನೆ' ಎಂದು.

ಇದರ ಅಭಿಪ್ರಾಯ ಹೀಗೆ- ಮನಸ್ಸಿನೊಂದಿಗೆ ಜೀವ ಹುಟ್ಟುತ್ತಾನೆ, 'ಸಹ ತೇನ ಜಾಯತೇ' ಎನ್ನುವ ಮಾತಿನಿಂದ ಆತ್ಮನಿಗೆ ದೇಹಾದಿಗಳ ಅಭೇದಾರೋಪ ಪ್ರಯುಕ್ತವಾಗಿ ಜನ್ಮ ಉಂಟಾಗುತ್ತದೆ ಎಂದಿದೆ. ಅದರಿಂದ ದೇಹಾದಿಗಳ ಕೃಶತ್ವ ಮುಂತಾದ ಧರ್ಮಗಳು ಆತ್ಮನಲ್ಲಿ ಹೇಗೋ ಹಾಗೇ ಆತ್ಮನ ಪ್ರಿಯತ್ವಾದಿ ಧರ್ಮಗಳು ದೇಹಾದಿಗಳಲ್ಲಿ ಆರೋಪಿತವಾಗಿ ಕಾಣುವುವು. ಹೀಗಾಗಿ ರಾಜಶರೀರ ಮತ್ತು ಹಂದಿಯ ಶರೀರಗಳಲ್ಲಿ ವ್ಯತ್ಯಾಸವಿಲ್ಲದಂತಾಗುವುದರಿಂದ ರಾಜಶರೀರದ ರಕ್ಷಣೆಗಾಗಿ ಅಕೃತ್ಯವೆನ್ನೆಸಗುವುದ ರಲ್ಲಿ ಏನೂ ಔಚಿತ್ಯವಿಲ್ಲ, ಎಂದು. ಹೀಗೆ ಶ್ರೀಧರವ್ಯಾಖ್ಯಾನ [೧] ಹೇಳುತ್ತದೆ.

ಆದರೆ ಇದು ಸಮರ್ಪಕವಲ್ಲ. 'ಗಾಳಿಯ ವೇಗಕ್ಕೆ ಸಿಲುಕಿ ಪ್ರತಿಬಿಂಬ ಚಲಿಸುವಂತೆ ದೇಹಾಭಿಮಾನಕ್ಕೆ ಸಿಲುಕಿ ಜೀವ ಮೋಹಕ್ಕೊಳಗಾಗುತ್ತಾನೆ' ಎಂದು

---

೧ ನನು ಸತ್ಯಂ ಭವಿಷ್ಯತ್ಯೇವ ಕಿಮಪಿ ದೇಹಮಾತ್ರಂ। ತಥಾಪ್ಯಸ್ಯ ಅತಿಪ್ರಿಯಸ್ಯ ರಾಜದೇಹಸ್ಯ ರಕ್ಷಣಾಯಾಕೃತ್ಯಮಪಿ ಕ್ರಿಯತ ಇತಿ ಚೇತ್‌ತತ್ರಾಹ ಜ್ಯೋತಿರಿತಿ। ಅದಶ್ಚಂದ್ರಾದಿ ಜ್ಯೋತಿ ರುದಕಯುಕ್ತೇಷು ಪಾರ್ಥಿವೇಷು ಘಟಾದಿಷು, ಯದ್ವಾ ಉದಕೇಷು ಪಾರ್ಥಿವೇಷು ತೈಲಘೃತಾದಿಷು ಚ ಪ್ರತಿಬಿಂಬೇನ ಸ್ಥಿತಂ ಸಮೀರಸ್ಯ ವಾಯೋರ್ವೇಗಮನುಗತಂ ಕಂಪಾದಿಯುಕ್ತಂ ಪ್ರತೀಯತೇ। ಏವಂ ಸ್ವಾವಿದ್ಯಾರಚಿತೇಷು ಗುಣೇಷು ದೇಹೇಷು ಅಸೌ ರಾಗೇಣಾನುಗತಃ ಪ್ರವಿಷ್ಟೋ ಮುಹ್ಯತಿ ಅಭಿನಿವೇಶಂ ಪ್ರಾಪ್ನೋತಿ। ಅಯಂ ಭಾವಃ। ಆತ್ಮನಸ್ತಾವದ್ ದೇಹಾದ್ಯಧ್ಯಾಸಾಜ್ಜನ್ಮೋಕ್ತಂ ಸಹತೇನ ಜಾಯತ ಇತಿ। ತತಶ್ಚಾನ್ಯೋನ್ಯ ಧರ್ಮಾಧ್ಯಾಸಾತ್ ಯಥಾ ದೇಹಾದಿಧರ್ಮಾಃ ಕಾರ್ಶ್ಯಾದಯ ಆತ್ಮನಿ ಪ್ರತೀಯಂತೇ ಏವಮಾತ್ಮಧರ್ಮಾಃ ಪ್ರೇಮಾಸ್ಪದತ್ವಾದಯೋಽಪಿ ದೇಹಾದಿಷ್ವಿತಿ ರಾಜಸೂಕರ ದೇಹಯೋರ್ಭೇದಾಭಾವಾತ್ ವ್ಯರ್ಥೋ ಮೃತ್ಯು ಪ್ರತೀಕಾರ ಇತಿ। -ಶ್ರೀಧರಃ

ಮಾತ್ರ ಈ ಶ್ಲೋಕದಲ್ಲಿ ಹೇಳಿದೆ. ಹೊರತು ಬಿಂಬದಲ್ಲಿ ಪ್ರತಿಬಿಂಬ ಆರೋಪಿತ ವಾಗಿದೆ ಎಂದೂ ಅದರಿಂದ ಅವುಗಳಲ್ಲಿ ಪರಸ್ಪರ ಧರ್ಮಗಳ ಆರೋಪವಾಗುವು ದೆಂದೂ ಏನೂ ಹೇಳಿಲ್ಲ. ಪ್ರತಿಬಿಂಬ ಸ್ವರೂಪ ಅದ್ವೈತ ಮತದಲ್ಲಿಯೂ ಸತ್ಯ. ಬಿಂಬವೇ ಪ್ರತಿಬಿಂಬ. ಅದರಲ್ಲಿ ಚಲನೆ ಗಾಳಿಯ ವೇಗದಿಂದಾದುದೂ ಸತ್ಯ. ಅದರಿಂದ ಬಿಂಬ ಪ್ರತಿಬಿಂಬಗಳಲ್ಲಿ ಪರಸ್ಪರ ಧರ್ಮಾರೋಪಕ್ಕೆ ಅವಕಾಶವಿಲ್ಲ. ಇದೆ ಎಂದೊಪ್ಪಿದರೂ ಈ ಶ್ಲೋಕದಲ್ಲಿ ಗಾಳಿಯ ವೇಗಕ್ಕೆ ಚಲಿಸುವ ಪ್ರತಿಬಿಂಬದ ದೋಷವನ್ನು ಹೇಳಿದೆ ಹೊರತು ನಿಶ್ಚಲವಾಗಿರುವ ಬಿಂಬದ ಗುಣವನ್ನು ಹೇಳಿಲ್ಲ. ಅದರಿಂದ ಶರೀರದಲ್ಲಿ ಕೃಶತ್ವ ಮುಂತಾದ ದೋಷವನ್ನು ಹೇಳುವ ಅಭಿಪ್ರಾಯ ಶ್ಲೋಕಕ್ಕೆ ಇದ್ದಂತೆ ಕಾಣುವುದೇ ಹೊರತು ಪ್ರಿಯತ್ವ ಮುಂತಾದ ಗುಣವನ್ನು ಹೇಳುವ ಅಭಿಪ್ರಾಯವೆ ಇಲ್ಲ. ಇರುತ್ತಿದ್ದರೆ ಗಾಳಿಯ ವೇಗಕ್ಕೆ ಸಿಲುಕಿ ಪ್ರತಿಬಿಂಬ ಚಲಿಸುತ್ತದೆ ಎಂದೂ ದೇಹಾಭಿಮಾನಕ್ಕೊಳಗಾಗಿ ಜೀವ ತಾನು ದುಃಖಿ ಎಂದು ಮೋಹಗೊಳ್ಳುವನೆಂದೂ ವರ್ಣಿಸುವುದು ಅನುಚಿತವಾಗುತ್ತಿತ್ತು.

ಮುಂದೆ ರಾಜಶರೀರ ಬರುವುದು ನಿಶ್ಚಿತವೆನ್ನಲಾಗದಿರುವುದರಿಂದ ಈಗ ಇರುವ ರಾಜಶರೀರ ರಕ್ಷಣೆಗಾಗಿ ಅಕೃತ್ಯ ಮಾಡುವೆನು ಎಂದು ಕಂಸ ಹೇಳಿದರೆ ಅದಕ್ಕೆ ವಸುದೇವ ಹಿಂದಿನ ಶ್ಲೋಕದಲ್ಲಿಯೇ 'ದೈವ ಚೋದಿತಂ ಮನಃ' ಕರ್ಮಾನುಗುಣವಾಗಿ ಮನಸ್ಸು ಒಳ್ಳೆಯ ಅಥವಾ ಕೆಟ್ಟ ಶರೀರವನ್ನು ಮರಣಕಾಲ ದಲ್ಲಿ ಆರಿಸಿಕೊಂಡು ಜನ್ಮಾಂತರದಲ್ಲಿ ಅದೇ ಶರೀರದಲ್ಲಿ ಹುಟ್ಟುತ್ತದೆ' ಎನ್ನುವ ಮಾತಿನಿಂದ ಉತ್ತರಕೊಟ್ಟಿದ್ದಾನೆ. ನೀನು ಅಕೃತ್ಯ ಮಾಡಿದರೆ ಆ ದುಷ್ಕರ್ಮದ ಫಲವಾಗಿ ಕೆಟ್ಟ ಶರೀರ ಬರುವುದೇ ನಿಶ್ಚಿತವಾಗುತ್ತದೆ. ಅದರಿಂದ ಅಕೃತ್ಯ ಮಾಡಬೇಡ. ಅಕೃತ್ಯ ಮಾಡದೆ ಸತ್ಕರ್ಮ ಮಾಡಿದರೆ ಒಳ್ಳೆಯ ಶರೀರ ಬರುವುದೇ ನಿಶ್ಚಿತ ಎಂದು. ಹೀಗಾಗಿ ಈ ಶ್ಲೋಕ ವ್ಯರ್ಥ. ಮತ್ತು ಈ ಶ್ಲೋಕದಲ್ಲಿ ಒಳ್ಳೆಯ ಶರೀರ ಮುಂದೆ ಸಿಗುತ್ತದೆ ಎನ್ನುತ್ತಿಲ್ಲ. ಕೆಟ್ಟ ಹಂದಿಯ ಶರೀರವೂ ನಿನಗೆ ಪ್ರಿಯವಾಗಿ ತೋರುತ್ತದೆ ಎಂದು ಹೇಳುತ್ತಿದೆ. ಇದನ್ನು ಕೇಳಿ ಕಂಸ ಸಮಾಧಾನ ಪಡುವನೇನು?

'ಸ್ವಮಾಯಾ ರಚಿತೇಷು' ಎಂದರೆ 'ಸ್ವಾವಿದ್ಯಾರಚಿತೇಷು' ಎಂದು ಅರ್ಥ ಹೇಳುವುದು ಸರಿಯಲ್ಲ. ಸ್ವತಂತ್ರನಾದ ಹರಿಯ ಇಚ್ಛೆಯೇ ಸ್ವಮಾಯೆ. ಅವಿದ್ಯೆಯೆ ಮಾಯೆ ಎನ್ನುವುದು ಅದ್ವೈತಕ್ಕೂ ಸಮ್ಮತವಲ್ಲ. ಮಾಯೆ ಈಶ್ವರನದು, ಅವಿದ್ಯೆ ಜೀವನದೆಂದೇ ಅವರು ಹೇಳುತ್ತಾರೆ. ಜೀವೇಶ್ವರರು ಒಬ್ಬರೆ, ಮಾಯೆ ಅವಿದ್ಯೆಗಳೂ ಒಂದೇ ಎನ್ನುವುದು ಸರಿಯಲ್ಲ. ಹೀಗಾಗಿ ಜೀವನಿಗೆ 'ಸ್ವಮಾಯೆ' ಇದೆ ಎನ್ನಬಾರದಿತ್ತು.

'ಮಾಯೆ' ಎಂದರೆ ಜೀವಪ್ರಕರಣದಲ್ಲಿ ಅವಿದ್ಯೆಯೆ ಎನ್ನುವುದಾದರೆ ಶರೀರ ಜೀವನ ಅವಿದ್ಯೆಯಿಂದ ನಿರ್ಮಿತವಾದುದೆಂದು ಹೇಳುವುದು ಅದ್ವೈತಕ್ಕೆ ಹೊಂದಿಕೆಯಾಗುವುದೆ ಎಂದೂ ವಿಚಾರ ಮಾಡಬೇಕಾಗುತ್ತದೆ. ಶರೀರ ಇಂದ್ರಿಯ ಮುಂತಾದುವು ಅದ್ವೈತದಲ್ಲಿ ಆವಿದ್ಯಕವಲ್ಲ, ಮಾಯಿಕ. ಈಶ್ವರನ ಮಾಯೆಯಿಂದ ನಿರ್ಮಿತವಾಗಿರುತ್ತವೆ. ಜೀವನ ಅವಿದ್ಯೆಯಿಂದ ನಿರ್ಮಿತವಾದವುಗಳು ಹಗ್ಗದಲ್ಲಿ ಕಾಣುವ ಹಾವು, ಚಿಪ್ಪಿನಲ್ಲಿ ಕಾಣುವ ಬೆಳ್ಳಿ ಮುಂತಾದ ಕ್ಷಣಿಕ ಪದಾರ್ಥಗಳು.

[೧]ವೀರರಾಘವ ವ್ಯಾಖ್ಯಾನಪ್ರಕಾರ ಈ ಶ್ಲೋಕ 'ಜೀವನ ದೇವತ್ವ ಮನುಷ್ಯತ್ವ ಮುಂತಾದವು ದೇವಶರೀರ ಮನುಷ್ಯಶರೀರ ಮುಂತಾದ ಉಪಾಧಿಯಿಂದ ಕೃತಕವಾಗಿ ಬಂದವುಗಳು. ಸ್ವಾಭಾವಿಕವಾಗಿ ಜೀವ ಎಲ್ಲ ಶರೀರಗಳಲ್ಲಿಯೂ ಜ್ಞಾನರೂಪವಾಗಿರುತ್ತಾನೆ' ಎನ್ನುತ್ತಿದೆ. ಆದರೆ ಹೀಗೆ ಹೇಳಿದ್ದರಿಂದ ಪ್ರಕೃತಕ್ಕೆ ಏನು ಉಪಯೋಗ? ಕಂಸ ದೇವಕಿಯ ಹತ್ಯೆ ಏಕೆ ಮಾಡಬಾರದು? ಎಂಬ ವಿಷಯದಲ್ಲಿ ಏನೂ ಹೇಳಿದಂತಾಗುವುದಿಲ್ಲ. ನನ್ನ ರಾಜತ್ವ ರಾಜಶರೀರರೂಪ ಉಪಾಧಿಯಿಂದ ಬಂದುದು ಹೊರತು ಸ್ವಾಭಾವಿಕವಲ್ಲ ಎಂದಮಾತ್ರಕ್ಕೆ ರಾಜತ್ವವನ್ನು ತಂದುಕೊಡುವ ಈ ರಾಜಶರೀರವನ್ನು ನಾನು ಬಿಡಬೇಕೆ? 'ದೇವಕೀಪುತ್ರ ಅದನ್ನು ನಾಶಮಾಡಲಿ' ಎಂದು ಉಪೇಕ್ಷೆ ಮಾಡಬೇಕೆ? ಎನ್ನುತ್ತಾನೆ ಕಂಸ. ಅದಕ್ಕೆ ವಸುದೇವನಲ್ಲಿ ಉತ್ತರವಿಲ್ಲ.

[೨]ವಲ್ಲಭವ್ಯಾಖ್ಯಾನ ಪ್ರಕಾರ ವಸುದೇವ ಕಂಸನಿಗೆ ಹೀಗೆ ಹೇಳುತ್ತಾನೆ- 'ಉತ್ಪತ್ತಿ ಮರಣಗಳು ದೇಹಕ್ಕೆ ಹೊರತು ಆತ್ಮನಿಗೆ ಅವು ಇಲ್ಲ. ದೇಹವನ್ನು ತಾನೆಂದು ಭ್ರಮಿಸುವುದರಿಂದ ಆತ್ಮ ತಾನೇ ಹುಟ್ಟುತ್ತೇನೆ ಸಾಯುತ್ತೇನೆ ಎಂದು ಭ್ರಮಿಸುತ್ತಾನೆ. ಅದರಿಂದ ದೇವಕಿಯ ಮಗನಿಂದ ಸಾಯುವೆನೆಂದು ಭಯಪಡಬೇಡ. ಮತ್ತು ನಿನ್ನ ಈ ದೇಹ ಶ್ರೇಷ್ಠವೆಂದು ವ್ಯಾಮೋಹವೂ ನಿನಗೆ ಬೇಡ. ದೇಹಗಳೆಲ್ಲ ಒಂದೇ. ಮನಸ್ಸು ಯಾವ ದೇಹವನ್ನು ಶ್ರೇಷ್ಠವೆಂದೂ ತನಗೆ ಬೇಕೆಂದೂ ತಿಳಿಯುವುದೋ

---

೧ ತೇನ ಸಹ ಜನ್ಮರೂಪೋಪಾಧಿ ಪ್ರಯುಕ್ತಮೇವ ಜೀವಸ್ಯ ದೇವ ಮನುಷ್ಯತ್ವಾದಿ ನಾನಾತ್ವಂ। ವಸ್ತುತಸ್ತು ಸರ್ವತ್ರ ಶರೀರೇಷು ಜ್ಞಾನೈಕಾಕಾರತ್ವೇನಾವತಿಷ್ಠತೇ ಇತಿ ಸದೃಷ್ಟಾಂತ ಮಾಹ ಜ್ಯೋತಿ ರಿತಿ। -ವೀರರಾಘವಃ

೨ ಸ್ವಮೋಹೇನ ರುಚಿತೇಷು ಸಮ್ಯಕ್ತಯಾಽಭಿಮತೇಷು ದೇಹೇಂದ್ರಿಯಾದಿಷು ಅಸೌ ಜೀವಃ ಪುಮಾನ್ ಭಗವಾನೇವ ರಾಗೇಣಾನುಗತಃ ತೇನ ಸಹೈಕತ್ವಂ ಪ್ರಾಪ್ತಃ ಪ್ರತಿಬಿಂಬ ನ್ಯಾಯೇನ ಪ್ರವಿಷ್ಟಃ ವಿಶೇಷೇಣ ಮುಹ್ಯತಿ। ತಸ್ಮಾದ್ದೇಹಸಂಬಂಧೋ ಭ್ರಮಾತ್। ಅತೋ ನ ತದ್ವಶಾದಾತ್ಮನೋಽಪಕಾರಃ ಕರ್ತವ್ಯಃ। -ವಲ್ಲಭ

ಆ ದೇಹವೆ ಜನ್ಮಾಂತರದಲ್ಲಿ ಜೀವನಿಗೆ ಬರುತ್ತದೆ. ಆದರಿಂದ ನಿನ್ನ ಈ ರಾಜ ಶರೀರವನ್ನು ಕಾಪಾಡುವುದಕ್ಕಾಗಿ ದೇವಕಿಯ ಹತ್ಯೆ ಮಾಡಬೇಡ' ಎಂದು. ಶ್ರೀಧರವ್ಯಾಖ್ಯಾನವೂ ಹೀಗೇ ಹೇಳುತ್ತದೆ.

ಆದರೆ ಉತ್ಪತ್ತಿ ಮರಣಗಳು ಶರೀರಕ್ಕೇ ಹೊರತು ಆತ್ಮನಿಗಿಲ್ಲ. ಆತ್ಮ ನಿತ್ಯ ಎನ್ನುವುದು ನಿಜವೆ. ಆದರೂ ಅನಿತ್ಯವೆಂದ ಮಾತ್ರಕ್ಕೆ ಧನಕನಕ ಆಸ್ತಿಪಾಸ್ತಿಗಳ ರಕ್ಷಣೆ ಮಾಡುವುದು ಅಯುಕ್ತವೆನಿಸುವುದೆ? ಆಸ್ತಿಪಾಸ್ತಿಗಳು ಸತ್ಯವಲ್ಲ ಆತ್ಮ ಒಂದೇ ಸತ್ಯವೆಂದರೂ ಆಸ್ತಿಪಾಸ್ತಿ ಅಸತ್ಯವೆಂದ ಮಾತ್ರಕ್ಕೆ ಅದರ ರಕ್ಷಣೆಗೆ ಪ್ರಯತ್ನಿಸುವುದು ವ್ಯರ್ಥವಾಗುವುದೆ? ಹಗ್ಗದಲ್ಲಿ ಕಂಡ ಹಾವಿನಂತೆ ಸರ್ವಥಾ ಅಸತ್ಯ ಎನ್ನುವಂತಿಲ್ಲ. ಅಪರೋಕ್ಷಜ್ಞಾನ ಪರ್ಯಂತ ಶರೀರೇಂದ್ರಿಯಾದಿಗಳು ಧನಕನಕ ಮುಂತಾದವು ಎಲ್ಲವೂ ಇರುತ್ತವೆ. ಇರಬೇಕು. ಅವನ್ನು ರಕ್ಷಣೆ ಮಾಡಬೇಕು. ರಕ್ಷಣೆಗಾಗಿ ಶತ್ರುಗಳ ವಧೆಯನ್ನೂ ಮಾಡಬೇಕಾದೀತು.

ಎಲ್ಲ ಶರೀರಗಳೂ ಒಂದೇ ಎನ್ನುವುದೂ ವ್ಯವಹಾರದಲ್ಲಿ ಸಂಗತವೆನಿಸುವುದಿಲ್ಲ. ಪರಮಾರ್ಥವಿಚಾರದಲ್ಲಿ ಸಂಗತವಾದ ಮಾತ್ರಕ್ಕೆ ವ್ಯವಹಾರದಲ್ಲಿ ಅದನ್ನು ತರುವುದು ಜಾಣತನವಲ್ಲ.

ವಸ್ತುತಃ ಎಲ್ಲ ಶರೀರವೂ ಒಂದೇ ಅಲ್ಲ. ಸಾತ್ವಿಕ ಶರೀರ ಶ್ರೇಷ್ಠ. ರಾಜಸ ಮಧ್ಯಮ. ತಾಮಸ ಅಧಮ. ಮನಸ್ಸು ಒಂದು ಶರೀರವನ್ನು ಶ್ರೇಷ್ಠವೆಂದು ತಿಳಿದಮಾತ್ರಕ್ಕೆ ಅದು ಶ್ರೇಷ್ಠವಾಗುವುದಿಲ್ಲ.

ಹೀಗೆ ಪರಕೀಯರು ಶ್ಲೋಕಕ್ಕೆ ಅಪವ್ಯಾಖ್ಯಾನ ಮಾಡುವರೆಂದು ಮೊದಲೇ ಶ್ರೀಮದಾಚಾರ್ಯರು ಸರಿಯಾದ ವ್ಯಾಖ್ಯಾನ ಮಾಡಿಕೊಟ್ಟಿದ್ದಾರೆ-

ವಿಭಾವ್ಯತೇ ವಿವಿಧಂ ಭಾವ್ಯತೇ ।
ಸ್ವಮಾಯಾರಚಿತೇಷು ವಿಷ್ಣುಮಾಯಾರಚಿತೇಷು ।
ರಾಗಾನುಗತಃ ಪುಮಾನ್ ಜೀವೋ ವಿವಿಧಂ ಮುಹ್ಯತಿ ॥

ಯಥೈವೋದಶರಾವೇಷು ಸೂರ್ಯಾದಿಃ ಪ್ರತಿಬಿಂಬಿತಃ ।
ವಾಯುನಾ ಚಲಿತೋ ಭಾತಿ ಛಿನ್ನಭಿನ್ನಾದಿರೂಪವಾನ್ ।
ಏವಂ ವಿಷ್ಣ್ವಿಚ್ಛಯಾ ಜಾತಗುಣೇಷು ಪ್ರತಿಬಿಂಬಿತಃ ।
ಛಿನ್ನೋ ಭಿನ್ನೋ ಮೃತೋಽಸ್ಮೀತಿ ಬಹುಧಾ ಪ್ರತಿಪದ್ಯತೇ ।
ತದೇವ ಚ ದೃಢೀಭೂತ ಉದಕೇ ನಿಃಶರಾವಕೇ ।

ಛೇದಭೇದಾದಿ ನಾಪ್ನೋತಿ ನಿಶ್ಚಲಂ ಪ್ರತಿಬಿಂಬಿತಂ ।
ಏವಂ ಗುಣೈರ್ವಿಮುಕ್ತಸ್ತು ಜೀವೋ ನಾಪ್ನೋತಿ ದುಃಖಿತಾಂ ।
ಶರಾವವದ್ ಗುಣಾಃ ಪ್ರೋಕ್ತಾ ಅಜ್ಞಾನಂ ತು ದ್ರವತ್ವವತ್ ।
ದೃಢೀಭೂತೋದವಜ್ಜೀವಸ್ತಜ್ಜ್ಞಾನಂ ಪ್ರತಿಬಿಂಬವತ್ ।
ನಿತ್ಯಾಂತಃಕರಣಂ ಚೈವ ಪ್ರತಿಬಿಂಬಶ್ಚ ತದ್ಗತಃ ।
ದ್ವಯಮೇವ ವಿಮುಕ್ತಸ್ಯ ನ ಕಿಂಚಿಜ್ಜಡಮಿಷ್ಯತೇ ।
ಸೂರ್ಯಕಾಂತಾದಿವತ್ ತಸ್ಯ ಸ್ವರೂಪಂ ದ್ವಯಮಪ್ಯತ ।

'ವಿಭಾವ್ಯತೇ' ಎಂದರೆ, ನಾನಾ ಬಗೆಯಾಗಿ ಗೋಚರನಾಗುತ್ತಾನೆ.

'ಸ್ವಮಾಯಾರಚಿತೇಷು' ಎಂದರೆ, ವಿಷ್ಣುಮಾಯೆಯಿಂದ ನಿರ್ಮಿತವಾದ.

'ವಿಮುಹ್ಯತಿ' ಎಂದರೆ ವಿಷಯಾಸಕ್ತಿಉಳ್ಳ 'ಪುಮಾನ್' ಜೀವನು ನಾನಾ ಬಗೆಯ ಭ್ರಾಂತಿಗೊಳಗಾಗುತ್ತಾನೆ.

ಈ ಶ್ಲೋಕದ ಮತ್ತು ಮುಂದಿನ 'ತಸ್ಮಾನ್ನ ಕಸ್ಯಚಿದ್‌ದ್ರೋಹಂ' ಎಂಬ ಶ್ಲೋಕದ ಅರ್ಥವಿವರಣೆ ತಂತ್ರಭಾಗವತದಲ್ಲಿ ಹೀಗೆ ಬಂದಿದೆ-

'ಉದಕಪಾರ್ಥಿವ' ಎಂದರೆ ನೀರು ತುಂಬಿದ ಮಣ್ಣಿನ ಪಾತ್ರೆಗಳು. 'ಜ್ಯೋತಿ' ಎಂದರೆ ಸೂರ್ಯ ಮುಂತಾದ ಬೆಳಕಿನ ಗೋಲಗಳು. 'ಪ್ರತಿಬಿಂಬಿತವಾದ' ಎಂದು ಅಧ್ಯಾಹಾರ. ನೀರು ತುಂಬಿದ ಮಣ್ಣಿನ ಹರಿವಾಣ ಮುಂತಾದ ಪಾತ್ರೆಗಳಲ್ಲಿ ಪ್ರತಿಫಲಿಸಿದ ಸೂರ್ಯ ಮುಂತಾದ ಬೆಳಕಿನ ಗೋಲಗಳು, 'ಸಮೀರವೇಗಾನುಗತಃ' ಗಾಳಿಯಿಂದ ಚಲಿಸಿದಾಗ ಹೇಗೆ ಹರಿದಂತೆ ತುಂಡಾದಂತೆ ನಾನಾರೂಪವಾಗಿ ಗೋಚರಿಸುವುವೋ ಹಾಗೇ 'ಸ್ವಮಾಯಾರಚಿತೇಷು ಗುಣೇಷು' ಸ್ವತಂತ್ರನಾದ ವಿಷ್ಣುವಿನ ಇಚ್ಛೆಯಿಂದ ಉತ್ಪನ್ನವಾದ ತ್ರಿಗುಣಾತ್ಮಕ ದೇಹಗಳಲ್ಲಿ, ಅದರಲ್ಲಿಯೂ ಲಿಂಗದೇಹಗಳೆಂಬ ಬಾಹ್ಯ ಜೀವೋಪಾಧಿಗಳಲ್ಲಿ ಪ್ರತಿಫಲಿಸಿದ ಜೀವನು ತಾನು ಹರಿದುಹೋದೆನು ತುಂಡಾದೆನು ಸತ್ತೆನು ಎಂದು ಮುಂತಾಗಿ ನಾನಾರೂಪವಾಗಿ ಭ್ರಾಂತಿಗೊಳಗಾಗುತ್ತಾನೆ.

ಸಂಸಾರಾವಸ್ಥೆಯಲ್ಲಿ ಜೀವ ಲಿಂಗಶರೀರ ಸ್ಥೂಲಶರಿಗಳೆಂಬ ಬಾಹ್ಯ ಉಪಾಧಿಗಳಲ್ಲಿ ಪ್ರತಿಫಲಿಸಿ ಹೀಗೆ ನಾನಾ ಭ್ರಾಂತಿಗೊಳಗಾಗುತ್ತಾನೆ. ಮುಕ್ತಿಯಲ್ಲಿ ಬಾಹ್ಯ ಉಪಾಧಿ ನಾಶವಾಗುವುದು. ಸ್ವರೂಪ ಉಪಾಧಿ ಉಳಿಯುವುದು. ಭಾಗವತದ ಈ ಶ್ಲೋಕ ಸಂಸಾರಾವಸ್ಥೆಯಲ್ಲಿ ಜೀವನಿಗೆ ಉಂಟಾಗುವ ಭ್ರಾಂತಿಗಳನ್ನು ಹೇಳಿ,

ಮುಕ್ತ್ಯವಸ್ಥೆಯಲ್ಲಿ ಹೇಗೆ ಭ್ರಾಂತಿರಹಿತನಾಗಿರುತ್ತಾನೆ, ಎನ್ನುವುದನ್ನೂ ಹೇಳುತ್ತದೆ ಎಂದು ತಂತ್ರಭಾಗವತ ವಚನವೇ ಮುಂದುವರಿದು ಹೀಗೆ ವ್ಯಾಖ್ಯಾನಮಾಡುತ್ತದೆ-

> **ಅದೇ ಸೂರ್ಯ ಮುಂತಾದ ಜ್ಯೋತಿಯು, ಮಣ್ಣಿನ ಪಾತ್ರೆಯಿಂದ ನೀರು ಹೊರಗೆ ಬಂದು ಮಣ್ಣಿನಂತೆ ನಿಶ್ಚಲವಾದ ಸರೋವರ ಜಲದಲ್ಲಿ ಸೇರಿದಾಗ, ತಾನು ಅದರಲ್ಲಿ ಪ್ರತಿಫಲಿಸಿದರೆ ಆ ಪ್ರತಿಬಿಂಬವು ನಿಶ್ಚಲವಾಗಿದ್ದು ಹರಿಯುವುದು ತುಂಡಾಗುವುದು ಮುಂತಾದುವನ್ನು ಹೊಂದದೆ ಇರುತ್ತದೆ. ಇದೇ ರೀತಿಯಾಗಿ ತ್ರಿಗುಣಗಳಿಂದ ಬಿಡುಗಡೆ ಹೊಂದಿದ, ಲಿಂಗಭಂಗವನ್ನು ಹೊಂದಿದ, ಮುಕ್ತಜೀವನು ದುಃಖವನ್ನು ಹೊಂದುವುದಿಲ್ಲ.**

ಲಿಂಗದೇಹ ಸಂಬಂಧವಿರುವಾಗ ಸ್ಥೂಲದೇಹಗಳು ಬರುವುವು, ರಾಗಾದಿಗಳು ಉಂಟಾಗುವುವು. ಅದರಿಂದ ತಾನು ದುಃಖಿ ಎಂದು ಜೀವ ಭ್ರಮಿಸುವನು. ಲಿಂಗದೇಹದಿಂದ ಬಿಡುಗಡೆಯಾದರೆ ಹೀಗೆ ದುಃಖ ಪ್ರಸಕ್ತಿಯೇ ಇರುವುದಿಲ್ಲ.

ಸಂಸಾರಾವಸ್ಥೆಯಲ್ಲಿ ದುಃಖಿಯಾಗಿರುವ ಮತ್ತು ಮುಕ್ತಿಯಲ್ಲಿ ಸುಖಿಯಾಗಿರುವ ಜೀವ ಆನಂದಮಯನಾದ ಪರಮಾತ್ಮನ ಪ್ರತಿಬಿಂಬನೆನಿಸುವುದು ಹೇಗೆ ಎಂದರೆ ತಂತ್ರಭಾಗವತ ಮುಂದುವರಿದು ಹೇಳುತ್ತಾರೆ-

> **ಸೂರ್ಯನ ಚಂಚಲ ಪ್ರತಿಬಿಂಬಕ್ಕೆ ಮಣ್ಣಿನ ಪಾತ್ರೆಗಳಲ್ಲಿ ತುಂಬಿದ ನೀರು ಉಪಾಧಿ. ಹಾಗೇ ದುಃಖಿಯಾಗಿರುವ ಸಂಸಾರಿಜೀವನೆಂಬ ಪ್ರತಿಬಿಂಬಕ್ಕೆ ತ್ರಿಗುಣಾತ್ಮಕವಾದ ಲಿಂಗಶರೀರ ಸ್ಥೂಲಶರೀರಗಳಲ್ಲಿ ತುಂಬಿದ ಅಜ್ಞಾನವೇ ಉಪಾಧಿ. ಮಣ್ಣಿನ ಪಾತ್ರೆಯಂತೆ ತ್ರಿಗುಣಾತ್ಮಕ ಶರೀರ. ನೀರಿನಂತೆ ಅಜ್ಞಾನ. ಮುಕ್ತಿಯಲ್ಲಿ ಸುಖಿಯಾಗಿರುವ ಜೀವನೂ ಪರಮಾತ್ಮನ ಪ್ರತಿಬಿಂಬ. ಅದಕ್ಕೆ ಜೀವನ 'ಜ್ಞಾನ' ಅಂದರೆ, ಜ್ಞಾನಸಾಧನವಾದ ಸ್ವರೂಪಭೂತವಾದ ಅಂತಃಕರಣವೇ ನಿಶ್ಚಲವಾದ ಸರೋವರಜಲದಂತೆ ಉಪಾಧಿ. ''ಜೀವಃ ಪ್ರತಿಬಿಂಬವತ್, ತದ್‌ಜ್ಞಾನಂ ದೃಢೀಭೂತೋದವತ್'' ಎಂದು ಅನ್ವಯ. ಜೀವನು ತನ್ನ ಸ್ವರೂಪಭೂತ ಅಂತಃಕರಣವೆಂಬ ಉಪಾಧಿಯಲ್ಲಿ ತಾನೇ ಪರಮಾತ್ಮನಿಗೆ ಪ್ರತಿಬಿಂಬನೆನಿಸುತ್ತಾನೆ. ಇದು ವಿಶೇಷ ಬಲದಿಂದ ಕೂಡುತ್ತದೆ. ಜೀವನು ನಿತ್ಯಾಂತಃಕರಣಸ್ವರೂಪನೂ ಅದರಲ್ಲಿರುವ ಪ್ರತಿಬಿಂಬಸ್ವರೂಪನೂ ಆಗಿರುತ್ತಾನೆ. ಹೀಗೆ ಎರಡೂ ಮುಕ್ತಜೀವನಿಗೆ ಅಂಗೀಕೃತವಾಗಿದೆ. ಏಕೆಂದರೆ ಅವನಿಗೆ ಸಂಸಾರಿಜೀವನಂತೆ ಜಡವಾದ ಲಿಂಗಶರೀರ ಅದರಲ್ಲಿರುವ ಜಡವಾದ ಅಜ್ಞಾನ ಎಂದು ಜಡವಸ್ತು ಯಾವುದೂ ಇರುವುದಿಲ್ಲ. ಸೂರ್ಯಕಾಂತದಲ್ಲಿ ಸೂರ್ಯನ ಪ್ರತಿಬಿಂಬ, ಕನ್ನಡಿಯಲ್ಲಿ ಮುಖದ ಪ್ರತಿಬಿಂಬ ಅಭಿನ್ನವೇ ಆದರೂ ಅಭೇದದೊಂದಿಗೆ**

ಭೇದವೂ ಇರುವುದರಿಂದ ಉಪಾಧಿತ್ವ ಪ್ರತಿಬಿಂಬತ್ವಗಳು ಕೂಡುತ್ತವೆ. ಹಾಗೇ ಜೀವನ ಸ್ವರೂಪಾಂತಃಕರಣ ಮತ್ತು ಜೀವಗಳಿಗೆ ಅಭೇದವೇ ಇದ್ದರೂ ಜೊತೆಗೆ ವಿಶೇಷವೂ ಇರುವುದರಿಂದ ಉಪಾಧಿತ್ವ ಪ್ರತಿಬಿಂಬತ್ವಗಳು ಕೂಡುತ್ತವೆ.

❖ ❖ ❖

ಕಂಸನಿಗೆ ವಸುದೇವನ ಉಪದೇಶ-

ತಸ್ಮಾನ್ನ ಕಸ್ಯಚಿದ್ ದ್ರೋಹಮಾಚರೇತ್ ಸ ತಥಾವಿಧಃ ।
ಆತ್ಮನಃ ಕ್ಷೇಮಮನ್ವಿಚ್ಛನ್ ದ್ರೋಗ್ಧುರ್ವೈ ಪರತೋ ಭಯಮ್ ॥ ೪೪ ॥

ಹೀಗೆ ಆತ್ಮನಿಗೆ ಮರಣವಿಲ್ಲ ದೇಹಕ್ಕೆ ಮರಣ ತಪ್ಪಿದ್ದಲ್ಲವಾದ್ದರಿಂದ ದೇಹ ಒಂದು ಹೋದರೆ ಇನ್ನೊಂದು ಬಂದೇ ಬರುವುದರಿಂದ ತನ್ನ ಶರೀರದ ಉಳಿವಿಗಾಗಿ ಪರರ ಶರೀರದ ಹಿಂಸೆ ವ್ಯರ್ಥ. ಕೇವಲ ದ್ರೋಹವಾಗುತ್ತದೆ. ತನಗೆ ತನ್ನ ಶರೀರದ ಕ್ಷೇಮವನ್ನು ಬಯಸುವವನು ಪರರಿಗೆ ದ್ರೋಹ ಮಾಡಬಾರದು. ಪರನೂ ತನ್ನಂತೆಯೆ ತನ್ನ ಶರೀರದ ಕ್ಷೇಮವನ್ನು ಬಯುಸುವವನೆ. ಹೀಗಾಗಿ ಪರರಿಗೆ ದ್ರೋಹ ಮಾಡಿದರೆ ಕ್ಷೇಮವಿಲ್ಲ. ಪರರಿಂದ ಅವನಿಗೇ ದ್ರೋಹ ತಪ್ಪಿದ್ದಲ್ಲ. ಪರಲೋಕ ಭಯವೂ ತಪ್ಪಿದ್ದಲ್ಲ.

ಈ ಶ್ಲೋಕದ ಅಭಿಪ್ರಾಯವನ್ನು ತಂತ್ರಭಾಗವತ ಹೇಳುತ್ತದೆ.

ತಸ್ಮಾನ್ನ ಹಂತುಂ ಶಕ್ಯೋಽಸೌ ಕೇನಚಿಜ್ಜೀವ ಆತ್ಮವಾನ್ ।
ತಸ್ಮಾತ್ ಸ್ವಜೀವನಾರ್ಥಾಯ ನ ಪರದ್ರೋಹಮಾಚರೇತ್ ।
ಹನ್ಯತೇ ಚಾಜ್ಞಭಾವೇನ ಪರೇಷಾಂ ದ್ರೋಹಮಾಚರನ್ ॥
ಇತಿ ತಂತ್ರಭಾಗವತೇ ।

ಜೀವನು ಯಾರಿಂದಲೂ ಕೊಲ್ಲಲು ಶಕ್ಯನಲ್ಲ. ಅವನೊಳಗೆ ಸದಾ ಅವನ ಬಿಂಬನಾದ ನಿತ್ಯನಾದ ಪರಮಾತ್ಮನಿದ್ದಾನೆ. ನಿತ್ಯನಾದ ತಾನು ಉಪಾಧಿ, ನಿತ್ಯನಾದ ಪರಮಾತ್ಮ ಬಿಂಬ. ಬಿಂಬ ಉಪಾಧಿಗಳೆರಡೂ ನಿತ್ಯವಾಗಿದ್ದು ನಿತ್ಯ ಸಂಬಂಧವನ್ನು ಹೊಂದಿರುವುದರಿಂದ ಪ್ರತಿಬಿಂಬ ನಿತ್ಯವೇ ಆಗಿರಬೇಕು. ಅದರಿಂದ ನಿತ್ಯನಾದ ಜೀವ ಯಾರಿಂದಲೂ ಕೊಲ್ಲಲು ಶಕ್ಯವಲ್ಲ. ಹೀಗಾಗಿ ಇದನ್ನು ತಿಳಿದವನು ಕೇವಲ ತನ್ನ ನಶ್ವರ ಶರೀರ ರಕ್ಷಣೆಗಾಗಿ ಪರರಿಗೆ ದ್ರೋಹ

ಮಾಡಬಾರದು. ಯಾರು ಇದನ್ನು ತಿಳಿಯದೆ ಪರರಿಗೆ ದ್ರೋಹ ಮಾಡುವನೋ ಅವನು ಇಹಪರಗಳಲ್ಲಿ ಅನರ್ಥ ಭಾಗಿಯಾಗುತ್ತಾನೆ ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ಹಿಂದಿನ ಶ್ಲೋಕದಲ್ಲಿ 'ಸ್ವಮಾಯಾರಚಿತೇಷು' ಎನ್ನುವಲ್ಲಿ ಸ್ವ ಶಬ್ದಕ್ಕೆ ಸ್ವತಂತ್ರನಾದ ಶ್ರೀಹರಿ ಎಂದು ಅರ್ಥವಿಟ್ಟುಕೊಳ್ಳಬಹುದು. ಜೊತೆಗೆ 'ಸ್ವ' ಎಂದು ಭಗವಂತನಿಗೆ ಒಂದು ನಾಮವೇ ಇದೆ ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ-

ಪರಃ ಸ್ವೋ ಹರಿರುದ್ದಾಮ ಇತಿ ನಾಮಚತುಷ್ಟಯಂ ।
ವಿಷ್ಣೋರ್ಗುಹ್ಯಂ ತು ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥
ಇತಿ ಪ್ರಕಾಶಸಂಹಿತಾಯಾಂ

ಪರ ಸ್ವ ಹರಿ ಉದ್ದಾಮ ಎಂದು ವಿಷ್ಣುವಿನ ರಹಸ್ಯವಾದ ನಾಲ್ಕು ನಾಮಗಳನ್ನು ಯಾರು ತಿಳಿಯುವನೋ ಅವನು ಎಲ್ಲ ಪಾಪಗಳಿಂದ ಮುಕ್ತನಾಗುವನೆಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

ಸ್ವತಂತ್ರತ್ವಾತ್ ಸುಖತ್ವಾಚ್ಚ ಸ್ವನಾಮಾ ವಿಷ್ಣುರುಚ್ಯತೇ ।
ಇತಿ ಪಾದ್ಮೇ ॥

ಸ್ವತಂತ್ರನಾದ್ದರಿಂದಲೂ ಸುಖರೂಪನಾದ್ದರಿಂದಲೂ ವಿಷ್ಣು ಸ್ವ ಎನಿಸುತ್ತಾನೆ ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

ಪ್ರಕಾಶಸಂಹಿತೆಯಲ್ಲಿ ವಿದ್ವದ್ರೂಢಿ ಉಕ್ತವಾಗಿದೆ. ಪದ್ಮಪುರಾಣದಲ್ಲಿ ಮಹಾಯೋಗ ಉಕ್ತವಾಗಿದೆ.

❖ ❖ ❖

ದೇವಕಿಯನ್ನು ಕೊಲ್ಲಬೇಡ ಎಂದು ಎಷ್ಟು ಉಪದೇಶ ಮಾಡಿದರೂ ಕೂಡ ಕಂಸ ಕೇಳದಿದ್ದಾಗ ದೇವಕಿಯ ಮಕ್ಕಳನ್ನು ಕಂಸನಿಗೆ ಒಪ್ಪಿಸುವುದಾಗಿ ಮಾತು ಕೊಡಲು ನಿರ್ಧರಿಸಿ ಅದರ ಪರಿಣಾಮ ಏನಿದ್ದರೂ ಅದೃಷ್ಟವಿದ್ದಂತಾಗಲಿ ಎಂದು ಕೊಳ್ಳುತ್ತಾನೆ ವಸುದೇವ. ಕೆಲವು ಘಟನೆಗಳು ಕೇವಲ ಅದೃಷ್ಟದಿಂದಲೆ ನಡೆಯುತ್ತವೆ ಎನ್ನುತ್ತಾನೆ.

ಅಗ್ನೇರ್ಯಥಾ ದಾರುವಿಯೋಗಯೋಗಯೋ-
ರದೃಷ್ಟತೋಽನ್ಯನ್ನ ನಿಮಿತ್ತಮಸ್ತಿ ।

ಏವಂ ಹಿ ಜಂತೋರಪಿ ದುರ್ವಿಭಾವ್ಯಃ
ಶರೀರಸಂಯೋಗವಿಯೋಗಹೇತುಃ ॥ ೫೧ ॥

ಮನೆಯೊಳಗೆ ಅಗ್ನಿಕುಂಡದಲ್ಲಿ ಇರುವ ಅಗ್ನಿಗೆ ಅರಣ್ಯದಲ್ಲಿ ಎಲ್ಲಿಯೋ ಇರುವ ಒಂದು ಕಟ್ಟಿಗೆಯ ಸಂಯೋಗವಾಗುವುದಕ್ಕೆ, ಆಗದಿರುವುದಕ್ಕೆ ಅದೃಷ್ಟ ಹೊರತು ಬೇರೆ ನಿಮಿತ್ತವಿಲ್ಲ. ಬೆಂಕಿ ತಾನಾಗಿ ಕಟ್ಟಿಗೆಯ ಬಳಿಗೆ ಹೋಗುವುದಿಲ್ಲ. ಹಾಗೆಯೇ ಜೀವನಿಗೆ ಶರೀರ ಬರುವುದಕ್ಕೂ ಹೋಗುವುದಕ್ಕೂ ಕಾರಣ ಅದೃಷ್ಟವೆ, ಅದೃಷ್ಟನಿಯಾಮಕ ನಾದ ಹರಿಯೆ. ಬೇರೇನೂ ಕಾಣುವುದಿಲ್ಲ.

'ಕಾಳ್ಗಿಚ್ಚಿಗೆ ಮರಗಳ ಸಂಬಂಧವಾಗುವುದು ಬಿಡುವುದು ಕೇವಲ ಅದೃಷ್ಟಾಧೀನ. ಅದರಿಂದಲೆ ದೂರದ ಮರ ಸುಟ್ಟುಹೋಗಬಹುದು. ಹತ್ತಿರದ ಮರ ಉಳಿಯಬಹುದು. ಮನೆಗಳಿಗೆ ಬೆಂಕಿ ಬಿದ್ದಾಗಲೂ ಆ ಬೆಂಕಿ ದೂರದ ಮನೆಯನ್ನು ಸುಡಬಹುದು, ಹತ್ತಿರದ ಮನೆಯನ್ನು ಸುಡದಿರಬಹುದು. ಹಾಗೇ ಜೀವಿಗಳಿಗೆ ಯಾವ ಶರೀರ ಬರುತ್ತದೆ ಹೋಗುತ್ತದೆ ಎನ್ನುವುದು ಕೇವಲ ಅದೃಷ್ಟಾಧೀನ' ಎಂದು [೧] ಶ್ರೀಧರ ವ್ಯಾಖ್ಯಾನದಲ್ಲಿ ವಿವರಣೆ ಇದೆ. ಇದು ಸರಿಯಲ್ಲ. ಕಾಳ್ಗಿಚ್ಚು ಒಂದೆಡೆ ಮನೆಯೊಳಗಿನ ಅಗ್ನಿ ಕುಂಡದ ಬೆಂಕಿಯಂತೆ ಸುಮ್ಮನೆ ಇರುವುದಿಲ್ಲ. ಗಾಳಿಯ ಸಹಾಯದಿಂದ ಹರಡಿ ಮರಗಳನ್ನು ತಾನೇ ಸಮೀಪಿಸಿ ಹೋಗಿ ಸುಡುತ್ತದೆ. ಹತ್ತಿರದ ಮರವನ್ನು ಬಿಟ್ಟು ದೂರದ ಮರವನ್ನು ಸುಡಲು ಗಾಳಿ ಬೀಸುವ ದಿಕ್ಕು ಕಾರಣ. ಅದೃಷ್ಟವಲ್ಲ. ಮನೆಗಳಿಗೆ ಬೆಂಕಿ ಬಿದ್ದಾಗಲೂ ಹೀಗೇ ಗಾಳಿಯೇ ಯಾವ ಮನೆ ಅಗ್ನಿಗೆ ಆಹುತಿಯಾಗುವುದೆನ್ನುವುದನ್ನು ನಿರ್ಧರಿಸುತ್ತದೆ.

'ದಾರು' ಎಂದರೆ ಸೌದೆ ಹೊರತು ನೆಲದ ಮೇಲೆ ಬೆಳೆದು ನಿಂತಿರುವ ಮರವಲ್ಲ, ಮರದಿಂದ ಕಟ್ಟಿದ ಮನೆಯೂ ಅಲ್ಲ.

[೨] ವೀರರಾಘವ ವ್ಯಾಖ್ಯಾನದಲ್ಲಿ ಇನ್ನೊಂದು ಬಗೆಯ ವಿವರಣೆ ಇದೆ-

---

೧ ಪ್ರಾಣಿನಾಮದೃಷ್ಟಂ ಚ ದುರ್ವಿತರ್ಕ್ಯಮಿತಿ ಸದೃಷ್ಟಾಂತಮಾಹ ಅಗ್ನೇರಿತಿ । ವನೇ ವೃಕ್ಷಾನ್ ದಹನ್ನಗ್ನಿಃ ಸನ್ನಿಹಿತಾನಪಿ ವೃಕ್ಷಾನ್ ಪರಿತ್ಯಜ್ಯ ಕದಾಚಿದ್ದೂರಸ್ಥಾನಪಿ ದಹತಿ, ಗ್ರಾಮೇ ಗೃಹಾನ್ವಾ । ನಹ್ಯಸ್ಯ ಪ್ರಾಣ್ಯದೃಷ್ಟ ವ್ಯತಿರೇಕೇಣ ಕಿಂಚಿನ್ನಿಯಾಮಕಮಸ್ತಿ। ಏವಂ ಜಂತೋರ್ಜನ್ಮಮರಣಯೋರಪಿ ಹೇತುರ್ದುರ್ವಿಭಾವ್ಯೋಽಚಿಂತ್ಯಃ॥ -ಶ್ರೀಧರಃ

೨ ಯೋಗ ವಿಯೋಗ ಶಬ್ದಾಭ್ಯಾಂ ಶೀಘ್ರ ವಿಲಂಬೋತ್ಪತ್ತೀ ವಿವಕ್ಷಿತೇ। ದಾರುಶಬ್ದೇನಾರಣಿಃ। ಯಥಾಗ್ನೇರ್ದಾರು ವಿಯೋಗಯೋಗಯೋರ್ದಾರುಣಃ ಸಕಾಶಾದ್ ವಿಲಂಬ-

'ಯೋಗ ಎಂದರೆ ಶೀಘ್ರ ಉತ್ಪತ್ತಿ. ವಿಯೋಗ ಎಂದರೆ ವಿಲಂಬವಾಗಿ ಉತ್ಪತ್ತಿ ವಿವಕ್ಷಿತವಾಗಿದೆ. ಯಾಗಕ್ಕಾಗಿ ಅರಣಿ ಮಥನದಿಂದ ಅಗ್ನಿಯನ್ನು ಸಿದ್ಧಪಡಿಸುವಾಗ ಯಜಮಾನನ ಅದೃಷ್ಟ ಚೆನ್ನಾಗಿದ್ದರೆ ಅರಣಿ ಮಥನ ಮಾಡಿದಾಗ ಬೇಗನೆ ಅಗ್ನಿ ಉತ್ಪನ್ನವಾಗುತ್ತದೆ. ಚೆನ್ನಾಗಿಲ್ಲದಿದ್ದರೆ ವಿಲಂಬವಾಗುತ್ತದೆ. ಶೀಘ್ರ ವಿಲಂಬಗಳಿಗೆ ಅದೃಷ್ಟವೆ ನಿಮಿತ್ತಕಾರಣ. ಬೇರೇನೂ ಕಾಣುವುದಿಲ್ಲ' ಎಂದು.

ಆದರೆ ಯೋಗ ಎಂದರೆ ಸಂಯೋಗ, ಸಂಬಂಧವಾಗುವುದು. ವಿಯೋಗ ಅಂದರೆ ಸಂಬಂಧವಾಗದಿರುವುದು. ಎಲ್ಲ ವ್ಯಾಖ್ಯಾನಕಾರರೂ ಇದೇ ಅರ್ಥ ಇಟ್ಟುಕೊಳ್ಳುತ್ತಾರೆ. ವೀರರಾಘವ ವ್ಯಾಖ್ಯಾನ ಇದಕ್ಕೆ ವ್ಯತಿರಿಕ್ತವಾಗಿ ಶೀಘ್ರ ಉತ್ಪತ್ತಿ ವಿಲಂಬದಿಂದ ಉತ್ಪತ್ತಿ ಎಂದು ಅರ್ಥವಿಟ್ಟುಕೊಳ್ಳುವುದು ಅವರ ಅಶಕ್ತಿಗೆ ದ್ಯೋತಕವಾಗುತ್ತದೆ. ಶೀಘ್ರವಾಗಿ ಅರಣಿಗೆ ಅಗ್ನಿಯ ಸಂಯೋಗ, ವಿಲಂಬವಾಗಿ ಅಗ್ನಿಸಂಯೋಗ ಎಂದೂ ಹೇಳುವಂತಿಲ್ಲ. ಅರಣಿಗೆ ಬೆಂಕಿಯನ್ನು ತಂದು ಸೇರಿಸುವುದಿಲ್ಲ. ಅರಣಿಯೊಳಗೆ ಸದಾ ಬೆಂಕಿ ಸೇರಿಕೊಂಡಿರುತ್ತದೆ. ಅದು ಮಥನದಿಂದ ವ್ಯಕ್ತವಾಗಬೇಕಷ್ಟೆ. ಇದ್ದ ಬೆಂಕಿ ವ್ಯಕ್ತವಾಗುವುದನ್ನು ಬೆಂಕಿಯ 'ಯೋಗ' ಎನ್ನುವುದಿಲ್ಲ. ಅದರಿಂದ ಶ್ರೀಮದಾಚಾರ್ಯರು ಹೀಗೆ ವ್ಯಾಖ್ಯಾನ ಮಾಡುತ್ತಾರೆ-

ಕುಂಡಾದಿಸ್ಥಾಗ್ನೇರ್ದಾರುಯೋಗಾದೌ ಸ್ವತಃ ಪ್ರವೃತ್ತ್ಯಭಾವಾತ್ ।
ಯಥಾ ಕುಂಡಸ್ಥಿತಸ್ಯಾಗ್ನೇರ್ದೈವಾದ್ ದಾರೂಪಸನ್ನಮೇತ್ ।
ದೇಹಯೋಗೋ ವಿಯೋಗಶ್ಚ ತಥಾ ದೈವಾನ್ನ ಚಾನ್ಯಥಾ ॥
ಇತಿ ವಾಮನೇ ॥

'ಅಗ್ನಿಕುಂಡದಲ್ಲಿರುವ ಬೆಂಕಿಗೆ ಸೌದೆಯ ಸಂಪರ್ಕವಾಗುವುದು ಬಿಡುವುದರಲ್ಲಿ ಅದೃಷ್ಟವೆ ನಿಮಿತ್ತ ಹೊರತು ಬೇರೇನೂ ಕಾಣುವುದಿಲ್ಲ. ಏಕೆಂದರೆ ಆ ಬೆಂಕಿಗೆ ಸ್ವತಃ ಪ್ರವೃತ್ತಿ ಇಲ್ಲ' ಎಂದು ಶ್ಲೋಕದ ಪೂರ್ವಾರ್ಧ ಹೇಳುತ್ತಿದೆ.

ವಾಮನ ಪುರಾಣದಲ್ಲಿ ಇಡೀ ಶ್ಲೋಕಕ್ಕೆ ಹೀಗೆ ವ್ಯಾಖ್ಯಾನ ಬಂದಿದೆ-

'ಕುಂಡದಲ್ಲಿರುವ ಅಗ್ನಿಗೆ ಕಾಡಿನ ಸೌದೆಯ ಸಂಪರ್ಕ ದೈವಾತ್ ಆಗುತ್ತದೆ.

ಶೀಘ್ರೋತ್ಪತ್ತ್ಯೋ ರ್ನಿಮಿತ್ತಕಾರಣಮದೃಷ್ಟತೋ ಯಜಮಾನಾದೃಷ್ಟಾದನ್ಯನ್ನಾಸ್ತಿ ಏವಂ ಜಂತೋರ್ಜೀವಸ್ಯ ಶರೀರಸಂಯೋಗವಿಯೋಗಯೋರದೃಷ್ಟತಃ ಕರ್ಮಣೋಽನ್ಯೋ ದುರ್ವಿಭಾವ್ಯಃ ।
-ವೀರರಾಘವಃ

ಹಾಗೇ ದೇಹ ಬರುವುದೂ ಹೋಗುವುದೂ ಜೀವಿಯ ಅದೃಷ್ಟದಿಂದಲೆ ಹೊರತು ಬೇರೆ ಕಾರಣದಿಂದಲ್ಲ' ಎಂದು.

'ಬೀಸುವ ದೊಣ್ಣೆ ತಪ್ಪಿಸಿಕೊಂಡರೆ ನೂರು ಆಯುಸ್ಸು' ಎನ್ನುವಂತೆ ದೇವಕಿಯನ್ನು ಕೊಂದುಬಿಡುವೆನೆಂದು ಕಂಸ ಕತ್ತಿ ಹಿರಿದು ನಿಂತಾಗ, ಮಕ್ಕಳನ್ನು ಕೊಡುವೆನೆಂದು ವಾಗ್ದಾನ ಮಾಡಿಯಾದರೂ ತಾಯಿಯನ್ನು ಕಾಪಾಡಿಕೊಳ್ಳುವೆನು, ಒಮ್ಮೆ ಈ ಸಂಕಟದಿಂದ ಪಾರಾದರೆ ಸಾಕು, ಮುಂದೆ ಅದೃಷ್ಟದಿಂದ ಏನಾದರೂ ಆಗಬಹುದು. ಅದನ್ನು ಯಾರಿಗೂ ಊಹಿಸಲಾಗದು. ಸತ್ತುಹೋಗಿದ್ದ ಸಾಂದೀಪನಿಯ ಮಗ ತಿರುಗಿ ಬದುಕಿ ಬಂದನಲ್ಲವೆ? ಸಾವು ಬರಬಾರದೆಂದು ವರ ಪಡೆದಿದ್ದ ಹಿರಣ್ಯಕಶಿಪು ಮುಂತಾದವರಿಗೆ ಸಾವು ಬರಲಿಲ್ಲವೆ? ಅಡವಿಯಲ್ಲಿರುವ ಒಂದು ಮರದ ಕಟ್ಟಿಗೆ ಮನೆಯೊಳಗಿನ ಅಗ್ನಿಕುಂಡದಲ್ಲಿ ಬೀಳಲು ಅಗ್ನಿ ಸ್ವತಃ ಏನೂ ಪ್ರವೃತ್ತಿ ಮಾಡುವುದಿಲ್ಲ, ಅದೃಷ್ಟವೆ ಕಾರಣ ಎನ್ನಬೇಕು. ಯಜಮಾನ ಕಟ್ಟಿಗೆಯನ್ನು ತಂದುಹಾಕುತ್ತಾನೆ, ನಿಜ. ಆದರೆ ಅವನೂ ಅದೇ ಕಟ್ಟಿಗೆಯನ್ನು ತರಲು ಕಾರಣವೇನು? ಅದೃಷ್ಟ ಕಾರಣ, ಅದೃಷ್ಟವೂ ಜಡವಾದ್ದರಿಂದ ಅದಕ್ಕೂ ಸ್ವತಃ ಪ್ರವೃತ್ತಿ ಇಲ್ಲ. ಅದೃಷ್ಟ ನಿಯಾಮಕನಾದ ಹರಿಯೆ ಕಾರಣ ಎಂದುಕೊಳ್ಳುತ್ತಾನೆ ವಸುದೇವ. ಇಲ್ಲದಿದ್ದರೆ ಮಕ್ಕಳನ್ನು ಕೊಟ್ಟು ತಾಯಿಯನ್ನು ಉಳಿಸಿಕೊಳ್ಳುವುದರಲ್ಲಿ ಏನು ಸುಖವಿದೆ? ಆದರೂ ಮಕ್ಕಳು ಹುಟ್ಟುವ ಮುಂಚೆಯೆ ಕಂಸನೇ ಸಾಯಬಹುದು ಅಥವಾ ಹುಟ್ಟಿದ ಮಕ್ಕಳೆ ಕಂಸನನ್ನು ಕೊಲ್ಲಬಹುದು. ಅದೃಷ್ಟದಿಂದ ಏನಾದರೂ ಆಗಬಹುದೆಂದು ಕೊಳ್ಳುತ್ತಾನೆ, ವಸುದೇವ. ಮುಂದೆ ಹಾಗೇ ಆಗುತ್ತದೆ.

**ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಪ್ರಥಮೋऽಧ್ಯಾಯಃ**

❖

ಅಧ್ಯಾಯ - ೨

ಅಧ್ಯಾಯ ಸಾರಾಂಶ

ಕಂಸ ದೇವಕಿಯನ್ನು ಕೊಲ್ಲದೆ ಬಿಟ್ಟ. ಮುಂದೆ ಅವಳು ವರ್ಷಕ್ಕೊಂದರಂತೆ ಎಂಟು ಗಂಡು ಮಕ್ಕಳನ್ನೂ ಒಬ್ಬಳು ಸುಭದ್ರೆ ಎಂಬ ಹೆಣ್ಣು ಮಗಳನ್ನೂ ಹೆತ್ತಳು. ಮೊದಲಿಗೆ ಕೀರ್ತಿಮಂತ ಎಂಬ ಮಗು ಹುಟ್ಟಿದೊಡನೆ ಅದನ್ನು ಕಂಸನ ಕೈಗೊಪ್ಪಿಸಿದ ವಸುದೇವ. ಪುತ್ರೋತ್ಪತ್ತಿ ಪುತ್ರನಾಶಗಳನ್ನು ಸಮಾನವಾಗಿ ಕಾಣುವ ಜ್ಞಾನಿಯಾದ ವಸುದೇವನ ಮನಃಸ್ಥಿತಿಯನ್ನು ಕಂಡು ಪಾಪಿಯಾದ ಕಂಸನಿಗೂ ಮನ ಕರಗಿತು. 'ಈ ಮಗುವನ್ನು ತಾಯಿಯ ಮಡಿಲಲ್ಲಿಯೆ ಇರಿಸು, ಎಂಟನೇ ಮಗುವಿನಿಂದ ತಾನೆ ನನಗೆ ಮರಣ ಎಂದಿದೆ ಅಶರೀರವಾಣಿ?' ಎಂದ. ಆದರೂ ಅವ್ಯವಸ್ಥಿತ ಚಿತ್ತನಾದ ಆತನ ಮಾತಿಗೆ ವಸುದೇವ ಸಂತೋಷಪಡಲಿಲ್ಲ. ಒಂದುದಿನ ನಾರದರು ಬಂದು ಹೇಳಿದರು. 'ಕಂಸ, ನೀನೂ ನಿನ್ನವರೂ ಎಲ್ಲರೂ ದೈತ್ಯರು. ಭೂಭಾರಭೂತರಾಗಿ ಹುಟ್ಟಿರುವ ನಿಮ್ಮಂಥ ದೈತ್ಯರ ನಾಶಕ್ಕೆಂದೇ ಹುಟ್ಟಿದ ದೇವತೆಗಳು ಯಾದವರು' ಎಂದು. ಒಡನೆ ಕಂಸ ಕಿಡಿಕಿಡಿಯಾಗಿ ವಸುದೇವ ದೇವಕಿಯರನ್ನು ಬಂಧಿಸಿ ಕಾರಾಗೃಹ ದಲ್ಲಿಟ್ಟ. ಅವರಿಗೆ ಹುಟ್ಟಿದ ಎಲ್ಲ ಮಕ್ಕಳನ್ನೂ ವಿಷ್ಣುವೇ ಇರಬಹು ದೆಂದು ಸಂಶಯದಿಂದ ಕೊಲ್ಲುತ್ತ ಬಂದ. ತಾನು ಕಾಲನೇಮಿ ಎಂಬ ಮಹಾ ಅಸುರ, ಹಿಂದೆ ಸಮುದ್ರ ಮಥನ ವಾದಾಗ ವಿಷ್ಣುವಿನಿಂದ ಹತನಾದವ ನೆಂದು ನಾರದರಿಂದ ತಿಳಿದು ಯಾದವರನ್ನು ಸದಾ ದ್ವೇಷಿಸಿದ. ಯಾದವರ ಅರಸನಾಗಿದ್ದ ತನ್ನ ತಂದೆಯಾದ ಉಗ್ರಸೇನ ನನ್ನೂ ಸೆರೆಯಲ್ಲಿಟ್ಟು ತಾನೇ ರಾಜನಾಗಿ ಶೂರಸೇನ ರಾಜ್ಯವನ್ನಾಳಿದ.

❖

ಅಧ್ಯಾಯ - ೩

ಅಧ್ಯಾಯ ಸಾರಾಂಶ

ಮಗಧರಾಜ ಜರಾಸಂಧ, ಪ್ರಲಂಬಾಸುರ, ಬಕಾಸುರ, ಚಾಣೂರ ಮುಷ್ಟಿಕರೆಂಬ ದುಷ್ಟಮಲ್ಲರು, ಅರಿಷ್ಟಾಸುರ, ಮೈಂದ ವಿವಿದರೆಂಬ ವಾನರರು, ಪೂತನೆ ಎಂಬ ರಾಕ್ಷಸಿ, ತೃಣಾವರ್ತರಾಕ್ಷಸ, ಕೇಶಿ ದಾನವ, ಧೇನುಕಾಸುರ, ಬಾಣಾಸುರ, ನರಕಾಸುರ ಮುಂತಾದ ರಾಜರು ಇವರೆಲ್ಲರೂ ಕಂಸನ ಕಡೆಯಲ್ಲಿದ್ದುದರಿಂದ ಕಂಸ ಬಲಿಷ್ಠನಾಗಿ ಯಾದವರನ್ನು ಪೀಡಿಸಿದ. ಅವನ ಪೀಡೆಯನ್ನು ತಾಳಲಾರದೆ ಯಾದವರು ಮಥುರೆಯನ್ನೇ ಬಿಟ್ಟು ಕುರು ಪಾಂಚಾಲ ಕೇಕಯ ಸಾಲ್ವ ವಿದರ್ಭ ನಿಷಧ ವಿದೇಹ ಕೋಸಲ ರಾಜ್ಯಗಳಿಗೆ ವಲಸೆ ಹೋಗಬೇಕಾಯಿತು. ಅಕ್ರೂರನಂಥ ಕೆಲವೇ ಮಂದಿ ಕಂಸನ ಸಂಬಂಧಿಗಳು ಮಥುರೆಯಲ್ಲಿ ಉಳಿದು ಬಹಿರಂಗದಲ್ಲಿ ಕಂಸನಿಗೆ ನಿಷ್ಠರಾಗಿದ್ದರು.

ಏಳನೇ ಗರ್ಭದಲ್ಲಿ ದೇವಕಿ ಬಲರಾಮನನ್ನು ಹೊತ್ತಾಗ ಶ್ರೀಹರಿ ದುರ್ಗೆಗೆ ಆಜ್ಞೆಮಾಡಿದ- 'ವಸುದೇವನ ಪತ್ನಿಯರು ದೇವಕಿ ರೋಹಿಣಿಯರಿಬ್ಬರೂ ಈಗ ಮೂರು ತಿಂಗಳ ಗರ್ಭಿಣಿಯರು. ನೀನು ಇಬ್ಬರಿಗೂ ಗರ್ಭಸ್ರಾವ ಮಾಡಿಸಿ ದೇವಕಿಯ ಉದರ ದಲ್ಲಿರುವ ಬಲರಾಮನನ್ನು ರೋಹಿಣಿಯ ಉದರದಲ್ಲಿ ತಂದು ಇರಿಸು. ಮುಂದೆ ನಾನೇ ದೇವಕಿಯಲ್ಲಿ ಎಂಟನೇ ಮಗುವಾಗಿ ಅವತರಿಸುವೆನು. ಆಗ ನೀನು ನಂದಗೋಕುಲದಲ್ಲಿ ಯಶೋದೆ ಯಲ್ಲಿ ಅವತರಿಸು'. ದೇವಿ 'ಹಾಗೇ ಆಗಲಿ' ಎನ್ನುತ್ತ ನಂದಗೋಕುಲಕ್ಕೆ ನಡೆದಳು. 'ಅಯ್ಯೋ, ದೇವಕಿಗೆ ಗರ್ಭಸ್ರಾವ ವಾಯಿತು!' ಎಂದು ಜನರು ದುಃಖಿಸಿದರು.

ಶ್ರೀಹರಿ ತನ್ನ ತಲೆಯ ಕಪ್ಪುಕೂದಲಿನ ರೂಪದಿಂದ ವಸುದೇವನ ಹೃದಯದಲ್ಲಿ ಬಂದು ನಿಂತೊಡನೆ ಆತ ಸೂರ್ಯನಂತೆ ಬೆಳಗಿದ. ಬಳಿಕ ದೇವಕಿಯ ಉದರಕ್ಕೆ ಬಂದು

ನಿಂತಾಗ ಅವಳೂ ಅಗ್ನಿಜ್ವಾಲೆಯಂತೆ ಬೆಳಗಿದಳು. ಅವಳ ಅಪೂರ್ವವಾದ ಕಾಂತಿ ಯನ್ನು ಕಂಡು ಕಂಸ ಅವಳ ಉದರದಲ್ಲಿ ಶ್ರೀಹರಿ ಅಡಗಿದ್ದಾನೆ ಎಂದು ಊಹಿಸಿದ. ಆದರೆ ಅವಳನ್ನು ಕೊಲ್ಲಲು ಹಿಂಜರಿದ. ಜೀವದ್ವಯಾವೇಶಿಯಾದ ಆತ ಸಾತ್ವಿಕ ಭಾವದಿಂದ ಆಲೋಚಿಸಿದ. 'ಗರ್ಭಿಣಿ ಸ್ತ್ರೀ ಮಾತ್ರವಲ್ಲದೆ ತನ್ನ ತಂಗಿಯಾದ ಇವಳನ್ನು ಕೊಂದರೆ ನನ್ನ ಪರಾಕ್ರಮಕ್ಕೇ ಕಳಂಕ ಬಂದೀತು. ಆಯುಷ್ಯ ನಾಶವಾದೀತು, ಅಪಕೀರ್ತಿ ಉಂಟಾದೀತು' ಎಂದು. ಹರಿಯಲ್ಲಿ ಅವನಿಗೆ ವೈರದೊಂದಿಗೆ ಪ್ರೀತಿಯೂ ಇದ್ದಿತು. ಹೀಗಾಗಿ ಕುಳಿತಾಗ ನಿಂತಾಗ ಉಣ್ಣುವಾಗ ಸದಾಕಾಲ ಹರಿಯನ್ನೇ ಚಿಂತಿಸುತ್ತ ಎಲ್ಲೆಡೆ ಹರಿಯನ್ನೇ ಕಾಣುತ್ತ ಅವನು ಅವತರಿಸುವುದನ್ನೇ ಕಾದು ಕುಳಿತ.

ಬ್ರಹ್ಮ ರುದ್ರಾದಿ ದೇವತೆಗಳೂ ನಾರದಾದಿ ಮುನಿಗಳೂ ಅನುಚರರೊಂದಿಗೆ ಎಲ್ಲರೂ ದೇವಕಿಯ ಬಳಿಗೆ ಬಂದರು. ಗರ್ಭದಲ್ಲಿ ಶಿಶುವಾಗಿ ಕುಳಿತಿದ್ದ ಶ್ರೀಹರಿಯನ್ನು ಸ್ತುತಿಸಿದರು–

ಶ್ರೀಹರಿ, ನೀನೆ ಪ್ರಪಂಚದ ಸೃಷ್ಟಿ ಸ್ಥಿತಿ ಲಯ ನಿಯಮನ ಜ್ಞಾನ ಅಜ್ಞಾನ ಬಂಧ ಮೋಕ್ಷಗಳನ್ನು ನಡೆಸುವವನು. ಪೂರ್ಣಾನಂದ ಜ್ಞಾನಸ್ವರೂಪಿ. ಬೀಜರೂಪವಾಗಿರುವ ಸೂಕ್ಷ್ಮ ಪ್ರಕೃತಿಯಿಂದ ಆಲದಮರ ದಂತಿರುವ ಸ್ಥೂಲ ಸಾಧನಶರೀರ ವನ್ನು ನಿರ್ಮಿಸಿ ಜೀವರಿಗೆ ನೀಡುವಿ. ಅದರಿಂದ ಕರ್ಮಮಾಡಿಸಿ ಇಹಪರ ಸುಖಗಳನ್ನು ಮೋಕ್ಷವನ್ನು ಕೊಡುವಿ. ದೇವ ಗಂಧರ್ವಾದಿ ಗಳೆಲ್ಲರಿಗೂ ನವದ್ವಾರಯುಕ್ತವಾದ ಜ್ಞಾನ ಕರ್ಮೇಂದ್ರಿಯಯುಕ್ತ ವಾದ ಈ ಜಡಶರೀರಗಳನ್ನು ಅನಾದಿ ಕಾಲದಿಂದಲೂ ಕೊಡುತ್ತಿರುವ ನಿನ್ನನ್ನು ಜ್ಞಾನಿಗಳು ಮಾತ್ರ ತಿಳಿಯಬಲ್ಲರು. ತಿಳಿದು ನಂಬಿ ನಿನ್ನ ಪಾದಗಳೆಂಬ ನೌಕೆಗಳಿಂದಲೆ ಅನಾಯಾಸವಾಗಿ ಸಂಸಾರ ಸಾಗರವನ್ನು ದಾಟಬಲ್ಲರು: ಅಜ್ಞಾನಿಗಳಿಗೆ ಅವರೇ ನಿನ್ನ ಆ ಪಾದಗಳ ಮಹಿಮೆಯನ್ನು ಉಪದೇಶಿಸಬಲ್ಲರು. ನಿನ್ನನ್ನು ತಿಳಿಯದವರು ಅಜ್ಞಾನಿಗಳು. ಶ್ರಮಸಾಧ್ಯವಾದ ಕಾಮ್ಯ ಕರ್ಮ ಮಾಡಿಯೂ ನಶ್ವರವಾದ ಸ್ವರ್ಗಾದಿ ಸುಖವನ್ನು ಮಾತ್ರ ಹೊಂದುತ್ತಾರೆ. ಜ್ಞಾನಿಗಳು ನಿನ್ನ ಅನುಗ್ರಹದಿಂದ ದೊಡ್ಡ ವಿಘ್ನಗಳನ್ನೂ ಮೆಟ್ಟಿ ನಿರ್ಭಯವಾಗಿ

ಮೋಕ್ಷಮಾರ್ಗದಲ್ಲಿ ಮುನ್ನಡೆಯುತ್ತಾರೆ. ನೀನು ಸಾತ್ವಿಕರಾದ ಬ್ರಹ್ಮಾದಿಗಳ ಶರೀರದಲ್ಲಿ ನೆಲೆಸಿ ಲೋಕದಲ್ಲಿ ಜ್ಞಾನ ಕಾರ್ಯ ನಡೆಯುವಂತೆ ಮಾಡುವಿ. ನೀನು ಹಾಗೆ ಮಾಡದಿದ್ದಲ್ಲಿ ನಿನ್ನ ಅಲೌಕಿಕವಾದ ಗುಣಕರ್ಮರೂಪ ನಾಮಗಳನ್ನು ಯಾರೂ ತಿಳಿಯಲಾರರು. ಅವುಗಳನ್ನು ತಿಳಿದು, ಎಲ್ಲ ಕಾರ್ಯಗಳಲ್ಲಿಯೂ ನೀನೆ ಕರ್ತಭೋಕ್ತನೆಂದು ಅನುಸಂಧಾನ ಮಾಡುವವನಿಗೆ ಮುಂದೆ ಸಂಸಾರ ಭಯವಿರುವುದಿಲ್ಲ. ನಿನ್ನ ಈ ಅವತಾರದಿಂದ ನಿನ್ನ ಪಾದ ಭೂಮಿಯಲ್ಲಿ ಸುಂದರವಾದ ಧ್ವಜವಜ್ರಾಂಕುಶಾದಿ ಚಿಹ್ನೆ ಗಳಿಂದೊಪ್ಪುವ ಹೆಜ್ಜೆಗಳನ್ನು ಮೂಡಿಸಿ, ಭೂಭಾರವನ್ನು ಕಳೆದು, ಸ್ವರ್ಗದಲ್ಲಿ ಕರುಣೆಯನ್ನು ಹರಿಸುವುದನ್ನು ನಾವು ನೋಡಬೇಕು. ನಿನ್ನ ಅವತಾರ ಲೀಲೆಯೇ ಹೊರತು ಕರ್ಮಾಧಿ ೕನವಲ್ಲ. ಮತ್ಸ್ಯ ಹಯಗ್ರೀವ ಕೂರ್ಮ ನರಸಿಂಹ ಮುಂತಾದ ರೂಪಗಳಿಂದ ನೀನು ಅವತರಿಸಿ ಭೂಭಾರ ಕಳೆದು ಹಿಂದೆ ಮೂಲೋಕಗಳನ್ನು ಕಾಪಾಡಿರುವಿ. ಹಾಗೇ ಈಗಲೂ ಕಾಪಾಡು. ಅಮ್ಮ, ದೇವಕಿ, ನಿನ್ನ ಉದರದಲ್ಲಿ ಪರಮಪುರುಷ ನಾರಾಯಣ ನಮ್ಮ ಕಲ್ಯಾಣಕ್ಕಾಗಿ ಬಂದು ಕುಳಿತಿದ್ದಾನೆ. ನಿನಗೆ ಕಂಸನಿಂದ ಭಯವಿಲ್ಲ. ನಿನ್ನ ಈ ಪುತ್ರ ಇಡೀ ಯದುಕುಲಕ್ಕೇ ರಕ್ಷಕನೆನಿಸು ತ್ತಾನೆ.

❖ ❖ ❖

ತನ್ನ ಕರ್ಮಾನುಸಾರ ಜನ್ಮತಳೆಯುವ ಜೀವಾತ್ಮ ಮೊದಲಿಗೆ ತಂದೆಯ ಶರೀರವನ್ನು ಬಳಿಕ ಅಲ್ಲಿಂದ ತಾಯಿಯ ಗರ್ಭವನ್ನು ಪ್ರವೇಶಿಸಿ ಜನಿಸುತ್ತಾನೆ. ಶ್ರೀಹರಿಯೂ ಹಾಗೇ ಅವತರಿಸುತ್ತಾನೆ ಎಂದು ಅಯೋಗ್ಯರು ತಿಳಿಯಲಿ ಎನ್ನುವ ಉದ್ದೇಶದಿಂದ ಮೊದಲಿಗೆ ವಸುದೇವನ ಶರೀರವನ್ನೂ ಬಳಿಕ ಅಲ್ಲಿಂದ ಬಂದು ದೇವಕಿಯ ಶರೀರವನ್ನೂ ಪ್ರವೇಶಿಸಿದನೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ಭಗವಾನಪಿ ವಿಶ್ವಾತ್ಮಾ ಭಕ್ತಾನಾಮಭಯಂಕರಃ ।
ಆವಿವೇಶಾಂಶಭಾಗೇನ ಮನ ಆನಕದುಂದುಭೇಃ ॥ ೧೭ ॥

ವಿಶ್ವವ್ಯಾಪಿಯಾದ ಭಗವಂತ ಭಕ್ತರಿಗೆ ಅಭಯ ಉಂಟುಮಾಡುತ್ತ ಸಾಕ್ಷಾತ್

ತನ್ನ ತಲೆಯ ಕಪ್ಪು ಕೂದಲಿನ ರೂಪದಿಂದಲೆ ವಸುದೇವನ ಶರೀರವನ್ನು ಪ್ರವೇಶಿಸಿದ.

ಸ ಬಿಭ್ರತ್‌ಪೌರುಷಂ ಧಾಮ ರಾಜಮಾನೋ ಯಥಾ ರವಿಃ।
ದುರಾಸದೋಽತಿದುರ್ಧರ್ಷೋ ಭೂತಾನಾಂ ಸಂಬಭೂವ ಹ ॥ ೧೮ ॥

ವಸುದೇವ ಪರಮಪುರುಷನ ಪುರುಷಾಕಾರದ ತೇಜಸ್ಸನ್ನು ಧರಿಸಿ ಸೂರ್ಯನಂತೆ ಬೆಳಗುತ್ತ ಯಾವ ಪ್ರಾಣಿಗೂ ಹತ್ತಿರ ನುಗ್ಗಿ ಬರಲೂ ಇದಿರಿಸಲೂ ಆಗದಂತಾದ.

ತತೋ ಜಗನ್ಮಂಗಲಮಚ್ಯುತಾಂಶಂ
ಸಮಾಹಿತಂ ಶೂರಸುತೇನ ದೇವೀ।
ದಧಾರ ಸರ್ವಾತ್ಮಕಮಾತ್ಮಭೂತಂ
ಕಾಷ್ಠಾ ಯಥಾಽಽನಂದಕರಂ ನಭಸ್ತಃ ॥ ೧೯ ॥

ಬಳಿಕ ಜಗತ್ತಿಗೆ ಮಂಗಳ ಉಂಟುಮಾಡುತ್ತ ಎಲ್ಲ ಚೇತನರಿಗೂ ಸುಖ ನೀಡುವ ಅಚ್ಯುತನ ಅಂಶವನ್ನು ವಸುದೇವ ದೇವಕಿಯ ಗರ್ಭದಲ್ಲಿರಿಸಿದಾಗ, ಅಲ್ಲಿ ಸ್ವರೂಪದಿಂದಲೆ ಸ್ವೇಚ್ಛೆಯಿಂದ ತಾನೇ ಆವಿರ್ಭವಿಸಿದ ಅವನನ್ನು, ಆಕಾಶಮಾರ್ಗದಿಂದ ಬರುವ ಆಹ್ಲಾದಕರನಾದ ಚಂದ್ರನನ್ನು ಪೂರ್ವದಿಕ್ಕು ಹೇಗೋ ಹಾಗೇ, ದೇವಕಿ ಉದರದಲ್ಲಿ ಧರಿಸಿದಳು.

[೧]ಶ್ರೀಧರಸ್ವಾಮಿ ವ್ಯಾಖ್ಯಾನ ಪ್ರಕಾರ 'ಶ್ರೀಹರಿ ವಸುದೇವನ ಮನಸ್ಸಿನಲ್ಲಿ ಆವಿರ್ಭವಿಸಿದ ಹೊರತು ಪ್ರವೇಶಿಸಲಿಲ್ಲ. ದೇವಕಿಯೂ ಮನಸ್ಸಿನಲ್ಲಿ ಧ್ಯಾನಮಾಡಿ ಮನಸಿನಿಂದಲೆ ಧರಿಸಿದಳು ಹೊರತು ವಸುದೇವನ ಶರೀರದಿಂದ ಶ್ರೀಹರಿ ದೇವಕಿಯ ಉದರಕ್ಕೆ ಬರಲಿಲ್ಲ. ಏಕೆಂದರೆ ದೇವಕಿಯ ಶರೀರದಲ್ಲಿ ಮೊದಲೇ ಇದ್ದ ಭಗವಂತ.'

[೨]ವೀರರಾಘವ ವ್ಯಾಖ್ಯಾನ ಪ್ರಕಾರವೂ 'ಶ್ರೀಹರಿ ತಾನು ವಸುದೇವನ

---

೧ ಮನ ಆವಿವೇಶ ಮನಸ್ಯಾವಿರ್ಬಭೂವ। ಆತ್ಮಭೂತಂ ಸ್ವಸ್ಮಿನ್ನಾದಾವೇವ ಸಂತಂ ಮನಸ್ತೋ ಮನಸ್ಯೈವ ದಧಾರ ಧಾರಣಯಾ ಧೃತವತೀ। -ಶ್ರೀಧರಃ

೨ ವಿಶ್ವಾತ್ಮಾ ಶ್ರೀಭಗವಾನ್ ಅಂಶಭಾಗೇನ ಜಾತಸ್ಯೇತಿ ಶೇಷಃ 'ಸ ಆತ್ಮಾ ಅಂಗಾನ್ಯನ್ಯಾ ದೇವತಾಃ' ಇತಿ ದೇವತಾನಾಂ ಶ್ರೀ ಭಗವದಂಶತ್ವ ಶ್ರವಣಾತ್ ಆನಕ ದುಂದುಭೇರ್ದೇವಾಂಶೇನ ಜಾತತ್ವಾಚ್ಚೇತಿ ಭಾವಃ। ಮನ ಆವಿವೇಶ ಸಂಕಲ್ಪರೂಪ ಜ್ಞಾನೇನಾವಿವೇಶೇತ್ಯರ್ಥಃ। ಯೋ ಮನಸಿ ತಿಷ್ಠನ್ ಇತಿ ಪೂರ್ವಮೇವಾವಿಷ್ಟತ್ವಾವಗಮಾತ್। ಅಂಶಭಾಗೇನ ಸಂಕಲ್ಪರೂಪ-ಜ್ಞಾನೇನಾವಿವೇಶೇತಿ ವಾಽನ್ವಯಃ। -ವೀರರಾಘವಃ

ಮನಸ್ಸಿನಲ್ಲಿ ಪ್ರವೇಶಿಸಲಿಲ್ಲ, ತನ್ನ ಸಂಕಲ್ಪರೂಪವಾದ ಜ್ಞಾನ ಪ್ರವೇಶಿಸಿತು. ಜ್ಞಾನದ ಮೂಲಕ ಅವನೆ ಪ್ರವೇಶಿಸಿದಂತೆ. ಏಕೆಂದರೆ ಮನಸ್ಸಿನಲ್ಲಿ ಅವನು ಮೊದಲೆ ಇದ್ದ. ಅವನ ಅಂಶಭಾಗ ಜ್ಞಾನ. ಆದರಿಂದ ಅಂಶಭಾಗದಿಂದ ಪ್ರವೇಶಿಸಿದನೆಂದೇ ಭಾಗವತ ಶ್ಲೋಕ ಹೇಳಿದೆ. ಅಥವಾ ಹರಿಯ ಅಂಶ ವಸುದೇವ. ಎಲ್ಲ ದೇವತೆಗಳೂ ಹರಿಯ ಅಂಶಭೂತರು. ಅಂಶದಿಂದ ಜನಿಸಿದವನು ವಸುದೇವ ಒಬ್ಬ ದೇವತೆಯೆ. ಅವನಲ್ಲಿ ಮನಸಿನಲ್ಲಿ ಹರಿಯ ಜ್ಞಾನ ಪ್ರವೇಶಿಸಿತು.'

[೧]ವಲ್ಲಭಾಚಾರ್ಯ ವ್ಯಾಖ್ಯಾನದಲ್ಲಿ 'ವಸುದೇವ ಸಮಾಧಿಯಲ್ಲಿ ದೇವಕಿಯನ್ನು ಚಿಂತಿಸಿ ಅವಳಲ್ಲಿ ಹರಿಯ ತೇಜಸ್ಸನ್ನು ಮನಸಿನಿಂದಲೆ ಸ್ಥಾಪಿಸಿದ್ದಾನೆ. ದೇವಕಿಯೂ ದೇವಿಯಾದ್ದರಿಂದ ವಸುದೇವನ ಸಮಾಧಿಯಲ್ಲಿ ವಸುದೇವನ ಮನಸಿನೊಳಗೆ ಪ್ರವೇಶಿಸಿ ಹರಿಯ ತೇಜಸ್ಸನ್ನು ಗ್ರಹಿಸಿದಳು. ಅದಕ್ಕೆ ತಾನು ಪ್ರಯತ್ನಪಟ್ಟು ಸಮಾಧಿಯನ್ನು ಹೊಂದಿರಲಿಲ್ಲ. ಸ್ವತಃ ಉದಿಸಿ ಬರುವ ಚಂದ್ರನನ್ನು ಪೂರ್ವದಿಕ್ಕು ಗ್ರಹಿಸುವಂತೆ ಅನಾಯಾಸವಾಗಿ ಹರಿಯ ತೇಜಸ್ಸನ್ನು ಧರಿಸಿದಳು.'

ಈ ವ್ಯಾಖ್ಯಾನಕಾರರು ಯಾರೂ ಶ್ರೀಹರಿಯ ಅಭಿನ್ನಾಂಶವಾದ ಅವತಾರ ರೂಪಗಳನ್ನು ಒಪ್ಪುವುದಿಲ್ಲ. ಶ್ರೀಹರಿ ಆಕಾಶದಂತೆ ಎಲ್ಲೆಡೆ ವ್ಯಾಪಿಸಿರುವ ನಿರಂಶಚೇತನ ಎಂದು ಅವರ ಮತ. ಆದರಿಂದ 'ಶ್ರೀಹರಿಯ ಅಂಶವಾದ ಕೃಷ್ಣಕೇಶಕ್ಕೆ ಪುರುಷರೂಪವಿದೆ, ಅದು ಪದ್ಮನಾಭರೂಪದಿಂದ ಹೊರಗೆ ಹೊರಟು ಬಂದು ವಸುದೇವನ ಶರೀರದೊಳಗೆ ಪ್ರವೇಶಿಸಿ ಬಳಿಕ ಅಲ್ಲಿಂದ ಹೊರಟು ಬಂದು ದೇವಕಿಯ ಉದರದೊಳಗೆ ಪ್ರವೇಶಿಸಿತೆ'ನ್ನುವ ಪ್ರಕ್ರಿಯೆಯೇ ಅವರಿಗೆ ತಿಳಿದಿಲ್ಲ. ವೀರರಾಘವ ಮತದಲ್ಲಿ ಶ್ರೀಹರಿಯ ಜ್ಞಾನ ಅವನಿಗಿಂತ ಭಿನ್ನ, ಅವನ ಅಂಶ, ಅದು ವಸುದೇವನ ಮನಸ್ಸಿನೊಳಗೆ ಪ್ರವೇಶಿಸುತ್ತದೆ. ಇದು, 'ನೇಹ ನಾನಾಸ್ತಿ ಕಿಂಚನ' 'ಶ್ರೀಹರಿಯ ರೂಪಗುಣಕ್ರಿಯೆ ಮುಂತಾದವು ಯಾವುವೂ ಹರಿಗಿಂತ ಭಿನ್ನವಲ್ಲ.' 'ಏವಂ ಧರ್ಮಾನ್ ಪೃಥಕ್ ಪಶ್ಯನ್' 'ಭೇದವನ್ನು ತಿಳಿದರೆ ಅನರ್ಥವಿದೆ' ಎನ್ನುವ ಶ್ರುತಿಗಳಿಗೆ ಸಮ್ಮತವಲ್ಲ.

ಪರಮಾತ್ಮನ ಒಂದು ಅಂಶರೂಪ ವಸುದೇವ ದೇವಕಿಯರಲ್ಲಿ

---

೧ ಸಮಾಧೌ ದೇವಕೀಂ ಭಾವಯಿತ್ವಾ ಮನಸೈವ ತತ್ರ ಸಾಕ್ಷಾತ್ ತೇಜಃ ಸ್ಥಾಪಿತವಾನ್। ಶೂರಸುತೇನೇತಿ ವಿವೇಕಾರ್ಥಂ ಪಿತೃನಾಮ್ನಾ ನಿರ್ದೇಶಃ ದೇವೀತಿ ತಸ್ಯಾ ಅಂತಃಪ್ರವೇಶೇನ ಸಮಾಧಾವಪಿ ತತ್ತೇಜೋಗ್ರಹಣಸಾಮರ್ಥ್ಯಂ ದ್ಯೋತಿತಂ। ನ ಸ್ವಪ್ರಯತ್ನಾತ್ ಧಾರಣಲಕ್ಷಣಾತ್ ಭಗವಂತಮಾನೀಯ ಧೃತವತೀ। ಕಿಂತು ಯಥಾ ಸ್ವತ ಏವಾಗತ ಮುದ್ಯಂತಂ ಆನಂದಕರಂ ಚಂದ್ರಂ ಕಾಷ್ಠಾ ಪೂರ್ವಾದಿಕ್ ಬಿಭರ್ತಿ। -ವಲ್ಲಭಃ

ಪ್ರವೇಶಿಸುತ್ತದೆ ಎಂದು ಸ್ಪಷ್ಟವಾಗಿ ವಾಮನಪುರಾಣ ಹೇಳುತ್ತಿದೆ. ಅದನ್ನು ಈ ವ್ಯಾಖ್ಯಾನಕಾರರು ಗಮನಿಸುವುದಿಲ್ಲ.

ಆವಿಶ್ಯ ಪಿತರಂ ವಿಷ್ಣುಃ ಸ್ವರೂಪೇಣೈವ ಮಾತರಂ।
ವಿಡಂಬನಾರ್ಥಂ ಲೋಕಸ್ಯ ನಿರ್ಜನಿಶ್ಚಾಪ್ಯಥಾವಿಶತ್।
ಆನಂದಮಾತ್ರದೇಹೇನ ಜಾತವತ್ ಸಂಪ್ರದೃಶ್ಯತೇ॥ ಇತಿ ಚ॥

ಶ್ರೀಹರಿ ಲೋಕವಿಡಂಬನೆಗಾಗಿ ಸ್ವರೂಪಾಂಶಭೂತವಾದ ಆನಂದಮಯ ಶರೀರದಿಂದಲೆ ವಸುದೇವನ ಶರೀರದಲ್ಲಿ ಪ್ರವೇಶಿಸಿ ಬಳಿಕ ದೇವಕಿಯ ಗರ್ಭದಲ್ಲಿಯೂ ಪ್ರವೇಶಿಸಿದ. ಜೀವರಂತೆ ಜಡಶರೀರದ ಉತ್ಪತ್ತಿಗಾಗಿ ಅಲ್ಲ. ಉತ್ಪತ್ತಿ ಇಲ್ಲದಿದ್ದರೂ ತಂದೆತಾಯಿಗಳ ಶರೀರದಿಂದ ಹೊರಗೆ ಬಂದು ಜನ್ಮ ತಳೆದಂತೆ ತೋರಿಕೊಳ್ಳುತ್ತಾನೆ ಎಂದು ವಾಮನಪುರಾಣದಲ್ಲಿ ಉಕ್ತವಾಗಿದೆ.

ಭಾಗವತದಲ್ಲಿ 'ಮನ ಆನಕದುಂದುಭೇಃ' ಶ್ರೀಹರಿ ವಸುದೇವನ ಮನಸ್ಸನ್ನು ಪ್ರವೇಶಿಸಿದನೆಂದಿದೆ. 'ಯಥಾನಂದಕರಂ ಮನಸ್ತಃ' ಎಂದು ಶ್ರೀಧರಾದಿ ಸಮ್ಮತ ವಾದ ಪಾಠದಲ್ಲಿ ದೇವಕಿಯಲ್ಲಿಯೂ ಮನಸ್ಸನ್ನು ಪ್ರವೇಶಿಸಿದನೆಂದು ಕಾಣುತ್ತದೆ. ಶ್ರೀಧರವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ದೇವಕಿ ಧ್ಯಾನಬಲದಿಂದ ಮನಸ್ಸಿನಲ್ಲಿಯೇ ಶ್ರೀಹರಿಯನ್ನು ಧರಿಸಿದಳು ಎಂದು ವ್ಯಾಖ್ಯಾನ ಮಾಡಲಾಗಿದೆ. 'ಯಥಾನಂದಕರಂ ನಭಸ್ತಃ' ಎಂಬ ಪಾಠದಲ್ಲಿಯೂ ಆಕಾಶದಲ್ಲಿ ಚಂದ್ರನನ್ನು ಪೂರ್ವದಿಕ್ಕು ಹೇಗೋ ಹಾಗೆ ಹೃದಯಾಕಾಶದಲ್ಲಿ ಶ್ರೀಹರಿಯನ್ನು ದೇವಕಿ ಧರಿಸಿದಳು ಎಂದು ವ್ಯಾಖ್ಯಾನಿಸಲು ಶಕ್ಯವಿದೆ. ವಿಜಯಧ್ವಜೀಯದಲ್ಲಿ ಹಾಗೇ ವ್ಯಾಖ್ಯಾನಿಸಲಾಗಿದೆ-

ಹೃದಯಾಕಾಶೇ ದಧಾರ, ನ ತು ಯೋನ್ಯಾಕಾಶೇ।

ಶ್ರೀಮದಾಚಾರ್ಯರು 'ಸ್ವರೂಪೇಣೈವ ಮಾತರಮಾವಿಶತ್' ತಾಯಿಯ ಶರೀರವನ್ನು ಪ್ರವೇಶಿಸಿದನೆಂದು ಮಾತ್ರ ಹೇಳಿದ್ದಾರೆ. ಮನಸಿನಲ್ಲಿಯೋ ಗರ್ಭ ದಲ್ಲಿಯೋ ಎಂಬುದು ಇಲ್ಲಿ ಸ್ಪಷ್ಟವಾಗುವುದಿಲ್ಲ. ಆದರೆ ಋತುಕಾಲದಲ್ಲಿ ದೇವಕಿಯಲ್ಲಿ ಪ್ರವೇಶವೆಂದು ಮ.ಭಾ.ತಾ. ನಿರ್ಣಯ (೧೨.೬೧)ದಲ್ಲಿ ಸ್ಪಷ್ಟ ಹೇಳಿದ್ದಾರೆ. ವೀರರಾಘವ ವ್ಯಾಖ್ಯಾನದಲ್ಲಿ-

ದೇವಕೀ ದಧಾರ ಜಠರ ಇತಿ ಶೇಷಃ।

ಎಂದು ಗರ್ಭದಲ್ಲಿ ಪ್ರವೇಶ ಉಕ್ತವಾಗಿದೆ. ಸುದರ್ಶನ ಸೂರಿಯೂ

ವಸುದೇವ ಹೃದ್ಗತಃ ಪಶ್ಚಾದ್ ದೇವಕೀಜಠರಂ ವಿವೇಶ।

ಎಂದು ಹಾಗೇ ಹೇಳುತ್ತಾರೆ. 'ಕಿಮದ್ಯ ತಸ್ಮಿನ್ ಕರಣೀಯಮಾಶು ಮೇ' ಎಂಬ

ಮುಂದಿನ ೨೧ನೇ ಪದ್ಯದಲ್ಲಿ 'ಗುರುಮತ್ಯಾ ವಧೋಽಯಂ' ಗರ್ಭಿಣೀಹತ್ಯೆ ಅಪಯಶಸ್ಸಿಗೆ ಕಾರಣವಾಗುವುದೆಂದು ಶ್ರೀಧರೀಯದಲ್ಲಿಯೇ ವ್ಯಾಖ್ಯಾನಿಸ ಲಾಗಿದೆ- 'ಗುರುಮತ್ಯಾಃ ಗರ್ಭಿಣ್ಯಾಃ' ಎಂದು. ಗರ್ಭದಲ್ಲಿ ಧರಿಸಿದರೆ ಮಾತ್ರ ಶ್ರೀಮದಾಚಾರ್ಯರು ಹೇಳುವಂತೆ ಏಳೂವರೆ ತಿಂಗಳು ಗರ್ಭವಾಸ ಮಾಡಿದ್ದು ಲೋಕವಿಡಂಬನೆಯಾಗುವುದು. ಶ್ರೀಧರ ಮುಂತಾದವರು ಹೇಳುವಂತೆ ಯೋಗಧಾರಣೆಯಿಂದ ಮನಸ್ಸಿನಲ್ಲಿಯೇ ಧರಿಸಿದರೆ ಲೋಕವಿಲಕ್ಷಣವಾಗುವುದು ರುಕ್ಮಿಣೀಶ ವಿಜಯದಲ್ಲಿಯೂ,

ಫಣೀಶ್ವರಂ ಗರ್ಭಗತಂ ವಿಧಾಯ
ಪುನಃ ಸ್ವಯಂ ಸನ್ನಿಹಿತೋ ಬಭೂವ ।

'ಬಲರಾಮನನ್ನು ದೇವಕಿಯ ಗರ್ಭದಲ್ಲಿರಿಸಿ ಅಲ್ಲಿಂದ ಹೊರಡಿಸಿ ಶ್ರೀಹರಿ ತಾನು ಅಲ್ಲಿ ಸನ್ನಿಹಿತನಾದ'

ಗರ್ಭೇಽಪ್ಯದಭ್ರಾತ್ಮಸುಖೈಕಮೂರ್ತಿಃ ।

'ಗರ್ಭದಲ್ಲಿಯೂ ಸ್ವರೂಪಾನಂದ ಶರೀರಿಯಾಗಿಯೇ ಶ್ರೀಕೃಷ್ಣನಿದ್ದ' ಎಂದು ಶ್ರೀಕೃಷ್ಣನಿಗೆ ದೇವಕಿಯ ಗರ್ಭದಲ್ಲಿ ಪ್ರವೇಶ ಉಕ್ತವಾಗಿದೆ.

❖ ❖ ❖

ದೇವಕಿ ಗರ್ಭಧಾರಣ ಮಾಡಿದಾಗ ದೇವತೆಗಳು ಬಂದು ಗರ್ಭದಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಸ್ತುತಿಸುತ್ತಾರೆ-

ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।
ಸತ್ಯಸ್ಯ ಸತ್ಯಮುತ ಸತ್ಯನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ ೨೭ ॥

ಸದಾ ಪೂರ್ಣಾನಂದ ಜ್ಞಾನರೂಪ, ಪಂಚಭೂತಗಳಿಗಿಂತ ವಿಲಕ್ಷಣ, ಮೂರು ವೇದಗಳಿಂದ ಪ್ರತಿಪಾದ್ಯ, ಸತ್ಯಪ್ರಪಂಚಕ್ಕೆ ಮೂಲಕಾರಣ, ಸತ್ಯ ಪ್ರಪಂಚದಲ್ಲಿ ನಿಯಾಮಕನಾಗಿ ನೆಲೆಸಿರುವವನು, ನಿರ್ದುಷ್ಟ ಆನಂದಜ್ಞಾನರೂಪರಾದ ಸಾತ್ವಿಕರಿಗೆ ಉತ್ತಮ ಆನಂದ ಜ್ಞಾನಗಳನ್ನು ನೀಡುವವನು, ಸತ್ಯಪ್ರಪಂಚಕ್ಕೆ ನೇತಾರ, ಸಂಹಾರಕ ಇಂಥ ನಿನ್ನನ್ನು ಶರಣು ಹೊಂದುವೆವು.

'ಪರಮಾತ್ಮ ತ್ರಿಸತ್ಯ, ಅಂದರೆ ಮೂರು ಕಾಲಗಳಲ್ಲಿಯೂ, ಸೃಷ್ಟಿಗಿಂತ ಪೂರ್ವದಲ್ಲಿ- ಪ್ರಲಯಾನಂತರ ಮತ್ತು ಸ್ಥಿತಿಕಾಲದಲ್ಲಿಯೂ ನಿಯಮೇನ ಇರುವವನು. ಮೂರು ಕಾಲಗಳಲ್ಲಿ ಇರುವವನು ಎನ್ನುವುದರ ಉಪಪಾದನೆ, 'ಸತ್ಯಸ್ಯಯೋನಿಂ' ಸತ್ಯಪ್ರಪಂಚಕ್ಕೆ ಕಾರಣ ಎಂದು ಸೃಷ್ಟಿಗೆ ಪೂರ್ವದಲ್ಲಿರುತ್ತಾನೆ ಎಂದು ಹೇಳಿದಂತಾಯಿತು. 'ಸತ್ಯೇ ನಿಹಿತಂ' ಅಂತರ್ಯಾಮಿಯಾಗಿ ಸ್ಥಿತಿಕಾಲ ದಲ್ಲಿಯೂ ಇರುತ್ತಾನೆ ಎಂದಂತಾಯಿತು. 'ಸತ್ಯಸ್ಯ ಸತ್ಯಂ' ಅಂದರೆ ಪಾರಮಾರ್ಥಿಕ, ಪ್ರಪಂಚ ನಾಶವಾದ ಬಳಿಕವೂ ಉಳಿಯುವವನು, ಪ್ರಪಂಚ ಬಾಧಕ್ಕೆ ಅವಧಿಯಾಗಿರುವುದರಿಂದ ಸತ್ಯ ಎಂದಂತಾಗುವುದು. ಹೀಗೆ ಮೂರು ಕಾಲಗಳಲ್ಲಿ ಅಸ್ತಿತ್ವವನ್ನು ಉಪಪಾದಿಸಿದ್ದಾರೆ. 'ಎಲ್ಲ ರೀತಿಯಿಂದಲೂ ಸತ್ಯಸ್ವರೂಪ ನಾದ ನಿನ್ನನ್ನು ನಾವು ಶರಣುಹೊಂದುವೆವು' ಎಂದು ಶ್ರೀಧರವ್ಯಾಖ್ಯಾನವಿದೆ.[೧]

ಇಲ್ಲಿ 'ಸತ್ಯಸ್ಯ ಸತ್ಯಂ' ಎಂದರೆ ಪ್ರಪಂಚದ ಸತ್ಯತ್ವಕ್ಕಿಂತ ಹೆಚ್ಚಿನ ಸತ್ಯತ್ವ, ಅಂದರೆ ಪಾರಮಾರ್ಥಿಕ ಸತ್ಯತ್ವ ಪರಬ್ರಹ್ಮನಿಗಿದೆ ಎಂದಿದ್ದಾರೆ, 'ಸತ್ಯಸ್ಯ ಸತ್ಯಂ ಪಾರಮಾರ್ಥಿಕಂ' ಎಂದು. ಪ್ರಪಂಚ ಸ್ಥಿತಿಕಾಲದಲ್ಲಿ ಮಾತ್ರವಿದ್ದು ವ್ಯಾವಹಾರಿಕ ಸತ್ಯವಾಗಿದೆ. ಬ್ರಹ್ಮ ಪೂರ್ವಉತ್ತರಕಾಲಗಳಲ್ಲಿಯೂ ಇರುವುದರಿಂದ ಪಾರಮಾರ್ಥಿಕವಾದ ಹೆಚ್ಚಿನ ಸತ್ಯತ್ವಉಳ್ಳದ್ದೆಂದು ಅಭಿಪ್ರಾಯ. ಇಷ್ಟು ಹೇಳಿ, ಒಡನೆ, 'ತನ್ನಾಶೇಽಪ್ಯವಶಿಷ್ಯಮಾಣರೂಪಂ' ಪ್ರಪಂಚ ನಾಶವಾದ ಬಳಿಕವೂ ಇರುವಂಥದ್ದೆಂದು ವಿವರಣೆ ನೀಡುತ್ತಾರೆ. ಅದು ಅನಾವಶ್ಯಕ, ಆ ಶಬ್ದದಿಂದ ಆ ಅರ್ಥ ಹೊರಡುವುದೂ ಇಲ್ಲ. ನಮ್ಮ ವ್ಯಾಖ್ಯಾನದಲ್ಲಿ 'ಸತ್ಯಾತ್ಮಕಂ' ಎಂದರೆ ಸತ್ಯವಾದ ಪ್ರಪಂಚವನ್ನು 'ಅತ್ತೀತ್ಯಾತ್ಮಾ' ಸಂಹಾರ ಮಾಡುವುದರಿಂದ ಆತ್ಮ. ಉದರದೊಳಗೆ ಲಯಕಾಲದಲ್ಲಿಟ್ಟುಕೊಳ್ಳುವುದರಿಂದಲೂ ಆತ್ಮ. 'ಆದತ್ತೇ ಇತ್ಯಾತ್ಮಾ' ಎಂಬ ವಿವರಣೆಯನ್ನಿಟ್ಟುಕೊಳ್ಳಬಹುದಿತ್ತು. ಬಿಟ್ಟಿದ್ದಾರೆ. ಹೀಗಾಗಿ 'ತ್ರಿಸತ್ಯಂ' ಎಂಬುದರ ಉಪಪಾದನೆ ಪೂರ್ತಿಯಾಗುತ್ತಿಲ್ಲ. 'ಸತ್ಯಸ್ಯ ಯೋನಿಂ, ಸತ್ಯೇ ನಿಹಿತಂ' ಎಂದು ಎರಡು ಕಾಲಗಳಲ್ಲಿ ಸತ್ಯತ್ವ ಮಾತ್ರ ಉಪಪಾದಿತವಾಗುತ್ತಿದೆ.

---

೧. ತ್ರಿಸತ್ಯಂ ತ್ರಿಷ್ವಪಿ ಕಾಲೇಷು, ಸೃಷ್ಟೇಃ ಪೂರ್ವಂ ಪ್ರಲಯಾನಂತರಂ ಚ, ಸ್ಥಿತಿಸಮಯೇ ಚ ಸತ್ಯ ಮವ್ಯಭಿಚಾರೇಣ ವರ್ತಮಾನಂ । ತದೇವಾಹುಃ ಸತ್ಯಸ್ಯ ಯೋನಿಮಿತಿ । ಅನೇನ ಪೂರ್ವಂ ವರ್ತಮಾನತೋಕ್ತಾ । ತಥಾ ಸತ್ಯೇ ತಸ್ಮಿನ್ನೇವ ನಿಹಿತಂ ಅಂತರ್ಯಾಮಿತಯಾ ಸ್ಥಿತಂ । ಅನೇನ ಸ್ಥಿತಿ ಸಮಯೇಽಪಿ ಸತ್ಯತ್ವ ಮುಕ್ತಂ । ತಥಾ ಸತ್ಯಸ್ಯ ಸತ್ಯಂ ಪಾರಮಾರ್ಥಿಕಂ ತನ್ನಾಶೇಽಪ್ಯ ವಶಿಷ್ಯಮಾಣರೂಪಂ । ಅನೇನ ಪ್ರಲಯೇಽಪ್ಯವಧಿತ್ವೇನ ಸತ್ಯತ್ವಂ ದರ್ಶಿತಂ । ಏವಂ ತ್ರಿಸತ್ಯತ್ವಮುಪಪಾದಿತಂ। ಏವಂ ಸರ್ವಪ್ರಕಾರೇಣ ಸತ್ಯಾತ್ಮಕಂ ತ್ವಾಂ ಭಗವನ್ ವಯಂ ಶರಣಂ ಪ್ರಪನ್ನಾಃ ಪ್ರಾಪ್ತಾ ಇತಿ । -ಶ್ರೀಧರಃ

'ತ್ರಿಸತ್ಯ' ಎಂದು ಮೂರುಕಾಲಗಳಲ್ಲಿ ಸತ್ಯತ್ವವನ್ನು ಹೇಳಿದಾಗ ನಿತ್ಯತ್ವ ಮಾತ್ರ ಲಭ್ಯವಾಗುತ್ತದೆ. ಪಾರಮಾರ್ಥಿಕ ಸತ್ಯತ್ವವಲ್ಲ. ಪಾರಮಾರ್ಥಿಕ ಸತ್ಯ ಮಾತ್ರವೇ ಮೂರುಕಾಲಗಳಲ್ಲಿ ಇರುವಂಥದ್ದೆನ್ನುವಂತಿಲ್ಲ. ಪ್ರಕೃತಿ ವರ್ಣ ಆಕಾಶ ಮುಂತಾದುವೂ ಮೂರು ಕಾಲಗಳಲ್ಲಿದ್ದು ಅದ್ವೈತ ರೀತಿಯಿಂದ ವ್ಯಾವಹಾರಿಕ ಸತ್ಯವಾಗಿವೆ. ಅವುಗಳಿಗೂ ಜ್ಞಾನದಿಂದ ಲಯವಿದೆ ಎಂದು ಅದ್ವೈತ ಹೇಳಬಹುದು. ಆದರೆ 'ಸೃಷ್ಟಿಗಿಂತ ಪೂರ್ವದಲ್ಲಿ 'ಲಯದ ಅನಂತರ' ಎನ್ನುವಾಗ ಸೃಷ್ಟಿಲಯಗಳು ಜ್ಞಾನದಿಂದ ಅಲ್ಲ. ಈಶ್ವರ ಮಾಡುವ ಈ ಸೃಷ್ಟಿ ಲಯಗಳು ಜ್ಞಾನದಿಂದಲ್ಲ, ಮಾಯೆಯಿಂದ. ಮಾಯೆ ಎಂದರೆ ಭ್ರಾಂತಿಯಲ್ಲ. ಭ್ರಾಂತಿ ಈಶ್ವರನಿಗಿಲ್ಲ.

ಪ್ರಕೃತಿ ವರ್ಣ ಆಕಾಶ ಮುಂತಾದವು ಹೀಗೆ ತ್ರಿಕಾಲಸತ್ಯವಾಗಿರುವಾಗ ಪರಮಾತ್ಮನೊಬ್ಬನೆ 'ತ್ರಿಸತ್ಯ' ಎಂಬ ಹೊಗಳಿಕೆಗೆ ಹೇಗೆ ಪಾತ್ರನಾಗುತ್ತಾನೆ?

[೧]ವೀರರಾಘವ ವ್ಯಾಖ್ಯಾನ ಪ್ರಕಾರ ಶ್ರೀಕೃಷ್ಣ ಸತ್ಯಸ್ಯಸತ್ಯನೆನಿಸುವುದು, ಅವನ ಧರ್ಮಭೂತಜ್ಞಾನ ಎಂದೂ ಸಂಕೋಚಾದಿವಿಕಾರ ಹೊಂದದಿರುವುದರಿಂದ. ಆದರೆ ವಿಶಿಷ್ಟಾದ್ವೈತದಲ್ಲಿ ಕೃಷ್ಣನಂತೆ ಲಕ್ಷ್ಮಿಯೂ, ನಿತ್ಯಸೂರಿಗಳಾದ ಗರುಡ ಅನಂತ ವಿಷ್ವಕ್ಸೇನಾದಿಗಳೂ ಜ್ಞಾನಸಂಕೋಚಾದಿ ವಿಕಾರರಹಿತರು. ನಿತ್ಯಮುಕ್ತರಾದ್ದರಿಂದ ಅವರಿಗೆ ಎಂದೂ ಆ ವಿಕಾರಗಳಿಲ್ಲ. ಅವರೂ ಬ್ರಹ್ಮಾದಿಗಳೊಂದಿಗೆ ಬಂದು ಸ್ತೋತ್ರ ಮಾಡುತ್ತಾರೆ, ಇಲ್ಲವೆನ್ನಲು ಕಾರಣವಿಲ್ಲ. ಆಗ ತಾವೂ 'ಸತ್ಯಸ್ಯ ಸತ್ಯ'ರೇ ಆಗಿರುವಾಗ ಹಾಗೆ ಕೃಷ್ಣನನ್ನು ಸ್ತುತಿಸುವುದರಲ್ಲಿ ಏನು ಸೊಗಸಿದೆ? ನಮಿಸುವುದರಲ್ಲಿ ಏನು ಔಚಿತ್ಯವಿದೆ? ತಮಗಿಂತ ಶ್ರೇಷ್ಠರಿಗೆ ತಾನೆ ನಮನ?

ಇಂಥ ಯಾವ ಅನುಪಪತ್ತಿಗಳೂ ಬಾರದಂತೆ ತಂತ್ರಭಾಗವತ ವಚನದಿಂದಲೆ ಸರಿಯಾದ ವ್ಯಾಖ್ಯಾನ ಮಾಡುತ್ತಾರೆ-

ಸಚ್ಛಬ್ದ ಉತ್ತಮಂ ಬ್ರೂಯಾದಾನಂದಂ ತೀತಿ ವೈ ವದೇತ್ ।
ಯೇತಿ ಜ್ಞಾನಂ ಸಮುದ್ದಿಷ್ಟಂ ಪೂರ್ಣಾನಂದದೃಶಿಸ್ತತಃ ।
ಸತ್ಯಶಬ್ದೋದಿತಾ ತಾದೃಗ್‌ರೂಪಂ ನಿತ್ಯಂ ಯತೋ ಹರೇಃ ।
ಸತ್ಯವ್ರತಸ್ತತೋ ವಿಷ್ಣುಃ ಸದ್ ಭೂತತ್ರಯಮುಚ್ಯತೇ ।

೧. 'ಪ್ರಾಣಾ ವೈ ಸತ್ಯಂ ತೇಷಾಮೇಷ ಸತ್ಯಂ' ಇತಿ ಶ್ರುತೇಃ ಪ್ರಾಣಶಬ್ದ ನಿರ್ದಿಷ್ಟೇಭ್ಯಶ್ಚೇತನೇಭ್ಯೋಽಪಿ ಕದಾಚಿದಪಿ ಜ್ಞಾನಾದಿ ಸಂಕೋಚಾಭಾವಾತ್ ಪರಮಾತ್ಮಾ ಸತ್ಯಂ ನಿರ್ವಿಕಾರಮಿತ್ಯರ್ಥಃ । -ವೀರರಾಘವಃ

ತ್ಯಂ ತದನ್ಯತ್ ಸಮುದ್ದಿಷ್ಟಂ ತತ್ಪರತ್ವಾತ್ತು ತತ್ಪರಃ।
ವೇದಮುಖ್ಯಾರ್ಥರೂಪತ್ವಾತ್ ತ್ರಿಸತ್ಯೋ ಭಗವಾನ್ ಹರಿಃ।
ಸತ್ಯಸ್ಯ ಚೋತ್ತಮಾನಂದಜ್ಞಾನದಾತೃತ್ವತಃ ಸದಾ।
ಸತ್ಯಸ್ಯ ಸತ್ಯೋ ಭಗವಾನ್ ಸತ್ಯಸ್ಥೋ ಜಗತಿ ಸ್ಥಿತೇಃ॥
ಜಗನ್ನೇತೃತ್ವತಃ ಸತ್ಯನೇತಾ ವಿಷ್ಣುಃ ಪ್ರಕೀರ್ತಿತಃ।
ಅತ್ತೃತ್ವಾಚ್ಚ ತದಾದಾನಾತ್ ಸತ್ಯಾತ್ಮಾ ಚೋಚ್ಯತೇ ವಿಭುಃ॥
ಇತಿ ತಂತ್ರಭಾಗವತೇ।

'ಸತ್' ಎಂಬ ಶಬ್ದವು ಉತ್ತಮ ಎಂಬ ಅರ್ಥವನ್ನು ಹೇಳುತ್ತದೆ. 'ತಿ' ಎಂಬ ಶಬ್ದ ಆನಂದವನ್ನು ಹೇಳುತ್ತದೆ. 'ಯ' ಎಂದು ಜ್ಞಾನ ಉಕ್ತವಾಗುತ್ತದೆ. ಹೀಗಾಗಿ ಪೂರ್ಣ ಆನಂದಜ್ಞಾನ ಉಳ್ಳದ್ದು 'ಸತ್ಯ' ಶಬ್ದದ ಅರ್ಥ. ಅಂಥ ಸ್ವರೂಪವೇ ಸದಾ ಎಲ್ಲ ಅವತಾರಗಳಲ್ಲಿಯೂ ಹರಿಯದಾಗಿರುವುದರಿಂದ ಅವನು 'ಸತ್ಯವ್ರತ'ನೆನಿಸುತ್ತಾನೆ. (ಸತ್ಯವ್ರತ ಎಂಬಲ್ಲಿ ವ್ರತ ಎಂದರೆ ವರ್ತನೆ, ಸ್ಥಿತಿ. ಸತ್ಯ ಎಂದರೆ 'ಸತ್‌ತಿಯ' ಸತ್ತಿಯ, ಸತ್ಯ ಪೂರ್ಣಾನಂದ ಜ್ಞಾನಾತ್ಮಕ ಎಂದರ್ಥ. ಪೂರ್ಣಾನಂದಜ್ಞಾನಾತ್ಮಕವಾದ ಸ್ಥಿತಿಯೇ ಸದಾ ಶ್ರೀಹರಿಗೆ ಇರುತ್ತದೆ ಎಂದು ಹೇಳಿದಂತಾಯಿತು) ಪೃಥಿವಿ ಜಲ ತೇಜಸ್ಸೆಂದು ಮೂರು ಮಹಾಭೂತಗಳು ಸತ್ ಎನಿಸುತ್ತವೆ. ತ್ಯ ಅಂದರೆ ಅವುಗಳಿಗಿಂತ ವಿಲಕ್ಷಣವಾದ ವಾಯು ಆಕಾಶಗಳೆಂಬ ಎರಡು ಮಹಾಭೂತಗಳು. ಈ ಪಂಚಭೂತಗಳಿಗಿಂತಲೂ ವಿಲಕ್ಷಣನಾದ್ದರಿಂದ ಶ್ರೀಹರಿ 'ಸತ್ಯಪರ'ನೆನಿಸುತ್ತಾನೆ. ಮೂರು ವೇದಗಳಲ್ಲಿ ಮುಖ್ಯವಾಗಿ ಪ್ರತಿಪಾದಿತನಾಗುವವನು 'ತ್ರಿಸತ್ಯ.' ಸತ್ಯವಾದ ಪ್ರಪಂಚಕ್ಕೆ ಉತ್ತಮವಾದ ಆನಂದಜ್ಞಾನಗಳನ್ನು ಕೊಡುವುದರಿಂದ ಭಗವಂತ 'ಸತ್ಯಸ್ಯ ಸತ್ಯ'ನೆನಿಸ್ತಾನೆ. ಸತ್ಯವಾದ ಜಗತ್ತಿನಲ್ಲಿ ನಿಯಾಮಕನಾಗಿರುವುದರಿಂದ 'ಸತ್ಯೇ ನಿಹಿತ'ನೆನಿಸುತ್ತಾನೆ. ಸತ್ಯವಾದ ಜಗತ್ತಿಗೆ ನೇತಾರನಾದ್ದರಿಂದ 'ಸತ್ಯನೇತ್ರ'ನೆನಿಸುತ್ತಾನೆ. ಸತ್ಯವಾದ ಜಗತ್ತನ್ನು ಲಯಕಾಲದಲ್ಲಿ ಭಕ್ಷಿಸುವವನಾದ್ದರಿಂದ ಮತ್ತು ಹೊಟ್ಟೆಯೊಳಗೆ ಸ್ವೀಕರಿಸುವವನಾದ್ದರಿಂದ 'ಸತ್ಯಾತ್ಮಕ'ನೆನಿಸುತ್ತಾನೆ. ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

❖ ❖ ❖

ದೇವಕಿ ಗರ್ಭಧಾರಣ ಮಾಡಿದಾಗ ದೇವತೆಗಳು ಬಂದು ಗರ್ಭದಲ್ಲಿ ಸನ್ನಿಹಿತನಾಗಿದ್ದ ಶ್ರೀಹರಿಯನ್ನು ಸ್ತುತಿಸುತ್ತಾರೆ.

ಏಕಾಯನೋऽಸೌ ದ್ವಿಫಲಸ್ತ್ರಿಮೂಲ
ಶ್ಚತೂರಸಃ ಪಂಚಶಿಫಃ ಷಡಾತ್ಮಾ ।
ಸಪ್ತತ್ವಗಷ್ಟವಿಟಪೋ ನವಾಕ್ಷೋ
ದಶಚ್ಛದೀ ದ್ವಿಖಗೋ ಹ್ಯಾದಿವೃಕ್ಷಃ ॥ ೨೮ ॥

ನಿನ್ನ ನಿಯಂತ್ರಣದಲ್ಲಿರುವ ಈ ಪ್ರಾಣಿಪ್ರಪಂಚ ಒಂದು ಅದ್ಭುತವಾದ ಆಲದ ಮರದಂತಿದೆ. ಅದು 'ಏಕಾಯನಃ' ಅಂದರೆ, ಒಂದು ತಾಯಿ ಬೇರು, ಮೂಲ ಪ್ರಕೃತಿ ಅದಕ್ಕೆ ಮುಖ್ಯ ಆಧಾರ. ಅಥವಾ ಚೇತನ ಪ್ರಕೃತಿ ಮುಖ್ಯ ಆಧಾರ. ಅಥವಾ ಪರಮಾತ್ಮನೇ ಮುಖ್ಯ ಆಧಾರ. 'ದ್ವಿಫಲ' ಪ್ರವೃತ್ತಕರ್ಮ ನಿವೃತ್ತ ಕರ್ಮಗಳು ಅಥವಾ ಪುಣ್ಯಪಾಪ ಕರ್ಮಗಳು ಎರಡು ಫಲಗಳು. 'ತ್ರಿಮೂಲಃ' ತ್ರಿಗುಣಗಳು ಮೂರು ಸಣ್ಣ ಬೇರು ಗಳು. ಅಥವಾ ಜಾಗ್ರತ್ ಸ್ವಪ್ನ ಸುಷುಪ್ತಿ ಎಂದು ಮೂರು ಅವಸ್ಥೆಗಳು ಶರೀರದ ಸುಸ್ಥಿತಿಗೆ ಮೂಲಗಳು. 'ಚತೂರಸಃ' ಪ್ರವೃತ್ತಕರ್ಮದ ಧರ್ಮಅರ್ಥಕಾಮಗಳೆಂಬ ಮೂರು ರಸಗಳು ಮತ್ತು ನಿವೃತ್ತಕರ್ಮದ ಮೋಕ್ಷಾಖ್ಯ ಒಂದು ರಸ ಹೀಗೆ ನಾಲ್ಕು ರಸಗಳು. ಅಥವಾ ಪುಣ್ಯ ಕರ್ಮದ ಸ್ವರ್ಗ ಮೋಕ್ಷ ಎಂಬ ಎರಡು ರಸಗಳು, ಪಾಪಕರ್ಮದ ನರಕ ತಮಸ್ಸೆಂಬ ಎರಡು ರಸಗಳು ಸೇರಿ ನಾಲ್ಕು ರಸಗಳು. 'ಪಂಚಶಿಫಃ' ಶಬ್ದ ಸ್ಪರ್ಶರೂಪ ರಸ ಗಂಧಗಳೆಂದು ಐದು ವಿಷಯಗಳು ಅಥವಾ ಪ್ರಾಣ ಅಪಾನ ವ್ಯಾನ ಉದಾನ ಸಮಾನ ಎಂದು ಐದು ವಾಯುಗಳು ಐದು ಬೀಳಲುಗಳು. 'ಷಡಾತ್ಮಾ' ಆರು ಸ್ವಭಾವಗಳು ಭ್ರೂಣಾವಸ್ಥೆಯಲ್ಲಿರು ವುದು. 'ಅಸ್ತಿ', ಭ್ರೂಣದಿಂದ ಶರೀರ ಹುಟ್ಟುವುದು 'ಜಾಯತೇ', ಬೆಳೆ ಯುವುದು 'ವರ್ಧತೇ', ಕ್ರಮೇಣ ರೂಪಾಂತರ ಪರಿಣಾಮ ಹೊಂದು ವುದು 'ವಿಪರಿಣಮತೇ', ಕ್ರಮೇಣ ಕ್ಷೀಣಿಸುವುದು 'ಅಪಕ್ಷೀಯತೇ', ನಾಶವಾಗುವುದು 'ನಶ್ಯತಿ' ಎಂದು. ಅಥವಾ ಹಸಿವು ನೀರಡಿಕೆ ದುಃಖ ಮೋಹ ಜರೆ ಮರಣಗಳೆಂದು ಆರು ಸ್ವಭಾವಗಳು. 'ಸ್ವಪ್ತತ್ವಕ್' ತ್ವಕ್ ಚರ್ಮ ಮಾಂಸ ರಕ್ತ ಮಜ್ಜೆ ಮೇದಸ್ಸು ಅಸ್ಥಿಗಳೆದು ಜೀವ ಸ್ವರೂಪ ಶರೀರಕ್ಕೆ ಏಳು ಹೊದ್ದಿಕೆಗಳು. ಬಾಹ್ಯಶರೀರದಲ್ಲಿರುತ್ತವೆ. 'ಅಷ್ಟವಿಟಪಃ' ದೇವ ಗಂಧರ್ವ ದಾನವ ರಾಕ್ಷಸ ಪಿಶಾಚ ತಿರ್ಯಕ್ ಮನುಷ್ಯ ಸ್ಥಾವರಗಳೆಂದು ಎಂಟು ಶಾಖೆಗಳು. ಪ್ರತಿಯೊಂದು ಶರೀರದಲ್ಲಿ ಪಂಚಭೂತಗಳು ಮನಸ್ಸು ಬುದ್ಧಿ ಅಹಂಕಾರಗಳೆಂದು ಎಂಟು ಶಾಖೆಗಳು.

'ನವಾಕ್ಷಃ' ಎರಡು ಕಣ್ಣು ಎರಡು ಕಿವಿ, ಎರಡು ಮೂಗಿನ ಹೊಳ್ಳೆಗಳು ಬಾಯಿ ಮಲದ್ವಾರ ಮೂತ್ರದ್ವಾರಗಳೆಂದು ಒಂಬತ್ತು ಪೊಟರೆಗಳು. ('ಪುರಮೇಕಾ ದಶದ್ವಾರಂ' ಎಂದು ಕಾಠಕೋಪನಿಷತ್ತಿನಲ್ಲಿ ಹನ್ನೊಂದು ದ್ವಾರಗಳನ್ನು ಹೇಳಿದ್ದರೂ ಅವುಗಳಲ್ಲಿ ನಾಭಿ ಶಿರ ಎಂದು ಎರಡು ದ್ವಾರಗಳಲ್ಲಿ ಪ್ರವೇಶ ನಿರ್ಗಮಗಳಿಲ್ಲದ್ದರಿಂದ ಅವನ್ನು ಬಿಟ್ಟು ಒಂಬತ್ತು ದ್ವಾರಗಳನ್ನು ಇಲ್ಲಿ ಹೇಳಿದೆ.) 'ದಶಚ್ಛದೀ' ಪಂಚ ಜ್ಞಾನೇಂದ್ರಿಯಗಳು ಪಂಚ ಕರ್ಮೇಂದ್ರಿಯಗಳೆಂದು ಹತ್ತು ಇಂದ್ರಿಯಗಳು ಎಲೆಗಳು. (ಹಿಂದೆ ಹೇಳಿದ ನವದ್ವಾರಗಳು ಇಂದ್ರಿಯ ಗೋಲಕಗಳು, ಹೊರತು ಇಂದ್ರಿಯಗಳಲ್ಲ.) 'ದ್ವಿಖಗಃ' ಪ್ರವೃತ್ತಕರ್ಮಿ ನಿವೃತ್ತಕರ್ಮಿ ಎಂದು ಎರಡು ಹಕ್ಕಿಗಳು. ಅಥವಾ ಜೀವ ಪರಮಾತ್ಮ ಎಂದು ಎರಡು ಹಕ್ಕಿಗಳು. ಮೊದಲನೆ ಪಕ್ಷದಲ್ಲಿ ಎರಡೂ ಹಕ್ಕಿಗಳು ಹಣ್ಣು ತಿನ್ನುತ್ತದ. ಎರಡನೆ ಪಕ್ಷದಲ್ಲಿ ಜೀವಪಕ್ಷಿ ಮಾತ್ರ ತಿನ್ನುತ್ತದೆ. ಈ ವೃಕ್ಷಕ್ಕೆ ಹುಟ್ಟು ಸಾವುಗಳಿದ್ದರೂ ಪ್ರವಾಹರೂಪದಿಂದ ಮತ್ತು ಕಾರಣರೂಪದಿಂದ ಆದಿಯಿಂದಲೂ ಇದೆ. ಅದರಿಂದ ಆದಿವೃಕ್ಷವೆನಿಸಿದೆ.

ತ್ವಮೇಕ ಏವಾಸ್ಯ ಸತಃ ಪ್ರಸೂತಿಃ
ಸ್ಥಾನಂ ನಿಧಾನಂ ತ್ವಮನುಗ್ರಹಶ್ಚ।
ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ
ಪಶ್ಯಂತಿ ನಾನಾ ನ ವಿಪಶ್ಚಿತೋ ಯೇ ॥ ೨೯ ॥

ಸತ್ಯವಾದ ಈ ಪ್ರಪಂಚವೃಕ್ಷಕ್ಕೆ ನೀನೇ ಸೃಷ್ಟಿಕರ್ತ. ನೀನೇ ಸ್ಥಿತಿಕರ್ತ. ಲಯದಲ್ಲಿಯೂ ಅದು ಸೇರುವುದು ನಿನ್ನನ್ನೇ. ನೀನೇ ಅದಕ್ಕೆ ಅನುಗ್ರಹ ಮಾಡುವವನು. ನಿನ್ನ ಮಾಯೆಯಿಂದ ಆವೃತರಾದ ಅಜ್ಞ ಜನರು ಸೃಷ್ಟಿಗೊಬ್ಬ ಲಯಕ್ಕೊಬ್ಬ ಎಂದು ಮುಂತಾಗಿ ಬೇರೆಬೇರೆಯಾಗಿಯೇ ನಿನ್ನನ್ನು ತಿಳಿದುಕೊಳ್ಳುತ್ತಾರೆ. ಜ್ಞಾನಿಗಳು ಹಾಗೆ ತಿಳಿಯುವುದಿಲ್ಲ.

[೧]ಶ್ರೀಧರ ವ್ಯಾಖ್ಯಾನದಲ್ಲಿ ವೃಕ್ಷರೂಪಕದ ಅಭಿಪ್ರಾಯವನ್ನು ಹೀಗೆ

---

೧. ಲೋಕಾದಿರೂಪಂ ದ್ವೈತಂ ಚ ಸರ್ವಂ ತ್ವದ್‌ವ್ಯತಿರೇಕೇಣ ನಾಸ್ತೀತಿ ವಕ್ತುಂ ದ್ವೈತಪ್ರಪಂಚಂ ವೃಕ್ಷರೂಪಕೇಣ ನಿರೂಪಯಂತಿ ಏಕಾಯನ ಇತಿ। ಅಸೌ ಪ್ರಪಂಚ ಆದಿವೃಕ್ಷಃ। ವೃಶ್ಚ್ಯತ ಇತಿ ವೃಕ್ಷಃ ಸಮಷ್ಟಿ ವ್ಯಷ್ಟಿ ದೇಹರೂಪಃ। ಕಥಂಭೂತಃ? ಏಕಾಯನಃ ಏಕಾ ಪ್ರಕೃತಿರಯನಮಾಶ್ರಯೋ ಯಸ್ಯಸಃ। ದ್ವೇ ಸುಖ ದುಃಖೇ ಫಲೇ ಯಸ್ಯ ಸಃ। ತ್ರಯೋ ಗುಣಾ ಮೂಲಾನಿ ಯಸ್ಯಸಃ। ಚತೂರಸೋ ಧರ್ಮಾರ್ಥಕಾಮಮೋಕ್ಷಾಶ್ಚತ್ವಾರೋ ರಸಾ ಯಸ್ಯ ಸಃ। -ಶ್ರೀಧರಃ

ಹೇಳಿದ್ದಾರೆ. 'ದ್ವೈತಪ್ರಪಂಚವೆಲ್ಲವೂ ಮಿಥ್ಯೆ. ನಿನ್ನನ್ನು ಬಿಟ್ಟರೆ ಅದಕ್ಕೆ ಬೇರೆ ಅಸ್ತಿತ್ವವೆ ಇಲ್ಲ ಎಂದು ಹೇಳುವ ಅಭಿಪ್ರಾಯದಿಂದ ಶ್ರೀಹರಿಗೆ ಸೃಷ್ಟಿಸ್ಥಿತಿ ಮುಂತಾದ ಎಲ್ಲ ಅವಸ್ಥೆಗಳಲ್ಲಿಯೂ ಅಧೀನವಾಗಿರುವ ದ್ವೈತ ಪ್ರಪಂಚವನ್ನು ವೃಕ್ಷಕ್ಕೆ ಹೋಲಿಸಿದ್ದಾರೆ ಬ್ರಹ್ಮರುದ್ರರು.' ಎಂದು. ಆದರೆ ಎಲ್ಲ ಅವಸ್ಥೆಗಳಲ್ಲಿಯೂ ಶ್ರೀಹರಿಗೆ ಅಧೀನವಾದ ಮಾತ್ರಕ್ಕೆ ಪ್ರಪಂಚಕ್ಕೆ ಹರಿಯನ್ನು ಬಿಟ್ಟರೆ ಅಸ್ತಿತ್ವವೇ ಇಲ್ಲ ಎನ್ನಲಾಗದು, ಸ್ವತಂತ್ರವಾದ ಅಸ್ತಿತ್ವವಿಲ್ಲ ಎನ್ನಬೇಕು. ಬೇರೆ ಅಸ್ತಿತ್ವವೆ ಇಲ್ಲವಾದರೆ ಅದಕ್ಕೆ ಸೃಷ್ಟಿ ಲಯಾದಿಗಳೇ ಕೂಡಲಾರವು. ಹಗ್ಗದಲ್ಲಿ ಕಂಡ ಹಾವಿಗೆ ಸೃಷ್ಟಿಲಯಗಳಿಲ್ಲ. ಅದಕ್ಕೆ ಹಗ್ಗದಿಂದ ಬೇರೆ ಅಸ್ತಿತ್ವವಿಲ್ಲ.

ತ್ವಮೇಕ ಏವಾಸ್ಯ ಸತಃ ಪ್ರಸೂತಿಃ

ಎಂದು ಸ್ಪಷ್ಟವಾಗಿ 'ಸತಃ' ಎಂಬ ಶಬ್ದದಿಂದ ಅಸ್ತಿತ್ವವನ್ನು ಶ್ಲೋಕದಲ್ಲೇ ಹೇಳಿದ್ದಾರೆ.

ಅದ್ವೈತದಲ್ಲಿ ಶ್ರೀಹರಿ ತ್ರಿಮೂರ್ತಿಗಳಲ್ಲಿ ಒಬ್ಬನಾದ ಒಬ್ಬ ಈಶ್ವರ ಹೊರತು ಪರಬ್ರಹ್ಮನಲ್ಲ. ಪರಬ್ರಹ್ಮನನ್ನು ಬಿಟ್ಟು ಬೇರೆ ಅಸ್ತಿತ್ವ ಪ್ರಪಂಚಕ್ಕಿಲ್ಲ ಎನ್ನುವುದೇ ಅದ್ವೈತ. ಶಬಲ ಬ್ರಹ್ಮನಾದ ಶ್ರೀಹರಿಯನ್ನು ಬಿಟ್ಟು ಬೇರೆ ಅಸ್ತಿತ್ವವಿಲ್ಲವೆನ್ನುವುದು ಅದ್ವೈತವಾಗುವುದಿಲ್ಲ. ಶ್ರೀಹರಿಯ ಪರಬ್ರಹ್ಮತ್ವ ಅವನ ವಶದಲ್ಲಿರುವ ಮಾಯೆಯಿಂದ ಆವೃತವಾಗಿಲ್ಲದ್ದರಿಂದ ಅವನನ್ನು ಪರಬ್ರಹ್ಮನೆಂದೇ ತಿಳಿದು ಸ್ತೋತ್ರ ಮಾಡುತ್ತಿದ್ದಾರೆ ಎನ್ನುವುದಾದರೆ ಆಗಲೂ ದ್ವೈತಪ್ರಪಂಚ ಸೃಷ್ಟ್ಯಾದಿಕಾರ್ಯದಲ್ಲಿ ಪರಬ್ರಹ್ಮನಿಗೆ ಅಧೀನವೆನ್ನುವಂತಿಲ್ಲ. ಹಾವು ಹಗ್ಗದ ಅಧೀನವಲ್ಲ. ಹಗ್ಗವನ್ನು ಆವರಿಸಿದ ಅಜ್ಞಾನದ ಅಧೀನ. ಹಾಗೇ ದ್ವೈತಪ್ರಪಂಚ ಶ್ರೀಹರಿಯ ಮಾಯೆಯ ಅಧೀನ. ಮಾಯೆ ಹರಿಯ ಅಧೀನವೆ ತಾನೆ? ಎಂದರೆ, ಮಾಯೆ ಒಂದು ಅವಿದ್ಯೆ. ಅವಿದ್ಯೆ ಈಶ್ವರನನ್ನು ಆವರಿಸದೆ ಜೀವನನ್ನು ಮಾತ್ರ ಆವರಿಸುವುದು ಅದರ ಶಕ್ತಿ ಹೊರತು ಈಶ್ವರನ ಶಕ್ತಿ ಎನ್ನಲಾಗದು. ಏಕೆಂದರೆ ಜೀವೇಶ್ವರರು ಸ್ವರೂಪತಃ ಒಬ್ಬನೆ ಪರಬ್ರಹ್ಮ.

ಈಶ್ವರನ ಶಕ್ತಿ ಎಂದೇ ಒಪ್ಪಿದರೂ ಆ ಶಕ್ತಿ ಈಶ್ವರರಾದ ಬ್ರಹ್ಮ ರುದ್ರರಿಗೂ ಇದೆ. ಅವರು ಏಕೆ ಹರಿಯನ್ನು ಸ್ತೋತ್ರ ಮಾಡಲು ದೇವಕಿಯ ಬಳಿಗೆ ಬರುತ್ತಾರೆ?

ಶ್ಲೋಕ ವ್ಯಾಖ್ಯಾನದಲ್ಲಿಯೂ ಕೆಲವು ಅನುಪಪತ್ತಿಗಳು ಎದ್ದು ಕಾಣುತ್ತವೆ. ಉದಾ: ಸುಖ ದುಃಖಗಳು ಎರಡು ಫಲಗಳು, ಅವುಗಳ ರಸಗಳು ಧರ್ಮ ಅರ್ಥ ಕಾಮ ಮೋಕ್ಷಗಳು ಎನ್ನುತ್ತಾರೆ. ಇದು ತಿರುವು ಮುರುವು. ಎಲ್ಲ ವ್ಯಾಖ್ಯಾನಕಾರರೂ ಇವರನ್ನೇ ಅನುಸರಿಸಿದ್ದಾರೆ. ಆದರೆ ಪ್ರವೃತ್ತ ಕರ್ಮ ನಿವೃತ್ತಕರ್ಮಗಳು ಎರಡು

ಫಲಗಳು. ಪ್ರವೃತ್ತ ಕರ್ಮಕ್ಕೆ ಧರ್ಮ ಅರ್ಥ ಕಾಮಗಳು, ನಿವೃತ್ತ ಕರ್ಮಕ್ಕೆ ಮೋಕ್ಷ ಎಂದು ಒಟ್ಟು ನಾಲ್ಕು ರಸಗಳು ಎನ್ನಬೇಕಾಗಿತ್ತು.

ಪ್ರವೃತ್ತಂ ಚ ನಿವೃತ್ತಂ ಚ ಫಲದ್ವಯಮುದೀರಿತಂ ।
ಧರ್ಮಾದಯಸ್ತತ್ರ ರಸಾ ಮೋಕ್ಷ ಏಕಃ ಫಲಸ್ಯ ತು ।

ಎಂದು ಸ್ಪಷ್ಟವಾಗಿ ತಂತ್ರಭಾಗವತದಲ್ಲಿ ಹೇಳಿದೆ. ಇದನ್ನು ಶ್ರೀಮದಾಚಾರ್ಯರು ಹೇಳಿದ್ದರೂ ಯಾರೂ ಗಮನಿಸದಿರುವುದು ಆಶ್ಚರ್ಯ.

ಜಗದ್‌ವೃಕ್ಷಾಶ್ರಯಾ ಹ್ಯೇಷಾ ಪ್ರಕೃತಿಸ್ತು ಗುಣತ್ರಯಂ ।
ಮೂಲಂ ಮಾತ್ರಾಃ ಶಿಫಾಸ್ತಸ್ಯ ಉತ್ಪತ್ತ್ಯಾದಿಕಾಸ್ತಥಾ ।
ಷಟ್ ಪ್ರಕಾರಾಸ್ತು ವಿಟಪಾ ದೇವಗಂಧರ್ವದಾನವಾಃ ।
ರಾಕ್ಷಸಾಶ್ಚ ಪಿಶಾಚಾಶ್ಚ ತಿರ್ಯಞ್ಚ್ ಮಾನುಷತಸ್ಥುಷಃ ।
ಇಂದ್ರಿಯಾಣ್ಯಸ್ಯ ಪತ್ರಾಣಿ ದ್ವಾರೋ ದ್ವಾರೋ ನವ ಸ್ಮೃತಾಃ ।
ಪ್ರವೃತ್ತಂ ಚ ನಿವೃತ್ತಂ ಚ ಫಲದ್ವಯಮುದೀರಿತಂ ।
ಧರ್ಮಾದಯಸ್ತತ್ರ ರಸಾ ಮೋಕ್ಷ ಏಕಃ ಫಲಸ್ಯ ತು ।
ಪ್ರವೃತ್ತಾಶ್ಚ ನಿವೃತ್ತಾಶ್ಚ ಪಕ್ಷಿಣೋ ದ್ವಿವಿಧಾ ಮತಾಃ ।
ಕಾರಣಸ್ಯ ಸದಾ ಸತ್ತ್ವಾತ್ ಪ್ರವಾಹೇಣ ಚ ಸನ್ನಸೌ ।
ನ ಕದಾಚಿನ್ನ ಭೂತೋಽಸೌ ನಚೈವ ನ ಭವಿಷ್ಯತಿ ।
ಸ್ವತೋ ವಾ ಪರತೋ ವಾಽಪಿ ಸನ್ನತೋಽಸೌ ಜಗತ್ತರುಃ ।
ಅಸ್ಯ ಸರ್ಗಾದಿಕೃದ್ ವಿಷ್ಣುಃ ಸದಾನಂದೈಕ ರೂಪಕಃ ॥ ಇತಿ ಚ ॥

ಚಿತ್‌ಪ್ರಕೃತಿ ಮತ್ತು ಅಚಿತ್‌ಪ್ರಕೃತಿ ಜಗದ್‌ವೃಕ್ಷಕ್ಕೆ ತಾಯಿಬೇರು. ಸತ್ವರಜಸ್‌ತಮಸ್ ಎಂಬ ಮೂರು ಗುಣಗಳು ಮೂರು ಹೊಸಬೇರುಗಳು. ಶಬ್ದಸ್ಪರ್ಶರೂಪರಸವೆಂಬ ಐದು ವಿಷಯಗಳು ಐದು ಬೀಳಲುಗಳು. ಅಸ್ತಿ ಜಾಯತೇ ವರ್ಧತೇ ಪರಿಣಮತೇ ಅಪಕ್ಷೀಯತೇ ನಶ್ಯತಿ ಎಂಬವೆ ಆರು ವಿಕಾರಗಳು. ದೇವ, ಗಂಧರ್ವ, ದಾನವ, ರಾಕ್ಷಸ, ಪಿಶಾಚ, ತಿರ್ಯಕ್, ಮನುಷ್ಯ ಸ್ಥಾವರಗಳೆ ಎಂಟು ಶಾಖೆಗಳು. ಹತ್ತು ಇಂದ್ರಿಯಗಳೇ ಎಲೆಗಳು. ಎರಡು ಕಣ್ಣು ಎರಡು ಕಿವಿ ಎರಡು ಮೂಗಿನ ಹೊಳ್ಳೆಗಳು ಬಾಯಿ ಮಲದ್ವಾರ ಮೂತ್ರದ್ವಾರಗಳು ಒಂಬತ್ತು ಪೊಟರೆಗಳು. ಪ್ರವೃತ್ತ ನಿವೃತ್ತ ಕರ್ಮಗಳೆ ಎರಡು ಫಲಗಳು. ಅವುಗಳ ರಸಗಳು ಧರ್ಮ ಅರ್ಥ ಕಾಮ ಎಂದು ಮೂರು ಮತ್ತು ಮೋಕ್ಷ ಒಂದು. ಪ್ರವೃತ್ತ ಕರ್ಮಿಗಳು ನಿವೃತ್ತಕರ್ಮಿಗಳೆಂದು ಪಕ್ಷಿಗಳು ಎರಡು ಬಗೆಯವುಗಳು.

ಪ್ರಕೃತಿ ಮುಂತಾದ ಕಾರಣಗಳು ಯಾವಾಗಲೂ ಇರುವುದರಿಂದ ಮತ್ತು ಪ್ರವಾಹರೂಪದಿಂದ ಸದಾ ಇರುವುದರಿಂದ ಸ್ವರೂಪದಿಂದಾಗಲಿ ಪ್ರವಾಹರೂಪದಿಂದಾಗಲಿ ಈ ಜಗದ್ವೃಕ್ಷ ಸರ್ವದಾ ಇರುತ್ತದೆ. ಎಂದೂ ಹಿಂದೆ ಇರಲಿಲ್ಲ ಎಂದಿರಲಿಲ್ಲ. ಮುಂದೆ ಇರುವುದಿಲ್ಲ ಎಂದಾಗುವುದೂ ಇಲ್ಲ. ಈ ಜಗದ್ವೃಕ್ಷಕ್ಕೆ ಸೃಷ್ಟ್ಯಾದಿಕರ್ತ ಸದಾ ಆನಂದಉಳ್ಳ ಏಕರೂಪನಾಗಿರುವ ವಿಷ್ಣುವೆ ಎಂದೂ ತಂತ್ರಭಾಗವತದಲ್ಲಿ ಹೇಳಿದೆ.

'ಅಸ್ಯ ಸರ್ಗಾದಿಕೃದ್ ವಿಷ್ಣುಃ ಸದಾನಂದೈಕರೂಪಕಃ' ಎಂಬ ಒಂದು ವಾಕ್ಯದಿಂದ 'ತ್ವಮೇಕ ಏವಾಸ್ಯ ಸತಃ ಪ್ರಸೂತಿಃ' ಎಂಬ ಶ್ಲೋಕದ ಅಭಿಪ್ರಾಯ ಉಕ್ತವಾಗಿದೆ. ಮತ್ತು ವೃಕ್ಷರೂಪಕದ ಪ್ರಯೋಜನವೂ ಉಕ್ತವಾಗಿದೆ.

'ಏಕಾಯನ' ಶಬ್ದದಿಂದ ಪರಮಾತ್ಮನೇ ವೃಕ್ಷಕ್ಕೆ ಮುಖ್ಯ ಆಧಾರವೆಂದೂ 'ದ್ವಿಖಗ' ಎಂಬ ಶಬ್ದದಿಂದ ಜೀವ ಪರಮಾತ್ಮ ಎಂಬ ಎರಡು ಪಕ್ಷಿಗಳು ವೃಕ್ಷದಲ್ಲಿ ಇವೆ ಎಂದೂ ಗ್ರಹಿಸಿದರೆ ತಪ್ಪಾಗುವುದಿಲ್ಲ. ವೃಕ್ಷದ ಆಧಾರ, ವೃಕ್ಷದಲ್ಲಿ ಕುಳಿತ ಪಕ್ಷಿಗಳು ವೃಕ್ಷಶರೀರದಲ್ಲಿ ಸೇರದಿರುವುದರಿಂದ ವೃಕ್ಷಶರೀರ ಪರಮಾತ್ಮನ ಅಧೀನವಾಗಿದ್ದು ಅವನಿಂದಲೆ ಸೃಷ್ಟ್ಯಾದಿಗಳನ್ನು ಹೊಂದುತ್ತದೆ ಎನ್ನಲಡ್ಡಿಯಿಲ್ಲ. ಜೀವಗೋಸ್ವಾಮಿ ವ್ಯಾಖ್ಯಾನ ಹಾಗೆ ಹೇಳಿದೆ-

ಅನಯೋರ್ವೃಕ್ಷಾಂಗತ್ವಾಭಾವಾತ್ ಪ್ರಪಂಚಾತೀತತ್ವಂ ದರ್ಶಿತಂ ।

❖ ❖ ❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಶ್ರೀಕೃಷ್ಣನನ್ನು ಬ್ರಹ್ಮರುದ್ರಾದಿ ದೇವತೆಗಳು ಸ್ತುತಿಸುವ ಪದ್ಯಗಳು-

ಬಿಭರ್ಷಿ ರೂಪಾಣ್ಯವಬೋಧ ಆತ್ಮನ್
ಕ್ಷೇಮಾಯ ಲೋಕಸ್ಯ ಚರಾಚರಸ್ಯ ।
ಸತ್ತ್ವೋಪಪನ್ನಾನಿ ಸುಖಾವಹಾನಿ
ಸತಾಮಭದ್ರಾಣಿ ಮುಹುಃ ಖಲಾನಾಮ್ ॥ ೩೦ ॥

ತ್ವಯ್ಯಂಬುಜಾಕ್ಷಾಖಿಲಸತ್ತ್ವಧಾಮ್ನಿ
ಸಮಾಧಿನಾಽಽವೇಶಿತಚೇತಸೋ ಯೇ ।
ತ್ವತ್ಪಾದಪೋತೇನ ಮಹತ್ಕೃತೇನ
ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥ ೩೧ ॥

ಹೇ ಪ್ರಭು, ಜ್ಞಾನಸ್ವರೂಪನಾದ ನೀನು ಮತ್ತೆಮತ್ತೆ ಚರಾಚರ ಲೋಕದ ಕ್ಷೇಮಕ್ಕಾಗಿ ಸಜ್ಜನರಿಗೆ ಸುಖಕರವೂ ದುರ್ಜನರಿಗೆ ದುಃಖಕರವೂ ಆದ ಸದಾ ಸಕಲ ಸದ್ಗುಣಪೂರ್ಣವಾದ ಅವತಾರ ರೂಪಗಳನ್ನು ಧರಿಸುವಿ.

ಹೇ ಕಮಲಾಕ್ಷ, ಸರ್ವಪ್ರಾಣಿಗಳಿಗೆ ಆಧಾರನಾಗಿರುವ ನಿನ್ನಲ್ಲಿ ಧ್ಯಾನಪೂರ್ವಕವಾಗಿ ಮನಸ್ಸನ್ನಿಟ್ಟವರು ತಮ್ಮ ಹಿರಿಯರು ತೋರಿಸಿರುವ ನಿನ್ನ ಪಾದಗಳೆಂಬ ನೌಕೆಯ ಸಹಾಯದಿಂದ ಸಂಸಾರಸಾಗರವನ್ನು ಸಣ್ಣಕರುವಿನ ಹೆಜ್ಜೆಯಿಂದಾಗುವ ಹಳ್ಳದಷ್ಟಾಗಿ ಮಾಡಿಕೊಂಡು ಅನಾಯಾಸವಾಗಿ ದಾಟುವರು.

[೧]ವೀರರಾಘವ ವ್ಯಾಖ್ಯಾನದಲ್ಲಿ 'ಸತ್ತ್ವೋಪಪನ್ನಾನಿ' ಎಂದರೆ ಭಗವದವತಾರಗಳು ಶುದ್ಧಸತ್ತ್ವಗುಣಉಳ್ಳವುಗಳೆಂದೂ 'ಅಖಿಲಸತ್ತ್ವಧಾಮ್ನಿ' ಎಂಬಲ್ಲಿ 'ಅಮಲಸತ್ತ್ವಧಾಮ್ನಿ' ಎಂದು ಪಾಠವಿಟ್ಟುಕೊಂಡು ಭಗವಂತ ಶುದ್ಧ ಸತ್ತ್ವಮಯವಾದ ಸ್ಥಾನ, ಶರೀರ, ವಿಗ್ರಹಗಳುಳ್ಳವನೆಂದೂ ವ್ಯಾಖ್ಯಾನಿಸಲಾಗಿದೆ. [೨]ವಲ್ಲಭ ವಿಶ್ವನಾಥ ಶುಕದೇವ ವ್ಯಾಖ್ಯಾನಗಳಲ್ಲಿಯೂ ಭಗವಂತನಿಗೆ ಶುದ್ಧ ಸತ್ತ್ವಗುಣವನ್ನು ಒಪ್ಪಿದ್ದಾರೆ. [೩]ಶ್ರೀಧರವ್ಯಾಖ್ಯಾನದಲ್ಲಿ 'ಮಹತ್‌ಕೃತೇನ ತ್ವತ್ಪಾದಪೋತೇನ' ಎಂಬಲ್ಲಿ 'ಭಗವಂತನ ಪಾದವೂ ಮಾಯಿಕವೆ ಎಂದು ಅನಾದರ ಮಾಡದೆ ಸರ್ವೋತ್ಕೃಷ್ಟವೆಂದು ಆದರಿಸುತ್ತಾರೆ' ಎನ್ನುತ್ತ ಭಗವಂತನ ಶರೀರವನ್ನು ತ್ರಿಗುಣಾತ್ಮಕ ಮಾಯಾಮಯವೆಂದು ಒಪ್ಪಿದ್ದಾರೆ. ಇದು ಪ್ರಮಾಣ ವಿರುದ್ಧ.

---

೧ ಅಸ್ಯ ಚರಾಚರಾತ್ಮಕಸ್ಯ ಲೋಕಸ್ಯ ಕ್ಷೇಮಾರ್ಥಂ ರೂಪಾಣಿ ಅವತಾರರೂಪಾಣಿ ಬಿಭರ್ಷಿ। ಕಥಂಭೂತಾನಿ? ಸತ್ತ್ವೋಪಪನ್ನಾನಿ ಶುದ್ಧಸತ್ತ್ವಮಯಾನಿ। ಹೇ ಅಂಬುಜಾಕ್ಷ ಅಮಲಸತ್ತ್ವಧಾಮ್ನಿ ಶುದ್ಧಸತ್ತ್ವಮಯಂ ಧಾಮ ಸ್ಥಾನಂ ಶರೀರಂ ಶ್ರೀವಿಗ್ರಹೋ ವಾ ಯಸ್ಯೇತಿ ಯಾವತ್ ತದ್ಯಸ್ಯ ತಸ್ಮಿನ್ ವಿಶುದ್ಧಸತ್ತ್ವಮಯ ದಿವ್ಯ ನಿತ್ಯ ಮಂಗಲ ಶ್ರೀವಿಗ್ರಹವಿಶಿಷ್ಟೇ ತ್ವಯಿ। -ವೀರರಾಘವಃ

೨ ರಜಸಾ ತಮಸಾಪ್ಯವತಾರಃ ಸಂಭವತೀತಿ ತದ್‌ವ್ಯಾವೃತ್ತ್ಯರ್ಥಮಾಹ ಸತ್ತ್ವೋಪಪನ್ನಾನೀತಿ। ಸತ್ತ್ವೇನ ಗುಣೇನೋಪಪನ್ನಾನಿ ಲೋಕಾನುಸಾರೀಣಿ ಮತ್ಸ್ಯಾದೀನಿ। ಬ್ರಹ್ಮಮಹಾದೇವಯೋರಪ್ಯಾಧಿದೈವಿಕಯೋರಪ್ಯವತಾರಾಃ ಸತ್ತ್ವರೂಪಾ ಏವ। -ವಲ್ಲಭಃ

ಸತ್ತ್ವೋಪಪನ್ನಾನಿ ಶುದ್ಧಸತ್ತ್ವ ಸ್ವರೂಪಾಣಿ। -ವಿಶ್ವನಾಥಃ

ಯದಪ್ರಾಕೃತಂ ಸತ್ತ್ವಂ ತದ್ಧಾಮ ಮೂರ್ತಿರ್ಯಸ್ಯ। -ಶುಕದೇವಃ

೩ ಇದಮಪಿ ಮಾಯಾಮಯಮಿತ್ಯನಾದರಂ ಪರಿತ್ಯಜ್ಯೇದಮೇವ ಮಹತ್ ಸರ್ವೋತ್ಕೃಷ್ಟಮಿತಿ ಮನಸಿ ಕೃತೇನ ಬಹುಮತೇನೇತ್ಯರ್ಥಃ। -ಶ್ರೀಧರಃ

ನಾರದೀಯ ಪುರಾಣದಲ್ಲಿ ಸ್ಪಷ್ಟವಾಗಿ ಭಗವಂತ ಸತ್ವಗುಣಾತ್ಮಕನಲ್ಲ, ತ್ರಿಗುಣಾತ್ಮಕ ಮಾಯೆಯಿಂದಲೂ ವರ್ಜಿತನೆಂದು ಹೇಳಿದೆ.

ಸದಾ ಸರ್ವಗುಣಾಢ್ಯತ್ವಾತ್ ಸತ್ವವಾನ್ ಹರಿರುಚ್ಯತೇ ।
ನ ತು ಸತ್ವಗುಣಾತ್ಮತ್ವಾತ್ ಯತಸ್ತ್ರಿಗುಣವರ್ಜಿತಃ ॥
-ಇತಿ ನಾರದೀಯೇ ॥

ಮೂಲರೂಪ ಅವತಾರರೂಪಗಳಲ್ಲಿ ಯಾವಾಗಲೂ ಸಕಲ ಸದ್ಗುಣ ಪೂರ್ಣನೇ ಆದ್ದರಿಂದ ಶ್ರೀಹರಿ ಸತ್ವಉಳ್ಳವನೆಂದು ಕರೆಯಿಸಿಕೊಳ್ಳುತ್ತಾನೆ ಹೊರತು ಸತ್ವಗುಣಾತ್ಮಕ ಶರೀರದವನಾದ್ದರಿಂದಲ್ಲ, ಏಕೆಂದರೆ ಅವನು ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಮತ್ತು ತ್ರಿಗುಣಗಳಿಂದ ರಹಿತನು ಎಂದು ನಾರದೀಯ ಪುರಾಣದಲ್ಲಿ ಹೇಳಿದೆ.

❖ ❖ ❖

ದೇವಕೀಗರ್ಭಸನ್ನಿಹಿತನಾದ ಶ್ರೀಕೃಷ್ಣನನ್ನು ಬ್ರಹ್ಮಾದಿಗಳು ಸ್ತುತಿಸುತ್ತಾರೆ.

ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮನ್
ಭವಾರ್ಣವಂ ಭೀಮಮದಭ್ರಸೌಹೃದಾಃ ।
ಭವತ್ಪದಾಂಭೋರುಹನಾವಮತ್ರ ತೇ
ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥ ೩೨ ॥

ಹೇ ಜ್ಞಾನಮೂರ್ತಿಯೆ, ನಿನ್ನಲ್ಲಿ ಪರಮಭಕ್ತಿ ಸಂಪನ್ನರಾದ ಆ ಜ್ಞಾನಿಗಳು ಇತರರಿಗೆ ದಾಟಲು ಅತ್ಯಂತ ಅಸಾಧ್ಯವಾದ ಭಯಾನಕವಾದ ಸಂಸಾರ ಸಾಗರವನ್ನು ತಾವು ಚೆನ್ನಾಗಿ ದಾಟಿ ನಿನ್ನ ಪಾದಕಮಲವೆಂಬ ಆ ನೌಕೆಯನ್ನು ಶಿಷ್ಯರಲ್ಲಿ ಇರಿಸುತ್ತಾರೆ ಮತ್ತು ಅದನ್ನೇ ಮೋಕ್ಷದಲ್ಲಿ ಹೊಂದಿರುತ್ತಾರೆ. ಸಜ್ಜನರಿಗೆ ಹೀಗೆ ಪರಮಾನುಗ್ರಹವನ್ನೇ ಮಾಡುವವನು ತಾನೆ ನೀನು?

[೧]ಶ್ರೀಧರ ವೀರರಾಘವ ವಿಶ್ವನಾಥ ವ್ಯಾಖ್ಯಾನಗಳಲ್ಲಿ ಈ ಶ್ಲೋಕದ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ- 'ಶ್ರೀಹರಿ, ನಿನ್ನ ಪಾದವೆಂಬ ನೌಕೆಯ

---

೧. ನನು ತೇನ ಪೋತೇನ ಪೂರ್ವೇ ಚೇತ್ ಪಾರಂಗತಾಸ್ತರ್ಹೀದಾನೀಂತನಾನಾಂ ಕಾ ಗತಿಃ? ತತ್ರಾಹುಃ ಸ್ವಯಂ ಹೀತಿ। ತ್ವತ್ಪಾದ ಪೋತ ಸಾಮೀಪ್ಯ ಮಾತ್ರೇಣ ಭವಾಂಬುಧೌ

ಸಾಮೀಪ್ಯಮಾತ್ರದಿಂದ ಸಂಸಾರಸಾಗರ ಕರುವಿನ ಹೆಜ್ಜೆಯಿಂದಾಗುವ ಹಳ್ಳದಷ್ಟಾಗುವುದರಿಂದ ನೌಕೆಯ ಸಹಾಯವಿಲ್ಲದೆಯೆ ಜ್ಞಾನಿಗಳು ದಾಟುತ್ತಾರೆ. ಇತರರಿಗೆ ನೌಕೆ ಬೇಕಾಗುವುದರಿಂದ ಅವರಿಗಾಗಿ ಇಲ್ಲಿಯೇ ಬಿಟ್ಟುಹೋಗುತ್ತಾರೆ. ಅಂದರೆ ಭಕ್ತಿಮಾರ್ಗ ಸಂಪ್ರದಾಯವನ್ನು ಅವರಿಗೆ ತಿಳಿಸಿರುತ್ತಾರೆ. ಏಕೆಂದರೆ ಇತರರಲ್ಲಿ ಅವರು ಬಹಳ ಪ್ರೀತಿ ಉಳ್ಳವರು' ಎಂದು.

ಆದರೆ ಹರಿಪಾದನೌಕೆಯ ಸಾಮಿಪ್ಯ ಮಾತ್ರದಿಂದಲೆ ಸಂಸಾರ ಸಾಗರ ಕರುವಿನ ಹೆಜ್ಜೆಯ ಹಳ್ಳದಂತಾದರೆ, ನೌಕೆಯ ಅಪೇಕ್ಷೆ ಇಲ್ಲದೆ ಜ್ಞಾನಿಗಳು ನಡೆದೇ ದಾಟುವುದಾದರೆ ಅದು ಅವರಿಗೆ ನೌಕೆ ಎನಿಸುವುದು ಹೇಗೆ? ಇತರರಿಗೆ ನೌಕೆ ಎನ್ನುವುದಾದರೆ ಅವರಿಗೂ ಅದರ ಸಾಮೀಪ್ಯ ಮಾತ್ರದಿಂದ ಸಾಗರ ಹಳ್ಳವಾಗಿ ಹೋಗುತ್ತದೆ. ಅವರೂ ನಡೆದೇ ದಾಟುತ್ತಾರೆ. ಅವರಿಗೂ ಅದು ನೌಕೆ ಎನಿಸುವುದಿಲ್ಲ. ಅದರಿಂದ ನೌಕೆಯ ರೂಪಕಕ್ಕೆ ಅರ್ಥವೇ ಇಲ್ಲ.

ವಸ್ತುತಃ ಹರಿಪಾದ ಎಲ್ಲರಿಗೂ ನೌಕೆಯೆ. ಅದರ ಸಹಾಯವಿಲ್ಲದೆ ಯಾರೂ ಅಪಾರವಾದ ಸಂಸಾರಸಾಗರವನ್ನು ದಾಟಲಾರರು. ಹರಿಪಾದನೌಕೆ ಎಂದರೆ ಭಕ್ತಿಮಾರ್ಗವೆಂದು ಎಲ್ಲ ವ್ಯಾಖ್ಯಾನಕಾರರೂ ಹೇಳುತ್ತಾರೆ. 'ಭಕ್ತ್ಯಾ ಹ್ಯನನ್ಯಯಾ ಶಕ್ಯಃ' ಭಕ್ತಿ ಇಲ್ಲದೆ ಮುಕ್ತಿ ಯಾರಿಗೂ ಇಲ್ಲ.

ಹಾಗಾದರೆ ಒಬ್ಬ ವಿಷ್ಣುಭಕ್ತ ಹರಿಪಾದನೌಕೆಯೇರಿ ಸಂಸಾರ ಸಾಗರವನ್ನು ದಾಟಿ ಆಚೆ ದಡದಲ್ಲಿ ಇಳಿದು, ಆ ನೌಕೆಯನ್ನು ಅಲ್ಲೇ ಬಿಟ್ಟು ಮೋಕ್ಷಕ್ಕೆ ಹೋದರೆ

ವತ್ಸಪದಮಾತ್ರೇ ಜಾತೇ ಅತ ಸ್ತನ್ನಿರಪೇಕ್ಷಂ ಸ್ವಯಮೇವಾನ್ಯೇಷಾಂ ಭೀಮಂ ದುಸ್ತರಮಪಿ ಭವಾರ್ಣವಂ ಸಮುತ್ತೀರ್ಯ ಭವತ್ಪದಾಂಭೋರುಹ ರೂಪಾಂ ನಾವಮತ್ರೈವ ನಿಧಾಯ ಭಕ್ತಿಮಾರ್ಗ ಸಂಪ್ರದಾಯಂ ಪ್ರವರ್ತ್ಯೇತ್ಯರ್ಥಃ ಪಾರಂ ಯಾತಾಃ । ಯತೋಽದಭ್ರಸೌಹೃದಾಃ ಸರ್ವಭೂತೇಷ್ವತಿ ಪ್ರೀತಿಯುಕ್ತಾ ಅತಸ್ತೇಽನ್ಯೇಷಾಂ ತರಣಾಯ ನಿಧಾಯೇತಿ। -ಶ್ರೀಧರಃ

ಶ್ರೀ ಭಗವತಃ ಪಾದಾಂಬುಜಮೇವ ನೌಸ್ತಾಮತ್ರ ನಿಧಾಯ ಇಯಮೇವ ಸಂಸಾರ ಸಾಗರೋತ್ತಾರಣ ಸಾಧನಭೂತೇತಿ ಪ್ರದರ್ಶ್ಯ ಯಾತಾಸ್ತ್ವತ್‌ಪದಂ ಪ್ರಾಪ್ನುವಂತಿ।

-ವೀರರಾಘವಃ

ತ್ವತ್ಪಾದಪೋತಾಶ್ರಯಣಮಾತ್ರೇಣೈವ ಭವಾಬ್ಧೌ ಗೋಷ್ಪದ ತುಲ್ಯೇ ಜಾತೇ ವೈಷ್ಣವಾ ಭವಾಬ್ಧಿಮಜಾನಂತ ಏವ ಪದ್ಭ್ಯಾಮೇವೋಲ್ಲಂಘಯಂತೀತ್ಯಾಹುಃ ಸ್ವಯಮಿತಿ । ತರಣ ಸಾಧನ ನಿರಪೇಕ್ಷಮೇವ ಅನ್ಯೈಃ ಸುದುಸ್ತರಮಪಿ ಭೀಮಮಪಿ ಸಮುತ್ತೀರ್ಯ ಯಾತಾಃ। ಅತೋ ಭವತ್‌ಪದಾಂಭೋರುಹನಾವಮತ್ರೈವ ಕೂಲೇ ನಿಧಾಯೈವ ಭಕ್ತಿಮಾರ್ಗಂ ಸಂಪ್ರದಾಯಂ ಪ್ರವರ್ತ್ಯೈವ ಯಾತಾಃ। -ವಿಶ್ವನಾಥಃ

ಉಳಿದವರ ಗತಿಯೇನು? ಈ ಪ್ರಶ್ನೆಗೆ ಬೇರೆಯೇ ಸಮಾಧಾನ ಹೇಳಬೇಕು ಹೊರತು, ಈ ವ್ಯಾಖ್ಯಾನಕಾರರು ನೀಡುವ ಸಮಾಧಾನ ಸರ್ವಥಾ ಅಸಂಗತವಾಗುತ್ತದೆ. ಬೇರೆ ಸಮಾಧಾನ ಹೀಗೆ- ಈ ಶ್ಲೋಕದಲ್ಲಿ 'ಅತ್ರ ನಿಧಾಯ ಯಾತಾಃ' ಎಂಬಲ್ಲಿ ನೌಕೆಯನ್ನು ಇಲ್ಲಿ ಇಟ್ಟು ಬೇರೆ ಕಡೆಗೆ ಹೋದರೆಂದು ಹೇಳಿಲ್ಲ, ಇಲ್ಲಿ ಇಟ್ಟು ಹೋದರೆಂದಿದೆ. ಅಂದರೆ ಇಟ್ಟು, ಅದನ್ನೇ ಏರಿಹೋದರು. ಇತರರಿಗಾಗಿ ಇಟ್ಟಿದ್ದಾರೆ. ತಾವೂ ಅದನ್ನೇ ಏರಿ ಹೋಗಿದ್ದಾರೆ. ಇದು ವಿರುದ್ಧವಲ್ಲವೆ? ಲೋಕದಲ್ಲಿ ಒಂದು ನೌಕೆಯನ್ನು ಏರಿ ಪ್ರಯಾಣ ಮಾಡಿ ಇತರರಿಗಾಗಿ ಈ ತೀರದಲ್ಲಿ ಇರಿಸುವುದೂ ತಾವೂ ಅದನ್ನೇ ಏರುವುದೂ ಉಂಟೆ? ಎಂಬ ಪ್ರಶ್ನೆಗೆ ''ಲೋಕದಲ್ಲಿ ಇಲ್ಲ, ಇದು ವಿಲಕ್ಷಣವಾದ ನೌಕೆ'' ಎನ್ನಬೇಕು. ಅವರು ಪ್ರಯಾಣ ಮಾಡಿದ್ದರಿಂದ ಅದು ನೌಕೆಯೆ. ಇತರರಿಗಾಗಿ ಅದನ್ನೇ ಇಲ್ಲಿ ಇರಿಸಿದ್ದು ಮಾತ್ರ ವಿಲಕ್ಷಣ. ನಮ್ಮ ಕಲ್ಪನೆಗೆ ನಿಲುಕದುದು.

ಅಚತುರ್ವದನೋ ಬ್ರಹ್ಮಾ ದ್ವಿಬಾಹುರಪರೋ ಹರಿಃ ।
ಅಫಾಲಲೋಚನಃ ಶಂಭುರ್ಭಗವಾನ್ ಬಾದರಾಯಣಃ ।

'ಭಗವಾನ್ ಬಾದರಾಯಣನಿನ್ನೊಬ್ಬ ಬ್ರಹ್ಮ, ನಾಲ್ಕು ಮುಖವಿಲ್ಲ, ಇನ್ನೊಬ್ಬ ಹರಿ, ಎರಡೇ ಕೈಗಳಿವೆ. ಇನ್ನೊಬ್ಬ ರುದ್ರ, ಹಣೆಯಲ್ಲಿ ಕಣ್ಣು ಇಲ್ಲ'. ಹರಿಪಾದವೆಂಬುದೂ ಇಂಥದೇ ಒಂದು ವಿಲಕ್ಷಣ ನೌಕೆ. ಇದು ವಾಮನಪುರಾಣ ಬ್ರಹ್ಮಪುರಾಣಗಳೆರಡಲ್ಲಿಯೂ ವರ್ಣಿತವಾಗಿದೆ.

ಭಗವತ್ಪಾದಪೋತೋಽಸೌ ನಾನ್ಯಪೋತಸಮೋ ಭವೇತ್ ।
ಸನ್ನಿಧಾಯಾಪಿ ಶಿಷ್ಯೇಷು ತದೇವ ಪ್ರಾಪ್ನುಯುರ್ಯತಃ ।
ಇತಿ ವಾಮನೇ ।

ಭಗವತ್ಪಾದನೌಕಾ ಯಾ ನೇಯಂ ನೌಕೋಪಮಾ ಭವೇತ್ ।
ತಯಾ ತೀರ್ತ್ವಾ ತು ತಾಮೇವ ಪ್ರಾಪ್ಯ ತಿಷ್ಠಂತಿ ತತ್ರ ಯತ್ ।
ಇತಿ ಬ್ರಾಹ್ಮೇ ॥

ಅತಸ್ತಾಮೇವ ಯಾತಾಃ ।

'ಭಗವಂತನ ಪಾದವೆಂಬ ನೌಕೆ ಬೇರೆ ನೌಕೆಯಂತಲ್ಲ, ಶಿಷ್ಯರಲ್ಲಿ ಅದನ್ನು ಇರಿಸಿ ಬಿಟ್ಟು ಹೋಗುವುದಿಲ್ಲ, ಅದನ್ನೇ ತಾವೂ ಏರುತ್ತಾರೆ' ಎಂದು ವಾಮನಪುರಾಣದಲ್ಲಿ ಹೇಳಿದೆ.

'ಭಗವಂತನ ಪಾದವೆಂಬ ನೌಕೆ ಸಾಮಾನ್ಯ ನೌಕೆಯಂತಿಲ್ಲ. ಅದರಿಂದ ಪ್ರಯಾಣ ಮಾಡಿದ ಅನಂತರವೂ ಮೋಕ್ಷದಲ್ಲಿ ತಿರುಗಿ ಅದನ್ನೇ ಏರಿ ಕುಳಿರುತ್ತಾರೆ ಪ್ರಯಾಣಿಕರು' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಅದರಿಂದ 'ನಿಧಾಯ ಯಾತಾಃ' ಎಂದು ಶ್ಲೋಕದಲ್ಲಿ 'ತಾಮೇವ' ಎಂದು ಸೇರಿಸಬೇಕು. 'ಶಿಷ್ಯರಿಗಾಗಿ ಅವರ ಬಳಿಯಲ್ಲಿ ಇರಿಸಿದ ಬಳಿಕ, ತಾವು ಪ್ರಯಾಣಮಾಡಿದ ಬಳಿಕ ಮುಕ್ತಿಯಲ್ಲಿ ಮತ್ತೆ ಅದರಲ್ಲಿಯೇ ಇರುತ್ತಾರೆ. ಭಗವಂತನ ಪಾದವೆಂದರೆ ಅದು ಸಂಸಾರದಲ್ಲಾಗಲಿ ಮುಕ್ತಿಯಲ್ಲಾಗಲಿ ಎಂದೂ ಬಿಡಲಾಗದುದು. ಅದೇ ಸಾಧನ, ಅದೇ ಸಾಧ್ಯ ಎಂದು ಅಭಿಪ್ರಾಯ.

❖ ❖ ❖

ದೇವಕೀಗರ್ಭದಲ್ಲಿ ಸನ್ನಿಹಿತನಾದ ಹರಿಯನ್ನು ಬ್ರಹ್ಮಾದಿಗಳು ಸ್ತುತಿಸುತ್ತಾರೆ-

ಸತ್ತ್ವಂ ವಿಶುದ್ಧಂ ಶ್ರಯತೇ ಭವಾನ್ ಸ್ಥಿತೌ
ಶರೀರಿಣಾಂ ಶ್ರೇಯಉಪಾಯನಂ ವಪುಃ ।
ವೇದಕ್ರಿಯಾಯೋಗತಪಃಸಮಾಧಿಭಿ
ಸ್ತವಾರ್ಹಣಂ ಯೇನ ಜನಃ ಸಮೀಹತೇ ॥ ೩೫ ॥

ನೀನು ಸ್ಥಿತಿಕಾಲದಲ್ಲಿ ಶುದ್ಧ ಸತ್ತ್ವಾತ್ಮಕವಾದ ಬ್ರಹ್ಮಾದಿ ದೇವತಾ ಶರೀರದಲ್ಲಿ ಇರುತ್ತಿ. ಆ ಶರೀರವು ಶರೀರಿಗಳಿಗೆ ಜ್ಞಾನೋಪದೇಶದಿಂದ ಶ್ರೇಯಸ್ಸಿಗೆ ಸಾಧನ ವಾಗುವುದು. ಅದರಿಂದಲೆ ಜನರು ವೇದಾಧ್ಯಯನ ಯಾಗಾದಿಕ್ರಿಯೆ ಯೋಗಾಭ್ಯಾಸ ತಪಸ್ಸು ಸಮಾಧಿಗಳಿಂದ ನಿನ್ನ ಆರಾಧನೆ ಮಾಡಲು ಶಕ್ತರಾಗುತ್ತಾರೆ.

ಇಲ್ಲಿ [೧]ಶ್ರೀಧರ ವೀರರಾಘವ ವ್ಯಾಖ್ಯಾನಗಳ ಪ್ರಕಾರ ಪ್ರಪಂಚ ರಕ್ಷಣೆಗಾಗಿ ಭಗವಂತ ಶುದ್ಧಸತ್ತ್ವಮಯವಾದ ಶರೀರವನ್ನು ಧರಿಸುತ್ತಾನೆ. ಅದು ತನ್ನನ್ನು ಆರಾಧಿ

---

೧ ಸತ್ತ್ವಂ ವಪುಃ ಶ್ರಯತ ಇತ್ಯನ್ವಯಃ। ವಪುಷೋಽನಾಶ್ರಯಣೇಽರ್ಹಣಾಸಂಭವಾತ್ ನ ಕರ್ಮಫಲಸಿದ್ಧಿಃ ಸ್ಯಾದಿತಿ॥ -ಶ್ರೀಧರಃ

ಸ್ಥಿತ್ಯರ್ಥಂ ಭವಾನ್ ವಿಶುದ್ಧಂ ರಜಸ್ತಮೋಭ್ಯಾಮನನುವಿದ್ಧಂ ಸತ್ತ್ವಂ ಸತ್ತ್ವಮಯಂ ವಪುಃ ಶರೀರಂ ಶ್ರಯತೇ ಬಿಭರ್ತಿ। ಯದಿ ಭವಾನ್ ವಪುರ್ನ ಸಂಶ್ರಯತೇ ತರ್ಹ್ಯಾರಾಧ್ಯರೂಪಾ ಪರಿಜ್ಞಾನಾತ್ ಆರಾಧಕಾಸ್ತ್ವಾಮಾರಾಧಯಿತುಮಪ್ರಭವಃ ಸ್ಯುಃ। -ವೀರರಾಘವಃ

ಸುವವರಿಗಾಗಿ, ಇಲ್ಲದಿದ್ದರೆ ನಿರಾಕಾರನಾದ ಪರಮಾತ್ಮನನ್ನು ಅವರು ಆರಾಧಿಸಲಾರರು.

ಆದರೆ ಭಗವಂತನ ನಿರ್ಗುಣೋಪಾಸನೆಯೇ ಶ್ರೇಷ್ಠವೆಂದು ಅದ್ವೈತಮತ. ಅದನ್ನೇ ಮಾಡಬಹುದು. ಅದರಲ್ಲಿ ಶಕ್ತಿ ಇಲ್ಲದವರು ಸಗುಣೋಪಾಸನೆ ಮಾಡಬೇಕು. ಸಗುಣೋಪಾಸನೆಗೆ ಆಕಾರ ಬೇಕು. ನಿಜ. ಆದರೆ ಅದನ್ನು ಕಲ್ಪಿಸಿಕೊಂಡರಾಯಿತು. 'ಯೋಷಿತಮಗ್ನಿಂ ಧ್ಯಾಯೀತ' 'ಸ್ತ್ರೀಯನ್ನು ಅಗ್ನಿ ಎಂದು ಉಪಾಸನ ಮಾಡಬೇಕು' ಎಂಬಂತೆ ಇಲ್ಲದಿರುವುದನ್ನು ಕಲ್ಪಿಸಿಕೊಂಡು ಉಪಾಸನ ಮಾಡುವುದು ಯುಕ್ತವೆಂದು ಅದ್ವೈತಮತವಿದೆ. ಅದರಿಂದಲೆ ಭಗವಂತನಲ್ಲಿ ವಸ್ತುತಃ ಗುಣಗಳಿಲ್ಲ, ಉಪಾಸನೆಗಾಗಿ ಅವನ್ನು ಕಲ್ಪಿಸಿಕೊಳ್ಳಬೇಕೆಂದು ಅಭಿಪ್ರಾಯದಿಂದಲೆ ಸಗುಣ ಬ್ರಹ್ಮನನ್ನು ವೇದಗಳು ವರ್ಣಿಸುತ್ತವೆ ಎಂದು ಹೇಳುತ್ತಾರೆ. ಅದರಿಂದ ಭಗವಂತ ಉಪಾಸಕರ ಅನುಕೂಲಕ್ಕಾಗಿ ತಾನು ಸತ್ವಗುಣಾತ್ಮಕ ಶರೀರವನ್ನು ಧರಿಸಬೇಕಾಗಿಲ್ಲ, ಧರಿಸಕೂಡದು. ಧರಿಸಿದರೆ ಸಗುಣಬ್ರಹ್ಮ ಸತ್ಯವೆನಿಸೀತು.

ವಿಶಿಷ್ಟಾದ್ವೈತದಲ್ಲಿ ಭಗವಂತ ಉಪಾಸಕರಿಗಾಗಿಯೇ ಶರೀರವನ್ನು ಧರಿಸುತ್ತಾನೆ. ಪ್ರತ್ಯೇಕ ಚಿನ್ಮಯವಾದ ಶರೀರವಿಲ್ಲ, ನಿಜ. ಆದರೆ ಸತ್ವಗುಣಾತ್ಮಕವಾದ ಶರೀರವನ್ನೂ ಅವನು ಧರಿಸುವುದಿಲ್ಲವೆಂದು ಹಿಂದೆ ೩೧ನೇ ಶ್ಲೋಕದಲ್ಲಿಯೇ,

'ಸದಾ ಸರ್ವಗುಣಾಢ್ಯತ್ವಾತ್ ಸತ್ವವಾನ್ ಹರಿರುಚ್ಯತೇ ।
ನ ತು ಸತ್ವಗುಣಾತ್ಮತ್ವಾತ್ ಯತಸ್ತ್ರಿಗುಣವರ್ಜಿತಃ ॥'

ಎಂಬ ನಾರದೀಯ ಪುರಾಣವಚನದ ಮೂಲಕ ಶ್ರೀಮದಾಚಾರ್ಯರು ಸಮರ್ಥಿಸಿದ್ದಾರೆ.

[೧]ವಲ್ಲಭವ್ಯಾಖ್ಯಾನ ಪ್ರಕಾರ ಭಗವಂತ ಸತ್ವಗುಣಾತ್ಮಕ ಶರೀರವನ್ನು ಧರಿಸಬೇಕಾಗಿಲ್ಲ, ಅವನು ಸತ್ವಗುಣವನ್ನು ಆಶ್ರಯಿಸುತ್ತಾನೆ ಎಂದರೆ ಲೋಕರಕ್ಷಣೆಯ ಕಾರ್ಯದಲ್ಲಿ ಅದನ್ನು ಬಳಸಿಕೊಳ್ಳುತ್ತಾನೆ. ಸತ್ವಗುಣ ಲೋಕದಲ್ಲಿ ಹರಡಿದರೆ ಎಲ್ಲರೂ ವರ್ಣಾಶ್ರಮಧರ್ಮವನ್ನು ಅನಾಯಾಸವಾಗಿ ಆಚರಿಸುತ್ತಾರೆ.

೧ ಸ್ಥಿತ್ಯರ್ಥಂ ಯದಾ ಭವಾನ್ ವಿಶುದ್ಧಂ ಸತ್ವಂ ಸತ್ವಗುಣಂ ಶ್ರಯತೇ ತದೈವ ತೇನ ಸತ್ವಗುಣೇನ ಲೋಕೇ ಪ್ರಸೃತೇನ ವ್ಯಾಪ್ತಾ ಆಶ್ರಮಸ್ಥಾಃ ಕ್ರಮೇಣ ವೇದಾಧ್ಯಯನಂ ಕ್ರಿಯಾಯೋಗಃ ಕರ್ಮಾನುಷ್ಠಾನಂ ತಪೋ ವನವಾಸಾದಿಃ ಸಮಾಧಿರಾತ್ಮಸ್ಥಿತಿಶ್ಚೇತಿ ಚತುರ್ವಿಧಾನ್ ಧರ್ಮಾನ್ ಸಮ್ಯಗನುತಿಷ್ಠಂತಿ। -ವಲ್ಲಭಃ

ಅದಕ್ಕೆ ಹರಡಿಸುತ್ತಾನೆ ಭಗವಂತ ಎನ್ನುತ್ತಾರೆ. ಆದರೆ ಲೋಕರಕ್ಷಣೆಗಾಗಿ ಸತ್ವಗುಣವನ್ನು ಎಲ್ಲೆಡೆ ಹರಡಿಸಿದರೆ ಎಲ್ಲರೂ ಧರ್ಮಾಚರಣೆ ಮಾಡುವುದರಿಂದ ದುಷ್ಟಶಿಕ್ಷಣ ಶಿಷ್ಟರಕ್ಷಣಗಳಿಗೆ ಅವಕಾಶವೇ ಇಲ್ಲವಾದೀತು. 'ಯದಾಯದಾ ಹಿ ಧರ್ಮಸ್ಯ' ಎಂಬಂತೆ ಧರ್ಮರಕ್ಷಣೆಗಾಗಿ ಅವತಾರ ಮಾಡುವುದಕ್ಕೂ ಭಗವಂತನಿಗೆ ಅವಕಾಶವಿಲ್ಲವಾದೀತು.

ಅದರಿಂದ 'ಸತ್ವಂ ವಿಶುದ್ಧಂ ಶ್ರಯತೇ' ಎಂಬ ಶ್ಲೋಕಕ್ಕೆ ಭಾಗವತತಂತ್ರದಲ್ಲಿ ಮಾಡಿರುವ ಸುಂದರವಾದ ವ್ಯಾಖ್ಯಾನವನ್ನು ನೋಡಬೇಕು.

ವಿಶುದ್ಧಸತ್ವಬ್ರಹ್ಮಾದೇಃ ಶರೀರೇ ಸಂಸ್ಥಿತೋ ಹರಿಃ।
ತೇಷಾಮಾದೇಶಮಾರ್ಗೇಣ ವೇದಾದ್ಯೈರರ್ಚಯಂತಿ ತಂ॥
ಇತಿ ಭಾಗವತತಂತ್ರೇ॥

'ಶುದ್ಧಸತ್ವಾತ್ಮಕರಾದ ಬ್ರಹ್ಮಾದಿ ದೇವತೆಗಳ ಶರೀರವನ್ನು ಆಶ್ರಯಿಸಿ ಇರುತ್ತಾನೆ ಶ್ರೀಹರಿ. ಅದರಿಂದ ಅವರು ಆದೇಶಿಸುವ ಮಾರ್ಗದಿಂದ ಸಜ್ಜನರು ವೇದಾಧ್ಯಯನಾದಿ ಕರ್ಮಮಾಡಿ ಶ್ರೀಹರಿಯನ್ನು ಆರಾಧಿಸುತ್ತಾರೆ' ಎಂದು ಭಾಗವತತಂತ್ರದಲ್ಲಿ ಹೇಳಿದೆ.

ಬ್ರಹ್ಮಾದಿ ದೇವತೆಗಳ ಶರೀರವನ್ನು ಶ್ರೀಹರಿ ಆಶ್ರಯಿಸುವುದೆಂದರೆ ಅದರಲ್ಲಿ ಆವೇಶ ಹೊಂದುವುದು. ಹರಿಯ ಆವೇಶದಿಂದ ಅವರ ಶರೀರ ಶುದ್ಧಸತ್ವಾತ್ಮಕವಾಗುವುದು. ಆವೇಶವಿಲ್ಲದ್ದಿದಾಗ ಸ್ವಲ್ಪ ರಜಸ್ಸು ತಮಸ್ಸುಗಳೂ ಇರಬಹುದು. ಆವೇಶ ಕಾಲದಲ್ಲಿ ಶ್ರೀಹರಿಯೇ ಉಪದೇಶಿಸುತ್ತಾನೆ.

❖ ❖ ❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಬ್ರಹ್ಮಾದಿ ದೇವತೆಗಳು ಸ್ತುತಿಸುತ್ತಾರೆ-

ಸತ್ತ್ವಂ ನ ಚೇದ್ಧಾತರಿದಂ ನಿಜಂ ಭವೇದ್
ವಿಜ್ಞಾನಮಜ್ಞಾನಭಿದಾಪಮಾರ್ಜನಮ್।
ಗುಣಪ್ರಕಾಶೈರನುಮೀಯತೇ ಭವಾನ್
ಪ್ರಕಾಶತೇ ಯಸ್ಯ ಚ ಯೇನ ವಾಽಗುಣಃ ॥ ೩೬ ॥

ಹೇ ಪ್ರಪಂಚಧಾರಕನೆ, ಈ ಬ್ರಹ್ಮಾದಿಗಳ ಶರೀರ ನಿನ್ನ ಸನ್ನಿಧಾನ

ಪಾತ್ರವಾಗದಿದ್ದಲ್ಲಿ ಅಜ್ಞಾನವನ್ನು ಕಳೆವ ಶ್ರೇಷ್ಠವಾದ ಜ್ಞಾನ ಲೋಕದಲ್ಲಿ ತೊಡೆದುಹೋದೀತು. ಶುದ್ಧ ಸತ್ವಗುಣದಿಂದ ಜ್ಞಾನಪ್ರಕಾಶವನ್ನು ಹೊಂದಿರುವ ಬ್ರಹ್ಮಾದಿಗಳ ಉಪದೇಶಾನುಸಾರ ಜಿಜ್ಞಾಸುಗಳು ನಿನ್ನನ್ನು ಯಥಾರ್ಥವಾಗಿ ತಿಳಿಯುವುದೂ ಉಪಾಸನ ಮಾಡುವುದೂ ಇಲ್ಲವೆಂದಾಯಿತು. ಏಕೆಂದರೆ ಬ್ರಹ್ಮಾದಿಗಳ ಉಪದೇಶವಿಲ್ಲದೆ ಗುಣತ್ರಯರಹಿತನಾದ ನೀನು ಯಾರಿಗೆ ಯಾವ ಸಾಧನದಿಂದ ಗೋಚರನಾಗುವಿ?

'ಶುದ್ಧಸತ್ವ ನಿನ್ನ ಶರೀರವಾಗಿರದಿದ್ದರೆ ನಮಗೆ ಅಜ್ಞಾನವನ್ನೂ ಭೇದ ಪ್ರಪಂಚವನ್ನೂ ಕಳೆವ ಅಪರೋಕ್ಷ ಜ್ಞಾನವಿಲ್ಲವಾಗುತ್ತಿತ್ತು. ಏಕೆಂದರೆ ಜಡವಾದ ಬುದ್ಧಿ ಇಂದ್ರಿಯಗಳಿಂದ ಜ್ಞಾನ ಬರಬೇಕಾದರೆ ಜ್ಞಾನವೇನೋ ಬರಬಹುದು. ಆದರೆ ಅದು ಕೇವಲ ಅನುಮಾನ ಹೊರತು ಅಪರೋಕ್ಷವಾಗಿರುವುದಿಲ್ಲ. ನೀನು ಶುದ್ಧ ಸತ್ವಶರೀರಿಯಾದರೆ ನಿನ್ನನ್ನು ಹಾಗೆ ಧ್ಯಾನಿಸುತ್ತೇವೆ. ಅಂತಃಕರಣದಲ್ಲಿ ಸಾಕ್ಷಾತ್ಕಾರ ಪಡೆಯುತ್ತೇವೆ' ಎಂದು ಶ್ರೀಧರವ್ಯಾಖ್ಯಾನ[೧] ಹೇಳುತ್ತದೆ. ಆದರೆ ಹಿಂದೆ ಹೇಳಿದಂತೆ, 'ಇರುವುದನ್ನೇ ಧ್ಯಾನಿಸಬೇಕು, ಇಲ್ಲದುದನ್ನು ಕಲ್ಪಿಸಿಕೊಂಡು ಅಲ್ಲ' ಎಂಬ ನಿಯಮವಿಲ್ಲದಿರುವುದರಿಂದ ಅದ್ವೈತಮತದಲ್ಲಿ ಹರಿ ಶುದ್ಧಸತ್ವಮಯ ಶಿರೀರವನ್ನು ಧರಿಸಬೇಕಾಗಿಲ್ಲ, ಧರಿಸಿದ್ದಾನೆ ಎಂದು ಧ್ಯಾನಿಸಿದ ರಾಯಿತು.

'ಯತ್ ಸಾಕ್ಷಾದಪರೋಕ್ಷಾದ್ ಬ್ರಹ್ಮ' ಎಂಬಂತೆ ಪರಬ್ರಹ್ಮ ಅಪರೋಕ್ಷ ಸ್ವಭಾವದವನೆಂದಮೇಲೆ ಅವನ ಬಗ್ಗೆ ಏನು ಜ್ಞಾನ ಬಂದರೂ, ವಾಕ್ಯಶ್ರವಣದಿಂದ

---

೧ ಇದಂ ಸತ್ತ್ವಂ ನಿಜಂ ತವ ವಪುರ್ನಭವೇಚ್ಚೇತ್ತರ್ಹಿ ವಿಜ್ಞಾನಂ ವಿಶಿಷ್ಟಮಪರೋಕ್ಷಂ ಜ್ಞಾನಂ ನ ಭವೇದಿತ್ಯನುಷಂಗಃ। ಕಥಂಭೂತಂ? ಅಜ್ಞಾನಭಿದಾಪಮಾರ್ಜನಂ ಅಜ್ಞಾನಂ ಚ ತತ್ಕೃತಾ ಭಿದಾ ಚ ತಯೋರಪಮಾರ್ಜನಂ ನಿವರ್ತಕಂ । ಯದ್ವಾ ಅಜ್ಞಾನಂ ಭಿನತ್ತೀತ್ಯಜ್ಞಾನ ಭಿತ್ ವಿಜ್ಞಾನಂ ಮಾರ್ಜನಂ ನಾಶಮಾಪ ಪ್ರಾಪ್ತಮೇವೇತಿ॥ ನನು ಜಡಾನಾಂ ಬುದ್ಧ್ಯಾದೀನಾಂ ಯತಃ ಪ್ರಕಾಶಸ್ತದ್ ಬ್ರಹ್ಮೇತಿ ಜ್ಞಾನಂ ಭವೇದೇವೇತಿ ಚೇನ್ನ। ಗುಣಪ್ರಕಾಶೈರ್ಗುಣಾವಚ್ಛಿನ್ನೈಃ ಪ್ರಕಾಶೈರ್ಭವಾನ್ ಸರ್ವಸಾಕ್ಷೀ ಪರಿಪೂರ್ಣಃ ಕೇವಲಮನುಮೀಯತೇ ಕಲ್ಪ್ಯತೇ ನತು ಸಾಕ್ಷಾತ್ಕ್ರಿಯತ ಇತ್ಯರ್ಥಃ। ಅನುಮಾನ ಪ್ರಕಾರ ಮಾಹುಃ ಪ್ರಕಾಶತೇ ಯಸ್ಯ ಚ ಯೇನ ವಾ ಗುಣಇತಿ । ಯಸ್ಯ ಸಂಬಂಧೀ ಅಯಂ ಬುಧ್ಯಾದಿ ಗುಣಃ ಪ್ರಕಾಶತೇ ಯೋ ಗುಣಸಾಕ್ಷೀ ಇತ್ಯೇವಂ ಯೇನ ವಾ ಬುಧ್ಯಾರೂಢೇನ ಪ್ರಮಾತ್ರಾ ಬುಧ್ಯಧಿಷ್ಠಾತ್ರಾ ಬಾಹ್ಯೋ ಗುಣಃ ಪ್ರಕಾಶತೇ ಇತ್ಯನುಮೀಯತ ಇತ್ಯರ್ಥಃ । ಶುದ್ಧ ಸತ್ವವಪುಷಿ ತ್ವಯಿ ಸೇವ್ಯಮಾನೇ ತು ತದಾಕಾರೇಽಂತಃ ಕರಣೇ ತ್ವತ್ಪ್ರಸಾದೇನ ಸಾಕ್ಷಾತ್ಕಾರೋ ಭವೇದಿತಿ ಭಾವಃ। -ಶ್ರೀಧರಃ

ಬೋಧ ಬಂದರೂ ಅದು ಸಾಕ್ಷಾತ್ಕಾರರೂಪವೇ ಆಗಿರುತ್ತದೆ, ಕೇವಲ ಅನುಮಾನ ಅಥವಾ ಶಾಬ್ದ ಜ್ಞಾನವಾಗಿರಲಾರದು ಎಂದು ಅದ್ವೈತವೆ ಹೇಳುತ್ತದೆ.

ಸರ್ವಪ್ರತ್ಯಯ ವೇದ್ಯ ಪರಬ್ರಹ್ಮ. ಅದರಿಂದ ಘಟಾದಿ ಜ್ಞಾನದಲ್ಲಿಯೂ ಪರಬ್ರಹ್ಮ ಪ್ರತ್ಯಕ್ಷವಾಗಿ ತೋರುತ್ತಾನೆ. ಅದಕ್ಕೆ ಅವನು ಸತ್ವಗುಣಾತ್ಮಕ ಶರೀರವನ್ನು ಧರಿಸಬೇಕಾಗಿಲ್ಲ. ಆ ಪ್ರತ್ಯಕ್ಷದಿಂದ ಅಜ್ಞಾನ, ಅಜ್ಞಾನದಿಂದಾದ ಭೇದಪ್ರಪಂಚ ನಾಶವಾಗುವುದಿಲ್ಲ, ನಿಜ. ಆದರೆ ಸತ್ವಶರೀರಿಯಾದ ಸಗುಣಬ್ರಹ್ಮನ ಸಾಕ್ಷಾತ್ಕಾರ ದಿಂದಲೂ ಭೇದಪ್ರಪಂಚ ನಾಶವಾಗುವುದಿಲ್ಲ. ನಿರ್ಗುಣ ಬ್ರಹ್ಮ ಸಾಕ್ಷಾತ್ಕಾರ ದಿಂದಲೇ ಅದು ನಾಶವಾಗಬೇಕು. ಅದರಿಂದ ಸತ್ವಶರೀರವನ್ನು ಧರಿಸುವುದರಿಂದ ಪ್ರಕೃತದ ಉದ್ದೇಶಕ್ಕೇ ಭಂಗ ಬರುತ್ತದೆ.

ಈ ಶ್ಲೋಕವನ್ನು ಸಮರ್ಪಕವಾಗಿ ತಂತ್ರಭಾಗವತವೇ ವಿವರಿಸಿದೆ-

ಸತ್ವಂ ಬ್ರಹ್ಮಾದಿದೇಹಾಖ್ಯಂ ಜ್ಞಾನರೂಪಂ ತಮೋನುದಂ ।
ಯದಿ ನ ಸ್ಯಾತ್ ತದಾ ಸತ್ವಪ್ರಕಾಶಾನುಮಿತೋ ವಿಭುಃ ।
ಯದಿ ನ ಸ್ಯಾತ್ ಪರೋ ವಿಷ್ಣುಃ ಕಥಂ ವಿದ್ವಜ್ಜನಾ ಅಮುಂ ।
ಅರ್ಚಯಂತೀತಿ ತತ್ವಸ್ಯ ಜಿಜ್ಞಾಸುಭಿರಧೋಕ್ಷಜಃ ।
ಕಥಂ ಜ್ಞಾಯೇತ ಕಸ್ಯಾಪಿ ನಿರ್ಗುಣತ್ವಾತ್ ಪರೋ ವಿಭುಃ ॥
ಇತಿ ತಂತ್ರಭಾಗವತೇ ॥

ಬ್ರಹ್ಮಾದಿಶರೀರವೆಂಬ ಸತ್ವವು ಅಧೋಕ್ಷಜನ ಸನ್ನಿಧಾನದಿಂದ ಜ್ಞಾನೋಪದೇಶ ಮಾಡಿ ಅಜ್ಞಾನ ನಾಶಕ ಆಗದಿದ್ದರೆ, ಶ್ರೀಹರಿ ಸತ್ವದಿಂದ ಉಂಟಾಗುವ ಜ್ಞಾನಪ್ರಕಾಶಕ್ಕೆ ಅನುಸಾರವಾಗಿ ಜಿಜ್ಞಾಸುಗಳಿಗೆ ಜ್ಞಾನಗೋಚರ ಹೇಗಾದಾನು? ಹಾಗಾಗದಿದ್ದರೆ ತತ್ವಜಿಜ್ಞಾಸುಗಳು ಅಧೋಕ್ಷಜನನ್ನು ಹೇಗೆ ತಿಳಿದಾರು? ಆಗ ವಿದ್ವಜ್ಜನರು ಅವನನ್ನು ಹೇಗೆ ಪೂಜಿಸುತ್ತಾರೆ? ಅವನು ನಿರ್ಗುಣನಾದ್ದರಿಂದ ಬ್ರಹ್ಮಾದಿಗಳ ಉಪದೇಶವಿಲ್ಲದೆ ಯಾರೇ ಆಗಲಿ ಹೇಗೆ ತಿಳಿದಾರು? ಎಂದು ತಂತ್ರಭಾಗವತ ಹೇಳಿದೆ.

'ನಿರ್ಗುಣ' ಅಂದರೆ ಇತರರು ಸ್ವತಃ ತಿಳಿಯಬಹುದಾದ ಸತ್ವಾದಿ ಗುಣಗಳಿಲ್ಲ ದವನು. ಅದರಿಂದ ಹರಿ ಅವ್ಯಕ್ತ, ಅವನ ಅನುಗ್ರಹವಿಲ್ಲದೆ ಯಾರಿಗೂ ಗೋಚರಿಸಲಾರ.

❖❖❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಭಗವಂತನನ್ನು ಬ್ರಹ್ಮಾದಿ ದೇವತೆಗಳು ಸ್ತುತಿಸಿದರು-

ನ ನಾಮರೂಪೇ ಗುಣಕರ್ಮಜನ್ಮಭಿ-
ರ್ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ।
ಮನೋವಚೋಭ್ಯಾಮನುಮೇಯವರ್ತ್ಮನೋ
ದೇವಕ್ರಿಯಾಯಾಃ ಪ್ರತಿಯಂತ್ಯಥಾಪಿ ಹಿ ॥ ೩೭ ॥

ಹೇ ದೇವ ನಿನ್ನ ಗುಣಕರ್ಮ ಅವತಾರಗಳೊಂದಿಗೆ ನಿನ್ನ ನಾಮರೂಪಗಳೂ ಎಲ್ಲವೂ ಅಲೌಕಿಕವಾದ್ದರಿಂದ ನಮ್ಮ ಮನಸಿನಿಂದ ತಿಳಿಯುವುದಾಗಲಿ ಮಾತಿನಿಂದ ಹೇಳುವುದಾಗಲಿ ನಿನ್ನ ಅನುಗ್ರಹವಿಲ್ಲದೆ ಶಕ್ಯವಿಲ್ಲ. ಆದರೆ ನೀನು ನಾಮರೂಪಾತ್ಮಕವಾದ ಈ ಎಲ್ಲ ಪ್ರಪಂಚವನ್ನು ಪ್ರತ್ಯಕ್ಷ ಕಾಣುವವನು. ಜ್ಞಾನಿಗಳ ಮನಸಿಂದಲೂ ಮಾತಿನಿಂದಲೂ ನಾವು ನಿನ್ನ ಸ್ವರೂಪವನ್ನು ಸರಿಯಾಗಿ ತಿಳಿಯಬೇಕು. ಅದಕ್ಕೆ ನಿನ್ನ ಅನುಗ್ರಹ ಬೇಕು. ನಿನ್ನ ಅನುಗ್ರಹದಿಂದಲೆ ಜಿಜ್ಞಾಸುಗಳು ನಿನ್ನನ್ನು ತಿಳಿಯುತ್ತಾರೆ.

ಇಲ್ಲಿ [೧]ಶ್ರೀಧರವ್ಯಾಖ್ಯಾನ ಪ್ರಕಾರ 'ದೇವ! ಕ್ರಿಯಾಯಾಂ' ಎಂದು ಪಾಠ. ವಿವರಣೆ ಹೀಗೆ- ಹೇ ದೇವ, ನಿನ್ನ ನಾಮಗಳನ್ನೂ ಅವತಾರ ರೂಪಗಳನ್ನೂ ಗುಣ ಜನ್ಮ ಮತ್ತು ಕರ್ಮಗಳಿಂದ ವರ್ಣಿಸಲಾಗದು. ಏಕೆಂದರೆ ನೀನು ಬುಧ್ಯಾದಿಗಳಿಗೆ ಸಾಕ್ಷಿಯಾಗಿರುವುದರಿಂದ ಮನೋವಾಚಾಮಗೋಚರನಾಗಿರುವಿ. ಅದರಿಂದ ನಿನ್ನ ಬಗ್ಗೆ ಕೇವಲ ಊಹೆಗಳನ್ನು ಮಾತ್ರ ಮಾಡಬೇಕಷ್ಟೆ. ಆದರೂ ಧ್ಯಾನಕ್ರಿಯೆಯಲ್ಲಿ ಉಪಾಸಕರು ನಿನ್ನನ್ನು ಸಾಕ್ಷಾತ್ ನೋಡಬಲ್ಲರು.'

ಇಲ್ಲಿ ಸಗುಣಬ್ರಹ್ಮನಾದ ಶ್ರೀಹರಿಗೆ ನಾಮರೂಪಗಳನ್ನು ಅದ್ವೈತದಲ್ಲಿ ಒಪ್ಪಿರುವಾಗ ಅವನನ್ನು ಗುಣಜನ್ಮಕರ್ಮಗಳಿಂದ ವರ್ಣಿಸಲಾಗದೆನ್ನುವುದು ವ್ಯಾಹತ. ನಿರ್ಗುಣ ಬ್ರಹ್ಮನಿಗೆ ನಾಮರೂಪಗಳೆ ಇಲ್ಲದಿರುವಾಗ ಅವನ್ನು ವರ್ಣಿಸಲಾಗದೆನ್ನುವುದೂ ವ್ಯಾಹತ. ಮನೋವಾಚಾಮಗೋಚರನಾಗಿರುವಿ

---

೧ ನಾಮರೂಪೇ ಗುಣಾಶ್ಚ ಜನ್ಮಾನಿ ಚ ಕರ್ಮಾಣಿ ಚ ತೈರ್ನಿರೂಪಿತವ್ಯೇ ನಿರೂಪಣಾರ್ಹೇ ನ ಭವತಃ। ಕುತಃ? ಅನುಮೇಯಂ ವರ್ತ್ಮ ಮಾರ್ಗೋ ಯಸ್ಯ ತವೇತಿ। ತತ್ರಾಪಿ ಹೇತುಃ ತಸ್ಯ ಸಾಕ್ಷಿಣ ಇತಿ । ನಹಿ ಸಾಕ್ಷಿಣಸ್ತತ್ತ್ವಂ ಮನೋವಚೋಗೋಚರಮಿತ್ಯರ್ಥಃ। ಹೇ ದೇವ ಬಹುಧಾ ದ್ಯೋತಮಾನ। ಅಥಾಪಿ ಕ್ರಿಯಾಯಾಂ ಉಪಾಸನಾದಿಲಕ್ಷಣಾಯಾಂ ತ್ವಾಂ ಪ್ರತಿಯಂತ್ಯುಪಾಸಕಾಃ ಸಾಕ್ಷಾತ್ ಪಶ್ಯಂತಿ। ಹಿ ಪ್ರಸಿದ್ಧಂ। -ಶ್ರೀಧರಃ

ಎನ್ನುವುದೂ ಊಹೆಗೆ ನಿಲುಕುವ, ಧ್ಯಾನದಲ್ಲಿ ಪ್ರತ್ಯಕ್ಷ ಗೋಚರನಾಗುವ ಎನ್ನುವುದೂ ವ್ಯಾಹತ.

ಈ ಶ್ಲೋಕಕ್ಕೆ ಸಮರ್ಪಕವಾದ ವ್ಯಾಖ್ಯಾನ ಬ್ರಹ್ಮತರ್ಕದಲ್ಲಿ ಮತ್ತು ಪದ್ಮಪುರಾಣದಲ್ಲಿ ಕಂಡುಬರುತ್ತದೆ-

ಲೋಕಸಿದ್ಧಾರ್ಥನಾಮ್ನಃ ಸ ರಾಹಿತ್ಯಾನ್ನಾಮವರ್ಜಿತಃ ।
ಅರೂಪೋಽಪ್ರಾಕೃತತ್ವಾಚ್ಚ ಸತ್ವಾಭಾವಾತ್ತಥಾಽಗುಣಃ ।
ಅಕರ್ಮಾಽಕ್ಲಿಷ್ಟಕಾರಿತ್ವಾನ್ನಿತ್ಯತ್ವಾದಜ ಏವ ಚ ।
ಅಲೌಕಿಕಾರ್ಥಸನ್ನಾಮ್ನಾಮನಂತತ್ವಾಜ್ಜನಾರ್ದನಃ ।
ಅನಂತನಾಮಾ ಪರಮಃ ಸುಸುಖಜ್ಞಾನರೂಪವಾನ್ ।
ತಾನಿ ಚಾಸ್ಯ ಸುದಿವ್ಯಾನಿ ಸುಗಂಧೀನಿ ಸುಭಾಂತಿ ಚ ।
ಶುಭಲಕ್ಷಣಪೂರ್ಣಾನಿ ಸುವರ್ಣಾನಿ ಮಹಾಂತಿ ಚ ।
ಯದತೋಽನಂತರೂಪೋಽಸೌ ಪೂರ್ಣಾನಂದಾದಿ
ಭೋಜನಾತ್ ।
ಬಲೈಶ್ವರ್ಯಸುವೀರ್ಯಾದಿ ಪೂರ್ಣಾಸಂಖ್ಯಗುಣತ್ವತಃ ।
ಅನಂತಗುಣ ಏವಾಸೌ ತೇ ಚಾಭಿನ್ನಾ ಗುಣಾ ಹರೇಃ ।
ಪರಸ್ಪರಮಭಿನ್ನಾಶ್ಚ ಸರ್ವೇ ಧರ್ಮಾಶ್ಚ ತದ್ಗತಾಃ ।
ಅಭಿನ್ನಾನಿ ಚ ರೂಪಾಣಿ ಸರ್ವಾಣಿ ಜಗದೀಶಿತುಃ ।
ಪ್ರಾಕೃತಸ್ಯ ತು ನಾಮಾದೇರೀಕ್ಷಿತಾ ಪುರುಷೋತ್ತಮಃ ।
ಅನಾಮಾದಿವಚೋಭಿಸ್ತು ಸ ಏಷೋಽರ್ಥೋಽನುಮೀಯತೇ ।
ಅನಾಮತ್ವಾದಿ ಚಾನ್ಯಚ್ಚ ಜ್ಞಾನಿನಾಂ ಮನಸೇಂಗ್ಯತೇ ।
ತೇನೈವ ಚೋಹ್ಯ ಏಷೋಽರ್ಥಸ್ತಸ್ಮಾದ್‌ಜ್ಞೇಯ ಇತಿ ಪ್ರಭುಃ ।
ಇತಿ ಬ್ರಹ್ಮತರ್ಕೇ

ದೇವಕ್ರಿಯಾಯಾಃ ಪ್ರತಿಯಂತಿ ಭಗವತ್‌ಪ್ರೇರಣಾದೇವ ಜಾನಂತಿ ।
ನಾಮರೂಪಾದಿ ವಿಷ್ಣೋಸ್ತು ನ ಶಕ್ಯಂ ಜ್ಞಾತುಮಂಜಸಾ ।
ತಥಾಪಿ ತತ್ಪ್ರಸಾದೇನ ಜಾನಂತಿ ಪರಮರ್ಷಯಃ ॥
ಇತಿ ಪಾದ್ಮೇ ॥

'ಕೇವಲ ಲೋಕದಲ್ಲೇ ಕಂಡುಬರುವಂಥ ಅಸ್ವತಂತ್ರವಾದ ಅಲ್ಪವಾದ ಪ್ರವೃತ್ತಿ ನಿಮಿತ್ತವುಳ್ಳ ನಾಮ ಹರಿಗೆ ಇಲ್ಲದ್ದರಿಂದ ಅವನು ನಾಮರಹಿತನೆನಿಸುತ್ತಾನೆ. ಪ್ರಾಕೃತರೂಪವಿಲ್ಲದವನಾದ್ದರಿಂದ ಅರೂಪನೆನಿಸುತ್ತಾನೆ. ಸತ್ವಾದಿಗುಣರಹಿತ ನಾದ್ದರಿಂದ ನಿರ್ಗುಣನೆನಿಸುತ್ತಾನೆ. ಏನೂ ಆಯಾಸವಿಲ್ಲದೇ ಎಲ್ಲ ಕರ್ಮಮಾಡುವುದರಿಂದ ಅಕರ್ಮನೆನಿಸುತ್ತಾನೆ. ಜನನ ರಹಿತನಾದ್ದರಿಂದ ಅಜನೆನಿಸುತ್ತಾನೆ. (ಅದರಿಂದ 'ನ ನಾಮರೂಪೇ ಗುಣಕರ್ಮಜನ್ಮಭಿ ರ್ನಿರೂಪಿತವ್ಯೇ' ಎಂದಿದೆ)

ಲೋಕವಿಲಕ್ಷಣವಾದ ಸ್ವತಂತ್ರವಾದ ಪೂರ್ಣವಾದ ಪ್ರವೃತ್ತಿ ನಿಮಿತ್ತವುಳ್ಳ ನಾಮಗಳು ಹರಿಯಲ್ಲಿ ಅನಂತ ಇರುವುದರಿಂದ ಅವನು ಅನಂತನಾಮ. ನಿರ್ದುಷ್ಟ ಆನಂದ ಜ್ಞಾನಾತ್ಮಕ ರೂಪಗಳುಳ್ಳವನು ಜನಾರ್ದನ. ಆ ರೂಪಗಳು ದಿವ್ಯ, ಸುಗಂಧಭರಿತ, ಒಳ್ಳೆಯ ಪ್ರಕಾಶ ಉಳ್ಳವುಗಳು ಶುಭಲಕ್ಷಣಗಳಿಂದ ತುಂಬಿದವುಗಳು ಅಪ್ರಾಕೃತ ಬಣ್ಣ ಉಳ್ಳವುಗಳು. ಪೂರ್ಣಾನಂದವನ್ನು ಅನುಭವಿಸುವುದರಿಂದ, ಬಲ ಐಶ್ವರ್ಯ ವೀರ್ಯ ಮುಂತಾದ ಪೂರ್ಣವಾದ ಅಸಂಖ್ಯಗುಣಗಳುಳ್ಳವನಾದ್ದರಿಂದ ಅನಂತಗುಣ ನೆನಿಸುತ್ತಾನೆ. ಅವನಲ್ಲಿರುವ ಗುಣಗಳೂ ಧರ್ಮಗಳೂ ಅವನ ಅವತಾರ ರೂಪಗಳೂ ಎಲ್ಲವೂ ಅವನಿಂದಲೂ ಪರಸ್ಪರವಾಗಿಯೂ ಅಭಿನ್ನವೇ ಆಗಿರುತ್ತವೆ. ಭಿನ್ನ ಗುಣಕ್ರಿಯಾದಿಗಳಿಲ್ಲದ್ದರಿಂದ ಅವನನ್ನು ಅಗುಣ ಅಕ್ರಿಯ ಎಂದು ಮುಂತಾಗಿ ಹೇಳುವುದುಂಟು. ಲೋಕದಲ್ಲಿರುವ ಪ್ರಾಕೃತ ನಾಮರೂಪಗಳಿಗೂ ತನ್ನಲ್ಲಿರುವ ಅಪ್ರಾಕೃತನಾಮರೂಪಗಳಿಗೂ ಅವನು ದ್ರಷ್ಟು ಅನಾಮ ಅರೂಪ ಎಂದು ಮುಂತಾಗಿ ಶಾಸ್ತ್ರಗಳಲ್ಲಿ ಹೇಳಿರುವುದರಿಂದ ಉಪಕ್ರಮಾದಿಗಳಿಗೆ ಅನುಸಾರವಾಗಿ ಹೀಗೇ ನಿರ್ಣಯವಾಗುವುದು. (ಅದರಿಂದ 'ತಸ್ಯ ಸಾಕ್ಷಿಣಃ ಅನುಮೇಯವರ್ತ್ಮನಃ' ಎಂದಿದೆ)

ಪರಮಾತ್ಮ ಹೀಗೆ ಅನಾಮ ಅರೂಪ ಅಗುಣ ಅಕ್ರಿಯನೆನಿಸುತ್ತಾನೆ ಎಂಬುದು ಜ್ಞಾನಿಗಳ ಸ್ವಾನುಭವ ಪ್ರಮಾಣದಿಂದ ಮತ್ತು ಪರಮಾತ್ಮನ ಅನುಗ್ರಹದಿಂದ ಊಹೆಯಿಂದ ತಿಳಿದು ಬರುತ್ತದೆ. (ಅದರಿಂದ 'ಮನೋವಚೋಭ್ಯಾ ಮನುಮೇಯ' ಎಂದಿದೆ) ಅದರಿಂದ ಹರಿಯನ್ನು ಹೀಗೇ ತಿಳಿಯಬೇಕು' ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

'ದೇವಕ್ರಿಯಾಯಾಃ ಪ್ರತಿಯಂತಿ' ಎಂದರೆ ಭಗವಂತನ ಅನುಗ್ರಹ ಕ್ರಿಯೆಯಿಂದಲೇ ಜ್ಞಾನಿಗಳು ತಿಳಿಯುತ್ತಾರೆ ಎಂದರ್ಥ. 'ತೇನೈವ ಚೋಹ್ಯಃ' ಎಂದು ಬ್ರಹ್ಮತರ್ಕ ಹಾಗೇ ವ್ಯಾಖ್ಯಾನಿಸಿದೆ.

'ಹರಿಯ ನಾಮರೂಪಾದಿಗಳು ಯಾರಿಗೂ ಚೆನ್ನಾಗಿ ತಿಳಿಯಲು ಶಕ್ಯವಲ್ಲ. ಆದರೂ ಹರಿಯ ಅನುಗ್ರಹದಿಂದ ಮಹರ್ಷಿಗಳು ತಿಳಿಯುತ್ತಾರೆ' ಎಂದು ಪದ್ಮಪುರಾಣದಲ್ಲಿಯೂ ಹೇಳಿದೆ.

ಹರಿಯನ್ನು ಚೆನ್ನಾಗಿ ವರ್ಣಿಸುವ ಶಬ್ದಗಳೆಂದರೆ ಮುಖ್ಯವಾಗಿ ಅಲೌಕಿಕವಾದ ಹರಿಸ್ವರೂಪವಾದ ಶಬ್ದಗಳೆ. ಲೌಕಿಕ ಶಬ್ದಗಳೂ ಅವನನ್ನು ವರ್ಣಿಸಬಲ್ಲವು ಎಂದು ಸತ್ತತ್ವರತ್ನಮಾಲೆಯಲ್ಲಿ ಉಕ್ತವಾಗಿದೆ-

ಸಮ್ಯಕ್ ತದ್ವಾಚಕಾಃ ಶಬ್ದಾಸ್ತತ್ಸ್ವರೂಪಾ ಅಲೌಕಿಕಾಃ ।
ಅಪ್ಯುಕ್ತಾ ಲೌಕಿಕೈಃ ಶಬ್ದೈರಚಿಂತ್ಯೈಶ್ವರ್ಯಯೋಗತಃ ॥

ಆದರಿಂದ ಜ್ಞಾನಿಗಳು ಮನಸ್ಸಿನಿಂದ ಪರಮಾತ್ಮನ ರೂಪವನ್ನು ಧ್ಯಾನ ಮಾಡುವುದು ಮಾತ್ರವಲ್ಲದೆ ಲೌಕಿಕ ಶಬ್ದಗಳಿಂದಲೂ ಶ್ರುತಿಸ್ಮೃತಿಗಳಲ್ಲಿ ಸ್ತೋತ್ರ ಮಾಡುತ್ತಾರೆ. ಹೀಗಾಗಿ ಜ್ಞಾನಿಗಳ 'ಮನೋವಚೋಭ್ಯಾಂ' ಮನಸ್ಸು ಮತ್ತು ಮಾತುಗಳಿಂದ ನಾವು 'ಅನು-ಮಾ' ಉಪಕ್ರಮಾದಿಗಳಿಗನುಸಾರವಾಗಿ ಶ್ರುತಿ ತಾತ್ಪರ್ಯವನ್ನು ಊಹಿಸಿಕೊಂಡು ಪ್ರಮೇಯವನ್ನು ತಿಳಿಯಬೇಕು, ಹೊರತು ಪರಮಾತ್ಮ ಕೇವಲ ಅನುಮೇಯ ಎಂದು ತಿಳಿಯಬಾರದು.

❖ ❖ ❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಭಗವಂತನನ್ನು ಬ್ರಹ್ಮಾದಿದೇವತೆಗಳು ಸ್ತುತಿಸುತ್ತಿದ್ದಾರೆ.

ಶೃಣ್ವನ್ ಗೃಣನ್ ಸಂಸ್ಮರಯಂಶ್ಚ ಚಿಂತಯನ್
ನಾಮಾನಿ ರೂಪಾಣಿ ಚ ಮಂಗಲಾನಿ ತೇ ।
ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋ-
ರಾವಿಷ್ಟಚಿತ್ತೋ ನ ಭವಾಯ ಕಲ್ಪತೇ ॥ ೩೮ ॥

ನಿನ್ನಲ್ಲಿ ನಾಮರೂಪಗಳಿರುವುದರಿಂದ ಮಂಗಳಕರವಾದ ನಿನ್ನ ನಾಮ ಶ್ರವಣಕೀರ್ತನಗಳನ್ನೂ ರೂಪ ಸ್ಮರಣಧ್ಯಾನಗಳನ್ನೂ ನಡೆಸುತ್ತ ಈ ಎಲ್ಲ ಉಪಾಸನಾ ಕ್ರಿಯೆಗಳಲ್ಲಿಯೂ ಯಾರು ನಿನ್ನ ಪಾದಕಮಲಗಳಲ್ಲಿಯೇ ಮನಸ್ಸನ್ನಿಟ್ಟಿರುವನೋ ಅಂದರೆ ಎಲ್ಲ ಉಪಾಸನೆಗಳಲ್ಲಿಯೂ ಉಪಾಸಕನೂ ನೀನೆ, ಉಪಾಸ್ಯನೂ ನೀನೆ, ನಾನು ನಿಮಿತ್ತಮಾತ್ರ ಎಂದು ಅನುಸಂಧಾನ ಮಾಡುತ್ತಿರುವನೋ ಅವನು ಸಂಸಾರಭಾಗಿ ಎನಿಸುವುದಿಲ್ಲ.

ಇಲ್ಲಿ ಹರಿನಾಮಶ್ರವಣಾದಿಗಳನ್ನು ಮಾಡುವಾಗ ಹರಿಯಲ್ಲಿ ಮನಸ್ಸಿಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ಹರಿಯ ನಾಮ ಶ್ರವಣಕೀರ್ತನಗಳಲ್ಲಿ ಉಪಾಸಕನು ಅನ್ಯಮನಸ್ಕನಾಗಿರುವುದುಂಟು. ಹರಿಯ ರೂಪಸ್ಮರಣಧ್ಯಾನಗಳಲ್ಲಿ ಅದು ಅಸಂಭವ. ಹರಿಯಲ್ಲಿಯೇ ಮನಸ್ಸಿಡಬೇಕಾಗುತ್ತದೆ. ಅದನ್ನು ಏಕೆ ಹೇಳಬೇಕು? ಬೇರೆ ವ್ಯಾಖ್ಯಾನಕಾರರಲ್ಲಿ ಈ ಪ್ರಶ್ನೆಗೆ ಸಮಾಧಾನವಿಲ್ಲ. ಮತ್ತು ಎಲ್ಲ ಕ್ರಿಯೆಗಳಲ್ಲಿಯೂ ಹರಿಯನ್ನು ಸ್ಮರಿಸುತ್ತಿರಬೇಕು. ಯಾವ ರೀತಿಯಲ್ಲಿ ಎನ್ನುವುದೂ ತಿಳಿಯುವುದಿಲ್ಲ. ಅದಕ್ಕೆ ಕ್ರಿಯಾಯೋಗಗ್ರಂಥದ ವಚನವನ್ನು ತೋರಿಸಿ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಾರೆ.

ಮತ್ತು ಅದ್ವೈತದಲ್ಲಿ ಪರಬ್ರಹ್ಮನಿಗೆ ನಾಮರೂಪಗಳಿಲ್ಲ. ವಿಶಿಷ್ಟಾದ್ವೈತ ದಲ್ಲಿಯೂ ಲಯಕಾಲದಲ್ಲಿ ಭಗವಂತನಿಗೆ ನಾಮರೂಪಗಳಿಲ್ಲ. ಆಗ ಯಾವ ವಸ್ತುವಿಗೂ ನಾಮರೂಪಗಳಿಲ್ಲ ಎನ್ನುತ್ತಾರೆ. ಇದು ಸರಿಯಲ್ಲ. ಹಿಂದಿನ ಪದ್ಯದಲ್ಲಿ ನಾಮರೂಪಗಳಿಲ್ಲ ಎಂದುದರ ಅಭಿಪ್ರಾಯ ಬೇರೇ ಇದೆ. ಹೀಗಾಗಿ, ನಾಮರೂಪ ಗಳಿವೆ. ಅದರಿಂದಲೇ ಲಯಕಾಲದಲ್ಲಿಯೂ ಲಕ್ಷ್ಮೀ ಬ್ರಹ್ಮಾದಿಗಳು ಹರಿಯ ನಾಮರೂಪಗಳನ್ನು ಉಪಾಸನೆ ಮಾಡುತ್ತಾರೆ. ಅದರಿಂದ ಶ್ರೀಮದಾಚಾರ್ಯರು ವ್ಯಾಖ್ಯಾನಿಸುತ್ತಿದ್ದಾರೆ-

ಯಸ್ಮಾನ್ನಾಮರೂಪಾದಯಃ ಸಂತಿ ತಸ್ಮಾಚ್ಛೃಣ್ವನ್ ಗೃಣನ್ ।
ಕ್ರಿಯಾಸು ಕ್ರಿಯಮಾಣಾಸು ಪ್ರೇರಕತ್ವೇನ ಪೂಜ್ಯತ್ವೇನ ಚ ।
ಸರ್ವಕ್ರಿಯಾಸು ಕರ್ತೃತ್ವಪೂಜ್ಯತ್ವೇನ ಜನಾರ್ದನಂ ।
ಯೋ ವೇತ್ತಿ ನೈತಿ ಸಂಸಾರಂ ತತ್ಪ್ರಸಾದಾನ್ನ ಸಂಶಯಃ ।
ಇತಿ ಕ್ರಿಯಾಯೋಗೇ ।

ಹಿಂದಿನ ಪದ್ಯದಲ್ಲಿ ಹೇಳಿದಂತೆ ಶ್ರೀಹರಿಗೆ ನಾಮ ರೂಪ ಮುಂತಾದವು ಇರುವುದರಿಂದ ಅವುಗಳ ಶ್ರವಣ ಕೀರ್ತನ ಮುಂತಾದುವನ್ನು ನಡೆಸಬೇಕು ಎಂದು ಈ ಪದ್ಯ ಹೇಳುತ್ತಿದೆ. 'ಕ್ರಿಯಾಸು ಆವಿಷ್ಟಚಿತ್ತಃ' ಎಂದರೆ, ಮಾಡುತ್ತಿರುವ ಆ ಎಲ್ಲ ಉಪಾಸನಕ್ರಿಯೆಗಳಲ್ಲಿಯೂ ಒಳಗೆ ನಿಂತು ಮಾಡಿ ಮಾಡಿಸುವವನೂ ಆ ಉಪಾಸನೆಗಳನ್ನು ಸ್ವೀಕರಿಸುವವನೂ ಅವನೆ ಎಂದು ಅನುಸಂಧಾನ ಮಾಡಬೇಕು ಎಂದರ್ಥ.

ಕ್ರಿಯಾಯೋಗ ಗ್ರಂಥದಲ್ಲಿ ಹೀಗೇ ಹೇಳಿದೆ-
'ಎಲ್ಲ ಉಪಾಸನಕ್ರಿಯೆಗಳನ್ನು ಮಾಡುವಾಗಲೂ ಅವುಗಳ ಕರ್ತನೂ

ಅವುಗಳಿಂದ ಪೂಜ್ಯನೂ ಜನಾರ್ದನನೇ ಎಂದು ಯಾರು ಅನುಸಂಧಾನ ಮಾಡುವನೋ ಅವನು ಜನಾರ್ದನನ ಅನುಗ್ರಹ ಪಾತ್ರನಾಗುವುದರಿಂದ ಸಂಸಾರದಲ್ಲಿ ಇರುವುದಿಲ್ಲ. ಇದರಲ್ಲಿ ಸಂಶಯವಿಲ್ಲ.'

❖ ❖ ❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಬ್ರಹ್ಮಾದಿ ದೇವತೆಗಳು ಸ್ತುತಿಸುತ್ತಾರೆ-

ದಿಷ್ಟ್ಯಾ ಹರೇಽಸ್ಯಾ ಭವತಃ ಪದೋ ಭುವೋ
ಭಾರೋಽಪನೀತಸ್ತವ ಜನ್ಮನೇಶಿತುಃ ।
ದಿಷ್ಟ್ಯಾಽಂಕಿತಾಂ ತ್ವತ್ಪದಕೈಃ ಸುಶೋಭನೈ
ರ್ದ್ರಕ್ಷ್ಯಾಮ ಗಾಂ ದ್ಯಾಂ ಚ ತವಾನುಕಂಪಿತಾಮ್ ॥ ೩೯ ॥

ಹೇ ಹರೇ ಜಗದೀಶನಾದ ನಿನ್ನ ಈ ಅವತಾರದಿಂದ ನಿನ್ನ ಪಾದವನ್ನು ಆಶ್ರಯಿಸಿರುವ ಭೂಮಿಯ ಭಾರ ಕಳೆಯುವುದರಲ್ಲಿ ಸಂಶಯವಿಲ್ಲ. ಇದು ಹರ್ಷದಾಯಕ. ಸುಂದರವಾದ ಧ್ವಜವಜ್ರಾಂಕುಶಾದಿ ಶುಭಚಿಹ್ನೆಗಳಿಂದೊಪ್ಪುವ ನಿನ್ನ ಕೋಮಲವಾದ ಪಾದಗಳಿಂದ ಈ ನೆಲದಲ್ಲಿ ಹೆಜ್ಜೆಗಳು ಮೂಡುವುದನ್ನೂ ಸ್ವರ್ಗದಲ್ಲಿ ನಿನ್ನ ಕರುಣೆ ಹರಿಯುವುದನ್ನೂ ನಾವು ನೋಡಲಿರುವೆವು. ಇದೂ ಹರ್ಷದಾಯಕ.

ಇಲ್ಲಿ 'ಪದೋ ಭುವಃ' ಎಂದರೆ 'ಪಾದರೂಪವಾದ ಭೂಮಿ' ಎಂದು ಮೇಲುನೋಟಕ್ಕೆ ಕಾಣುತ್ತದೆ. ಪ್ರಾಯಃ ಬೇರೆ ಎಲ್ಲ ವ್ಯಾಖ್ಯಾನಕಾರರೂ ಹಾಗೇ ಒಪ್ಪಿದ್ದಾರೆ. ವಸ್ತುತಃ ಜಡವಾದ ಭೂಮಿಯಾಗಲಿ ಅಭಿಮಾನಿಯಾದ ಧರಾದೇವಿಯಾಗಲಿ ಪರಮಾತ್ಮನ ಪಾದವಾಗಿರುವುದು ಪ್ರಮಾಣ ವಿರುದ್ಧ. ಭಾಗವತದಲ್ಲಿ ಮಾತ್ರವಲ್ಲದೆ ಭಾರತ ಮೋಕ್ಷಧರ್ಮದಲ್ಲಿಯೂ 'ಖಂ ನಾಭಿಃ, ಚರಣೌ ಕ್ಷಿತಿಃ' ಎಂದು ಪರಮಾತ್ಮನ ಪಾದ ನಾಭಿ ಮುಂತಾದ ಅವಯವಗಳನ್ನು ಭೂಮಿ ಅಂತರಿಕ್ಷ ಎಂದು ಮುಂತಾಗಿ ಹೇಳಿದ್ದುಂಟು. ಆದರೆ ಬ್ರಹ್ಮತರ್ಕವಚನ ಇದರ ನಿಜವಾದ ಅರ್ಥವನ್ನು ತಿಳಿಸುತ್ತಿದೆ-

ಖಂ ನಾಭಿಶ್ಚರಣೌ ಕ್ಷಿತಿರಿತಿ ಭವತಃ ಪದೋ ಭುವಃ ।
ಪದಾದ್ಯಾಶ್ರಯಣಾದ್ ವಿಷ್ಣೋಃ ಪೃಥಿವ್ಯಾದಿ ಪದಾದಿಕಂ ।
ತಜ್ಜತ್ವಾದ್ವಾಽಥ ಸಾದೃಶ್ಯಾದ್ ಯಥಾ ನುಭೂರ್ಮಿಗಂ ಪದಂ ॥

ಇತಿ ಬ್ರಹ್ಮತರ್ಕೇ ॥

'ಅಂತರಿಕ್ಷವು ಹರಿಯ ನಾಭಿ, ಭೂಮಿಯು ಅವನ ಪಾದಗಳು' ಎಂದು ಭಾರತ ಹೇಳಿರುವುದರಿಂದ ಭಾಗವತವೂ 'ಭವತಃ ಪದೋ ಭುವಃ' ಎಂದಿದೆ. ಎರಡಕ್ಕೂ ಅಭಿಪ್ರಾಯ ಹೀಗೆಂದು ಬ್ರಹ್ಮತರ್ಕ ಹೇಳುತ್ತದೆ-

'ಪೃಥಿವಿ ಮುಂತಾದುವು ವಿಷ್ಣುವಿನ ಪಾದ ಮುಂತಾದ ಅವಯವಗಳನ್ನು ಆಶ್ರಯಿಸಿರುವುದರಿಂದ ಆ ಅವಯವಗಳಿಂದ ಜನಿಸಿರುವುದರಿಂದ ಮತ್ತು ಸಾದೃಶ್ಯದಿಂದಲೂ ಪಾದ ಎಂದು ಮುಂತಾಗಿ ಹೇಳಲ್ಪಡುತ್ತವೆ. ನೆಲದಮೇಲೆ ಓಡಾಡುವ ಮನುಷ್ಯನ ಹೆಜ್ಜೆ ಗುರುತು ಅವನ ಪಾದದಿಂದ ಉಂಟಾದ್ದರಿಂದ ಮತ್ತು ಅದರಂತೆ ಇರುವುದರಿಂದ ಮನುಷ್ಯನ ಪಾದವೆಂದು ವ್ಯವಹಾರವಿದೆ. ಹಾಗೇ ಇದು' ಎಂದು.

❖ ❖ ❖

ದೇವಕಿಯ ಗರ್ಭದಲ್ಲಿ ಸನ್ನಿಹಿತನಾದ ಶ್ರೀಹರಿಯನ್ನು ಬ್ರಹ್ಮಾದಿ ದೇವತೆಗಳು ಸ್ತುತಿಸಿದರು-

ನ ತೇಽ ಭವಸ್ಯೇಶ ಭವಸ್ಯ ಕಾರಣಂ
ವಿನಾ ವಿನೋದಂ ಬತ ತರ್ಕಯಾಮಹೇ ।
ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ
ಕೃತಾ ಯತಸ್ತ್ವಯ್ಯಭವಾಶ್ರಯಾತ್ಮನಿ ॥ ೪೦ ॥

ಹೇ ಜಗದೀಶ, ಜನನ ರಹಿತನಾದ ನೀನು ಜನಿಸುವುದಕ್ಕೆ ನಿನ್ನ ಲೀಲೆಯೆ ಕಾರಣ ಹೊರತು ಬೇರೇನೂ ಕಾರಣವನ್ನು ನಾವು ಊಹಿಸಲಾರೆವು. ನಿನಗೆ ಜನನ ಮರಣಗಳುಂಟೆಂದು, ಇನ್ನೊಬ್ಬರಿಂದ ನಿನಗೆ ರಕ್ಷಣೆ ಬೇಕಾಗುವುದೆಂದು ಯಾರಾದರೂ ಅಂಗೀಕರಿಸಿದರೆ ಅದು ಕೇವಲ ಅವರ ಅಜ್ಞಾನದಿಂದಾದ ಕಲ್ಪನೆ ಎನ್ನಬೇಕು. ಏಕೆಂದರೆ ಜನನ ಮರಣಗಳಿಂದ ರಕ್ಷಣೆ ನೀಡುವವನೂ, ಮುಕ್ತರಿಗೆ ಆಶ್ರಯನೂ ಆಗಿರುವ ನಿನಗೆ, ಜನನ ಮರಣಾದಿಗಳು ಹೇಗೆ ಇರಬಲ್ಲುವು? ನಿನ್ನ ಇಚ್ಛೆಯಿಂದ ಲೋಕಕ್ಕೇ ಜನನ ಮರಣಾದಿಗಳು ಸಂಭವಿಸುವುವು.

ಇಲ್ಲಿ [೧]ಶ್ರೀಧರವ್ಯಾಖ್ಯಾನ ಹೇಳುತ್ತದೆ- 'ಜೀವಾತ್ಮನಲ್ಲಿ ಕೂಡ ಜನನ

೧ ಕ್ರೀಡಾಂ ವಿನಾ ತವ ಜನ್ಮಕಾರಣಂ ನಾಸ್ತೀತಿ ಕಿಂ ವಕ್ತವ್ಯಂ? ಯತೋ ಜೀವಾತ್ಮನ್ಯಪಿ ಭವಾದಯ ಸ್ತ್ವಯಿ ವಿಷಯೇ ಯಾ ಅವಿದ್ಯಾ ತಯಾ ಕೃತಾ ನ ಪರಮಾರ್ಥತಃ ಸಂತೀತಿ ।
-ಶ್ರೀಧರ

ಮರಣಾದಿಗಳು ನಿನ್ನ ವಿಷಯದಲ್ಲಿರುವ ಅವಿದ್ಯೆಯಿಂದಾದವುಗಳು ಹೊರತು ಪಾರಮಾರ್ಥಿಕವಲ್ಲ. ಅದರಿಂದ ನಿನಗೆ ಜನನ ಕಾರಣವು ಕ್ರೀಡೆ ಹೊರತು ಬೇರೇನೂ ಇಲ್ಲ ಎಂದು ಬೇರೇನು ಹೇಳಬೇಕು?' ಎಂದು. 'ತ್ವಯಿ ಅವಿದ್ಯಯಾ' 'ನಿನ್ನಲ್ಲಿರುವ ಅವಿದ್ಯೆ'ಯಿಂದ ಎಂದು ಅನ್ವಯ ಮಾಡಿದರೆ ತಪ್ಪಾಗುತ್ತದೆ ಎಂದು ಆಲೋಚಿಸಿ 'ನಿನ್ನ ವಿಷಯದಲ್ಲಿರುವ ಅವಿದ್ಯೆ' ಎಂದು ಅನ್ವಯ ಮಾಡಿದ್ದಾರೆ. ಏಕೆಂಬುದು ತಿಳಿಯದು. ಈಶ್ವರನಲ್ಲಿ ಮಾಯೆ ಇದೆ. ಅದೂ ಅವಿದ್ಯೆಯೆ ತಾನೆ?

ವಸ್ತುತಃ ಅವಿದ್ಯೆಯಿಂದ ಒಂದೇ ಪರಬ್ರಹ್ಮ ಜೀವ ಈಶ್ವರ ಎಂದು ಎರಡಾಗಿದೆ. ಅದರಿಂದ ಅವಿದ್ಯೆ ಈಶ್ವರನಲ್ಲಿ ಹೇಗೆ ಇಲ್ಲವೋ ಹಾಗೇ ಜೀವನಲ್ಲಿಯೂ ಇಲ್ಲ. ಪರಬ್ರಹ್ಮನಲ್ಲಿಯೇ ಇದೆ, ಪರಬ್ರಹ್ಮನ ವಿಷಯದಲ್ಲಿಯೇ ಇದೆ-'ಆಶ್ರಯತ್ವ ವಿಷಯತ್ವಭಾಗಿನೀ ನಿರ್ವಿಶೇಷಚಿತಿರೇವ ಕೇವಲಾ' ಎಂದು ಅದ್ವೈತಮತ.

ಹೀಗೆ ಜೀವ ಈಶ್ವರರಲ್ಲಿ ಇಬ್ಬರಲ್ಲಿಯೂ ಇಲ್ಲದಿರುವ ಅವಿದ್ಯೆ ತಾನೇ ಪರಬ್ರಹ್ಮನಲ್ಲಿದ್ದು ಅಖಂಡನಾದ ಅವನಲ್ಲಿ ಜೀವ ಈಶ್ವರರೆಂದು ಭೇದವನ್ನು ಕಲ್ಪಿಸಿಕೊಂಡು ಜೀವನಲ್ಲಿ ಮಾತ್ರ ಸಂಸಾರವನ್ನು ಜನನಮರಣಾದಿಗಳನ್ನು ಉಂಟುಮಾಡುತ್ತದೆ. ಇದು ಸ್ವತಃ ಅವಿದ್ಯೆಯದೇ ಕ್ರೀಡೆ ಹೊರತು, ಈಶ್ವರನ ಕ್ರೀಡೆಯಲ್ಲ. ಈಶ್ವರನ ಕ್ರೀಡೆ ಎಂದು ಸ್ತುತಿ, ಮುಖಸ್ತುತಿ ಮಾಡುತ್ತಿದ್ದಾರೆ, ಸ್ವತಃ ಈಶ್ವರರೇ ಆಗಿರುವ ಈ ಬ್ರಹ್ಮರುದ್ರರು! ಮಾಯೆಯಿಂದಾಗಿರುವ ಈಶ್ವರನಿಗೆ ಮಾಯೆ ತಾನೆ ಅಧೀನವಾದೀತೆ?

ವಸ್ತುತಃ ಬ್ರಹ್ಮತರ್ಕವಚನವೇ ಹೇಳುವಂತೆ 'ಜೀವರಿಗೆ ಜನನಾದಿಗಳು ಹರೀಚ್ಛೆಯಿಂದಲೆ ಉಂಟಾಗುತ್ತವೆ ಎಂದಮೇಲೆ ಹರಿಗೆ ಜನನ ಮರಣಗಳು ಹೇಗೆ ಕೂಡುತ್ತವೆ? ಹರಿಯಲ್ಲಿ ಅವುಗಳನ್ನು ಜನರು ಅಜ್ಞಾನದಿಂದ ಕಲ್ಪಿಸುತ್ತಾರಷ್ಟೆ.' ಎನ್ನುವುದೇ ಭಾಗವತದ ಅಭಿಪ್ರಾಯ. 'ಅವಿದ್ಯಯಾ' ಎಂದರೆ 'ಜನರ ಅಜ್ಞಾನದಿಂದ' ಎಂದು ಒಂದು ಅರ್ಥ. 'ಪರಮಾತ್ಮನ ಇಚ್ಛೆಯಿಂದ' ಎಂದು ಇನ್ನೊಂದರ್ಥ.

ಮಹಾಮಾಯೇತ್ಯವಿದ್ಯೇತಿ ನಿಯತಿ ರ್ಮೋಹಿನೀತಿ ಚ ।
ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾನಂತ ಕಥ್ಯತೇ ॥

'ಮಹಾಮಾಯೆ, ಅವಿದ್ಯೆ, ನಿಯತಿ, ಮೋಹಿನಿ, ಪ್ರಕೃತಿ, ವಾಸನಾ ಎಂದು ಈ ಎಲ್ಲ ಶಬ್ದಗಳಿಂದ, ಹೇ ಅನಂತ, ನಿನ್ನ ಇಚ್ಛೆಯೇ ಕರೆಸಿಕೊಳ್ಳುತ್ತದೆ' ಎಂದು ಶ್ರೀಮದಾಚಾರ್ಯರು ಹಿಂದೆಯೇ (ಭಾಗ.ತಾ.೪.೧೧.೧೫) ಅದನ್ನು ತಿಳಿಸಿದ್ದಾರೆ.

ಅಜ್ಞಾನಾದೇವ ಮನ್ಯಂತೇ ವಿಷ್ಣೋರ್ಜನಿಮೃತೀ ನರಾಃ।
ಸ್ಥಿತಿರೂಪಸ್ಯ ಚಾನ್ಯಸ್ಮಾತ್ ಸ್ಥಿತಿಂ ಮೋಕ್ಷಾಶ್ರಯಸ್ಯ ಹಿ।
ಸ್ವೇಚ್ಛಯಾ ಹಿ ಜನಿಂ ಭಂಗಂ ಸ್ಥಿತಿಂ ಚಾಸೌ ಕರೋತ್ಯಜಃ।
ಸರ್ವಸ್ಯ ಜಗತೋ ಯಸ್ಮಾತ್ ತಜ್ಜನ್ಮಾದಿಃ ಕುತೋ ಭವೇತ್?
ಇತಿ ಚ ॥

ಅಜ್ಞಜನರು ವಿಷ್ಣುವಿಗೆ ಜನನಮರಣಗಳನ್ನು ತಮ್ಮ ಅಜ್ಞಾನದಿಂದಲೇ ಕಲ್ಪಿಸಿಕೊಳ್ಳುವರು. ಜಗದಾಧಾರರೂಪನಾದವನಿಗೆ ಅನ್ಯರಿಂದ ರಕ್ಷಣೆ ಬೇಕೆಂದೂ ಭಾವಿಸುವರು. ಇದು 'ಅವಿದ್ಯಯಾ' ಅಜ್ಞಾನಮೂಲಕವೆ. ಏಕೆಂದರೆ ಯಾರಿಂದಲೂ ಆಗದಂಥ ಮೋಕ್ಷದಾನ ಕಾರ್ಯದಲ್ಲಿ ಸಮರ್ಥನಾದ ಸರ್ವಶಕ್ತನಾದ ಹರಿಗೆ ಅನ್ಯರಿಂದ ಜನನ ಮರಣಗಳು ಮತ್ತು ರಕ್ಷಣೆ ಆಗಬೇಕಾಗಿಲ್ಲ. ಮತ್ತು 'ಅವಿದ್ಯಯಾ' ತನ್ನ ಸ್ವರೂಪಭೂತವಾದ ಇಚ್ಛೆಯಿಂದ ಎಲ್ಲ ಜಗತ್ತಿಗೂ ಉತ್ಪತ್ತಿ ನಾಶ ರಕ್ಷಣೆಗಳನ್ನು ಮಾಡುವವನು ಅವನೇ ಆಗಿರುವುದರಿಂದ ಅವನಿಗೆ ಉತ್ಪತ್ತಿ ಮುಂತಾದುವು ಯಾರಿಂದ ಆದಾವು? ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ತೃತೀಯೋಽಧ್ಯಾಯಃ

❖

ಅಧ್ಯಾಯ ೪

ಅಧ್ಯಾಯ ಸಾರಾಂಶ

ಶ್ರಾವಣ ಬಹುಳಾಷ್ಟಮಿ ಮಧ್ಯರಾತ್ರಿ ಚಂದ್ರೋದಯ ಕಾಲ. ಪ್ರಜಾಪತಿದೇವತಾಕ ರೋಹಿಣೀ ನಕ್ಷತ್ರ ಯೋಗವಿದ್ದಿತು. ಗ್ರಹಗಳು ಉಚ್ಚಸ್ಥಾನದಲ್ಲಿದ್ದರು. ನಂದಾ ಭದ್ರಾದಿ ಕುಯೋಗ ಗಳಿರಲಿಲ್ಲ. ಅಂಥ ಪ್ರಶಸ್ತಕಾಲದಲ್ಲಿ ಶ್ರೀಕೃಷ್ಣ ಅವತರಿಸಿದ. ಅದನ್ನೂ ಸೂಚಿಸುವು ದಕ್ಕೆ ದಿಕ್ಕುಗಳು ಪ್ರಸನ್ನವಾದುವು. ಭೂಮಿ ಮಂಗಳಮಯ ವಾಯಿತು. ನದಿಗಳಲ್ಲಿ ನೀರು ತಿಳಿಯಾಯಿತು. ನೈದಿಲೆಗಳು ಅರಳಿದುವು. ಮರಗಳಲ್ಲಿ ಹಣ್ಣು ಹೂಗೊಂಚಲು ಗಳು, ಹಕ್ಕಿಗಳ ಕಲರವಗಳು, ಸುಗಂಧಭರಿತವಾದ ಸುಖಸ್ಪರ್ಶ ಉಳ್ಳ ಗಾಳಿ. ಅಂತರಿಕ್ಷದಲ್ಲಿ ದೇವ ದುಂದುಭಿ ಧ್ವನಿಗಳು, ಗಂಧರ್ವ ಕಿನ್ನರರ ಗಾಯನಗಳು, ಸಿದ್ಧರ ಚಾರಣರ ಸ್ತೋತ್ರಗಳು. ವಿದ್ಯಾಧರ ಅಪ್ಸರೆಯರ ನರ್ತನ. ದೇವತೆ ಗಳ ಮುನಿಗಳ ಪುಷ್ಪವೃಷ್ಟಿಗಳು. ಮೋಡಗಳ ಮೆಲುದನಿಯ ಗುಡುಗುಗಳು ಕಂಡುಬಂದುವು. ಎಲ್ಲರ ಹೃದಯಗಳಲ್ಲಿ ನೆಲೆಸಿರುವ ವಿಷ್ಣು ದೇವಕಿಯ ಉದರದಲ್ಲಿ ಪ್ರಾದುರ್ಭವಿಸಿದ, ಹುಣ್ಣಿಮೆ ದಿನ ಪೂರ್ವದಿಕ್ಕಿನಲ್ಲಿ ಪೂರ್ಣಚಂದ್ರ ನಂದಿಸುವಂತೆ.

ಆತ ಅದ್ಭುತ ಬಾಲಕ. ಕಮಲದಂಥ ಕಣ್ಣಿನವ. ಶಂಖಗದೆ ಮುಂತಾದ ಆಯುಧಗಳನ್ನು ಧರಿಸಿದ ನಾಲ್ಕು ಕೈಗಳುಳ್ಳವನು. ಎದೆಯಲ್ಲಿ ಶ್ರೀವತ್ಸ, ಕೊರಳಲ್ಲಿ ಹೊಳೆಯುವ ಕೌಸ್ತುಭಮಣಿ. ಪೀತಾಂಬರ ಉಟ್ಟು ಉತ್ತಮವಾದ ಉಡಿದಾರ ತೋಳ್ಬಳೆ ಕೈಬಳೆ ಗಳನ್ನೂ ವಜ್ರವೈಡೂರ್ಯ ಖಚಿತವಾದ ಕಿರೀಟ ಕುಂಡಲಗಳನ್ನೂ ಧರಿಸಿದ್ದ ನೀಲ ಮೇಘಶ್ಯಾಮ ವರ್ಣದ ಆ ಬಾಲಕನನ್ನು ಅಚ್ಚರಿಯಿಂದ ಬಿಟ್ಟಕಣ್ಣುಗಳಿಂದ ನೋಡಿದ ವಸುದೇವ. ಸಂಭ್ರಮದಿಂದ ಮನಸ್ಸಿನಲ್ಲೇ ಬ್ರಾಹ್ಮಣರಿಗೆ ಹತ್ತುಸಾವಿರ ಗೋದಾನ ಮಾಡಿದ. ಕಂಸನ ಭಯವನ್ನು ಮರೆತು ತಲೆಬಾಗಿ ಕೈಮುಗಿದು ಸ್ತುತಿಸಿದ-

ನೀನು ಶುದ್ಧ ಜ್ಞಾನಾನಂದ ಸ್ವರೂಪನಾದ ಪ್ರಕೃತಿ

ವಿಲಕ್ಷಣನಾದ ಲಕ್ಷ್ಮೀಪತಿ ಪರಮಪುರುಷ ನಾರಾಯಣನೆಂದು ನಾನು ಬಲ್ಲೆ. ನಿನ್ನಿಚ್ಛೆಯಂತೆ ನಿನ್ನ ಅಧೀನವಾದ ತ್ರಿಗುಣಾತ್ಮಕ ಪ್ರಕೃತಿಯಿಂದ ಜಗತ್ತನ್ನು ಸೃಜಿಸಿ ಅದರೊಳಗೂ ಹೊರಗೂ ನಿಯಾಮಕನಾಗಿರುವೆ. ಅದರ ದೋಷಗಳಿಂದ ಲೇಪವಿಲ್ಲದವ ನಾಗಿರುವೆ. ಬ್ರಹ್ಮಾಂಡದಲ್ಲಿ ಮಾತ್ರವಲ್ಲದೆ ಜೀವರ ಶರೀರ ದೊಳಗೂ ನೀನೇ ಸ್ವತಂತ್ರ. ಏಕೆಂದರೆ ಶರೀರದಲ್ಲಿ ಜೀವರಿಗೆ ತಮ್ಮ ಇಚ್ಛೆಯಂತೆ ಜ್ಞಾನ ಬರುತ್ತದೆ ಎಂದಿಲ್ಲ. ಜೀವರೊಂದಿಗೆ ನೀನೂ ಎಲ್ಲ ಕಾರ್ಯಗಳಲ್ಲಿ ಜೊತೆಗೇ ಇರುವುದರಿಂದ ಅವರಿಗಿಂತ ನೀನು ಬೇರೆಯಲ್ಲವೆಂದು ಭಾವಿಸು ತ್ತಾರೆ ಅಜ್ಞಾನಿಗಳು. ಇದು ವೇದಸಮ್ಮತವಲ್ಲ. 'ಅಭೀದಮೇಕಂ' ಎಂದು ಮುಂತಾದ ಶ್ರುತಿಗಳು ಸ್ಪಷ್ಟವಾಗಿ ಭೇದವನ್ನು ಹೇಳುತ್ತಿವೆ.

ಮಣ್ಣು ಮಡಿಕೆಯಾಗುವಂತೆ ನೀನು ಪ್ರಪಂಚವಾಗಿ ಪರಿಣಮಿಸುವುದಿಲ್ಲ. ಕುಂಬಾರ ಮಡಿಕೆ ಮಾಡುವಲ್ಲಿ ಶ್ರಮಪಡು ವಂತೆ ನೀನು ಶ್ರಮಪಡುವುದೂ ಇಲ್ಲ. ಸರ್ವಶಕ್ತನಾದ್ದರಿಂದ ನಿನ್ನಲ್ಲಿ ಇದು ಕೂಡುತ್ತದೆ. ನೀನು ಪ್ರಪಂಚದಲ್ಲಿ ಸತ್ವನಾಮಕ ಶುದ್ಧಸತ್ವಗುಣದಿಂದ ಜ್ಞಾನಕಾರ್ಯ ಮಾಡಲು ಶುಕ್ಲವರ್ಣನೂ, ರಜೋನಾಮಕ ಶುದ್ಧಸತ್ವದಿಂದ ಜ್ಞಾನಾಸಕ್ತಿ ಉಂಟುಮಾಡಲು ರಕ್ತವರ್ಣನೂ, ತಮೋನಾಮಕ ಶುದ್ಧಸತ್ವದಿಂದ ಭೂಭಾರನಾಶ ಮಾಡಲು ಕೃಷ್ಣವರ್ಣನೂ ಆಗುವಿ. ಇದೀಗ ನೀನು ಕೃಷ್ಣವರ್ಣ ದಿಂದ ಅವತರಿಸುವಿ ಎಂದು ನಾರದರ ಮುಖದಿಂದ ಕೇಳಿ ತಿಳಿದ ದುಷ್ಟಕಂಸ ನಿನ್ನ ಅಣ್ಣಂದಿರನ್ನು ನೀನೇ ಎಂಬ ಭ್ರಮೆಯಿಂದ ಕೊಂದಿದ್ದಾನೆ. ನಿನ್ನನ್ನೂ ಕೊಲ್ಲಲು ಈಗಲೇ ಬರುತ್ತಾನೆ'.

ದೇವಕಿ ಸ್ತುತಿಸಿದಳು. 'ನಿನ್ನ ಅನುಗ್ರಹವಿಲ್ಲದೆ ಯಾರೂ ನಿನ್ನನ್ನು ಕಾಣಲಾರರು. ತ್ರಿಗುಣವರ್ಜಿತ ನಿರ್ವಿಕಾರ ನಿರ್ದೋಷ ಗುಣ ಸ್ವರೂಪನಾದ ನಿನಗಿಂತ ಉತ್ತಮರು ಯಾರೂ ಇಲ್ಲ. ಯಾವ ಫಲವನ್ನೂ ತನಗಾಗಿ ಬಯಸದೆ ಜೀವಾತ್ಮರ ಸ್ವರೂಪವನ್ನು ಮುಕ್ತಿಯಲ್ಲಿ ಬೆಳಗಿಸುವ ಸಾಕ್ಷಾತ್ ವಿಷ್ಣು ನೀನೆಂದು ವೇದಗಳು ಕೊಂಡಾಡುತ್ತಿವೆ. ಎಲ್ಲ ಜಗತ್ತಿಗೂ ಪ್ರೇರಕವಾದ ಕಾಲಕ್ಕೂ ನೀನೇ ನಿಯಾಮಕ. ಮಾನವ ಮೃತ್ಯು ಎಂಬ ಸರ್ಪದ ಭಯದಿಂದ

ಮುಕ್ತನಾಗಲು ನಿನ್ನ ಪಾದಕಮಲವನ್ನೇ ಹೊಂದಬೇಕು. ಈಗ ಕಂಸನ ಭಯದಿಂದ ನಮ್ಮನ್ನು ಕಾಪಾಡು. ಧ್ಯಾನಗೋಚರ ವಾಗುವ ಲೋಕವಿಲಕ್ಷಣವಾದ ನಿನ್ನ ಈ ರೂಪವನ್ನು ಮರೆಮಾಡು. ನೀನು ಅವತರಿಸಿದ್ದನ್ನು ಪಾಪಿಕಂಸ ತಿಳಿಯದಿರಲಿ. ಅವನು ತಿಳಿದಾನೆಂದು ನನಗೆ ಭಯವಾಗುತ್ತದೆ. ಏಕೆಂದರೆ ನೀನು ಸರ್ವಶಕ್ತನಾದ ಭಗವಂತನೆಂಬ ಪ್ರಜ್ಞೆ ಚಂಚಲ ಬುದ್ಧಿಯವಳಾದ ನನಗೆ ಸದಾ ಇರುವುದಿಲ್ಲ. ಲಯಕಾಲದಲ್ಲಿ ಇಡಿ ಬ್ರಹ್ಮಾಂಡವನ್ನು ಉದರದಲ್ಲಿ ಎಲ್ಲೋ ಒಂದುಕಡೆ ಧರಿಸುವ ನೀನು ನನ್ನುದರದಲ್ಲಿದ್ದು ಅಜ್ಞ ಮನುಷ್ಯ ಲೋಕಕ್ಕೆ ದೊಡ್ಡ ವಂಚನೆ ಮಾಡಿರುವೆ'.

ಭಗವಂತ ನುಡಿದ, 'ನೀವು ಹಿಂದೆ ಸ್ವಾಯಂಭುವ ಮನ್ವಂತರದಲ್ಲಿ ಸುತಪ ಪೃಶ್ನಿ ದಂಪತಿಗಳಾಗಿ ಜನಿಸಿ, ಪ್ರಜಾಸೃಷ್ಟಿಗೆ ಚತುರ್ಮುಖ ನಿಂದ ಆದೇಶ ಪಡೆದು, ದೇವಮಾನದ ಹನ್ನೆರಡು ಸಾವಿರ ವರ್ಷಕಾಲ ಕಠಿಣ ತಪಸ್ಸು ಮಾಡಿದಿರಿ. ನಾನು ಒಲಿದು ಮೈದೋರಿ ದರೆ ನೀವು ನನ್ನಲ್ಲಿ ಮೋಕ್ಷವನ್ನು ಬೇಡಲಿಲ್ಲ. ಏಕೆಂದರೆ ನೀವು ದಂಪತಿಗಳಾಗಿದ್ದೂ ವಿಷಯಸುಖ ಅನುಭವಿಸಿರ ಲಿಲ್ಲ. ನಿಮಗೆ ಮಕ್ಕಳಿರಲಿಲ್ಲ. ಅದಕ್ಕೆ ನಾನೇ ಮಾಯೆಯಿಂದ ನಿಮ್ಮನ್ನು ಮೋಹಗೊಳಿಸಿದೆ. ಅದರಿಂದ ನನ್ನನ್ನೇ ಮಗನನ್ನಾಗಿ ಪಡೆದು ನೀವು ವಿಷಯಸುಖವನ್ನು ಅನುಭವಿಸಿದಿರಿ. ಆಗ ನಾನು ಪೃಶ್ನಿಗರ್ಭನೆಂಬ ಮಗನಾಗಿ ಅವತರಿಸಿದೆ. ಬಳಿಕ ನೀವು ಕಶ್ಯಪ ಅದಿತಿ ದಂಪತಿಗಳಾದಾಗಲೂ ನಾನು ಮಗನಾಗಿ ಅವತರಿಸಿದೆ. ಉಪೇಂದ್ರ ನೆಂದೂ ವಾಮನನೆಂದೂ ಕರೆಸಿಕೊಂಡೆ. ಇದೀಗ ನೀವು ವಸುದೇವ ದೇವಕೀ ದಂಪತಿಗಳಾಗಿರುವಿರಿ. ಹಿಂದಿನಂತೆ ಅದೇ ಚತುರ್ಭುಜ ರೂಪದಿಂದ ನಾನು ಮಗನಾಗಿ ಅವತರಿಸಿದ್ದೇನೆ. ನಾನು ಈ ರೂಪವನ್ನು ನಿಮಗೆ ತೋರಿಸಿದ್ದು ನಿಮಗೆ ನನ್ನ ಹಿಂದಿನ ಅವತಾರಗಳ ಸ್ಮರಣೆಗಾಗಿ. ಮನುಷ್ಯ ರೂಪದಿಂದಲೇ ಅವತರಿಸಿದರೆ ನನ್ನ ಅವತಾರದ ಬಗ್ಗೆ ನಿಮಗೆ ಜ್ಞಾನ ಉಂಟಾಗಲಾರದು ಎಂದು.' ಹೀಗೆ ಹೇಳಿ ಭಗವಂತ ಮಾನವ ಶಿಶುರೂಪ ತಳೆದ.

ಬಳಿಕ ಅವನಾಜ್ಞೆಯಂತೆ ವಸುದೇವ ಅವನನ್ನು ಎತ್ತಿಕೊಂಡು

ಕಾರಾಗೃಹದಿಂದ ಹೊರಗೆ ಬಂದ. ಕಾವಲುಗಾರರು ಯೋಗ ಮಾಯೆಯ ಪ್ರಭಾವದಿಂದ ನಿದ್ದೆಯಲ್ಲಿ ಮೈಮರೆತಿದ್ದರು. ಬಾಗಿಲು ಗಳು ತಾವಾಗಿ ತೆರೆದುಕೊಂಡುವು. ಮೋಡಗಳು ಮೆಲ್ಲನೆ ಗುಡು ಗುತ್ತ ಸಣ್ಣಗೆ ಮಳೆಗರೆದುವು. ಆದಿಶೇಷ ಕೊಡೆಯಂತೆ ಹೆಡೆ ಎತ್ತಿ ಹಿಡಿದ. ಸತತವಾಗಿ ಬಿದ್ದ ಮಳೆಯಿಂದ ಯಮುನಾನದಿ ತುಂಬಿ ಹರಿಯುತ್ತಿದ್ದರೂ ಕೃಷ್ಣನಿಗೆ ಮಾರ್ಗಕೊಟ್ಟಳು. ಅತ್ತ ನಂದ ಗೋಕುಲದಲ್ಲಿ ದೇವಿ ದುರ್ಗೆ ಯಶೋದೆಯ ಮಗಳಾಗಿ ಅವತರಿಸಿದಳು. ಗೋಕುಲದ ಗೋವಳರೆಲ್ಲರೂ ನಿದ್ದೆಯಲ್ಲಿ ಮೈಮರೆಯುವಂತೆ ಮಾಡಿದಳು. ವಸುದೇವ ಕೃಷ್ಣನನ್ನು ಯಶೋದೆಯ ಬಳಿ ಹಾಸಿಗೆಯಲ್ಲಿಟ್ಟು ದೇವಿಯನ್ನೆತ್ತಿಕೊಂಡು ಮಥುರೆಗೆ ಹಿಂತಿರುಗಿದ. ದೇವಕಿಯ ಹಾಸಿಗೆಯಲ್ಲಿ ಕನ್ಯೆಯನ್ನು ಮಲಗಿಸಿ ತನ್ನ ಕಾಲುಗಳಿಗೆ ಹಿಂದಿನಂತೆಯೆ ಕಬ್ಬಿಣದ ಬೇಡಿಗಳನ್ನು ಹಾಕಿಕೊಂಡು ಏನೂ ತಿಳಿಯದವನಂತೆ ಕುಳಿತ. ಯಶೋದೆಗೆ ತನಗೊಂದು ಮಗುವಾಗಿದ್ದುದು ಮಾತ್ರ ತಿಳಿದಿತ್ತು, ಅದು ಗಂಡೋ ಹೆಣ್ಣೋ ಎಂಬುದು ತಿಳಿದಿರಲಿಲ್ಲ. ಪ್ರಸವದ ಶ್ರಮ ಯೋಗಮಾಯೆಯ ಪ್ರಭಾವಗಳಿಂದ ಅವಳು ಪೂರ್ತಿಯಾಗಿ ಮೈಮರೆತು ಮಲಗಿದ್ದಳು.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾಽಗ್ರೇ ತ್ರಿಗುಣಾತ್ಮಕಂ ।
ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ ॥ ೧೫ ॥

ಶ್ರೀಹರಿ, ನೀನು ನಿನ್ನಿಚ್ಛೆಯಿಂದ ನಿನ್ನ ಅಧೀನವಾದ ಪ್ರಕೃತಿಯಿಂದ ತ್ರಿಗುಣಾತ್ಮಕವಾದ ಈ ಪ್ರಪಂಚವನ್ನು ಸೃಜಿಸಿ ಅದರೊಳಗೆ ನಿಯಾಮಕ ನಾಗಿ ಪ್ರವೇಶಿಸಿರುವೆ. ಹೊರಗೂ ಇರುವುದರಿಂದ ಅಪ್ರವಿಷ್ಟನಾಗಿದ್ದು ಪ್ರವಿಷ್ಟನಂತೆಯೂ ಗೋಚರಿಸುವೆ.

'ತತ್‌ಸೃಷ್ಟ್ವಾತದೇವಾನುಪ್ರಾವಿಶತ್' ಎಂಬಂತೆ ಶ್ರೀಹರಿ ಪ್ರಪಂಚದೊಳಗೆ ಪ್ರವೇಶಿಸಿದ್ದಾನೆ. ಆದರೆ ಹೊರಗೂ ಇರುವುದರಿಂದ ಅವನು ಅಪ್ರವಿಷ್ಟನಾಗಿದ್ದಾನೆ.

ಬಾವಿಗೆ ಬಿದ್ದ ತಂಬಿಗೆ ಬಾವಿನೀರನ್ನು ಪ್ರವೇಶಿಸುತ್ತದೆ ಹಕ್ಕಿಗೂಡನ್ನು ಪ್ರವೇಶಿಸುವಂತೆ ಹೊರತು ಬಾವಿನೀರು ತಂಬಿಗೆಯನ್ನು ಪ್ರವೇಶಿಸುವುದಿಲ್ಲ. ನೀರು ಅಪ್ರವಿಷ್ಟವೆನಿಸುತ್ತದೆ. ಏಕೆಂದರೆ ಅದು ತಂಬಿಗೆಯ ಹೊರಗೂ ಇರುತ್ತದೆ. ಆದರೆ ತಂಬಿಗೆಯ ಒಳಗೂ ನೀರು ಇರುವುದರಿಂದ ಪ್ರವಿಷ್ಟವೂ ಹೌದು. ತಂಬಿಗೆಯನ್ನು ಹೊರಗೆ ತಂದು ಬೇರೆ ನೀರಿನಿಂದ ತುಂಬಿಸಿದರೆ ಆ ನೀರು ಹೊರಗೆ ಇರುವುದಿಲ್ಲ. ತಂಬಿಗೆಯೊಳಗೇ ಪ್ರವಿಷ್ಟವಾಗಿರುತ್ತದೆ. ಈ ಅರ್ಥದಲ್ಲಿ ಶ್ರೀಹರಿಯನ್ನು ಪ್ರಪಂಚದೊಳಗೆ ಪ್ರವಿಷ್ಟನೆನ್ನುವಂತಿಲ್ಲ. ಅದರಿಂದ ಪ್ರವಿಷ್ಟನಂತೆ ಎನ್ನಬೇಕು. ಹೀಗೆ ಶ್ರೀಹರಿ ಪ್ರಪಂಚದಲ್ಲಿ ಪ್ರವಿಷ್ಟನೂ ಹೌದು, ಅಪ್ರವಿಷ್ಟನೂ ಹೌದು, ಮತ್ತು ಪ್ರವಿಷ್ಟನಂತೆಯೂ ಹೌದು. ಇದನ್ನು ಬ್ರಹ್ಮತರ್ಕವಚನ ಸ್ಪಷ್ಟವಾಗಿ ಹೇಳಿದೆ. ಇದರಿಂದ 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಎಂದು ಹೇಳಿದ ಪ್ರವಿಷ್ಟತ್ವವನ್ನು ಔಪಚಾರಿಕವೆನ್ನದೆ ಮುಖ್ಯವೆಂದೇ ಸ್ವೀಕರಿಸಿದಂತಾಗುವುದು.

[೧]ಶ್ರೀಧರವ್ಯಾಖ್ಯಾನ ಪ್ರವಿಷ್ಟತ್ವವನ್ನು ಔಪಚಾರಿಕ ಎನ್ನುತ್ತದೆ. ಭಾಗವತ ಶ್ಲೋಕವೂ 'ಅಪ್ರವಿಷ್ಟಃ ಪ್ರವಿಷ್ಟ ಇವ' ಎನ್ನುತ್ತದೆ ಹೊರತು 'ಪ್ರವಿಷ್ಟಃ' ಎನ್ನುವುದಿಲ್ಲ. ಆದರೆ ಹಿಂದೆ, 'ಆವಿವೇಶಾಂಶ ಭಾಗೇನ ಮನ ಆನಕದುಂದುಭೇಃ' ಎಂದು ಸ್ಪಷ್ಟವಾಗಿ ಪ್ರವೇಶವನ್ನು ಹೇಳಿದೆ ಭಾಗವತ. ಅದನ್ನು ಶ್ರೀಧರವ್ಯಾಖ್ಯಾನ ಬಲಾತ್ಕಾರವಾಗಿ,

'ಮನ ಆವಿವೇಶ ಮನಸ್ಯಾವಿರ್ಬಭೂವ'

ಪ್ರವೇಶವಲ್ಲ, ಕೇವಲ ಆವಿರ್ಭಾವ ಎಂದು ವ್ಯಾಖ್ಯಾನಿಸಿದೆ !

ಪ್ರವೇಶವನ್ನು ಒಪ್ಪಿದರೆ ಪರಬ್ರಹ್ಮನ ಅಪರಿಚ್ಛಿನ್ನತ್ವಕ್ಕೆ ಹಾನಿಯಾಗುವುದು,

---

೧. ವಸುದೇವಃ ಪ್ರಥಮಂ ಪುತ್ರಬುದ್ಧ್ಯಾ ಪಶ್ಯಂಸ್ತಂ ಪರಿಷ್ವಜ್ಯಾಹ ವಿದಿತೋಽಸೀತಿ । ಕಥಂ ವಿದಿತೋಽಸ್ಮಿ? ಭವಾನ್ ಪ್ರಕೃತೇಃ ಪರಃ ಪುರುಷ ಇತಿ । ನನು ಕಿಮಾಶ್ಚರ್ಯಂ ? ಪುರುಷಸ್ಯ ಪ್ರಕೃತೇರನ್ಯತ್ವಾದೇವೇತ್ಯತ ಆಹ ಸಾಕ್ಷಾದಿತಿ । ಪ್ರತ್ಯಕ್ಷತ ಇತ್ಯರ್ಥಃ । ಕೇವಲಶ್ಚಾಸಾವನು ಭವಶ್ಚಾನಂದಶ್ಚ ತಾವೇವ ಸ್ವರೂಪಂ ಯಸ್ಯ ಸಃ । ಕಿಂಚ ಸರ್ವಬುದ್ಧಿದೃಕ್ । ನ ಹ್ಯೇವಂಭೂತೋ ದೃಶ್ಯೋ ಭವತೀತ್ಯರ್ಥಃ । ನನು ದೇವಕೀಜಠರಂ ಪ್ರವಿಷ್ಟಸ್ಯ ಕಿಮಿಯಮತಿಸ್ತುತಿಃ ಕ್ರಿಯತೇಽತ ಆಹ ಸ ಏವೇತಿ । ಸ ಏವ ಉಕ್ತಸ್ವರೂಪ ಏವ ತ್ವಂ, ನ ದೇವಕೀಜಠರೇ ಪ್ರವಿಷ್ಟ ಇತ್ಯರ್ಥಃ । ನನು ವಿಶ್ವಂ ಸೃಷ್ಟ್ವಾ ತದನು ಪ್ರವಿಷ್ಟಸ್ಯ ಕಿಮೇತದ್ ಬಹು? ಅತ ಆಹ ಪ್ರಕೃತ್ಯೇತಿ ಸ್ವಮಾಯಯಾ ಸೃಷ್ಟ್ವಾ ತದನು ತ್ವಮಪ್ರವಿಷ್ಟ ಏವೇತಿ । ನನು ತರ್ಹಿ ಕಥಂ ಶ್ರುತ್ಯೋಚ್ಯತೇ 'ತತ್ ಸೃಷ್ಟ್ವಾ ತದೇವಾನುಪ್ರಾವಿಶದಿ'ತಿ? ಅತ ಆಹ ಪ್ರವಿಷ್ಟ ಇವೇತಿ ಭಾವ್ಯಸೇ ನಿರೂಪ್ಯಸೇ ಪ್ರತ್ಯಕ್ಷತೋ ವಾ ಸದ್ರೂಪೇಣ ವಾ ಪ್ರವಿಷ್ಟ ಇವ ಲಕ್ಷ್ಯಸೇ ।
-ಶ್ರೀಧರಃ

ಕೇವಲಾನುಭವಾನಂದ ಸ್ವರೂಪತ್ವ ಸರ್ವಬುದ್ಧಿದೃಕ್ತ್ವಗಳು ಪರಿಚ್ಛಿನ್ನವಾದ ವಸ್ತುವಿಗೆ ಕೂಡಲಾರದು ಎನ್ನುವ ಭೀತಿ ಅವರಿಗೆ.

ವಸ್ತುತಃ ಪರಮಾತ್ಮನ ರೂಪ ಪರಿಚ್ಛಿನ್ನವಾದ ಮಾತ್ರಕ್ಕೆ ಜ್ಞಾನಾನಂದ ಸ್ವರೂಪತ್ವಕ್ಕೆ ಹಾನಿಯಾಗುವುದಿಲ್ಲ. ಜೀವರು ಪರಿಚ್ಛಿನ್ನರು, ಅಣುಪರಿಮಾಣ ದವರು. ಆದರೂ ಅವರ ಸ್ವರೂಪ ಜ್ಞಾನಾನಂದಮಯವೆ. ಮತ್ತು ಪರಮಾತ್ಮನ ರೂಪ ಏಕಕಾಲದಲ್ಲಿ ಅಣೋರಣೀಯವೂ ಮಹತೋಮಹೀಯವೂ ಆಗಿರುತ್ತದೆ. ಅದು ಅಚಿಂತ್ಯಶಕ್ತಿ. ಹೀಗಾಗಿ 'ಪ್ರವಿಷ್ಟತ್ವವನ್ನು ಒಪ್ಪಿದರೆ ಪರಿಚ್ಛಿನ್ನತ್ವವನ್ನೂ ಒಪ್ಪಬೇಕಾಗುವುದರಿಂದ ಜ್ಞಾನಾನಂದ ಮಯತ್ವವನ್ನು ಒಪ್ಪಲಾಗದೆ'ನ್ನುವ ಭೀತಿಗೆ ಏನೂ ಕಾರಣವೆ ಇಲ್ಲ. ಪರಿಚ್ಛಿನ್ನತ್ವ ಅಪರಿಚ್ಛಿನ್ನತ್ವ ಎರಡು ಅಚಿಂತ್ಯಶಕ್ತಿಯಿಂದ ಕೂಡುತ್ತವೆ. ಇದನ್ನು ಶ್ರೀಕೃಷ್ಣ ತಾಯಿಗೆ ಬಾಯಲ್ಲಿ ಮೂಜಗವನ್ನು ತೋರುವುದರ ಮೂಲಕ ಸ್ಪಷ್ಟಪಡಿಸಿದ್ದಾನೆ.

ಬಹಿಶ್ಚ ವಿದ್ಯಮಾನತ್ವಾದಪ್ರವಿಷ್ಟೋ ಜಗದ್ಧರಿಃ ।
ಪ್ರವಿಷ್ಟವಚ್ಚ ತತ್ರೈವ ಪೂರ್ಣರೂಪತ್ವತೋ ವಿಭುಃ ।
ಅಪ್ರವೇಶಃ ಪ್ರವೇಶಶ್ಚ ಪ್ರವಿಷ್ಟೋಪಮತಾ ತಥಾ ।
ಬಹಿರಂತರ್ಗತಸ್ಯ ಸ್ಯಾದಿತ್ಯಾಹುಃ ಶಬ್ದವೇದಿನಃ ॥ ಇತಿ ಚ ।

'ಶ್ರೀಹರಿ ತಾನು ಸೃಜಿಸಿದ ಪ್ರಪಂಚದ ಹೊರಗೆ ಇರುವುದರಿಂದ ಅಪ್ರವಿಷ್ಟನೆನಿಸುವನು. ಹೊರಗೂ ಇದ್ದು ಪ್ರಪಂಚದೊಳಗೆ ಪೂರ್ಣರೂಪ ದಿಂದ ವ್ಯಾಪ್ತನಾಗಿರುವುದರಿಂದ ಪ್ರವಿಷ್ಟನಂತೆಯೂ ಎನಿಸುವನು. ಹೊರಗೂ ಒಳಗೂ ಇರುವ ಶ್ರೀಹರಿಗೆ ಅಪ್ರವೇಶ, ಪ್ರವೇಶ ಮತ್ತು ಪ್ರವಿಷ್ಟಸಾದೃಶ್ಯ ಇವು ಮೂರೂ ಬರುವವೆಂದು ಶಬ್ದಾರ್ಥಜ್ಞಾನಿಗಳು ಹೇಳುತ್ತಾರೆ' ಎಂದೂ ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ಯ ಏತೇಽವಿಕೃತಾ ಭಾವಾಃ ಸಪ್ತ ತೇ ವಿಕೃತೈಸ್ಸಹ ।
ನಾನಾವೀರ್ಯಾಃ ಪೃಥಗ್ಭೂತಾ ವಿರಾಜಂ ಶಯನಂ ತವ ॥ ೧೬ ॥

ಸನ್ನಿಪತ್ಯ ಸಮುತ್ಪಾದ್ಯ ದೃಶ್ಯಂತೇಽನುಗತಾ ಇವ ।
ಪ್ರಾಗೇವ ವಿದ್ಯಮಾನತ್ವಾನ್ನ ತೇಷಾಮಿಹ ಸಂಭವಃ ॥ ೧೭ ॥

ಪ್ರಕೃತಿಯಿಂದ ಅಲ್ಪಮಾತ್ರ ಪರಿಣಾಮ ಹೊಂದಿರುವ ನಾನಾ ಶಕ್ತಿ ಉಳ್ಳ ಮಹತ್ತತ್ತ್ವ ಅಹಂಕಾರತತ್ವ ಮತ್ತು ಪಂಚತನ್ಮಾತ್ರೆಗಳೆಂಬ ಏಳು ತತ್ವಗಳು, ಹೆಚ್ಚು ಪರಿಣಾಮ ಹೊಂದಿರುವ ಏಕಾದಶ ಇಂದ್ರಿಯ ಮತ್ತು ಪಂಚಭೂತಗಳೊಂದಿಗೆ ಸೇರಿ ನಿನ್ನ ವಾಸಸ್ಥಾನವಾದ ಬ್ರಹ್ಮಾಂಡವನ್ನು ಉತ್ಪಾದಿಸಿ ಬಳಿಕ ಅದರೊಳಗೆ ತಾವೇ ಬಂದು ಸೇರಿಕೊಂಡಂತೆ ಕಾಣುತ್ತವೆ. ಅವು ಬ್ರಹ್ಮಾಂಡದೊಳಗೆ ಸೂಕ್ಷ್ಮವಾಗಿ ಮೊದಲೆ ಇರುವುದರಿಂದ ವ್ಯಕ್ತವಾಗಿ ಪ್ರವೇಶ ಮಾತ್ರ ಮಾಡುತ್ತವೆ ಹೊರತು ಒಳಗೆ ಉತ್ಪನ್ನವಾಗುವುದಿಲ್ಲ.

[೧]ಶ್ರೀಧರ ವ್ಯಾಖ್ಯಾನದಲ್ಲಿ 'ನ ತೇಷಾಮಿಹ ಸಂಭವಃ' ಎಂಬಲ್ಲಿ 'ಸಂಭವ' ಎಂದರೆ ಪ್ರವೇಶ ಎಂದು ವಿವರಣೆ. ಇದು ಸರಿಯಲ್ಲ. ಸಂಭವ ಎಂದರೆ ಉತ್ಪತ್ತಿ. 'ಪ್ರಾಗೇವ ವಿದ್ಯಮಾನತ್ವಾತ್' ಮೊದಲೇ ಇದ್ದುದರಿಂದ 'ನ ಸಂಭವಃ' ಉತ್ಪತ್ತಿ ಎನ್ನಲಾಗುವುದಿಲ್ಲ' ಎಂದು ವಿವರಣೆ ನೀಡಬೇಕು, ಹೊರತು 'ಪ್ರವೇಶವಿಲ್ಲ' ಎಂದು ವಿವರಣೆ ನೀಡುವುದು ತಪ್ಪು.

ಬ್ರಹ್ಮಾಂಡದ ಹೊರಗೆ ಮಹದಾದಿಗಳು ಮೊದಲೇ ಇದ್ದರೂ ಬ್ರಹ್ಮಾಂಡದೊಳಗೆ ಪ್ರವೇಶ ಏಕೆ ಕೂಡಲಾರದು?

'ಬ್ರಹ್ಮಾಂಡದ ಒಳಗೂ ಅದಕ್ಕೆ ಉಪಾದಾನ ಕಾರಣವಾಗಿ ಮೊದಲೇ ಇರುವುದರಿಂದ ಅನಂತರ ಪ್ರವೇಶ ಮಾಡುವುದು ಅಯುಕ್ತ' ಎಂದು ಹೇಳುವುದೂ ಸರಿಯಲ್ಲ. ಕಾರಣರೂಪದಿಂದ ಸೂಕ್ಷ್ಮವಾಗಿ ಮೊದಲೇ ಇದ್ದರೂ ಸ್ಥೂಲ ಕಾರ್ಯರೂಪದಿಂದ ಪ್ರವೇಶ ಕೂಡುತ್ತದೆ. ಕಾರ್ಯಕಾರಣಗಳಿಗೆ ಭೇದಾಭೇದವಿರುವುದರಿಂದ ಎರಡೂ ಯುಕ್ತವಾಗುತ್ತದೆ.

'ಅನುಗತ' ಎಂದರೆ ಪ್ರವಿಷ್ಟ. ಅನುಗತವೆ ಆಗಿದ್ದರೆ 'ಅನುಗತಾ ಇವ' ಎಂದು ಇವಶಬ್ದ ಏಕೆ? ಎಂದರೆ ಬ್ರಹ್ಮಾಂಡದ ಹೊರಗೂ ಇರುವುದರಿಂದ ಗೂಡಿನಲ್ಲಿ ಹಕ್ಕಿ ಪ್ರವೇಶಿಸಿದರೆ ಅದು ಹೊರಗೆ ಇರುವುದಿಲ್ಲ ಹೇಗೋ ಹಾಗೆ, ಹೊರಗೆ ಮಹದಾದಿಗಳಿಲ್ಲ ಎಂಬ ಭಾವನೆ ಬರಬಾರದೆಂಬ ಉದ್ದೇಶದಿಂದ 'ಹಕ್ಕಿಯಂತೆ ಪ್ರವಿಷ್ಟವಲ್ಲ, ಪ್ರವಿಷ್ಟದಂತೆ' ಎನ್ನಲು ಇವಶಬ್ದ ಬೇಕು.

---

೧ ಅತ್ರ ದೃಷ್ಟಾಂತಃ ಯಥೇತಿ। ಇಮೇऽವಿಕೃತಾ ಭಾವಾ ಮಹದಾದಯೋ ವಿಕೃತೈಃ ಷೋಡಶ ವಿಕಾರೈಃ ಸಹ ಸನ್ನಿಪತ್ಯ ವಿರಾಜಂ ಬ್ರಹ್ಮಾಂಡಂ ಜನಯಂತಿ। ಏವಂ ಸಮುತ್ಪಾದ್ಯಾನುಗತಾಃ ಪ್ರವಿಷ್ಟಾ ಇವ ದೃಶ್ಯಂತೇ। ನ ಪುನಃ ಪ್ರವಿಷ್ಟಾಃ ಕುತಃ? ಉತ್ಪತ್ತೇಃ ಪ್ರಾಗೇವ ಕಾರಣತಯಾ ವಿದ್ಯಮಾನತ್ವಾನ್ನ ತೇಷಾಮಿಹ ಸೃಷ್ಟೇ ಕಾರ್ಯೇ ಪಶ್ಚಾತ್ ಸಂಭವಃ ಪ್ರವೇಶ ಇತಿ। -ಶ್ರೀಧರಃ

ಶ್ರೀಧರ ವ್ಯಾಖ್ಯಾನದಲ್ಲಿ 'ಯಥೇಮೇಽವಿಕೃತಾ ಭಾವಾಃ' ಎಂದು ಅಪಪಾಠವಿಟ್ಟುಕೊಂಡು 'ಪರಮಾತ್ಮ ಪ್ರಪಂಚದೊಳಗೆ ಪ್ರವೇಶ ಮಾಡಲಿಲ್ಲ' ಎನ್ನುವಲ್ಲಿ ಮಹದಾದಿತತ್ವಗಳು ಪ್ರವೇಶ ಮಾಡದಿರುವುದು ದೃಷ್ಟಾಂತ ಎಂದಿದ್ದಾರೆ. ಇದು ಸರಿಯಲ್ಲ. ಪರಮಾತ್ಮನ ಪ್ರವೇಶ 'ತತ್ಸೃಷ್ಟ್ವಾ ತದೇವಾನುಪ್ರಾವಿಶತ್' ಇತ್ಯಾದಿ ಪ್ರಮಾಣಸಿದ್ಧ. ಅದನ್ನು ಇಲ್ಲವೆಂದು ದೃಷ್ಟಾಂತ ಮಾತ್ರದಿಂದ ಸಮರ್ಥನೆ ಮಾಡಲಾಗದು. ಹೇತುವಿಲ್ಲದೆ ಕೇವಲ ದೃಷ್ಟಾಂತ ಏನೂ ಸಾಧಿಸಲಾರದು.

'ಪರಮಾತ್ಮ ಪ್ರವಿಷ್ಟನಾದರೂ ಹೊರಗೂ ಇರುವುದರಿಂದ ಪ್ರವಿಷ್ಟನಂತೆಯೂ ಇದ್ದಾನೆ' ಎಂದು ಹಿಂದೆ ಹೇಳಿದಂತೆ, ಅದೇ ರೀತಿಯಲ್ಲಿ 'ಮಹದಾದಿಗಳೂ ಪ್ರವಿಷ್ಟವೇ ಆಗಿದ್ದು ಹೊರಗೂ ಇರುವುದರಿಂದ ಪ್ರವಿಷ್ಟದಂತೆ ಇವೆ. ಇದು, 'ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾ' ಎಂದು ಹೇಳಿದ ಸೃಷ್ಟಿಯ ವೈಖರಿ' ಎಂದು ಹೇಳುವ ಉದ್ದೇಶದಿಂದ ಉಕ್ತವಾಗಿದೆ.

'ಮಹದಾದಿಸ್ತ್ವವಿಕೃತ ಈಷದ್ವಿಕೃತರೂಪತಃ' ಇತಿ ಚ।

ಅನುಗತಾ ಇವ ಪ್ರವಿಷ್ಟಾ ಇವ। ಪೂರ್ವೋಕ್ತವದ್ ಬಹಿರಪಿ ವಿದ್ಯಮಾನತ್ವಾತ್। ಅಂತಶ್ಚ ದೇವತಾನಾಂ ವಿಭಕ್ತಶಕ್ತಿತ್ವಾತ್ ಪೂರ್ವೋತ್ಪನ್ನತ್ವಾತ್ ತತ್ವಾನಾಮಂಡೇ ಪ್ರವೇಶಮಾತ್ರಂ। ವ್ಯಕ್ತಿ-ವಿಶೇಷಾದ್ ಉತ್ಪತ್ತಿರಿತ್ಯುಪಚರ್ಯತೇ 'ಅಂಡಜೋ ಬ್ರಹ್ಮೇ'ತ್ಯಾದಿ।

'ಮಹದ್ರೂಪಾದಿನಾ ಬ್ರಹ್ಮಾ ದೇವಾಶ್ಚೈವ ಪ್ರಜಜ್ಞಿರೇ'

ಅಂಡೇ ತ್ವೇಷಾಮಭಿವ್ಯಕ್ತಿರ್ಜನಿರಿತ್ಯಭಿಧೀಯತೇ ॥ ಇತಿ ಚ ।

ತಮ್ಮ ಕಾರ್ಯಗಳಾದ ಏಕಾದಶೇಂದ್ರಿಯ ಪಂಚಭೂತಗಳಿಗಿಂತ ಅಲ್ಪವೆ ವಿಕಾರ ಉಳ್ಳವುಗಳಾದ್ದರಿಂದ ಮಹದಹಂಕಾರತನ್ಮಾತ್ರೆಗಳು ಅವಿಕೃತವೆನಿಸುತ್ತವೆ ಎಂದೂ ಬ್ರಹ್ಮತರ್ಕದಲ್ಲಿ ಹೇಳಿದೆ.

'ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ' ಎಂಬಲ್ಲಿ ಹೇಳಿದಂತೆ ಪರಮಾತ್ಮ ಬ್ರಹ್ಮಾಂಡದ ಹೊರಗೂ ಇರುವುದರಿಂದ ಒಳಗೆ ಪ್ರವಿಷ್ಟನಂತೆ ಎಂದು ಹೇಗೆ ವ್ಯವಹಾರವೋ ಹಾಗೇ ಮಹದಾದಿಗಳೂ ಬ್ರಹ್ಮಾಂಡದ ಹೊರಗೂ ಆವರಣಗಳಾಗಿ ಇರುವುದರಿಂದ ಒಳಗೆ 'ಅನುಗತಾ ಇವ' ಅಂದರೆ ಪ್ರವಿಷ್ಟದಂತಿವೆ.

ಬ್ರಹ್ಮಾಂಡದೊಳಗೆ ಬ್ರಹ್ಮಾದಿ ದೇವತೆಗಳಿಗೆ ತಾರತಮ್ಯದಿಂದ ಶಕ್ತಿ ಇದೆ. ಈ

ಶಕ್ತಿ ತಾರತಮ್ಯಕ್ಕೆ ಬ್ರಹ್ಮಾಂಡದ ಹೊರಗೆ ಮೊದಲೇ ಅವರಿಗಾಗಿರುವ ಕ್ರಮಿಕ ಉತ್ಪತ್ತಿ ಪ್ರಯೋಜಕ. ಮೊದಲು ಮೊದಲು ಉತ್ಪನ್ನರಾದವರಿಗೆ ಮತ್ತೆ ಮತ್ತೆ ಉತ್ಪನ್ನರಾದವರಿಗಿಂತ ಹೆಚ್ಚು ಶಕ್ತಿ ಎಂದು. ಅದರಿಂದ ಬ್ರಹ್ಮಾಂಡ ಹುಟ್ಟುವುದಕ್ಕೆ ಮೊದಲೇ ಮಹದಾದಿಗಳೊಂದಿಗೆ ಅವುಗಳ ಅಭಿಮಾನಿಗಳಾದ ಬ್ರಹ್ಮಾದಿಗಳೂ ಕ್ರಮವಾಗಿ ಜನಿಸಿದ್ದಾರೆ ಎನ್ನಬೇಕು. ಬ್ರಹ್ಮಾಂಡದೊಳಗೆ ಉಂಟಾಗುವ ಅವರ ಉತ್ಪತ್ತಿ ಶಕ್ತಿತಾರತಮ್ಯಕ್ಕೆ ಪ್ರಯೋಜಕವಲ್ಲ. ಹೀಗೆ ಬ್ರಹ್ಮಾಂಡ ಹುಟ್ಟುವುದಕ್ಕಿಂತ ಮೊದಲೇ ಮಹದಾದಿತತ್ವಗಳಿಗೂ ಅವುಗಳ ಅಭಿಮಾನಿಗಳಿಗೂ ಉತ್ಪತ್ತಿ ಆಗಿರುವುದರಿಂದ ಅವರು ಬ್ರಹ್ಮಾಂಡದೊಳಗೆ ಉತ್ಪನ್ನರಾಗಲು ಶಕ್ಯವಿಲ್ಲ. ಕೇವಲ ಪ್ರವೇಶವೆನ್ನಬೇಕು. ಅದರಿಂದ 'ಅಂಡಜೋ ಬ್ರಹ್ಮಾ' 'ಬ್ರಹ್ಮನು ಬ್ರಹ್ಮಾಂಡದೊಳಗೆ ಜನಿಸಿದನು' ಎಂದು ಮುಂತಾಗಿ ಹೇಳುವಾಗ ಜನನವೆಂದರೆ ಮುಖ್ಯ ಉತ್ಪತ್ತಿ ವಿವಕ್ಷಿತವಲ್ಲ. ಅಮುಖ್ಯ ಉತ್ಪತ್ತಿ ಅಂದರೆ ಉತ್ಪತ್ತಿಗೆ ಸದೃಶವಾದ ಪ್ರವೇಶ ವಿವಕ್ಷಿತವಾಗಿದೆ. ಉತ್ಪತ್ತಿ ಹೇಗೆ ಅಭಿವ್ಯಕ್ತಿಗೆ ಕಾರಣವೋ ಹಾಗೇ ಪ್ರವೇಶವೂ ಅಭಿವ್ಯಕ್ತಿಗೆ ಕಾರಣ ಎಂದು.

ಭಾಗವತ ಶ್ಲೋಕದ ಈ ಅಭಿಪ್ರಾಯವನ್ನು ಬ್ರಹ್ಮತರ್ಕ ಹೀಗೇ ಸ್ಪಷ್ಟವಾಗಿ ಹೇಳಿದೆ, 'ಮಹದಾದ್ಯಭಿಮಾನಿರೂಪದಿಂದ ಬ್ರಹ್ಮನೂ ಬೇರೆ ದೇವತೆಗಳೂ ಮೊದಲೇ ಜನಿಸಿದ್ದಾರೆ. ಬ್ರಹ್ಮಾಂಡದೊಳಗೆ ಅವರಿಗೆ ಕೇವಲ ಪ್ರವೇಶರೂಪ ಅಭಿವ್ಯಕ್ತಿಯೆ ಹೊರತು ಉತ್ಪತ್ತಿಯಲ್ಲ ಅಭಿವ್ಯಕ್ತಿಯನ್ನೇ ಉತ್ಪತ್ತಿ ಎಂದು ವ್ಯವಹರಿಸಲಾಗುತ್ತದೆ' ಎಂದು.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ಏವಂ ಭವಾನ್ ಬುದ್ಧ್ಯನುಮೇಯಲಕ್ಷಣೋ
ಗ್ರಾಹ್ಯೈರ್ಗುಣೈಃ ಸನ್ನಪಿ ತದ್ಗುಣಾಗ್ರಹಃ ।
ಅನಾವೃತತ್ವಾದ್ ಬಹಿರಂತರಂ ನ ತೇ
ಸರ್ವಸ್ಯ ಸರ್ವಾತ್ಮನ ಆತ್ಮವಸ್ತುನಃ ॥ ೧೮ ॥

ನೀನು ಬ್ರಹ್ಮಾಂಡನಿರ್ಮಾಣದಲ್ಲಿ ಮಾತ್ರವಲ್ಲ ಶರೀರ ನಿರ್ಮಾಣ ದಲ್ಲಿಯೂ ಹೀಗೇ ಸ್ವತಂತ್ರ. ಏಕೆಂದರೆ ನೀನು ಎಲ್ಲವನ್ನೂ ತಿಳಿಯಬಲ್ಲೆ. ಮತ್ತು ಜೀವನಿಗೆ ಗ್ರಾಹ್ಯ ರೂಪಾದಿ ಗುಣಗಳನ್ನು ತಿಳಿಯುವ ಇಚ್ಛೆ

ಬಂದರೂ ತಿಳಿವು ಕೆಲವೊಮ್ಮೆ ಬರುವುದಿಲ್ಲ. ಹೀಗಾಗಿ ಅವನು ಅಸ್ವತಂತ್ರ. ಅವನಿಗೆ ತಿಳಿವು ನಿನ್ನಿಂದಲೆ ಉಂಟಾಗುತ್ತದೆ. ಆದರಿಂದ ನೀನು ಸ್ವತಂತ್ರ ಎಂದು ಊಹಿಸಲು ಸಾಧ್ಯವಿದೆ. ನೀನು ಎಲ್ಲವನ್ನೂ ಸಾಕ್ಷಾತ್ತಾಗಿ ಕಾಣುವವನಾದ್ದರಿಂದ ನಿನಗೆ ಯಾವುದೂ ಬಾಹ್ಯ ಆಂತರ ಎಂದು ಭೇದವಿಲ್ಲ. ನೀನು ಸರ್ವಶಕ್ತ, ಲಯಕಾಲದಲ್ಲಿ ಎಲ್ಲವನ್ನೂ ನುಂಗುವವನು, ತನ್ನಲ್ಲೇ ತಾನಿರುವವನು.

[೧] ಶ್ರೀಧರ ವ್ಯಾಖ್ಯಾನದಲ್ಲಿ ತಿರುಗಿ ಭಗವಂತನಿಗೆ ಪ್ರವೇಶವನ್ನು ನಿರಾಕರಿಸುತ್ತಿದ್ದಾನೆ ವಸುದೇವ. 'ಭಗವಂತ ಉಪಾದಾನರೂಪದಿಂದ ಜಗತ್ತಿನಲ್ಲಿ ಮೊದಲೇ ಇರುವುದರಿಂದ ಮತ್ತೆ ಅವನಿಗೆ ಪ್ರವೇಶ ಶಕ್ಯವಿಲ್ಲ. ಅವನಿರುವುದೇ ಆದರೆ ಏಕೆ ಕಾಣುವುದಿಲ್ಲ ಎಂದರೆ ಅವನು ಇಂದ್ರಿಯಗೋಚರನಲ್ಲ. ಇಂದ್ರಿಯಗಳು ಅವುಗಳಿಂದ ಉಂಟಾಗುವ ಜ್ಞಾನದ ಬಲದಿಂದ ಊಹಿಸಿ ತಿಳಿಯಬೇಕಾದವು. ಅವು ಗ್ರಹಿಸುವ ವಸ್ತುಗಳ ಜೊತೆಗೇ ಭಗವಂತನಿದ್ದರೂ ಅವನು ಅವುಗಳಿಗೆ ಕಾಣುವುದಿಲ್ಲ. ಪ್ರವೇಶ ಶಕ್ಯವಿಲ್ಲ ಎನ್ನಲು ಇನ್ನೊಂದು ಕಾರಣ' ಅವನು ಸರ್ವವ್ಯಾಪಕ. ಅವನಿಗೆ ಆವರಣವಿಲ್ಲ. ಒಳಗೆ ಹೊರಗೆ ಎಂದು ಪದಾರ್ಥಗಳಲ್ಲಿ ಭೇದ ಅವನಿಗೆ ಇಲ್ಲ. ಹೀಗೆ ವ್ಯಾಪಕವಾದ ವಸ್ತು ಎಲ್ಲಿಯೂ ಪ್ರವೇಶ ಮಾಡಲಾರದು. ಸಣ್ಣವಸ್ತು ಪ್ರವೇಶ ಮಾಡೀತು. ಹಕ್ಕಿ ಗೂಡಿನಲ್ಲಿ ಪ್ರವೇಶ ಮಾಡುತ್ತದೆ, ಅವನು 'ವಸ್ತು' ಪರಮಾರ್ಥವಾದ ವಸ್ತು. ಅದಕ್ಕೆ ಆವರಣವಿಲ್ಲ' ಎಂದು ವಸುದೇವ ಹೇಳುತ್ತಿದ್ದಾನೆ'.

ಇಲ್ಲಿ ಭಗವಂತ ಜಗತ್ತಿನೊಳಗೆ ಮೊದಲೇ ಇದ್ದರೂ ಅವನು ಇಂದ್ರಿಯಗಳಿಗೆ

---

೧ ನನು ಯದ್ಯಹಮಪ್ರಚ್ಯುತಸ್ವರೂಪ ಏವ ಕಾರಣತಯಾ ಕಾರ್ಯೇಷು ವರ್ತೇ ತರ್ಹಿ ತೇಷ್ವಿಂದ್ರಿಯೈರ್ಗೃಹ್ಯಮಾಣೇಷು ಮಮ ಗ್ರಹಣಂ ಕಿಂ ನಾಸ್ತಿ? ತತ್ರಾಹ ಬುದ್ಧ್ಯನುಮೇಯ ಲಕ್ಷಣೈರಿತಿ। ಬುದ್ಧ್ಯಾ ರೂಪಾದಿ ಜ್ಞಾನೇನ ಅನುಮೇಯಂ ಲಕ್ಷಣಂ ಸ್ವರೂಪಂ ಯೇಷಾಂ ತೈರ್ಗುಣೈರಿಂದ್ರಿಯೈರ್ಗ್ರಾಹ್ಯೈರ್ಗುಣೈಃ ಸಹ ಸನ್ನಪಿ ವರ್ತಮಾನೋಽಪಿ ತದ್ ಗುಣಾಗ್ರಹಸ್ತೈರ್ಗುಣೈಃ ಸಹ ನ ಗೃಹ್ಯತೇ। ಅಯಂ ಭಾವಃ। ನಹಿ ಗ್ರಾಹ್ಯೈಃ ಸಹಭಾವ ಮಾತ್ರಂ ಗ್ರಹಣೇ ಕಾರಣಂ ಕಿಂತ್ವಿಂದ್ರಿಯಾಣಾಂ ಶಕ್ತಿಃ। ಸಾ ಚ ಕಾರ್ಯೈಕ ಸಮಧಿಗಮ್ಯಾ ಯಥಾಕಾರ್ಯಮೇವ ಕಲ್ಪ್ಯತೇ। ಅತೋ ಯಥಾ ಚಕ್ಷುಷಾ ರೂಪಗ್ರಹಣೇ ರಸಾದಿಗ್ರಹಣಂ ನಾಸ್ತಿ ತಥೈವ ವಿಷಯಗ್ರಹಣೇ ತ್ವದ್‌ಗ್ರಹಣಮಪೀತಿ। ಏವಂ ತಾವತ್ ಪ್ರಾಗೇವ ವಿದ್ಯ ಮಾನತ್ವಾತ್ ಪ್ರವೇಶೋ ನಾಸ್ತೀತ್ಯುಕ್ತಂ। ಕಿಂಚ ಪರಿಚ್ಛಿನ್ನಸ್ಯ ನೀಡೇ ಪಕ್ಷ್ಯಾದೇರಿವ ಪ್ರವೇಶೋ ಭವೇತ್। ತವ ತ್ವನಾವೃತತ್ವಾದಪರಿಚ್ಛಿನ್ನತ್ವೇನ ಬಹಿರಂತರ್ಭೇದೋ ನಾಸ್ತಿ ಕುತಃ ಪ್ರವೇಶ ಇತ್ಯಾಹ ಅನಾವೃತತ್ವಾದಿತಿ। -ಶ್ರೀಧರಃ

ಗೋಚರನಾಗುವುದಿಲ್ಲ. ಇದು ನಿಜವೆ. ಆದರೆ ಇಂದ್ರಿಯವ್ಯೂ ಅತೀಂದ್ರಿಯ, ಕೇವಲ ಜ್ಞಾನವೆಂಬ ಕಾರ್ಯದಿಂದ ಕಾರಣವಾದ ಇಂದ್ರಿಯವನ್ನು ಊಹಿಸಬೇಕು ಎನ್ನುವುದು ಸರ್ವವಿದಿತ. ಅದನ್ನೇಕೆ ವಸುದೇವ ಹೇಳುತ್ತಿದ್ದಾನೆ? ಅದರಿಂದ ಪ್ರಕೃತಕ್ಕೆ ಏನು ಉಪಯೋಗ?

'ಗ್ರಾಹ್ಯ ವಸ್ತುಗಳ ಜೊತೆಗೆ ಭಗವಂತನಿದ್ದರೂ ಅವನು ಗ್ರಾಹ್ಯನಲ್ಲ' ಎಂದೂ ಹೇಳಬೇಕಾಗಿಲ್ಲ. ರೂಪದ ಜೊತೆಗಿದ್ದ ಮಾತ್ರಕ್ಕೆ ರಸವೂ ಕಣ್ಣಿಗೆ ಕಾಣುವುದಿಲ್ಲ ಎನ್ನುವುದು ಎಲ್ಲರಿಗೂ ಗೊತ್ತು.

ಭಗವಂತ ಅನಾವೃತ. ಅವನಿಗೆ ಆವರಣವಿಲ್ಲ ಎನ್ನುವುದಾದರೆ ಇನ್ನಾರಿಗೆ ಆವರಣ? ಅಜ್ಞಾನ ಪರಬ್ರಹ್ಮನನ್ನೇ ಆವರಿಸುತ್ತದೆ. ಆವರಿಸಿ ಜೀವ ಈಶ್ವರ ಎಂದು ಅವನನ್ನು ಭಾಗ ಮಾಡುತ್ತದೆ. ಜೀವನಂತೆ ಈಶ್ವರನೂ ಅವಿದ್ಯಾವರಣ ಉಳ್ಳವನೆ. ಅವನು ಮಾಯೆ ಎಂಬ ಅವಿದ್ಯೆ ಇರುವುದರಿಂದಲೆ ಅವನು ಮಾಯಿ ಎನಿಸುತ್ತಾನೆ. ಮಾಯೆ ಅವನಿಗೆ ವಶವಾಗಿರುವುದರಿಂದ ಅವನ ಸರ್ವಶಕ್ತಿ ಸರ್ವಜ್ಞತ್ವಗಳಿಗೆ ಭಂಗವಿಲ್ಲವೆನ್ನುವುದಾದರೆ ಸರ್ವಶಕ್ತನಾದ ಆತ ವ್ಯಾಪಕನಾದರೂ ಅಚಿಂತ್ಯ ಶಕ್ತಿಯಿಂದ ಜಗತ್ತಿನೊಳಗೆ ಏಕೆ ಪ್ರವೇಶಿಸಬಾರದು? ಅವನು ಅಣೋರಣೀಯನೂ ಮಹತೋ ಮಹೀಯನೂ ಆಗಿರುವವನಷ್ಟೆ?

ಪರಮಾರ್ಥ ವಸ್ತುವಿಗೆ ಆವರಣವಿಲ್ಲವೆನ್ನುವುದೂ ಅದ್ವೈತಕ್ಕೆ ವಿರುದ್ಧ. ಪರಮಾರ್ಥವಸ್ತುವಾದ ಪರಬ್ರಹ್ಮನಿಗೇ ಅಜ್ಞಾನಾವರಣ ಎನ್ನುತ್ತಾರೆ. ಅದರಿಂದ ಭಾಗವತ ಶ್ಲೋಕಕ್ಕೆ ಹೀಗೇ ವ್ಯಾಖ್ಯಾನ-

ಗ್ರಾಹ್ಯಗುಣವಿಷಯಬುದ್ಧ್ಯನುಮೇಯಲಕ್ಷಣಃ। ಗ್ರಾಹ್ಯ ಗುಣೇಷ್ವಸ್ವಾತಂತ್ರ್ಯಾತ್ ತಜ್ಜ್ಞಾಪಕೋಽನ್ಯೋಽಸ್ತೀತಿ ಜ್ಞಾಯತೇ।

ಜ್ಞಾತಾಽಪಿ ಸರ್ವಸ್ಯ ಭವಾನ್ ಜ್ಞಾಯತೇ ಜ್ಞಾನಲಿಂಗತಃ।
ಜಿಘೃಕ್ಷೋರ್ಗ್ರಹಣಾಭಾವಾದಸ್ವಾತಂತ್ರ್ಯಪ್ರತೀತಿತಃ।
ಸರ್ವತ್ರಾವ್ಯವಧಾನೇನ ದ್ರಷ್ಟೃತ್ವಾತ್‌ಸರ್ವವಸ್ತುನಃ।
ಆಂತರಂ ಬಾಹ್ಯಮಿತ್ಯೇವಂ ವಿಶೇಷೋ ನಾಸ್ತಿ ಕಶ್ಚನ ॥

ಇತಿ ತಂತ್ರಭಾಗವತೇ।

ಜೀವಸ್ಥಗ್ರಹಣಶಕ್ತಿರಪಿ ತಸ್ಯೇತ್ಯಪಿಶಬ್ದಃ । ಏವಂ ಶರೀರಮುತ್ಪಾದ್ಯ ಜ್ಞಾಯತೇ। ಸರ್ವಸ್ಯ ಪೂರ್ಣಸ್ಯ।

ಸರ್ವಃ ಸಂಪೂರ್ಣಸಾಮರ್ಥ್ಯಾತ್ ಸರ್ವಾತ್ಮಾ ಸರ್ವಭಕ್ಷಣಾತ್।
ಅನನ್ಯಾಶ್ರಯತಶ್ಚಾತ್ಮವಸ್ತುತ್ವಮಭಿಧೀಯತೇ ॥ ಇತಿ ಚ ।
ಆತ್ಮನ್ಯೇವ ವಾಸಾದಾತ್ಮವಸ್ತು॥

''ಗ್ರಾಹ್ಯೈರ್ಗುಣೈಃ ಬುದ್ಧ್ಯನುಮೇಯಲಕ್ಷಣಃ' ಎಂದರೆ ಗ್ರಾಹ್ಯ ಗುಣ ವಿಷಯಕವಾದ ಬುದ್ಧಿಯೆಂಬ ಕಾರ್ಯದಿಂದ ಊಹಿಸಲು ಶಕ್ಯವಾದ ಸ್ವಾತಂತ್ರ್ಯವೆಂಬ ಲಕ್ಷಣ ಉಳ್ಳವನು. ಹೇಗೆಂದರೆ ಗ್ರಾಹ್ಯವಾದ ರೂಪಾದಿ ಗುಣಗಳನ್ನು ತಿಳಿಯುವುದರಲ್ಲಿ ಜೀವನು ಅಸ್ವಂತ್ರನಾದ್ದರಿಂದ ಅವನಿಗೆ ತಿಳಿವನ್ನು ಉಂಟು ಮಾಡುವವನು ಸ್ವತಂತ್ರನಾದವನು ಇನ್ನೊಬ್ಬನಿರುವನೆಂದು ಊಹೆಯಿಂದ ತಿಳಿಯುತ್ತದೆ.

'ಶ್ರೀಹರಿ, ನೀನು ಸರ್ವಜ್ಞ, ಜೀವನ ಜ್ಞಾನಶಕ್ತಿಯೂ ನಿನ್ನ ಅಧೀನ. ಜೀವ ತಿಳಿಯಲು ಬಯಸಿದರೂ ತಿಳಿವು ಉಂಟಾಗದಿರುವುದರಿಂದ ಅವನಲ್ಲಿ ಅಸ್ವಾತಂತ್ರ್ಯ ತಿಳಿದುಬರುತ್ತದೆ. ಅದರಿಂದ ಅವನಿಗೆ ಬರುವ ಜ್ಞಾನವೆಂಬ ಕಾರ್ಯದಿಂದ ಅದಕ್ಕೆ ಸ್ವತಂತ್ರಕಾರಣ ನೀನೆಂದು ಊಹಿಸಲ್ಪಡುತ್ತಿ. ಎಲ್ಲ ಕಡೆ ಎಲ್ಲ ವಿಷಯಗಳನ್ನು ಪ್ರತ್ಯಕ್ಷವಾಗಿಯೇ ಕಾಣುವವನು ನೀನಾದುದರಿಂದ ನಿನಗೆ ಒಳಗಿನದು ಹೊರಗಿನದೆಂದು ವಸ್ತುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ' ಎಂದು ತಂತ್ರಭಾಗವತದಲ್ಲಿ ವ್ಯಾಖ್ಯಾನವಿದೆ.

ತಾನು ಸರ್ವಜ್ಞ ಮಾತ್ರವೆ ಅಲ್ಲ ಜೀವನಲ್ಲಿರುವ ಜ್ಞಾನಶಕ್ತಿಯೂ ಅವನ ಅಧೀನ ಎಂದು 'ಸನ್ನಪಿ' ಎಂಬಲ್ಲಿ ಅಪಿ ಶಬ್ದದ ಅರ್ಥ.

ಬ್ರಹ್ಮಾಂಡವನ್ನು ನಿರ್ಮಿಸುವುದರಿಂದ ಹೇಗೋ ಹಾಗೇ ಶರೀರವನ್ನು ನಿರ್ಮಿಸುವುದರಿಂದಲೂ ಶ್ರೀಹರಿ ಸ್ವತಂತ್ರನೆಂದು ತಿಳಿದು ಬರುತ್ತದೆ. 'ಸರ್ವ' ಎಂದರೆ ಪೂರ್ಣ, ಪೂರ್ಣಶಕ್ತಿವುಳ್ಳವನು.

'ಪೂರ್ಣಶಕ್ತಿ ಉಳ್ಳವನಾದ್ದರಿಂದ ಸರ್ವ, ಲಯಕಾಲದಲ್ಲಿ ಎಲ್ಲವನ್ನೂ ನುಂಗುವುದರಿಂದ ಸರ್ವಾತ್ಮ. ಇನ್ನೊಬ್ಬರನ್ನಾಶ್ರಯಿಸದೆ ತನ್ನಲ್ಲಿಯೆ ತಾನಿರುವುದರಿಂದ ಆತ್ಮವಸ್ತು ಶ್ರೀಹರಿ' ಎಂದೂ ತಂತ್ರಭಾಗವತದಲ್ಲಿ ಉಕ್ತವಾಗಿದೆ.

ತನ್ನಲ್ಲೇ ವಾಸಮಾಡುವುದರಿಂದ ಆತ್ಮವಸ್ತು ಎನಿಸುತ್ತಾನೆ.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ಯದಾತ್ಮನೋ ದೃಶ್ಯಗುಣೇಷು ಸನ್ನಿಧೇ
ರ್ವ್ಯವಸ್ಯಸೇಽಸ್ವವ್ಯತಿರೇಕತೋಽಬುಧ್ಯೈಃ।
ವಿನಾಽನುವಾದಂ ನಚ ತನ್ಮನೀಷಿತಂ
ಸಮ್ಯಗ್ವಚೋ ವ್ಯಕ್ತಮುಪಾದದತ್‌ಪುಮಾನ್ ॥। ೧೯ ॥

ವಿಷಯ ಪದಾರ್ಥ ಜ್ಞಾನಸಾಧನವಾದ ಶರೀರೇಂದ್ರಿಯಾದಿಗಳಲ್ಲಿ ಎಲ್ಲ ಕಾರ್ಯಗಳಲ್ಲಿಯೂ ಪ್ರೇರಕನಾಗಿ ಜೀವನೊಂದಿಗೆ ನೀನೂ ಇರುವುದರಿಂದ ಅಜ್ಞಾನಿಗಳು ತಮಗಿಂತ ಬೇರೆಯಾಗಿ ನೀನಿಲ್ಲವೆಂದು ಭಾವಿಸುತ್ತಾರೆ. ಈ ವಿಷಯದಲ್ಲಿ ಅನುಕೂಲ ಶ್ರುತಿ ಪ್ರಮಾಣವಿಲ್ಲದ್ದರಿಂದ ಇದನ್ನು ಒಪ್ಪಲಾಗದು. ಅದ್ವೈತಿಗಳು ಹೇಳುವ ಅದ್ವೈತಶ್ರುತಿಗಳು ವಸ್ತುತಃ ಅದ್ವೈತಪರವಲ್ಲ. ಏಕೆಂದರೆ ವೇದಪುರುಷನಾದ ಇಂದ್ರನಾಮಕ ವೈಕುಂಠ ನಾರಾಯಣನು 'ಅಭೀದಮೇಕಂ' ಎಂದು ಸುಸ್ಪಷ್ಟವಾಗಿ ಜೀವೇಶ್ವರಭೇದ ವನ್ನು ಹೇಳುವ ಶ್ರುತಿಯನ್ನು ಭೇದವಿಷಯದಲ್ಲಿ ಎತ್ತಿ ತೋರಿಸುತ್ತಿದ್ದಾನೆ.

ಇಲ್ಲಿ ಶ್ರೀಧರ ಮುಂತಾದ ವ್ಯಾಖ್ಯಾನಕಾರರು ಹಿಡಿದ ಶ್ಲೋಕಪಾಠ-

ಯ ಆತ್ಮನೋ ದೃಶ್ಯಗುಣೇಷು ಸನ್ನಿತಿ
ವ್ಯವಸ್ಯತೇ ಸ್ವವ್ಯತಿರೇಕತೋಽಬುಧಃ ।
ವಿನಾಽನುವಾದಂ ನಚ ತನ್ಮನೀಷಿತಂ
ಸಮ್ಯಗ್ ಯತಸ್ತ್ಯಕ್ತಮುಪಾದದತ್ ಪುಮಾನ್ ॥

[೧] ಶ್ರೀಧರ ವ್ಯಾಖ್ಯಾನದಲ್ಲಿ ಇದಕ್ಕೆ ನೀಡಿರುವ ವಿವರಣೆ- 'ಯಾರು ತನಗೆ ಕಾಣುವ ದೇಹಾದಿಗಳನ್ನು ತನಗಿಂತ ಬೇರೆಯಾಗಿ ಸತ್ಯವಾಗಿದೆ ಎಂದು ತಿಳಿಯುವನೋ ಅವನು ಅಜ್ಞಾನಿ. ಅವನು ಹೇಳುವ ದೇಹಾದಿ ಎಲ್ಲವೂ ಬರಿ ಬಾಯಿಮಾತು. ಪರಮಾರ್ಥವಲ್ಲ, ಅಪಾರಮಾರ್ಥಿಕವೆಂದು ಕೈಬಿಟ್ಟಿರುವ ವಸ್ತುಗಳನ್ನು ಪಾರಮಾರ್ಥಿಕವೆಂದು ಸ್ವೀಕರಿಸುವ ಅವನು ಜ್ಞಾನಿಯಲ್ಲ'.

ಇಲ್ಲಿ ಈ ಶ್ಲೋಕಪಾಠವೇ ತಪ್ಪು. ಬ್ರಹ್ಮಾಂಡಪುರಾಣದಲ್ಲಿ ಕಾಣುವ

---

೧ ಆತ್ಮನೋ ದೃಶ್ಯೇಷು ಗುಣೇಷು ದೇಹಾದಿಷು ಸ್ವವ್ಯತಿರೇಕೇಣ ಆತ್ಮವ್ಯತಿರೇಕೇಣ ಪೃಥಕ್ ಸನ್ನಯಂ ದೇಹಾದಿರಿತಿ ವ್ಯವಸ್ಯತೇ ನಿಶ್ಚಿನೋತಿ ಯಃ ಪುಮಾನ್ ಸೋಽಬುಧೋಽವಿದ್ವಾನ್ ವ್ಯತಿರೇಕದರ್ಶನಾತ್ । ಕಿಂಚ ತನ್ಮನೀಷಿತಂ ತದ್ದೇಹಾದಿ ಸರ್ವಂ ಯತೋ ವಿನಾಽನುವಾದಂ ವಾಚಾರಂಭಣಮಾತ್ರಂ ವಿನಾ ನ ಸಮ್ಯಗ್ ಭವತಿ। ಅತೋಽವಸ್ತುತ್ವೇನ ತ್ಯಕ್ತಂ ಬಾಧಿತಮೇವ ವಸ್ತುಬುದ್ಧ್ಯಾ ಉಪಾದದತ್ ಸ್ವೀಕುರ್ವನ್ನಬುಧ ಇತ್ಯರ್ಥಃ ॥ -ಶ್ರೀಧರಃ

ವ್ಯಾಖ್ಯಾನಾನುಸಾರವಾಗಿ ಸರಿಯಾದ ಪಾಠವನ್ನು ಇಟ್ಟುಕೊಳ್ಳುವುದು ಉಚಿತ. ಅವರ ಪಾಠವನ್ನೇ ಇಟ್ಟುಕೊಂಡರೂ,

'ವ್ಯವಸ್ಯತೇ ಸ್ವವ್ಯತಿರೇಕತಃ' ಎಂಬಲ್ಲಿ ನಡುವೆ ಆಕಾರವು ಸಂಧಿಯಲ್ಲಿ ಲೋಪವಾಗಿದೆ ಎಂದಿಟ್ಟುಕೊಂಡರೆ ಸಾಕು. ಅದ್ವೈತವನ್ನೇ ಅದು ನಿಂದಿಸ ಬಲ್ಲುದು-

'ಯಾರು ತನಗೆ ಕಾಣುವ ದೇಹಾದಿಗಳನ್ನು ತನಗಿಂತ ಅಭಿನ್ನವಾಗಿಯೇ ಕಂಡು ಸತ್ಯವೆಂದು ತಿಳಿಯುವನೋ ಅವನು ಅಜ್ಞಾನಿ. ಅವನು ಹೇಳುವುದು ಬರಿ ಬಾಯಿಮಾತು. ಪರಮಾರ್ಥವಲ್ಲ.' -ಹೀಗೆ ಹೇಳುವ ಮತವೆ ಅದ್ವೈತ ಅಪ್ರಾಮಾಣಿಕವೆಂದು ಜ್ಞಾನಿಗಳು ಕೈಬಿಟ್ಟಿರುವ ಈ ಅದ್ವೈತವನ್ನು ಪಾರಮಾರ್ಥಿಕ ವೆಂದು ಸ್ವೀಕರಿಸುವವನು ಜ್ಞಾನಿಯಲ್ಲ' ಎಂದು.

'ಪ್ರಪಂಚ ಸತ್ಯವೆಂದು ಕಾಣುವುದು ಭ್ರಮೆ. ಬ್ರಹ್ಮನ ಸತ್ಯತ್ವವೇ ಅದರಲ್ಲಿ ತೋರುವುದರಿಂದ ಅಧಿಷ್ಠಾನಾನುವೇಧ, 'ಈ ಹಗ್ಗ'ದಲ್ಲಿ ಕಾಣುವ ಹಾವನ್ನು 'ಈ ಹಾವು' ಎಂದಂತೆ. ವಸ್ತುತಃ 'ಸರ್ವಂ ಖಲ್ವಿದಂ ಬ್ರಹ್ಮ' ಈ ಪ್ರಪಂಚ ಬ್ರಹ್ಮವ್ಯತಿರೇಕೇಣ ಅಸತ್, ಬ್ರಹ್ಮನಿಂದ ಬೇರೆಯಾಗಿ ಸತ್ವವಿಲ್ಲದ್ದು' ಎಂದು ತಾನೆ ಅದ್ವೈತವ್ಯಾಖ್ಯಾನವಿದೆ.

ಪರಮಾತ್ಮನೋಽಪಿ ಶರೀರೇ ಸನ್ನಿಧಾನಾದೇವಾಬುಧ್ಯೈರಸ್ವವ್ಯತಿ-ರೇಕತೋ ಜ್ಞಾಯಸೇ। ಯಥಾನುಕೂಲವಾದಂ ವೇದವಚನಂ ವಿನಾ ಪ್ರವರ್ತನಾನ್ನ ತನ್ಮನೀಷಿತಂ ಸಮ್ಯಕ್ ।

ಅಭೀದಮೇಕಮೇಕೋ ಅಸ್ಮಿ ನಿಷ್ಪಾಳ್
ಅಭೀ ದ್ವಾ ಕಿಮು ತ್ರಯಃ ಕರಂತಿ ।
ಖಲೇ ನ ಪರ್ಷಾನ್ ಪ್ರತಿಹನ್ಮಿ ಭೂರಿ
ಕಿಂ ಮಾ ನಿಂದಂತಿ ಶತ್ರವೋಽನಿಂದ್ರಾಃ ॥

ಇತಿ ಜೀವೇಶಭೇದೇ ವ್ಯಕ್ತಂ ಹಿ ವಚಃ ಪರಃ ಪುಮಾನುಪಾದದೇ ।
ಪ್ರವಿಷ್ಟತ್ವಾಚ್ಛರೀರೇಷು ಜೀವ ಏವೇತಿ ದುರ್ಧಿಯಃ।
ಮನ್ಯಂತೇ ಪರಮಾತ್ಮಾನಂ ನ ತನ್ಮತಮನುವ್ರಜೇತ್ ।
ವೇದವಾದ ವಿರೋಧಿತ್ವಾದನುಯಾತಾ ತಮೋ ವಿಶೇತ್ ।
ಯತಃ ಪರ್ಯಂಕಶಯನ ಆಹ ವಿಷ್ಣುಃ ಸನಾತನಃ ।

ಇದಂ ಜಗತ್ ಸರ್ವಮಥೇದೃಶಾನಿ
ಭೂರೀಣಿ ವಾ ಮಾಮಭಿಯಾಂತು ಸಂಖೇ
ಧಾನ್ಯಾನಿ ಯದ್ವತ್ ಖಲಗಾನಿ ಮರ್ತ್ಯಃ
ಸಂಚೂರ್ಣಯಿಷ್ಯಾಮ್ಯಹಮೇಕ ಏವ ॥

ಇತಿ ಬ್ರಹ್ಮಾಂಡೇ ॥

ಚೇತಿ ಫಲತೋऽಪಿ ತಮೋ ಯಾಂತೀತಿ ।

ಐಕಾತ್ಮ್ಯಜ್ಞಾನತೋ ಯಾಂತಿ ತಮೋ ಭೇದಾತ್ ಪರಂ ಪದಂ ।
ಸ್ವಾತಂತ್ರ್ಯ ಪಾರತಂತ್ರ್ಯಾದಿಜ್ಞಾನಂ ಭೇದದೃಶಿರ್ಭವೇತ್ ॥

ಇತಿ ಬ್ರಹ್ಮವೈವರ್ತೇ ॥

ಪರಮಾತ್ಮನೂ ಕೂಡ ಶರೀರದಲ್ಲಿ ಸನ್ನಿಹಿತನಾಗಿರುವುದರಿಂದಲೆ ಅಜ್ಞಜನರು ನಿನ್ನನ್ನು ತಮಗಿಂತ ಬೇರೆಯಲ್ಲವೆಂದು ತಿಳಿಯುತ್ತಾರೆ. ಅವರು ಉಪಕ್ರಮಾದಿಗಳಿಗೆ ಅನುಸಾರಿಯಾಗಿ ಪ್ರಮೇಯವನ್ನು ಹೇಳುವ ವೇದವಾಕ್ಯವನ್ನು ಬಿಟ್ಟೇ ಹೊರಟಿದ್ದರಿಂದ ಅವರ ಮತ ಸರಿಯಲ್ಲ.

'ಈ ಇಡಿ ಜಗತ್ತು ಒಂದಾಗಿ ಯುದ್ಧದಲ್ಲಿ ನನ್ನ ಮೇಲೇರಿ ಬಂದರೂ ನಾನೊಬ್ಬನೇ ಚೆನ್ನಾಗಿ ಸಹಿಸಿಕೊಂಡು ಯುದ್ಧಮಾಡುವೆನು. ಎರಡು ಜಗತ್ತು ಬಂದರೂ ಯುದ್ಧ ಮಾಡುವೆನು. ಮೂರು ಜಗತ್ತು ಬಂದರೂ ಅವು ನನಗೇನು ಮಾಡಬಲ್ಲುವು? ಧಾನ್ಯಗಳನ್ನು ಒರಳಿನಲ್ಲಿ ಹಾಕಿ ಕುಟ್ಟುವಂತೆ ಬಹುಸಂಖ್ಯೆಯಲ್ಲಿ ಬರುವ ಜಗತ್ತುಗಳನ್ನೂ ನಾನೇ ಸಂಹರಿಸುವೆನು, ತಮಸ್ಸಿನಲ್ಲಿ ಹಾಕುವೆನು. ಶತ್ರುಗಳು ನನ್ನನ್ನು ಏನು ತಾನೇ ನಿಂದಿಸುವರು? ಅವರು ನಿಂದಿಸುವುದಕ್ಕೂ ಅಸಮರ್ಥರು.' ಹೀಗೆ ಸುಸ್ಪಷ್ಟವಾಗಿ ಜೀವೇಶ್ವರ ಭೇದವನ್ನು ಹೇಳುವ ಶ್ರುತಿವಚನವನ್ನು ಪರಮಪುರುಷನು ಎತ್ತಿ ತೋರಿಸಿದ್ದಾನೆ.

'ಶರೀರಗಳಲ್ಲಿ ಪ್ರವಿಷ್ಟನಾಗಿರುವುದರಿಂದ ಜೀವನೇ ಎಂದು ಪರಮಾತ್ಮನನ್ನು ದುರ್ಬುದ್ಧಿಗಳು ತಿಳಿಯುತ್ತಾರೆ. ಅವರ ಮತವನ್ನು ಅನುಸರಿಸಬಾರದು. ಏಕೆಂದರೆ ಅದು ವೇದವಚನಗಳಿಗೆ ವಿರುದ್ಧವಾಗಿದೆ. ಅದನ್ನು ಅನುಸರಿಸುವವನು ತಮಸ್ಸನ್ನು ಪ್ರವೇಶಿಸುವನು. ಏಕೆಂದರೆ ಶೇಷಶಾಯಿಯಾದ ಸನಾತನನಾದ ವಿಷ್ಣು ಹೇಳಿದ್ದಾನೆ-

'ಈ ಇಡೀ ಜಗತ್ತಾಗಲಿ ಇಂಥ ಅನೇಕ ಜಗತ್ತುಗಳೆ ಆಗಲಿ ಯುದ್ಧದಲ್ಲಿ ನನ್ನ

ಮೇಲೇರಿ ಬರಲಿ. ಮಾನವನು ಧಾನ್ಯಗಳನ್ನು ಒರಳಲ್ಲಿ ಹಾಕಿ ಕುಟ್ಟುವಂತೆ ನಾನೊಬ್ಬನೇ ಆ ಎಲ್ಲ ಜಗತ್ತುಗಳನ್ನು ಪುಡಿಮಾಡುತ್ತೇನೆ ಎಂದು.' ಹೀಗೆ ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

'ನ ಚ ತನ್ಮನೀಷಿತಂ' ಎಂಬಲ್ಲಿ ಚಕಾರದಿಂದ ಅಭೇದಮತ ಅಗ್ರಾಹ್ಯವಷ್ಟೇ ಅಲ್ಲ, ಅದರ ಫಲವಾಗಿ ತಮಸ್ಸನ್ನೂ ಹೊಂದುತ್ತಾರೆ ಎಂದು ಸೂಚಿತವಾಗುತ್ತದೆ.

'ಬ್ರಹ್ಮಾತ್ಮೈಕ್ಯ ಜ್ಞಾನದಿಂದ ತಮಸ್ಸನ್ನು ಹೊಂದುತ್ತಾರೆ, ಭೇದಜ್ಞಾನದಿಂದ ಮುಕ್ತಿಯನ್ನು ಹೊಂದುತ್ತಾರೆ. ಭೇದಜ್ಞಾನವೆಂದರೆ ಜೀವೇಶ್ವರರೊಳಗೆ ಸ್ವಾತಂತ್ರ್ಯಪಾರತಂತ್ರ್ಯ ಮುಂತಾದ ವೈಲಕ್ಷಣ್ಯವನ್ನು ತಿಳಿಯುವುದು ವಿವಕ್ಷಿತವಾಗಿದೆ' ಎಂದು ಬ್ರಹ್ಮವೈವರ್ತಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ತ್ವತ್ತೋಽಸ್ಯ ಜನ್ಮಸ್ಥಿತಿಸಂಯಮಾನ್ ವಿಭೋ
ವದಂತ್ಯನೀಹಾದಗುಣಾದವಿಕ್ರಿಯಾತ್ ।
ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ
ತದಾಶ್ರಯತ್ವಾದುಪಚರ್ಯಸೇ ಗುಣೈಃ ॥ ೨೦ ॥

ಪ್ರಭು, ಈ ಜಗತ್ತಿಗೆ ಸೃಷ್ಟಿ ಸ್ಥಿತಿ ಲಯಗಳಾಗುವುದು ನಿನ್ನಿಂದ ಎಂದು ಜ್ಞಾನಿಗಳು ಹೇಳುತ್ತಾರೆ. ಆದರೆ ನಿನ್ನಿಂದ ಜಗತ್ತು ಉಂಟಾಗುವುದು ಮಣ್ಣಿನಿಂದ ಮಡಿಕೆಯಂತೆ ಅಲ್ಲ. ನೀನು ನಿರ್ವಿಕಾರಿ. ಕುಂಬಾರನಿಂದ ಮಡಿಕೆ ಯಂತೆಯೂ ಅಲ್ಲ. ಅವನಂತೆ ನೀನು ಶ್ರಮ ಪಡುವುದಿಲ್ಲ. ತ್ರಿಗುಣಗಳಿಂದಲೆ ಜಗತ್ತನ್ನು ನಿರ್ಮಿಸುವೆ. ಆದರೂ ನೀನು ಗುಣಬದ್ಧನಲ್ಲ. ಲೋಕದಲ್ಲಿ ಇಂಥ ಕರ್ತೃತ್ವವನ್ನು ಎಲ್ಲೂ ಕಂಡಿಲ್ಲವಾದರೂ ಸರ್ವಶಕ್ತ ನಾದ ಗುಣಪೂರ್ಣನಾದ ನಿನ್ನಲ್ಲಿ ಅದು ಇರುವುದು ವಿರುದ್ಧವಲ್ಲ. ಸತ್ವಾದಿಗುಣಬದ್ಧನಲ್ಲದಿದ್ದರೂ ಆ ಗುಣಗಳಿಗೆ ಆಧಾರನಾಗಿರುವುದರಿಂದ 'ಗುಣಿ' 'ಗುಣವುಳ್ಳವನು' ಎಂದು ವ್ಯವಹರಿಸಲ್ಪಡುವಿ.

ಇಲ್ಲಿ [೧]ಶ್ರೀಧರ ವ್ಯಾಖ್ಯಾನ ಹೀಗೆ ಹೇಳುತ್ತದೆ- 'ಪರಮಾತ್ಮನಿಗೆ ದೃಶ್ಯವಾಗುವುದರಿಂದ ಈ ಪ್ರಪಂಚ ಅವನಿಗಿಂತ ಬೇರೆಯಾಗಿ ಸತ್ಯವಲ್ಲ, ಮಿಥ್ಯಾ ಎಂದು ಹಿಂದಿನ ಶ್ಲೋಕದಲ್ಲಿ ಹೇಳಿದ್ದಾಯಿತು. ಇದೀಗ ಈ ಶ್ಲೋಕದಲ್ಲಿ ಪರಮಾತ್ಮ ಈ ಪ್ರಪಂಚಕ್ಕೆ ಉಪಾದಾನನಾಗಿರುವುದರಿಂದಲೂ ಪ್ರಪಂಚ ಅವನಿಗಿಂತ ಬೇರೆಯಾಗಿ ಸತ್ಯವಲ್ಲ, ಮಿಥ್ಯೆಯಾಗಿದೆ ಎಂದು ವಸುದೇವ ಹೇಳುತ್ತಾನೆ. ನಿನ್ನಿಂದಲೆ ಪ್ರಪಂಚದ ಸೃಷ್ಟಿಸ್ಥಿತಿಲಯಗಳು. ಅದರಿಂದ ನೀನೆ ಅದಕ್ಕೆ ಉಪಾದಾನ. ಆದರೆ ವಿವರ್ತೋಪಾದನನಾಗಿರುವುದರಿಂದ ನಿನ್ನಲ್ಲಿ ತ್ರಿಗುಣವಿಲ್ಲ, ಕ್ರಿಯೆ ಇಲ್ಲ, ವಿಕಾರಿತ್ವವಿಲ್ಲ. ಹೀಗೆ ಅವಿಕಾರಿಯಾದ ನಿನ್ನಲ್ಲಿ ಕರ್ತೃತ್ವ, ಕ್ರಿಯೆ ಎಂಬ ವಿಕಾರ ಹೇಗೆ ಕೂಡುತ್ತದೆ? ಎಂದರೆ ಶುದ್ಧ ಬ್ರಹ್ಮರೂಪದಿಂದ ನೀನು ಅವಿಕಾರಿಯೆ. ಈಶ್ವರ ರೂಪದಿಂದ ಕರ್ತನೂ ಆಗಿರುವೆ. ಅವಿಕಾರಿತ್ವ ಕರ್ತೃತ್ವಗಳು ನಿನ್ನಲ್ಲಿ ಪರಸ್ಪರ ವಿರುದ್ಧವಲ್ಲ. ಏಕೆಂದರೆ ಕರ್ತೃತ್ವ ನಿನ್ನ ಅಧೀನವಾದ ಗುಣದಲ್ಲಿಯೇ ಇರುತ್ತದೆ. ಭೃತ್ಯನ ಕಾರ್ಯವನ್ನು ಗೌಣವಾಗಿ ರಾಜನ ಕಾರ್ಯವೆಂದು ವ್ಯವಹರಿಸುವಂತೆ ಗುಣಗಳ ಕರ್ತೃತ್ವವನ್ನು ನಿನ್ನ ಕರ್ತೃತ್ವವೆಂದು ಗೌಣವಾಗಿ ವ್ಯವಹರಿಸುತ್ತೇವೆ. ಅದರಿಂದ ವಿರೋಧವಿಲ್ಲ' ಎಂದು.

ಈ ವ್ಯಾಖ್ಯಾನ ವ್ಯಾಹತಿಗಳ ಸರಮಾಲೆಯಾಗಿದೆ. ಹಿಂದಿನ ಶ್ಲೋಕದಲ್ಲಿ ಆತ್ಮನಿಗೆ ದೃಶ್ಯವಾದ ಪ್ರಪಂಚವನ್ನು ಸತ್ಯವೆಂದು ತಿಳಿಯುವವನು ಅಜ್ಞಾನಿ ಎಂದಿದೆ. ಅಲ್ಲಿ 'ಆತ್ಮನೆ'ಂದರೆ ಪರಮಾತ್ಮನೆಂದಿಟ್ಟುಕೊಂಡರೆ ಅವನಿಗೆ ಭ್ರಮವಿಲ್ಲದಿರುವುದರಿಂದ ಅವನಿಗೆ ದೃಶ್ಯವಾಗುವ ಪ್ರಪಂಚ ಸತ್ಯವೇ ಆಗಬೇಕು. ಸತ್ಯವೆಂದು ತಿಳಿಯುವವನು ಅಜ್ಞಾನಿ ಎನಿಸುವುದು ಹೇಗೆ? 'ತಾನೆ'ಂದು, ಜೀವಾತ್ಮನೆಂದೇ ಇಟ್ಟುಕೊಂಡರೆ 'ಪರಮಾತ್ಮನಿಗೆ ದೃಶ್ಯವಾದ್ದರಿಂದ ಜಗತ್ತು ಮಿಥ್ಯೆ' ಎಂದು ಆ ಶ್ಲೋಕದಲ್ಲಿ ಹೇಳಿದಂತಾಗದು.

ಪರಮಾತ್ಮನಿಂದಲೇ ಸೃಷ್ಟಿ ಸ್ಥಿತಿ ಲಯಗಳೆಂದು ಈ ಶ್ಲೋಕ ಹೇಳುತ್ತಿದೆ. ಈ ಸೃಷ್ಟಿಸ್ಥಿತಿಲಯ ಕರ್ತೃತ್ವದಿಂದಲೇ ಉಪಾದಾನತ್ವ ಸಿದ್ಧವಾಗುವುದೆಂದಿಟ್ಟುಕೊಂಡು

---

೧ ಏವಂ ಪರಮೇಶ್ವರದೃಶ್ಯಸ್ಯ ತದ್‌ವ್ಯತಿರೇಕೇಣಾಸತ್ವಮುಕ್ತಂ। ಪರಮೇಶ್ವರೋಪಾದಾನತ್ವಾದಪಿ ತದ್‌ವ್ಯತಿರೇಕೇಣಾಸತ್ವಮಿತ್ಯಾಹ ತ್ವತ್ತೋಽಸ್ಯೇತಿ। ನಚೈವಂ ಸತ್ಯಪಿ ವಿಕಾರಿತ್ವಮಿತ್ಯಾಹ ಅನೀಹಾದಿತಿ। ಅಗುಣತ್ವಾದನೀಹತ್ವಂ, ತತೋಽವಿಕಾರಿತ್ವಮಿತ್ಯರ್ಥಃ। ನನ್ವನೀಹತ್ವೇ ಕಥಂ ಕರ್ತೃತ್ವಂ? ಕರ್ತೃತ್ವೇ ವಾ ಕುತೋಽವಿಕಾರಿತ್ವಂ? ತತ್ರಾಹ ತ್ವಯೀಶ್ವರ ಇತಿ। ಬ್ರಹ್ಮತ್ವಾದವಿಕಾರಿತ್ವಂ। ಈಶ್ವರತ್ವಾತ್ ಕರ್ತೃತ್ವಮಿತಿ। ನನ್ವೇತದಪಿ ವಿರುದ್ಧಮೇವ। ನೇತ್ಯಾಹ ತ್ವದಾಶ್ರಯತ್ವಾದಿತಿ। ಗುಣೈಃ ಕುರ್ವದ್ಭಿಸ್ತ್ವಯಿ ಸೃಷ್ಟ್ಯಾದಿಕರ್ತೃತ್ವಮುಪಚರ್ಯತೇ। ಗುಣಾಶ್ರಯತ್ವಾತ್। ಯಥಾ ಭೃತ್ಯಕಾರ್ಯಂ ರಾಜನೀತಿ। -ಶ್ರೀಧರಃ

'ಪರಮಾತ್ಮ ಉಪಾದಾನನಾದ್ದರಿಂದಲೂ ಅವನಿಗಿಂತ ಬೇರೆಯಾಗಿ ಸತ್ಯವಲ್ಲ, ಮಿಥ್ಯೆಯೇ, ಈ ಪ್ರಪಂಚ' ಎನ್ನುತ್ತಾರೆ. ಮುಂದೆ ಇದೇ ಶ್ಲೋಕದಲ್ಲಿ 'ಕರ್ತೃತ್ವವು ಉಪಾದಾನತ್ವಕ್ಕೆ ವಿರೋಧಿ, ಏಕೆಂದರೆ ಕರ್ತೃತ್ವವೆಂಬುದು ವಿಕಾರ. ಉಪಾದಾನವು ಅವಿಕಾರಿಯಾಗಿರುತ್ತದೆ' ಎಂದು ವಿರೋಧವನ್ನು ಶಂಕಿಸುತ್ತಾರೆ. ಕರ್ತೃತ್ವದಿಂದ ಉಪಾದಾನತ್ವವನ್ನು ಸಾಧಿಸಿ, 'ಕರ್ತೃತ್ವವು ಉಪಾದಾನತ್ವಕ್ಕೆ ವಿರೋಧಿ' ಎನ್ನುವುದು ವ್ಯಾಹತ. ವಿರೋಧ ಪರಿಹಾರಕ್ಕಾಗಿ 'ಕರ್ತೃತ್ವ ಬ್ರಹ್ಮನಲ್ಲಿಲ್ಲ, ಅದು ಗುಣದಲ್ಲೇ ಇರುತ್ತದೆ' ಎನ್ನುತ್ತ ಕರ್ತೃತ್ವವನ್ನು ಅಪಲಾಪ ಮಾಡಿದರೆ, ಕರ್ತೃತ್ವದಿಂದ ಸಾಧಿಸಬೇಕಾಗಿರುವ ಉಪಾದಾನತ್ವವೂ ಇಲ್ಲವಾದೀತು. 'ಎರಡಕ್ಕೆ ವಿರೋಧ'ವೆಂದು ಶಂಕಿಸಿ ಅದರ ಪರಿಹಾರಕ್ಕೆ 'ಎರಡೂ ಇಲ್ಲ' ಎನ್ನುವುದೆ? ಉಪಾದಾನತ್ವವಿಲ್ಲ ಎನ್ನುವುದೂ ಸಿದ್ಧಾಂತವೆ?

'ಕರ್ತೃತ್ವ ನಿನ್ನ ಅಧೀನವಾದ ಗುಣದಲ್ಲಿ ಇದೆ' ಎನ್ನುವುದೂ ಸರಿಯಲ್ಲ. ಗುಣ ಬ್ರಹ್ಮನಲ್ಲಿ ಆರೋಪಿತ. ಆರೋಪಿತವಾದ ಹಾವು ಹಗ್ಗದ ಅಧೀನವಾಗಿರುವುದಿಲ್ಲ. ರಾಜನ ಅಧೀನನಾದ ಭೃತ್ಯನ ದೃಷ್ಟಾಂತ ಇಲ್ಲಿ ಕೂಡುವುದಿಲ್ಲ. 'ಗುಣವು ಬ್ರಹ್ಮನ ಅಧೀನವಲ್ಲ, ಬ್ರಹ್ಮನೇ ಗುಣಕ್ಕೆ ಅಧೀನ'ನೆನ್ನಬೇಕಾಗುತ್ತದೆ. ಪರಮಾತ್ಮನ ಸರ್ವಜ್ಞತ್ವ ಸರ್ವಕರ್ತೃತ್ವ ಮುಂತಾದ ಎಲ್ಲ ಮಹಿಮೆಗಳೂ ಗುಣಕ್ಕೇ ಅಧೀನ. ಸ್ವತಃ ಅವನಲ್ಲಿ ಏನೂ ಇಲ್ಲ, ನಿರ್ಧರ್ಮಕ.

ಅನೀಹೋಽಕ್ಲಿಷ್ಟಕಾರಿತ್ವಾತ್ ತಥಾಽವಿಕೃತ ಏವ ಸನ್ ।
ಸರ್ವಂ ಕರೋತಿ ತದ್ ಯುಕ್ತಮೈಶ್ವರ್ಯಾತ್ ಪೂರ್ಣಶಕ್ತಿತಃ ॥
ಇತಿ ಬ್ರಾಹ್ಮೇ ।
ಅಗುಣಶ್ಚೇತ್ ಕಥಂ ಗುಣೈಃ ಸೃಷ್ಟ್ಯಾದಿಕೃದಿತಿ? ತದಾಶ್ರಯತ್ವಾದಿತಿ ।
ಅಗುಣೋಽಗುಣದೇಹತ್ವಾತ್ ಸಗುಣೋ ಗುಣಧಾರಣಾತ್ ।
ಐಶ್ವರ್ಯಾದಿಗುಣತ್ವಾದ್ವಾ ವಾಸುದೇವ ಇತೀರ್ಯತೇ ॥
ಇತ್ಯಾಗ್ನೇಯೇ ॥

'ಏನೂ ಶ್ರಮವಿಲ್ಲದೆ ಎಲ್ಲ ಕಾರ್ಯಗಳನ್ನೂ ಮಾಡುವವನಾದ್ದರಿಂದ ಅನೀಹನೆನಿಸುತ್ತಾನೆ. ಏನೂ ವಿಕಾರ ಹೊಂದದೆ ಎಲ್ಲವನ್ನೂ ಸೃಜಿಸುವುದರಿಂದ ಅವಿಕ್ರಿಯನೆನಿಸುತ್ತಾನೆ. ಶ್ರಮವಿಲ್ಲದಿರುವುದು, ಎಲ್ಲ ಕಾರ್ಯಗಳನ್ನು ನಡೆಸುವುದು ಮತ್ತು ವಿಕಾರಹೊಂದದಿರುವುದು, ಎಲ್ಲವನ್ನೂ ಸೃಜಿಸುವುದು ಈ ವಿರುದ್ಧ ಗುಣಗಳು ಲೋಕದಲ್ಲಿ ಕಾಣದಿದ್ದರೂ ನಿನ್ನಲ್ಲಿ

ಕೊಡುತ್ತದೆ. ಏಕೆಂದರೆ ನೀನು ಅಘಟಿತಘಟನಾ ಸಮರ್ಥನಾಗಿರುವಿ ಮತ್ತು ಸರ್ವಶಕ್ತನಾಗಿರುವಿ' ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಅವನು ನಿರ್ಗುಣನಾದರೆ ಗುಣಗಳಿಂದ ಸೃಷ್ಟಿ ಮುಂತಾದುವನ್ನು ಹೇಗೆ ಮಾಡುತ್ತಾನೆ ಎಂದರೆ ಸತ್ವಾದಿಗುಣಗಳಿಂದ ಬದ್ಧನಾಗದೆಯೆ ಅವುಗಳಿಗೆ ಆಧಾರನಾಗಿರುವುದರಿಂದ ಗುಣವಂತನೆಂದು ಕರೆಸಿಕೊಳ್ಳುತ್ತಾನೆ. ಆ ಗುಣಗಳಿಂದ ಸೃಷ್ಟ್ಯಾದಿಗಳನ್ನು ಮಾಡುತ್ತಾನೆ.

'ವಾಸುದೇವನು ಸತ್ವಾದಿಗುಣಾತ್ಮಕ ಶರೀರರಹಿತನಾದ್ದರಿಂದ ಅಗುಣನೆನಿಸುತ್ತಾನೆ. ಗುಣಬದ್ಧನಾಗದೆ ಗುಣಾಶ್ರಯನಾಗಿರುವುದರಿಂದ ಸಗುಣನೆನಿಸುತ್ತಾನೆ. ಆದರಿಂದ ಗುಣಗಳಿಂದ ಸೃಷ್ಟ್ಯಾದಿಕರ್ತನೆನಿಸುತ್ತಾನೆ. ಐಶ್ವರ್ಯಾದಿ ಸ್ವರೂಪಗುಣಗಳುಳ್ಳವನಾದ್ದರಿಂದಲೂ ಸಗುಣನೆನಿಸಿ ಆ ಗುಣಗಳಿಂದ ಸೃಷ್ಟ್ಯಾದಿಕರ್ತನೆನಿಸುತ್ತಾನೆ' ಎಂದು ಅಗ್ನಿಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ಸ ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ
ಬಿಭರ್ಷಿ ಶುಕ್ಲಂ ಖಲು ವರ್ಣಮಾತ್ಮನಃ ।
ಸರ್ಗಾಯ ರಕ್ತಂ ರಜಸೋಪಬೃಂಹಿತಂ
ಕೃಷ್ಣಂ ಚ ವರ್ಣಂ ತಮಸಾ ಜನಾತ್ಯಯೇ ॥ ೨೦ ॥

ಸಜ್ಜನರಿಗೆ ಜ್ಞಾನ ಭಕ್ತ್ಯಾದಿ ಗುಣಗಳನ್ನು ನೀಡುವ ಮೂಲಕ ಮೂಲೋಕವನ್ನು ಕಾಪಾಡುವುದಕ್ಕಾಗಿ ನೀನು ಸ್ವೇಚ್ಛೆಯಿಂದ ಶುದ್ಧಸತ್ವವನ್ನು ವೃದ್ಧಿಗೊಳಿಸುತ್ತ ತನ್ನ ಶುಕ್ಲವರ್ಣವನ್ನು ತೋರಿಸುವಿ. ಸಜ್ಜನರಿಗೆ ಜ್ಞಾನಾಸಕ್ತಿಯನ್ನು ಉಂಟುಮಾಡುವುದಕ್ಕಾಗಿ ರಜೋನಾಮಕ ಶುದ್ಧಸತ್ವ ಪ್ರವರ್ತಕವಾದ ರಕ್ತರೂಪವನ್ನು ಪ್ರಕಟಪಡಿಸುವಿ. ದುರ್ಜನ ನಾಶಕ್ಕಾಗಿ ತಮೋನಾಮಕ ಶುದ್ಧಸತ್ವಪ್ರವರ್ತಕವಾದ ಕೃಷ್ಣವರ್ಣವನ್ನು ತೋರಿಸುವಿ.

'ಮೂಲೋಕವನ್ನು ಕಾಪಾಡುವುದಕ್ಕಾಗಿ ಸ್ವಸಂಕಲ್ಪದಿಂದ ಶುದ್ಧಸತ್ವಮಯವಾದ ವರ್ಣವನ್ನು ಅಂದರೆ ಶರೀರವನ್ನು ಪರಿಗ್ರಹಿಸುವಿ. ಸೃಷ್ಟಿಗಾಗಿ

ಚತುರ್ಮುಖನ ರಜೋಗುಣಮಯವಾದ ವರ್ಣವನ್ನು ಅಂದರೆ ಶರೀರವನ್ನು ಆಶ್ರಯಿಸುವಿ. ಲಯಕ್ಕಾಗಿ ರುದ್ರನ ತಮೋಗುಣಮಯವಾದ ವರ್ಣವನ್ನು ಅಂದರೆ ಶರೀರವನ್ನು ಆಶ್ರಯಿಸುವಿ. ಬ್ರಹ್ಮರುದ್ರರಲ್ಲಿ ಪ್ರವಿಷ್ಟನಾಗಿ ಸೃಷ್ಟಿ ಲಯಗಳನ್ನೂ ಸ್ವತಃ ಪಾಲನೆಯನ್ನೂ ಮಾಡುವಿ ಎಂದರ್ಥ' ಎಂದು ವೀರರಾಘವ ವ್ಯಾಖ್ಯಾನ[೧] ಹೇಳುತ್ತದೆ.

ಆದರೆ ಶ್ರೀಹರಿಗೆ ಜಡಶರೀರವಿಲ್ಲ, ಚಿನ್ಮಯ ಶರೀರದಿಂದಲೇ ಪಾಲನೆ ಮಾಡುತ್ತಾನೆ. ಅದರಿಂದ ಶುದ್ಧಸತ್ವಮಯ ಶರೀರವನ್ನು ಒಪ್ಪುವುದು ಪ್ರಮಾಣವಿರುದ್ಧವಾಗುವುದು. ಹಾಗೇ ಬ್ರಹ್ಮರುದ್ರರಿಗೂ ರಜಸ್ತಮೋಮಯ ಶರೀರ ಒಪ್ಪುವುದೂ ಪ್ರಮಾಣ ವಿರುದ್ಧ. ದೇವತೆಗಳೆಲ್ಲರಿಗೂ ಸತ್ವಗುಣಮಯ ಶರೀರವೇ ಇದೆ. ರಜೋಗುಣಕ್ಕೆ ತಮೋಗುಣಕ್ಕೆ ಪ್ರವರ್ತಕರಾದ ಮಾತ್ರಕ್ಕೆ ಅವರ ಶರೀರವನ್ನು ರಜಸ್ತಮೋಮಯವೆನ್ನಬಾರದು. ಮಾನವರ ಮತ್ತು ಅಸುರರ ಶರೀರಗಳನ್ನು ಮಾತ್ರ ಹಾಗೆನ್ನಬೇಕು.

ಬ್ರಹ್ಮತರ್ಕವಚನಾನುಸಾರ ಭಾಗವತ ಶ್ಲೋಕಕ್ಕೆ ಹೀಗೆ ವ್ಯಾಖ್ಯಾನ ಮಾಡುವುದು ಸಂಗತವಾಗುವುದು-

ಜಗತಾಂ ವರ್ಧಯನ್ ಸತ್ವಂ ಯದಾ ರಕ್ಷತಿ ಕೇಶವಃ ।
ಹಯಗ್ರೀವಾದಿರೂಪೇಣ ಶುಕ್ಲವರ್ಣಸ್ತದಾ ವಿಭುಃ ।
ವರ್ಧಯಂಸ್ತು ರಜೋ ಯೇನ ಜಗದುತ್ಪಾದಯೇದ್ಧರಿಃ ।
ತದ್ ರಕ್ತಂ ಜಾಮದಗ್ನ್ಯಾದಿರೂಪಂ ಯೇನ ವಿನಾಶಯೇತ್ ।
ವರ್ಧಯಂಸ್ತು ತಮೋ ಲೋಕೇ ತತ್ಕೃಷ್ಣಂ ಯಾದವಾದಿಕಂ ।

---

೧ ತ್ರಿಲೋಕಸ್ಥಿತಯೇ ಪಾಲನಾಯ ಆತ್ಮನಃ ಸ್ವಸ್ಯ ಮಾಯಯಾ ಸಂಕಲ್ಪೇನ ಶುಕ್ಲಂ ವಿಶುದ್ಧವರ್ಣಮಾಕಾರಂ ರಜಸ್ತಮೋಭ್ಯಾಮನನುವಿದ್ಧಮಪ್ರಾಕೃತಂ ಶುದ್ಧ ಸತ್ವಮಯಂ ವಿಗ್ರಹಂ ಬಿಭರ್ಷಿ ಸಾಕ್ಷಾದುಪಾದತ್ಸೇ । ಸರ್ಗಾಯ ತ್ರಿಲೋಕ ಸೃಷ್ಟಯೇ ತು ರಜಸಾ ರಜೋಗುಣೋಪಲಕ್ಷಿತೇನ ಚತುರ್ಮುಖಾಖ್ಯ ಜೀವೇನ ಉಪಬೃಂಹಿತ ಮಧಿಷ್ಠಿತಂ ರಕ್ತಂ ರಜೋಗುಣಮಯಂ ವರ್ಣಂ ಶರೀರಂ ಬಿಭರ್ಷಿ । ಚತುರ್ಮುಖಾಖ್ಯ ಜೀವದ್ವಾರಾ ಬಿಭರ್ಷೀತ್ಯರ್ಥಃ । ಪ್ರಲಯೇ ನಿಮಿತ್ತೇ ತಮಸಾ ಗುಣೇನೋಪಲಕ್ಷಿತೇನ ರುದ್ರಾಖ್ಯ ಜೀವೇನೋಪಬೃಂಹಿತಂ ಕೃಷ್ಣಂ ತಮೋಗುಣಮಯಂ ವರ್ಣಂ ಶರೀರಂ ಬಿಭರ್ಷಿ। ಬ್ರಹ್ಮರುದ್ರಾಖ್ಯ ಜೀವಾನುಪ್ರವೇಶೇನ ಜನ್ಮಸಂಯಮೌ ಕರೋಷಿ । ಸ್ಥಿತಿಂ ತು ಸಾಕ್ಷಾತ್ ತ್ವಮೇವ ಕರೋಷೀತ್ಯರ್ಥಃ। -ವೀರರಾಘವಃ

ಸರ್ವತ್ರ ಸರ್ವಂ ಕುರುತೇ ವಿಶೇಷಸ್ತತ್ರ ಕೀರ್ತಿತಃ ।
ಜ್ಞಾನದಾನಾದಿನಾ ರಕ್ಷಾ ಮಹತಾಂ ಸಂಪ್ರಕೀರ್ತಿತಾ।
ರಾಗದಾನೇನ ಮಹತಾಂ ಸೃಷ್ಟಿಃ ಸೃಷ್ಟಿರುದೀರ್ಯತೇ ।
ಅಸತಾಂ ತು ತಮೋವೃದ್ಧಿಂ ಕುರ್ವನ್ ಪಾತಯತೇ ಯದಾ ।
ಸತಾಂ ವಿವರ್ಧನಾರ್ಥಾಯ ಕೃಷ್ಣರೂಪೀ ತದಾ ಹರಿಃ ।
ಜ್ಞಾನಾದ್ಯುತ್ಪತ್ತಿ ಕೃಚ್ಚಾಪಿ ರೂಪಂ ರಕ್ತಂ ವಿಭೋಃ ಸ್ಮೃತಂ ।
ತಮೋವಿನಾಶಕಮಪಿ ಕೃಷ್ಣಂ ವಿಷ್ಣೋರುದಾಹೃತಂ ।
ಆಚಾರ್ಯಾದಿಷು ರಾಗಾರ್ಥೇ ಶುದ್ಧಸತ್ವಾತ್ಮಕಂ ರಜಃ ।
ಯತೋ ವ್ಯಪೇಕ್ಷಿತಂ ನಾಶೇ ತಮಸೋಽಪಿ ತಮಃ ಪರಂ ।
ತಮೋ ದ್ವೇಷಾತ್ಮಕಂ ಶುದ್ಧಸತ್ವಾತ್ಮಕಮುದೀರ್ಯತೇ ।
ಏವಂ ಸೃತಿಗತಾನಾಂ ತು ರಾಗಾದ್ಯಾ ನ ಗುಣೋದ್ಭವಾಃ ।
ಶುದ್ಧಜ್ಞಾನಾತ್ಮಕಾಃ ಸರ್ವೇ ಮುಕ್ತಾನಾಂ ನಾತ್ರ ಸಂಶಯಃ ।
ಸರ್ವತ್ರ ಸರ್ವಕೃಚ್ಚಾಪಿ ಹಯಗ್ರೀವಾದಿರೂಪಕಃ ।
ಜ್ಞಾನಾದಿರಕ್ಷಕೋ ವಿಷ್ಣುರ್ಜಾಮದಗ್ನ್ಯಾದಿರೂಪವಾನ್ ।
ಜ್ಞಾನಾದ್ಯುತ್ಪಾದಕೋ ನಿತ್ಯಂ ಕೃಷ್ಣಾದಿರ್ದೋಷ ನಾಶಕಃ ।
ಏಕರೂಪೋಽಪಿ ಭಗವಾನ್ ಬಹುರೂಪ ಇವೇಯತೇ ।
ಅಚಿಂತ್ಯೈಶ್ವರ್ಯರೂಪತ್ವಾತ್ ಪೂರ್ಣಾನಂದೈಕರೂಪಕಃ ।

ಇತಿ ಬ್ರಹ್ಮತರ್ಕೇ ॥

ಸ್ವೇಚ್ಛಯಾ ತು ಗುಣಾನ್ ವಿಷ್ಣುರ್ನಾನಾರೂಪಾನ್ ಕರೋತ್ಯಜಃ ।
ಗುಣಾನಾಮಾಶ್ರಯತ್ವಾತ್ತು ಭವೇತ್ ಸ ಗುಣಬೃಂಹಿತಃ ।

ಇತಿ ತಂತ್ರಭಾಗವತೇ ॥

ಕೇಶವನು ಜೀವರಲ್ಲಿ ಸತ್ವಗುಣವನ್ನು ಬೆಳೆಸಿ ಲೋಕಗಳನ್ನು ರಕ್ಷಿಸುವಾಗ ಹಯಗ್ರೀವ ವಿಷ್ಣು ಮುಂತಾದ ರೂಪಗಳಿಂದ ಶುಕ್ಲವರ್ಣನಾಗುತ್ತಾನೆ. ರಜೋಗುಣವನ್ನು ಬೆಳೆಸಿ ಲೋಕಸೃಷ್ಟಿ ಮಾಡುವಾಗ ಪರಶುರಾಮ ಚತುರ್ಮುಖಾಂತರ್ಗತ ಬ್ರಹ್ಮರೂಪ ಮೊದಲಾದ ರೂಪಗಳಿಂದ ರಕ್ತವರ್ಣನಾಗುತ್ತಾನೆ. ತಮೋಗುಣವನ್ನು ಬೆಳೆಸಿ ಜಗತ್ತನ್ನು ನಾಶಗೊಳಿಸುವಾಗ ಕೃಷ್ಣ ರುದ್ರಾಂತರ್ಗತ ರುದ್ರರೂಪ ಮುಂತಾದ ರೂಪಗಳಿಂದ ಕೃಷ್ಣವರ್ಣ

ನಾಗುತ್ತಾನೆ. (ಭಾಗವತದಲ್ಲಿ 'ಸತ್ವಂ ಶುಕ್ಲವಣಂ' ಎಂಬಲ್ಲಿ ನಡುವೆ ಅಧ್ಯಾಹಾರ ಬೇಕು. 'ಸತ್ವಂ ವರ್ಧಯನ್ ಶುಕ್ಲವರ್ಣಂ' ಎಂದು. ಮತ್ತು ಆತ್ಮನಃ ಶುಕ್ಲಂ ವರ್ಣಂ' ಎಂದು ಆತ್ಮಪದವಿರುವುದರಿಂದ 'ತನ್ನ ಸ್ವಾಭಾವಿಕವಾದ ವರ್ಣ'ವೆ ಇಲ್ಲಿ ಉಕ್ತವಾಗಿದೆ ಹೊರತು ಪ್ರಾಕೃತ ಗುಣತ್ರಯದ ವರ್ಣವಲ್ಲ)

ಎಲ್ಲ ರೂಪಗಳಲ್ಲಿಯೂ ಎಲ್ಲ ಕಾರ್ಯಗಳನ್ನೇ ಕೇಶವ ಮಾಡುತ್ತಾನೆ. ಆದರೂ ಲೋಕದೃಷ್ಟಿಯಿಂದ ಪ್ರಧಾನವಾಗಿ ರಕ್ಷಣ ಮುಂತಾದುವನ್ನು ಹಯಗ್ರೀವಾದಿ ರೂಪಗಳಲ್ಲಿ ಹೇಳಲಾಗಿದೆ. ಹಯಗ್ರೀವಾದಿ ರೂಪಗಳಲ್ಲಿ ರಕ್ಷಕತ್ವ ಹೇಗೆ ಪ್ರಧಾನವೆಂದರೆ ಮೋಕ್ಷಯೋಗ್ಯರಿಗೆ ಜ್ಞಾನದಾನಾದಿಗಳನ್ನು ಉಂಟುಮಾಡುವುದೇ ಇಲ್ಲಿ ರಕ್ಷಕತ್ವ ಅವರಿಗೆ ಜ್ಞಾನಾದಿಗಳಲ್ಲಿ ಆಸಕ್ತಿ ಉಂಟುಮಾಡುವುದೆಂಬ ಸೃಷ್ಟಿಯೇ ಸೃಷ್ಟಿ ಎನಿಸುತ್ತದೆ. ಇದು ಜಾಮದಗ್ನ್ಯಾದಿಗಳಲ್ಲಿ ಕೂಡುತ್ತದೆ. ಸಜ್ಜನರ ಆನಂದಾದಿಗಳ ಅಭಿವೃದ್ಧಿಗಾಗಿ ಕೃಷ್ಣರೂಪಿ ಹರಿ ದುರ್ಜನರಲ್ಲಿ ತಮೋವೃದ್ಧಿ ಮಾಡಿ ಅವರನ್ನು ತಮಸ್ಸಿನಲ್ಲಿ ಹಾಕುತ್ತಾನೆ. ಅದು ಲಯವೆನಿಸುತ್ತದೆ. ಇದು ಕೃಷ್ಣಾದಿ ರೂಪಗಳಲ್ಲಿ ಕೂಡುತ್ತದೆ.

ಜ್ಞಾನಾದಿಗಳನ್ನು ಕೊಡುವ ಶುಕ್ಲವರ್ಣದ ಹಯಗ್ರೀವಾದಿ ರೂಪವೂ ಜ್ಞಾನಾಸಕ್ತಿ ಉಂಟುಮಾಡಿ ರಕ್ತವರ್ಣವಾಗಿರುತ್ತದೆ. ರಕ್ತವರ್ಣದ ಜಾಮದಗ್ನ್ಯಾದಿ ರೂಪವೂ ಜ್ಞಾನಾದಿಗಳನ್ನು ಕೊಡುತ್ತದೆ. ಕೃಷ್ಣವರ್ಣದ ಕೃಷ್ಣಾದಿ ರೂಪವು ದುರ್ಜನರಲ್ಲಿ ತಮೋವೃದ್ಧಿ ಮಾಡುವುದು ಮಾತ್ರವಲ್ಲದೆ ಸಜ್ಜನರಲ್ಲಿ ತಮೋನಾಶಕವೂ ಆಗಿದೆ.

ಆಚಾರ್ಯರಲ್ಲಿ ಪಾಠ ಹೇಳುವ ಇಚ್ಛೆ, ಶಿಷ್ಯರಲ್ಲಿ ಪಾಠ ಕೇಳುವ ಇಚ್ಛೆಗಳಿಗಾಗಿ ಕೇಶವನು ಬೆಳೆಸುವ ರಜವು ಶುದ್ಧ ಸತ್ವಾತ್ಮಕವೆ. ಹಾಗೇ ವಿಷ್ಣುದ್ವೇಷ ಅಜ್ಞಾನ ಮುಂತಾದ ರೂಪದ ತಮಸ್ಸಿನ ನಾಶಕ್ಕೆ ಬೇಕಾಗುವ ದ್ವೇಷರೂಪವಾದ ತಮಸ್ಸು ಸಹ ಬೇರೆಯೇ ಶುದ್ಧಸತ್ವಾತ್ಮಕವಾದುದು. ಹೀಗೇ ಸಂಸಾರಿಗಳಿಗೆ ಹೇಳಿದ ತಮೋ ವಿಷಯಕ ದ್ವೇಷರೂಪವಾದ ತಮಸ್ಸೂ ಕೂಡ ಶುದ್ಧ ಸತ್ವಾತ್ಮಕವೆ ವಿವಕ್ಷಿತವಾಗಿದೆ.

ಮುಕ್ತರಿಗೆ ಮಾತ್ರ ವಿಷ್ಣುವಿಷಯಕಜ್ಞಾನ-ರಾಗ ಅವೈಷ್ಣವವಿಷಯಕ ದ್ವೇಷಗಳು ಸಂಸಾರಿಗಳಂತೆ ಶುದ್ಧಸತ್ವಗುಣಜನ್ಯವಲ್ಲ. ಅವು ಅವರ ಶುದ್ಧ ಸ್ವರೂಪಜ್ಞಾನಾತ್ಮಕವಾಗಿವೆ. ಇದರಲ್ಲಿ ಸಂಶಯವಿಲ್ಲ.

ಎಲ್ಲ ರೂಪಗಳಲ್ಲಿ ಎಲ್ಲ ಕಾರ್ಯಗಳನ್ನು ಮಾಡುತ್ತಿದ್ದರೂ ಹಯಗ್ರೀವಾದಿ ರೂಪಿಯು ಜ್ಞಾನಾದಿರಕ್ಷಕ. ಜಾಮದಗ್ನ್ಯಾದಿರೂಪಿಯು ಜ್ಞಾನಾದಿಕಾರಕ.

ಕೃಷ್ಣಾದಿರೂಪಿಯು ದೋಷನಾಶಕನೆನಿಸುವನು. ಅವನೇ ಜ್ಞಾನಾದಿ ಕಾರಕನೂ ಆಗುವನು. ಹೀಗಾಗಿ ಒಂದೇ ರೂಪಉಳ್ಳವನಾದರೂ ಅನೇಕ ಕಾರ್ಯ ಮಾಡುತ್ತ ಅನೇಕ ರೂಪನಂತೆ ಕಾಣುವನು. ಅಚಿಂತ್ಯಶಕ್ತಿ ರೂಪನಾದ್ದರಿಂದ ಇದು ಕೂಡುವುದು. ಪೂರ್ಣಾನಂದಮಾತ್ರ ಸ್ವರೂಪನಾದ್ದರಿಂದ ಸುಖೋದ್ರೇಕದಿಂದ ಹೀಗೆ ಮಾಡುತ್ತಾನೆ ಹೊರತು ಅದಕ್ಕೆ ಬೇರೆ ಪ್ರಯೋಜನವಿಲ್ಲ ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

ತಂತ್ರಭಾಗವತದಲ್ಲಿ ಹೇಳಿದೆ- 'ಹರಿಯ 'ಸ್ವಮಾಯೆ' ಎಂದರೆ ಸ್ವೇಚ್ಛೆ. ಸ್ವೇಚ್ಛೆಯಿಂದಲೆ ತನ್ನ 'ಗುಣಾನ್' ಅಂದರೆ ಹಯಗ್ರೀವಾದಿ ರೂಪಗಳನ್ನು ಶುಕ್ಲ ರಕ್ತ ಕೃಷ್ಣ ಎಂದು ಮುಂತಾಗಿ ನಾನಾರೂಪವಾಗಿ ಮಾಡಿಕೊಳ್ಳುತ್ತಾನೆ. 'ರಜಸೋಪಬೃಂಹಿತಂ' 'ತಮಸೋಪಬೃಂಹಿತಂ' ಎಂದು ಗುಣಬೃಂಹಿತತ್ವ ವನ್ನು ಹೇಳುವುದು ರಜಸ್ಸು ತಮಸ್ಸುಗಳಿಗೆ ಆಧಾರನಾಗಿದ್ದಾನೆ ಎಂಬ ಅಭಿಪ್ರಾಯದಿಂದ' ಎಂದು.

❖ ❖ ❖

ದೇವಕಿಯ ಗರ್ಭದಿಂದ ಶ್ರೀಕೃಷ್ಣ ಅವತರಿಸಿದಾಗ ವಸುದೇವ ಸ್ತೋತ್ರ ಮಾಡುತ್ತಾನೆ-

ತ್ವಮಸ್ಯ ಲೋಕಸ್ಯ ವಿಭೋ ರಿರಕ್ಷಿಷು-
ರ್ಗೃಹೇಽವತೀರ್ಣೋಽಸಿ ಮಮಾಖಿಲೇಶ್ವರ ।
ರಾಜನ್ಯಸಂಜ್ಞಾಸುರಕೋಟಿಯೂಥಪೈ-
ರ್ನಿರ್ವ್ಯೂಹ್ಯಮಾನಾಂ ನಿಹನಿಷ್ಯಸೇ ಚಮೂಮ್ ॥ ೨೨ ॥

ಹೇ ಸರ್ವೇಶ್ವರ, ಪ್ರಭು, ನೀನು ಈ ಸಾತ್ವಿಕಲೋಕವನ್ನು ಕಾಪಾಡುವ ಅಂದರೆ ಅವರಿಗೆ ಸುಖ ನೀಡುವ ಸಂಕಲ್ಪದಿಂದ ನನ್ನ ಪತ್ನಿಯಲ್ಲಿ ಅವತರಿಸಿರುವಿ. ಇನ್ನು ಹೆಸರಿಗೆ ಮಾತ್ರ ರಾಜರೆನಿಸುತ್ತಿರುವ ಕೋಟಿಗಟ್ಟಲೆ ಅಸುರ ನಾಯಕರು ಸಜ್ಜುಗೊಳಿಸುವ ಕೋಟಿಗಟ್ಟಲೆ ಸೈನ್ಯವನ್ನು ನೀನು ನಾಶಪಡಿಸುವಿ ತಾನೆ?

'ಲೋಕ ರಕ್ಷಣೆಯನ್ನು ಬಯಸಿ ಕೃಷ್ಣವರ್ಣದ ರೂಪದಿಂದ ಅವತರಿಸಿರುವಿ. ಅದರಿಂದ ರಕ್ಷಣೆಗಾಗಿ ಅಸುರರನ್ನು ಸಂಹರಿಸುವಿ' ಎಂದು [೧] ಶ್ರೀಧರವ್ಯಾಖ್ಯಾನದಲ್ಲಿ

೧ ರಿರಕ್ಷಿಷುಃ ರಕ್ಷಿತುಮಿಚ್ಛುರವತೀರ್ಣೋಽಸಿ ಕೃಷ್ಣೇನ ವರ್ಣೇನ। ಅತಃ ರಕ್ಷಣಾರ್ಥಂ ರಾಜನ್ಯ ಸಂಜ್ಞಾ ಯೇಽಸುರಕೋಟಿಯೂಥಪಾಸ್ತೈರ್ನಿರ್ವ್ಯೂಹ್ಯಮಾನಾ ಇತಸ್ತತಶ್ಚಾಲ್ಯಮಾನಾಶ್ಚಮೂಃ ಸೇನಾಃ ನಿಹನಿಷ್ಯಸೇ ಸಂಹರಿಷ್ಯಸಿ। -ಶ್ರೀಧರಃ

ವಿವರಣೆ ಇದೆ. 'ಕೃಷ್ಣವರ್ಣರೂಪದಿಂದ ಅವತರಿಸಿರುವಿ' ಎಂಬ ಅಂಶ ಈ ಶ್ಲೋಕದಲ್ಲಿಲ್ಲ. ಆದರೂ ಹಿಂದೆ 'ತಮದ್ಭುತಂ ಬಾಲಕಂ...ಸಾಂದ್ರ ಪಯೋದ ಸೌಭಗಂ' ಎಂದು ಮೇಘ ಶ್ಯಾಮಲವರ್ಣ ಉಕ್ತವಾಗಿದೆ. ಅಂಥ ಕೃಷ್ಣವರ್ಣನಾಗಿ ನೀನು ಅವತರಿಸಿರುವಿ. ಕೃಷ್ಣವರ್ಣವು ಹಿಂದಿನ ಶ್ಲೋಕದಲ್ಲಿ ಹೇಳಿದಂತೆ ಲಯಮೂರ್ತಿಗೆ ಸಹಜ. ಲೋಕರಕ್ಷಕನಿಗೆ ಅಲ್ಲ. ಆದರೂ ಲೋಕರಕ್ಷಣೆಯ ಉದ್ದೇಶದಿಂದ ಲಯಕಾರ್ಯ ಮಾಡಲು ಹೊರಟ ಅವತಾರವಾದ್ದರಿಂದ ಕೃಷ್ಣ ವರ್ಣ ಯುಕ್ತವೆಂದು ಶ್ರೀಧರೀಯದ ಅಭಿಪ್ರಾಯ ಕಾಣುತ್ತದೆ. ಅದು ಸರಿಯೆ. ಆದರೆ ಲಯಕಾರ್ಯದಿಂದ ರಕ್ಷಣಾಕಾರ್ಯ ವಾಗುವುದು ಹೇಗೆ ಎನ್ನುವುದು ಸ್ಪಷ್ಟವಾಗಿಲ್ಲ. ಏಕೆಂದರೆ ರಕ್ಷಣೆ ಎಂದರೆ, ಹಿಂದಿನ ಶ್ಲೋಕದ ತಾತ್ಪರ್ಯದಲ್ಲಿ ಹೇಳಿದಂತೆ, ಜ್ಞಾನಾದಿದಾನ ಸುಖದಾನ. ಅಸುರರ ಸಂಹಾರದಿಂದ ಸುರರಿಗೆ ಸುಖ ನೀಡಿದಂತಾಗುವುದೆ? 'ದುಃಖ ಬಾರದಂತೆ ಮಾಡುವುದೂ ರಕ್ಷಣೆಯೇ' ಎನ್ನಲಾಗದು. ಹಾಗೆ ಹೇಳಿದರೆ ಕೃಷ್ಣವರ್ಣ ಕೂಡಲಾರದು.

'ಜ್ಞಾನದಾನಾದಿನಾ ರಕ್ಷಾ ಮಹತಾಂ ಸಂಪ್ರಕೀರ್ತಿತಾ'

ಎಂದು ಬ್ರಹ್ಮತರ್ಕದಲ್ಲಿ ಜ್ಞಾನದಾನ ಸುಖದಾನಗಳೇ ರಕ್ಷಣೆ ಎಂದು ಸ್ಪಷ್ಟವಾಗಿ ಉಕ್ತವಾಗಿದೆ. ಅಸುರರಿಗೆ ದುಃಖ ನೀಡಿದ ಮಾತ್ರಕ್ಕೆ ಸುರರಿಗೆ ಸುಖ ನೀಡಿದಂತಾಗುವುದೆ?

'ನ ಹಿ ಪರಾಂಗಂ ದಗ್ಧಮಿತಿ' ಸ್ವಾಂಗದಾಹೋ ನಿವರ್ತತೇ'

'ಇನ್ನೊಬ್ಬರ ಮೈಸುಟ್ಟ ಮಾತ್ರಕ್ಕೆ ತನ್ನ ಮೈಸುಟ್ಟಗಾಯ ವಾಸಿಯಾಗಲಾರದು' ಎನ್ನುವ ಗಾದೆಯಂತೆ, ಸುರರಿಗೆ ಸುಖ, ಅಸುರರ ದುಃಖದಿಂದಾಗಲಾರದು ತಾನೆ? ಎಂಬ ಪ್ರಶ್ನೆ ಬರುತ್ತದೆ. ಇದಕ್ಕೆ ಸಮಾಧಾನ ಬ್ರಹ್ಮತರ್ಕದಲ್ಲಿಯೇ ಇದೆ-

ಸತಾಂ ಸುಖವಿವೃದ್ಧ್ಯರ್ಥಮಸತಾಂ ಪೀಡನಂ ಹರೇಃ ।
ಯಾವಚ್ಚಾಸುರದುಃಖಂ ಸ್ಯಾತ್ ತಾವದ್ದೇವಸುಖಂ ಭವೇತ್ ।
ತತ್ರಾಪಿ ತಾರತಮ್ಯೇನ ಬ್ರಹ್ಮಣೋಽಭ್ಯಧಿಕಂ ಸುಖಂ ।
ಯಾವತ್ ಕ್ಷೀಣಂ ತಮಸ್ತಾವತ್ ಪ್ರಕಾಶಸ್ಯ ತು ವರ್ಧನಂ ।
ಸರ್ವಸ್ಮಾಚ್ಚ ಕಲೇಃ ಪೀಡಾ ಬ್ರಹ್ಮಣೋಽಭ್ಯಧಿಕಂ ಸುಖಂ ।
ತಸ್ಮಾತ್ ಸತಾಂ ರಕ್ಷಣಾಯ ಸರ್ವಕರ್ಮ ಹರೇಃ ಸ್ಮೃತಂ ॥

ಇತಿ ಬ್ರಹ್ಮತರ್ಕೇ ।

'ಸಜ್ಜನರ ಸುಖವೃದ್ಧಿಗಾಗಿ ದುರ್ಜನರನ್ನು ಹರಿ ಪೀಡಿಸುತ್ತಾನೆ. ಅಸುರರಿಗೆ ಎಷ್ಟೆಷ್ಟು ದುಃಖವಾಗುವುದೋ ಅಷ್ಟು ಸುರರಿಗೆ ಸುಖವಾಗುವುದು. ಅದರಲ್ಲಿಯೂ ತಾರತಮ್ಯಾನುಸಾರ ಬ್ರಹ್ಮನಿಗೆ ಅತ್ಯಧಿಕ ಸುಖ. ಏಕೆಂದರೆ ಕತ್ತಲು ಎಷ್ಟೆಷ್ಟು ಕರಗುವುದೋ ಅಷ್ಟು ಬೆಳಕು ಹೆಚ್ಚುವುದು. ಹೀಗಾಗಿ ಎಲ್ಲರಿಗಿಂತ ಹೆಚ್ಚಿನದಾದ ಕಲಿಯ ಪೀಡೆಯಿಂದ ಬ್ರಹ್ಮನಿಗೆ ಎಲ್ಲರಿಗಿಂತ ಹೆಚ್ಚಿನ ಸುಖ. ಅದರಿಂದಲೆ ಹರಿಯ ಎಲ್ಲ ಕಾರ್ಯಗಳೂ ಸಜ್ಜನರ ಸುಖರೂಪವಾದ ರಕ್ಷಣೆಯ ಉದ್ದೇಶದ್ದಾಗಿರುತ್ತವೆ' ಎಂದು ಬ್ರಹ್ಮತರ್ಕದಲ್ಲಿ ಉಕ್ತವಾಗಿದೆ.

❖❖❖

ತನ್ನ ಉದರದಿಂದ ಶ್ರೀಕೃಷ್ಣ ಅವತರಿಸಿದಾಗ ದೇವಕಿ ಹೀಗೆ ಅವನನ್ನು ಸ್ತುತಿಸುತ್ತಾಳೆ-

ರೂಪಂ ಯತ್ತತ್‌ಪ್ರಾಹುರವ್ಯಕ್ತಮಾದ್ಯಂ
ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।
ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ
ಸ ತ್ವಂ ಸಾಕ್ಷಾದ್‌ವಿಷ್ಣುರಧ್ಯಾತ್ಮದೀಪಮ್ ॥ ೨೫ ॥

ನಿನ್ನ ಅನುಗ್ರಹವಿಲ್ಲದೆ ಯಾರಿಗೂ ವ್ಯಕ್ತವಾಗದುದು ನಿನ್ನ ಸ್ವರೂಪ. ಅದು ಜಗತ್ತಿಗೆ ಆದಿಕಾರಣ. ದೇಶಕಾಲ ಪರಿಮಿತಿ ಇಲ್ಲದ್ದು, ಜ್ಞಾನರೂಪ. ತ್ರಿಗುಣವರ್ಜಿತ. ನಿರ್ವಿಕಾರಿ. ನಿರ್ದೋಷಗುಣರೂಪ. ತನಗಿಂತ ಉತ್ತಮವಸ್ತು ಬೇರೆ ಇಲ್ಲದ್ದು. ತನ್ನ ಪ್ರವೃತ್ತಿಗೆ ಯಾವ ಫಲವನ್ನು ತನಗಾಗಿ ಬಯಸದು. ಸಂಸಾರದಲ್ಲಿ ದೇಹದಲ್ಲಿರುವ ಇಂದ್ರಿಯಾದಿಗಳನ್ನೂ ಮುಕ್ತಿಯಲ್ಲಿ ಜೀವಾತ್ಮಸ್ವರೂಪವನ್ನೂ ಬೆಳಗಿಸುವುದು. ಇಂಥ ಸ್ವರೂಪ ಉಳ್ಳ ಸಾಕ್ಷಾದ್ ವಿಷ್ಣುವೇ ನೀನೆಂದು ಎಲ್ಲ ವೇದಗಳೂ ಕೊಂಡಾಡುತ್ತವೆ.

[೧] ಶ್ರೀಧರವ್ಯಾಖ್ಯಾನದಲ್ಲಿ 'ರೂಪ' ಎಂದರೆ ವಸ್ತು. 'ಯಾವ ವಸ್ತು ಅವ್ಯಕ್ತವೋ, ಅವನೇ ಸಾಕ್ಷಾತ್ ನೀನು ವಿಷ್ಣು' ಎಂದು ಅನ್ವಯ. ಇಲ್ಲಿ ರೂಪ ಶಬ್ದ

---

೧ ಯತ್ ತತ್ ಕಿಮಪಿ ರೂಪಂ ವಸ್ತು ಪ್ರಾಹುರ್ವೇದಾಃ। ಕಿಂ ತದ್ ವಸ್ತು? ತದಾಹ ಅವ್ಯಕ್ತಂ। ಅತ್ರಹೇತುಃ ಆದ್ಯಂ ಕಾರಣಂ। ಕಿಂ ಪರಮಾಣವಃ? ನ, ಬ್ರಹ್ಮ ಬೃಹತ್। ಕಿಂ ಪ್ರಧಾನಂ? ನ, ಜ್ಯೋತಿ ಶ್ಚೇತನಂ। ಕಿಂ ವೈಶೇಷಿಕಾಣಾಮಿವ ಜ್ಞಾನಗುಣಂ? ನ, ನಿರ್ಗುಣಂ। ಕಿಂ ಮೀಮಾಂಸಕಾನಾಮಿವ ಜ್ಞಾನ ಪರಿಣಾಮಿ? ನ, ನಿರ್ವಿಕಾರಂ। ಕಿಂ ಪುಷ್ಕರಾಕ್ಷಾದೀನಾಮಿವ

ವ್ಯರ್ಥ. 'ಯಾವುದು ಅವ್ಯಕ್ತವೋ' ಎಂದರೆ ಸಾಕು. ವಸ್ತುತಃ ರೂಪ ಎಂದರೆ ಸ್ವರೂಪ. 'ಯಾರ ಸ್ವರೂಪವು ಅವ್ಯಕ್ತವೋ ಅವನೇ ನೀನು ವಿಷ್ಣು' ಎಂದು ಅನ್ವಯ ಕೂಡುತ್ತದೆ. 'ಯತ್' ಎಂಬಲ್ಲಿ ಪ್ರಥಮಾವಿಭಕ್ತಿ ಷಷ್ಠೀವಿಭಕ್ತಿಯ ಅರ್ಥದಲ್ಲಿದೆ. 'ಸಪ್ತಸು ಪ್ರಥಮಾ' ಎಂಬ ವ್ಯಾಕರಣ ಸೂತ್ರದಲ್ಲಿ ಇದಕ್ಕೆ ಸಮ್ಮತಿ ಇದೆ.

'ನಿರ್ವಿಕಾರಂ' ಅಂದರೆ ವಿಕಾರರಹಿತ. ಜ್ಞಾನರೂಪವಾದ ಪರಿಣಾಮ ವಿಲ್ಲದ್ದು. 'ಸತ್ತಾಮಾತ್ರಂ' ಶಕ್ತಿವಿಕ್ಷೇಪರೂಪವಾದ ಪರಿಣಾಮವಿಲ್ಲದ್ದು. 'ನಿರ್ವಿಶೇಷಂ' ವಿಶೇಷವಿಲ್ಲದ್ದು. 'ನಿರೀಹಂ' ಕ್ರಿಯೆ ಇಲ್ಲದ್ದು, ಎಂದು ಶ್ರೀಧರ ವ್ಯಾಖ್ಯಾನ ಹೇಳುತ್ತದೆ. ಆದರೆ ನಿರ್ವಿಕಾರ ಶಬ್ದದಿಂದ ಜ್ಞಾನರೂಪವಾದ ಪರಿಣಾಮವನ್ನೂ ಶಕ್ತಿವಿಕ್ಷೇಪರೂಪವಾದ ಪರಿಣಾಮವನ್ನೂ ನಿರಾಕರಿಸಲು ಬರುವಾಗ 'ಸತ್ತಾಮಾತ್ರ' ಶಬ್ದ ವ್ಯರ್ಥವಾಗುತ್ತದೆ. 'ಸತ್ತಾಮಾತ್ರ' ಎಂದರೆ ಸತ್ತಾಜಾತಿ ಎಂದು ಭ್ರಮೆ ಬರಬಹುದೆಂದಿಟ್ಟುಕೊಂಡು, ಆ ಭ್ರಮದ ನಿವಾರಣೆ ಗಾಗಿ 'ನಿರ್ವಿಶೇಷಂ' 'ವ್ಯಕ್ತಿಗಳಿಲ್ಲದ್ದರಿಂದ ಜಾತಿಯಲ್ಲ' ಎಂದು ಹೇಳುವುದು ಅನಾವಶ್ಯಕ. ಅದರಿಂದ 'ನಿರ್ವಿಶೇಷ' ಶಬ್ದ ವ್ಯರ್ಥ. 'ನಿರೀಹಂ' ಎಂದರೆ ನಿಷ್ಕ್ರಿಯ ಎನ್ನುವುದೂ ವ್ಯರ್ಥ. ನಿರ್ವಿಕಾರ ಶಬ್ದದಿಂದಲೆ ಕ್ರಿಯಾರೂಪ ವಿಕಾರವನ್ನೂ ನಿರಾಕರಿಸಿಯಾಗಿದೆ. ಅದರಿಂದ ಸತ್ತಾಮಾತ್ರ ನಿರ್ವಿಶೇಷ ನಿರೀಹ ಶಬ್ದಗಳಿಗೆ ಪ್ರಮಾಣಸಿದ್ಧವಾದ ಅರ್ಥವನ್ನೇ ಹೇಳಬೇಕು. ಆಗ ವೈಯರ್ಥ್ಯ ಶಂಕೆಗೆ ಅವಕಾಶವಿರುವುದಿಲ್ಲ.

'ಯದ್'ಯಸ್ಯ ತವ ತತ್ ಪ್ರಸಿದ್ಧಂ ರೂಪಂ ಆಕಾರಂ ನಾರಾಯಣ ರಾಘವ ಹಯಶೀರ್ಷಾದಿಕಂ ಅವ್ಯಕ್ತಂ' ಎಂದು ವಿಶ್ವನಾಥ ವ್ಯಾಖ್ಯಾನ 'ಯತ್' ಶಬ್ದ ಷಷ್ಠ್ಯರ್ಥ ವಿಭಕ್ತಿಯದೆಂದು ಒಪ್ಪಿಕೊಂಡಿದೆ.

ಸರ್ವಾಶುಭವಿನಿರ್ಮುಕ್ತಗುಣಮಾತ್ರೋ ಯತೋ ಹರಿಃ ।
ಸತ್ತಾಮಾತ್ರಮತಃ ಪ್ರಾಹುರ್ನಿರ್ವಿಶೇಷೋಽಖಿಲೋತ್ತಮಃ ।
ಅನಾದರಾನ್ನಿರೀಹಶ್ಚ ಸೇಹಃ ಸರ್ವಕೃತಿರ್ಯತಃ ॥

ಇತಿ ತಂತ್ರಭಾಗವತೇ ।

ಯಸ್ಯ ತದ್ ರೂಪಂ ಸ ತ್ವಂ। ಸಪ್ತಸು ಪ್ರಥಮೇತಿ ಸೂತ್ರಾತ್॥

ಶಕ್ತಿವಿಕ್ಷೇಪ ಪರಿಣಾಮಿ? ನ, ಸತ್ತಾ ಮಾತ್ರಂ। ತರ್ಹಿ ಕಿಂ ಸಾಮಾನ್ಯಂ? ನ, ನಿರ್ವಿಶೇಷಂ। ತರ್ಹಿಕಾರಣತ್ವಾತ್ ಸಕ್ರಿಯಂ? ನ, ನಿರೀಹಂ, ಸನ್ನಿಧಿ ಮಾತ್ರೇಣ ಕಾರಣಂ। ಏವಂಭೂತಂ ಕಿಮಪಿ ಕಾರ್ಯಕಲ್ಪ್ಯಂ ಯದ್ ವಸ್ತು ಸ ಏವ ಸಾಕ್ಷಾತ್ ತ್ವಂ ವಿಷ್ಣುರಿತಿ । -ಶ್ರೀಧರಃ

'ಯಾವುದೇ ದೋಷಲೇಪವಿಲ್ಲದ ಕೇವಲ ಗುಣಸ್ವರೂಪನಾದ್ದರಿಂದ ಶ್ರೀಹರಿಯನ್ನು ಸತ್ತಾಮಾತ್ರನೆಂದು ಕರೆಯುತ್ತಾರೆ. ತನಗಿಂತ ಉತ್ತಮವಾದ ವಸ್ತು ಇಲ್ಲದವನು ಸರ್ವೋತ್ತಮನಾದ್ದರಿಂದ ಅವನು ನಿರ್ವಿಶೇಷನೆನಿಸುತ್ತಾನೆ. ತನ್ನ ಪ್ರವೃತ್ತಿಗೆ ಫಲದಲ್ಲಿ ಆದರವಿಲ್ಲದವನಾದ್ದರಿಂದ ಅವನು ನಿರೀಹನೆನಿಸುತ್ತಾನೆ. ಸರ್ವಕರ್ಮಕರ್ತನಾದ್ದರಿಂದ ಸೇಹನೆಂದು ಕರೆಸಿಕೊಳ್ಳುತ್ತಾನೆ' ಎಂದು ತಂತ್ರಭಾಗವತದಲ್ಲಿ ಹೇಳಿದೆ.

'ರೂಪಂ ಯತ್ತತ್' ಎಂಬಲ್ಲಿ 'ಯತ್' ಶಬ್ದವು ಷಷ್ಠ್ಯರ್ಥದಲ್ಲಿ ಪ್ರಥಮಾ ವಿಭಕ್ತ್ಯಂತವಾಗಿದೆ. 'ರೂಪಂ' ಎಂಬ ಶಬ್ದದೊಡನೆ ಅದಕ್ಕೆ ಅನ್ವಯ. 'ಸಪ್ತಸು ಪ್ರಥಮಾ' ಏಳು ವಿಭಕ್ತಿಗಳ ಅರ್ಥದಲ್ಲಿಯೂ ಪ್ರಥಮಾವಿಭಕ್ತಿ ಬರುವುದು ಸಾಧುವೆಂದು ವ್ಯಾಕರಣ ಸೂತ್ರವಿರುವುದರಿಂದ 'ಯತ್' ಎಂದರೆ 'ಯಸ್ಯ' ಎಂದು ಅರ್ಥ.

❖ ❖ ❖

ತನ್ನ ಉದರದಿಂದ ಶ್ರೀಕೃಷ್ಣ ಅವತರಿಸಿದಾಗ ದೇವಕಿ ಸ್ತುತಿಸುತ್ತಾಳೆ.

ನಷ್ಟೇ ಲೋಕೇ ದ್ವಿಪರಾರ್ಧಾವಸಾನೇ
ಮಹಾಭೂತೇಷ್ವಾದಿಭೂತಂ ಗತೇಷು ।
ವ್ಯಕ್ತೇಽ ವ್ಯಕ್ತಂ ಕಾಲವೇಗೇನ ಯಾತೇ
ಭವಾನೇಕಃ ಶಿಷ್ಯತೇಽಶೇಷಸಂಜ್ಞಃ ॥ ೨೬ ॥

ಬ್ರಹ್ಮನ ನೂರು ವರ್ಷಗಳ ಕೊನೆಯಲ್ಲಿ ಲಯಕಾಲಮೂರ್ತಿಯಾದ ನಿನ್ನ ಪ್ರೇರಣೆಯಿಂದ ಎಲ್ಲ ಲೋಕವೂ ನಾಶವಾದಾಗ ಪಂಚಮಹಾಭೂತಗಳು ಅಹಂಕಾರದ್ವಾರಾ ಮಹತ್ತತ್ವದಲ್ಲಿಯೂ ಮಹತ್ತತ್ವವು ಪ್ರಕೃತಿಯಲ್ಲಿಯೂ ಲೀನವಾದಾಗ ಕೊನೆಯಲ್ಲಿ ಸರ್ವಶಬ್ದವಾಚ್ಯನಾದ ನೀನೊಬ್ಬನೆ ವಟಪತ್ರಶಾಯಿಯಾಗಿ ಉಳಿಯುವೆ. ವೇದದ ಎಲ್ಲ ಶಬ್ದಗಳೂ ಆಗ ನಿನ್ನನ್ನೇ ಕೊಂಡಾಡುತ್ತವೆ.

'ಶಿಷ್ಯತೇಶೇಷಸಂಜ್ಞಃ' ಎಂಬಲ್ಲಿ ಶೇಷಸಂಜ್ಞಃ ಅಶೇಷಸಂಜ್ಞಃ ಎಂದು ಎರಡು ಬಗೆಯಾಗಿ ವಿಭಾಗ ಮಾಡಬಹುದು. [೧]ಶ್ರೀಧರ ವ್ಯಾಖ್ಯಾನ ಎರಡೂ ವಿಭಾಗಗಳನ್ನು ಒಪ್ಪಿದೆ. 'ಎಲ್ಲ ಜಡಪದಾರ್ಥಗಳೂ ಮೂಲ ಪ್ರಕೃತಿಯಲ್ಲಿ

---

೧ ಅಶೇಷಾತ್ಮಕೇ ಪ್ರಧಾನೇ ಸಂಜ್ಞಾ ಪ್ರಜ್ಞಾ ಯಸ್ಯ, ಏವಂ ಮಯಿ ಲೀನಮಿದಮಸ್ತಿ ಪಶ್ಚಾದೇವಮುದ್ಬೋಧನೀಯಮಿತಿ ಸೋಽಶೇಷ ಸಂಜ್ಞಃ ಶೇಷಸಂಜ್ಞಇತಿ ವಾ। - ಶ್ರೀಧರಃ

ಲೀನವಾಗುವುದರಿಂದ ಅದು ಅಶೇಷಾತ್ಮಕ, ಸರ್ವಾತ್ಮಕ. ಅದೂ ನನ್ನಲ್ಲಿ ಲೀನ ವಾಗುವುದು. ಅದನ್ನು ಸೃಷ್ಟಿಕಾಲ ಬಂದಾಗ ತಿರುಗಿ ಉದ್ಬೋಧಗೊಳಿಸುವೆನೆ'ಂದು ಪರಮಾತ್ಮ ತಿಳಿಯುವುದರಿಂದ ಅಶೇಷ ಸಂಜ್ಞನೆನಿಸುತ್ತಾನೆ, ಅಶೇಷಾತ್ಮಕವಾದ ಪ್ರಕೃತಿಯ ಬಗ್ಗೆ ಸಂಜ್ಞೆ ಅಂದರೆ ಜ್ಞಾನವಿರುವುದರಿಂದ. ಅಥವಾ ತಾನೊಬ್ಬನೆ ಲಯಕಾಲದಲ್ಲಿ ಉಳಿಯುವುದರಿಂದ ಶೇಷನೆನಿಸುವ ತನ್ನ ಬಗ್ಗೆ ಜ್ಞಾನವಿರುವವನು ಶೇಷಸಂಜ್ಞ' ಎಂದು ಶ್ರೀಧರವ್ಯಾಖ್ಯಾನ ಹೇಳುತ್ತದೆ.

ಆದರೆ, 'ಭವಾನೇಕ ಏವ ಶಿಷ್ಯತೇ' 'ನೀನೊಬ್ಬನೆ ಕೊನೆಯಲ್ಲಿ ಉಳಿಯುವೆ' ಎನ್ನುವುದರಿಂದಲೆ ಪ್ರಕೃತಿಯೂ ಪರಮಾತ್ಮನಲ್ಲಿ ಲೀನವಾಗುತ್ತದೆ ಎಂದು ಹೇಳಿದಂತಾಯಿತು. ತಿರುಗಿ 'ಲೀನವಾಗುತ್ತದೆ ಎಂದು ಪರಮಾತ್ಮ ತಿಳಿಯುತ್ತಾನೆ' ಎನ್ನುವುದು ವ್ಯರ್ಥ. ಸರ್ವಜ್ಞನಾದ ಪರಮಾತ್ಮ ಅದನ್ನು ತಿಳಿಯುತ್ತಾನೆ ಎಂದು ಬೇರೆ ಹೇಳಬೇಕಾಗಿಲ್ಲ. ಸರ್ವಜ್ಞನಾದ ಪರಮಾತ್ಮ ಈ ಪ್ರಕೃತಿಯನ್ನು ತಿಳಿಯುತ್ತಾನೆ ಎನ್ನುವುದರಿಂದ ಹೆಚ್ಚಿನ ಮಹಿಮೆಯನ್ನೇನೂ ಹೇಳಿದಂತಾಗುವುದಿಲ್ಲ. 'ಶೇಷಸಂಜ್ಞಃ' 'ತಾನೊಬ್ಬನೆ ಕೊನೆಯಲ್ಲಿ ಉಳಿಯುವುದರಿಂದ ಶೇಷನೆನಿಸುವ ತನ್ನ ಬಗ್ಗೆ ಜ್ಞಾನ ಉಳ್ಳವನು' ಎನ್ನುವುದೂ ಹೀಗೇ ವ್ಯರ್ಥವೇ ಆಗುತ್ತದೆ.

[೧]ವೀರರಾಘವ ವ್ಯಾಖ್ಯಾನದಲ್ಲಿಯೂ ವಿಶ್ವನಾಥ ವ್ಯಾಖ್ಯಾನದಲ್ಲಿಯೂ ಶೇಷ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಾನೆ ಪರಮಾತ್ಮ. ಆದರೆ ಶೇಷ ಎಂದು ಪರಮಾತ್ಮನಿಗೆ ಒಂದು ವಿಶೇಷ ನಾಮ ಎನ್ನಲು ಪ್ರಮಾಣದ ಆಧಾರವನ್ನೇನೂ ಇವರು ತೋರಿಸುವುದಿಲ್ಲ. 'ಕೊನೆಗೆ ಉಳಿಯುವವನು ನೀನೊಬ್ಬನೆ' 'ಭವಾನೇಕಃ ಶಿಷ್ಯತೇ' ಎಂದು ಹೇಳಿದ ಬಳಿಕ 'ಅದರಿಂದ ಶೇಷನೆಂಬ ಹೆಸರು ನಿನಗೆ ಸಲ್ಲುತ್ತದೆ' ಎಂದು ಬೇರೆ ಹೇಳಬೇಕಾಗಿಲ್ಲ. ಇದು ಶೇಷನಾಮ ನಿರ್ವಚನ ಪ್ರಸಂಗವೂ ಅಲ್ಲ. ಕೊನೆಗೆ ಉಳಿಯುವವನೆಂಬ ಮಹಿಮೆಯನ್ನು ಹೇಳಿ ಸ್ತೋತ್ರ ಮಾಡುವ ಪ್ರಸಂಗವಾಗಿದೆ.

[೨]ಶುಕದೇವ ವ್ಯಾಖ್ಯಾನದಲ್ಲಿ ಈ ದೋಷ ಪರಿಹಾರಕ್ಕೆ 'ಅಶೇಷ ಸಂಜ್ಞಃ' 'ಅಶೇಷ' ಅಂದರೆ ಎಲ್ಲ ಪದಾರ್ಥಗಳ ವಿಷಯದಲ್ಲಿಯೂ 'ಸಂಜ್ಞಾ'

---

೧ ಏವಂ ಸತಿ ಯಃ ಶಿಷ್ಯತೇ ಪದಾರ್ಥಃ ಸ ಏಕೋ ಭವಾನೇವ । ಯತೋ ಭವಾನವಶಿಷ್ಯತೇಽತ ಏವ ನಿಮಿತ್ತಾಚ್ಛೇಷಸಂಜ್ಞಃ ಶೇಷಶಬ್ದಾಭಿಧೇಯಶ್ಚ। -ವೀರರಾಘವಃ

೨ ಅಶೇಷೇಷು ಸ್ವಸ್ಮಿನ್ ಲೀನೇಷು ಚೇತನಾಚೇತನೇಷು ತತ್ಪ್ರಲಯೋತ್ಪತ್ತಿ ಸ್ಥಿತಿ ನಿಮಿತ್ತ ಕಾಲಕರ್ಮಾದಿಷು ಚ ಪ್ರಜ್ಞಾ ಯಸ್ಯ ಸ ಸರ್ವಜ್ಞಃ ಭವಾನೇವ ಶಿಷ್ಯತೇ। -ಶುಕದೇವಃ

ಜ್ಞಾನಉಳ್ಳವನು ಸರ್ವಜ್ಞ ಎಂದಿದೆ. ಆದರೆ 'ಸಂಜ್ಞಾ' ಎಂದರೆ 'ನಾಮ' ಎನ್ನುವ ಪ್ರಸಿದ್ಧವಾದ ಅರ್ಥವನ್ನು ಬಿಟ್ಟು 'ಜ್ಞಾನ' ಎಂಬ ಅರ್ಥವನ್ನಿಟ್ಟುಕೊಳ್ಳುವುದು ಸರಿಯಲ್ಲ. ಅದರಿಂದಲೇ [೧]ವಲ್ಲಭ ವ್ಯಾಖ್ಯಾನದಲ್ಲಿ 'ಅಶೇಷಸಂಜ್ಞ' ಎಂದರೆ ಸರ್ವನಾಮ, ಸರ್ವಶಬ್ದವಾಚ್ಯ ಎಂದೇ ವಿವರಣೆ ಇದೆ. ಶ್ರೀಮದಾಚಾರ್ಯರೂ ಅದೇ ಅರ್ಥವನ್ನು ಸ್ವೀಕರಿಸಿದ್ದಾರೆ.

ಆದರೆ ಶ್ರೀಮದಾಚಾರ್ಯರ ಮತದಲ್ಲಿ ಸರ್ವನಾಮನಾದ ಭಗವಂತ ಪ್ರಳಯಕಾಲದಲ್ಲಿದ್ದಾನೆ ಎನ್ನುವುದು ಅರ್ಥಪೂರ್ಣವಾಗುತ್ತದೆ. ವಲ್ಲಭಾಚಾರ್ಯರ ಮತದಲ್ಲಿ ವಿಶೇಷ ಅರ್ಥ ಲಭಿಸುವುದಿಲ್ಲ. ಏಕೆಂದರೆ ಲಯಕಾಲದಲ್ಲಿ ಬೇರೆ ಎಲ್ಲ ಜಡಪದಾರ್ಥಗಳು ಲಯಹೊಂದಿದರೂ ಅನಾದಿನಿತ್ಯವಾದ ವೇದಕ್ಕೆ ಲಯವಿಲ್ಲ. ಆದರೆ ಲಯಕಾಲದಲ್ಲಿಯೂ,

ಹಿರಣ್ಯಯೇನ ಸವಿತಾ ರಥೇನಾ
ದೇವೋ ಯಾತಿ ಭುವನಾನಿ ಪಶ್ಯನ್

'ಲೋಕಗಳನ್ನೆಲ್ಲ ನೋಡುತ್ತ ಬಂಗಾರದ ರಥದಲ್ಲಿ ಸೂರ್ಯ ಬರುತ್ತಾನೆ' ಎನ್ನುವುದು ಅರ್ಥಶೂನ್ಯವಾಗುವುದರಿಂದ ವೇದ ಅಪ್ರಮಾಣವಾದೀತು. ಲಯಕಾಲದಲ್ಲಿ ಸೂರ್ಯನಿಲ್ಲ, ಅವನ ರಥವಿಲ್ಲ, ಲೋಕಗಳಿಲ್ಲ, ಅವನ ಸಂಚಾರವಿಲ್ಲ ತಾನೆ? ವಲ್ಲಭಾಚಾರ್ಯರ ಮತದಲ್ಲಿ ವೇದಗಳಿಗೆ ಪದ ಸಮನ್ವಯವೆಂಬುದು ಇಲ್ಲದ್ದರಿಂದ ವೇದಪ್ರಾಮಾಣ್ಯವನ್ನು ಸಮರ್ಥಿಸಲಾಗುವುದಿಲ್ಲ. ಶ್ರೀಮದಾಚಾರ್ಯರ ಪ್ರಕಾರ ಲಯಕಾಲದಲ್ಲಿ ವೇದವೆಲ್ಲವೂ ಪದ ಸಮನ್ವಯದಿಂದ ಭಗವಂತನನ್ನು ಸ್ತುತಿಸುವುದರಿಂದ ಪ್ರಮಾಣವೇ ಆಗಿರುತ್ತದೆ. ಹಿರಣ್ಮಯ ಸವಿತೃ ರಥ ಎಂದೆಲ್ಲ ಶಬ್ದಗಳೂ ಪರಮಾತ್ಮನ ನಾಮಾವಳಿ. ವಿಷ್ಣುಸಹಸ್ರನಾಮಸ್ತೋತ್ರದಂತೆ ವೇದವೂ ಭಗವಂತನ ಸ್ತೋತ್ರ ಮಾಡುತ್ತ ಪ್ರಮಾಣವೇ ಆಗಿರುತ್ತದೆ. ಅದಕ್ಕಾಗಿ ಕೇವಲ ಸಹಸ್ರನಾಮನಲ್ಲ, ಸರ್ವನಾಮನಾಗಿದ್ದಾನೆ ಎಂದು ದೇವಕಿ ಸ್ತುತಿಸುತ್ತಿದ್ದಾಳೆ. ಸದಾ ಸರ್ವನಾಮನೇ ಆಗಿದ್ದರೂ ಲಯಕಾಲದಲ್ಲಿ ಆತ ಸರ್ವನಾಮನಾಗಿರುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ.

---

೧ ಅಶೇಷಾಃ ಸರ್ವಾಃ ಸಂಜ್ಞಾ ಅಸ್ಯ ಸರ್ವಶಬ್ದವಾಚ್ಯೋ ಭಗವಾನೇಕ ಏವೇತಿ ಏಕ ಏವ ಶಿಷ್ಯತ ಇತ್ಯರ್ಥಃ। -ವಲ್ಲಭಃ

೨ ಶೇಷಸಂಜ್ಞಃ ಶೇಷನಾಮಾ ಶಿಷ್ಯತ ಇತಿ ವ್ಯುತ್ಪತ್ತ್ಯಾ ಭವಾನ್ ಶೇಷ ಉಚ್ಯತ ಇತ್ಯರ್ಥಃ। -ವಿಶ್ವನಾಥಃ

ಅಶೇಷಸಂಜ್ಞಃ ಸರ್ವನಾಮಾ ।

'ಅಶೇಷ ಸಂಜ್ಞ'ನೆಂದರೆ ಸರ್ವಶಬ್ದವಾಚ್ಯ ಎಂದರ್ಥ.

❖ ❖ ❖

ತನ್ನ ಉದರದಿಂದ ಹೊರಗೆ ಬಂದು ನಿಂತ ಶ್ರೀಕೃಷ್ಣನನ್ನು ದೇವಕಿ ಸ್ತುತಿಸುತ್ತಾಳೆ-

ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬಂಧೋ
ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್ ।
ನಿಮೇಷಾದಿರ್ವತ್ಸರಾಂತೋ ಮಹೀಯಾಂ
ಸ್ತಂ ತ್ವೇಶಾನಂ ಕ್ಷೇಮಧಾಮ ಪ್ರಪದ್ಯೇ ॥ ೨೭ ॥

ಹೇ ಲಕ್ಷ್ಮೀಪತಿ, ನಿಮಿಷದಿಂದ ತೊಡಗಿ ಬ್ರಹ್ಮಮಾನದ ನೂರು ವರ್ಷ ಪರ್ಯಂತ ಅಪರಿಮಿತವಾಗಿ ಯಾವ ಕಾಲಪ್ರವಾಹವಿದೆಯೋ ಅದೊಂದು ನಿನಗೆ ಕ್ರೀಡಾಸಾಧನವೆಂದು ಜ್ಞಾನಿಗಳು ಹೇಳುತ್ತಾರೆ. ಏಕೆಂದರೆ ಅದರ ಮೂಲಕವೇ ನಿನ್ನಿಂದ ಈ ಜಗತ್ತಿನ ಎಲ್ಲ 'ಚೇಷ್ಟೆ' ಅಂದರೆ ಆಗುಹೋಗುಗಳು ನಡೆಯುತ್ತವೆ. ಹೀಗೆ ಸರ್ವಪ್ರೇರಕನಾದ ಮುಕ್ತಿಧಾಮರೂಪನಾದ ನಿನ್ನನ್ನು ಮೊರೆಹೊಗುತ್ತೇನೆ.

ಕಾಲವು ಭಗವಂತನ ಚೇಷ್ಟಾರೂಪವಾಗಿದೆ ಲೀಲಾರೂಪವಾಗಿದೆ ಎಂದು [೧]ಶ್ರೀಧರವ್ಯಾಖ್ಯಾನ ಹೇಳುತ್ತದೆ. ಭಗವಂತನಲ್ಲಿ ಅವನ ಲೀಲೆ ಹೇಗೆ ಅವಿಭಾಜ್ಯವೋ ಹಾಗೆ ಕಾಲ ಅವನಲ್ಲಿ ಅವಿಭಾಜ್ಯವಾಗಿ ಆಶ್ರಯಿಸಿದೆ ಎಂದು [೨]ವೀರರಾಘವ ವ್ಯಾಖ್ಯಾನ ಹೇಳುತ್ತದೆ. ಕಾಲವು ಭಗವಂತನ ಲೀಲೆ ಅಂದರೆ ಶಕ್ತಿ ಎಂದು [೩]ಶುಕದೇವ ವ್ಯಾಖ್ಯಾನ ಹೇಳುತ್ತದೆ. ಆದರೆ ಭಾಗವತವು 'ವಿಶ್ವಂ ಚೇಷ್ಟತೇ' ಜಗತ್ತು ಚೇಷ್ಟೆಯನ್ನು ಅಂದರೆ ಉತ್ಪತ್ತಿಲಯಾದಿ ಎಲ್ಲ ಪ್ರವೃತ್ತಿಯನ್ನು ನಡೆಸುತ್ತದೆ ಎಂದು ಹೇಳುತ್ತಿದೆ. ಭಗವಂತ ಚೇಷ್ಟೆಯನ್ನು ಅಂದರೆ ಲೀಲೆಯನ್ನು ನಡೆಸುತ್ತಾನೆ

---

೧ ಏವಂ ಪ್ರಲಯಹೇತುರ್ಯೋಽಯಂ ಕಾಲಃ ಏನಂ ಹೇ ಅವ್ಯಕ್ತಬಂಧೋ ತಸ್ಯ ಪ್ರಲಯಾವಧಿ ಭೂತಸ್ಯ ತೇ ತವ ಚೇಷ್ಟಾಂ ಲೀಲಾಂ। -ಶ್ರೀಧರಃ

೨ ಯೇನ ಕಾಲೇನ ನಿಮಿತ್ತೇನ ವಿಶ್ವಂ ಕರ್ತೃಚೇಷ್ಟತೇ ಪ್ರವರ್ತತೇ ತಂ ಚ ಕಾಲಂ ತೇ ತವ ಚೇಷ್ಟಾಮಾಹುಃ। ಚೇಷ್ಟಾತುಲ್ಯಮಪೃಥಕ್‌ಸಿದ್ಧ ವಿಶೇಷಣಮಾಹುಃ। -ವೀರರಾಘವಃ

೩ ಯೋಽಯಂ ಕಾಲಃ ಏನಂ ತಸ್ಯಾಶೇಷಸಂಜ್ಞಸ್ಯ ತೇ ಚೇಷ್ಟಾಂ ಶಕ್ತಿಮಾಹುಃ। -ಶುಕದೇವಃ

ಎನ್ನುತ್ತಿಲ್ಲ. ಜಗತ್ತು ಪ್ರವೃತ್ತಿಮಾಡಲು ಕಾಲ ನಿಮಿತ್ತ, ಭಗವಂತ ಮುಖ್ಯಕಾರಣ. 'ಚೇಷ್ಟತೇ ಯೇನ ವಿಶ್ವಂ' ಯಾವ ಕಾಲದ ಮೂಲಕ ಭಗವಂತನಿಂದಾಗಿ ಜಗತ್ತು ಚೇಷ್ಟೆಯನ್ನು ಮಾಡುವುದೋ ಪ್ರವೃತ್ತಿ ಮಾಡುವುದೋ ಅಂಥ ಕಾಲವನ್ನು ಅವನ ಚೇಷ್ಟಾ ಎಂದು ಔಪಚಾರಿಕವಾಗಿ ಜ್ಞಾನಿಗಳು ಹೇಳುತ್ತಾರೆ ಎಂದು ಭಾಗವತವು ಹೇಳುತ್ತಿದೆ. ಅದರಿಂದ ಭಗವಂತನ ಚೇಷ್ಟೆಯೇ ಕಾಲ ಎಂದು ಶ್ರೀಧರ ಮುಂತಾದ ವ್ಯಾಖ್ಯಾನಕಾರರು ಹೇಳುವುದು ಸರಿಯಲ್ಲ. ಇದನ್ನು ತಿಳಿಸಲು ಶ್ರೀಮದಾಚಾರ್ಯರು ಹೇಳುತ್ತಾರೆ-

ಚೇಷ್ಟತೇಽನೇನೇತಿ ಚೇಷ್ಟಾ।

'ಚೇಷ್ಟತೇ ಯೇನ ವಿಶ್ವಂ' ಎಂದು ಭಾಗವತ ವಾಕ್ಯದಲ್ಲಿ 'ವಿಶ್ವವು ಕಾಲನಿಮಿತ್ತದಿಂದ ಚೇಷ್ಟೆಯನ್ನು ನಡೆಸುತ್ತದೆ' ಎಂದು ಹೇಳಿದ್ದರಿಂದ ಕಾಲವೇ ಚೇಷ್ಟೆಯಲ್ಲ. ವಿಶ್ವದ ಚೇಷ್ಟೆಗೆ ನಿಮಿತ್ತವಾಗಿದ್ದರಿಂದ ಕಾಲವು ಔಪಚಾರಿಕವಾಗಿ 'ಚೇಷ್ಟೆ' ಎನಿಸುತ್ತದೆ. ಅದು ನಿನ್ನ ಅಧೀನ. ಅದರಿಂದ ಅದನ್ನು 'ನಿನ್ನ ಚೇಷ್ಟೆ' ಎಂದು ಹೇಳುತ್ತಾರೆ, ಜ್ಞಾನಿಗಳು.

'ಚೇಷ್ಟಾ' ಶಬ್ದದ ವ್ಯುತ್ಪತ್ತಿಯನ್ನು ಇಲ್ಲಿ ಶ್ರೀಮದಾಚಾರ್ಯರು ಹೇಳುತ್ತಿಲ್ಲ. ಹಾಗಿದ್ದರೆ, ಚೇಷ್ಟಾ ಶಬ್ದ ಸ್ತ್ರೀಲಿಂಗವಾದ್ದರಿಂದ 'ಚೇಷ್ಟತೇಽನಯೇತಿ ಚೇಷ್ಟಾ' ಎನ್ನಬೇಕಾಗಿತ್ತು.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಚತುರ್ಥೋಽಧ್ಯಾಯಃ

❖

ಅಧ್ಯಾಯ ೫

ಅಧ್ಯಾಯ ಸಾರಾಂಶ

ವಸುದೇವ ಹಿಂತಿರುಗಿ ಬಂದೊಡನೆ ಸೆರೆಮನೆಯಲ್ಲಿ ಹೊರಗಿನ ಒಳಗಿನ ಎಲ್ಲ ಬಾಗಿಲುಗಳೂ ಹಿಂದಿನಂತೆಯೇ ಮುಚ್ಚಿಕೊಂಡುವು. ಮಗುವಿನ ಧ್ವನಿ ಕೇಳಿ ಕಾವಲುಗಾರರು ಎಚ್ಚೆತ್ತು ಕಂಸನಿಗೆ ತಿಳಿಸಿದರು. ಕಂಸ ಧಾವಿಸಿ ಬಂದು, ದೇವಕಿ ಅಳುತ್ತ ಅಂಗಲಾಚಿ ಬೇಡುತ್ತಿದ್ದರೂ, ಮಗುವನ್ನು ಕೈಯಿಂದ ಕಿತ್ತುಕೊಂಡು ಎತ್ತಿ ಬಂಡೆಯ ಮೇಲೆ ಅಪ್ಪಳಿಸಿದ. ಆದರೆ ದೇವಿ ಕಂಸನ ಕೈಯಿಂದ ಮೇಲೆ ಹಾರಿ ಆಕಾಶದಲ್ಲಿ ಆಯುಧಗಳನ್ನು ಹಿಡಿದ ಎಂಟು ತೋಳುಗಳಿಂದ ಯುಕ್ತಳಾಗಿ ನಿಂತು ಸಿದ್ಧರು ಚಾರಣರು ಗಂಧರ್ವರು ಮುಂತಾದವರು ಉಪಚಾರಗಳನ್ನು ಅರ್ಪಿಸಿ ಸ್ತುತಿಸುತ್ತಿದ್ದಂತೆಯೇ, ಕಂಸನಿಗೆ ಹೇಳಿದಳು.

'ಮೂರ್ಖ, ನಿನ್ನ ಮೃತ್ಯು ಆಗಲೆ ಒಂದು ಕಡೆ ಹುಟ್ಟಿದ್ದಾನೆ'

ಇದನ್ನು ಕೇಳಿದ ಕಂಸ ಆಶ್ಚರ್ಯಪಟ್ಟ. 'ದೈವವೂ ಸುಳ್ಳು ಹೇಳುತ್ತದೆ, ಮನುಷ್ಯರು ಮಾತ್ರವಲ್ಲ! ಆ ದೈವದ ಮಾತನ್ನು ನಂಬಿ ನಾನು ತಂಗಿಯ ಮಕ್ಕಳನ್ನು ಕೊಂದೆ, ನರಕ ಭಾಜನನಾದೆ' ಎಂದು ಪರಿತಪಿಸಿದ. 'ನಮ್ಮ ಹುಟ್ಟು ಸಾವು ಎಲ್ಲವೂ ಪರಮಾತ್ಮನ ಅಧೀನ. ನನ್ನಿಂದ ಹತರಾದ ಮಕ್ಕಳ ಬಗ್ಗೆ ಶೋಕಿಸಬೇಡಿ. ಯಾರಿಗೂ ಮಕ್ಕಳು ಸದಾ ಜೊತೆಗಿರುವುದಿಲ್ಲ. ಜೊತೆಗಿರುವವನು ಪರಮಾತ್ಮನೊಬ್ಬನೆ. ಅವನೊಬ್ಬನೆ ಸ್ವತಂತ್ರ. ಜೀವರ ಕರ್ಮಾನುಸಾರ ಅವನೇ ಅವರನ್ನು ಕಾಯುವವನು ಕೊಲ್ಲುವವನು. ನಾನೇ ಕೊಲ್ಲುವವನೆಂದು ಅಹಂಕಾರದಿಂದ ಪಾಪಸಂಪಾದನೆ ಮಾಡಬಾರದು. ನಾನು ಈತನಿಂದ ಹತನಾದೆನೆಂದು ಕೋಪವನ್ನೂ ಮಾಡಬಾರದು. ಹೀಗಾಗಿ ನನ್ನ ದೌರ್ಜನ್ಯವನ್ನು ಕ್ಷಮಿಸಿರಿ, ನೀವು ಸಜ್ಜನರು, ಕ್ಷಮಾಶೀಲರು' ಎನ್ನುತ್ತ ಕಣ್ಣೀರು ಸುರಿಸುತ್ತ ವಸುದೇವ ದೇವಕಿಯರ ಕಾಲುಗಳನ್ನು ಹಿಡಿದುಕೊಂಡ ಕಂಸ. ಅವರನ್ನು ಬಂಧನದಿಂದ ಬಿಡುಗಡೆ ಮಾಡಿದ.

ಆ ರಾತ್ರಿ ಬೆಳಗಾಗುತ್ತಲೆ ಕಂಸ ತನ್ನ ಮಂತ್ರಿಗಳೊಡನೆ ಮಂತ್ರಾಲೋಚನೆ ನಡೆಸಿದ. ಮಂತ್ರಿಗಳು ಸದಾ ದೇವದ್ವೇಷಿಗಳು. ರಾಜನೀತಿಯನ್ನು ಬಲ್ಲವರಲ್ಲ. ಅವರು ಹೇಳಿದರು- 'ಭೋಜರಾಜ, ನಾವೀಗ ಎಲ್ಲೆಡೆ ಹತ್ತು ದಿನಗಳ ಕೆಳಗಿನ ಮೇಲಿನ ಎಲ್ಲ ಮಕ್ಕಳನ್ನೂ ಕೊಲ್ಲೋಣ. ಯುದ್ಧವೆಂದರೆ ಭಯಪಡುವವರು ದೇವತೆಗಳು .ಅವರಿಂದ ನಮಗೆ ಭಯವಿಲ್ಲ. ಆದರೂ ಶರೀರದಲ್ಲಿ ಒಂದು ಸಣ್ಣರೋಗ ಬಂದರೂ ಉದಾಸೀನ ಮಾಡಿದರೆ ಮುಂದೆ ಅಸಾಧ್ಯ ವಾಗುವುದು. ಅದರಿಂದ ನಾವು ದೇವತೆಗಳನ್ನು ಉಪೇಕ್ಷಿಸುವಂತಿಲ್ಲ. ಅದಕ್ಕೆ ಅವರಿಗೆಲ್ಲರಿಗೂ ಆಶ್ರಯನಾದ ವಿಷ್ಣುವನ್ನು ನಾಶ ಮಾಡಬೇಕು. ಅದಕ್ಕೆ ಅವನಿಗೂ ಮೂಲಾಶ್ರಯರಾದ ಬ್ರಾಹ್ಮಣರನ್ನೂ ಗೋವುಗಳನ್ನೂ ಕೊಲ್ಲಬೇಕು'. ಇದಕ್ಕೆ ಒಪ್ಪಿ ಕಂಸ ದಾನವರನ್ನು ಎಲ್ಲ ದಿಕ್ಕುಗಳಿಗೂ ಕಳಿಸಿ ತಾನು ಅರಮನೆಯನ್ನು ಪ್ರವೇಶಿಸಿದ.

❖❖❖

'ನಿನ್ನ ಮೃತ್ಯು ಬೇರೆಡೆ ಆಗಲೆ ಜನಿಸಿದ್ದಾನೆ' ಎಂದು ದೇವಿ ದುರ್ಗೆ ಕಂಸನಿಗೆ ಹೇಳುತ್ತಾಳೆ-

ಕಿಂ ಮಯಾ ಹತಯಾ ಮಂದ ಜಾತಃ ಖಲು ತವಾಂತಕಃ ।
ಯತ್ರ ಕ್ವಚಿತ್ಪೂರ್ವಶತ್ರುರ್ಮಾ ಹಿಂಸೀಃ ಕೃಪಣಾಂ ವೃಥಾ ॥ ೧೨ ॥

ಮೂರ್ಖ, ನನ್ನನ್ನು ಕೊಲ್ಲುವುದರಿಂದ ನಿನಗೇನು ಫಲ? ನಿನ್ನ ಮೃತ್ಯು ನಿನ್ನ ಪೂರ್ವಜನ್ಮದ ಶತ್ರು ಆಗಲೆ ಎಲ್ಲಿಯೋ ಒಂದುಕಡೆ ಹುಟ್ಟಿದ್ದಾನೆ. ನೀನು ದೀನಳಾದ ನಿನ್ನ ತಂಗಿಯನ್ನು ವ್ಯರ್ಥವಾಗಿ ಹಿಂಸಿಸಬೇಡ.

ನಿನ್ನ ಮೃತ್ಯು ಬೇರೆಡೆ ಆಗಲೆ ಜನಿಸಿದ್ದಾನೆ ಎಂದು ದೇವಿ ದುರ್ಗೆ ನುಡಿದುದನ್ನು ಕೇಳಿ ಕಂಸ ಪಶ್ಚಾತ್ತಾಪದಿಂದ ವಸುದೇವ ದೇವಕಿಯರನ್ನು ಸಂತೈಸುತ್ತಾನೆ-

ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವ ಕೇವಲಮ್ ।
ಯದ್ವಿಸ್ರಂಭಾದಹಂ ಪಾಪಃ ಸ್ವಸುರ್ನಿಹತವಾನ್ ಶಿಶೂನ್ ॥ ೧೭ ॥

ಮಾ ಶೋಚೇಥಾಂ ಮಹಾಭಾಗಾವಾತ್ಮಜಾನ್ ಸ್ವಕೃತಂಭುಜಃ ।
ಜಂತವೋ ನ ಸದೈಕತ್ರ ದೈವಾಧೀನಾಃ ಸಹಾಸತೇ ॥ ೧೮ ॥

ದೈವವೂ ಸುಳ್ಳು ಹೇಳುತ್ತದೆ, ಮನುಷ್ಯರು ಮಾತ್ರವಲ್ಲ. ದೈವದ ಮಾತಿನಲ್ಲಿ ನಂಬಿಕೆಯಿಂದ ಪಾಪಿಯಾದ ನಾನು ತಂಗಿಯ ಮಕ್ಕಳನ್ನು ಕೊಂದುಬಿಟ್ಟೆ.

ಪೂಜ್ಯರೆ, ಮಕ್ಕಳನ್ನು ಕುರಿತು ಶೋಕಿಸಬೇಡಿರಿ. ಅವರು ತಾವು ಮಾಡಿದ್ದ ಕರ್ಮದ ಫಲ ಉಂಡರು. ಜೀವಿಗಳು ಸದಾ ಒಂದೆಡೆ ಜೊತೆಯಾಗಿ ಇರುವುದಿಲ್ಲ, ದೈವಾಧೀನರು.

ಇಲ್ಲಿ 'ಕಿಂ ಮಯಾ' ಎಂಬ ಶ್ಲೋಕದಲ್ಲಿ ಹೇಳಿದಂತೆ ಕಂಸನ ಪೂರ್ವಶತ್ರು ಶ್ರೀಹರಿ. ಪೂರ್ವಜನ್ಮದಲ್ಲಿ ಕಂಸ ಕಾಲನೇಮಿ ಅಸುರನಾಗಿದ್ದಾಗ ಅವನನ್ನು ದೇವಾಸುರ ಯುದ್ಧದಲ್ಲಿ ಶ್ರೀಹರಿ ಕೊಂದಿದ್ದ. ಹೀಗಾಗಿ ಅವರಿಬ್ಬರಲ್ಲಿ ಶತ್ರುತ್ವ ಹಿಂದೆ ಇದ್ದಿತ್ತು. ಕಂಸನಿಗೆ ಶ್ರೀಹರಿ ತನ್ನ ಹಿಂದಿನ ಶತ್ರು ಎಂಬ ಭಾವನೆಯಿಂದ ಅವನಲ್ಲಿ ದ್ವೇಷವಿದೆ ಎಂದಂತಾಯಿತು. ಶ್ರೀಹರಿಯನ್ನು ದ್ವೇಷಿಸುವುದು, ಹರಿಭಕ್ತರನ್ನು ದ್ವೇಷಿಸುವುದು ಅಸುರರ ಸ್ವಭಾವ. ಅಂಥ ಸ್ವಭಾವಉಳ್ಳವನಾದ್ದರಿಂದ ಕಂಸ ಮನುಷ್ಯನಾಗಿ ಹುಟ್ಟಿದ್ದರೂ ಅಸುರ ಸ್ವಭಾವದವನು. ಆದರೆ 'ದೈವಮಪ್ಯನೃತಂ ವಕ್ತಿ' ಎಂಬ ಶ್ಲೋಕದಲ್ಲಿ ಕಂಸ ತಾನು ಪಾಪಿ, ತಂಗಿಯ ಮಕ್ಕಳನ್ನು ಕೊಂದೆನೆಂದೆನ್ನುತ್ತ ವಿಷ್ಣುಭಕ್ತರಾದ ವಸುದೇವ ದೇವಕಿಯರಲ್ಲಿ ಬಂಧುಸ್ನೇಹವನ್ನು ತೋರುತ್ತಾನೆ. ನಾರದರ ಮಾತಿನಿಂದ ವಸುದೇವ ದೇವಕಿಯರೂ ಇತರ ಯಾದವರಂತೆ ವಿಷ್ಣುಭಕ್ತರಾದ ದೇವತೆಗಳೆಂದು ಆತ ತಿಳಿದಿದ್ದ. ಆದರೂ ಅವರಲ್ಲಿ ಬಂಧುಸ್ನೇಹವನ್ನು ತೋರಿಸುವುದು ಅಸುರ ಸ್ವಭಾವಕ್ಕೆ ವ್ಯತಿರಿಕ್ತವಾಗಿದೆ. ಹೀಗೆ ಅಸುರ ಸ್ವಭಾವವನ್ನು ಕೆಲವೊಮ್ಮೆ ತೋರುತ್ತಾನೆ, ಕೆಲವೊಮ್ಮೆ ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಾನೆ, ಕಂಸ. ಇದಕ್ಕೆ ಏನು ಕಾರಣ?

'ಮಾ ಶೋಚೇಥಾಂ' ಎಂಬ ಶ್ಲೋಕದಲ್ಲಿ 'ದೈವಾಧೀನಾಃ' ಎಂದು ಎಲ್ಲ ಜೀವಿಗಳನ್ನು ವಿಷ್ಣುವಿಗೆ ಅಧೀನರೆಂದು ಒಳ್ಳೆಯ ತತ್ವಜ್ಞಾನಿಯಾಗಿ ಹೇಳುತ್ತಾನೆ ಬಂಧುಗಳು ಜೊತೆಗೆ ಇರುವುದು ವಿಷ್ಣುವಿನ ಅಧೀನ ಎನ್ನುತ್ತಾನೆ, ಕಂಸ. ಅಸುರ ಸ್ವಭಾವಕ್ಕೆ ಇದೂ ವಿರುದ್ಧ.

ಈ ಸಮಸ್ಯೆಗಳಿಗೆ ಬೇರೆ ವ್ಯಾಖ್ಯಾನಕಾರರು ಸಮಾಧಾನ ಹೇಳಿಲ್ಲ. ಹೇಳುವುದು ಅವರ ಮತದಲ್ಲಿ ಶಕ್ಯವೂ ಇಲ್ಲ. ಒಂದೇ ಶರೀರದಲ್ಲಿ ಜೀವದ್ವಯ ಆವೇಶ ಹೊಂದಿದ್ದರೆ ಇಂಥ ಪರಸ್ಪರ ವಿರುದ್ಧವಾದ ವರ್ತನೆ ಕಂಡುಬರುವುದೆಂದು ಒಪ್ಪಿಲ್ಲ. ಒಪ್ಪಿದರೆ ಮಾತ್ರ ಈ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ.

ಪೂತನಾ ಕಂಸ ನರಕ ಶಿಶುಪಾಲಾದಿಷು ದ್ವಿಧಾ ।
ಜೀವಾಃ ಸಂತಸ್ತ್ವಸಂತಶ್ಚ ತತ್ರ ಬಂಧ್ವಾದಿರೂಪಿಣಃ ।
ವಿಷ್ಣೋಃ ಸಂತ ಇತಿ ಜ್ಞೇಯಾ ಅಸಂತಃ ಶತ್ರುರೂಪಿಣಃ ।
ಶುಭಜೀವ ಪ್ರಕಾಶೇನ ಕದಾಚಿಚ್ಛುಭಬುದ್ಧಯಃ ।
ವಿಪರ್ಯಯೇಽನ್ಯಥಾ ಚ ಸ್ಯುಃ ಶುಭಾಸ್ತತ್ರ ಹರಿಂ ಯಯುಃ ।
ಅಶುಭಾಶ್ಚ ತಮೋ ಘೋರಂ ಯದಿ ತತ್ರೈವ ಮಧ್ಯಮಾಃ ।
ಮಧ್ಯಮಾಂ ಗತಿಮೇವಾಪುರೇಕದೇಹಗತಾ ಅಪಿ ॥

ಇತಿ ಗಾರುಡೇ ॥

ಪೂತನಾ ಕಂಸ ನರಕ ಶಿಶುಪಾಲ ರಾವಣ ಮುಂತಾದವರ ಶರೀರದಲ್ಲಿ ಸಜ್ಜನ ದುರ್ಜನ ಎಂದು ಎರಡು ಬಗೆಯ ಜೀವರಿದ್ದರು. ಅವರಲ್ಲಿ ವಿಷ್ಣುವನ್ನು ವಿಷ್ಣುಭಕ್ತರನ್ನು ಬಂಧುಗಳು ಮಿತ್ರರೆಂದು ಮುಂತಾಗಿ ಪ್ರೀತಿಸಿದವರು ಸಜ್ಜನರು. ವಿಷ್ಣು ವೈಷ್ಣವರಿಗೆ ಶತ್ರುಗಳೆನಿಸಿದವರು ದುರ್ಜನರು. ಸಜ್ಜನರ ಆವೇಶ ಹೆಚ್ಚಿದಾಗ ಈ ಪೂತನಾ ಮೊದಲಾದವರಲ್ಲಿ ಒಳ್ಳೆಯ ಬುದ್ಧಿ ಕಾಣುತ್ತದೆ. ದುರ್ಜನರ ಆವೇಶ ಹೆಚ್ಚಿದಾಗ ಕೆಟ್ಟ ಬುದ್ಧಿ ಕಾಣುತ್ತದೆ. ಕೊನೆಯಲ್ಲಿ ಈ ಪೂತನಾ ಮೊದಲಾದವರು ಸತ್ತಾಗ ಅವರಲ್ಲಿದ್ದ ಸಜ್ಜೀವರು ಪರಮಾತ್ಮನನ್ನು ಹೊಂದಿದರು, ದುರ್ಜನರು ಘೋರವಾದ ತಮಸ್ಸನ್ನು ಹೊಂದಿದರು. ಒಂದೇ ಶರೀರದಲ್ಲಿ ಆವಿಷ್ಟರಾದ ಇಬ್ಬರಲ್ಲಿ ಒಬ್ಬರು ಮಧ್ಯಮ ಜೀವರಾಗಿದ್ದರೆ ಅವರು ಮಧ್ಯಮಗತಿಯನ್ನೇ ಹೊಂದಿದರು, ಎಂದು ಗರುಡಪುರಾಣದಲ್ಲಿ ಹೇಳಿದೆ.

ಏವಂ ದುರ್ಮಂತ್ರಿಭಿಃ ಕಂಸಃ ಸಹ ಸಮ್ಮಂತ್ರ್ಯ ದುರ್ಮತಿಃ ।
ಬ್ರಹ್ಮಹಿಂಸಾಂ ಹಿತಂ ಮೇನೇ ಕಾಲಪಾಶಾವೃತೋಽಸುರಃ ॥

'ದುರ್ಬುದ್ಧಿಯಾದ ಕಂಸ ಹೀಗೆ ದುಷ್ಟಮಂತ್ರಿಗಳೊಡನೆ ಮಂತ್ರಾಲೋಚನೆ ಮಾಡಿ ಬ್ರಾಹ್ಮಣರನ್ನು ಹಿಂಸಿಸುವುದೇ ತನಗೆ ಹಿತಕರವೆಂದು ತಿಳಿದ. ಏಕೆಂದರೆ ಅವನು ಅಸುರನಾಗಿದ್ದ, ಮೃತ್ಯುಪಾಶದಲ್ಲಿ ಸಿಲುಕಿದ್ದ'

ಎಂದು ಮುಂದೆ ಭಾಗವತ ಐದನೆ ಅಧ್ಯಾಯ ೪೩ನೇ ಶ್ಲೋಕದಲ್ಲಿಯೂ ಕಂಸ ತೋರಿದ ದುರ್ಬುದ್ಧಿ ವೈಷ್ಣವದ್ವೇಷಗಳು ವರ್ಣಿತವಾಗಿವೆ.

ಸ ನಿತ್ಯದೋದ್ವಿಗ್ನಧಿಯಾ ತಮೀಶ್ವರಂ
ಪಿಬನ್ನದನ್ವಾ ವಿಚರನ್ ಸ್ವಪನ್ ಶ್ವಸನ್ ।

ದದರ್ಶ ಚಕ್ರಾಯುಧಮಚ್ಯುತಂ ಯತ
ಸ್ತದೇವ ರೂಪಂ ದುರವಾಪಮಾಪ ॥

'ಕಂಸ ಭಯತುಂಬಿದ ಮನಸ್ಸಿನಿಂದ ನೀರು ಕುಡಿವಾಗ ಅನ್ನ ಉಣುವಾಗ ಅತ್ತಿತ್ತ ಸಂಚರಿಸುವಾಗ ಮಲಗುವಾಗ ಶ್ವಾಸೋಚ್ಛ್ವಾಸ ಮಾಡುವಾಗಲೂ ಕೂಡ ನಿರಂತರ ಚಕ್ರಧಾರಿಯಾದ ಜಗದೀಶ್ವರನಾದ ಶ್ರೀಕೃಷ್ಣನನ್ನೇ ನೆನೆಯುತ್ತಿದ್ದುದರಿಂದ ದುರ್ಲಭವಾದ ಆ ಚಕ್ರಧಾರಿ ಕೃಷ್ಣರೂಪವನ್ನೇ ಪ್ರವೇಶಿಸಿದ'

ಎಂದು ಮುಂದೆ ನಲ್ವತ್ತೆರಡನೆ ಅಧ್ಯಾಯದ ೩೯ನೇ ಶ್ಲೋಕದಲ್ಲಿ ಕೃಷ್ಣನ ನಿರಂತರ ಧ್ಯಾನದ ಬಲದಿಂದ ಕಂಸ ಕೃಷ್ಣನ ಉದರವನ್ನು ಪ್ರವೇಶಿಸಿದನೆಂದಿದ್ದರಿಂದ ಆ ಧ್ಯಾನ ದ್ವೇಷದಿಂದ ಭಯದಿಂದಲೇ ಆಗಿದ್ದರೂ ಕೊನೆಯಲ್ಲಿ ಶುದ್ಧಭಕ್ತಿ ವ್ಯಕ್ತವಾಗಿತ್ತೆಂದು ಬೇರೆ ಹೇಳಬೇಕಾಗಿಲ್ಲ.

ಹೀಗೆ ವಿಷ್ಣುವೈಷ್ಣವರಲ್ಲಿ ದ್ವೇಷ ಭಕ್ತಿ ಎರಡನ್ನೂ ಕಂಸನೊಬ್ಬನೇ ತೋರಿದುದು ಹೇಗೆ ಎನ್ನುವ ಸಮಸ್ಯೆಗೂ ಮೇಲೆ ಹೇಳಿದ ಈ ಗಾರುಡ ವಚನವೇ ಪರಿಹಾರ ನೀಡುತ್ತದೆ.

ಶರೀರದಲ್ಲಿ ಕರ್ಮಾನುಗುಣವಾಗಿ ಸಜ್ಜೀವ ಪ್ರಕಾಶಕ್ಕೆ ಬಂದಾಗ ಅವನ ಮನೋನಿಯಾಮಕರಾದ ತತ್ವಾಭಿಮಾನಿ ದೇವತೆಗಳು ಅಸುರಜೀವನನ್ನು ತಡೆದು ನಿಲ್ಲಿಸಿ ಸಜ್ಜೀವನಿಂದ ಜ್ಞಾನಸಾಧನ ಮಾಡಿಸುತ್ತಾರೆ. ಅಸುರಜೀವ ಪ್ರಕಾಶಕ್ಕೆ ಬಂದಾಗ ಅವನ ಮನೋನಿಯಾಮಕರಾದ ತತ್ವಾಭಿಮಾನಿ ದೈತ್ಯರು ಅವನಿಂದ ತಮಃಸಾಧನ ಮಾಡಿಸುತ್ತಾರೆ. ಆಗ ಅವನ ಸಾಧನೆ ಪೂರ್ತಿಯಾಗಲೆಂದು ದೇವತೆಗಳು ಸುಮ್ಮನಿರುತ್ತಾರೆ. ಹೀಗಾಗಿ ಒಬ್ಬನೇ ವ್ಯಕ್ತಿಯಲ್ಲಿ ಎರಡು ಬಗೆಯ ವರ್ತನೆಗಳು ಕಾಣುತ್ತವೆ.

❖❖❖

ನಿನ್ನ ಮೃತ್ಯು ಆಗಲೆ ಬೇರೊಂದು ಕಡೆ ಹುಟ್ಟಿದ್ದಾನೆ ಎಂದು ದೇವಿ ದುರ್ಗೆ ಹೇಳಿದ್ದನ್ನು ಕೇಳಿದ ಬಳಿಕ ಕಂಸ ಪಶ್ಚಾತ್ತಾಪದಿಂದ ವಸುದೇವ ದೇವಕಿಯರನ್ನು ಸಂತೈಸುತ್ತ ನುಡಿಯುತ್ತಾನೆ.

ಭುವಿ ಭೌಮಾನಿ ಭೂತಾನಿ ಯಥಾऽऽಯಾಂತ್ಯಪಯಾಂತಿ ಚ ।
ನಾಯಮಾತ್ಮಾ ತಥೈತೇಷು ವಿಪರ್ಯೇತಿ ಯಥೈವ ಭೂಃ ॥ ೧೯ ॥

ಮಣ್ಣಿನಲ್ಲಿ ಗಿಡ ಮರಗಳು ಹುಟ್ಟುತ್ತವೆ. ಸಾಯುತ್ತವೆ. ಅದರಿಂದ ಅವು ಪರಸ್ಪರ ಜೊತೆಯಾಗಿ ಸದಾ ಇರುವುದಿಲ್ಲ. ಮಣ್ಣುಮಾತ್ರ ಹುಟ್ಟುವುದಿಲ್ಲ. ನಾಶವಾಗುವುದಿಲ್ಲ. ಗಿಡಮರಗಳಿಗೆ ಆಶ್ರಯವಾಗಿ ಸದಾ ಜೊತೆಗೆ ಇರುತ್ತದೆ. ಹಾಗೇ ಪ್ರಾಣಿಗಳು ಪರಮಾತ್ಮನಲ್ಲಿ ಹುಟ್ಟಿ ನಾಶಹೊಂದುತ್ತಿದ್ದರೂ ಪರಮಾತ್ಮ ಉತ್ಪತ್ತಿನಾಶಗಳನ್ನು ಹೊಂದುವುದಿಲ್ಲ. ಆ ಪರಮಾತ್ಮನೆ ಹಿಂದೆ ಹೇಳಿದ ದೈವ. ಎಲ್ಲ ಪ್ರಾಣಿಗಳೂ ಆ ದೈವಕ್ಕೆ ಅಧೀನರು. ಅವನೆ ಅವರಿಗೆ ಸದಾ ಜೊತೆಯಾಗಿ ಆಶ್ರಯನಾಗಿ ಇರುತ್ತಾನೆ.

ಇಲ್ಲಿ [೧] ಶ್ರೀಧರ ಮುಂತಾದವರ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ಮಣ್ಣಿನ ಗಡಿಗೆ ಮುಂತಾದುವು ತಯಾರಾಗುತ್ತವೆ ಒಡೆದು ಹೋಗುತ್ತವೆ. ಮಣ್ಣಿನಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಹಾಗೇ ಜೀವಾತ್ಮನ ಶರೀರ ಹುಟ್ಟುತ್ತದೆ ಸಾಯುತ್ತದೆ. ಆತ್ಮ ಯಾವ ವ್ಯತ್ಯಾಸವನ್ನೂ ಹೊಂದುವುದಿಲ್ಲ. ಇದನ್ನು ಆಲೋಚಿಸಿದರೆ, ವಸುದೇವ ದೇವಕಿಯರೆ, ನಿಮಗೆ ಪುತ್ರಶೋಕವಾಗುವುದಿಲ್ಲ' ಎಂದು ಕಂಸ ಉಪದೇಶಿಸುತ್ತಾನೆ.

ಆದರೆ ಶ್ಲೋಕದಲ್ಲಿ ಜೀವಾತ್ಮನ ಶರೀರವನ್ನು ಹೇಳುವ ಶಬ್ದವಿಲ್ಲ. 'ಭೂತಾನಿ' ಎಂದರೆ ಜಡಶರೀರಗಳಲ್ಲ, ಶರೀರಿಗಳಾದ ಜೀವಿಗಳು. 'ಭೂತದಯೆ' ಎಂದರೆ ಶರೀರಿಗಳಾದ ಜೀವಿಗಳ ಮೇಲೆ ದಯೆ.

ಶರೀರಕ್ಕೆ ಉತ್ಪತ್ತಿನಾಶಗಳಿದ್ದರೂ ದುಃಖವಿಲ್ಲ, ಅದು ಜಡ. ಆತ್ಮಕ್ಕೇ ಶರೀರದ ಉತ್ಪತ್ತಿ ನಾಶಗಳಿಂದ ಗರ್ಭವಾಸ ಮರಣ ಸಂಕಟಗಳಾಗುತ್ತವೆ. ಇದು ವಿಕಾರ, ವ್ಯತ್ಯಾಸ. ಜೀವಿಗಳಿಗೆ ದುಃಖಜನಕ.

ಮಣ್ಣಿನ ಗಡಿಗೆ ಹುಟ್ಟುವಾಗಲೂ ನಾಶವಾಗುವಾಗಲೂ ಮಣ್ಣಿನಲ್ಲಿಯೇ

---

೧ ಸದಾ ನಾಸತ ಇತ್ಯನೇನ ಯದುಕ್ತಂ ಜನ್ಮಮರಣಾದಿ ತದಪಿ ದೇಹಾನಾಮೇವ, ನಾತ್ಮನ ಇತ್ಯಾಹ ಭುವೀತಿ। ಭೂತಾನಿ ದೇಹಾ ಏವ ಯಾಂತ್ಯಪಯಾಂತಿ ಚ ಭವಂತಿ ನ ಭವಂತಿ ಚೇತ್ಯರ್ಥಃ । ಯಥಾ ಭುವಿ ಭೌಮಾನಿ ಘಟಾದೀನಿ ತದ್ವತ್ ಏತೇಷು ಭೂತೇಷು ಜನ್ಮಾದಿಭಿರ್ವಿಕ್ರಿಯಮಾಣೇಷ್ವಯಮಪರೋಕ್ಷತಯಾ ಪ್ರತ್ಯಭಿಜ್ಞಾಯಮಾನೋ ನ ವಿಪರ್ಯೇತಿ ವಿಪರ್ಯಯಂ ನ ಪ್ರಾಪ್ನೋತಿ ಏಕರೂಪ ಏವ ವರ್ತತೇ ಇತ್ಯರ್ಥಃ । ಭೌಮೇಷು ವಿಕ್ರಿಯಮಾಣೇಷು ಯಥಾ ಭೂಸ್ತಥೇತಿ। ಏವಂ ವಿಚಾರ್ಯಮಾಣೇ ಸತಿ ನ ಶೋಕಾದ್ಯವಕಾಶಃ। -ಶ್ರೀಧರಃ

ಜನ್ಮಮರಣಾದ್ಯವಸ್ಥಾವತ್ತ್ವ ಸ್ವಾಭಾವ್ಯಾದ್ ದೇಹಾ ನ ಶೋಚ್ಯಾಃ। ನಾಪ್ಯಾತ್ಮಾ ವಿಕ್ರಿಯಾಭಾವಾನ್ನಿತ್ಯತ್ವಾಚ್ಚೇತಿ ಭಾವಃ। -ವೀರರಾಘವಃ

ಆಕಾರ ವ್ಯತ್ಯಾಸಗಳಾಗುವುದರಿಂದಲೂ ಮಣ್ಣಿನ ದೃಷ್ಟಾಂತ ಕೊಟ್ಟಿರುವುದು ಅಸಂಗತ.

ಶರೀರನಾಶವಾದಾಗ ಆತ್ಮನಾಶವಾಗುವುದಿಲ್ಲ ಎಂದಮಾತ್ರಕ್ಕೆ ಶೋಕಾವಕಾಶ ವಿಲ್ಲ ಎನ್ನುವುದು ಹೇಗೆ? ಶರೀರಾಭಿಮಾನವನ್ನು ಬಿಟ್ಟರೆ ಶೋಕಾವಕಾಶವಿಲ್ಲ, ನಿಜ. ಆದರೆ ಶರೀರಾಭಿಮಾನವನ್ನು ಏಕೆ ಬಿಡಬೇಕು? ಭಗವದ್ಗೀತೆಯಲ್ಲಿ ಅರ್ಜುನನಿಗೆ ಶ್ರೀಕೃಷ್ಣ ಶರೀರಾಭಿಮಾನವನ್ನು ಬಿಟ್ಟು ಯುದ್ಧ ಮಾಡಲು ಉಪದೇಶಿಸಿದ. ಯುದ್ಧವೆಂಬ ಪುಣ್ಯಕಾರ್ಯಕ್ಕೆ ಅಭಿಮಾನ ಅಡ್ಡ ಬರುತ್ತಿತ್ತು. ಪ್ರಕೃತ ಹಾಗಿಲ್ಲ. ಕಂಸ ಹಾಗೆ ಉಪದೇಶಿಸುವುದು ಅಕಾಲಿಕ.

ವಸ್ತುತಃ ಭಗವಂತನನ್ನು ಆಶ್ರಯಿಸಿರುವ ಜೀವಿಗಳು ಹುಟ್ಟಿ ಸಾಯುತ್ತಿದ್ದರೂ ಅದರಿಂದ ಭಗವಂತನಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಅವನಲ್ಲಿ ಹರ್ಷ ಶೋಕಗಳುಂಟಾಗುವುದಿಲ್ಲ. ಅವನ ಅಧೀನವಾಗಿಯೇ ಜೀವಿಗಳು ಹುಟ್ಟುತ್ತಾರೆ ಸಾಯುತ್ತಾರೆ. ಅದರಿಂದ ಅವರು ಸದಾ ಪರಸ್ಪರ ಜೊತೆಯಾಗಿರುವುದಿಲ್ಲ. ಭಗವಂತನೆ ಸದಾ ಜೊತೆಯಾಗಿರುತ್ತಾನೆ. ಅವನ ಒಡನಾಟದ ಚಿಂತನೆಯನ್ನು ಅನುಭವವನ್ನು ಹೊಂದಿ ಸುಖಿಯಾಗುವುದು ಜಾಣತನ ಎಂದು ಕಂಸ ಉಪದೇಶ ಮಾಡುತ್ತಾನೆ. ಭಗವಂತನ ಅಧೀನವಾಗಿಯೇ ತಾನು ಪ್ರಾಚೀನಕರ್ಮಾನುಸಾರ ಶಿಶುಹತ್ಯಾಪಾತಕ ವನ್ನು ಮಾಡಿಬಿಟ್ಟೆನೆಂದು ಕ್ಷಮಾಯಾಚನವನ್ನೂ ಮಾಡುತ್ತಿದ್ದಾನೆ. ಇದನ್ನು ಹಿಂದಿನ ಶ್ಲೋಕದಲ್ಲಿ ಹೇಳಿ ಈ ಶ್ಲೋಕದಲ್ಲಿ ದೃಷ್ಟಾಂತವನ್ನು ನೀಡುತ್ತಿದ್ದಾನೆ. ನೆಲದ ಮೇಲೆ ಗಿಡಮರಗಳು ಭಗವಂತನ ಅಧೀನವಾಗಿ ಹುಟ್ಟಿ ಸಾಯುತ್ತವೆ. ಯಾವ ಗಿಡಕ್ಕೂ ಇನ್ನೊಂದು ಗಿಡ ಸದಾ ಜೊತೆ ಇರುವುದಿಲ್ಲ. ಜೊತೆ ಇರುವುದು ನೆಲವೆ. ಅದೇ ರೀತಿ, ಹುಟ್ಟುವ ಮನುಷ್ಯನಿಗೆ ಯಾವನಿಗೂ ಇನ್ನೊಬ್ಬ ಮನುಷ್ಯ ಸದಾ ಜೊತೆ ಇರುವುದಿಲ್ಲ. ಭಗವಂತನೊಬ್ಬನೇ ಜೊತೆಗಿರುವವನು ಎಂದು ತಿಳಿದು ಪುತ್ರಶೋಕವನ್ನು ಮರೆಯಲು ಕಂಸ ಉಪದೇಶಿಸುತ್ತಾನೆ. ಹೊರತು ಪುತ್ರರ ಮೇಲಿನ ಅಭಿಮಾನವನ್ನೇ ಬಿಡಬೇಕೆಂದಲ್ಲ.

[೧]ವಲ್ಲಭವ್ಯಾಖ್ಯಾನದಲ್ಲಿ 'ಶರೀರದ ಹುಟ್ಟು ಸಾವುಗಳಿಂದ ಆತ್ಮನಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ, ಆತ್ಮ ಆಕಾಶದಂತೆ ವ್ಯಾಪಕ, ನಿರ್ವಿಕಾರ. ಆಕಾಶದಲ್ಲಿ ಮೋಡಗಳು ಕಂಡು ಮರೆಯಾದರೂ ಆಕಾಶದಲ್ಲಿ ವ್ಯತ್ಯಾಸವಾಗುವುದಿಲ್ಲ ಎಂದು

---

೧ 'ಸಾಂಖ್ಯಾನಾಮೇವ ಮತಂ ದೈತ್ಯಾನಾಂಹೃದಯೇ ಸಮಾಯಾತೀತಿ ತದೇವೋಚ್ಯತೇ'
-ವಲ್ಲಭಃ

ಸಾಂಖ್ಯಮತ ಪ್ರಕಾರ ಕಂಸ ಉಪದೇಶಿಸುತ್ತಾನೆ. ಅವನು ದೈತ್ಯನಾದ್ದರಿಂದ ಅವನಿಗೆ ಸಾಂಖ್ಯಮತವೇ ಹೃದಯದಲ್ಲಿ ಗೋಚರವಾಗುತ್ತದೆ, ಅದನ್ನೇ ಹೇಳುತ್ತಾನೆ'.

ಆದರೆ ಇಲ್ಲಿ ಕಂಸನೊಳಗಿರುವ ಕಾಲನೇಮಿದೈತ್ಯ ಭಗವಂತನ ಬಗ್ಗೆ ಉಪದೇಶಿಸುತ್ತಿಲ್ಲ, ಭೃಗುಮುನಿ ಉಪದೇಶಿಸುತ್ತಾನೆ. ಅವನಿಗೆ ಸಾಂಖ್ಯಮತ ಸಮ್ಮತವಾಗಿರಲು ಶಕ್ಯವಿಲ್ಲ. ಅದರಿಂದ ಶ್ರೀಮದಾಚಾರ್ಯರು ಈ ಎಲ್ಲ ಬೇರೆ ವ್ಯಾಖ್ಯಾನಕಾರರನ್ನೂ ಒಂದು ಸಣ್ಣ ಮಾತಿನಿಂದಲೇ ನಿರಾಕರಿಸುತ್ತಾರೆ-

ಅಯಮಾತ್ಮಾ ಪರಮಾತ್ಮಾ।

ಈ ಶ್ಲೋಕದಲ್ಲಿ 'ಈ ಆತ್ಮ'ನೆಂದು ಹೇಳಿರುವುದು ಹಿಂದಿನ ಶ್ಲೋಕದಲ್ಲಿ 'ದೈವಾಧೀನಾಃ' ಎಂಬಲ್ಲಿ ಪ್ರಕೃತನಾಗಿರುವ ಪರಮಾತ್ಮ ಎಂಬ ಅಭಿಪ್ರಾಯದಿಂದ.

❖❖❖

ಮಕ್ಕಳನ್ನು ವ್ಯರ್ಥವಾಗಿ ಕೊಂದೆನೆಂದು ಪಶ್ಚಾತ್ತಾಪದಿಂದ ಕಂಸ ವಸುದೇವ ದೇವಕಿಯರನ್ನು ಸಂತೈಸುತ್ತಾನೆ-

ಯತೋಽನೇಕವಿಧೋಽಭೇದೋ ಯತ ಆತ್ಮವಿಪರ್ಯಯಃ।
ದೇಹಯೋಗವಿಯೋಗಶ್ಚ ಸಂಸೃತಿರ್ನ ನಿವರ್ತತೇ ॥ ೨೦ ॥

ದುರ್ಜನರೆಲ್ಲರೂ ತಮ್ಮನ್ನು ತಾವು ತಪ್ಪಾಗಿ ತಿಳಿಯುವುದು ನಾನು ಪರಮಾತ್ಮ ನಾನು ದೇವತೆ ಎಂದು ಮುಂತಾಗಿ ಅನೇಕ ಬಗೆಯಿಂದ ಅಭೇದವನ್ನು ತಿಳಿಯುವುದು, ಅದರ ಫಲವಾಗಿ ನರಕಾದ್ಯನರ್ಥಗಳನ್ನು ಹೊಂದುವುದು ಇವೆಲ್ಲವೂ ಪರಮಾತ್ಮನ ಪ್ರೇರಣೆಯಿಂದ. ಮಧ್ಯಮ ಜೀವರೂ ತಮ್ಮನ್ನು ತಾವು ತಪ್ಪಾಗಿ ತಿಳಿದು ದೇಹಾದಿಗಳಿಂದ ಅನೇಕ ವಿಧವಾದ ಅಭೇದವನ್ನು ತಿಳಿಯುವುದು ಅದರಿಂದ ಅವರಿಗೆ ಜನನ ಮರಣ ರೂಪವಾದ ಸಂಸಾರ ಎಂದೂ ನಿವೃತ್ತಿ ಹೊಂದದಿರುವುದು ಪರಮಾತ್ಮನ ಪ್ರೇರಣೆಯಿಂದಲೇ. ಉತ್ತಮ ಜೀವರು ಎಲ್ಲರೂ ತತ್ವಜ್ಞಾನದಿಂದ ಮೋಕ್ಷ ಪಡೆಯುವುದೂ ಪರಮಾತ್ಮನ ಅನುಗ್ರಹ ದಿಂದಲೆ. ಅದರಿಂದ ಎಲ್ಲ ಜೀವರ ಜೊತೆಗೆ ಪರಮಾತ್ಮ ಸದಾ ಇರುತ್ತಾನೆ, ಅವನಿಗೆ ಉತ್ಪತ್ತಿ ನಾಶಗಳಿಲ್ಲ.

'ಯತೋಽನೇಕವಿಧೋಽಭೇದೋ' ಎಂಬಲ್ಲಿ 'ಯಥಾಽನೇವಂವಿದೋ

ಭೇದೋ' ಎಂದು ⁽¹⁾ಶ್ರೀಧರೀಯಪಾಠ. 'ಯದಾ ನ್ಯೆವಂವಿಧೋ ಭೇದೋ' ಎಂದು ವೀರರಾಘವೀಯ ಪಾಠ. ಇಬ್ಬರೂ ದೇಹಾತ್ಮೈಕ್ಯ ಬುದ್ಧಿ ಇರುವಷ್ಟು ಕಾಲ ಸಂಸಾರ ನಿವೃತ್ತಿಯಾಗುವುದಿಲ್ಲ ಎನ್ನುತ್ತಿದ್ದಾರೆ. ಆದರೆ ಅಜ್ಞಾನಿಗಳಿಗೂ ಕೂಡ 'ನನ್ನ ಶರೀರ' ಎಂದು ದೇಹಾತ್ಮಗಳಿಗೆ ಭೇದಬುದ್ಧಿಯೇ ಇದೆ ಹೊರತು 'ನಾನು ಶರೀರ' ಎಂದು ಐಕ್ಯಬುದ್ಧಿ ಇರುವುದಿಲ್ಲ. ಅದರಿಂದ ಐಕ್ಯಬುದ್ಧಿ ಸಂಸಾರಕ್ಕೆ ಕಾರಣ ವೆನ್ನುವುದು ತಪ್ಪು. 'ನನ್ನ ಕೆಲಸದಲ್ಲಿ ನಾನು ಸ್ವತಂತ್ರ' ಎಂದು ಭಾವಿಸುವುದೇ ಸಂಸಾರಕ್ಕೆ ಮೂಲ ಕಾರಣ. 'ನಾಹಂ ಕರ್ತಾ ಹರಿಃ ಕರ್ತಾ' ಎನ್ನುವುದೇ ಮೋಚಕ. ಶ್ಲೋಕದಲ್ಲಿ 'ಆತ್ಮ ವಿಪರ್ಯಯಃ' 'ಆತ್ಮನ ಬಗ್ಗೆ ವಿಪರೀತ ಜ್ಞಾನವೇ ಸಂಸಾರಕಾರಣ ಎಂದಿದೆ. ಆತ್ಮನ ಬಗ್ಗೆ ವಿಪರೀತ ಜ್ಞಾನವೆಂದರೆ 'ಆತ್ಮನು ಸ್ವತಂತ್ರ' ಎಂಬ ಬುದ್ಧಿ. 'ಆತ್ಮನು ದೇಹದಿಂದ ಅಭಿನ್ನ'ನೆಂದು ತಿಳಿಯುವುದೇ ಆತ್ಮವಿಪರ್ಯಯ ಎನ್ನುವುದು ನಿರಾಧಾರ. ಮೋಕ್ಷ ನೀಡುವವನು ಪರಮಾತ್ಮ, ಅಂದರೆ ಸ್ವತಂತ್ರ ಚೇತನ. ಅಜ್ಞಾನಿ ತನ್ನನ್ನು ಸ್ವತಂತ್ರ ಚೇತನನೆಂದು ತಿಳಿದರೆ ಪರಮಾತ್ಮ ಮೆಚ್ಚುವುದಿಲ್ಲ. ಮೋಕ್ಷ ನೀಡುವುದಿಲ್ಲ.

ಯತಃ ಪರಮಾತ್ಮನೋ ನೈಕವಿಧಮೈಕ್ಯಂ, ವಿಪರೀತ ಜ್ಞಾನೇನ ಯತಶ್ಚ ಸಂಸೃತಿರ್ನ ನಿವರ್ತತೇ, ಸ ಏವ ನ ವಿಪರ್ಯೇತಿ। ಪುತ್ರಾದಿಕಂ ತು ವಿಪರ್ಯೇತಿ । ತಸ್ಮಾತ್ ತಸ್ಮಿನ್ನೇವ ಸ್ಥಿತಿಂ ಕೃತ್ವಾ ಮಾಽನುಶೋಚ।

ಯಾವ ಪರಮಾತ್ಮನ ಪ್ರೇರಣೆಯಿಂದಲೇ ಜೀವಾತ್ಮನಲ್ಲಿ 'ನಾನು ಸ್ವತಂತ್ರ ಚೇತನ, ನಾನು ದೇವತೆ' ಎಂದು ಮುಂತಾಗಿ ಅನೇಕ ಬಗೆಯ ಐಕ್ಯ ಭಾವನೆ ಉಂಟಾಗುವುದೋ, ಆ ವಿಪರೀತ ಜ್ಞಾನದಿಂದ ಯಾವ ಪರಮಾತ್ಮನ ಪ್ರೇರಣೆಯಿಂದಲೇ ತಮಸ್ಸು ಉಂಟಾಗುವುದೋ ಸಂಸಾರ ನಿವೃತ್ತಿಯಾಗದೇ

---

೧ ಯಥಾ ಯಥಾವದನೇವಂವಿದ ಏವಮಜಾನತ ಆತ್ಮವಿಪರ್ಯಯೋ ದೇಹಾತ್ಮ ಬುದ್ಧಿರ್ಭವತಿ ಯತೋ ವಿಪರ್ಯಯಾದ್ ಭೇದೋ ಭವತಿ। ದೇಹಾಹಂಕಾರೇಣಾತ್ಮನಿ ಪರಿಚ್ಛಿನ್ನೇ ಸತಿ ಇದಂಕಾರಾಸ್ಪದಂ ಭಿನ್ನಂ ಭವತಿ। ಅತೋ ಭೇದಾತ್ ಪುತ್ರಾದಿ ದೇಹೈರ್ಯೋಗೋ ವಿಯೋಗಶ್ಚ ತತಃ ಸಂಸೃತಿಃ ಸುಖದುಃಖೇ ಇತಿ ಯಾವದಜ್ಞಾನಂ ನ ನಿವರ್ತತ ಇತ್ಯರ್ಥಃ। -ಶ್ರೀಧರಃ

ಯದ್ಯೆವಂವಿಧೋ ಭೇದೋ ದೇಹಾತ್ಮನೋರ್ವೈಧರ್ಮ್ಯರೂಪೋ ಭೇದೋ ನ ಸ್ಯಾತ್ ಅನುಷ್ಠಾನ ಪರ್ಯಂತತ್ವೇನ ನಾಧ್ಯವಸಿತಃ ಸ್ಯಾತ್, ಯತಃ ಅನಧ್ಯವಸಿತಾದೇವ ಭೇದಾದಾತ್ಮವಿಪರ್ಯಯಃ ದೇಹಧರ್ಮ ಪ್ರತೀತಿರ್ಭವತಿ ತಾವದ್ದೇಹ ಸಂಯೋಗವಿಯೋಗೈರುಪಲಕ್ಷಿತಾ ಸಂಸೃತಿರ್ನ ನಿವರ್ತತೇ। -ವೀರರಾಘವಃ

ಹೋಗುವುದೋ, ಆ ಪರಮಾತ್ಮನು ಮಾತ್ರ ಉತ್ಪತ್ತಿ ನಾಶಗಳನ್ನು ಹೊಂದದಿರುತ್ತಾನೆ. ಮಕ್ಕಳು ಮುಂತಾದವರು ಉತ್ಪತ್ತಿನಾಶಗಳನ್ನು ಹೊಂದುತ್ತಾರೆ. ಆದರಿಂದ ಪರಮಾತ್ಮನಲ್ಲಿಯೇ ಪ್ರೀತಿ ವಿಶ್ವಾಸವಿರಿಸಿಕೊಂಡು ಪುತ್ರಶೋಕಾದಿಗಳನ್ನು ತಡೆದುಕೊಳ್ಳು.

'ಯತೋಽನೇಕವಿಧೋ' ಎಂಬ ಶ್ಲೋಕದಲ್ಲಿ 'ಯತಃ' ಎಂದರೆ 'ಯಾವ ಕಾರಣದಿಂದ' ಎಂದರ್ಥವಲ್ಲ. ಅದಕ್ಕೆ ಮುಂದಿನ ಶ್ಲೋಕದಲ್ಲಿ 'ತಸ್ಮಾದ್ ಭದ್ರೇ' ಎಂಬಲ್ಲಿ 'ತಸ್ಮಾತ್' 'ಆ ಕಾರಣದಿಂದ' ಎಂದು ಅನ್ವಯವೂ ಅಲ್ಲ. 'ಯತಃ ಆತ್ಮ ವಿಪರ್ಯಯಃ' ಎಂದರೆ ಯಾವ ಪರಮಾತ್ಮನಿಂದ ಜೀವನಿಗೆ ವಿಪರೀತಜ್ಞಾನ ಉಂಟಾಗಿ ಆ ಮೂಲಕ ಸಂಸಾರ ನಿವೃತ್ತಿಯಾಗದೇ ಇರುವುದೋ ಆ ಪರಮಾತ್ಮನೇ ಉತ್ಪತ್ತಿನಾಶಗಳಿಲ್ಲದವನು ಸದಾ ಜೀವಾತ್ಮನನ್ನು ರಕ್ಷಿಸುತ್ತ ಜೊತೆಗಿರುವವನು 'ನಾಯಮಾತ್ಮಾ ವಿಪರ್ಯೇತಿ' ಎಂದು ಹಿಂದಿನ ಶ್ಲೋಕಕ್ಕೇ ಅನ್ವಯ. ಮುಂದಿನ ಶ್ಲೋಕದಲ್ಲಿ 'ತಸ್ಮಾತ್' ಎಂದರೆ ಪರಮಾತ್ಮನೆ ರಕ್ಷಕನಾಗಿ ಜೀವಾತ್ಮನ ಜೊತೆಗೆ ಸದಾ ಇರುವವನು, ಮಕ್ಕಳು ಮುಂತಾದವರಲ್ಲ, ಆ ಕಾರಣದಿಂದ, ಪರಮಾತ್ಮನಲ್ಲಿಯೇ ಮನಸ್ಸಿಟ್ಟು ಪುತ್ರಶೋಕವನ್ನು ಬಿಟ್ಟುಬಿಡು ಎಂದು ಅನ್ವಯ.

ಈ ಶ್ಲೋಕದಲ್ಲಿ 'ಅನೇಕ ವಿಧವಾದ ಅಭೇದ' ಎಂದರೆ 'ನಾನು ಪರಮಾತ್ಮನಾಗಲು ಯೋಗ್ಯ, ರಮಾಬ್ರಹ್ಮಾದಿ ದೇವತಾಪದವಿಗಳಿಗೆ ಯೋಗ್ಯ' ಎಂದು ಆಯೋಗ್ಯರು ಪರಮಾತ್ಮನ ದೇವತೆಗಳ ಅಭೇದವನ್ನು ತಮ್ಮಲ್ಲಿ ಆರೋಪಿಸಿಕೊಳ್ಳುತ್ತಾರೆ. ಇದೊಂದು ವಿಧವಾದ ಅಭೇದಭ್ರಾಂತಿ. ಅದರ ಫಲ 'ಆತ್ಮವಿಪರ್ಯಯಃ' ಅಂದರೆ ಆತ್ಮಸ್ವರೂಪಕ್ಕೆ ಉಂಟಾಗುವ ನರಕಾದಿ ಅನರ್ಥ. ಇನ್ನೊಂದು ಬಗೆಯ ಅಭೇದಭ್ರಾಂತಿಯೆಂದರೆ ಮಧ್ಯಮ ಜೀವರಿಗೆ ತಮ್ಮ ದೇಹ ಇಂದ್ರಿಯ ಅಂತಃಕರಣಗಳಲ್ಲಿ ತಮ್ಮ ಅಭೇದಬುದ್ಧಿ. ಅದರ ಫಲ 'ಸಂಸೃತಿರ್ನ ನಿವರ್ತತೇ' ಸಂಸಾರ ನಿವೃತ್ತಿಯಾಗುವುದೇ ಇಲ್ಲ, ನಿತ್ಯ ಸಂಸಾರಿಗಳಾಗಿರುತ್ತಾರೆ.

ಇಲ್ಲಿ ಮಧ್ಯಮ ಜೀವರ ದೇಹಾತ್ಮೈಕ್ಯ ಬುದ್ಧಿ ಎಂದರೆ ಅದ್ವೈತವಿಶಿಷ್ಟಾದ್ವೈತ ವ್ಯಾಖ್ಯಾನಗಳಲ್ಲಿ ಹೇಳುವಂತೆ 'ದೇಹ ಆತ್ಮಗಳಿಗೆ ಪರಸ್ಪರ ಅಭೇದವಿದೆ' ಎಂದು ಪ್ರತ್ಯಕ್ಷಭ್ರಮ ವಿವಕ್ಷಿತವಲ್ಲ. ಪ್ರತ್ಯಕ್ಷವಾಗಿ ಯಾರಿಗೂ ದೇಹ ಆತ್ಮಗಳಿಗೆ ಅಭೇದ ಕಾಣುವುದಿಲ್ಲ. ಕುತರ್ಕ ಕುಶಾಸ್ತ್ರಗಳಿಂದ ಕೆಲವರಿಗೆ ಅಭೇದ ಭಾವನೆ ಬರಬಹುದು. ಅದು ವಿವಕ್ಷಿತ. ಅದರ ಫಲ ನಿತ್ಯಸಂಸಾರ.

ಈ ಶ್ಲೋಕದಲ್ಲಿ ಅಧಮ ಮಧ್ಯಮ ಜೀವರಿಗೆ ಅನೇಕವಿಧವಾದ ಅಭೇದಜ್ಞಾನದ ಫಲವಾಗಿ ತಮಸ್ಸು ನಿತ್ಯಸಂಸಾರಗಳು ಉಕ್ತವಾಗಿವೆ.

ಉತ್ತಮಜೀವರಿಗೆ ಭೇದಜ್ಞಾನದಿಂದ ಪರಮಾತ್ಮಪ್ರಾಪ್ತಿ ಉಕ್ತವಾಗಿಲ್ಲ. ಆದರೆ ಅದೂ ವಿವಕ್ಷಿತವೆ. ಅಧ್ಯಾಹಾರದಿಂದ ಅದನ್ನು ಇಟ್ಟುಕೊಳ್ಳಬೇಕು.

❖❖❖

ತಂಗಿ ದೇವಕಿ, ನಾನಿನ್ನ ಮಕ್ಕಳನ್ನು ಕೊಂದೆನೆಂದು ಶೋಕಿಸಬೇಡ ಎನ್ನುತ್ತಾನೆ ಕಂಸ.

ತಸ್ಮಾದ್‌ಭದ್ರೇ ಸ್ವತನಯಾನ್ ಮಯಾ ವ್ಯಾಪಾದಿತಾನಪಿ ।
ಮಾಽನುಶೋಚ ಯತಃ ಸರ್ವಃ ಸ್ವಕೃತಂ ವಿಂದತೇಽವಶಃ ॥ ೨೧ ॥

ಹೀಗೆ, ಮಂಗಳೆ, ದೇವಕಿ, ಮಕ್ಕಳು ನಮಗೆ ಸದಾ ಜೊತೆಗೆ ಇರುವವರಲ್ಲ, ಪರಮಾತ್ಮನೊಬ್ಬನೇ ಜೊತೆಗೆ ಇರುವವನು. ಅದರಿಂದ ಅವನಲ್ಲಿಯೆ ವಿಶ್ವಾಸವಿಟ್ಟು ನೀನು ನಿನ್ನ ಪುತ್ರಶೋಕವನ್ನು ಬಿಟ್ಟುಬಿಡು. ಎಲ್ಲ ಜೀವರೂ ಪರಮಾತ್ಮಾಧೀನರಾಗಿಯೇ ತಮ್ಮ ತಮ್ಮ ಕರ್ಮಫಲವನ್ನು ಉಣ್ಣುವುದರಿಂದ ನಾನು ನಿನ್ನ ಮಕ್ಕಳನ್ನು ಕೊಂದಿದ್ದರೂ ಆ ಮಕ್ಕಳ ಬಗ್ಗೆ ನೀನು ಕೊರಗಬಾರದು.

[೧]ಶ್ರೀಧರವ್ಯಾಖ್ಯಾನದಲ್ಲಿ 'ಜನನ ಮರಣಗಳು ದೇಹಕ್ಕೇ ಹೊರತು ಆತ್ಮನಿಗೆ ಇಲ್ಲವಾದ ಕಾರಣ ನಿನ್ನ ಮಕ್ಕಳು ವಸ್ತುತಃ ನಿನ್ನ ಮಕ್ಕಳಲ್ಲ, ನಾನು ಅವರನ್ನು ಕೊಂದೂ ಇಲ್ಲ ಅದರಿಂದ ಶೋಕವನ್ನು ಬಿಡು. ಅಜ್ಞಾನ ದೃಷ್ಟಿಯಿಂದ ಅವರು ನಿನ್ನ ಮಕ್ಕಳು, ನಾನು ಅವರನ್ನು ಕೊಂದಿದ್ದೇನೆ ನಿಜ. ಆದರೂ ಅಜ್ಞಾನಿಗಳ ವ್ಯವಹಾರವಿದು. ಎಲ್ಲವೂ ಕರ್ಮಾಧೀನವೆಂದು ಸಹಿಸಿಕೊಳ್ಳಬೇಕು' ಎಂದು ದೇವಕಿಯನ್ನು ಕಂಸ ಸಂತೈಸುತ್ತಿದ್ದಾನೆ. ಆದರೆ ಮಕ್ಕಳು ಮಕ್ಕಳಲ್ಲ, ನಾನು ಕೊಂದಿದ್ದೂ ಕೊಂದಿದ್ದಲ್ಲ ಎಲ್ಲ ಮಿಥ್ಯೆ, ಅಜ್ಞಾನಿಗಳ ವ್ಯವಹಾರ ಎಂದು ಕಂಸ ಹೇಳಿದರೆ ದೇವಕಿ 'ನಾನು ಅಳುವುದೂ ಅಳುವುದಲ್ಲ, ಮಿಥ್ಯೆ! ಏಕೆ ಅಳಬೇಡ ಎನ್ನುತ್ತಿ' ಎಂದು ಕೇಳಬಹುದು. 'ಆನೆ ಸುಳ್ಳಾದರೇನು? ನಾನು ಭಯದಿಂದ ಓಡುವುದೂ ಸುಳ್ಳೆ' ಎನ್ನುವವನನ್ನು ಓಡಬೇಡ ಎಂದು ತಡೆಯಲಾದೀತೆ? ಅಜ್ಞಾನಿ ವ್ಯವಹಾರದಲ್ಲಿ ಎಲ್ಲವೂ ಕರ್ಮಾಧೀನ ಎನ್ನುವ ಮಾತು ನೊಂದಜೀವಕ್ಕೆ ಸಾಂತ್ವನ

---

೧ ಏವಮುಕ್ತಪ್ರಕಾರೇಣ ನೈತೇ ತವ ತನಯಾ, ಅಹಂ ತು ತಾವನ್ನ ಘಾತಿತವಾನ್, ತಥಾಪ್ಯಜ್ಞಾನದೃಷ್ಟ್ಯಾ ಸ್ವತನಯಾನ್ ಮಯಾ ವ್ಯಾಪಾದಿತಾನಪಿ ಮಾನುಶೋಚೇತಿ ಸಾಂತ್ವಯತಿ ತಸ್ಮಾದಿತಿ। ಅಜ್ಞಾನಾಶ್ರಯಮೇವ ಕರ್ಮವಾದಮಾಹ ಯತ ಇತಿ। - ಶ್ರೀಧರಃ

ನೀಡಲಾರದು. ಕರ್ಮಾಧೀನವಾಗಿ ಅಪಘಾತಾದಿಗಳಿಂದ ಬಂಧುಗಳು ಸತ್ತರೆ ಅಳದಿರುತ್ತಾರೆಯೆ?

[೧]ವೀರರಾಘವ ವ್ಯಾಖ್ಯಾನದಲ್ಲಿ 'ಆತ್ಮ ನಿತ್ಯ, ದೇಹ ಅನಿತ್ಯ ಎಂಬ ತತ್ವವನ್ನು ತಿಳಿದರೆ ಅನಿತ್ಯವಾದ ದೇಹನಾಶಕ್ಕೆ ಅಳು ಬರುವುದಿಲ್ಲ. ದೇಹದ ಉತ್ಪತ್ತಿ ನಾಶಗಳೂ ಕರ್ಮಾಧೀನವಾದ್ದರಿಂದಲೂ ಅಳುವುದು ಸರಿಯಲ್ಲ' ಎಂದಿದ್ದಾರೆ. ಆದರೆ ದೇಹ ಅನಿತ್ಯವಾದರೂ ಒಳ್ಳೆಯ ಆಕರ್ಷಕವಾಗಿದ್ದು ಸುಖ ನೀಡುತ್ತದೆ. ಅದು ಹೋದರೆ ದುಃಖ ಅನಿವಾರ್ಯ. ದೇಹ ಅನಿತ್ಯ ಎನ್ನುವ ಮಾತು ಸಾಂತ್ವನ ನೀಡಲಾರದು. ಕರ್ಮವಶದಿಂದ ಮಕ್ಕಳು ಹುಟ್ಟುತ್ತಾರೆ ಸಾಯುತ್ತಾರೆ ಎನ್ನುವುದೂ ಹೀಗೇ ವ್ಯರ್ಥ ಉಪದೇಶವಾಗುವುದು. ಕರ್ಮವಶದಿಂದಲಾಗಲಿ ಕಂಸನ ದೌರ್ಜನ್ಯದಿಂದಾಗಲಿ ಮಕ್ಕಳ ಸಾವು ಸಾವೇ, ದುಃಖಕರವೇ.

[೨]ವಲ್ಲಭ ವ್ಯಾಖ್ಯಾನದಲ್ಲಿ ಕಂಸ ಹೇಳುತ್ತಾನೆ, 'ವಸ್ತುತಃ ನಿನ್ನ ಮಕ್ಕಳು ಕರ್ಮವಶದಿಂದಲೆ ಸತ್ತಿದ್ದಾರೆ. ನಾನು ಕೊಂದಿಲ್ಲ. ಕರ್ಮವೇ ನನ್ನನ್ನು ಪ್ರೇರಿಸಿತ್ತು. ಆದರೂ ಬಾಹ್ಯದೃಷ್ಟಿಯಿಂದ ನೋಡಿದರೆ ನಾನೇ ಕೊಂದಿದ್ದೇನೆ. ಇಚ್ಛೆ ಇಲ್ಲದಿದ್ದರೂ ಎಲ್ಲರೂ ತಮ್ಮ ಕರ್ಮಫಲವನ್ನು ಉಣಲೇಬೇಕು. ನನ್ನ ಈ ಪಾಪಕರ್ಮಕ್ಕೆ ತಕ್ಕ ಶಿಕ್ಷೆಯನ್ನು ಕರ್ಮವೇ ಕೊಡುತ್ತದೆ. ಅದರಿಂದ ಅಪರಾಧಿಗೆ ಶಿಕ್ಷೆ ಸಿಗುತ್ತಿಲ್ಲವೆಂದು ಕೊರಗಬೇಡ' ಎಂದು. ಆದರೆ ಕೊಂದವರಿಗೆ ತಕ್ಕ ಶಿಕ್ಷೆಯಾಗುತ್ತದೆ ಎಂದ ಮಾತ್ರಕ್ಕೆ ಬಂಧುಗಳಿಗೆ ದುಃಖ ಪರಿಹಾರವಾಗಲಾರದು. ಕರ್ಮ ಹಂತಕನಿಗೆ ಶಿಕ್ಷೆ ನೀಡಿದಾಗ ಹತನಾದ ವ್ಯಕ್ತಿ ತಿರುಗಿ ಬದುಕಿ ಬರುವುದಿಲ್ಲ.

ಅದರಿಂದ ದೇವಕಿಗೆ ಕಂಸ ಹೀಗೆ ಸಾಂತ್ವನ ಮಾಡಬೇಕು. ಪರಮಾತ್ಮನೆ ಕರ್ಮಾನುಸಾರ ಜೀವಿಗಳಿಗೆ ಜನನ ಮರಣಾದಿಗಳ ಮೂಲಕ ಸುಖದುಃಖಗಳನ್ನು

---

೧ ತಸ್ಮಾದ್ದೇಹಾತ್ಮನೋರ್ವಿಲಕ್ಷಣ ಸ್ವಭಾವತ್ವಾದತ ಏವಾಶೋಚ್ಯತ್ವಾಚ್ಚ ಹೇ ಭದ್ರೇ ಮಯಾ ವ್ಯಾಪಾದಿತಾನಪಿ ಸ್ವಸುತಾನ್ ಪ್ರತಿ ಮಾನುಶೋಚಯತಂ। ಯತಃ ಸರ್ವೋಽಪಿ ಜಂತುರವಶೋಽಸ್ವತಂತ್ರಃ ಕರ್ಮವಶ್ಯಃ ಸ್ವಕೃತಂ ಸ್ವಕೃತಕರ್ಮಫಲರೂಪಂ ಜನ್ಮಮರಣಾದಿಕಂ ವಿಂದತೇ ಲಭತೇ। -ವೀರರಾಘವಃ

೨ ಯದ್ಯಪಿ ತೇ ಸ್ವಕರ್ಮವಶಾದೇವ ಮೃತಾಃ। ನ ತು ಮಯಾ ವ್ಯಾಪಾದಿತಾಃ, ತತ್ಕರ್ಮೈವ ಮಾಂ ಚ ಪ್ರೇರಿತವತ್। ಅಥಾಪಿ ಬಹಿರ್ದೃಷ್ಟ್ಯಾ ಮಯ್ಯೈವ ವ್ಯಾಪಾದಿತಾಃ ಇತ್ಯಂಗೀಕ್ರಿಯತೇ। ತಥಾಪಿ ಮಾ ಶೋಚೇತ್ಯಾಹ ಮಯಾ ವ್ಯಾಪಾದಿತಾನಪೀತಿ। ಮಯಾಽಪಿ ಬಹಿರ್ಮುಖತ್ವೇನ ಕೃತಂ ಕರ್ಮ ಭೋಕ್ತವ್ಯಮಿತ್ಯವಿಚಾರಿತೋಽಪಿ ದಂಡೋ ಭವಿಷ್ಯತೀತಿ ದಂಡಾಭಾವೇನಾಪಿ ಚಿಂತಾ ನ ಕರ್ತವ್ಯಾ। -ವಲ್ಲಭಃ

ನೀಡುತ್ತಾನೆ. 'ಅವಶ' ಎಂದರೆ ಬೇರೆ ವ್ಯಾಖ್ಯಾನಕಾರರು ಹೇಳುವಂತೆ ಪರವಶ, ಕರ್ಮವಶ ಎಂದರ್ಥವಲ್ಲ. 'ಅ' ಎಂದರೆ ಪರಮಾತ್ಮ. ಕರ್ಮನಿಯಾಮಕನಾದ ಪರಮಾತ್ಮನ ವಶನೇ 'ಅವಶ'. ಪರಮಾತ್ಮ ದುಃಖವನ್ನು ಕೊಡುವಾಗ ಅದಕ್ಕೆ ಕೊರಗಬಾರದು. ಅವನು ಸುಖವನ್ನೂ ಕೊಡುತ್ತಾನೆ. ದುಃಖವನ್ನು ಕೊಡುವುದು ಕೂಡ ಸುಖವನ್ನು ಕೊಡುವ ಉದ್ದೇಶದಿಂದಲೆ ತಂದೆತಾಯಿಗಳು ಮಕ್ಕಳಿಗೆ ಶಿಕ್ಷೆ ನೀಡುವಂತೆ. ಪರಮಾತ್ಮ ಹೀಗೆ ಸುಖದುಃಖ ನೀಡುತ್ತ ಸದಾ ನಮ್ಮ ಜೊತೆಗೇ ಇರುತ್ತಾನೆ. ಮಕ್ಕಳು ಹೀಗೆ ಸದಾ ನಮ್ಮ ಜೊತೆಗೆ ಇರುವುದಿಲ್ಲ. ಅದರಿಂದ ಪರಮಾತ್ಮನನ್ನು ಜೊತೆ ಇರುವವನೆಂದು ಪ್ರೀತಿಯಿಂದ ಸ್ಮರಿಸುತ್ತ ಪುತ್ರಶೋಕವನ್ನು ಮರೆ ಎಂದು ಕಂಸ ಹೇಳುತ್ತಾನೆ.

ಈ ಅಭಿಪ್ರಾಯದಿಂದಲೇ ಶ್ರೀಮದಾಚಾರ್ಯರು ಹಿಂದಿನ ಶ್ಲೋಕದಲ್ಲಿ (ಶ್ಲೋ.೧೮) 'ದೈವಾಧೀನಾಃ' ಎನ್ನುವುದಕ್ಕೆ 'ಕರ್ಮಾಧೀನ'ರೆಂದು ಅಭಿಪ್ರಾಯ ವಿಟ್ಟುಕೊಳ್ಳದೆ ಪರಮಾತ್ಮಾಧೀನರೆಂದು ಇಟ್ಟುಕೊಂಡು, ಅಲ್ಲಿ ಪ್ರಕೃತನಾದ ಪರಮಾತ್ಮನನ್ನು 'ಅಯಮಾತ್ಮಾ' ಎಂದು ಮುಂದಿನ ಶ್ಲೋಕದಲ್ಲಿ (ಶ್ಲೋ.೧೯) ಇಟ್ಟುಕೊಂಡು, 'ತಸ್ಮಾತ್‌ಭದ್ರೇ' ಎಂಬ ಶ್ಲೋಕದಲ್ಲಿ 'ಪರಮಾತ್ಮನಲ್ಲಿ ನಿಷ್ಠೆ ಇಟ್ಟುಕೊಳ್ಳಲು ಉಪದೇಶವಿದೆ' ಎಂದಿದ್ದಾರೆ.

'ತಸ್ಮಾತ್ ತಸ್ಮಿನ್ನೇವ ಸ್ಥಿತಿಂ ಕೃತ್ವಾ ಮಾಽನುಶೋಚ'

'ಅದರಿಂದ ಪರಮಾತ್ಮನಲ್ಲಿಯೇ ವಿಶ್ವಾಸವಿರಿಸಿಕೊಂಡು ಪುತ್ರಶೋಕವನ್ನು ಬಿಡು' ಎಂದು.

'ಯತೋಽನೇಕವಿಧೋಽಭೇದೋ' ಎಂಬ ಶ್ಲೋಕದಲ್ಲಿ ದುರ್ಜನರು ಮತ್ತು ಸಜ್ಜನರು ಮಾಡುವ ಅಭೇದೋಪಾಸನೆಗಳು ಹೇಗೆ ಅನೇಕವಿಧ, ಅದಕ್ಕೆ ಫಲ ಹೇಗೆ ಅನೇಕವಿಧ ಎಂಬುದನ್ನು ಬ್ರಹ್ಮಪುರಾಣದ ಆಧಾರದಿಂದ ಶ್ರೀಮದಾಚಾರ್ಯರು ನಿರೂಪಿಸುತ್ತಾರೆ-

ಅಹಂ ಬ್ರಹ್ಮಾಸ್ಮಿ ದೇವೋಽಸ್ಮಿ ನಾಸ್ಮಿ ಕೇವಲಮಾನುಷಃ ।
ಜಾತೋಽಸ್ಮಿ ವರ್ಧೇ ಧನವಾನ್ ಮ್ರಿಯ ಇತ್ಯಾದಿಕಾ ಸದಾ ।
ದೇಹಾದಿಷು ಚ ದೇವೇಷು ಪರಬ್ರಹ್ಮಣಿ ಚಾಭಿದಾ ।
ಮೋಹಾದ್ ಯನ್ಮಾಯಯಾ ನಿತ್ಯಂ ದೃಶ್ಯತೇಽಧಮಮಧ್ಯಮೇ ।
ಸ ಈಶೋ ನ ವಿಪರ್ಯೇತಿ ಸರ್ವೇಶತ್ವಾತ್ ಕದಾಚನ ।

ಪುತ್ರಾದಿಕಂ ವಿಪರ್ಯೇತಿ ಪಿತ್ರಾದಿಶ್ಚ ಯತೋ ಭವೇತ್ ॥
ಇತಿ ಬ್ರಾಹ್ಮೇ ॥

ತಲ್ಲಕ್ಷಣೈರ್ವಿಹೀನಾಶ್ಚ ಬ್ರಹ್ಮ ದೇವೋಽಸ್ಮಿ ಚೇತಿ ತು ।
ಅಸುರಾಃ ಪ್ರತಿಪದ್ಯಂತೇ ಜನ್ಮಾದಿಂ ಮಾನುಷಾ ಜನಾಃ । ಇತಿ ಚ ॥
ಪರಬ್ರಹ್ಮಣಿ ಏಕಸ್ಯ ಬ್ರಹ್ಮಾಸ್ಮೀತಿ ವಿಚಿಂತನಂ ।
ಪರಂ ಬ್ರಹ್ಮೇತಿ ರಾಮಾದಿ ಲಕ್ಷಣೈರವಧಾರಯೇತ್ ।
ದೇವೋಽಸ್ಮೀತಿ ಚ ದೇವಾನಾಂ ತಚ್ಚ ಜ್ಞೇಯಂ ಸ್ವಲಕ್ಷಣೈಃ ।
ಮರ್ತ್ಯಾನಾಂ ಮಾನುಷೋಽಸ್ಮೀತಿ ಪ್ರತಿಪತ್ತಿರ್ವಿಧೀಯತೇ ।
ಅನ್ಯಥಾಪ್ರತಿಪತ್ತ್ಯಾತು ತಮೋ ಯಾಂತಿ ವಿನಿಶ್ಚಯಾತ್ ।
ಅನ್ಯಥಾ ಪ್ರತಿಪದ್ಯಂತೇ ಆಸುರಾ ನಿಯತಂ ಜನಾಃ ।
ಘೋರಂ ತಮಶ್ಚ ಶೇ ಯಾಂತಿ ಯಥಾಜ್ಞಾನಾತ್ ಪರಂ ಸುರಾಃ ।
ಇತಿ ಚ ॥

'ನಾನು ಸ್ವತಂತ್ರಪರಮಾತ್ಮನಾಗಿದ್ದೇನೆ 'ನಾನು ದೇವತೆಯಾಗಿದ್ದೇನೆ, ಕೇವಲ ಮನುಷ್ಯನಲ್ಲ, ನಾನು ಜನಿಸಿದ್ದೇನೆ ಬೆಳೆಯುತ್ತಿದ್ದೇನೆ ಧನಿಕನಾಗಿದ್ದೇನೆ ಸಾಯುತ್ತೇನೆ' ಎಂದು ಮುಂತಾಗಿ ದೇಹಾದಿಗಳ ದೇವತೆಗಳ ಮತ್ತು ಪರಬ್ರಹ್ಮನ ಅಭೇದಭಾವನೆ ಸದಾ ಅಧಮರಲ್ಲಿಯೂ ಮಧ್ಯಮರಲ್ಲಿಯೂ ಪರಮಾತ್ಮನ ಇಚ್ಛೆಯಿಂದ ಉಂಟಾದ ಭ್ರಾಂತಿಯಿಂದ ಕಂಡುಬರುತ್ತದೆ. ಅಂಥ ಪರಮಾತ್ಮ ಸರ್ವೇಶ್ವರನಾದ್ದರಿಂದ ಅವನಿಗೆ ಮರಣ ಎಂದೂ ಬರುವುದಿಲ್ಲ. ಮಕ್ಕಳು ಮುಂತಾದವರೂ ತಂದೆತಾಯಿ ಮುಂತಾದವರೂ ಮರಣ ಹೊಂದುತ್ತಾರೆ. ಏಕೆಂದರೆ ಅವರು ಹುಟ್ಟುತ್ತಾರೆ. ಎಂದು ಬ್ರಹ್ಮಪುರಾಣದಲ್ಲಿ ಹೇಳಿದೆ.

ಪರಬ್ರಹ್ಮನ ಮತ್ತು ದೇವತೆಗಳ ಲಕ್ಷಣಗಳು ತಮ್ಮಲ್ಲಿಲ್ಲದಿದ್ದರೂ ಅಸುರರು 'ನಾನು ಪರಬ್ರಹ್ಮ, ನಾನು ದೇವತೆ' ಎಂದು ಉಪಾಸನೆ ಮಾಡುತ್ತಾರೆ. ದೇಹ ಇಂದ್ರಿಯಾದಿಗಳ ಲಕ್ಷಣಗಳು ತಮ್ಮಲ್ಲಿಲ್ಲದಿದ್ದರೂ ಮಧ್ಯಮ ಜೀವರು ದೇಹೇಂದ್ರಿಯಾದಿಗಳ ಅಭೇದವನ್ನು ತಮ್ಮಲ್ಲಿ ಆರೋಪಿಸಿಕೊಂಡು 'ನಾನು ಹುಟ್ಟಿದ್ದೇನೆ' ಎಂದು ಮುಂತಾಗಿ ಜನ್ಮಾದಿಗಳನ್ನು ಹೇಳಿಕೊಳ್ಳುತ್ತಾರೆ ಎಂದೂ ಬ್ರಹ್ಮಪುರಾಣದಲ್ಲಿ ಉಕ್ತವಾಗಿದೆ.

ಪರಬ್ರಹ್ಮನೊಬ್ಬನೇ ನಾನು ಪರಬ್ರಹ್ಮನೆಂದು ಭಾವಿಸುವುದು ಯುಕ್ತ. ರಾಮಕೃಷ್ಣಾದಿ ಅವತಾರಗಳೂ ತಮ್ಮನ್ನು ಪರಬ್ರಹ್ಮನೆಂದು ಭಾವಿಸುತ್ತಾರೆ.

ಅದೂ ಯುಕ್ತವೆ. ಆ ರೂಪಗಳನ್ನು ಪರಬ್ರಹ್ಮ ಸ್ವರೂಪವೆಂದು ತಿಳಿಯಬೇಕು. ಏಕೆಂದರೆ ಪರಬ್ರಹ್ಮನ ಲಕ್ಷಣಗಳು ಅವರಲ್ಲಿ ಇವೆ. ದೇವತೆಗಳೂ ತಮ್ಮನ್ನು ದೇವತೆ ಎಂದು ತಿಳಿಯಬೇಕು. ಏಕೆಂದರೆ ಅವರಲ್ಲಿ ತಮ್ಮ ದೇವತಾಲಕ್ಷಣಗಳಿವೆ. ಮನುಷ್ಯರು 'ನಾನು ಮನುಷ್ಯ'ನೆಂದೇ ತಿಳಿಯಬೇಕು. ಇದಕ್ಕೆ ವ್ಯತಿರಿಕ್ತವಾಗಿ ನಾನು ಪರಬ್ರಹ್ಮ ನಾನು ದೇವತೆ ಎಂದು ಅನ್ಯರು ಉಪಾಸನೆ ಮಾಡಿದರೆ ನಿಶ್ಚಯವಾಗಿ ತಮಸ್ಸಿಗೆ ಹೋಗುತ್ತಾರೆ. ಅಸುರರು ನಿಯಮೇನ ಅನ್ಯಥೋಪಾಸನೆ ಮಾಡುತ್ತಾರೆ, ಘೋರವಾದ ತಮಸ್ಸನ್ನು ಹೊಂದುತ್ತಾರೆ. ದೇವತೆಗಳು ಯಥಾರ್ಥೋಪಾಸನೆಯಿಂದ ಪರಮಾತ್ಮನನ್ನು ಹೊಂದುತ್ತಾರೆ ಎಂದೂ ಬ್ರಹ್ಮಪುರಾಣದಲ್ಲಿ ಹೇಳಿದೆ.

ಬ್ರಹ್ಮಪುರಾಣದಲ್ಲಿ ಅಧಮರ ಮಧ್ಯಮರ ಉಪಾಸನೆಗಳನ್ನೂ ಅವುಗಳ ಫಲಗಳನ್ನೂ ಹೇಳಿ ಉತ್ತಮರ ಉಪಾಸನೆ ಮತ್ತು ಅದರ ಫಲಗಳನ್ನೂ ಜೊತೆಗೇ ಹೇಳಿರುವುದರಿಂದ, ಭಾಗವತದಲ್ಲಿ ಅನೇಕ ವಿಧದ ಅಭೇದೋಪಾಸನೆಗೆ 'ವಿಪರ್ಯೇತಿ' ಎಂದು ಅನರ್ಥ ಫಲವನ್ನು ಮಾತ್ರ ಹೇಳಿದ್ದರೂ ಜೊತೆಗೆ ಭೇದೋಪಾಸನೆಗೆ ಮೋಕ್ಷಫಲವನ್ನೂ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕೆಂದು ತಿಳಿಯುತ್ತದೆ.

❖ ❖ ❖

ಕಂಸ ತನ್ನ ತಪ್ಪಿಗೆ ಕ್ಷಮಾಯಾಚನೆ ಮಾಡಿ ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿದಾಗ ವಸುದೇವ ಹೇಳುತ್ತಾನೆ-

ಏವಮೇತನ್ಮಹಾರಾಜ ಯಥಾ ವದಸಿ ದೇಹಿನಾಮ್ ।
ಅಜ್ಞಾನಪ್ರಭವಾ ಹಂತಿ ಸ್ವಪರೇತಿ ಭಿದಾ ಯತಃ ॥ ೨೬ ॥

ಮಹಾರಾಜ, ನೀನು ಹೇಳಿದಂತೆ ಪರಮಾತ್ಮನೇ ಸ್ವತಂತ್ರ, ಜೀವನು ಅಸ್ವತಂತ್ರ ಎಂಬುದು ನಿಜ. ಏಕೆಂದರೆ ಈ ಜೀವಪರಮಾತ್ಮ ಭೇದವೆ ದೇಹಾಭಿಮಾನಿಗಳಿಗೆ ಭೇದಾಜ್ಞಾನನಿಮಿತ್ತವಾಗಿ ಬರುವ ನರಕಾದಿ ಯಾತನೆಗಳನ್ನು ನಿವಾರಿಸಬಲ್ಲುದು.

ಇಲ್ಲಿ ಬೇರೆ ವ್ಯಾಖ್ಯಾನಕಾರರ ಪಾಠ-

ಏವಮೇತನ್ಮಹಾಭಾಗ ಯಥಾ ವದಸಿ ದೇಹಿನಾಂ ।
ಅಜ್ಞಾನಪ್ರಭವಾಹಂಧೀಃ ಸ್ವಪರೇತಿ ಭಿದಾ ಯತಃ ॥

'ಕಂಸ, ನೀನು ಹೇಳುವುದು ಸರಿ. ಅಜ್ಞಾನದಿಂದ ಶರೀರಾದಿಗಳಲ್ಲಿ ನಾನು

ನನ್ನದೆಂಬ ಬುದ್ಧಿ ಉಂಟಾಗುವುದು. ಅದರಿಂದ ನಾನು ಬೇರೆ ಪರರು ಬೇರೆ ಎಂಬ ಭೇದ ಬುದ್ಧಿ ಉಂಟಾಗುವುದು'.

ಇದು ಸರಿಯಲ್ಲ. ಒಬ್ಬನೇ ಆತ್ಮ ದೇಹೋಪಾಧಿಯಿಂದ ಅನೇಕನೆನಿಸುತ್ತಾನೆ ಎಂಬ ಅದ್ವೈತವನ್ನು ಇಲ್ಲಿ ಹೇಳುವ ಉದ್ದೇಶ ಕಾಣುವುದಿಲ್ಲ. ಮುಂದಿನ ಶ್ಲೋಕದಲ್ಲಿ 'ಭೇದಬುದ್ಧಿಯಿಂದ ಶೋಕ ಹರ್ಷ ಭಯ ದ್ವೇಷಾದಿಗಳು ಉಂಟಾಗುತ್ತವೆ. ಅವುಗಳಿಂದ ಜನರಲ್ಲಿ ಪರಸ್ಪರ ಹಿಂಸಾಚಾರಗಳುಂಟಾಗುತ್ತವೆ. ಹಿಂಸೆ ಮಾಡುವುದಕ್ಕೆ ತಾವು ಸ್ವತಂತ್ರರೆಂದುಕೊಳ್ಳುತ್ತಾರೆ ಹೊರತು ಪ್ರೇರಕನಾದ ಪರಮೇಶ್ವರನೆ ಹಿಂಸೆ ಮಾಡಿಸುವುದನ್ನು ಈ ಜನರು ಅರಿಯರು' ಎಂದು ಹೇಳುತ್ತ ದ್ವೈತವನ್ನು ಹೇಳುತ್ತಾನೆ ವಸುದೇವ. ಶ್ರೀಧರ ವ್ಯಾಖ್ಯಾನ ಹಾಗೇ ಹೇಳುತ್ತದೆ.

ದೇಹಾದ್ಯಭಿಮಾನವೆ ಪರಸ್ಪರ ಹಿಂಸಾಚಾರಕ್ಕೆ ಮೂಲಕಾರಣ ಎನ್ನುವುದೂ ಸರಿಯಲ್ಲ. ದೇಹಾದ್ಯಭಿಮಾನವಿದ್ದ ಮಾತ್ರಕ್ಕೆ ಭಯದ್ವೇಷಾದಿಗಳು ಬರಬೇಕೆಂದಿಲ್ಲ. ಹಿಂಸಾಚಾರ ಉಂಟಾಗಬೇಕಾಗಿಲ್ಲ. ಹಿಂಸಾಚಾರಕ್ಕೆ ಕಾರಣ, 'ನಾನು ಸ್ವತಂತ್ರ, ನಾನು ಕೊಲ್ಲುತ್ತೇನೆ' ಎಂದು ಪರಮೇಶ್ವರನ ಸ್ವಾತಂತ್ರ್ಯಾದಿಗಳನ್ನು ತನ್ನಲ್ಲಿ ತಪ್ಪಾಗಿ ತಿಳಿಯುವ ಜೀವಪರಮಾತ್ಮಾಭೇದ ಬುದ್ಧಿ. ಇದು ಸ್ಪಷ್ಟವಾಗಿ ಮುಂದಿನ ಶ್ಲೋಕದಲ್ಲಿ ಕಾಣುತ್ತದೆ. ಅದರಿಂದ ಇವರ ಈ ಶ್ಲೋಕಪಾಠವೇ ತಪ್ಪು. 'ಜೀವ ಪರಮಾತ್ಮ ಭೇದ ಬುದ್ಧಿ ಎಲ್ಲ ಅನರ್ಥಗಳನ್ನು ನಿವಾರಿಸಬಲ್ಲದು' ಎಂದು ಹೇಳುವ ನಮ್ಮ ಶ್ಲೋಕಪಾಠವೆ ಮುಂದಿನ ಶ್ಲೋಕಕ್ಕೆ ಹೊಂದಿಕೆಯಾಗುತ್ತದೆ.

ಈ ಶ್ಲೋಕಕ್ಕೆ ನೇರವಾಗಿ ಸುಸ್ಪಷ್ಟವಾಗಿ ವ್ಯಾಖ್ಯಾನ ಮಾಡುವ ಬ್ರಹ್ಮಾಂಡಪುರಾಣವಚನಕ್ಕೂ ನಮ್ಮ ಪಾಠ ಒಪ್ಪುತ್ತದೆ. ನಮ್ಮ ಪಾಠದಲ್ಲಿ 'ಅಜ್ಞಾನ ಪ್ರಭವಾಃ' ಎಂಬ ವಿಶೇಷಣಕ್ಕೆ 'ಯಾತನಾಃ' ಎಂದು ವಿಶೇಷ್ಯದ ಅಧ್ಯಾಹಾರ ಬೇಕಾಗುವುದು ದೋಷವೇನಲ್ಲ. ಅದನ್ನು ಪುರಾಣವಚನವೇ ಹೇಳಿದೆ.

ದೇಹಿನಾಮಜ್ಞಾನ ಪ್ರಭವಾ ಯಾತನಾಃ ಸ್ವಪರೇತಿಭಿದಾ ಹಂತಿ ।
ದೇವೋऽಹಂ ಮಾನುಷೋ ವೇತಿ ವಿಶೇಷಂ ತತ್ರ ಚಾಪಿ ತು ।
ತಥೈವ ಪರಮಾತ್ಮಾನಂ ವಿಶೇಷಂ ಬ್ರಹ್ಮಜೀವಯೋಃ ।
ಸಮ್ಯಗ್ ಭೇದೇನ ಯಃ ಪಶ್ಯೇತ್ ಸ ಹಂತ್ಯಜ್ಞಾನಸಂಭವಾಃ ।
ಯಾತನಾಃ ಪರಮಾತ್ಮಾನಂ ತತ್‌ಪ್ರಸಾದಾಚ್ಚ ಗಚ್ಛತಿ ॥
ಇತಿ ಬ್ರಹ್ಮಾಂಡೇ ॥

ಶ್ರೀಹರಿಯೇ ಸ್ವತಂತ್ರ ಜೀವರೆಲ್ಲರೂ ಅವನಿಗೆ ಅಧೀನರು ಎನ್ನುವ

ಭೇದಜ್ಞಾನವೇ ದೇಹಾಭಿಮಾನಿಗಳಿಗೆ ಅಜ್ಞಾನದಿಂದ ಉಂಟಾಗುವ ನರಕ ಯಾತನೆಗಳನ್ನು ಪರಿಹರಿಸುವಂಥದ್ದು.

'ನಾನು ದೇವ' 'ನಾನು ಮನುಷ್ಯ' ಎಂದು ಅನುಭವಸಿದ್ಧವಾದ ದೇವತ್ವ ಮನುಷ್ಯತ್ವಾದಿ ಜೀವ-ಜೀವ ಭೇದಕ ಧರ್ಮಗಳನ್ನೂ ಹಾಗೆಯೇ ಸರ್ವೋತ್ತಮನಾದ ಪರಮಾತ್ಮನನ್ನೂ ಜೀವಪರಮಾತ್ಮರೊಳಗಿನ ವೈಲಕ್ಷಣ್ಯ ವನ್ನೂ ಚೆನ್ನಾಗಿ ಪಾರಮಾರ್ಥಿಕ ಭೇದದೊಂದಿಗೆ ಯಾರು ತಿಳಿಯುವನೋ ಅವನು ಭೇದದ ಅಜ್ಞಾನದಿಂದ ಉಂಟಾಗುವ ನರಕಾದಿ ಯಾತನೆಗಳನ್ನು ನಿವಾರಿಸಿಕೊಳ್ಳುತ್ತಾನೆ, ಮಾತ್ರವಲ್ಲದೆ, ಪರಮಾತ್ಮನ ಅನುಗ್ರಹ ಪಡೆದು ಅವನನ್ನು ಸೇರುತ್ತಾನೆ ಎಂದು ಬ್ರಹ್ಮಾಂಡಪುರಾಣದಲ್ಲಿ ಹೇಳಿದೆ.

❖ ❖ ❖

ಕಂಸ ಪಶ್ಚಾತ್ತಾಪಗೊಂಡು ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸಿದಾಗ ವಸುದೇವ ಹೇಳುತ್ತಾನೆ-

ಶೋಕಹರ್ಷಭಯದ್ವೇಷಲೋಭಮೋಹಮದಾನ್ವಿತಾಃ ।

ಮಿಥೋ ಘ್ನಂತೋ ನ ಪಶ್ಯಂತಿ ಭಾವೈರ್ಭಾವಾನ್ ಪೃಥಗ್‌ದೃಶಃ ॥ ೨೭ ॥

ಶೋಕ ಹರ್ಷ ಭಯ ದ್ವೇಷ ಲೋಭ ಮೋಹ ಮದಗಳಿಂದ ಯುಕ್ತರಾಗಿ ಪರಸ್ಪರ ಹಿಂಸಾಚಾರದಲ್ಲಿ ತೊಡಗುವ ಜನರು ವಿಪರೀತ ಜ್ಞಾನಿಗಳಾಗಿರುತ್ತಾರೆ. ಅವರು ಇವನು ಪರಬ್ರಹ್ಮ, ಇವನೊಬ್ಬ ದೇವತೆ ಎಂದು ಮುಂತಾಗಿ ವಿಶೇಷ ಗುಣ ಧರ್ಮಗಳಿಂದ ಆಯಾ ವ್ಯಕ್ತಿಗಳನ್ನು ಸರಿಯಾಗಿ ತಿಳಿಯುವುದಿಲ್ಲ.

ಬೇರೆ ವ್ಯಾಖ್ಯಾನಕಾರರಲ್ಲಿ ಈ ಶ್ಲೋಕದ ಪಾಠ-

ಶೋಕ ಹರ್ಷ ಭಯ ದ್ವೇಷ ಲೋಭಮೋಹ ಮದಾನ್ವಿತಾಃ ।
ಮಿಥೋ ಘ್ನಂತಂ ನ ಪಶ್ಯಂತಿ ಭಾವೈರ್ಭಾವಂ ಪೃಥಗ್‌ದೃಶಃ ॥

'ನಾನು ಬೇರೆ ಪರರು ಬೇರೆ ಎಂಬ ಬುದ್ಧಿಉಳ್ಳವರು ಶೋಕ ಹರ್ಷಾದಿಯುಕ್ತರಾಗಿ ಪರಮಾತ್ಮನೇ ಸ್ವತಃ ಅವರಿಂದ ಅವರನ್ನೆ ನಾಶಪಡಿಸುತ್ತಿರುವುದನ್ನು ಕಾಣಲಾರರು. ತಾವೇ ಕೊಲ್ಲುತ್ತಿದ್ದೇವೆ, ತಾವೇ ಹತರಾಗುತ್ತಿದ್ದೇವೆ ಎಂದು ತಿಳಿಯುತ್ತಾರೆ' ಎಂದು ಶ್ರೀಧರವ್ಯಾಖ್ಯಾನ.[೧]

೧ ಸ್ವಪರಭೇದದರ್ಶನೇ ಕಿಂ ಭವತಿ ತದಾಹ ಶೋಕಹರ್ಷೇತಿ । ಭಾವೈರೇವ ನಿಮಿತ್ತಭೂತೈರ್ಮಿಥೋ ಭಾವಾನ್ ಘ್ನಂತಂ ಭಾವಮೀಶ್ವರಂ ಪೃಥಗ್‌ದೃಶಸ್ತೇ ನ ಪಶ್ಯಂತಿ ಕಿಂತ್ವಹಮೇವ ಹಂತಾ ಹತಶ್ಚೇತಿ ಮನ್ಯಂತೇ। -ಶ್ರೀಧರಃ

ಇಲ್ಲಿ 'ಪೃಥಗ್‌ದೃಶಃ' ಎಂಬ ಶಬ್ದ ವ್ಯರ್ಥ. 'ನಾನು ಬೇರೆ ಪರರು ಬೇರೆ' ಎಂದು ತಿಳಿಯುವುದೇ ಪೃಥಗ್ ದರ್ಶನ. ಅದು ಪರಮಾತ್ಮನನ್ನು ಕಾಣದಿರಲು ಕಾರಣವೆನ್ನಲಾಗದು. ಭಯದ್ವೇಷಾದಿಗಳಿಂದ ಹಿಂಸೆ ಮಾಡಲು ಅದು ಕಾರಣ ವಾದೀತು. ನಾನು ಸ್ವತಂತ್ರ ಎನ್ನುವ ಭಾವನೆಯೇ ಪರಮಾತ್ಮನನ್ನು ಕಾಣದಿರಲು ಕಾರಣ.

ವೀರರಾಘವ ವ್ಯಾಖ್ಯಾನ ಪ್ರಕಾರ 'ಪೃಥಗ್‌ದೃಶಃ' ಎಂದರೆ ಭಿನ್ನವಾದ ಶರೀರದಲ್ಲಿ ಅಭೇದವನ್ನು ಕಾಣುವವರು. ಇಂಥಾ ದೇಹಾತ್ಮೈಕ್ಯಬುದ್ಧಿ ಯಾರಿಗೂ ಬರುವುದಿಲ್ಲ. ಬಂದರೂ ಅದು 'ಪೃಥಗ್‌ದೃಶಃ' ಶಬ್ದಕ್ಕೆ ಸ್ವರಸವಾದ ಅರ್ಥವಲ್ಲ.

ವಲ್ಲಭವ್ಯಾಖ್ಯಾನಪ್ರಕಾರ ಪರಮಾತ್ಮ ಎಲ್ಲರೊಳಗೆ ಆವಿಷ್ಟನಾಗಿದ್ದಾನೆ. ಆದರೂ ಹೊರಗೆ ಪ್ರತ್ಯೇಕವಾಗಿದ್ದರೆ ಮಾತ್ರ ಅವನನ್ನು ಕಾಣಬಲ್ಲವರು ಪೃಥಗ್‌ದೃಶರು. ಆವಿಷ್ಟನಾಗಿದ್ದು ಕೊಲ್ಲುವ ಭಗವಂತನನ್ನು ಇವರು ಕಾಣರು.

'ನನ್ನ ಮಕ್ಕಳನ್ನು ಕೊಂದವನು ನಿನ್ನೊಳಗೆ ಆವಿಷ್ಟನಾದ ಭಗವಂತನೆ. ಅವನೇ ನಿನ್ನನ್ನೂ ಕೊಲ್ಲುತ್ತಾನೆ' ಅಳಬೇಡ ಎಂದು ಕಂಸನಿಗೆ ಸಮಾಧಾನ ಹೇಳುತ್ತಾನೆ ವಸುದೇವ, ವಲ್ಲಭ ವ್ಯಾಖ್ಯಾನದಲ್ಲಿ.[೧]

ಭಗವಂತನೆ ಕಂಸನಲ್ಲಿ ಆವಿಷ್ಟನಾಗಿ ಮಕ್ಕಳನ್ನು ಕೊಂದಿದ್ದರಿಂದ ಕಂಸ ಅಪರಾಧಿಯಲ್ಲ ಎಂದು ವೀರರಾಘವ ವ್ಯಾಖ್ಯಾನ.[೨] ಇದು ಎರಡೂ ತಪ್ಪು. ಭಗವಂತನೆ ಕರ್ಮ ಮಾಡಿದರೂ ಅದಕ್ಕೆ ಫಲಭಾಗಿ ಜೀವನೆ. ದುಷ್ಕರ್ಮ ಮಾಡಿದರೆ ಅವನೆ ಅಪರಾಧಿಯಾಗುತ್ತಾನೆ, ಭಗವಂತನಲ್ಲ.

ಶ್ರೀಮದಾಚಾರ್ಯರು ಭವಿಷ್ಯತ್ ಪುರಾಣವಚನದ ಆಧಾರವನ್ನು ತೋರಿಸಿ 'ಪೃಥಗ್‌ದೃಶಃ' ಶಬ್ದದ ಅರ್ಥವನ್ನು ಸುಂದರವಾಗಿ ನಿರೂಪಿಸುತ್ತಾರೆ.

ಭಗವದ್ದರ್ಶನಾದ್ ಯಸ್ಯ ವಿರೋಧಾದ್ ದರ್ಶನಂ ಪೃಥಕ್ ।
ಪೃಥಗ್‌ದೃಷ್ಟಿಃ ಸ ವಿಜ್ಞೇಯೋ ನ ತು ಸದ್ಭೇದದರ್ಶನಃ ।
ಇತಿ ಚ ಭವಿಷ್ಯತ್ಪುರಾಣೇ ॥
ಸ್ವರೂಪಭೇದೋ ಹಿ ಪರಜೀವಯೋರ್ಜೀವಗೋ ಮಿಥಃ ।

---

೧ ಮತ್ಪುತ್ರಾ ಅಪಿ ಭಗವತೈವ ಮಾರಿತಾಃ। ತ್ವಮಪಿ ಮಾರಣೀಯ ಇತಿ ತ್ವಯಾऽಪಿ ಶೋಕೋ ನ ಕರ್ತವ್ಯಃ ಇತಿಭಾವಃ। -ವಲ್ಲಭಃ

೨ ತತ್ತತ್ ಕರ್ಮಾನುಗುಣ ಪ್ರವೃತ್ತಸ್ಯೇಶ್ವರಸ್ಯೈವ ಜನ್ಮಮರಣಾದಿ ಹೇತುತ್ವಾತ್ ನ ಕೇನಾಪ್ಯಪರಾದ್ಧಮಿತಿ ಭಾವಃ। -ವೀರರಾಘವಃ

ಪರಸ್ಪರೇಣ ವಸೂನ್ತಾಂ ವಿಶೇಷಃ ಶಾಸ್ತ್ರದರ್ಶಿತಃ ।
ಸದ್ಭೇದೋಽಯಂ ಸಮುದ್ದಿಷ್ಟಸ್ತ್ವಸದ್‌ಭೇದಂ ಚ ಮೇ ಶೃಣು ।
ಸ್ವರೂಪಾಣಾಂ ಗುಣಾನಾಂ ಚ ವಿಷ್ಣೋರ್ಭೇದಃ ಪರಸ್ಪರಾತ್ ।
ಸರ್ವಸ್ಯಾವಿಷ್ಣುತಂತ್ರತ್ವಂ ಶತ್ರುಮಿತ್ರಾದಿ ಭೇದಿತಾ ।
ಯಚ್ಚಾನ್ಯಚ್ಚಾಸ್ತ್ರವಿದ್ವಿಷ್ಟಮಸದ್ಭೇದಃ ಸ ಈ ರಿತಃ ॥
ಸದ್ಭೇದ ದರ್ಶನಾನ್ಮೋಕ್ಷಸ್ತ್ವಸದ್‌ಭೇದಾತ್ ತಮೋ ವ್ರಜೇತ್ ॥
ಸದ್ಭೇದಾದರ್ಶನಾಚ್ಚೈವ ತಮೋ ಮೋಕ್ಷಸ್ತಥೇತರಾತ್ ॥ ಇತಿ ಚ ॥

'ಯಾರ ದೃಷ್ಟಿ ಅಂದರೆ ಜ್ಞಾನವು ಪರಮಾತ್ಮ ತತ್ವಜ್ಞಾನಕ್ಕೆ ವಿಪರೀತ ವಾಗಿರುವುದರಿಂದ ಪೃಥಕ್ ಎನಿಸುವುದೋ ಅವನನ್ನು ಪೃಥಗ್ ದೃಷ್ಟಿ ಎಂದು ತಿಳಿಯಬೇಕು. ಹೊರತು, ಸದ್ಭೇದ ಜ್ಞಾನಿಯನ್ನಲ್ಲ' ಎಂದು ಭವಿಷ್ಯತ್ಪುರಾಣ ದಲ್ಲಿ ಹೇಳಿದೆ.

ಪರಮಾತ್ಮನಿಗೂ ಜೀವರಿಗೂ ಸ್ವಾಭಾವಿಕವಾದ ಭೇದ, ಪರಸ್ಪರವಾಗಿ ಜೀವರಲ್ಲಿರುವ ಭೇದ. ಪರಮಾತ್ಮನಿಂದಲೂ ಜೀವರಿಂದಲೂ ಜಡದಲ್ಲಿರುವ ಭೇದಗಳು, ಪರಸ್ಪರವಾಗಿ ಜಡವಸ್ತುಗಳಲ್ಲಿರುವ ಭೇದ ಹೀಗೆ ಶಾಸ್ತ್ರಸಿದ್ಧವಾಗಿರುವ ಐದು ವಿಧದ ಭೇದವು ಸದ್ಭೇದವೆನಿಸುತ್ತದೆ. ಇನ್ನು ಅಸದ್ಭೇದವೇನೆಂಬುದನ್ನು ಹೇಳುತ್ತೇನೆ, ಕೇಳು. ವಿಷ್ಣುವಿಗೆ ತನ್ನ ಅವತಾರಗಳ ಮತ್ತು ಗುಣಗಳ ಭೇದ, ಅವುಗಳಲ್ಲಿ ಪರಸ್ಪರ ಭೇದ, ಸಕಲ ಪ್ರಪಂಚವು ವಿಷ್ಣುವಿಗೆ ಅಧೀನವಾಗದಿರುವುದು, ವಿಷ್ಣುವಿಗೆ ಇವನು ಶತ್ರು ಇವನು ಮಿತ್ರ ಎಂದು ಮುಂತಾಗಿ ಭೇದ, ಇನ್ನು ಬೇರೆ ಶಾಸ್ತ್ರ ನಿಷಿದ್ಧವಾದ ಭೇದ ಎಲ್ಲವೂ ಅಸದ್ಭೇದವೆನಿಸುತ್ತದೆ. ಸದ್ಭೇದ ಜ್ಞಾನದಿಂದ ಮೋಕ್ಷ ಲಭಿಸುತ್ತದೆ. ಅಸದ್ಭೇದ ಜ್ಞಾನದಿಂದ ತಮಸ್ಸಿಗೆ ಹೋಗುತ್ತಾನೆ. ಮತ್ತು ಸದ್ಭೇದವನ್ನು ತಿಳಿಯದಿರು ವುದೂ ತಮಸ್ಸಿಗೆ ಕಾರಣ. ಅಸದ್ಭೇದವನ್ನು ತಿಳಿಯದಿರುವುದೂ ಮೋಕ್ಷಕ್ಕೆ ಕಾರಣ' ಎಂದು ಭವಿಷ್ಯತ್ ಪುರಾಣದಲ್ಲಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಪಂಚಮೋಽಧ್ಯಾಯಃ

❖

ಅಧ್ಯಾಯ - ೬

ಅಧ್ಯಾಯ ಸಾರಾಂಶ

ನಂದಗೋಪ ಪುತ್ರೋತ್ಸವವಾಯಿತೆಂದು ಆನಂದದಿಂದ ಮಗನಿಗೆ ಜಾತಕರ್ಮಾದಿಗಳನ್ನು ನಡೆಸಿದ. ಅಲಂಕೃತವಾದ ಎರಡು ಲಕ್ಷ ಗೋವುಗಳನ್ನೂ ಏಳು ಎಳ್ಳಿನ ಪರ್ವತಗಳನ್ನೂ ಬಂಗಾರರತ್ನ ರಾಶಿಗಳನ್ನೂ ವಿಪ್ರರಿಗೆ ನೀಡಿದ. ಗೋಕುಲದಲ್ಲಿ ಎಲ್ಲ ಮನೆಗಳಲ್ಲಿಯೂ ಹಬ್ಬವನ್ನು ಆಚರಿಸಿದರು. ಗೊಲ್ಲರು ಬೆಲೆಬಾಳುವ ವಸ್ತ್ರಾಭರಣಗಳನ್ನು ಪಾರಿತೋಷಕವಾಗಿ ತಂದರು. ಗೊಲ್ಲತಿಯರು ಚಿರಕಾಲ ನಮ್ಮನ್ನು ಕಾಪಾಡೆಂದು ಹರಸುತ್ತ ಬಾಲಕೃಷ್ಣನಿಗೆ ಅರಿಶಿಣ ಎಣ್ಣೆ ನೀರು ಚಿಮುಕಿಸಿ ಗುಣಗಾನ ಮಾಡಿದರು. ನಂದಗೋಪನೂ ಅವರಿಗೆಲ್ಲರಿಗೂ ಯಥೋಚಿತ ವಾಗಿ ಸತ್ಕರಿಸಿದ. ಬಾಲಕೃಷ್ಣ ಬಂದಂದಿನಿಂದ ಗೋಕುಲ ಲಕ್ಷ್ಮಿಯ ವಿಹಾರ ಭೂಮಿಯೆನಿಸಿತು.

ನಂದ ಕಂಸನಿಗೆ ವಾರ್ಷಿಕ ಕಂದಾಯ ನೀಡಲು ಮಥುರೆಗೆ ಬಂದ. ಅಲ್ಲಿ ವಸುದೇವ ನಂದಗೋಪರ ಸಮಾಗಮವಾಯಿತು. ಇಬ್ಬರೂ ಪ್ರೀತಿಯಿಂದ ಪರಸ್ಪರ ತಬ್ಬಿಕೊಂಡರು. ವಸುದೇವ ಇಳಿವಯಸಿನಲ್ಲಿ ನಂದಗೋಪನಿಗೆ ಪುತ್ರಲಾಭವಾದುದನ್ನು ಅಭಿನಂದಿಸಿ ಬಲರಾಮ ರೋಹಿಣಿಯರ ಕ್ಷೇಮವನ್ನು ವಿಚಾರಿಸಿದ. ನಂದ ವಸುದೇವನನ್ನು ಸಂತೈಸಿದ. 'ನಿನ್ನ ದೇವಕೀಪುತ್ರರೆಲ್ಲರೂ ಸತ್ತರು. ಕೊನೆಯ ಹೆಣ್ಣುಮಗುವೂ ಆಕಾಶಕ್ಕೆ ಹಾರಿಹೋಗಿ ಅದೃಶ್ಯವಾಯಿತು. ಹರಿಸಂಕಲ್ಪವೆಂದು ಈ ದುಃಖವನ್ನು ತಾಳಿಕೊಂಡು ಸುಖವಾಗಿರು' ಎಂದ.

ವಸುದೇವನೆಂದ, ನೀನು ರಾಜನಿಗೆ ವಾರ್ಷಿಕ ಕಂದಾಯವನ್ನು ಕೊಟ್ಟಿದ್ದಾಯಿತು. ಇನ್ನು ಹೆಚ್ಚುದಿನ ಇಲ್ಲಿ ನೀನಿರಬೇಡ. ಗೋಕುಲದಲ್ಲಿ ಅನರ್ಥಗಳಾಗುವ ಸೂಚನೆಗಳು ತೋರುತ್ತಿವೆ' ಎಂದ. ಒಡನೆ ನಂದ ಗೋಕುಲಕ್ಕೆ ತೆರಳಿದ.

❖❖❖

ಅಧ್ಯಾಯ - ೭

ಅಧ್ಯಾಯ ಸಾರಾಂಶ

ವಸುದೇವನಾಡಿದ ಮಾತು ಸುಳ್ಳಾಗಲಾರದೆಂದು ಭಯದಿಂದ ನಂದ ಮಾರ್ಗದಲ್ಲಿ ಹರಿಯನ್ನು ಮೊರೆಹೊಕ್ಕ. ಇತ್ತ ಕಂಸ ಕಳಿಸಿದ ಪೂತನೆ ಬಾಲಘಾತಿನಿ ಕ್ರೂರ ರಾಕ್ಷಸಿಯಾದರೂ ಮಾಯೆಯಿಂದ ಅಪ್ಸರೆಯಂತೆ ಕಾಣುವ ರೂಪ ತಳೆದು ಎಲ್ಲೆಡೆ ಶಿಶುಗಳನ್ನು ಕೊಲ್ಲುತ್ತ ಸಂಚರಿಸಿ ಗೋಕುಲಕ್ಕೂ ಬಂದಳು. ಕೈಯಲ್ಲಿ ಕಮಲವನ್ನು ಹಿಡಿದು ಸಾಕ್ಷಾತ್ ಲಕ್ಷ್ಮಿಯಂತೆ ಬಂದು ಮಕ್ಕಳನ್ನು ಹುಡುಕುತ್ತ ನಂದನ ಮನೆಯಲ್ಲಿ ಹಾಸಿಗೆಯಲ್ಲಿ ಮಲಗಿಸಿಟ್ಟಿದ್ದ ಬಾಲಕೃಷ್ಣನನ್ನು ಕಂಡಳು. ಸರ್ವಾಂತರ್ಯಾಮಿ ಶ್ರೀಕೃಷ್ಣ ಮಕ್ಕಳ ಸ್ವಭಾವವನ್ನು ತೋರುತ್ತ ಕಣ್ಣುಮುಚ್ಚಿ ಮಲಗಿದ್ದ. ಅವನನ್ನು ಹರಿಯೆಂದು ತಿಳಿಯದೆ ಪೂತನೆ ತನಗೆ ಮೃತ್ಯುವಾದ ಆ ಶಿಶುವನ್ನು ಎತ್ತಿ ತೊಡೆಯ ಮೇಲೇರಿಸಿಕೊಂಡಳು, ಮಲಗಿದ್ದ ಹಾವನ್ನು ತಿಳಿಯದೆ ಹಗ್ಗವೆಂದು ಎತ್ತಿಕೊಳ್ಳುವಂತೆ. ಅವಳ ದುರುದ್ದೇಶವನ್ನು ತಿಳಿಯದ ಯಶೋದೆ ಅವಳನ್ನು ಒಳ್ಳೆಯ ಹೆಂಗಸೆಂದೇ ಬಗೆದು ಸುಮ್ಮನೆ ನೋಡುತ್ತ ನಿಂತಳು.

ರಾಕ್ಷಸಿ ಯಾರಿಗೂ ಜೀರ್ಣಿಸಿಕೊಳ್ಳಲಾಗದಂಥ ಕಾಲಕೂಟ ವಿಷ ಯುಕ್ತವಾದ ಸ್ತನವನ್ನು ತೊಡೆಗೆ ಒಯ್ದು ಶಿಶುವಿನ ಬಾಯಲ್ಲಿಟ್ಟಳು. ಶಿಶು ರೋಷದಿಂದ ಆ ಸ್ತನವನ್ನು ಎರಡೂ ಕೈಗಳಿಂದ ಬಿಗಿಯಾಗಿ ಒತ್ತಿ ಹಿಡಿದು ಅವಳ ಪ್ರಾಣಗಳೊಂದಿಗೇ ಪಾನ ಮಾಡಿತು. 'ಬಿಡುಬಿಡು' ಎಂದು ಅರಚುತ್ತ ಕಣ್ಣುಬಿಟ್ಟುಕೊಂಡು ಕೈಕಾಲು ಬಡಿಯುತ್ತ ಮೈಯೆಲ್ಲ ಬೆವರಿಂದ ತೊಯ್ದು ಗಟ್ಟಿಯಾಗಿ ಭೂಮಿ ಅಂತರಿಕ್ಷಗಳು ನಡುಗುವಂತೆ ಏಳು ಪಾತಾಳಗಳೂ ದಿಕ್ಕುಗಳೂ ಪ್ರತಿಧ್ವನಿಸುವಂತೆ ಸಿಡಿಲು ಬಿದ್ದಿತೋ ಎಂದು ಭಯದಿಂದ ಜನರು ನೆಲಕ್ಕೆ ಉರುಳುವಂತೆ ಧ್ವನಿಮಾಡುತ್ತ ತನ್ನ ಸಹಜವಾದ ರಾಕ್ಷಸೀ ರೂಪ ತಳೆದು ವಜ್ರಾಯುಧದೇಟಿಗೆ ವೃತ್ರಾಸುರ ಬಿದ್ದಂತೆ ಸತ್ತುಬಿದ್ದಳು ಪೂತನೆ. ಬಿದ್ದು ಕೆಳಗೆ ಸಿಕ್ಕಿಹಾಕಿಕೊಂಡ ಆರು ಹರದಾರಿಗಳಷ್ಟು ಪ್ರದೇಶದ

ಎಲ್ಲ ಮರಗಿಡಗಳನ್ನು ಪುಡಿ ಮಾಡಿದ್ದಳು. ಆಗ ಅವಳ ಮೂಗಿನ ಹೊರಳೆಗಳು ಪರ್ವತದ ಗುಹೆಗಳಂತಿದ್ದುವು. ಪರ್ವತದ ಬಂಡೆಗಳಂಥ ಸ್ತನಗಳು ಕತ್ತಲು ಬಾವಿ ಯಂಥ ಗುಳಿಬಿದ್ದ ಕಣ್ಣುಗಳು ಭಯಂಕರ ಮರಳು ದಿನ್ನೆಯಂಥ ಎತ್ತರದ ನಿತಂಬಗಳು ಇವನ್ನು ಕಂಡು ಗೋಪಗೋಪಿಯರು ತುಂಬ ಭಯಪಟ್ಟರು. ಶಿಶು ಮಾತ್ರ ಏನೂ ಭಯವಿಲ್ಲದೆ ಚಿನ್ನಾಟ ವಾಡುತ್ತಿತ್ತು. ಗೋಪಿಯರು ಗಾಬರಿಗೊಂಡು ಶಿಶುವನ್ನೆತ್ತಿ ಕೊಂಡರು. ರಕ್ಷೆ ಮಾಡಿದರು.

ಮೊದಲಿಗೆ ಹಸುವಿನ ಬಾಲದ ಕೂದಲಿನಿಂದ ಇಳಿ ತೆಗೆದು ಗೋಮೂತ್ರದಿಂದ ಸ್ನಾನ ಮಾಡಿಸಿ ಗೋಪಾದ ಧೂಳಿಯನ್ನು ಮೈಗೆ ಲೇಪಸಿ ಗೋಮಯದಿಂದ ಹಣೆ ಮುಂತಾದ ಹನ್ನೆರಡು ಕಡೆ ಕೇಶವಾದಿ ನಾಮದಿಂದ ರಕ್ಷೆಯಿಟ್ಟರು. ದಿಗ್ಬಂಧಾದಿಗಳನ್ನು ಮಾಡಿದರು. ತಾವೂ ಕೈಕಾಲು ತೊಳೆದು ಆಚಮನ ಮಾಡಿ ತಮ್ಮ ಮೈಯಲ್ಲಿ ಅಷ್ಟಾಕ್ಷರ ಬೀಜನ್ಯಾಸ ಮಾಡಿಕೊಂಡು ಮಗುವಿಗೂ ದ್ವಾದಶಾಕ್ಷರ ಬೀಜನ್ಯಾಸ ಮಾಡಿದರು. ಬಳಿಕ ರಕ್ಷೆ ಮಾಡಿದರು. ವಿಷ್ಣುಕವಚ ಮಂತ್ರದಿಂದ ಪಾದಾದಿ ಶಿರಃ ಪರ್ಯಂತ ಅವಯವಗಳಲ್ಲಿ ಮುಂದೆ ಹಿಂದೆ ಎರಡು ಪಾರ್ಶ್ವಗಳಲ್ಲಿ, ಎಲ್ಲ ದಿಕ್ಕುಗಳಲ್ಲಿ, ಶರೀರದೊಳಗೆ, ಇಂದ್ರಿಯ ಮನಸ್ಸುಗಳಲ್ಲಿ, ಆಟವಾಡುವುದು ಮಲಗುವುದು ಮುಂತಾದ ಕ್ರಿಯೆಗಳಲ್ಲಿ ಬೇರೆಬೇರೆ ವಿಷ್ಣುರೂಪಗಳು ನಿನ್ನನ್ನು ರಕ್ಷಿಸಲಿ. ಬಾಲಗ್ರಹಗಳು ಡಾಕಿನಿ ಭೂತಪ್ರೇತ ಪಿಶಾಚಿ ಯಕ್ಷ ರಾಕ್ಷಸ ವಿನಾಯಕ ಕೋಟರಾ ರೇವತಿ ಜ್ಯೇಷ್ಠಾ ಪೂತನಾ ಮಾತೃಕಾ ಮುಂತಾದವರಿಂದಲೂ ಉನ್ಮಾದಾಪಸ್ಮಾರ ದುಃಸ್ವಪ್ನ ಉತ್ಪಾತ ಗಳಿಂದಲೂ ವಿಷ್ಣುನಾಮೋಚ್ಚಾರಣೆ ನಿನ್ನನ್ನು ರಕ್ಷಿಸಲಿ ಎಂದು ರಕ್ಷೆ ಮಾಡಿದರು.

ಅಷ್ಟರಲ್ಲಿ ನಂದಗೋಪನೂ ಗೋಪಾಲಕರೂ ಮಥುರೆಯಿಂದ ಬಂದು ಪೂತನೆಯ ಶವವನ್ನು ಕಂಡರು. ಅದನ್ನು ಕೊಡಲಿಯಿದ ತುಂಡುತುಂಡಾಗಿ ಕತ್ತರಿಸಿ ರಾಶಿಹಾಕಿ ಕಟ್ಟಿಗೆಯಿಂದ ಮುಚ್ಚಿ ಸುಟ್ಟರು. ಆಗ ಅಗುರು ಸುಗಂಧಭರಿತವಾದ ಹೊಗೆ ಎದ್ದಿತು. ಶ್ರೀಕೃಷ್ಣನ ಕರಸ್ಪರ್ಶದ

ಮಹಿಮೆಯಿಂದ ಪೂತನೆಯ ಪಾಪಗಳು ನಾಶವಾಗಿದ್ದುದರ ಪರಿಣಾಮವಿದು. ಅವಳು ಕೊಲ್ಲುವ ಉದ್ದೇಶ ದಿಂದ ಕೃಷ್ಣನಿಗೆ ಸ್ತನ್ಯವನ್ನು ಉಣಿಸಿದ್ದರೂ ಸದ್ಗತಿ ಪಡೆದಳು. ಇನ್ನು ನಿರ್ಮಲವಾದ ಪುತ್ರವಾತ್ಸಲ್ಯದಿಂದ ಎದೆ ಹಾಲುಣಿಸಿದ ತಾಯಂದಿರಿಗೆ ಸದ್ಗತಿಯಾದುದರಲ್ಲಿ ಏನು ಆಶ್ಚರ್ಯವಿದೆ?

❖ ❖ ❖

ಅಧ್ಯಾಯ - ೮

ಅಧ್ಯಾಯ ಸಾರಾಂಶ

ಬಾಲಕೃಷ್ಣ ಬೋರಲು ಬಿದ್ದಾಗ ಬಹಿರ್ನಿಷ್ಕ್ರಮಣಕ್ಕಾಗಿ ಬ್ರಾಹ್ಮಣರ ಮಂತ್ರಘೋಷ ಪೂರ್ವಕವಾಗಿ ಮಂಗಳಸ್ನಾನ ಮಾಡಿಸಿದಳು ಯಶೋದೆ. ಬ್ರಾಹ್ಮಣರಿಗೆ ಅನ್ನವಸ್ತ್ರಾದಿಗಳನ್ನಿತ್ತು ಅವರಿಂದ ಮಗುವಿಗೆ ಪುಣ್ಯಾಹ ಸ್ವಸ್ತಿವಾಚನ ಮಾಡಿಸಿದಳು. ಮಗುವಿಗೆ ಅಭ್ಯಂಜನಾದಿಗಳ ಆಯಾಸದಿಂದ ಕಣ್ಣಲ್ಲಿ ತೂಕಡಿಕೆ ಆವರಿಸಿದುದನ್ನು ಕಂಡು ನಿಧಾನವಾಗಿ ಎತ್ತಿ ಎತ್ತಿನ ಬಂಡಿಯ ಕೆಳಗೆ ಮಲಗಿಸಿದಳು. ಸಮಾರಂಭಕ್ಕಾಗಿ ಬಂದ ಅತಿಥಿಗಳನ್ನು ಸತ್ಕರಿಸುವುದರಲ್ಲಿ ನಿರತಳಾದಳು. ಅತ್ತ ಮಗು ಎದ್ದು ಅಳತೊಡಗಿತು. ಯಶೋದೆಗೆ ಅದು ಕೇಳಿಸಲಿಲ್ಲ. ಮಗು ಅಳುತ್ತ ಕಾಲುಗಳನ್ನೆತ್ತಿ ಬಂಡಿಯನ್ನು ಒದೆಯಿತು. ಬಂಡಿ ತಲೆಕೆಳಗಾಗಿ ಬಿದ್ದಿತು. ಗಾಲಿ ಅಚ್ಚುಮರಗಳ ನೊಗಗಳೆಲ್ಲವೂ ಮುರಿದು ಬಿದ್ದುವು. ಶಕಟಾಸುರನೆಂಬ ಪಾಪಿ ದೈತ್ಯನೊಬ್ಬ ಕಂಸನ ಕಡೆಯವನು ಬಂಡಿಯಲ್ಲಿ ಆವಿಷ್ಟನಾಗಿ ಕೃಷ್ಣನನ್ನು ಕೊಲ್ಲಲು ಕಾದಿದ್ದ. ಆದರೆ ಅವನೆ ಬಂಡಿಸಮೇತ ಬಿದ್ದು ಮೃತನಾದ. ಗೊಲ್ಲ ಗೊಲ್ಲತಿಯರೆಲ್ಲರೂ ಆ ವಿಚಿತ್ರವನ್ನು ಕಂಡು ತಲ್ಲಣಗೊಂಡರು. ಅಲ್ಲಿಯೆ ಇದ್ದ ಬಾಲಕರು 'ಈ ಮಗು ಕಾಲಿನಿಂದ ಒದ್ದು ಬಂಡಿಯನ್ನು ಎಸೆದುಬಿಟ್ಟಿತು' ಎಂದು ಹೇಳಿದರೂ ಅದನ್ನು ಮಕ್ಕಳ ಮಾತೆಂದು ಯಾರೂ ನಂಬಲಿಲ್ಲ. ಗ್ರಹಚೇಷ್ಟೆ ಎಂದೇ ಭಾವಿಸಿ ಮಗುವಿಗೆ ಬ್ರಾಹ್ಮಣರಿಂದ ಗ್ರಹಪೀಡಾ ಶಾಂತಿಮಂತ್ರ ಗಳನ್ನು ಹೇಳಿಸಿ ಸ್ವಸ್ತಿವಾಚನ ಮಾಡಿಸಿ ಹಾಲುಣಿಸಿದರು. ಅಭಿಮಂತ್ರಿತವಾದ ಕಲಶೋದಕಗಳಿಂದ ಸ್ನಾನ ಮಾಡಿಸಿ ಹೋಮ ಮಾಡಿಸಿ ಬ್ರಾಹ್ಮಣರಿಗೆ ಅನ್ನದಾನ ಗೋದಾನಗಳನ್ನು ಮಾಡಿದ ನಂದಗೋಪ.

ಒಂದುದಿನ ಯಶೋದೆಯ ತೊಡೆಯಲ್ಲಿ ಆಡುತ್ತಿದ್ದ ಮಗು ಬೆಟ್ಟದಂತೆ ಭಾರವಾಯಿತು. ಅಚ್ಚರಿಗೊಂಡು ಅವಳು ಮಗುವನ್ನು ನೆಲದ ಮೇಲೆ ಇಟ್ಟು ಗ್ರಹಬಾಧೆಗಳಾಗದಿರಲೆಂದು

ಪರಮಪುರುಷ ನಾರಾಯಣನನ್ನು ಧ್ಯಾನಿಸಿ ಮನೆಕೆಲಸ ಮಾಡಲು ಹೋದಳು. ಇತ್ತ ಕಂಸನ ಕಡೆಯ ತೃಣಾವರ್ತ ದೈತ್ಯ ಸುಂಟರಗಾಳಿಯ ರೂಪದಿಂದ ಬಂದು ಗೋಕುಲದಲ್ಲಿ ಒಂದು ಮುಹೂರ್ತಕಾಲ ಘೋರಶಬ್ದ ಮಾಡುತ್ತ ಎಲ್ಲೆಡೆ ದೂಳಿನಿಂದ ಯಾರಿಗೂ ಕಣ್ಣುಕಾಣದಂತೆ ಮಾಡಿ ಕೃಷ್ಣನನ್ನು ಎತ್ತಿಕೊಂಡ. ಯಶೋದೆಗೆ ಮಗು ತಾನಿಟ್ಟಿದ್ದ ಸ್ಥಳದಲ್ಲಿ ಕಾಣಿಸದಿದ್ದಾಗ ಏನೂ ತಿಳಿಯದೆ ಕರುವನ್ನು ಕಳೆದುಕೊಂಡ ಹಸುವಿನಂತೆ ಮರುಗಿದಳು. ಗಾಳಿ ದೂಳಿನ ಮಳೆಗಳು ನಿಂತ ಮೇಲೂ ಕೃಷ್ಣ ಎಲ್ಲಿಯೂ ಗೋಚರನಾಗದಿದ್ದಾಗ ಗೋಪಿಯರೆಲ್ಲರೂ ಜೋರಾಗಿ ಅಳ ತೊಡಗಿದರು.

ತೃಣಾವರ್ತ ಕೃಷ್ಣನನ್ನು ಹೊತ್ತು ಆಕಾಶಕ್ಕೆ ಹಾರಿದರೂ ಒಡನೆ ಕೃಷ್ಣ ಭಾರವಾದ, ಗುಂಡುಕಲ್ಲಿನಂತಾದ. ತನ್ನ ಕುತ್ತಿಗೆಯನ್ನು ಅವನು ಬಲವಾಗಿ ಹಿಡಿದುಕೊಂಡುದರಿಂದ ಅವನನ್ನು ಬಿಡುವುದಕ್ಕೂ ಸಾಧ್ಯವಾಗದೆ ನಿಶ್ಚೇಷ್ಟನಾಗಿ 'ಬಿಡುಬಿಡು' ಎಂದು ಅಸ್ಪಷ್ಟವಾಗಿ ಹೇಳುತ್ತ ಉಸಿರುಕಟ್ಟಿ ಸತ್ತ. ಕೃಷ್ಣನೊಂದಿಗೇ ಅವನ ಶರೀರ ಕೆಳಗೆ ಬಿದ್ದಿತು. ಅಳುತ್ತಿದ್ದ ಗೋಪಿಯರು ಬಂಡೆಕಲ್ಲಿನ ಮೇಲೆ ಬಿದ್ದು ಪುಡಿಯಾದ ಭಯಂಕರಾಕಾರದ ತೃಣಾವರ್ತನ ಶರೀರವನ್ನು ಕಂಡರು. ಅವನ ಕೊರಳಿಗೆ ಜೋತಾಡುತ್ತಿದ್ದ ಕೃಷ್ಣನನ್ನೂ ಕಂಡರು. ಬೇಗನೆ ಎತ್ತಿ ತಾಯಿಯ ಕೈಗಿತ್ತರು. ರಾಕ್ಷಸನ ಕೈಗೆ ಸಿಕ್ಕಿ ಕಾಣೆಯಾದ ಮಗು ತಿರುಗಿ ನಮ್ಮ ಬಳಿಗೇ ಬಂದಿತೆಂದು ಆನಂದಪಟ್ಟರು.

ಒಮ್ಮೆ ಯಶೋದೆ ಕೃಷ್ಣನನ್ನು ತೊಡೆಯ ಮೇಲೆ ಇರಿಸಿ ಕೊಂಡು ಎದೆ ಹಾಲುಣಿಸಿ ಮಗುವಿನ ಮುಖವನ್ನು ಮುದ್ದಿಸಿದಳು. ಮಗು ಬಾಯಿ ಆಕಳಿಸಿತು. ಬಾಯೊಳಗೆ ಇಡಿ ವಿಶ್ವವನ್ನೆ ಕಂಡಳು ತಾಯಿ. ಜಿಂಕೆಕಣ್ಣಿನ ಆ ತಾಯಿಗೆ ಅನಿರೀಕ್ಷಿತವಾಗಿ ವಿಶ್ವರೂಪ ದರ್ಶನ ವಾದಾಗ ಮೈಯಲ್ಲಿ ನಡುಕ ಉಂಟಾಯಿತು. ಕಣ್ಣು ಮುಚ್ಚಿ ಕೊಂಡಳು.

❖❖❖

ಅಧ್ಯಾಯ - ೯

ಅಧ್ಯಾಯ ಸಾರಾಂಶ

ಯಾದವರ ಕುಲಪುರೋಹಿತರಾದ ಮಹಾ ತಪಸ್ವಿಗಳಾದ ಗರ್ಗಮುನಿ ವಸುದೇವನ ಪ್ರಾರ್ಥನೆಯಂತೆ ನಂದಗೋಕುಲಕ್ಕೆ ಹೋಗಿ ನಂದನನ್ನು ಕಂಡಾಗ ಅವನು ಜ್ಯೋತಿಃಶಾಸ್ತ್ರ ಪ್ರಣೇತರಾದ ಆ ಮುನಿಯಲ್ಲಿ ರಾಮಕೃಷ್ಣರಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಲು ಕೇಳಿಕೊಂಡ. ಮುನಿ ಹೇಳಿದರು ''ನಾನು ಯಾದವರ ಕುಲಪುರೋಹಿತ. ಕೃಷ್ಣನಿಗೆ ನಾನು ಸಂಸ್ಕಾರ ಮಾಡಿದ್ದು ತಿಳಿದರೆ ಪಾಪಿ ಕಂಸ ಕೃಷ್ಣನನ್ನು ದೇವಕೀಪುತ್ರನೆಂದು ತಿಳಿಯಬಹುದು. ಕನ್ಯೆ ದುರ್ಗೆಯ ಮಾತಿನಿಂದ ದೇವಕಿಯ ಎಂಟನೆ ಗರ್ಭ ಹೆಣ್ಣಾಗಿರಲು ಸಾಧ್ಯವಿಲ್ಲ. ಗಂಡೇ ಆಗಿರಬೇಕೆಂದು ಊಹಿಸಬಹುದು. ನಿನಗೂ ವಸುದೇವನಿಗೂ ಸ್ನೇಹವಿರುವುದು ಅವನಿಗೆ ತಿಳಿದಿರುವುದರಿಂದ ನಿಮ್ಮಿಬ್ಬರಲ್ಲಿ ಮಕ್ಕಳ ವಿನಿಮಯ ನಡೆದಿರಬೇಕೆಂದು ಶಂಕಿಸಬಹುದು. ಕೃಷ್ಣನನ್ನು ಅವನು ಕೊಲ್ಲಬಹುದು. ನಮಗೆ ಮಹಾ ಅನರ್ಥ ಉಂಟಾದೀತು.

ನಂದಗೋಪನೆಂದ, 'ಹಾಗಿದ್ದರೆ ನನ್ನವರಾದ ಗೋಪಾಲಕರಿಗೂ ತಿಳಿಯದಂತೆ ರಾಮಕೃಷ್ಣರಿಗೆ ಸಂಸ್ಕಾರಗಳನ್ನು ಮಾಡಿರಿ.' ಮುನಿಗೂ ಅದೇ ಅಭಿಪ್ರಾಯವಿದ್ದುದರಿಂದ ಯಾರಿಗೂ ತಿಳಿಯದಂತೆ ಏಕಾಂತದಲ್ಲಿ ಬಾಲಕರಿಗೆ ನಾಮಕರಣಾದಿ ಸಂಸ್ಕಾರಗಳನ್ನು ನಡೆಸಿದರು.

ಬಂಧುಮಿತ್ರರಿಗೆಲ್ಲರಿಗೂ ಆನಂದ ಉಂಟುಮಾಡುವುದರಿಂದ ರಾಮನೆಂದೂ ಮಹಾಬಲಶಾಲಿಯಾಗುವುದರಿಂದ ಬಲನೆಂದೂ. ಯಾದವರೆಲ್ಲರಿಗೂ ಆತ್ಮೀಯನೆನಿಸಿ ಅವರ ಹೃದಯವನ್ನು ತನ್ನೆಡೆಗೆ ಸೆಳೆಯುವುದರಿಂದ ಮತ್ತು ಬೇರೆಬೇರೆ ಕಡೆ ವಲಸೆ ಹೋಗಿರುವ ಅವರನ್ನು ಮಥುರೆಗೆ ಕರೆತರಿಸಿ ಒಂದೆಡೆ ಸೇರಿಸುವುದರಿಂದ ಸಂಕರ್ಷಣನೆಂದೂ ಬಲರಾಮನಿಗೆ ಹೆಸರು. ಮತ್ತು ದೇವಕೀಗರ್ಭದಿಂದ ರೋಹಿಣೀಗರ್ಭಕ್ಕೆ ದುರ್ಗೆ ಈತನನ್ನು ಸೆಳೆದು ತಂದುದರಿಂದಲೂ ಸಂಕರ್ಷಣ ಎಂಬ ಹೆಸರು

ಬಲರಾಮನಿಗೆ ಯುಕ್ತವಾಗುತ್ತದೆ. ಅದನ್ನು ಮುನಿ ಸ್ಪಷ್ಟ ಹೇಳುತ್ತಿಲ್ಲ, ಕಂಸನ ಭಯದಿಂದ.

ಕೃಷ್ಣ ಯುಗಾನುಸಾರವಾಗಿ ಅವತರಿಸುವಾಗ ಹಿಂದೆ ಶುಕ್ಲ ರಕ್ತ ಪೀತವರ್ಣಗಳಿದ್ದುವು. ಈಗ ಕೃಷ್ಣವರ್ಣದವನಾಗಿದ್ದಾನೆ. ಅದರಿಂದ ಕೃಷ್ಣನಾಮ. ವಸುದೇವ ಪುತ್ರನಾಗಿ ಮೊದಲಿಗೆ ಹುಟ್ಟಿದ್ದರಿಂದ ಶ್ರೀ ವಾಸುದೇವ ಎಂದು ಈತನನ್ನು ಬಲ್ಲವರು ಕರೆಯುತ್ತಾರೆ. ಈತನಿಗೆ ಅವನ ಗುಣಕರ್ಮಗಳಿಗೆ ಅನುಸಾರವಾಗಿ ಅನಂತ ನಾಮರೂಪಗಳಿವೆ. ಅವು ನನಗೆ ಗೊತ್ತಿವೆ. ಸಾಮಾನ್ಯ ಜನರು ತಿಳಿಯರು. ಇವನು ಗೋಪಾಲಕರಿಗೂ ಗೋವುಗಳಿಗೂ ಎಲ್ಲ ಆಪತ್ತುಗಳನ್ನು ದೂರ ಮಾಡಿ ಆನಂದ ನೀಡುತ್ತಾನೆ. ಹಿಂದೆ ದೇಶ ಅರಾಜಕವಾಗಿದ್ದು, ಸಜ್ಜನರು ರಕ್ಷಕರಿಲ್ಲದೆ ಪೀಡಿತ ರಾದಾಗ ಪೃಥುಚಕ್ರವರ್ತಿಯಲ್ಲಿ ಆವಿಷ್ಟನಾಗಿ ರಕ್ಷಣೆ ನೀಡಿದ. ಇವನಲ್ಲಿ ಪ್ರೀತಿ ಮಾಡುವವರಿಗೆ ಶತ್ರುಭಯವೆಂಬುದಿಲ್ಲ. ಈತ ಗುಣ ಕಾಂತಿ ಕೀರ್ತಿ ಸಾಮರ್ಥ್ಯ ಈ ಎಲ್ಲ ವಿಷಯಗಳಲ್ಲಿಯೂ ನಾರಾಯಣನಿಗೆ ಸಮಾನ. ಅವನನ್ನು ಎಚ್ಚರದಿಂದ ಕಾಪಾಡಿ ಕೊಳ್ಳು' ಎಂದು ಗರ್ಗಮುನಿ ನಂದನಿಗೆ ಹೇಳಿದರು.

ಅಲ್ಪಕಾಲದಲ್ಲಿಯೇ ರಾಮಕೃಷ್ಣರು ಅಂಬೆಗಾಲಿಡುತ್ತ ಓಡಾಡಿ ದರು. ತಾಯಂದಿರು ರೋಹಿಣಿ ಯಶೋದೆಯರು ಮೈಯೆಲ್ಲ ದೂಳು ಮಾಡಿಕೊಂಡು ಸುಂದರರಾಗಿ ಕಾಣುವ ಮಕ್ಕಳನ್ನೆತ್ತಿ ಕೊಂಡು ಎದೆ ಹಾಲುಣಿಸಿ ಆಗತಾನೆ ಮೊಳೆಯುತ್ತಿರುವ ಸಣ್ಣ ಹಲ್ಲುಗಳಿಂದ ಕೂಡಿದ ಮುಖವನ್ನು ಕಂಡು ಆನಂದಪಟ್ಟರು. ಬಳಿಕ ಮಕ್ಕಳು ಕರುಗಳ ಬಾಲ ಹಿಡಿದೆಳೆಯುವುದನ್ನು ನೋಡುತ್ತ ಮನೆಗೆಲಸಗಳನ್ನು ಮರೆತರು. ದಿನಗಳೆದಂತೆ ಮಕ್ಕಳು ಬಲಿಷ್ಠರಾಗಿ ಬೆಳೆದರು. ಹಸು ಎಮ್ಮೆ ಬೆಂಕಿ ನಾಯಿ ಹಾಲು ನೀರು ಹದ್ದು ಮುಂತಾದವುಗಳೊಡನೆ ಅಪಾಯಕಾರಿಯಾದ ಆಟ ಆಡುವುದರಲ್ಲಿ ಆಸಕ್ತರಾದರು. ಅವರ ಚೇಷ್ಟೆಗಳನ್ನು ತಡೆಯಲು, ಅತ್ತ ಮನೆಗೆಲಸ ಮಾಡಲು ಅಶಕ್ತರಾದರು. ಮುಂದೆ ರಾಮಕೃಷ್ಣರು ಕಾಲುಗಳಿಂದ ಓಡಾಡಲು ತೊಡಗಿ ಗೊಲ್ಲ ಬಾಲಕರೊಡನೆ ಆಟವಾಡಿದರು. ಗೋಕುಲದ ಅಬಲೆಯರಿಗೆ ಮುದ ಉಂಟು ಮಾಡಿದರು.

ಕಟ್ಟಿದ್ದ ಕರುಗಳನ್ನು ಬಿಚ್ಚುವುದು, ಮೊಸರು ಹಾಲು ಬೆಣ್ಣೆಗಳನ್ನು ಕದ್ದು ಮೆಲ್ಲುವುದು, ಮೆದ್ದ ಬಳಿಕ ಮೊಸರು ಗಡಿಗೆಗಳನ್ನು ಒಡೆಯು ವುದು, ಹಾಲು ಬೆಣ್ಣೆ ಸಿಗದಿದ್ದರೆ ಕೋಪದಿಂದ ಮನೆಯ ಮಕ್ಕಳಿಗೆ ಕೀಟಲೆಮಾಡಿ ಅಳಿಸುವುದು ಹೀಗೆ ನಾನಾ ಚೇಷ್ಟೆಗಳನ್ನು ಮಾಡಿದ ಕೃಷ್ಣ ಗೋಪಿಯರು ಮನೆಗೆಲಸದಲ್ಲಿ ನಿರತರಾಗಿದ್ದ ಸಮಯವನ್ನೆ ನೋಡಿಕೊಂಡು ಕತ್ತಲೆ ಮನೆಯಲ್ಲಿ ತನ್ನ ಮೈಯಿಂದಲೆ ಹೊರಡುವ ಬೆಳಕಿನಿಂದ ಹಾಲುಬೆಣ್ಣೆ ಕದ್ದ, ಕಳ್ಳತನ ಮಾಡಿಯೂ ಒಳ್ಳೆಯ ಸಭ್ಯನಂತೆ ನಿಂತ. ಇದೆಲ್ಲವನ್ನೂ ಬಣ್ಣಿಸುತ್ತ ಯಶೋದೆಯ ಮುಂದೆ ಗೋಪಿಯರು ದೂರಿದರೆ ಕೃಷ್ಣ ಭಯಪಟ್ಟಂತೆ ಕಣ್ಣುಬಿಡುತ್ತ ನಿಂತ. ಆ ಮುದ್ದುಮುಖವನ್ನು ನೋಡುತ್ತ ಯಶೋದೆ ನಕ್ಕುಬಿಡುತ್ತಿದ್ದಳು.

ಒಮ್ಮೆ ಬಲರಾಮ ಮುಂತಾದ ಎಲ್ಲ ಬಾಲಕರೂ ಬಂದು ಕೃಷ್ಣ ಮಣ್ಣು ತಿಂದನೆಂದು ತಾಯಿಯ ಮುಂದೆ ದೂರು ಹೇಳಿದರು. ಕೃಷ್ಣ ತಾನು ಮಣ್ಣು ತಿಂದಿಲ್ಲ' ಎಂದ. ಅವರೆಲ್ಲರೂ ಹೇಳುವುದು ನಿಜವಲ್ಲ, ನೋಡು ನನ್ನ ಬಾಯಿಯನ್ನು ಎನ್ನುತ್ತ ಬಾಯಿ ತೆರೆದ. ಆಗ ಯಶೋದೆ ಅವನ ಬಾಯಿಯಲ್ಲಿ ಇಡಿ ವಿಶ್ವವನ್ನೇ ಕಂಡಳು. ಅದರೊಳಗೆ ಗೋಕುಲ ಅದರೊಳಗೆ ತಾನು ಇರುವುದನ್ನೂ ಕಂಡು ಇದೇನು ಸ್ವಪ್ನವೋ ಬುದ್ಧಿ ಭ್ರಮಣೆಯೊ ಅಥವಾ ಭಗವಂತನ ಇಚ್ಛೆಯಿಂದಾದ ನೂತನ ಸೃಷ್ಟಿಯೊ ಎಂದು ಗೊಂದಲಕ್ಕೀಡಾದಳು. ಈ ಮಗು ಬ್ರಹ್ಮಾದಿ ದೇವತೆಗಳಿಗೂ ಕೂಡ ಪೂರ್ತಿಯಾಗಿ ಊಹೆಗೂ ನಿಲುಕದುದು. ಅಂಥ ಪರಬ್ರಹ್ಮ ನಾರಾಯಣ ಸ್ವರೂಪ ನನ್ನು ನಮಿಸುತ್ತೇನೆ. ನಂದಗೋಪ ನನ್ನ ಪತಿ. ಗೋಪಿಯರು ಗೋಪಾಲಕರೆಲ್ಲರೂ ನನ್ನವರು. ಈ ಮಗು ನನ್ನ ಮಗು ಎಂದು 'ನಾನು ನನ್ನದೆ'ನ್ನುವ ನೀಚಬುದ್ಧಿ ನನಗೆ ನನ್ನ ಕರ್ಮಾನುಸಾರ ಹರೀಚ್ಛೆಯಿಂದ ಉಂಟಾಗಿದೆ. ಆ ಹರಿಯೇ ನನ್ನ ಈ ದುರ್ಬುದ್ಧಿ ಯನ್ನು ಕಳೆದು ನನಗೆ ಸದ್ಗತಿ ನೀಡಬೇಕು' ಎಂದು ಯಶೋದೆಗೆ ಜ್ಞಾನೋದಯ ವಾಯಿತು. ಆದರೆ ಮರುಕ್ಷಣದಲ್ಲಿ ಮಗನೆಂಬ ಮೋಹವನ್ನು ಅವಳಲ್ಲಿ ಶ್ರೀಕೃಷ್ಣ ಉಂಟುಮಾಡಿದ. ಅವಳು ಕೃಷ್ಣನನ್ನು ತನ್ನ ಕಂದನೆಂದು ಎತ್ತಿ ತೊಡೆಯಲ್ಲಿ ಮಲಗಿಸಿಕೊಂಡಳು.

ಮಹಾಭಾಗ್ಯಶಾಲಿಯಾದ ನಂದ ಕೃಷ್ಣನನ್ನು ಮಗನನ್ನಾಗಿ ಪಡೆದ. ಯಶೋದೆ ಅವನಿಗೆ ಎದೆಹಾಲುಣಿಸಿದಳು. ಶ್ರವಣ ಮಾತ್ರದಿಂದಲೆ ಲೋಕದ ಪಾಪಗಳನ್ನು ಕಳೆಯುವ ಕೃಷ್ಣರಾಮರ ಬಾಲಲೀಲೆಗಳನ್ನು ನೋಡಿ ಆನಂದಿಸುವ ಭಾಗ್ಯ ಅವರನ್ನು ಹೆತ್ತ ತಾಯಿ ತಂದೆಗಳಾದ ದೇವಕಿ ವಸುದೇವರಿಗೇ ಲಭ್ಯವಿರಲಿಲ್ಲ. ಅದು ಯಶೋದಾ ನಂದಗೋಪರಿಗೆ ಲಭ್ಯವಾಯಿತು! ಇದಕ್ಕೆ ಕಾರಣ, ನಂದಗೋಪ ಹಿಂದೆ ದ್ರೋಣನೆಂಬ ವಸು. ಯಶೋದೆ ಅವನ ಪತ್ನಿ ಧರಾದೇವಿ. ಭೂಮಿಯಲ್ಲಿ ಗೋಪಗೋಪಿಯರಾಗಿ ಜನಿಸಿರೆಂದು ಬ್ರಹ್ಮ ಅವರಿಗೆ ಆಜ್ಞೆ ಮಾಡಿದಾಗ ಅದನ್ನು ಶಿರಸಾವಹಿಸಿ ತಮಗೆ ಶ್ರೀಹರಿಯಲ್ಲಿ ವಾತ್ಸಲ್ಯಭಕ್ತಿ ಲಭ್ಯವಾಗಲಿ ಎಂದು ಬೇಡಿಕೊಂಡರು. ಬ್ರಹ್ಮ ಹಾಗೇ ವರ ನೀಡಿದ. ಆದರಿಂದ ಕೃಷ್ಣ ಅವರಿಗೆ ಬಾಲಲೀಲೆ ತೋರುತ್ತ ಪುತ್ರವಾತ್ಸಲ್ಯ ಭಕ್ತಿಯನ್ನು ಬೆಳೆಸಿ ಅನುಗ್ರಹಿಸಿದ.

❖❖❖

ಅಧ್ಯಾಯ - ೧೦

ಅಧ್ಯಾಯ ಸಾರಾಂಶ

ಒಮ್ಮೆ ಮನೆಗೆಲಸದವರು ಬೇರೆ ಕೆಲಸದಲ್ಲಿದ್ದಾಗ ಯಶೋದೆ ತಾನೆ ಮೊಸರು ಕಡೆದಳು. ಕೃಷ್ಣನನ್ನೆ ಸ್ಮರಿಸುತ್ತ ಅವನ ಸ್ಮರಣೆಯಿಂದ ಸ್ತನಗಳಲ್ಲಿ ಹಾಲು ಒಸರುತ್ತಿದ್ದಂತೆಯೇ ಶ್ರಮದಿಂದ ಮೈಬೆವೆತುಕೊಂಡೇ ಮೊಸರು ಕಡೆದಳು. ಕೃಷ್ಣ ಸ್ತನಪಾನಕ್ಕಾಗಿ ಬಂದು ಕಡೆಗೋಲನ್ನು 'ಹಿಡಿದು ಕಡೆಯಲು ಅಡ್ಡಿ ಮಾಡಿ ಅವಳ ತೊಡೆಯನ್ನೇರಿದ. ಅವಳು ನಸುನಗುತ್ತ ಪ್ರೀತಿಯಿಂದ ಎದೆ ಹಾಲುಣಿಸಿದಳು. ಆದರೆ ಅಷ್ಟರಲ್ಲಿ ಒಲೆ ಮೇಲಿಟ್ಟಿದ್ದ ಹಾಲು ಉಕ್ಕಿತು. ಅದಕ್ಕೆ ಬೇಗನೆ ಮಗುವನ್ನು ಕೆಳಗಿಟ್ಟು ಅತ್ತ ಧಾವಿಸಿದಳು.

ಮಗುವಿಗೆ ಇನ್ನೂ ಹಾಲುಂಡು ತೃಪ್ತಿಯಾಗಿರಲಿಲ್ಲ. ಕೋಪ ಬಂದಿತು. ತುಟಿಗಳು ಅದುರಿದುವು. ಕಣ್ಣಲ್ಲಿ ನೀರು ಬಂದಿತು. ಮೊಸರಿನ ಮಡಿಕೆಯನ್ನು ಒಡೆದು ಬೆಣ್ಣೆಯನ್ನು ಎತ್ತಿಕೊಂಡು ಹೊರಗೆ ಹೋಗಿ ತಾಯಿಗೆ ತಿಳಿಯದಂತೆ ತಿಂದ. ಯಶೋದೆ ಹಾಲನ್ನು ಒಲೆಯಿಂದ ಕೆಳಗಿಳಿಸಿ ಬಂದು ನೋಡಿದಾಗ ಮೊಸರುಗಡಿಗೆ ಒಡೆದಿತ್ತು. ಕೃಷ್ಣನೂ ಕಾಣಿಸಲಿಲ್ಲ. ಇದು ಅವನದೇ ಕೆಲಸವೆಂದುಕೊಂಡು ನಕ್ಕಳು.

ಒಂದುದಿನ ಕೃಷ್ಣ ಒರಳನ್ನು ತಿರುವಿಹಾಕಿ ಅದರ ಮೇಲೆ ಹತ್ತಿ ಬೆಣ್ಣೆ ತೆಗೆದು ಬೆಕ್ಕಿಗೆ ತಿನ್ನಿಸುವುದನ್ನು ತಾಯಿ ಕಂಡು ಕೋಲು ಹಿಡಿದು ಹಿಂದಿನಿಂದ ಬಂದಳು. ಒಡನೆ ಕೃಷ್ಣ ಓಡಲು ತೊಡಗಿದ. ತಾಯಿ ಬೆನ್ನಟ್ಟಿದಳು. ಯೋಗಿಗಳ ತಪೋಬಲಯುಕ್ತವಾದ ಮನಸ್ಸಿನ ವೇಗಕ್ಕೂ ಸಿಗದಿರುವ ಭಗವಂತನನ್ನು ಹಿಡಿಯಲು ಬೆನ್ನಟ್ಟಿದಳು. ಸಣ್ಣ ನಡು ದೊಡ್ಡ ನಿತಂಬಗಳು. ಅವುಗಳ ಭಾರಕ್ಕೆ ನಡೆಯ ವೇಗ ಕುಗ್ಗುತ್ತಿದೆ. ಮುಡಿಯಿಂದ ಹೂಗಳು ಉದುರುತ್ತಿವೆ. ಆದರೂ ಕೃಷ್ಣ ಸಿಕ್ಕಿದ. ತಾನು ಅಪರಾಧ ಮಾಡಿದ್ದಾನೆ ಅಳುತ್ತಿದ್ದಾನೆ ಕಣ್ಣುಗಳನ್ನು ಕೈಗಳಿಂದ ಉಜ್ಜಿಕೊಳ್ಳುತ್ತಿದ್ದಾನೆ. ಭಯಚಕಿತನಾಗಿ ನೋಡುತ್ತಿದ್ದಾನೆ. ತಾಯಿ ಕೈಯಲ್ಲಿ ಹಿಡಿದು

ಕೋಲಿಂದ ಹೊಡೆಯುವೆನೆಂದು ಅಂಜಿಸಿದಳು ಗದರಿದಳು. ಮಗು ಭಯಗೊಂಡಿದೆ ಎಂದು ತಿಳಿದು ಕೋಲನ್ನು ಬಿಸುಟು ಅವನನ್ನು ಹಗ್ಗದಿಂದ ಒರಳಿಗೆ ಕಟ್ಟಿಹಾಕಲು ಬಯಸಿದಳು. ಆದರೆ ಈ ಮಗು ಒಳಗೆ ಹೊರಗೆ ಸರ್ವತ್ರ ವ್ಯಾಪ್ತನಾಗಿರುವಂಥದ್ದು. ಅದಕ್ಕೆ ಯಾವುದೇ ಪದಾರ್ಥ ಒಳಗಿನದು ಅಥವಾ ಹೊರಗಿನದೆಂಬ ಭೇದವಿಲ್ಲ. ಯಾವ ಕಟ್ಟಿನೊಳಗೂ ಸಿಲುಕುವಂಥದ್ದಲ್ಲ. ಮುಗ್ಧೆ ಗೋಪಿ ಹಗ್ಗದಿಂದ ಅವನನ್ನು ಕಟ್ಟಲು ತೊಡಗಿದಳು. ಅದು ಎರಡಂಗುಲದಷ್ಟು ಕಡಿಮೆಯಾಯಿತು. ಅದಕ್ಕೆ ಇನ್ನೊಂದು ಹಗ್ಗ ತಂದು ಸೇರಿಸಿದರೆ ಅದೂ ಎರಡಂಗುಲ ಕಡಿಮೆಯಾಯಿತು. ಹೀಗೆ ಅವಳು ಎಷ್ಟು ಹಗ್ಗಗಳನ್ನು ತಂದು ಸೇರಿಸಿದರೂ ತಿರುಗಿ ಎರಡಂಗುಲ ಕಡಿಮೆಯೇ ಆಯಿತು. ಇದನ್ನು ನೋಡುತ್ತಿದ್ದ ಗೋಪಿಯರು ನಕ್ಕರು. ಆಶ್ಚರ್ಯಪಟ್ಟರು. ಯಶೋದೆಯೂ ನಗುತ್ತ ಆಶ್ಚರ್ಯಪಟ್ಟಳು. ಈಗ ತಾಯಿ ಆಯಾಸಗೊಂಡು ಮೈ ಬೆವರಿದ್ದನ್ನು ಕಂಡು ಕೃಷ್ಣ ಕೃಪೆಯಿಂದ ತಾನೇ ಬಂಧನಕ್ಕೊಳಗಾದ. ಸಮಸ್ತ ಜಗತ್ತು ಹರಿಗೆ ವಶವಾಗಿದ್ದರೂ ಆ ಹರಿ ಭಕ್ತರಿಗೆ ವಶನಾಗುತ್ತಾನೆ. ಭಕ್ತಿಯಿಲ್ಲದೆ ಯಾರಿಗೂ ಅವನು ಲಭ್ಯನೇ ಆಗುವುದಿಲ್ಲ.

ಬಳಿಕ ತಾಯಿ ಮನೆಗೆಲಸಗಳಿಗೆ ಅತ್ತ ಹೋದಾಗ ಕೃಷ್ಣ ಅಂಗಳದಲ್ಲಿ ಎರಡು ಮತ್ತಿ ಮರಗಳನ್ನು ನೋಡಿದ. ಇವರು ಹಿಂದೆ ಕುಬೇರನ ಮಕ್ಕಳು. ನಳಕೂಬರ ಮತ್ತು ಮಣಿಗ್ರೀವರು. ಐಶ್ವರ್ಯ ಮದ ದಿಂದ ನಾರದರ ಶಾಪವನ್ನು ಹೊಂದಿ ಮರಗಳಾಗಿ ಹುಟ್ಟಿದ್ದರು.

❖ ❖ ❖

ಅಧ್ಯಾಯ - ೧೧

ಅಧ್ಯಾಯ ಸಾರಾಂಶ

ನಲಕೂಬರ ಮತ್ತು ಮಣಿಗ್ರೀವರು ಕುಬೇರನ ಪುತ್ರರು ಮಾತ್ರವಲ್ಲದೆ ರುದ್ರನ ಸೇವಕರೂ ಆಗಿದ್ದರಿಂದ ಅಹಂಕಾರ ಪಡುತ್ತಿದ್ದರು. ಗಂಗಾತೀರದಲ್ಲಿ ಕೈಲಾಸದ ಒಂದು ರಮ್ಯವಾದ ಉಪವನದಲ್ಲಿ ವಾರುಣೀ ಎಂಬ ಮದ್ಯವನ್ನು ಕುಡಿದು ಅಪ್ಸರ ಸ್ತ್ರೀಯರೊಂದಿಗೆ ವಿಹಾರ ಮಾಡುತ್ತಿದ್ದರು. ಜಲಕ್ರೀಡೆಯಾಡು ತ್ತಿದ್ದರು. ಒಮ್ಮೆ ಅಲ್ಲಿಗೆ ನಾರದರು ಬಂದರು. ನಗ್ನರಾಗಿದ್ದ ಅಪ್ಸರೆಯರು ನಾಚಿ ಬೇಗನೆ ಸೀರೆಗಳನ್ನು ಉಟ್ಟುಕೊಂಡರು. ಆದರೆ ನಗ್ನರಾಗಿದ್ದ ಗುಹ್ಯಕರಿಬ್ಬರೂ ದರ್ಪದಿಂದ ಬಟ್ಟೆ ಉಡಲಿಲ್ಲ. ನಾರದರು ಅವರ ದರ್ಪವನ್ನು ಮುರಿದು ಕೃಷ್ಣಭಕ್ತಿಯನ್ನು ಬೆಳೆಸುವ ಉದ್ದೇಶದಿಂದ ಶಾಪನೀಡಿದರು.

'ವಿಷಯಾಸಕ್ತರಾದ ಧನಿಕರು ಅಹಂಕಾರದಿಂದ ಬುದ್ಧಿನಾಶ ಮಾಡಿಕೊಳ್ಳುತ್ತಾರೆ. ನರದೇವ ಭೂದೇವ ಎನಿಸಿ ಮೆರೆಯುವ ಪಾರ್ಥಿವ ಶರೀರವೂ ಕೊನೆಯಲ್ಲಿ ಕೊಳೆತರೆ ಕೃಮಿಮಯ. ನಾಯಿ ನರಿ ತೋಳಗಳು ತಿಂದರೆ ಮಲ, ಸುಟ್ಟರೆ ಬೂದಿಯಾಗುವುದು. ಅದನ್ನು ಜರೆಮರಣ ವರ್ಜಿತ ವೆಂಬಂತೆ ಕಾಣುತ್ತ ಪುನರ್ಜನ್ಮಗಳಲ್ಲಿಯೂ ಅಂಥದೇ ಶರೀರವನ್ನು ಪಡೆಯುವುದಕ್ಕಾಗಿ ಯಜ್ಞಗಳಲ್ಲಿ ಪಶುಗಳನ್ನು ಕೊಲ್ಲುತ್ತಾರೆ. ಭೂತದಯೆಯನ್ನು ಮರೆತು ಭೂತದ್ರೋಹ ಮಾಡಿ ನರಕ ಭಾಜನರಾಗುತ್ತಾರೆ. ಈ ಶರೀರವನ್ನು ಕೇವಲ ತನ್ನದೆಂಬಂತೆ ಕಂಡು ಮೋಹಪಡುತ್ತಾರೆ. ವಸ್ತುತಃ ಅದು ಉಳಿಯುವುದು ಅನ್ನದಾತನ ಅಧೀನ. ಅದು ಹುಟ್ಟುವುದು ತಂದೆತಾಯಿಗಳ ಅಧೀನ. ಧನಾರ್ಜನೆ ಮಾಡುವುದು ಜೀತ ಮಾಡಿಸಿಕೊಳ್ಳುವ ಅಥವಾ ಕ್ರಯಕ್ಕೆ ಕೊಂಡುಕೊಳ್ಳುವ ಶ್ರೀಮಂತನ ಅಧೀನ. ಕೊನೆಯಲ್ಲಿ ಸುಟ್ಟು ಬೂದಿಯಾಗುವಾಗ ಅಗ್ನಿಯ ವಶವಾಗುತ್ತದೆ. ಸುಡದಿದ್ದರೆ ತಿನ್ನುವ ನಾಯಿಯ ವಶವಾಗುತ್ತದೆ. ವಸ್ತುತಃ ಈ ಎಲ್ಲ ಅವಸ್ಥೆಗಳಲ್ಲಿಯೂ ಅದು ಅದನ್ನು ಪ್ರಕೃತಿಯಿಂದ ನಿರ್ಮಿಸಿ

ಪ್ರಕೃತಿಯಲ್ಲಿ ಲೀನಗೊಳಿಸುವ ಭಗವಂತನ ಅಧೀನವೇ ಆಗಿರುತ್ತದೆ. ಆದರೂ ಶರೀರಿ ತನ್ನ ಶರೀರ ತನ್ನದೆಂದು ಭ್ರಾಂತಿಯಿಂದ ಅದರ ಪೋಷಣೆಗಾಗಿ ಪ್ರಾಣಿಗಳನ್ನು ಹತ್ಯೆ ಮಾಡುತ್ತಾನೆ.

ಈ ಭ್ರಾಂತಿ ನಿರಸನವಾಗಬೇಕಾದರೆ ಕಣ್ಣು ತೆರೆಸುವ ಅಂಜನದಂಥ ದಾರಿದ್ರ್ಯವೆ ಉತ್ತಮವಾದ ಉಪಾಯ. ಮುಳ್ಳು ಚುಚ್ಚುವುದರಿಂದಾಗುವ ನೋವನ್ನು ತಾನು ಅನುಭವಿಸಿ ತಿಳಿದವನೆ ಆ ನೋವು ಇನ್ನೊಬ್ಬನಿಗೆ ಬಾರದಿರಲೆಂದು ಹಾರೈಸುತ್ತಾನೆ. ತನಗೆ ಬಂದ ನೋವು ಹರೀಚ್ಛೆಯಿಂದ ಬಂದಿತೆಂದು ತಪಸ್ಸೆಂಬ ಭಾವನೆಯಿಂದ ಅದನ್ನು ಹರಿಗೇ ಅರ್ಪಿಸುತ್ತಾನೆ. ದರಿದ್ರನು ಹೊಟ್ಟೆ ತುಂಬ ಅನ್ನ ಸಿಕ್ಕಿದರೆ ಸಾಕೆಂದು ಸುಮ್ಮನಿರುತ್ತಾನೆ. ಶ್ರೀಮಂತ ಎಲ್ಲ ಇಂದ್ರಿಯ ಸುಖಕ್ಕಾಗಿ ಪ್ರಾಣಿ ಹಿಂಸೆ ಮಾಡುತ್ತಾನೆ. ದರಿದ್ರನಿಗೆ ಅಹಂಕಾರವಿಲ್ಲದ್ದರಿಂದ ಅವನಿಗೆ ಸಜ್ಜನರ ಸಂಗ ದೊರಕುತ್ತದೆ. ಆ ಮೂಲಕ ಜ್ಞಾನ ಭಕ್ತಿ ವೈರಾಗ್ಯ ಅಪರೋಕ್ಷ ಮೋಕ್ಷ ಎಲ್ಲವೂ ಕರಗತವಾಗುತ್ತವೆ. ಧನಮದದಿಂದ ಕೊಬ್ಬಿ ದುಷ್ಟರಿಗೇ ಆಶ್ರಯ ನೀಡುವ ಶ್ರೀಮಂತರ ಬಳಿಗೆ ವಿರಕ್ತರಾದ ಸಾಧುಸಜ್ಜನರು ಬರುವುದೆ ಇಲ್ಲ. ಹೀಗಾಗಿ ಶ್ರೀಮಂತರಾದ ದುರ್ಜನರು ಯಾವ ಹಿತವನ್ನೂ ಸಾಧಿಸಿ ಕೊಳ್ಳಲಾರರು.

ಈ ನಲಕೂಬರ ಮಣಿಗ್ರೀವರು ಧನಮದದಿಂದ ಕುರುಡರಾಗಿ ಮದ್ಯಪಾನ ಸ್ತ್ರೀಸಂಗಗಳಿಂದ ಮನೋನಿಗ್ರಹ ವಿಲ್ಲದವರಾಗಿದ್ದಾರೆ. ಇನ್ನೊಬ್ಬರ ಮುಂದೆ ನಿಂತಿರುವಾಗಲೂ ತಾವು ನಗ್ನರಾಗಿರುವುದರ ಅರಿವೇ ಇಲ್ಲದವರಾಗಿದ್ದಾರೆ. ಅದರಿಂದ ದೇವಮಾನದ ನೂರು ವರ್ಷಗಳ ಕಾಲ ವೃಕ್ಷಗಳಾಗಿ ನಿಂತು ಪೂರ್ವಜನ್ಮ ಸ್ಮರಣೆಯಿಂದ ತಪಸ್ಸು ಮಾಡಲಿ. ಶ್ರೀಕೃಷ್ಣನ ಅನುಗ್ರಹದಿಂದ ದೇವತ್ವವನ್ನು ಹೊಂದಿ ಕೃಷ್ಣಭಕ್ತರಾಗಲಿ' ಎಂದು ಹೇಳಿ ನಾರದರು ನಾರಾಯಣಾಶ್ರಮಕ್ಕೆ ತೆರಳಿದರು.

ಮಹಾಭಗವದ್‌ಭಕ್ತರಾದ ನಾರದ ಮುನಿಗಳ ಶಾಪವಚನವನ್ನು ಸತ್ಯವಾಗಿಸುವುದಕ್ಕಾಗಿ ಬಾಲಕೃಷ್ಣ ತನ್ನ ಸೊಂಟಕ್ಕೆ ಕಟ್ಟಿದ್ದ ಒರಳಿನ ಸಮೇತವಾಗಿಯೆ ಮತ್ತಿ ಮರಗಳಿರುವಲ್ಲಿಗೆ ಮೆಲ್ಲನೆ ನಡೆದ. ಆ ಮರಗಳ ನಡುವೆ ತನಗೆ ನುಸುಳಲು ಮಾತ್ರ

ಸಾಲುವಷ್ಟು ಅವಕಾಶವಿದ್ದಿತು. ಅಲ್ಲಿ ನುಸುಳಿ ಮುಂದೆ ನಡೆದ. ಒರಳು ಕಲ್ಲು ಅಡ್ಡಲಾಗಿ ತಡೆದುಕೊಂಡಿತು. ಬಲವಾಗಿ ಸೆಳೆದ. ಆಗ ಮರಗಳು ಬೇರು ಕಿತ್ತುಕೊಂಡು ನೆಲಕ್ಕೆ ಉರುಳಿದುವು. ನಳಕೂಬರ ಮಣಿಗ್ರೀವರು ಅಗ್ನಿಯಂತೆ ಹೊಳೆಯುವ ದಿವ್ಯ ಶರೀರಗಳಿಂದ ವ್ಯಕ್ತರಾಗಿ ನಿಂತು ಕೃಷ್ಣನಿಗೆ ಕೈಮುಗಿದು ನುಡಿದರು-

'ಜಗತ್ತನ್ನು ಮಾತ್ರವಲ್ಲದೆ ಒರಳನ್ನು ಸೆಳೆಯುವುದರಿಂದಲೂ ಕೃಷ್ಣನೆನಿಸಿದ ಯೋಗೇಶ್ವರನೆ, ನೀನು ಜಗತ್ತಿಗೆ ಆದಿಯಾದ ಪರಮಪುರುಷ. ಪ್ರಪಂಚವೆಲ್ಲವೂ ನಿನ್ನ ಪ್ರತಿಮೆ. ಎಲ್ಲರ ಶರೀರ ಇಂದ್ರಿಯಗಳಿಗೆ ನಿಯಾಮಕ. ಸರ್ವಸಾಕ್ಷಿ, ನಿನ್ನನ್ನು ನೀನೂ ನಿನ್ನ ಭಕ್ತರೂ ಮಾತ್ರವೆ ಅರಿಯಬಲ್ಲರು. ಇಂಥ ನಿನಗೆ ಭಗವಾನ್ ವಾಸುದೇವನಿಗೆ ಇದೋ ನಮ್ಮ ನಮಸ್ಕಾರ. ಅಸಾಧ್ಯವಾದ ಮನೋ ನಿಗ್ರಹಾದಿ ಉಪಾಯಗಳಿಂದ ಮಾತ್ರ ಕಾಣಬಹುದಾದ ಅಂತರ್ಯಾಮಿ ರೂಪವಾದ ಅವತಾರಗಳು ಮತ್ತು ಹೊರಗೆ ಮತ್ಸ್ಯ ಕೂರ್ಮಾದಿ ಅವತಾರಗಳೆಂದು ಎರಡು ಬಗೆಯ ಅವತಾರಗಳುಳ್ಳವನು ನೀನು. ಇದೀಗ ಲೋಕಕ್ಷೇಮಕ್ಕಾಗಿ ಅವತರಿಸಿರುವ ಭಗವಾನ್ ವಾಸುದೇವನಿಗಿದೋ ನಮಸ್ಕಾರ. ಪೂಜ್ಯ ನಾರದರ ಅನುಗ್ರಹದಿಂದ ನಮಗೆ ನಿನ್ನ ದರ್ಶನ ಲಭಿಸಿತು. ನಾವು ನಿನ್ನ ದಾಸನಾದ ಶಿವನ ದಾಸರು. ಹೀಗೆ ಸದಾ ನಿನ್ನ ದಾಸಾನುದಾಸರಾಗಿರಲು ನಮಗೆ ಅನುಜ್ಞೆ ನೀಡು. ದೇವೋತ್ತಮ, ನಮ್ಮ ವಾಗಿಂದ್ರಿಯ ನಿನ್ನ ಗುಣಗಾನದಲ್ಲಿ, ಕಿವಿಗಳು ನಿನ್ನ ಕಥಾಶ್ರವಣದಲ್ಲಿ ಕೈಗಳು ನಿನ್ನ ಮನೆಕೆಲಸಗಳಲ್ಲಿ ಮನಸ್ಸು ನಿನ್ನ ಪಾದಸ್ಮರಣೆಯಲ್ಲಿ, ಶಿರ ನಿನಗೆ ಬಾಗುವುದರಲ್ಲಿ ಕಣ್ಣುಗಳು ನಿನ್ನ ಪ್ರತಿಮಾರೂಪರಾದ ಸಜ್ಜನರ ದರ್ಶನದಲ್ಲಿ ತೊಡಗಿರಲಿ.''

ಶ್ರೀಕೃಷ್ಣನೆಂದ, 'ಧನಮದದಿಂದ ಅಂಧರಾಗಿದ್ದ ನಿಮಗೆ ದಯಾಳುಗಳಾದ ನಾರದಮುನಿ ಶಾಪರೂಪದ ಅನುಗ್ರಹ ಮಾಡಿದ್ದು ನನಗೆ ಮೊದಲೇ ಗೊತ್ತಿತ್ತು. ನಾರದರಂಥ ಸಜ್ಜನರ ದರ್ಶನದಿಂದ ಸಂಸಾರ ಬಂಧನ ಕಳೆಯುತ್ತದೆ, ಸೂರ್ಯದರ್ಶನ

ದಿಂದ ಕತ್ತಲು ಕಳೆಯುವಂತೆ. ನೀವು ಬಯಸಿರುವ ಭಕ್ತಿಭಾವ ನನ್ನಲ್ಲಿ ನಿಮಗೆ ಉಂಟಾಗಿದೆ. ಆದರಿಂದ ನನ್ನಲ್ಲಿಯೇ ಮನಸ್ಸಿಟ್ಟು ಕುಬೇರಭವನಕ್ಕೆ ಹಿಂತಿರುಗಿರಿ.

ನಳಕೂಬರ ಮಣಿಗ್ರೀವರು ಶ್ರೀಕೃಷ್ಣನಿಗೆ ಪ್ರದಕ್ಷಿಣೆ ನಮಸ್ಕಾರ ಗಳನ್ನು ಮಾಡಿ ಅವನ ಅಪ್ಪಣೆ ಪಡೆದು ಉತ್ತರದಿಕ್ಕಿಗೆ ಪ್ರಯಾಣ ಮಾಡಿದರು.

❖

ಯಮಳಾರ್ಜುನ ಭಂಜನ ಕೃಷ್ಣನನ್ನು ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ.

ಕೃಷ್ಣಕೃಷ್ಣ ಮಹಾಯೋಗಿನ್ ತ್ವಮಾದ್ಯಃ ಪುರುಷಃ ಪರಃ।
ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ ॥ ೨೯ ॥

ಜಗತ್ತನ್ನು ತನ್ನ ಕಡೆಗೆ ಆಕರ್ಷಿಸುವುದರಿಂದ ಮಾತ್ರವಲ್ಲದೆ ಒರಳನ್ನು ಸೆಳೆಯುವುದರಿಂದಲೂ ಕೃಷ್ಣನೆನಿಸುವ ಯೋಗೇಶ್ವರನೆ, ನೀನು ಜಗತ್ತಿಗೇ ಆದಿಕಾರಣನಾದ ಪರಮ ಪುರುಷ. ಕಾರ್ಯಕಾರಣಾತ್ಮಕವಾದ ಈ ಪ್ರಪಂಚವೆಲ್ಲವೂ ನಿನ್ನ ಸೃಷ್ಟಿ ಅಥವಾ ಅಧಿಷ್ಠಾನ, ಪ್ರತಿಮೆ ಎಂದು ಬ್ರಹ್ಮಜ್ಞಾನಿಗಳು ತಿಳಿಯುತ್ತಾರೆ.

ಶ್ರೀಧರವ್ಯಾಖ್ಯಾನ ಪ್ರಕಾರ ವಿಶ್ವವು ಪರಬ್ರಹ್ಮನಲ್ಲಿ ಆರೋಪಿತವಾಗಿರುವುದ ರಿಂದ ಅದು ಅವನ ರೂಪ, ಆಕಾರ. ಸುದರ್ಶನ ವೀರರಾಘವ ವ್ಯಾಖ್ಯಾನಗಳ ಪ್ರಕಾರ ಪ್ರಪಂಚ ಪರಮಾತ್ಮನ ರೂಪ ಎಂದರೆ ಶರೀರ. ಶುಕದೇವ ವ್ಯಾಖ್ಯಾನ ಪ್ರಕಾರ ಪ್ರಪಂಚ ಪರಮಾತ್ಮನ ರೂಪ ಎಂದರೆ, ಸ್ವರೂಪದಿಂದ ಭಿನ್ನವಾದರೂ ಪರಮಾತ್ಮನಲ್ಲಿಯೇ ಹುಟ್ಟಿ ಲಯ ಹೊಂದುವುದರಿಂದ ಭೇದಾ ಭೇದವಿರುವುದರಿಂದ, ಅಭಿನ್ನ ಎಂದರ್ಥ. ವಲ್ಲಭವ್ಯಾಖ್ಯಾನ ಪ್ರಕಾರ ಪ್ರಪಂಚ ಪರಮಾತ್ಮನ ರೂಪ ಅಂದರೆ ಸ್ವರೂಪ ಅಥವಾ ನಿರೂಪಕ. ಜೀವಗೋಸ್ವಾಮಿ ವ್ಯಾಖ್ಯಾನ ಪ್ರಕಾರ ಪ್ರಪಂಚ ಪರಮಾತ್ಮನಿಗೆ ಅಧಿಷ್ಠಾನ ಅಥವಾ ಕಾರ್ಯ.

ಆದರೆ ಪರಮಾತ್ಮ ಪ್ರಪಂಚಕ್ಕಿಂತ ವಿಲಕ್ಷಣ, ಅತ್ಯಂತ ಭಿನ್ನನಾಗಿರುವುದರಿಂದ ಪ್ರಪಂಚಕ್ಕೆ ಕರ್ತನಾಗಿದ್ದಾನೆ ಹೊರತು ಉಪಾದಾನನಲ್ಲ. ಪ್ರಪಂಚ ಅವನಲ್ಲಿ ಆರೋಪಿತವೂ ಅಲ್ಲ, ಸತ್ಯ. ಅದು ಅವನ ಶರೀರವೂ ಅಲ್ಲ, ಉಪನಿಷತ್ತಿನಲ್ಲಿ

[೧]'ಯಸ್ಯ ಪೃಥಿವೀ ಶರೀರಂ' ಎಂದು ಮುಂತಾಗಿ ಶರೀರವೆಂದು ವ್ಯವಹರಿಸಿದ್ದರೂ ಅದು ಗೌಣವ್ಯವಹಾರ. ಶರೀರದಂತೆ ಅಧೀನವಾಗಿದೆ ಎಂದು ವಿವಕ್ಷಿತವಾಗಿದೆ. ಸರ್ವಾತ್ಮನಾ ಅಧೀನತ್ವವನ್ನೇ ಶರೀರತ್ವವೆಂದು ಇನ್ನೊಂದು ಹೆಸರಿನಿಂದ ರಾಮಾನುಜರು ಕರೆದಿದ್ದಾರೆ.

ಅದರಿಂದ ವಾಮನಪುರಾಣದ ಆಧಾರದಿಂದ ಪರಮಾತ್ಮನ ರೂಪ ಎಂದರೆ 'ತತ್ ಸೃಷ್ಟ್ವಾ ತದೇವಾನುಪ್ರಾವಿಶತ್' ಎಂದು ಉಪನಿಷತ್ತು ಹೇಳುವುದರಿಂದ ಪ್ರಪಂಚವು ಪರಮಾತ್ಮನ ಸೃಷ್ಟಿ. ನಿರೂಪ್ಯತೇ ಇತಿ ರೂಪಂ. ಪ್ರಪಂಚದಲ್ಲಿ ಅನುಪ್ರವೇಶ ಮಾಡಿರುವುದರಿಂದ ಅವನ ಸನ್ನಿಧಾನಪಾತ್ರವಾಗಿದೆ ಪ್ರತಿಮೆ ಯಂತಿದೆ. ಅದರಿಂದಲೂ ರೂಪವೆನಿಸಿದೆ. ಅಥವಾ 'ರೂಪ ಪ್ರತಿಷ್ಠಾಯಾಂ' ಎಂದು ಧಾತ್ವರ್ಥವಿರುವುದರಿಂದ 'ರೂಪ್ಯತೇ ಇತಿ ರೂಪಂ' ಪ್ರತಿಷ್ಠೆಯನ್ನು ಅಂದರೆ ಸ್ಥಿತಿಯನ್ನು ಪರಮಾತ್ಮನಿಂದಲೇ ಪಡೆಯುವ ಪ್ರಪಂಚ ಅವನ ರೂಪವೆನಿಸಿದೆ.

ರೂಪ್ಯತ್ವಾತ್ತು ಜಗದ್ ರೂಪಂ ವಿಷ್ಣೋಃ ಸಾಕ್ಷಾತ್ ಸುಖಾತ್ಮಕಂ ।
ನಿತ್ಯಪೂರ್ಣಂ ಸಮುದ್ದಿಷ್ಟಂ ಸ್ವರೂಪಂ ಪರಮಾತ್ಮನಃ ॥
ಇತಿ ವಾಮನೇ ॥

'ಜಗತ್ತು ಪರಮಾತ್ಮನ ಸೃಷ್ಟಿಯಾದ್ದರಿಂದ ಅವನ ಸನ್ನಿಧಾನ ಪಾತ್ರವಾದ್ದರಿಂದ ಅವನಿಂದ ಸ್ಥಿತಿಯನ್ನು ಹೊಂದುವುದರಿಂದ ಪರಮಾತ್ಮನ ರೂಪವೆನಿಸಿದೆ. ಹೊರತು ಸಾಕ್ಷಾತ್ ರೂಪವಲ್ಲ. ಸಾಕ್ಷಾತ್ ರೂಪವು ನಿತ್ಯಪೂರ್ಣವಾದ ಸುಖಾತ್ಮಕವಾದ ಅವನ ಸ್ವರೂಪವೆ' ಎಂದು ವಾಮನ ಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ಯಮಳಾರ್ಜುನ ಭಂಜನ ಶ್ರೀಕೃಷ್ಣನನ್ನು . ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ-

ತ್ವಮೇಕಃ ಸರ್ವಭೂತಾನಾಂ ದೇಹ ಆತ್ಮೇಂದ್ರಿಯೇಶ್ವರಃ ।
ತ್ವಮೇವ ಕಾಲೋ ಭಗವಾನ್ ವಿಷ್ಣುರವ್ಯಯ ಈಶ್ವರಃ ॥ ೩೦ ॥

---

೧ ಯಸ್ಯ ಚೇತನಸ್ಯಯದ್‌ದ್ರವ್ಯಂ ಸರ್ವಾತ್ಮನಾ ಸ್ವಾರ್ಥೇ ನಿಯಂತುಂ ಧಾರಯಿತುಂ ಶಕ್ಯಂ, ತಚ್ಛೇಷತ್ವೈಕ ಸ್ವರೂಪಂ ಚ, ತತ್ ತಸ್ಯ ಶರೀರಂ ॥

ಹೇ ಕೃಷ್ಣ, ನೀನು ಸ್ವಗತಭೇದರಹಿತ. ಎಲ್ಲ ಜೀವಿಗಳ ಶರೀರದಲ್ಲಿ ನಿಯಾಮಕನಾಗಿ ನಿಂತು ಅವರ ಮನ ಇಂದ್ರಿಯಗಳನ್ನೂ ನಿಯಂತ್ರಿಸುವವನು. ಸಕಲಗುಣ ಪರಿಪೂರ್ಣ. ನಾಶರಹಿತ, ಜಗದೊಡೆಯರಾದ ಬ್ರಹ್ಮ ರುದ್ರಾದಿಗಳಿಗಿಂತಲೂ ಉತ್ತಮನೆನಿಸಿದವನು ಭಗವಾನ್ ವಿಷ್ಣು ನೀನೆ.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನಕಾರರು 'ದೇಹಾಸ್ವಾತ್ಮೇಂದ್ರಿಯೇಶ್ವರಃ' ಎಂದು ಅಪಪಾಠವಿಟ್ಟುಕೊಂಡಿದ್ದಾರೆ. ಶ್ರೀಮದಾಚಾರ್ಯರು 'ದೇಹೇ' ಎಂಬ ಒಂದು ಶಬ್ದದಿಂದಲೇ 'ದೇಹ ಆತ್ಮೇಂದ್ರಿಯೇಶ್ವರಃ' ಎಂದೇ ಮೂಲಪಾಠವೆಂದೂ, ಅದರಲ್ಲಿ 'ದೇಹೇ' ಎಂದು ಪದವಿಭಾಗವೆಂದೂ ತಿಳಿಸಿದ್ದಾರೆ. ದೇಹದಲ್ಲಿ ನಿಯಾಮಕನಾಗಿ ನೆಲೆಸಿದ್ದಾನೆ. ಅದು ಕೇವಲ ಪಿಶಾಚಿಗಳಂತೆ ಆವೇಶವಲ್ಲ, ಜೀವಾತ್ಮನನ್ನೂ ಮನಸ್ಸು ಇಂದ್ರಿಯಗಳನ್ನೂ ನಿಯಂತ್ರಿಸುತ್ತ ನೆಲೆಸಿದ್ದಾನೆ ಎಂದು ಅದರ ಅರ್ಥ. 'ದೇಹಾಸ್ವಾತ್ಮ' ಎಂಬ ಪಾಠದಲ್ಲಿ ದೇಹ ಪ್ರಾಣ ಮನಸ್ಸು ಇಂದ್ರಿಯಗಳಿಗೆ ನಿಯಾಮಕನೆಂದು ಶ್ರೀಧರವ್ಯಾಖ್ಯಾನ ಪ್ರಕಾರ ವಿವರಣೆ. ಇಲ್ಲಿ 'ಆತ್ಮ' ಎಂದರೆ ಜೀವಾತ್ಮ ಎಂದು ವಿವರಣೆ ನೀಡಬಹುದಿತ್ತು. ಅದ್ವೈತಕ್ಕೆ ಭಂಗ ಬರುತ್ತಿರಲಿಲ್ಲ. ಪರಮಾತ್ಮ ಜೀವಾತ್ಮನಿಗೆ ನಿಯಾಮಕನೆಂದು ಅವರೂ ಒಪ್ಪುತ್ತಾರೆ. 'ಇಂದ್ರಿಯ' ಶಬ್ದದಿಂದಲೆ ಮನಸ್ಸನ್ನೂ ಗ್ರಹಿಸಲು ಶಕ್ಯವಿರುವಾಗ 'ಆತ್ಮ' ಶಬ್ದದಿಂದ ಮನಸ್ಸನ್ನು ಇಟ್ಟುಕೊಂಡು ಜೀವಾತ್ಮನನ್ನು ಕೈಬಿಟ್ಟಿದ್ದಾರೆ. ಏಕೆ?

ಸುದರ್ಶನಸೂರಿಯ ಶುಕಪಕ್ಷೀಯ ವ್ಯಾಖ್ಯಾನದಲ್ಲಿ 'ದೇಹೀ ಸ್ವಾತ್ಮೇಂದ್ರಿಯೇಶ್ವರಃ' ಎಂದು ಪಾಠವಿಟ್ಟುಕೊಂಡು 'ದೇಹೀ' ಎಂದರೆ 'ದೇಹದೊಳಗೆ ಹೃದಯ ಕಮಲದಲ್ಲಿ ಜೀವಶರೀರಕನಾಗಿ ನೆಲೆಸಿದವನು, ಪರಮಾತ್ಮ' ಎಂದು ಕ್ಲೇಶದಿಂದ ವಿವರಣೆ ನೀಡಿದ್ದಾರೆ. 'ಸರ್ವಭೂತಾನಾಂ ದೇಹೀ' ಎಂದು ಹೇಳುವಾಗ ಈ ಅರ್ಥ ಪ್ರತೀತವಾಗುವುದಿಲ್ಲ. ಅದರಿಂದ 'ಸರ್ವಭೂತಾನಾಂ ದೇಹೇ' ಎಂದು ಅನ್ವಯ ಸಿಗುವುದಕ್ಕೆ 'ದೇಹ ಆತ್ಮೇಂದ್ರಿಯೇಶ್ವರಃ' ಎಂಬ ಪಾಠವೇ ಹೃದಯಂಗಮವೆನ್ನಬಹುದು.

'ತ್ವಮೇವ ಕಾಲೋ ಭಗವಾನ್' ಎಂಬಲ್ಲಿ 'ಕಾಲ' ಶಬ್ದಾರ್ಥ ಶ್ರೀಧರವ್ಯಾಖ್ಯಾನದಲ್ಲಿ ಭಗವಂತನ ಲೀಲೆ-

ಯತೋ ಭಗವಾನೀಶ್ವರೋ ವಿಷ್ಣುಸ್ತ್ವಂ
ಅತಃ ಕಾಲೋ ನಾಮ ತವ ಲೀಲಾ ॥

ಆದರೆ 'ತ್ವಂ ಕಾಲಃ' ಎಂದು ಅಭೇದಾನ್ವಯ ಕೂಡುವುದಿಲ್ಲ. ವೀರರಾಘವ

ವ್ಯಾಖ್ಯಾನದಲ್ಲಿ ನಿಖಿಲ ಜಗತ್ಕಾರಣತ್ವ ಜಗಚ್ಛರೀರಕತ್ವಗಳಿಂದಾಗಿ ಅಭೇದಾನ್ವಯ ಕೂಡುತ್ತದೆ ಎಂದ್ದಿದಾರೆ. ಕಾರಣತ್ವವೆಂದರೆ ಉಪಾದಾನಕಾರಣತ್ವ, ಅದರಿಂದ ಅಭೇದ ಎಂದು. ಆದರೆ ಕಾಲ ಎಂಬ ಸಾಮಾನ್ಯ ಶಬ್ದದಿಂದ ಅಖಂಡವಾದ ಅನಾದಿನಿತ್ಯವಾದ ಮಹಾಕಾಲ ಉಕ್ತವಾಗಿದೆ. ಅದಕ್ಕೆ ಉಪಾದಾನಕಾರಣವಿಲ್ಲ. 'ಕಾಲವು ಭಗವಂತನ ಶರೀರ' ಎನ್ನುವ ಅಭಿಪ್ರಾಯದಿಂದಲೂ ಅಭೇದಾನ್ವಯ ವನ್ನು ಹೇಳಲಾಗುವುದಿಲ್ಲ. ಏಕೆಂದರೆ ಶರೀರ ಶರೀರಿಗಳಿಗೆ ಅಭೇದವಿಲ್ಲ. ಅಭೇದಾಧ್ಯಾಸವೆಂದು ವಿಶಿಷ್ಟಾದ್ವೈತ ಮತ. ಅಧ್ಯಾಸವೆಂದರೆ ಭ್ರಮೆ. ಇದು ಜೀವರಿಗೆ ಬಂದೀತು. ಪರಮಾತ್ಮನಿಗೆ ಬರಲಾರದು. 'ಕಾಲ' ಎಂದೊಡನೆ 'ಕಾಲ ಶರೀರಿ' ಎಂದು ತಿಳಿಯುವುದೂ ಕಂಡಿಲ್ಲ. ಹೀಗಾಗಿ ಯಾವ ರೀತಿಯಿಂದಲೂ 'ತ್ವಂ ಕಾಲಃ' ಎಂದು ಅಭೇದಾನ್ವಯ ಕೂಡುವುದಿಲ್ಲ.

ಕಾಲ ಶಬ್ದಕ್ಕೆ ವ್ಯಾಕರಣ ರೀತಿಯಿಂದಲೂ ವಾಮನಪುರಾಣದ ಆಧಾರ ದಿಂದಲೂ ಸರ್ವಗುಣಪೂರ್ಣ ಎಂಬ ವಿಶೇಷ ಅರ್ಥ ಸಿಗುತ್ತಿರುವುದರಿಂದ ಅನ್ವಯ ಕ್ಲೇಶವೇ ಇಲ್ಲ ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ದೇಹೇ ।

ವಿಷ್ಣುಃ ಸರ್ವಗುಣೋದ್ರೇಕಾತ್ ಕಾಲ ಇತ್ಯಭಿಧೀಯತೇ ॥

ಇತಿ ಚ ॥

'ದೇಹ ಆತ್ಮೇಂದ್ರಿಯೇಶ್ವರಃ' ಎಂಬಲ್ಲಿ 'ದೇಹಃ' ಎಂದು ಪದವಿಭಾಗವೆ ಅಥವಾ 'ದೇಹೇ' ಎಂದೆ? ಎಂದು ಸಂಶಯ ಬೇಡ, 'ದೇಹೇ' ಎಂದು ಪದವಿಭಾಗ. ದೇಹದಲ್ಲಿ ಜೀವಾತ್ಮ, ಮನ, ಇಂದ್ರಿಯಗಳಿಗೆ ನಿಯಾಮಕನಾಗಿ ನೆಲೆಸಿರುವವನು ನೀನೆ ಎಂದರ್ಥ.

'ಸರ್ವಗುಣಪೂರ್ಣನಾದ್ದರಿಂದ ವಿಷ್ಣು 'ಕಾಲ' ಎನಿಸುತ್ತಾನೆ' ಎಂದೂ ವಾಮನ ಪುರಾಣದಲ್ಲಿ ಉಕ್ತವಾಗಿದೆ.

'ಕಲ ಭೇದನೇ, ಕಲ ಬಂಧನೇ, ಕಲ ಜ್ಞಾನೇ ಕಲ ಕಾಮಧೇನುಃ' ಎಂದು ಧಾತುಪಾಠವಿದೆ. 'ಕಲ ಧಾತು ಭೇದನ ಬಂಧನ ಜ್ಞಾನ ಎಂದು ಮಾತ್ರವಲ್ಲದೆ ಬೇಕಾದ ಎಲ್ಲ ಅರ್ಥವನ್ನೂ ಕೊಡುವುದರಲ್ಲಿ ಕಾಮಧೇನುವಿನಂತಿದೆ' ಎಂದು ಇದರ ಅರ್ಥ. ಅದರಿಂದ ಸಕಲಗುಣಗಳನ್ನೂ ಈ ಕಲಧಾತು ಹೇಳಬಲ್ಲದು. ಸಕಲಗುಣಪರಿಪೂರ್ಣನಾದ ಭಗವಂತನನ್ನು ಕಾಲ ಶಬ್ದ ಹೇಳಬಲ್ಲದು.

❖ ❖ ❖

ಯಮಳಾರ್ಜುನ ಭಂಜನ ಕೃಷ್ಣನನ್ನು ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ-

ತ್ವಂ ಮಹಾನ್ ಪ್ರಕೃತಿಃ ಸೂಕ್ಷ್ಮಾ ರಜಃಸತ್ವತಮೋಮಯೀ ।
ತ್ವಮೇವ ಪುರುಷೋऽಧ್ಯಕ್ಷಃ ಸರ್ವಕ್ಷೇತ್ರವಿಕಾರವಿತ್ ॥ ೩೧ ॥

ಹೇ ಕೃಷ್ಣ, ನೀನೇ ಮಹತ್ತತ್ವಕ್ಕೆ ನಿಯಾಮಕ, ರಜೋಗುಣ ತಮೋಗುಣ ಸತ್ವಗುಣಮಯವಾದ ಸೂಕ್ಷ್ಮ ಪ್ರಕೃತಿಗೂ ನಿಯಾಮಕ. ಎಲ್ಲ ಶರೀರ ಗಳಲ್ಲಿಯೂ ಇಂದ್ರಿಯಗಳ ಚಟುವಟಿಕೆಗಳನ್ನು ನೋಡಿಕೊಳ್ಳುವವನು. ಸರ್ವಸಾಕ್ಷಿ, ಪರಮಪುರುಷ ನೀನೆ.

ಇಲ್ಲಿ ಶ್ರೀಧರವ್ಯಾಖ್ಯಾನ ಪ್ರಕಾರ ಭಗವಂತನ ಶಕ್ತಿ ಪ್ರಕೃತಿ. ಅಂಶ ಜೀವ, ಕಾರ್ಯ ಮಹತ್ತತ್ವ, ಅಂದರೆ ಪ್ರಕೃತಿಯಿಂದ ಮಹತ್ತತ್ವವನ್ನು ಭಗವಂತನೆ ಸೃಜಿಸುತ್ತಾನೆ. ಹೀಗಾಗಿ ಭಗವಂತನೇ ಪ್ರಕೃತಿ ಪುರುಷ ಮಹತ್ತತ್ವವೆಲ್ಲವೂ ಎಂದು ಅಭೇದಾನ್ವಯ ಕೂಡುತ್ತದೆ. ವೀರರಾಘವ ವ್ಯಾಖ್ಯಾನ ಪ್ರಕಾರ 'ನೀನು ಮಹತ್ತತ್ವ' ಎಂದರೆ ನೀನು ಮಹತ್ತತ್ವಕ್ಕೆ ಕಾರಣ ಮತ್ತು ಮಹತ್ತತ್ವ ಶರೀರಿ. ಆದರಿಂದ ಅಭೇದಾನ್ವಯ. 'ನೀನು ಪ್ರಕೃತಿ, ನೀನು ಜೀವ' ಎನ್ನುವ ಅಭೇದವು ಶರೀರ ಶರೀರಿಭಾವದಿಂದ ಕೂಡುತ್ತದೆ.

ಆದರೆ ಪ್ರಕೃತಿ ಹೇಗೆ ಶಕ್ತಿ? ಪುರುಷ ಹೇಗೆ ಅಂಶ? ಮಹತ್ತತ್ವ ಹೇಗೆ ಕಾರ್ಯ? ಪ್ರಕೃತಿ ಜೀವರು ಹೇಗೆ ಶರೀರರೂಪರು? ಎನ್ನುವುದೆಲ್ಲ ವಿವಾದಾಸ್ಪದ ವಾಗಿದೆ. ಅಭೇದಾನ್ವಯಕ್ಕೆ ಒಂದೊಂದು ಕಡೆ ಒಂದೊಂದು ನಿಯಾಮಕ ವೆಂದಂತಾಯಿತು. ಶ್ರೀಮದಾಚಾರ್ಯರು ಸರ್ವರಿಗೂ ಸಂಮತವಾಗುವಂತೆ ಪ್ರಮಾಣ ಪುರಃಸರವಾಗಿ ಒಂದೇ ನಿಯಾಮಕವನ್ನು ಹೇಳುತ್ತಿದ್ದಾರೆ-

ಪ್ರಕೃತ್ಯಾದೇಸ್ತದ್ವಶತ್ವಾತ್ ಪ್ರಕೃತ್ಯಾದಿರುದೀರ್ಯತೇ ।
ಯಥಾ ರಾಜಾ ಭೃತ್ಯಕೃತಾತ್ ಸ್ವಯಂ ಕರ್ತೇತ್ಯುದೀರ್ಯತೇ ।
ಯಥಾ ದೇಹಂ ಸ್ವತಂತ್ರತ್ವಾತ್ ಸ್ವಯಮಿತ್ಯಾಹುರಂಜಸಾ ॥
ಇತಿ ಪಾದ್ಮೇ ॥

ಅಭೇದಾನ್ವಯಕ್ಕೆ ನಿಯಾಮಕವೇನೆಂಬುದನ್ನು ಪದ್ಮಪುರಾಣ ಹೇಳಿಬಿಟ್ಟಿದೆ- 'ಪ್ರಕೃತ್ಯಾದಿಗಳು ಭಗವಂತನ ಅಧೀನವಾದ್ದರಿಂದ 'ಭಗವಂತನೇ ಪ್ರಕೃತಿ, ಪ್ರಕೃತಿಯೇ ಭಗವಂತ' ಎಂದು ಅಭೇದ ವ್ಯವಹಾರವಿದೆ. ಭೃತ್ಯ ಸಂಪಾದಿಸಿದ

ಯಶಸ್ಸನ್ನು ಸ್ವತಃ ರಾಜನೆ ಸಂಪಾದಿಸಿದನೆಂದು 'ರಾಜಾ ಜಯೀ' ಎನ್ನುತ್ತಾರೆ. ದೇಹ ತನ್ನ ಅಧೀನದಲ್ಲಿದೆ ಎಂಬ ಅಭಿಪ್ರಾಯದಿಂದ ದೇಹವನ್ನು ತಾನೇ ಎನ್ನುತ್ತಾರೆ.'

ಪುರಾಣಕಾರರು ಭಾಗವತದಲ್ಲಿ ಮಾಡಿರುವ ವ್ಯವಹಾರಕ್ಕೆ ನಿಯಾಮಕವನ್ನು ಅವರೇ ಪದ್ಮಪುರಾಣದಲ್ಲಿ ಹೇಳಿರುವುದು ಗಮನಾರ್ಹವಾಗಿದೆ.

❖❖❖

ಯಮಳಾರ್ಜುನಭಂಜನ ಕೃಷ್ಣನನ್ನು ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ-

ಗೃಹ್ಯಮಾಣೈಸ್ತ್ವಮಗ್ರಾಹ್ಯೋ ವಿಕಾರೈಃ ಪ್ರಾಕೃತೈರ್ಗುಣೈಃ।
ಕೋ ನ್ವಿಹಾರ್ಹತಿ ವಿಜ್ಞಾತುಂ ಪ್ರಾಕ್ಸಿದ್ಧಂ ಗುಣಸಂಸ್ಥಿತೇಃ ॥ ೩೨ ॥

ಹೇ ಕೃಷ್ಣ, ನಿನ್ನನ್ನು ನೀನೇ ಅರಿಯಬಲ್ಲೆ. ನಿನ್ನ ಅನುಗ್ರಹದಿಂದ ಭಕ್ತರೂ ಅರಿಯಬಲ್ಲರು. ಬೇರೆಯವರು ಅರಿಯರು. ಪ್ರಾಕೃತವಾದ ತ್ರಿಗುಣಾತ್ಮಕವಾದ ಇಂದ್ರಿಯ ವೃತ್ತಿಗಳಿಗೆ ಗೋಚರನಾಗದ ಸ್ವಭಾವದವನು ನೀನು. ತ್ರಿಗುಣಾತ್ಮಕವಾದ ಜಗತ್ತಿನ ಉತ್ಪತ್ತಿಗೂ ಮೊದಲು ಇದ್ದ ನಿನ್ನನ್ನು ನಿನ್ನ ಅನುಗ್ರಹವಿಲ್ಲದೆ ಕೇವಲ ತ್ರಿಗುಣಾತ್ಮಕ ಇಂದ್ರಿಯಗಳ ಸಹಾಯದಿಂದ ಯಾರು ತಿಳಿಯಬಲ್ಲ?

[೧]ಇಲ್ಲಿ ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತದೆ- 'ಪ್ರಕೃತಿ ಮಹತ್ತತ್ವ ಮುಂತಾದುವೆಲ್ಲ ನಾನೇ ಆಗಿರುವೆನೆನ್ನುವುದಾದರೆ ಘಟಾದಿಗಳ ಜ್ಞಾನವಿರುವಾಗ ನನ್ನ ಜ್ಞಾನವೇಕೆ ಇಲ್ಲ? ಇದೆ ಎನ್ನುವುದಾದರೆ ಎಲ್ಲರೂ ಬ್ರಹ್ಮಜ್ಞಾನಿಗಳೆನಿಸಬೇಕಾಯಿತು' ಎಂದರೆ ಹೇಳುತ್ತಾರೆ, 'ಬುದ್ಧಿ ಅಹಂಕಾರ ಇಂದ್ರಿಯಾದಿಗಳೆಲ್ಲವೂ ದೃಶ್ಯವಾಗಿವೆ. ದೃಶ್ಯವಾಗಿಯೇ ಇರುವ ಅವುಗಳಿಗೆ ದೃಷ್ಟೃವಾದ ನಿನ್ನನ್ನು ನೋಡಲಾಗದು. ಮತ್ತು ಜೀವಾದಿಗಳ ಉತ್ಪತ್ತಿಗಿಂತ ಮೊದಲೇ ಸ್ವಪ್ರಕಾಶವಾಗಿ

---

೧ ನನ್ವಹಮೇವ ಚೇತ್ ಸರ್ವಂ ತರ್ಹಿ ಘಟಾದಿಜ್ಞಾನೇ ಮಜ್ಜ್ಞಾನಂ ಕಿಂ ನ ಭವತಿ? ಭವತೀತಿ ಚೇತ್ ಸರ್ವೋಽಪಿ ಬ್ರಹ್ಮವಿತ್ ಸ್ಯಾದತ ಆಹತುಃ ಗೃಹ್ಯಮಾಣೈರಿತಿ । ದೃಶ್ಯತ್ವೇನ ವರ್ತಮಾನೈರ್ಬುದ್ಧ್ಯಹಂಕಾರೇಂದ್ರಿಯಾದಿಭಿರ್ದ್ರಷ್ಟಾ ತ್ವಂ ನ ಗೃಹ್ಯಸ ಇತಿ ಭಾವಃ। ನನು ತರ್ಹಿ ಜೀವೋ ಜಾನಾತು ನೈವೇತ್ಯಾಹತುಃ ಕೋನ್ವಿಹೇತಿ । ಜೀವಾದ್ಯುತ್ಪತ್ತೇಃ ಪ್ರಾಗೇವ ಸ್ವಪ್ರಕಾಶತಯಾ ಸಿದ್ಧಂ ತ್ವಾಂ ಕೋ ವಾ ಜಾನಾತಿ? ಗುಣ ಸಂವೃತೋ ದೇಹಾದ್ಯಾವೃತಃ।
-ಶ್ರೀಧರಃ

ಸಿದ್ಧನಾಗಿರುವ ನಿನ್ನನ್ನು ದೇಹಾದಿಯುಕ್ತನಾದ ಯಾವ ಜೀವನು ತಾನೆ ತಿಳಿಯಬಲ್ಲ?' ಎಂದು.

ಇಲ್ಲಿ ನಳಕೂಬರ ಮಣಿಗ್ರೀವರಾಡುವ ಮಾತು ಸ್ವವ್ಯಾಹತ. ಶ್ರೀಕೃಷ್ಣನನ್ನು ಕಣ್ಣಾರೆ ಕಂಡು ಸ್ತೋತ್ರ ಮಾಡುತ್ತಿದ್ದಾರೆ, ಕಾಣುತ್ತಿಲ್ಲ ಎನ್ನುತ್ತಿದ್ದಾರೆ.

ಹಿಂದೆ (ಅ.೩. ಶ್ಲೋ-೩೬) ಹೇಳಿದಂತೆ ಘಟಾದಿಜ್ಞಾನವೂ ಬ್ರಹ್ಮಜ್ಞಾನವೆ. ಆದರೂ ಘಟಜ್ಞಾನಿಯನ್ನು ಬ್ರಹ್ಮಜ್ಞಾನಿ ಎನ್ನುವುದಿಲ್ಲ. ಪ್ರಪಂಚಭ್ರಮವನ್ನು ಕಳೆವ ಬ್ರಹ್ಮಾಪರೋಕ್ಷ ಉಳ್ಳವನನ್ನೇ ಬ್ರಹ್ಮಜ್ಞಾನಿ ಎನ್ನುತ್ತಾರೆ ಎಂದು ಸಮಾಧಾನವನ್ನು ಹೇಳಲು ಬರುವಾಗ ಯಾರಿಗೂ ಬ್ರಹ್ಮಜ್ಞಾನವೇ ಇಲ್ಲ ಎಂದು ಸಾಧಿಸುವುದು ವ್ಯರ್ಥ. ಅದ್ವೈತಕ್ಕೆ ವಿರುದ್ಧವೂ ಆಗಿದೆ. ಏಕೆಂದರೆ, 'ದೃಶ್ಯವಾಗಿಯೇ ಇರುವ ಬುದ್ಧಿ ಮನಸ್ಸು ಇಂದ್ರಿಯಾದಿಗಳು ದ್ರಷ್ಟೃವಾದ ನಿನ್ನನ್ನು ಗ್ರಹಿಸಿ ದ್ರಷ್ಟೃವೆನಿಸುವುದು ಶಕ್ಯವಿಲ್ಲ. ಶ್ರೋತ್ರೇಂದ್ರಿಯದಿಂದ ಗ್ರಾಹ್ಯವಾದ ಶಬ್ದ ಗ್ರಾಹಕವಾದ ಶ್ರೋತ್ರೇಂದ್ರಿಯವನ್ನು ಗ್ರಹಿಸಲಾರದು' ಎನ್ನುವುದು ಅಸಂಗತ. ~~ಶ್ರೋತ್ರೇಂದ್ರಿಯದಿಂದ ಶಬ್ದ ಗ್ರಾಹ್ಯವಾಗುವುದರಿಂದಲೆ ಆ ಗ್ರಹಣಕ್ಕೆ~~ ಕಾರಣವಾದ ಗ್ರಾಹಕವಾದ ಶ್ರೋತ್ರೇಂದ್ರಿಯವು ಅನುಮಾನದಿಂದ ತಿಳಿದು ಬರುತ್ತದೆ. ಎಂದು ಹಿಂದೆ (೪.೧೮) ಶ್ರೀಧರ ವ್ಯಾಖ್ಯಾನವೇ ಹೇಳಿದೆ.

'ಜೀವಾದಿಗಳ ಉತ್ಪತ್ತಿಗಿಂತ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವ ನಿನ್ನನ್ನು ಅನಂತರ ದೇಹಾದಿ ಯುಕ್ತನಾಗಿ ಉತ್ಪನ್ನನಾಗುವ ಯಾವ ಜೀವನು ತಾನೆ ತಿಳಿಯಬಲ್ಲ?' ಎನ್ನುವುದೂ ಸರಿಯಲ್ಲ. ಸ್ವಪ್ರಕಾಶನಾದ ಪರಮಾತ್ಮನನ್ನು ಜೀವ ತಿಳಿಯಲೇಬೇಕು. ಏಕೆಂದರೆ 'ಜೀವೋ ಬ್ರಹ್ಮೈವ ನಾಪರಃ' ಜೀವ ಪರಮಾತ್ಮನಿಗಿಂತ ಬೇರೆಯಲ್ಲ. 'ಸ್ವ' ಪ್ರಕಾಶ ಎಂದರೆ ತನ್ನಿಂದ ಮಾತ್ರವಲ್ಲದೆ ತನ್ನಿಂದ ಬೇರೆಯಲ್ಲದ ಜೀವನಿಂದಲೂ ತಾನು ಗ್ರಾಹ್ಯನೆ. ಹಾಗೇ ಅದ್ವೈತ ಒಪ್ಪಿದೆ. ಅದರಿಂದ ಯಾವ ಜೀವನು ತಾನೆ ತಿಳಿಯಬಲ್ಲ ಎಂದರೆ ಎಲ್ಲ ಜೀವರೂ ತಿಳಿಯುತ್ತಾರೆ ಎನ್ನಬೇಕಾಗುತ್ತದೆ.

'ಜೀವೋತ್ಪತ್ತಿಗಿಂತ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವವನು ಪರಮಾತ್ಮ' ಎನ್ನುವುದೂ ಅದ್ವೈತಕ್ಕೆ ವಿರುದ್ಧ. 'ಷಡಸ್ಮಾಕಮನಾದಯಃ' ಎಂಬಂತೆ ಜೀವ ಅನಾದಿ.

ಈ ಆಕ್ಷೇಪಕ್ಕೆ ಶ್ರೀಧರವ್ಯಾಖ್ಯಾನ ಹೀಗೆ ಉತ್ತರ ನೀಡಬಹುದು- 'ಜೀವೋಪಾಧಿ ಅನಾದಿಯಾದ ಅವಿದ್ಯೆ, ಅದರಿಂದ ಜೀವ ಅನಾದಿ ಎಂದು ಏಕಜೀವಮತ. ಅದಕ್ಕನುಸಾರವಾಗಿ ಜೀವ ಅನಾದಿಯಾದರೂ, ಸಾದಿಯಾದ

ಅಂತಃಕರಣವೇ ಜೀವೋಪಾಧಿ ಎಂಬ ಅನೇಕಜೀವವಾದದಲ್ಲಿ ಜೀವನಿಗೆ ಉತ್ಪತ್ತಿ ಇದೆ. ಈಶ್ವರನು ಮಾತ್ರ ಅನಾದಿ ಮಾಯೋಪಾಧಿಕನಾದ್ದರಿಂದ ಜೀವೋತ್ಪತ್ತಿಗಿಂತ ಮೊದಲೇ ಇದ್ದಾನೆ' ಎಂದು.

ಆದರೆ ಈ ವಾದದಲ್ಲಿಯೂ ಅಂತಃಕರಣದ ಸ್ವಭಾವವೇ ವಸ್ತುಗಳನ್ನು ಗ್ರಹಿಸುವುದಾದ್ದರಿಂದ, ಅದರಲ್ಲಿ ಉಂಟಾಗುವ ಚರಮವೃತ್ತಿಯೇ ಮೋಕ್ಷಕಾರಣವಾದ್ದರಿಂದ, ಅದು ತಾನು ಗ್ರಹಿಸುವ ವಸ್ತುವಿಗಿಂತ ಮೊದಲಿರಲಿ ಕಡೆಯಲ್ಲಾದರೂ ಬರಲಿ, ತನ್ನ ಸ್ವಭಾವದಂತೆ ಗ್ರಹಿಸಲೇಬೇಕು. ಮೊದಲಿದ್ದ ಕಟ್ಟಿಗೆಯನ್ನು ಮತ್ತೆ ಬಂದ ಬೆಂಕಿ ಸುಡುವುದಿಲ್ಲವೆ? ಪರ್ವತದ ಗುಹೆಯಲ್ಲಿ ಅನಾದಿಯಿಂದ ಇದ್ದ ಕತ್ತಲನ್ನು ಸಾದಿಯಾದ ದೀಪ ಕಳೆಯುವುದಿಲ್ಲವೆ?

ವಸ್ತುತಃ 'ಗೃಹ್ಯಮಾಣೈಸ್ತ್ವಮಗ್ರಾಹ್ಯಃ' ಎಂಬ ಪಾಠವೇ ತಪ್ಪು. 'ಗೃಹ್ಯಮಾಣಸ್ತ್ವಮಗ್ರಾಹ್ಯಃ' ಎಂದೇ ಸರಿಯಾದ ಪಾಠ. 'ನಿನ್ನ ಅನುಗ್ರಹವಿದ್ದರೆ ನಮಗೆ ಗೋಚರಿಸುವಿ. ಇಲ್ಲದಿದ್ದರೆ ಇಲ್ಲ' ಎಂದು ನಳಕೂಬರ ಮಣಿಗ್ರೀವರು ಸ್ತೋತ್ರ ಮಾಡುತ್ತಾರೆ. ಈ ಪಾಠವನ್ನು [೧]ಸುದರ್ಶನ ಸೂರಿಯ ಶುಕಪಕ್ಷೀಯ ವ್ಯಾಖ್ಯಾನದಲ್ಲಿ ಪರಿಗ್ರಹಿಸಲಾಗಿದೆ.

ಅದರೂ 'ಪ್ರಾಕ್‌ಸಿದ್ಧಂ' ಮೊದಲೇ ಸಿದ್ಧನಾಗಿರುವ ನಿನ್ನನ್ನು ಮತ್ತೆ ಹುಟ್ಟಿ ಬಂದ ಜೀವರು ಹೇಗೆ ತಿಳಿದಾರು?' ಎಂಬ ಪ್ರಶ್ನೆಗೆ ವಿವರಣೆಯನ್ನು ನಾವೂ ಕೊಡಬೇಕಾಗಿದೆ. ಅದು ಹೀಗೆ- 'ನೀನು ಮೊದಲೇ ಸಿದ್ಧನಾಗಿರುವವನು, ಸ್ವತಂತ್ರ, ನಾವು ಮತ್ತೆ ನಿನ್ನಿಂದ ಹುಟ್ಟಿ ಬಂದವರು, ಅಸ್ವತಂತ್ರರು, ನಿನ್ನ ಅಧೀನರು. ನಿನ್ನ ಅನುಗ್ರಹವಿಲ್ಲದೆ ನಿನ್ನನ್ನು ನಾವೇ ಸ್ವತಂತ್ರವಾಗಿ ಹೇಗೆ ತಿಳಿಯಬಲ್ಲೆವು?' ಎಂದು.

ಸ್ವಾತ್ಮನಾ ಗೃಹ್ಯಮಾಣಃ।

'ಗೃಹ್ಯಮಾಣಃ' ಎಂದೇ ಸರಿಯಾದ ಪಾಠ. 'ಗೃಹ್ಯಮಾಣೈಃ' ಎಂದಲ್ಲ. ಶ್ರೀಹರಿ ತನ್ನಿಂದಲೇ ತಾನು ತಿಳಿಯಲ್ಪಡುತ್ತಾನೆ ಎಂದರ್ಥ.

❖❖❖

ಯಮಳಾರ್ಜುನ ಭಂಜನನಾದ ಕೃಷ್ಣನನ್ನು ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ.

---

೧ ಗುಣೈರ್ಗುಣಮಯೈಃ ಕಾರ್ಯೈರ್ಗೃಹ್ಯಮಾಣಃ ಏತತ್ಕಾರಣಮಿತ್ಯವಗಮ್ಯಮಾನಃ ಇಂದ್ರಿಯೈರಗ್ರಾಹ್ಯಃ ಪ್ರಾಕ್‌ಸಿದ್ಧಂ ಕಾರಣಭೂತಂ। -ಸುದರ್ಶನಃ

ತಸ್ಮೈ ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಆತ್ಮದ್ಯೋತೈರ್ಗುಣೈಶ್ಛನ್ನಮಹಿಮ್ನೇ ಬ್ರಹ್ಮಣೇ ನಮಃ ॥ ೩೩ ॥

ತನಗೆ ಸದಾ ಪ್ರಕಾಶಮಾನವೇ ಆಗಿರುವ ಗುಣಗಳಿಂದ ಅನ್ಯರಿಗೆ ಮರೆಯಾಗಿರುವ ಮಹಿಮೆಗಳುಳ್ಳವನು ಸೃಷ್ಟಿಕರ್ತನು ಗುಣ ಪೂರ್ಣನು ನೀನು. ಇಂಥ ಆ ನಿನಗೆ ಭಗವಾನ್ ವಾಸುದೇವನಿಗೆ ಇದೋ ನಮಸ್ಕಾರ.

ಇಲ್ಲಿ ಶ್ರೀಧರ ವಲ್ಲಭ[೧] ಮುಂತಾದವರ ವ್ಯಾಖ್ಯಾನ ಪ್ರಕಾರ ಸೂರ್ಯ ತಾನು ಬೆಳಗುವ ಮೋಡಗಳಿಂದ ತಾನೇ ಮುಚ್ಚಿಹೋಗುವಂತೆ ಪರಬ್ರಹ್ಮನು ತಾನು ತೋರಿಸಿಕೊಡುವ ಪ್ರಕೃತಿಯ ಗುಣಗಳಿಂದ ತಾನೇ ಮುಚ್ಚಿಹೋಗುತ್ತಾನೆ.

ಆದರೆ ಇದು ಸರಿಯಲ್ಲ. ಸೂರ್ಯನಿಗೆ ಮೋಡದ ಆವರಣವಿರುವಂತೆ ಪರಮಾತ್ಮನಿಗೆ ಪ್ರಕೃತಿಯ ಆವರಣವಿಲ್ಲ. ಪ್ರಕೃತಿಯ ಆವರಣ ಪರಮಾಚ್ಛಾದಕ ವಿರುವುದು ಜೀವನಿಗೆ. ಅವನು ಅದರಿಂದ ಆವೃತನಾದ್ದರಿಂದ ಪರಮಾತ್ಮ ಅವನಿಗೆ ಗೋಚರನಾಗುವುದಿಲ್ಲ. 'ಪುಂಗತಮೇವ ಹಿ ತಮಃ' ಎಂದು ಇದನ್ನೇ ತತ್ತ್ವೋದ್ಯೋತದಲ್ಲಿ ಶ್ರೀಮದಾಚಾರ್ಯರು ಹೇಳುತ್ತಾರೆ. ಅದರಿಂದ ಪರಮಾತ್ಮ ತನಗೆ ತಾನು ಮುಚ್ಚಿ ಹೋಗುವುದಿಲ್ಲ. ಅದ್ವೈತದಲ್ಲಿ ಪರಮಾತ್ಮನೇ ಅವಿದ್ಯೆಯಿಂದ ಆವೃತನಾಗಿದ್ದು ತನಗೆ ತಾನೇ ಕಾಣದೆ ಹೋಗುತ್ತಾನೆ.

'ಆಶ್ರಯತ್ವ ವಿಷಯತ್ವ ಭಾಗಿನೀ ನಿರ್ವಿಶೇಷಚಿತಿರೇವ ಕೇವಲಾ'

ಎಂದು ಹೇಳುತ್ತಾರೆ. ಇದು ಸರಿಯಲ್ಲವೆಂದು ಶ್ರೀಮದಾಚಾರ್ಯರು ಮಹಾಕೂರ್ಮಪುರಾಣ ವಚನದ ಆಧಾರವನ್ನು ತೋರಿಸುತ್ತ ಹೇಳುತ್ತಾರೆ-

ಛನ್ನೋಽನ್ಯೇಷಾಂ ನ ತು ಸ್ವಸ್ಯ ಭಗವಾನ್ ಪುರುಷೋತ್ತಮಃ ।

ಭಗವಾನ್ ಪುರುಷೋತ್ತಮನು ಅನ್ಯರಲ್ಲಿರುವ ಆವರಣದಿಂದ ಅವರಿಗೆ

---

೧ ಆತ್ಮನಃ ಸ್ವಸ್ವಾದ್ದ್ಯೋತಃ ಪ್ರಕಾಶೋ ಯೇಷಾಂ ತೈರ್ಗುಣೈಶ್ಛನ್ನೋ ಮಹಿಮಾ ಯಸ್ಯ ಅಭ್ರೈರಿವ ರವೇಸ್ತಸ್ಮೈ । -ಶ್ರೀಧರಃ

ಆತ್ಮನಾ ಸ್ವೇನೈವ ದ್ಯೋತೋ ಯೇಷಾಂ । ಗುಣಾ ಅಪಿ ಭಗವತೈವ ಪ್ರಕಾಶ್ಯಂತೇ ಯಥಾ ಸೂರ್ಯೇಣ ಮೇಘಾಸ್ತ ಏವ ತಸ್ಯಾವರಕಾ ಭವಂತಿ । ನ ಹಿ ಗಾಢಾಂಧಕಾರೇ ನಿಶಾಯಾಂ ಮೇಘಾ ದೃಶ್ಯಂತೇ । ಏವಂ ಸರ್ವೈರೇವ ವಿಷಯೈರಾತ್ಮ ನೈವ ಪ್ರಕಾಶಿತೈಶ್ಛನ್ನೋ ಮಹಿಮಾ ಯಸ್ಯ । -ವಲ್ಲಭಃ

ಕಾಣದಂತಾಗುತ್ತಾನೆ ಹೊರತು ತನ್ನಲ್ಲಿರುವ ಆವರಣದಿಂದ ತನಗೆ ತಾನು ಕಾಣದಂತಾಗುವುದಿಲ್ಲ ಎಂದು ಮಹಾಕೂರ್ಮಪುರಾಣದಲ್ಲಿ ಹೇಳಿದೆ.

❖ ❖ ❖

ಯಮಳಾರ್ಜುನ ಭಂಜನನಾದ ಕೃಷ್ಣನನ್ನು ನಳಕೂಬರ ಮಣಿಗ್ರೀವರು ಸ್ತುತಿಸುತ್ತಾರೆ.

ಯಸ್ಯಾವತಾರಾ ಜ್ಞಾಯಂತೇ ಶರೀರೇಷ್ವಶರೀರಿಣಃ ।
ತೈಸ್ತೈರತುಲ್ಯಾತಿಶಯೈರ್ವೀರ್ಯೈರ್ದೇಹಿಷ್ವಸಂಗತೈಃ ॥ ೩೪ ॥

ಅಂತರ್ಯಾಮಿ ಮತ್ತು ಬಾಹ್ಯ ಎಂದು ಎರಡು ಬಗೆಯಾಗಿರುವ ನಿನ್ನ ಅವತಾರಗಳು ಬೇರೆ ಮತ್ಸ್ಯ ಕೂರ್ಮಾದಿ ತಿರ್ಯಗ್‌ಜಂತುಗಳಲ್ಲಿ ಅಸಂಭಾವಿತವಾದ ಮತ್ತು ಅನುಪಮವಾದ ಆಯಾ ಅದ್ಭುತ ಸಾಮರ್ಥ್ಯಗಳಿಂದ ಅವತಾರಗಳೆಂದು ತಿಳಿದುಬರುತ್ತವೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು 'ಶರೀರಿಷ್ವಶರೀರಿಣಃ' ಎಂದು ಅಪಪಾಠ ವಿಟ್ಟುಕೊಂಡಿದ್ದಾರೆ. 'ಶರೀರಿಗಳ ನಡುವೆ ಅಶರೀರಿಯಾದ ನಿನ್ನ ಅವತಾರಗಳು ಶರೀರಿಗಳಲ್ಲಿ ಅಸಂಭವಿತವಾದ ಅನುಪಮವಾದ ಆಯಾ ಅದ್ಭುತ ಪರಾಕ್ರಮಗಳಿಂದ ಶರೀರಿಗಳಿಗಿಂತ ವಿಲಕ್ಷಣವೆಂದು ತಿಳಿದುಬರುತ್ತವೆ' ಎಂದು ವಿವರಣೆ ನೀಡಿದ್ದಾರೆ.[೧]

ಇಲ್ಲಿ 'ಶರೀರಿಷ್ವಶರೀರಿಣಃ' ಎಂಬ ಎರಡೂ ಶಬ್ದಗಳು ವ್ಯರ್ಥ. ನಿನ್ನ 'ಅವತಾರಗಳೆಲ್ಲವೂ ಅದ್ಭುತ ಪರಾಕ್ರಮವನ್ನು ತೋರುವುದರಿಂದ ಲೋಕವಿಲಕ್ಷಣಗಳೆಂದು ತಿಳಿದು ಬರುತ್ತವೆ' ಎಂದಿಷ್ಟೇ ಇಲ್ಲಿ ವಿವಕ್ಷಿತವಾಗಿದೆ. 'ಲೋಕದಲ್ಲಿ ಎಲ್ಲರೂ ಶರೀರಿಗಳು, ಪರಮಾತ್ಮ ಮಾತ್ರ ಅಶರೀರಿ' ಎಂಬ ಅಂಶ ಇಲ್ಲಿ ಅನಾವಶ್ಯಕ. ಮತ್ತು 'ಅಶರೀರಿಣಃ' ಎಂದರೆ ಪರಮಾತ್ಮ 'ಅಶರೀರಿ' ಎನ್ನುವಾಗ ಅವನಿಗೆ ಎಂಥ ಶರೀರವಿಲ್ಲ? ಎನ್ನುವುದು ಸ್ಪಷ್ಟವಾಗುವುದಿಲ್ಲ. ಏಕೆಂದರೆ ಮಾಯಿಕ ಶರೀರವನ್ನು ಅದ್ವೈತ ಒಪ್ಪಿದೆ. ಶುದ್ಧಸತ್ವಾತ್ಮಕ ಜಡಶರೀರವನ್ನು

೧ ಶರೀರಿಷು ಮರ್ತ್ಯಾದಿ ಶರೀರಿಣಾಂ ಮಧ್ಯೇ ಅಶರೀರಿಣಃ ಕರ್ಮಕೃತಶರೀರ ರಹಿತಸ್ಯ ಯಸ್ಯ ತವಾವತಾರಾಃ ಸರ್ವೇ ನಿಃಸಮಾಭ್ಯಧಿಕೈಃ ಕರ್ಮಕೃತದೇಹಿಷ್ವಸಂಗತೈಃ ಅಸಂಭಾವಿತೈಸ್ತೈಸ್ತೈಸ್ತತ್ತದವತಾರಪ್ರತಿನಿಯತೈ ವೀರ್ಯೈರ್ಜ್ಞಾಯಂತೇ ಕರ್ಮಕೃತ ದೇಹಿಭ್ಯೋ ವಿಲಕ್ಷಣತ್ವೇನ ಜ್ಞಾಯಂತ ಇತ್ಯರ್ಥಃ। ವೀರರಾಘವಃ

ವಿಶಿಷ್ಟಾದ್ವೈತ ಒಪ್ಪಿದೆ. ಸ್ವರೂಪಶರೀರವನ್ನು [೧] ವಲ್ಲಭಾಚಾರ್ಯರು ಒಪ್ಪಿದ್ದಾರೆ.

'ಶರೀರೇಷ್ವಶರೀರಿಣಃ' ಎಂದು ಶ್ರೀಮದಾಚಾರ್ಯರ ಪಾಠ. ಇದು ಮಹಾಕೂರ್ಮಪುರಾಣಕ್ಕೂ ಸಂಮತ. ಮತ್ತು 'ಶರೀರೇಷು' 'ಅಶರೀರಿಣಃ' ಎಂಬ ಎರಡು ಶಬ್ದಗಳು ಶ್ಲೋಕದಲ್ಲಿ ಅತ್ಯಂತ ಆವಶ್ಯಕ, ಮುಖ್ಯ. ಏಕೆಂದರೆ ಪರಮಾತ್ಮನ ಅವತಾರಗಳು ಎರಡು ಬಗೆಯಾಗಿವೆ. ಅವನ್ನು 'ಶರೀರೇಷು' ಮತ್ತು 'ಅಶರೀರಿಣಃ' ಎಂಬ ಎರಡು ಶಬ್ದಗಳು ತಿಳಿಸುತ್ತವೆ. 'ಶರೀರೇಷು' ಎಂದರೆ ಶರೀರಗಳಲ್ಲಿ ಒಳಗೆ ಇರುವ ಅಂತರ್ಯಾಮಿ ಅವತಾರಗಳು. 'ಅಶರೀರಿಣಃ' ಎಂದರೆ ಶರೀರದಿಂದ ಹೊರಗೆ ಇರುವ ಮತ್ಸ್ಯಕೂರ್ಮಾದಿ ಅವತಾರಗಳು. ಅಂತರ್ಯಾಮಿಯಾದ ಅವತಾರಗಳು 'ಶರೀರೇಷು' ಶರೀರಗಳಲ್ಲಿ ಶರೀರಿಗಳಿಗೇ ಕಾಣಲಾಗದ ಅತ್ಯಂತ ಸೂಕ್ಷ್ಮವಾದ ಅತೀಂದ್ರಿಯವಾದ ಮನ ಆದಿ ಇಂದ್ರಿಯಗಳಿಗೆ ಪ್ರೇರಕವಾಗಿದೆ. ಜೀವರ ಸ್ಥೂಲ ಸೂಕ್ಷ್ಮ ಹಾಗೂ ಸ್ವರೂಪ ಶರೀರಗಳಲ್ಲಿರುವ ಬಿಂಬರೂಪಗಳು ಮತ್ತು ಮನ ಆದಿ ಇಂದ್ರಿಯಗಳಲ್ಲಿರುವ ಅನಿರುದ್ಧಾದಿ ರೂಪಗಳು ನಡೆಸುವ ಈ ಪ್ರೇರಣವ್ಯಾಪಾರವು ಪರಮಾತ್ಮನಿಗೆ ಮಾತ್ರ ಸಾಧ್ಯ. ಇತರರಲ್ಲಿ ಅಸಂಭಾವಿತ. ಆದರಿಂದ ಅವು ಪರಮಾತ್ಮನ ಅವತಾರಗಳೇ ಎಂದು ನಿಶ್ಚಯಿಸಬಹುದು.

'ಅಶರೀರಿ' ಅವತಾರಗಳೆಂದರೆ ಮತ್ಸ್ಯಕೂರ್ಮಾದಿ ಅವತಾರಗಳು. ಅವುಗಳಿಗೆ ಸ್ವರೂಪಶರೀರವಿದ್ದರೂ, ನಮ್ಮ ಶರೀರಗಳಲ್ಲಿ ನಿಯಾಮಕನಾಗಿ ನಿಂತು 'ಶರೀರಿ' ಎನಿಸಬಲ್ಲ ಅಂತರ್ಯಾಮಿ ರೂಪಕ್ಕಿಂತ ಬೇರೆಯಾಗಿ, ಹೊರಗೇ ವೇದೋದ್ಧಾರಾದಿ ಅದ್ಭುತ ಕಾರ್ಯಗಳನ್ನು ಮಾಡುವುದರಿಂದ 'ಅಶರೀರಿ' ಎನಿಸುತ್ತವೆ. ಈ ವಿವರಣೆ ಸ್ವಲ್ಪ ಕ್ಲಿಷ್ಟವೆನಿಸಬಹುದು. ಆದರೆ ಮಹಾಕೂರ್ಮ ಪುರಾಣ ತಾನೇ ಕೊಟ್ಟಿರುವ ವಿವರಣೆ ಇದು ಎಲ್ಲರಿಗೂ ಗ್ರಾಹ್ಯ. ಮತ್ತು ಈ ಶಬ್ದ ಶ್ಲೋಕದಲ್ಲಿ ಹೀಗೆ ಅರ್ಥಗರ್ಭಿತ ವಾಗಿದೆ.

ಅಂತರ್ಯಾಮಿರೂಪವು ಶರೀರಿ. ಬಾಹ್ಯರೂಪವು ಅಶರೀರಿ ಎಂದು ವೈಲಕ್ಷಣ್ಯವನ್ನು ಇಲ್ಲಿ ಹೇಳಿದರೂ ಆ ಎರಡು ರೂಪಗಳಿಗೆ ಭೇದವಿದೆ ಎಂದು ತಿಳಿಯಬಾರದು. ವಿಶೇಷಶಕ್ತಿಯಿಂದ ಭೇದವ್ಯವಹಾರ ಮಾತ್ರವಿದೆ.

ಮತ್ಸ್ಯಾದಿ ಅವತಾರ ರೂಪಗಳನ್ನು ಸ್ತುತಿಸುತ್ತ ಉಪಾಸನೆ ಮಾಡುವಾಗ

೧ ಅಶರೀರಿಣ ಇತಿ ವಚನಾತ್ ಶರೀರಾಕೃತಿರೇವ ತತ್ರ ಪ್ರಕಾಶತೇ। ನ ತು ತಚ್ಛರೀರಂ। ಅನ್ಯಥಾ ವೃದ್ಧಿರ್ನೋಪಪದ್ಯೇತ । ಸಾಮರ್ಥ್ಯಂ ಪರಮಧಿಕಂ ಭವೇತ್ । ತಸ್ಮಾಚ್ಛರೀರಾಕಾರೇಣ ಭಾಸಮಾನಂ ಭಗವದ್ರೂಪಮೇವೇತಿ। -ವಲ್ಲಭಃ

ಅವುಗಳನ್ನು ಬಿಂಬೈಕ್ಯಾನುಸಂಧಾನಪೂರ್ವಕವಾಗಿಯೇ ಚಿಂತಿಸಬೇಕು ಎಂಬುದನ್ನು ಸೂಚ್ಯವಾಗಿ ಹೇಳುತ್ತಿದ್ದಾರೆ, ನಳಕೂಬರ ಮಣಿಗ್ರೀವರು.

ತಸ್ಯಾವತಾರಾ ದೇಹಸ್ಥಾ ಅದೇಹಸ್ಥಾ ಇತಿದ್ವಿಧಾ ।
ಅಂತರ್ಯಾಮ್ಯಾದಿರೂಪಾಣಿ ದೇಹಸ್ಥಾನಿ ವಿದೋ ವಿದುಃ ।
ಮತ್ಸ್ಯಕೂರ್ಮಾದಿರೂಪಾಣಿ ನದೇಹಸ್ಥಾನಿ ಹೃತ್ಪತೇಃ ।
ಅನ್ಯಾತುಲ್ಯೈರತಿಶಯೈರ್ಮನಸೋ ನಿಯಮಾದಿಭಿಃ ।
ಜ್ಞಾಯಂತೇ ತಾನಿ ರೂಪಾಣಿ ನಿತ್ಯಪೂರ್ಣಾನಿ ಸರ್ವಶಃ॥
ಇತಿ ಮಹಾಕೌರ್ಮೇ ।

ಭಗವಂತನ ಅವತಾರಗಳು ಶರೀರಿ, ಅಶರೀರಿಗಳೆಂದು ಎರಡು ಬಗೆಯಾಗಿವೆ. ಅಂತರ್ಯಾಮಿ ಮುಂತಾದ ರೂಪಗಳನ್ನು ಶರೀರಿಗಳೆಂದು ಜ್ಞಾನಿಗಳು ತಿಳಿಯುತ್ತಾರೆ. ಮತ್ಸ್ಯಕೂರ್ಮಾದಿ ರೂಪಗಳನ್ನು ಅಶರೀರಿಗಳೆಂದು ತಿಳಿಯುತ್ತಾರೆ. ಜೀವಮನೋನಿಯಮನಾದಿ ವೇದೋದ್ಧಾರಾದಿ ರೂಪವಾದ ಅನ್ಯರಲ್ಲಿ ಅಸಂಭಾವಿತವಾದ ಅದ್ಭುತ ಸಾಮರ್ಥ್ಯಗಳಿಂದ ಆ ರೂಪಗಳು ಎಲ್ಲವೂ ನಿತ್ಯಪೂರ್ಣ ಭಗವದವತಾರಗಳೆಂದು ತಿಳಿದುಬರುತ್ತವೆ ಎಂದು ಮಹಾಕೂರ್ಮ ಪುರಾಣದಲ್ಲಿ ಹೇಳಿದೆ.

'ಅಂತರ್ಯಾಮ್ಯಾದಿ ರೂಪಾಣಿ' ಎನ್ನುವಲ್ಲಿ ಅಂತರ್ಯಾಮಿ ಎಂದರೆ ಬಿಂಬಮೂರ್ತಿ. ಆದಿಪದದಿಂದ ಮನಇಂದ್ರಿಯಗಳಲ್ಲಿ ನೆಲೆಸಿರುವ ಅನಿರುದ್ಧಾದಿ ರೂಪಗಳನ್ನು ಗ್ರಹಿಸಬೇಕು. 'ನದೇಹಸ್ಥಾನಿ' ಎಂದರೆ, 'ದೇಹಸ್ಥರೂಪಗಳಲ್ಲ, ಅವುಗಳಿಗಿಂತ ಭಿನ್ನ' ಎಂದರ್ಥವಲ್ಲ. 'ನದೇಹಸ್ಥ' ಎಂದು ಕರೆಸಿಕೊಳ್ಳುವವುಗಳೆಂದರ್ಥ. ಅದು ವಿಶೇಷ ಬಲದಿಂದ.

'ಮನಸೋ ನಿಯಮಾದಿಭಿಃ' ಎಂಬಲ್ಲಿ ಮನೋನಿಯಮನವು ಅಂತರ್ಯಾಮಿಯ ಕಾರ್ಯ. ಆದಿಪದದಿಂದ ಮತ್ಸ್ಯಕೂರ್ಮವರಾಹಾದಿಗಳ ಕಾರ್ಯವಾದ ವೇದೋದ್ಧಾರ ಮಂದರಪರ್ವತಧಾರಣ ಧರೋದ್ಧರಣಾದಿಗಳನ್ನಿಟ್ಟುಕೊಳ್ಳಬೇಕು. ಬೇರೆ ಮಕ್ಕಳಿಂದಾಗದ, ಯಮಳಾರ್ಜುನ ವೃಕ್ಷಗಳನ್ನು ಬೇರು ಸಹಿತ ಕೀಳುವ, ಕಾರ್ಯವನ್ನು ಬಾಲಕೃಷ್ಣ ಮಾಡಿ ತೋರಿದುದು ಅವನು ಹರಿಯ ಅವತಾರವೆಂದು ಸ್ಪಷ್ಟವಾಗಿ ತಿಳಿಸುತ್ತದೆ ಎನ್ನುತ್ತಿದ್ದಾರೆ ನಳಕೂಬರ ಮಣಿಗ್ರೀವರು.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಏಕಾದಶೋಽಧ್ಯಾಯಃ

❖ ❖ ❖

ಅಧ್ಯಾಯ - ೧೨

ಅಧ್ಯಾಯ ಸಾರಾಂಶ

ಮರಗಳು ಬಿದ್ದ ಶಬ್ದವನ್ನು ಕೇಳಿ ಗೊಲ್ಲರೆಲ್ಲರೂ ಸ್ಥಳಕ್ಕೆ ಧಾವಿಸಿ ಎರಡು ಮತ್ತಿ ಮರಗಳು ಬಿದ್ದಿರುವುದನ್ನು ಕಂಡರು. ಮರಗಳು ಬೀಳಲು ಕಾರಣ ಪ್ರತ್ಯಕ್ಷವೇ ಇದ್ದರೂ ಅದನ್ನು ಅವರು ನಂಬಲಿಲ್ಲ. ಉತ್ಪಾತವಿರಬಹುದೆಂದು ಭಯಪಟ್ಟರು. ಅಲ್ಲಿ ಆಟವಾಡುತ್ತಿದ್ದ ಗೊಲ್ಲ ಬಾಲಕರು 'ಕೃಷ್ಣನೆ ಮರಗಳ ನಡುವೆ ಒರಳನ್ನೆಳೆದುಬಿಟ್ಟ. ಮರಗಳು ಬಿದ್ದವು. ಇಬ್ಬರು ವ್ಯಕ್ತಿಗಳು ಮರಗಳಿಂದ ಹೊರಗೆ ಬಂದರು' ಎಂದರು. ಗೊಲ್ಲರು ಒಪ್ಪಲಿಲ್ಲ. ಇದು ಅಸಾಧ್ಯವೆಂದರು. ಕೆಲವರು ಪೂತನಾಸಂಹಾರಾದಿ ಲೀಲೆಗಳನ್ನು ನೆನೆದು ಇದೂ ಅಂಥ ಒಂದು ಲೀಲೆ ಇರಬಹುದೆ ಎಂದು ಸಂಶಯಪಟ್ಟರು. ಹಗ್ಗದಿಂದ ಕಟ್ಟಿದ ಒರಳನ್ನು ಇನ್ನೂ ಸೆಳೆಯುತ್ತಲೇ ಇದ್ದ ಮಗನನ್ನು ಕಂಡು ನಂದಗೋಪ ನಗುಮೊಗದಿಂದ ಬಿಚ್ಚಿದ.

ಭಗವಾನ್ ಶ್ರೀಕೃಷ್ಣ ಮುಗ್ಧಬಾಲಕನಂತೆ, ಗೋಪಿಯರು ಹೇಳಿದರೆ ಕುಣಿದು ಹಾಡುತ್ತಿದ್ದ. ಮರದ ಗೊಂಬೆಯಂತೆ ವಶನಾಗಿ ಏನೂ ಅರಿಯದವನಂತಿದ್ದ. ಅವರು ಆಜ್ಞೆ ಮಾಡಿದರೆ ಮಣೆ ಪಾತ್ರೆಗಳನ್ನೂ ಪಾದುಕೆಗಳನ್ನೂ ಹೊತ್ತು ತರುತ್ತಿದ್ದ. ಅವರನ್ನು ಸಂತೋಷಗೊಳಿಸಲು ಜಟ್ಟಿಗಳಂತೆ ಭುಜ ತಟ್ಟಿಕೊಳ್ಳು ತ್ತಿದ್ದ. ತಾನು ಭಗವಂತನೆಂದು ಅರಿತಿದ್ದ ನಾರದಾದಿ ಗಳಿಗೆ ತಾನು ಹೇಗೆ ಭಕ್ತರಿಗೆ ವಶನಾಗುವೆನೆಂಬುದನ್ನು ತೋರುತ್ತಿದ್ದ.

ಗೋಕುಲದಲ್ಲಿ ಮೇಲಿಂದ ಮೇಲೆ ಉತ್ಪಾತಗಳಾಗುತ್ತಿದ್ದು ದನ್ನು ಕಂಡು ಗೊಲ್ಲರು ಒಂದೆಡೆ ಸೇರಿ ಆಲೋಚಿಸಿದರು. ಹಿರಿಯನಾದ ಉಪನಂದ ನುಡಿದ- ನಾವು ಇಲ್ಲಿಂದ ಬೇರೆ ಕಡೆಗೆ ವಲಸೆ ಹೋಗುವುದೇ ಒಳ್ಳೆಯದು. ಪೂತನೆ ಶಕಟ ತೃಣಾವರ್ತ ಮತ್ತಿಮರಗಳು ಈ ಎಲ್ಲ ಉತ್ಪಾತಗಳಲ್ಲಿ ನಮ್ಮ ಕೃಷ್ಣನನ್ನು ಹರಿಯ ಅನುಗ್ರಹ ಕಾಪಾಡಿತು. ಇನ್ನು ಮುಂದಾದರೂ ಇಂಥ ಉತ್ಪಾತಗಳಿಂದ ಗೋಕುಲ ನಾಶವಾಗುವುದಕ್ಕೆ ಮೊದಲೇ ನಾವು

ವೃಂದಾವನಕ್ಕೆ ಹೋಗಿ ವಾಸಮಾಡೋಣ. ಅಲ್ಲಿ ಗೋವರ್ಧನ ಪರ್ವತವಿದೆ. ಗೋವುಗಳಿಗೂ ಗೊಲ್ಲರಿಗೂ ಹಿತಕರವಾದ ಹೊಸ ಕಾಡುಗಳಿವೆ' ಎಲ್ಲ ಗೊಲ್ಲರೂ ಇದನ್ನು ಒಪ್ಪಿದರು.

ಮತ್ತಿ ಮರಗಳನ್ನು ಮುರಿದ ಬಳಿಕ ಶ್ರೀಕೃಷ್ಣ ಯಮುನಾತೀರದಲ್ಲಿ ಆಟವಾಡಲು ತೊಡಗಿದ. ಜೊತೆಗೆ ಬಲರಾಮನೂ ಗೋಪ ಬಾಲಕರೂ ಇದ್ದರು. ರೋಹಿಣೀ ದೇವಿ ರಾಮಕೃಷ್ಣರನ್ನು ಊಟಕ್ಕೆ ಕರೆದರೂ ಆಟದಲ್ಲಿಯೆ ಆಸಕ್ತರಾದ ಅವರು ಬರಲಿಲ್ಲ. ಯಶೋದೆಯೂ ಕರೆದಳು. ರಾಮ, ನಿನ್ನ ಜೊತೆಗೆ ಊಟಮಾಡಲು ನಂದಗೋಪ ಕಾದಿದ್ದಾನೆ, ಬಾ, ನಮಗೆ ಆನಂದ ಉಂಟುಮಾಡು, ಕೃಷ್ಣ ನಿನಗಿಂದು ಹುಟ್ಟುಹಬ್ಬವಾಚರಿಸಬೇಕು. ಮಿಂದು ಶುಚಿಯಾಗಿ ಬ್ರಾಹ್ಮಣರಿಗೆ ಗೋದಾನ ಮಾಡು. ನಿನ್ನ ಮೈದೂಳಾಗಿದೆ ಬಾ ಸ್ನಾನ ಮಾಡು. ನಿನ್ನ ಜೊತೆಯ ಬಾಲಕರು ಮಿಂದು ಅಲಂಕರಿಸಿಕೊಂಡಿದ್ದಾರೆ. ನೀನೂ ಮಿಂದು ಉಂಡು ಬಳಿಕ ಆಟವಾಡು.' ಹೀಗೆ ಹೇಳಿ ಯಶೋದೆ ಪುತ್ರವಾತ್ಸಲ್ಯದಿಂದ ರಾಮಕೃಷ್ಣರನ್ನು ಕೈಯಲ್ಲಿ ಹಿಡಿದು ಮನೆಯೊಳಗೆ ಕರೆತಂದಳು. ಕೃಷ್ಣನ ಹುಟ್ಟಿದ ಹಬ್ಬವನ್ನು ನಡೆಸಿದಳು.

ನಂದಗೋಪನ ಆದೇಶದಂತೆ ಗೋಕುಲವಾಸಿಗಳೆಲ್ಲರೂ ವೃಂದಾವನಕ್ಕೆ ವಲಸೆ ಹೋದರು. ಅಲ್ಲಿ ಅರ್ಧಚಂದ್ರಾಕಾರವಾಗಿ ಬಂಡಿಗಳನ್ನು ನಿಲ್ಲಿಸಿ ಗೋವುಗಳಿಗೂ ಗೋಪಾಲಕರಿಗೂ ವಾಸಸ್ಥಳಗಳನ್ನು ಸಿದ್ಧಪಡಿಸಿದರು. ವೃಂದಾವನ ಗೋವರ್ಧನ ಬೆಟ್ಟ ಯಮುನಾತೀರಗಳು ರಾಮಕೃಷ್ಣರಿಗೆ ಆನಂದ ಉಂಟು ಮಾಡಿದುವು. ಅಲ್ಲಿ ಅವರು ಆಟವಾಡುತ್ತ ಕರು ಮೇಸಿದರು. ಕೊಳಲೂದಿದರು. ಕುಣಿದರು, ಕುಸ್ತಿಯಾಡಿದರು.

ಕರುವಿನ ರೂಪಧರಿಸಿ ಕರುಗಳ ಹಿಂಡಿನಲ್ಲಿ ಸೇರಿಕೊಂಡು ರಾಮಕೃಷ್ಣರನ್ನು ಕೊಲ್ಲುವ ಉದ್ದೇಶದಿಂದ ಬಂದಿದ್ದ ವತ್ಸಾಸುರ ನನ್ನು ಕೃಷ್ಣ ರಾಮನಿಗೆ ತೋರಿಸಿ ಅಸುರನ ಬಳಿಗೆ ಬಂದು ಹಿಂಗಾಲುಗಳನ್ನೂ ಬಾಲವನ್ನೂ ಸೇರಿಸಿ ಹಿಡಿದೆತ್ತಿ ಗಿರಗಿರನೆ ತಿರುಗಿಸಿದ. ಆಗಲೆ ಸತ್ತಿದ್ದ ಆ ಅಸುರನನ್ನು ಬೇಲದ ಮರದ

ತುದಿಗೆ ಎಸೆದ. ಮಹಾಕಾಯನಾಗಿ ಆತ ಬೀಳುವಾಗ ಬೇಲದ ಹಣ್ಣುಗಳನ್ನು ಬೀಳಿಸಿದ. ಗೋಪಬಾಲಕರು ಭಲೆ ಎಂದರು. ದೇವತೆಗಳು ಹೂಮಳೆಗರೆದರು.

ಒಂದು ಜಲಾಶಯದ ಬಳಿ ಬಾಲಕರು ಕರುಗಳಿಗೆ ನೀರು ಕುಡಿಸಿ ತಾವೂ ಕುಡಿದು ದೊಡ್ಡ ಬಕಪಕ್ಷಿ ಯೊಂದನ್ನು ಕಂಡರು. ಆತ ಬಕಾಸುರ. ವಜ್ರಾಯುಧದೇಟಿಗೆ ಉರುಳಿದ ಬೆಟ್ಟದ ಶಿಖರದಂತೆ ಮಹಾಕಾಯನಾಗಿದ್ದ. ಆತ ಕೃಷ್ಣನನ್ನು ನುಂಗಿದ. ಕೃಷ್ಣ ಅವನ ಬಾಯಿಯ ಅಂಗಳವನ್ನು ಸುಡಲು ತೊಡಗಿದಾಗ ಆತ ಉಗುಳಬೇಕಾಯಿತು. ಕೊಕ್ಕಿನಿಂದ ಕೊಲ್ಲಲು ಬಂದ. ಕೃಷ್ಣ ಎರಡು ಕೈಗಳಿಂದ ಕೊಕ್ಕುಗಳನ್ನು ಹಿಡಿದು ನೊಜೆಹುಲ್ಲನ್ನು ಸೀಳುವಂತೆ ಸೀಳಿದ. ಕಂಸನ ಕಡೆಯ ಆ ಅಸುರ ಹೀಗೆ ಹತನಾದಾಗ ದೇವತೆಗಳು ಹೂಮಳೆಗರೆದರು. ಬಾಲಕರು ಕೃಷ್ಣನನ್ನು ಆಲಿಂಗಿಸಿದರು. ಗೋಕುಲಕ್ಕೆ ಹಿಂದಿರುಗಿ ಹಿರಿಯ ಗೋಪರಿಗೆ ಬಣ್ಣಿಸಿ ಹೇಳಿದರು.

ಗರ್ಗಮುನಿ ಹೇಳಿದ್ದ ಮಾತುಗಳು ನಿಜವಾಗುತ್ತಿವೆ, ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಅಸುರರು ಬಂದರೆ ಅವರು ತಾವೇ ಬೆಂಕಿಯಲ್ಲಿ ಬೀಳುವ ಹುಳುಗಳಂತೆ ನಾಶವಾಗುತ್ತಿದ್ದಾರೆ ಎಂದು ಸಂತೋಷದಿಂದ ಮಾತನಾಡಿಕೊಳ್ಳುತ್ತ ಆನಂದಿಸಿದರು, ನಂದಗೋಪ ಮುಂತಾದ ಗೋಪಾಲಕರು. ರಾಮಕೃಷ್ಣರು ಕಣ್ಣುಮುಚ್ಚಾಲೆ ಮಳಲಮನೆ ಮರಕೋತಿ ಮುಂತಾದ ಮಕ್ಕಳಾಟಗಳಿಂದ ಬಾಲ್ಯವನ್ನು ಕಳೆದರು.

❖❖❖

ಅಧ್ಯಾಯ - ೧೩

ಅಧ್ಯಾಯ ಸಾರಾಂಶ

ಶ್ರೀಕೃಷ್ಣನಿಗೀಗ ಆರು ವರ್ಷ ವಯಸ್ಸು. ಕೊಳಲು ಊದುತ್ತ ಹಸುಗಳನ್ನು ಮೇಸತೊಡಗಿದ. ವೃಂದಾವನದ ವನಸಿರಿಯನ್ನು, ಹೂಹಣ್ಣುಗಳನ್ನು ಹೊತ್ತು ಬಾಗಿ ಕಾಲುಗಳಿಗೆರಗುವ ಮರಗಿಡಗಳ ಸೊಬಗನ್ನೂ, ಗುಣಗಾನ ಮಾಡುವ ದುಂಬಿಗಳ ಮಧುರ ಝೇಂಕಾರವನ್ನೂ ಕಂಡು ಬಲರಾಮನಿಗೆ ಹೇಳುತ್ತಾನೆ. 'ಅಣ್ಣ! ಈ ಗಿಡಮರಗಳು ದುಂಬಿ ನವಿಲು ಕೋಗಿಲೆಗಳೆಲ್ಲವೂ ಭಕ್ತೋತ್ತಮರಾದ ಮುನಿಗಳು. ಕಾಡಿನಲ್ಲಿಯೂ ಬಿಡದೆ ಸೇವೆ ಮಾಡುತ್ತಿದ್ದಾರೆ.'

ಗೆಳೆಯರೊಂದಿಗೆ ಕುಸ್ತಿಯಾಡಿ ಬಳಲಿದಂತೆ ಗೋಪಾಲಕರ ತೊಡೆಯಲ್ಲಿ ತಲೆಯಿಟ್ಟು ಕೃಷ್ಣ ಚಿಗುರೆಲೆಹಾಸಿಗೆಯಲ್ಲಿ ಮಲಗುವನು. ಗೋಪಾಲಕರು ಅವನ ಕಾಲೊತ್ತುವರು ಬೀಸಣಿಗೆ ಬೀಸುವರು. ಪರಮಾತ್ಮನ ಲೀಲೆಗಳನ್ನು ಹಾಡುವರು. ಧನ್ಯರಾಗುವರು. ಶ್ರೀದೇವಿ ಬಯಸುವಂಥ ಅವನ ಎದೆಯನ್ನು ಗೋಪಿಯರು ಆಲಿಂಗಿಸಿ ಧನ್ಯರಾಗುವರು.

ಶ್ರೀದಾಮನೆಂಬ ಒಬ್ಬ ಗೊಲ್ಲರ ಹುಡುಗ ಹೇಳುತ್ತಾನೆ. 'ಇಲ್ಲೇ ಸಮೀಪದ ತಾಳೆ ಮರಗಳ ತೋಪಿನಲ್ಲಿ ಒಳ್ಳೆ ಹಣ್ಣುಗಳು ಬೀಳುತ್ತಿವೆ. ರಸಭರಿತವಾದ ಸುಗಂಧ ಬೀರುವ ಆ ಹಣ್ಣುಗಳನ್ನು ಎತ್ತಿಕೊಳ್ಳಲು ಕತ್ತೆರೂಪದ ದುರಾತ್ಮನಾದ ದೇನುಕಾಸುರ ಬಿಡುತ್ತಿಲ್ಲ. ಆತ ತುಂಬ ಬಲಿಷ್ಠ. ತನ್ನಂತೆಯೆ ಬಲಿಷ್ಠವಾದ ಬೇರೆ ಕತ್ತೆಗಳ ಪರಿವಾರದೊಂದಿಗೆ ಓಡಾಡುತ್ತ ನಮಗೆ ಪೀಡೆ ಉಂಟುಮಾಡುತ್ತಾನೆ' ರಾಮಕೃಷ್ಣರು ನಕ್ಕು ತೋಪಿನೊಳಗೆ ನುಗ್ಗಿ ಮರಗಳನ್ನು ಅಲ್ಲಾಡಿಸಿ ಹಣ್ಣುಗಳನ್ನು ಬೀಳಿಸಿದರು. ಆ ಶಬ್ದವನ್ನು ಕೇಳಿ ಒಡನೆ ಧೇನುಕ ಬಲರಾಮನ ಬಳಿಗೆ ಬಂದು ಎರಡೂ ಹಿಂಗಾಲುಗಳಿಂದ ಎದೆಯ ಮೇಲೆ ಒದ್ದು ಕಿರುಚಿದ. ತಿರುಗಿ ಇನ್ನೊಮ್ಮೆ ಹಿಂಗಾಲು ಎತ್ತುವಾಗ ಬಲರಾಮ ಎರಡೂ ಹಿಂಗಾಲುಗಳನ್ನು ಒಂದು ಕೈಯಿಂದ ಹಿಡಿದು ಎತ್ತಿ ಗರಗರನೆ

ತಿರುಗಿಸಿ ಮೇಲೆ ಮರದ ತುದಿಗೆ ಎಸೆದುಬಿಟ್ಟ. ಆ ಏಟಿಗೆ ಮರ ಮುರಿದುಬಿದ್ದಿತು. ಪಕ್ಕದ ಮರವನ್ನೂ ಬೀಳಿಸಿತು. ಆ ಮರವೂ ಇನ್ನೊಂದು ಮರವನ್ನು. ಎಲ್ಲ ಮರಗಳು ಬಿರುಗಾಳಿಗೆ ಸಿಲುಕಿದಂತೆ ಕಂಪಿಸಿದುವು. ಧೇನುಕನ ಪರಿವಾರ ದವರೂ ಬಂದರು. ಅವರನ್ನೂ ಹಿಂಗಾಲುಗಳಲ್ಲಿ ಹಿಡಿದು ರಾಮಕೃಷ್ಣರು ಎತ್ತಿ ಎತ್ತಿ ಮರಗಳ ಮೇಲೆ ಎಸೆದರು. ಕ್ಷಣದಲ್ಲಿ ಎಲ್ಲೆಡೆ ಸತ್ತುಬಿದ್ದ ದೈತ್ಯರ ಹೆಣಗಳೂ ಮುರಿದುಬಿದ್ದ ಮರದ ತುದಿಗಳೂ ತುಂಬಿಹೋದವು. ದೇವತೆಗಳು ಹೂಮಳೆಗರೆದರು. ಮಂಗಳ ವಾದ್ಯ ಮೊಳಗಿಸಿದರು. ಮುಂದೆ ಆ ತೋಪಿನಲ್ಲಿ ಧೇನುಕನ ಕಾಟವಿಲ್ಲದಂತಾಯಿತು. ಗೊಲ್ಲರು ಯಥೇಚ್ಛ ಹಣ್ಣು ತಿಂದರು. ಹಸುಗಳು ಹುಲ್ಲು ಮೇದುವು.

ಒಮ್ಮೆ ಶ್ರೀಕೃಷ್ಣ ಬಲರಾಮನನ್ನು ಬಿಟ್ಟು ಒಬ್ಬನೆ ಗೆಳೆಯರೊಂದಿಗೆ ಯಮುನಾತೀರಕ್ಕೆ ನಡೆದ. ಅಲ್ಲಿ ಬೇಸಗೆಯ ಬಿಸಿಲತಾಪದಿಂದ ಬಳಲಿ ಬಾಯಾರಿದ ಗೋವುಗಳೂ ಗೊಲ್ಲರೂ ಯಮುನಾ ಜಲವನ್ನು ಕುಡಿದರು. ಆದರೆ ನೀರು ವಿಷಕಲುಷಿತವಾಗಿದ್ದರಿಂದ ಅದನ್ನು ಕುಡಿದೊಡನೆ ಎಲ್ಲರೂ ಸತ್ತುಬಿದ್ದರು. ಶ್ರೀಕೃಷ್ಣ ತನ್ನ ಅಮೃತದೃಷ್ಟಿಯಿಂದ ಅವರೆಲ್ಲರನ್ನೂ ಬದುಕಿಸಿದ.

❖❖❖

ಅಧ್ಯಾಯ - ೧೪

ಅಧ್ಯಾಯ ಸಾರಾಂಶ

ಯಮುನೆಯ ಮಡುವಿನಲ್ಲಿ ಕಾಲಿಯನೆಂಬ ಕೃಷ್ಣಸರ್ಪ ತನ್ನ ಪರಿವಾರದೊಂದಿಗೆ ವಾಸವಾಗಿದ್ದ. ಅದರಿಂದ ನೀರೆಲ್ಲ ವಿಷಾಗ್ನಿಯಿಂದ ಕುದಿಯುತ್ತಿತ್ತು. ಮೇಲ್ಗಡೆ ಆಕಾಶಲ್ಲಿ ಹಾರುವ ಹಕ್ಕಿಗಳೂ ಉರಿದು ಬೀಳುತ್ತಿದ್ದುವು. ಅಲ್ಲಿಯ ವಿಷದೂಷಿತವಾದ ಗಾಳಿ ತೀರದಲ್ಲಿ ಸಂಚರಿಸುವ ಪ್ರಾಣಿಪಕ್ಷಿಗಳಿಗೂ ಪೀಡೆ ಉಂಟು ಮಾಡುತ್ತಿತ್ತು. ಶ್ರೀಕೃಷ್ಣ ಸೊಂಟಕ್ಕೆ ಪಟ್ಟಿ ಬಿಗಿದುಕೊಂಡು ಈಚಲು ಮರವನ್ನೇರಿ ಮಡುವಿನೊಳಗೆ ಧುಮುಕಿದ. ಕಾಲಿಯನಾಗ ತನ್ನ ಸೈನ್ಯ ಸಮೇತವಾಗಿ ಬಂದು ಕೃಷ್ಣನನ್ನು ಕಚ್ಚುತ್ತ ಮೈ ಎಲ್ಲವನ್ನೂ ಸುತ್ತಿದ. ಗೊಲ್ಲರು ಕಂಡು ಹೌಹಾರಿದರು. ಹಸುಗಳೂ ಕಣ್ಣೀರು ಸುರಿಸಿದುವು. ಭೂಮಿ ಅಂತರಿಕ್ಷಗಳಲ್ಲಿ ಉತ್ಪಾತಗಳು ತಲೆದೋರಿದುವು.

ನಂದಗೋಪ ಮುಂತಾದವರು ಉತ್ಪಾತಗಳನ್ನೂ ಕೃಷ್ಣ ಬಲರಾಮನನ್ನು ಬಿಟ್ಟು ಒಬ್ಬನೇ ಕಾಡಿಗೆ ಹೋಗಿದ್ದುದನ್ನೂ ತಿಳಿದು ಕಳವಳಗೊಂಡು ಯಮುನಾತೀರಕ್ಕೆ ಧಾವಿಸಿ ಬಂದರು. ದೂರದಿಂದ ಮಡುವಿನಲ್ಲಿ ಶ್ರೀಕೃಷ್ಣ ಕಾಲಿಯನೊಡನೆ ಹೋರಾಡುವುದನ್ನೂ ತೀರದಲ್ಲಿ ಗೋಪ ಗೋಪಿಯರು ದುಃಖದಿಂದ ಬೆಂದು ಮೈಮರೆತಿರುವುದನ್ನೂ ಕಂಡು ತಾವೂ ಮಡುವಿನೊಳಗೆ ಧುಮುಕಲು ಉದ್ಯುಕ್ತರಾದರು. ಬಲರಾಮ ನಂದಗೋಪನನ್ನೂ ಗೋಪಿಯರು ಯಶೋದೆಯನ್ನೂ ತಡೆದು ಸಾಂತ್ವನ ಹೇಳಿದರು.

ಶ್ರೀಕೃಷ್ಣ ಕಾಲಿಯನ ಹಿಡಿತದಲ್ಲಿ ಒಂದು ಮುಹೂರ್ತಕಾಲ ಸುಮ್ಮನಿದ್ದು ಇಡೀ ಗೋಕುಲವೆ ತನಗಾಗಿ ಕಣ್ಣೀರಿಡುವುದನ್ನು ಕಂಡು ಒಡನೆ ಬಂಧನದಿಂದ ತನ್ನನ್ನು ಬಿಡಿಸಿಕೊಂಡ. ತನ್ನ ಮೈ ಹಿಗ್ಗಿಸಿಕೊಂಡ. ಬಲವಾಗಿ ಸುತ್ತಿದ ಕಾಲಿಯನ ಮೈ ಈಗ ನೋವಿನಿಂದ ಬಿಗಿತಪ್ಪಿ ಸಡಿಲಗೊಂಡಿತು. ಆತ ಕೃಷ್ಣನನ್ನು ಬಿಟ್ಟು ಹೆಡೆಗಳನ್ನು ಎತ್ತಿ ಸೆಟೆದು ನಿಂತು ಕೋಪದಿಂದ ಬುಸುಗುಟ್ಟಿದ.

ಬಾಯಿಂದ ಬೆಂಕಿಯನ್ನು ಉಗುಳಿದ. ಮೂಗಿನ ಹೊಳ್ಳೆಗಳು ವಿಷದ ಬೆಂಕಿಯಲ್ಲಿ ಕಾದ ಬಾಣಾಲೆಗಳಾದುವು. ಕಣ್ಣುಗಳು ಅಲುಗಾಡದೆ ದಿಟ್ಟಿಸಿದುವು. ಎರಡು ನಾಲಿಗೆಗಳು ಕಟವಾಯಿ ಗಳನ್ನು ನೆಕ್ಕಿದುವು. ಕೃಷ್ಣ ಗರುಡನಂತೆ ಸುತ್ತಲೂ ತಿರುಗಿದ ಆಟವಾಡಿದ. ಕಾಲಿಯನೂ ಕೃಷ್ಣನನ್ನು ಹೊಂಚುಹಾಕಿ ಬೆನ್ನಟ್ಟಿ ಹಿಡಿಯಲು ಸುತ್ತಲೂ ತಿರುಗಿದ. ಸುತ್ತಿಸುತ್ತಿ ಶಕ್ತಿಗುಂದಿದ. ಒಡನೆ ಕೃಷ್ಣ ಅವನನ್ನು ಬಗ್ಗಿಸಿ ಹೆಡೆಗಳನ್ನೇರಿದ. ನಾಟ್ಯ ಸಂಗೀತ ಮುಂತಾದ ಎಲ್ಲ ಲಲಿತಕಲೆಗಳಿಗೂ ಆದಿಗುರುವಾದ ಕೃಷ್ಣ ನಾಟ್ಯವಾಡಿದ. ಆಗ ಗಂಧರ್ವರು ಸಿದ್ಧರು ದೇವತೆಗಳು ದೇವಾಂಗನೆಯರೆಲ್ಲರೂ ಮೃದಂಗ ಪಣವ ಆನಕ ಮುಂತಾದ ವಾದ್ಯ ನುಡಿಸಿದರು ಹಾಡಿದರು ಹೂಮಳೆ ಗರೆದರು.

ಶ್ರೀಕೃಷ್ಣ ಕಾಲಿಯನ ಬಾಲವನ್ನು ಹಿಡಿದೆತ್ತಿ ಯಾವಯಾವ ತಲೆ ಬಾಗುವುದಿಲ್ಲವೋ ಅದನ್ನು ತುಳಿದು ಮರ್ದಿಸಿದ. ಆತ ಬಲಗುಂದಿ ಬಾಯಿಂದ ರಕ್ತ ಕಾರಿ ಮೂರ್ಛೆ ಹೊಂದುತ್ತಾನೆ. ತಿರುಗಿ ಎಚ್ಚೆತ್ತು ಕಣ್ಣುಗಳಿಂದ ವಿಷ ಕಾರುತ್ತಾನೆ. ಕೃಷ್ಣನ ಅದ್ಭುತವಾದ ಸುಂದರವಾದ ತಾಂಡವ ನೃತ್ಯ ನಡೆಯುತ್ತಲೆ ಇದೆ. ಹೀಗಾಗಿ ಕಾಲಿಯನ ಎಲ್ಲ ಹೆಡೆಗಳೂ ಮುರಿದುವು. ಮೈಯೆಲ್ಲ ಜರ್ಜರಿತವಾದುವು. ಶ್ರೀಕೃಷ್ಣ ಶ್ರೀಮನ್ನಾರಾಯಣನೆಂದು ಜ್ಞಾನೋದಯವಾಯಿತು. ಮನದಲ್ಲೆ ಶರಣಾಗತನಾದ. ಅವನ ಪತ್ನಿಯರೆಲ್ಲರೂ ಓಡಿಬಂದರು. ತಮ್ಮ ವಸ್ತ್ರಾಲಂಕಾರ ಕೇಶಾಲಂಕಾರಗಳೆಲ್ಲ ಅಸ್ತವ್ಯಸ್ತವಾಗುತ್ತಿದಂತೆ ಪೂಜಾ ಸಾಧನ ಗಳನ್ನು ತಂದು ಮಂದಿಟ್ಟು ಕೈಮುಗಿದು ನಮಿಸಿದರು. ಮೊರೆ ಹೊಕ್ಕು ಪತಿಭಿಕ್ಷೆ ಬೇಡಿ ಸ್ತುತಿಸಿದರು.

''ಅಪರಾಧ ಗೈದಿರುವ ಈತನನ್ನು ನೀನು ದಂಡಿಸಿದುದು ಉಚಿತವೇ ಆಗಿದೆ. ದುಷ್ಟದಮನಕ್ಕೆಂದೆ ಅವತರಿಸಿದವನು ನೀನು. ನೀನು ಮಾಡುವ ಈ ನಿಗ್ರಹ ನಮಗೆ ಅನುಗ್ರಹವೆಂದೆ ಬಗೆಯುತ್ತೇವೆ. ಅದು ನಮ್ಮ ಪಾಪವನ್ನು ಕಳೆಯುತ್ತದೆ. ಈತ ಪೂರ್ವಜನ್ಮದಲ್ಲಿ ಅದೇನು ಪುಣ್ಯ ಮಾಡಿದ್ದನೊ! ಅದರಿಂದ ನೀನೊಲಿದು ನಮಗೆ ಅನುಗ್ರಹಿಸಿರುವೆ.

ನಿನ್ನ ಪಾದ ದೂಳಿಯ ಅನುಗ್ರಹ ಇವನ ಮೇಲಾಯಿತೆಂದರೆ ಅದೇನೂ ಸಾಮಾನ್ಯ ಯೋಗ್ಯತೆಯಲ್ಲ. ಲಕ್ಷ್ಮೀ ಬ್ರಹ್ಮಾದಿ ದೇವತೆಗಳೂ ಅದನ್ನು ಪಡೆಯಲು ತಪಗೈಯುತ್ತಾರೆ. ಅವರಿಗೆ ಯಾವುದೇ ಪದವಿ ಅಪೇಕ್ಷಿತವಾಗಿರುವುದಿಲ್ಲ. ಮುಕ್ತಿಯನ್ನೂ ಬಯಸುವುದಿಲ್ಲ. ಅವರೆಲ್ಲರೂ ಬಯಸುವ ಅತ್ಯಂತ ದುರ್ಲಭವಾದ ನಿನ್ನ ಅಪರೋಕ್ಷಜ್ಞಾನವನ್ನು ನಮ್ಮ ಈ ಪತಿ ಪಡೆದಿದ್ದಾನೆ. ಸ್ವೇಚ್ಛೆಯಿಂದ ಜೀವರೊಳಗೆ ಬಿಂಬರೂಪನಾಗಿ ನಿಂತು ತನ್ನ ಅಪರೋಕ್ಷವನ್ನು ನೀಡುವ ನಿನಗಿದೋ ನಮಸ್ಕಾರ.

ಈತ ದೇವಸ್ವಭಾವದವನಾಗಿದ್ದು ನಿನಗೆ ಪ್ರಿಯನೇ ಆಗಿದ್ದರೂ ನಿನ್ನನ್ನು ಪರಮಪುರುಷನೆಂದು ತಿಳಿಯದೆ ಮೂಢತನದಿಂದ ಅಪರಾಧಗೈದಿದ್ದಾನೆ. ಈ ಒಂದು ಬಾರಿ ನೀನು ಕ್ಷಮಿಸಿಬಿಡು. ಈತ ಸಾಯುತ್ತಿದ್ದಾನೆ. ನಮಗೆ ಪತಿಭಿಕ್ಷೆ ನೀಡು. ನಿನ್ನಾಜ್ಞೆಯಿಂದ ಈತನೇನು ಮಾಡಬೇಕೆಂಬುದನ್ನು ಆದೇಶಿಸು.'

ಶ್ರೀಕೃಷ್ಣ ಕಾಲಿಯನನ್ನು ಬಿಟ್ಟುಬಿಟ್ಟ. ತಲೆಯೊಡೆದು ಮೂರ್ಛೆ ಹೊಂದಿದ್ದ ಕಾಲಿಯ ಮೆಲ್ಲನೆ ಚೇತರಿಸಿಕೊಂಡು ಕಷ್ಟದಿಂದ ಉಸಿರಾಡುತ್ತ ಕೈಮುಗಿದು ಕೇಳಿಕೊಂಡ-

'ಪ್ರಭು, ನಾವು ಹುಟ್ಟಿನಿಂದ ತಮೋಮಯವಾದ ದೀರ್ಘಕೋಪಿಯಾದ ಸರ್ಪಜಾತಿಯವರು. ಜಾತಿಸ್ವಭಾವ ಬಿಡಲಾಗದುದು. ಬಿಡಬೇಕೆಂದರೆ ನೀನೇ ಅದಕ್ಕೆ ಕಾರಣನಾಗಿರುವುದರಿಂದ ನನಗೆ ನಿಗ್ರಹವನ್ನಾಗಲಿ ಅನುಗ್ರಹವನ್ನಾಗಲಿ ನೀನೇನು ಬಯಸುವಿಯೋ ಅದನ್ನು ನೀನೇ ಮಾಡು.'

ಶ್ರೀಕೃಷ್ಣ ನುಡಿದ- ನೀನಿಲ್ಲಿ ಇರಕೂಡದು. ನಿನ್ನ ಪರಿವಾರದೊಂದಿಗೆ ಸಮುದ್ರಕ್ಕೆ ಹೋಗು. ನದೀಜಲ ನಿರ್ಮಲವಾಗಲಿ. ಪಶುಗಳೂ ಮನುಷ್ಯರೂ ಅದನ್ನು ಸೇವಿಸಲಿ.

ನಾನು ನಿನಗೆ ನೀಡಿದ ಈ ಆಜ್ಞೆಯನ್ನು ಎರಡು ಸಂಧ್ಯೆಗಳಲ್ಲಿ ಪಠಿಸುವವರಿಗೂ ಸ್ಮರಿಸುವವರಿಗೂ ಸರ್ಪಗಳಿಂದ ಪೀಡೆ ಉಂಟಾಗದಿರಲಿ. ಈ ಮಡುವಿನಲ್ಲಿ ದೇವಪಿತ್ರಾದಿ ತರ್ಪಣ ನೀಡುವವರಿಗೆ, ಉಪವಾಸವಿದ್ದು ನನ್ನನ್ನು ಆರಾಧಿಸುವವರಿಗೆ ಸಕಲ ಪಾಪಪರಿಹಾರವಾಗುವುದು. ನೀನು ಗರುಡನ ಭಯದಿಂದ

ರಮಣಕ ದ್ವೀಪವನ್ನು ತೊರೆದು ಇಲ್ಲಿಗೆ ಬಂದಿರುವಿ. ಆದರೆ ಇನ್ನು ಮುಂದೆ ನನ್ನ ಪಾದಚಿಹ್ನೆಯನ್ನು ಹೊತ್ತಿರುವ ನಿನಗೆ ಅವನಿಂದ ಭಯವಿರುವುದಿಲ್ಲ.'

ಕಾಲಿಯ ತನ್ನ ಪತ್ನಿ ಪರಿವಾರದೊಂದಿಗೆ ಶ್ರೀಕೃಷ್ಣನನ್ನು ದಿವ್ಯ ವಸ್ತ್ರಾಭರಣ ಗಂಧಾದಿ ದ್ರವ್ಯಗಳಿಂದ ಭಕ್ತಿಯಿಂದ ಪೂಜಿಸಿ ಅನುಜ್ಞೆ ಪಡೆದು ಪ್ರದಕ್ಷಿಣ ನಮಸ್ಕಾರ ಮಾಡಿ ರಮಣಕ ದ್ವೀಪಕ್ಕೆ ಪ್ರಯಾಣ ಮಾಡಿದ. ಯಮುನೆಯ ನೀರು ತಿಳಿಯಾಗಿ ಅಮೃತದಂತಾಯಿತು.

❖❖❖

ಕಾಳಿಯನನ್ನು ಮರ್ದಿಸಿದ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ಅನುಗ್ರಹೋಽಯಂ ಭವತಾ ಕೃತೋ ಹಿ ನೋ
ದಂಡೋಽಸತಾಂ ತೇ ಖಲು ಕಲ್ಮಷಾಪಹಃ ।
ಯದ್ದಂದಶೂಕತ್ವಮಮುಷ್ಯ ದೇಹಿನಃ
ಕ್ರೋಧೋಽಪಿ ತೇಽನುಗ್ರಹ ಏವ ಸಮ್ಮತಃ ॥ ೩೪ ॥

ನೀನು ಮಾಡಿರುವ ಈ ದಂಡನೆ ನಮಗೆ ಅನುಗ್ರಹವೆ. ಸಜ್ಜನರು ಕಾರಣಾಂತರದಿಂದ ದೌರ್ಜನ್ಯವೆಸಗಿದಾಗ ನೀನು ಮಾಡುವ ದಂಡನೆ ಅವರ ಪಾಪವನ್ನು ತೊಳೆಯುತ್ತದೆ. ಪಾಪದಿಂದ ತಾನೆ ಈತನಿಗೆ ಸರ್ಪಜನ್ಮ ಬಂದಿದೆ? ಹೀಗಾಗಿ ನೀನು ಹುಸಿಮುನಿಸಿನಿಂದ ನಮ್ಮನ್ನು ದಂಡಿಸಿದರೆ ಅದನ್ನು ಅನುಗ್ರಹವೆಂದೇ ನಾವು ಸ್ವೀಕರಿಸುತ್ತೇವೆ.

ಇಲ್ಲಿ 'ಅಸತಾಂ' ಎಂದರೆ ಎಲ್ಲ ದುಷ್ಟರಲ್ಲ. ಸ್ವಭಾವದಿಂದ ದುಷ್ಟರಾದವರಿಗೆ ಅಪರಾಧಕ್ಕೆ ದಂಡನೆ ಮಾಡಿದರೆ ಅವರ ಪಾಪ ಪರಿಹಾರವಾಗುವುದಿಲ್ಲ. ಅವರು ಇನ್ನಷ್ಟು ಕುಪಿತರಾಗಿ ಪ್ರತಿಭಟಿಸಿ ಹೆಚ್ಚು ಪಾಪಗಳನ್ನೇ ಮಾಡುತ್ತಾರೆ. ದಂಡನೆಯನ್ನು ಅವರು ನ್ಯಾಯವೆಂದು, ತಮ್ಮ ಒಳಿತಿಗಾಗಿ ದಂಡನೆಯಾಯಿತೆಂದು ತಿಳಿಯುವುದಿಲ್ಲ. ಸ್ವಭಾವದಿಂದ ಸಜ್ಜನರಾಗಿದ್ದು ಕಾರಣಾಂತರದಿಂದ ದೌರ್ಜನ್ಯವೆಸಗುವವರು ದಂಡನೆಯಾದಾಗ ತಮ್ಮ ತಪ್ಪಿನ ಅರಿವಾಗಿ ಒಳ್ಳೆಯ ದಾರಿಯನ್ನೇ ಹಿಡಿಯುತ್ತಾರೆ. ದಂಡನೆ ತಮ್ಮ ಒಳಿತಿಗಾಗಿಯೆ ಆಯಿತೆಂದುಕೊಳ್ಳುತ್ತಾರೆ. ದಂಡನೆ ಮಾಡಿದವರಲ್ಲಿ ಹೆಚ್ಚು ಪ್ರೀತಿ ಭಕ್ತಿಗಳನ್ನೇ ಮಾಡುತ್ತಾರೆ. ಎಲ್ಲ ಪಾಪಗಳನ್ನೂ

ಕಳೆದುಕೊಳ್ಳುತ್ತಾರೆ. ಕಾಳಿಯನೂ ಹೀಗೇ ಸ್ವಭಾವದಿಂದ ಸಜ್ಜನ. ಅದರಿಂದ 'ಶ್ರೀಕೃಷ್ಣನನ್ನು ಭಗವಂತನೆಂದು ತಿಳಿದು ಮನಸಿನಿಂದ ಶರಣು ಹೊಂದಿದ ಎಂದು ಹಿಂದೆ (ಶ್ಲೋ.೩೦) ಹೇಳಿದೆ. ಸ್ವಭಾವದಿಂದ ದುರ್ಜನರಾದವರು ಹೀಗೆ ಮಾಡುವುದಿಲ್ಲ. ಪಾಪ ಮಾಡಿ ತಮಸ್ಸಿನಲ್ಲಿ ಬಿದ್ದು ಹೊರಳಾಡುತ್ತಿದ್ದರೂ ಇದು ಕೇವಲ ಅನ್ಯಾಯವೆಂದುಕೊಳ್ಳುತ್ತ ಕ್ರೋಧಪರವಶರಾಗಿ ಸೇಡುತೀರಿಸಿಕೊಳ್ಳಲು ಬಯಸುತ್ತಾರೆ. ಅವರ ಪಾಪ ಪರಿಹಾರವಾಗದೆ ಹೆಚ್ಚೇ ಆಗುತ್ತದೆ. ಮಹಾಕೂರ್ಮ ಪುರಾಣದಲ್ಲಿ ಇದು ಸ್ಪಷ್ಟವಿದೆ.

ಕಾಲಿಯ ಸ್ವಭಾವತಃ ಪುಣ್ಯಾತ್ಮನೆಂದು ಮುಂದಿನ ಶ್ಲೋಕದಲ್ಲಿಯೂ ಸ್ಪಷ್ಟವಾಗುತ್ತದೆ- 'ಈತ ಪೂರ್ವಜನ್ಮದಲ್ಲಿ ಅದೇನು ಪುಣ್ಯ ಮಾಡಿದನೋ, ಅದರಿಂದ ನೀನೊಲಿದು ನಮಗೆ ಅನುಗ್ರಹಿಸಿರುವೆ' ಎನ್ನುತ್ತಾರೆ ನಾಗಿಣಿಯರು. ಇದನ್ನೂ ಅಪಾರ್ಥಮಾಡಿ ವೀರರಾಘವ ವ್ಯಾಖ್ಯಾನದಲ್ಲಿ 'ಈತ ಪೂರ್ವಜನ್ಮದಲ್ಲಿ ಯಾವ ಪುಣ್ಯಕಾರ್ಯವನ್ನು ಮಾಡಿದವನಲ್ಲ. ಅಂಥವನನ್ನೂ ನೀನು ಅನುಗ್ರಹಿಸುವುದಕ್ಕೆ ನಿನ್ನ ಅಕೃತ್ರಿಮವಾದ ವಾತ್ಸಲ್ಯ ಕಾರಣ' ಎನ್ನುತ್ತಾರೆ.

ಕಾಲಿಯಮರ್ದನ ಲೀಲೆಯ ಈ ರಹಸ್ಯ ಬೇರೆ ವ್ಯಾಖ್ಯಾನಕಾರರಿಗೆ ತಿಳಿದಂತಿಲ್ಲ. 'ನೀನು ಯಾವ ದುಷ್ಟರನ್ನು ದಂಡಿಸುವೆಯೋ ಅಂತಹ ದುಷ್ಟರ ಪಾಪವೆಲ್ಲವೂ ಪರಿಹಾರವಾಗುತ್ತದೆ' ಎಂದಿಷ್ಟೇ ಹೇಳಿ ಮುಂದೆ ಹೋಗುತ್ತಾರೆ. ಶ್ರೀಮದಾಚಾರ್ಯರು ಉತ್ತಮವಾದ ಈ ಪ್ರಮೇಯವನ್ನು ಪುರಾಣದ ಆಧಾರ ಕೊಟ್ಟು ಹೇಳಿದರೂ ಇವರು ಅದನ್ನು ಸ್ವೀಕರಿಸದಿರುವುದು ಶೋಚನೀಯ-

ದಂಡೋऽಪಿ ಭಗವಚ್ಚೀರ್ಣೋ ಮಮೈಷೋऽನುಗ್ರಹಃ ಸ್ಮೃತಃ ।
ಇತಿ ಭಕ್ತ್ಯಾ ಚಿಂತಯತಾಂ ಶುಭಕಾರೀ ಭವತ್ಯಲಂ ।
ತತ್ರಾಪಿ ಕುರ್ವತಾಂ ದ್ವೇಷಂ ತಮಃಪ್ರಾಪ್ತ್ಯೈ ತಥಾ ಭವೇತ್ ॥
ಇತಿ ಚ ॥

'ಭಗವಂತ ನೀಡಿದ ಈ ದಂಡನೆಯೂ ಕೂಡ ನನಗೆ ಅನುಗ್ರಹವೇ ಆಗಿದೆ' ಎಂದು ಭಕ್ತಿಯಿಂದ ಸ್ವೀಕರಿಸುವವರಿಗೆ ಅದು ಶುಭವನ್ನೇ ಉಂಟುಮಾಡುತ್ತದೆ. ಭಗವಂತ ದಂಡನೆ ಮಾಡಿದಾಗ ಅದನ್ನು ವಿರೋಧಿಸಿ ಅವನಲ್ಲಿ ದ್ವೇಷ ಮಾಡುವವರಿಗೆ ಅದು ತಮಃಪ್ರಾಪ್ತಿಗೆ ಕಾರಣವಾಗುವುದು' ಎಂದು ಮಹಾಕೂರ್ಮಪುರಾಣದಲ್ಲಿ ಹೇಳಿದೆ.

❖❖❖

ಕಾಲಿಯಮರ್ದನ ಶ್ರೀಕೃಷ್ಣನನ್ನು ನಾಗಿಣಿಯರು ಸ್ತುತಿಸುತ್ತಾರೆ-

ನ ನಾಕಪೃಷ್ಠಂ ನಚ ಪಾರಮೇಷ್ಠ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ವಾಂಛಂತಿ ತ್ವತ್‌ಪಾದರಜಃ ಪ್ರಪನ್ನಾಃ ॥ ೩೭ ॥

ನಿನ್ನ ಪಾದಧೂಳಿಯನ್ನು ಆಶ್ರಯಿಸಿರುವವರು ಸ್ವರ್ಗವನ್ನು ಬಯಸುವುದಿಲ್ಲ. ಸಾರ್ವಭೌಮ ಪದವಿಯನ್ನೂ ಬಯಸುವುದಿಲ್ಲ. ಬ್ರಹ್ಮಪದವಿಯನ್ನೂ ಬಯಸುವುದಿಲ್ಲ. ಪಾತಾಳದ ಒಡೆತನವೂ ಬೇಡ, ಯೋಗ ಸಿದ್ಧಿಯೂ ಬೇಡ. ಮುಕ್ತಿಯನ್ನೂ ಅವರು ಬಯಸಲಾರರು.

ಬೇರೆ ವ್ಯಾಖ್ಯಾನಕಾರರು ಈ ಶ್ಲೋಕದಲ್ಲಿ ಮೇಲುನೋಟಕ್ಕೆ ಕಾಣುವ ಅರ್ಥವನ್ನೇ ಸ್ವೀಕರಿಸಿದ್ದಾರೆ. ಆದರೆ ಅದು ಸಕಲಶಾಸ್ತ್ರಗಳು ಹೊರಟಿರುವ ಮೂಲ ಉದ್ದೇಶಕ್ಕೇ ವಿರುದ್ಧವಾಗಿದೆ. ಮೋಕ್ಷವೇ ಸಕಲ ಪುರುಷಾರ್ಥಗಳಲ್ಲಿ ಉತ್ತಮ. ಮೋಕ್ಷದ ಉದ್ದೇಶದಿಂದಲೇ ಸಕಲಶಾಸ್ತ್ರಗಳು ಹೊರಟಿವೆ. ಮೋಕ್ಷಕ್ಕಿಂತಲೂ ಹೆಚ್ಚಿನ ಪುರುಷಾರ್ಥವಿದೆ ಎಂದು ಮೋಕ್ಷಶಾಸ್ತ್ರ ಹೇಳೀತೆ? ಅದರಿಂದ ಮೋಕ್ಷಶಾಸ್ತ್ರವಾದ ಭಾಗವತದ ಅಭಿಪ್ರಾಯವನ್ನು ಹೀಗೆ ಗ್ರಹಿಸಬೇಕು-

ಏಕಾಂತ ಭಕ್ತರಿಗೆ ಸಂಸಾರವೆಂಬುದು ಸುಟ್ಟಬಟ್ಟೆಯಂತೆ ಇದ್ದೂ ಇಲ್ಲದಂತಿರುವುದರಿಂದ ಅವರಿಗೆ ಈಗಲೇ ಮೋಕ್ಷವಿದೆ, ಬೇರೆ ಮೋಕ್ಷಬೇಕಾಗಿಲ್ಲ. ಬ್ರಹ್ಮಾದಿ ದೇವತೆಗಳು ಇಂಥ ಏಕಾಂತ ಭಕ್ತರು. ಅವರಿಗೆ ಸಂಸಾರದಲ್ಲಿಯೂ ಭಗವಂತನ ಧ್ಯಾನಮಾಡುವಾಗ ಮೋಕ್ಷಸುಖವೇ ಲಭ್ಯವಿದೆ.

ಏಕಾಂತಿಗಳಲ್ಲದ ಅಲ್ಪಾಧಿಕಾರಿಗಳಿಗೆ ಸಿಗುವ ಮುಕ್ತಿಯಲ್ಲಿ ಸಂಸಾರದುಃಖ ವಿರುವುದಿಲ್ಲ ಎಂಬುದೊಂದು ಗುಣ. ಹೊರತು, ಭಗವಂತನ ಸಾಮೀಪ್ಯದ ಸುಖವಿದೆ ಎನ್ನಲಾಗದು. ಸಾಮೀಪ್ಯದ ಸುಖವಿಲ್ಲದ ಅಂಥ ಮೋಕ್ಷವನ್ನು ಏಕಾಂತಿಗಳು ಬಯಸಲಾರರು. ಅವರಿಗೆ ಅದಕ್ಕಿಂತ ಹೆಚ್ಚಿನ ಧ್ಯಾನಸುಖ ಸಂಸಾರದಲ್ಲಿಯೇ ಸಿಗುತ್ತಿದೆ. ಅದರಿಂದ 'ಪಾದಧೂಳಿಯನ್ನು ಆಶ್ರಯಿಸಿದವ ರೆ'ಂದರೆ ಧ್ಯಾನದಲ್ಲಿ ಭಗವಂತನ ಸಾನ್ನಿಧ್ಯಸುಖವನ್ನು ಪಡೆದವರು ಏಕಾಂತಿಗಳು ಅಲ್ಪಾಧಿಕಾರಿಗಳ ಮೋಕ್ಷವನ್ನು ಬಯಸಲಾರರು. ಲಿಂಗಭಂಗಾನಂತರ ಅಲ್ಪಾಧಿ ಕಾರಿಗಳು 'ಕೇಚಿದತ್ರೈವ ಮುಚ್ಯಂತೇ' 'ಆ ಜನಾನ್ನ ಜನಿರ್ಭುವಿ' ಎಂಬಂತೆ ಜನೋಲೋಕದಿಂದ ತೊಡಗಿ ಸತ್ಯಲೋಕದವರೆಗೂ ವಾಸಮಾಡುವ

ಮೋಕ್ಷವನ್ನೇ 'ಅಪುನರ್ಭವ' 'ಪುನರ್ಜನ್ಮವಿಲ್ಲದಂತಾಗುವ ಮುಕ್ತಿ' ಎಂದು ಕರೆದು ಅದಕ್ಕಿಂತಲೂ ಶ್ರೇಷ್ಠ, ಏಕಾಂತಿಗಳ ಭಕ್ತಿ ಸುಖ ಎನ್ನುತ್ತಿದ್ದಾರೆ ನಾಗಿಣಿಯರು.

ಅಪುನರ್ಭವಮಾತ್ರಾತ್ತು ಹರಿಸಾಮೀಪ್ಯಮುತ್ತಮಂ।
ತತ್ರಾಪಿ ಸ್ಪರ್ಶಯೋಗ್ಯತ್ವಂ ಯಥಾವೇದವಿದೋ ವಿದುಃ॥

ಇತಿ ಪಾದ್ಮೇ ॥

ಲಿಂಗಭಂಗಹೊಂದಿ ಪುನರ್ಜನ್ಮರಹಿತರಾಗಿ ಜನಲೋಕಾದಿಗಳಲ್ಲಿ ಇರುವುದಕ್ಕಿಂತಲೂ ಶ್ವೇತದ್ವೀಪಾದಿ ಸ್ಥಾನಗಳಲ್ಲಿ ಹರಿಯ ಸಾಮೀಪ್ಯ ಹೊಂದಿರುವುದು ಉತ್ತಮವಾದ ಮೋಕ್ಷ, ಹರಿಯ ಸಮೀಪವಿರುವವ ರಲ್ಲಿಯೂ ಹರಿಯ ಅಂಗಸ್ಪರ್ಶಕ್ಕೆ ಯೋಗ್ಯರಾಗಿರುವುದು ಇನ್ನೂ ಉತ್ತಮವಾದ ಮೋಕ್ಷವೆಂದು ವೇದವನ್ನು ಯಥಾರ್ಥವಾಗಿ ಬಲ್ಲವರು ತಿಳಿಯುತ್ತಾರೆ ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಶ್ರೀಕೃಷ್ಣನ ಪಾದಧೂಳಿ ಕಾಳಿಯನ ತಲೆಯಲ್ಲಿ ಬಿದ್ದಿದೆ. ಅದನ್ನು ಕಾಳಿಯ ಭಕ್ತಿಯಿಂದ ಶರಣಾಗಿ ಸೇವಿಸುತ್ತಿದ್ದಾನೆ. ಈ ಸುಖ ಅಲ್ಪಾದಿಕಾರಿಗಳ ಮೋಕ್ಷದಲ್ಲಿಯೂ ಸಿಗಲಾರದು, ಇನ್ನು ಸ್ವರ್ಗಾದಿಗಳ ಒಡೆತನ ಮುಂತಾದ ಸುಖವೆಷ್ಟರದು? ಎನ್ನುವುದು ಭಾಗವತದ ಅಭಿಪ್ರಾಯ.

❖❖❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ।
ಭೂತಾವಾಸಾಯ ಭೂತಾಯ ಪರಾಯ ಪರಮಾತ್ಮನೇ ॥ ೩೯ ॥

ಎಲ್ಲ ಜೀವಿಗಳೊಳಗೆ ನಿಯಾಮಕನಾಗಿ ವಾಸಮಾಡುವವನು, ಸರ್ವದಾ ಇರುವವನು, ಎಲ್ಲರಿಗಿಂತ ವಿಲಕ್ಷಣ. ಸರ್ವೋತ್ತಮ. ಇಂಥ ಭಗವಂತ ನಾದ ಪರಮಪುರುಷನಾದ ಮಹಾತ್ಮನಾದ ನಿನಗಿದೋ ನಮಸ್ಕಾರ.

ಇಲ್ಲಿ 'ಭೂತಾವಾಸಾಯ ಭೂತಾಯ' ಎಂದರೆ ಜೀವಿಗಳಲ್ಲಿ ವಾಸಮಾಡುವವನೂ ಜೀವಿಗಳ ರೂಪದಿಂದಿರುವವನೂ ಒಬ್ಬನೆ ಪರಮಾತ್ಮ ಎಂದು ಮೇಲುನೋಟಕ್ಕೆ ಅರ್ಥ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರೆಲ್ಲರೂ ಹಾಗೇ ಅರ್ಥವಿವರಣೆ ನೀಡಿದ್ದಾರೆ. ಏಕೆಂದರೆ ಅದ್ವೈತದಲ್ಲಿ ಜೀವಿಗಳಲ್ಲಿ ಅಂತರ್ಯಾಮಿಯಾದ ಪರಮಾತ್ಮನೇ ಜಗತ್ತಿಗೆ ಉಪಾದಾನನಾಗಿ 'ಭೂತ'

ಅದಕ್ಕೂ ಮೊದಲು ಇರುವವನು. ವಿಶಿಷ್ಟಾದ್ವೈತದಲ್ಲಿಯೂ ಹೀಗೇ ಹೇಳುತ್ತಾರೆ. ಶ್ರೀಮದಾಚಾರ್ಯರ ಮತದಲ್ಲಿಯೂ ಪರಮಾತ್ಮ ಜಗತಿಗೆ ಸೃಷ್ಟಿಕರ್ತನಾದ್ದರಿಂದ ಜಗತ್ತಿಗಿಂತ ಮೊದಲೂ ಇರುವವನೆ. ಆದರೆ ಉಪಾದಾನತ್ವಪಕ್ಷದಲ್ಲಿ ಜೀವ ಬ್ರಹ್ಮರಿಗೆ ಅರ್ಥಾತ್ ಅಭೇದವನ್ನು ಹೇಳಿದಂತಾಗುತ್ತದೆ. ಉಪಾದಾನ ಮತ್ತು ಅದರ ಪರಿಣಾಮಗಳಿಗೆ ಅಭೇದವಿದೆ. ಸೃಷ್ಟಿಕರ್ತೃತ್ವ ಪಕ್ಷದಲ್ಲಿ ಕರ್ತನಿಗೆ ಅಧೀನವಾಗಿದೆ ಜಗತ್ತು ಎಂಬುದು ಅರ್ಥಾತ್ ಉಕ್ತವಾಗುತ್ತದೆ. ಇದು ಸ್ತುತಿಯಾಗುತ್ತದೆ. ಅಭೇದವನ್ನು ಹೇಳಿದರೆ ಸ್ತುತಿಯಾಗುವುದಿಲ್ಲ.

ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ 'ಭೂತ' ಶಬ್ದ ಜೀವಪರ. 'ಭೂತಾವಾಸ' ಜೀವಾಂತರ್ಯಾಮಿ ಮತ್ತು 'ಭೂತ' ಜೀವ, ಒಬ್ಬನೆ. ಅಂದರೆ ಜೀವನು ಅಂತರ್ಯಾಮಿಯಾದ ಪರಮಾತ್ಮನ ಅಂಶವಾದ್ದರಿಂದ ಅಭೇದವಿದೆ. ಹೀಗಾಗಿ ಅಂತರ್ಯಾಮಿ ರೂಪದಿಂದ ಅವನು ನಿಯಾಮಕನೂ ಹೌದು. ಜೀವರೂಪದಿಂದ ನಿಯಮ್ಯನೂ ಹೌದು! ಆದರೆ, ನಿಯಮ್ಯನಾಗುತ್ತಾನೆ ಎನ್ನುವುದು ಸ್ತುತಿಯಾಗಲಾರದು.

ವಲ್ಲಭ ವ್ಯಾಖ್ಯಾನದಲ್ಲಿಯೂ ಹೀಗೇ ಜೀವ ಪರಮಾತ್ಮರಿಗೆ ಅಭೇದವನ್ನು ಹೇಳುತ್ತಾರೆ. 'ಭೂತಾವಾಸ' ಎಂದರೆ ಭೂತಗಳಿಗೆ ಜೀವರಿಗೆ ಆವಾಸ, ಆಶ್ರಯ. ಅದರಿಂದಲೆ ಶ್ರೀಕೃಷ್ಣ ಯಶೋದೆಗೆ ಬಾಯಲ್ಲಿ ಜಗತ್ತನ್ನು ತೋರಿಸಿದ. ಆದರೆ ಈ ಜೀವರು ಪರಮಾತ್ಮನಿಗಿಂತ ಭಿನ್ನರಾದರೆ ಭಿನ್ನರಾದ ಜೀವರ ಸಂಗದಿಂದ ಪರಮಾತ್ಮನ ಅಸಂಗತ್ವ ಮಹಿಮೆಗೆ ಭಂಗ ಉಂಟಾದೀತು. ಅದಕ್ಕೆ ಪರಮಾತ್ಮ ತಾನು ಜೀವರೂಪನೂ ಆಗಿಬಿಡುತ್ತಾನೆ!' ಆದರೆ, ಜೀವರ ಸಂಗವೆ ಪರಮಾತ್ಮನ ಮಹಿಮೆಗೆ ಕುಂದೆನ್ನುವುದಾದರೆ ಜೀವರ ಅಭೇದ ಇನ್ನೂ ಹೆಚ್ಚಿನ ಕುಂದು ತರಲಾರದೆ? ಅದರಿಂದ ವಲ್ಲಭವ್ಯಾಖ್ಯಾನಪಕ್ಷದಲ್ಲಿಯೂ ಇದು ಸ್ತುತಿಯಾಗುವು ದಿಲ್ಲ.

ವಸ್ತುತಃ 'ಭೂತ' ಶಬ್ದದಲ್ಲಿ ಕ್ತಪ್ರತ್ಯಯವು ಹೇಳುವ ಭೂತಕಾಲ ಅವಿವಕ್ಷಿತವೆಂದಿಟ್ಟುಕೊಂಡರೆ ಇರುವವನು, ಸರ್ವದಾ ಇರುವವನು ಎಂಬ ಅರ್ಥ ಸಿಗುತ್ತದೆ. ಆಗ 'ಭೂತಾವಾಸ' 'ಜೀವಿಗಳೊಳಗೆ ವಾಸಮಾಡುವವನು' ಎಂದರೆ, ಜೀವಿಗಳು ನಾಶವಾಗುವಾಗ ಅವುಗಳೊಳಗಿರುವ ಪರಮಾತ್ಮನೂ ನಾಶವಾಗು ವನೆ? ಇಲ್ಲ, ನಾಶವಾಗದೆ ಸರ್ವದಾ ಇರುತ್ತಾನೆ ಎಂದು ಭೂತಶಬ್ದವು ಹೇಳುತ್ತದೆ. ಇದು ಜೀವರಿಗಿಂತ ಅತ್ಯಂತ ವಿಲಕ್ಷಣ ಪರಮಾತ್ಮ ಎಂದು ಒಳ್ಳೆಯ ಸ್ತುತಿಯಾಗುತ್ತದೆ ಎನ್ನುತ್ತಾರೆ ಶ್ರೀಮದಾಚಾರ್ಯರು-

ಭೂತಾಯ ಸರ್ವದಾ ವಿದ್ಯಮಾನಾಯ ।

'ಭೂತಾಯ' ಎಂದರೆ ಸರ್ವದಾ ಇರುವ ಪರಮಾತ್ಮ ಎಂದರ್ಥ.

❖ ❖ ❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ಜ್ಞಾನವಿಜ್ಞಾನನಿಧಯೇ ಬ್ರಹ್ಮಣೇಽನಂತಶಕ್ತಯೇ ।
ಅಗುಣಾಯಾವಿಕಾರಾಯ ನಮಸ್ತೇಽಪ್ರಾಕೃತಾಯ ಚ ॥ ೪೦ ॥

ಸಾಮಾನ್ಯ ವಿಶೇಷ ಜ್ಞಾನಗಳಿಗೆ ನಿಧಿಯಂತಿರುವವನು, ಗುಣಪೂರ್ಣ. ಅನಂತಶಕ್ತಿ ಉಳ್ಳವನು, ಗುಣತ್ರಯ ರಹಿತ, ನಿರ್ವಿಕಾರ ಅಪ್ರಾಕೃತನಾದ ನಿನಗೆ ನಮಸ್ಕಾರ.

ಇಲ್ಲಿ 'ನಮಸ್ತೇಪ್ರಾಕೃತಾಯ' ಎಂಬಲ್ಲಿ 'ಪ್ರಾಕೃತಾಯ' ಎಂದು ಪದವಿಭಾಗ ಭ್ರಮಕ್ಕೆ ಅವಕಾಶವಿದೆ. ಜೀವಗೋಸ್ವಾಮಿ ಮತ್ತು ಸುದರ್ಶನಸೂರಿ ವ್ಯಾಖ್ಯಾನಗಳಲ್ಲಿ ಹಾಗೇ ಪದವಿಭಾಗ ಮಾಡಿದ್ದಾರೆ. ಪ್ರಕೃತಿಗೆ ಪ್ರವರ್ತಕನೆಂದು ಜೀವಗೋಸ್ವಾಮಿವ್ಯಾಖ್ಯಾನ ವಿವರಣೆ ನೀಡಿದೆ. ಪ್ರಕೃತಿಯಲ್ಲಿ ಕಂಡುಬರುವವನೆಂದು ಸುದರ್ಶನ ಸೂರಿ ವ್ಯಾಖ್ಯಾನ ಹೇಳಿದೆ. ಪ್ರಕೃತಿ ಭಗವಂತನ ಶರೀರವಾದ್ದರಿಂದ ಶರೀರದಲ್ಲಿ ಶರೀರಿ ಕಂಡುಬರುತ್ತಾನೆ ಎಂದು ಅದರ ಅಭಿಪ್ರಾಯ.

'ಅಪ್ರಾಕೃತಾಯ' ಎಂದು ಪದವಿಭಾಗವೆನ್ನುವ ಪಕ್ಷದಲ್ಲಿ ಭಗವಂತ 'ಅವಿಕಾರಾಯ' 'ವಿಕಾರರಹಿತ' ಅದು ಏಕೆ? ಎಂದು ಅದನ್ನು ಉಪಪಾದನ ಮಾಡುವುದಕ್ಕಾಗಿ 'ಅಪ್ರಾಕೃತಾಯ' ಪ್ರಕೃತಿಜನ್ಯ ಶರೀರಾದಿ ರಹಿತನಾದ್ದರಿಂದ ಎಂದಿದೆ ಎಂದು ಸಾರ್ಥಕ್ಯ ಹೇಳಬೇಕು. ಹಾಗೇ ವಿಜಯಧ್ವಜೀಯದಲ್ಲಿ ಹೇಳಿದೆ. ಆದರೆ ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ-

'ಅಗುಣತ್ವೇನಾವಿಕಾರಾಯ ಅಥ ಚ ಪ್ರಕೃತಿಪ್ರವರ್ತಕಾಯ'

ಎಂದಿದೆ. 'ಅಗುಣಾಯ' 'ಗುಣಜನ್ಯಶರೀರಾದಿರಹಿತ'ನೆಂಬುದರಿಂದ ಪರಮಾತ್ಮ 'ಅವಿಕಾರ' ವಿಕಾರರಹಿತ. ಹೀಗೆ ಅಗುಣತ್ವದಿಂದಲೇ ಅವಿಕಾರತ್ವವನ್ನು ಸಮರ್ಥಿಸಿದ ಬಳಿಕ ತಿರುಗಿ 'ಅಪ್ರಾಕೃತಾಯ' ಎಂಬ ವಿಶೇಷಣವೇಕೆ? ಎಂಬ ಸಮಸ್ಯೆ ಬರುವುದರಿಂದ 'ಅಪ್ರಾಕೃತಾಯ' ಎಂದು ಪದವಿಭಾಗವಲ್ಲ, 'ಪ್ರಾಕೃತಾಯ' ಎಂದು ಪದವಿಭಾಗ ಮಾಡಿ ಅದಕ್ಕೆ 'ಪ್ರಕೃತಿ ಪ್ರವರ್ತಕ' ಎಂದು

ವಿವರಣೆ ನೀಡುತ್ತೇವೆ' ಎಂದು ಇದರ ಅಭಿಪ್ರಾಯ ಕಾಣುತ್ತದೆ. ಆದರಿಂದ 'ಅಪ್ರಾಕೃತಾಯ' ಎಂಬ ಪದ ವಿಭಾಗಕ್ಕಿಂತ 'ಪ್ರಾಕೃತಾಯ' ಎಂದು ಪದವಿಭಾಗವೆ ಒಳ್ಳೆಯದೆಂದು ಮೇಲುನೋಟಕ್ಕೆ ಕಾಣುತ್ತದೆ.

ವಸ್ತುತಃ ಪರಮಾತ್ಮನು ಅಗುಣ, ಅಪ್ರಾಕೃತನೆ. ಆದರೂ ಪ್ರಾಕೃತನಾದ ಜೀವ ಪರಮಾತ್ಮನ ಅಂಶ. ಆದರಿಂದ ಪರಮಾತ್ಮ ಜೀವಾಭಿನ್ನನಾಗಿದ್ದು ಪ್ರಾಕೃತ, ಸಗುಣನೆನಿಸುತ್ತಾನೆ, ವಿಕಾರ ಉಳ್ಳವನೇ ಆಗುತ್ತಾನೆ. ಅಗುಣತ್ವದಿಂದ ಅವಿಕಾರತ್ವ ಸಮರ್ಥನೆ ಮಾಡಿ ಪ್ರಯೋಜನವಿಲ್ಲ ಎಂಬ ಆಕ್ಷೇಪ ಬರುತ್ತದೆ. ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಇದಕ್ಕೆ ಸಮಾಧಾನ ಸಿಗಲಾರದು. ಶ್ರೀಮದಾಚಾರ್ಯರು ಹೇಳುತ್ತಾರೆ, ಆಗುಣತ್ವದಿಂದ ಅವಿಕಾರತ್ವ ಸಮರ್ಥನೆ ಮಾಡಿದ ಬಳಿಕ ಸಗುಣ ಜೀವಾಭೇದಪ್ರಯುಕ್ತವಾಗಿ ಸವಿಕಾರತ್ವ ಬರಲು ಅವಕಾಶವಿಲ್ಲ. ಏಕೆಂದರೆ, ಜೀವ ಪರಮಾತ್ಮನ ಭಿನ್ನಾಂಶ, ಹೊರತು ಅಭಿನ್ನಾಂಶನಲ್ಲ. ಆದರಿಂದ ಅಗುಣನಾದ ಪರಮಾತ್ಮ ಅಗುಣನೇ ಹೊರತು ಸಗುಣನೆನಿಸುವುದಿಲ್ಲ. ಇದನ್ನು ತಿಳಿಸುವುದಕ್ಕಾಗಿ ಪುನಃ ಅಗುಣತ್ವವನ್ನು 'ಅಪ್ರಾಕೃತ' ಪದದಿಂದ ಹೇಳುತ್ತಿದೆ ಭಾಗವತ ಶ್ಲೋಕ. ಇದು ಪುನರುಕ್ತಿಯೇ ಆದರೂ ವ್ಯರ್ಥ ಪುನರುಕ್ತಿಯಾಗುವುದಿಲ್ಲ.

'ಪ್ರಾಕೃತಾಯ' ಎಂದೇ ಪದವಿಭಾಗ ಮಾಡಬಹುದಿತ್ತಲ್ಲ ಎಂದರೆ ಆಗ ಜೀವನು ಪರಮಾತ್ಮನ ಭಿನ್ನಾಂಶ ಎನ್ನುವ ಪ್ರಮೇಯದ ಸೂಚನೆ ಇಲ್ಲಿ ಇಲ್ಲವಾಗುತ್ತಿತ್ತು. ಮತ್ತು 'ಪ್ರಾಕೃತ' ಶಬ್ದಕ್ಕೆ 'ಪ್ರಕೃತಿಬದ್ಧ' ಎಂದೇ ಅರ್ಥ ಸ್ವರಸವಾಗಿದೆ ಹೊರತು 'ಪ್ರಕೃತಿ ಪ್ರವರ್ತಕ' ಎಂಬ ಅರ್ಥ ಸ್ವರಸವಲ್ಲ. ಇನ್ನು 'ಪ್ರಕೃತಿಯಲ್ಲಿ ಕಂಡುಬರುವವನು ಪ್ರಕೃತಿಶರೀರಿ' ಎಂಬ ಅರ್ಥವಂತೂ ಬಾಧಿತ. ಪ್ರಕೃತಿ ಪರಮಾತ್ಮನ ಶರೀರವಲ್ಲ, ಶರೀರದಂತೆ ಅಧೀನವಷ್ಟೆ. ಆದರಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ಅಪ್ರಾಕೃತಾಯ ।

ಈ ಶ್ಲೋಕದಲ್ಲಿ 'ಅಪ್ರಾಕೃತಾಯ' ಎಂದೇ ಪದವಿಭಾಗ ಹೊರತು 'ಪ್ರಾಕೃತಾಯ' ಎಂದಲ್ಲ.

❖ ❖ ❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ಕಾಲಾಯ ಕಾಲನಾಭಾಯ ಕಾಲಾವಯವಸಾಕ್ಷಿಣೇ ।
ವಿಶ್ವಾಯ ತದುಪದ್ರಷ್ಟ್ರೇ ತತ್ಕರ್ತ್ರೇ ವಿಶ್ವಹೇತವೇ ॥ ೪೧ ॥

ಕಾಲನಿಯಾಮಕ, ಕಾಲಾಧಾರ, ಸೂಕ್ಷ್ಮಕಾಲಗಳನ್ನು ಪ್ರತ್ಯಕ್ಷ ಕಾಣಬಲ್ಲವನು ವಿಶ್ವಾಧೀಶ ವಿಶ್ವವನ್ನು ಬಲ್ಲವ ವಿಶ್ವಕರ್ತ ವಿಶ್ವಕ್ಕೆ ಮೂಲಕಾರಣ ಇಂಥ ನಿನಗಿದೋ ನಮಸ್ಕಾರ.

ಇಲ್ಲಿ ಶುಕದೇವ ವ್ಯಾಖ್ಯಾನ[೧] ಪ್ರಕಾರ 'ಕಾಲಾಯ' ಎಂದರೆ ಕಾಲಾಭಿನ್ನ, ಕಾಲಸ್ವರೂಪನಾದ ಹರಿಗೆ ನಮಸ್ಕಾರ ಎನ್ನುತ್ತಾರೆ ನಾಗಿಣಿಯರು. 'ಕಾಲ ಅಚೇತನ. ಚೇತನನಾದ ಹರಿಗೆ ಅಚೇತನವಾದ ಕಾಲದ ಅಭೇದ ಹೇಗೆ ಕೂಡುತ್ತದೆ ಎಂದರೆ ಕಾಲ ಹರಿಯ ಒಂದು ಶಕ್ತಿ. ಶಕ್ತಿಗೂ ಶಕ್ತಿ ಉಳ್ಳ ಪದಾರ್ಥಕ್ಕೂ ಅಭೇದ ಕೂಡುತ್ತದೆ. ಅದರಿಂದ 'ಕಾಲಾಯ' ಎಂದರೆ ಕಾಲಸ್ವರೂಪನಾದ ಹರಿಗೆ ನಮಸ್ಕಾರ. 'ಕಾಲನಾಭಾಯ' ಎಂದರೆ ಕಾಲವೆಂಬ ಶಕ್ತಿಗೆ ಆಶ್ರಯನಾದ ಹರಿಗೆ ನಮಸ್ಕಾರ ಎಂದರ್ಥ.' ಆದರೆ, ಎಲ್ಲ ಶಕ್ತಿಗಳಿಗೂ ಅಭೇದವನ್ನು ಹೇಳಲಾಗದು. ಸ್ವರೂಪಶಕ್ತಿಗೆ ಅಭೇದ. ಭಿನ್ನಶಕ್ತಿಗೆ ಭೇದವೆ. ಕಾಲ ಅಚೇತನವಾಗಿದ್ದು ಚೇತನನಾದ ಹರಿಗಿಂತ ಭಿನ್ನವಾದ ಹರಿಯ ಶಕ್ತಿ ಎನ್ನಬೇಕು. 'ಕಾಲಾಯ' ಎಂದರೆ ಕಾಲಾಭಿನ್ನನಲ್ಲ, ಕಾಲಶಕ್ತಿ ಉಳ್ಳವನೆಂದೇ ಅರ್ಥ ಹೇಳಬೇಕು. ಆಗ 'ಕಾಲನಾಭ' ಶಬ್ದಕ್ಕೆ ಅದೇ ಅರ್ಥವಾಗಿರುವುದರಿಂದ ಪುನರುಕ್ತಿ, ಶ್ರೀಮದಾಚಾರ್ಯರು ಹೇಳುತ್ತಾರೆ. 'ಕಾಲ' ಎಂದು ಹರಿಯ ಒಂದು ಸ್ವರೂಪಶಕ್ತಿಯೂ ಇದೆ. ಅದೇ ಹೆಸರಿನಿಂದ ಪ್ರಸಿದ್ಧವಾಗಿರುವ ಅಚೇತನವಾದ ಭಿನ್ನಶಕ್ತಿಯೂ ಇದೆ. ಸ್ವರೂಪಶಕ್ತಿ ಅಭಿನ್ನವಾಗಿದ್ದು ವಿಶೇಷಬಲದಿಂದ ಹರಿಯನ್ನು ಆಶ್ರಯಿಸಿರುತ್ತದೆ. ಭಿನ್ನಶಕ್ತಿಯು ಭೇದವಿರುವುದರಿಂದಲೇ ಆಶ್ರಯಿಸಿರುತ್ತದೆ. ಹೀಗಾಗಿ 'ಕಾಲನಾಭಾಯ' ಎಂದರೆ ಕಾಲಕ್ಕೆ ಆಶ್ರಯನಾದ ಹರಿಗೆ ನಮಸ್ಕಾರ ಎಂದರ್ಥ.

[೨]ಸುದರ್ಶನ ಸೂರಿ ವ್ಯಾಖ್ಯಾನದಂತೆ ಕಾಲವು ಹರಿಗೆ ನಾಭಿಯಂತೆ ಒಂದು ಅವಯವ ಹೊರತು ಇಡೀ ಶರೀರವಲ್ಲ. ಹೀಗಾಗಿ ಕಾಲವು ಯಾರಿಗೆ ನಾಭಿಯಂತೆ ಇದೆಯೋ ಅವನು ಕಾಲನಾಭ ಎಂದು ಬಹುವ್ರೀಹಿ. [೩] ವೀರರಾಘವ ವ್ಯಾಖ್ಯಾನದಲ್ಲಿ ಇನ್ನೊಂದು ರೀತಿಯ ವಿವರಣೆಯಿದೆ. ರಥದ ಚಕ್ರದಲ್ಲಿ ನೇಮಿ ಅರ ನಾಭಿಗಳೆಂದು ಬೇರೆ ಬೇರೆ ಭಾಗಗಳಿವೆ. ಅವುಗಳಲ್ಲಿ ನೇಮಿಗೂ ಅರಗಳಿಗೂ

---

೧ ಕಾಲಾಯ ಕಾಲಾಭಿನ್ನಾಯ । ನನು ಚೇತನಸ್ಯಾಚೇತನಾಭೇದಃ ಕಥಂ ಘಟೇತೇತ್ಯತಃ ಶಕ್ತಿ ತದ್ವತೋರ್ಹಿ ಭೇದಾಭೇದ ಸಂಬಂಧಾದಿತ್ಯಾಶಯೇನಾಹುಃ ಕಾಲನಾಭಾಯ ಕಾಲ ಶಕ್ತ್ಯಾಶ್ರಯಾಯ । -ಶುಕದೇವಃ

೨ ಕಾಲಃ ನಾಭಿವದಂಶಭೂತೋ ಯಸ್ಯ ಸಃ ಕಾಲನಾಭಃ । -ಸುದರ್ಶನಃ

೩ ಕಾಲಸ್ಯ ನಾಭಿರ್ನೇಮ್ಯರಾದೀನಾಂ ನಾಭಿವದ್ಧಾರಕ ಆತ್ಮಭೂತ ಇತಿಯಾವತ್ । -ವೀರರಾಘವಃ

ನಾಭಿ ಧಾರಕ ಆಶ್ರಯ. ಹಾಗೇ ಕಾಲಚಕ್ರಕ್ಕೆ ನಾಭಿಯಂತೆ ಧಾರಕನು ಶ್ರೀಹರಿ. ಹೇಗೆಂದರೆ ಹರಿಗೆ ಚೇತನಾಚೇತನಾತ್ಮಕ ಸಕಲ ಪ್ರಪಂಚವು ಶರೀರ. ಅದರಿಂದ ಕಾಲವೂ ಅವನ ಶರೀರದಲ್ಲಿ ಒಂದು ಭಾಗವೆಂದಮೇಲೆ ಅದಕ್ಕೂ ಧಾರಕನು ಶರೀರಿಯಾದ ಶ್ರೀಹರಿಯೆ. 'ಕಾಲಸ್ಯ ನಾಭಿಃ' ಕಾಲಕ್ಕೆ ರಥಚಕ್ರನಾಭಿಯಂತೆ ಆಶ್ರಯ ಎಂದು ತತ್ಪುರುಷ ಎನ್ನುತ್ತಾರೆ.

ಆದರೆ ಪ್ರಪಂಚವೆಲ್ಲವೂ ಹರಿಯ ಶರೀರವೆಂದು ಅವರು ಹೇಳುವುದು ನಿಜವಲ್ಲ. ಹರಿಗೆ ಜಡಶರೀರವಿಲ್ಲ. ಸ್ವರೂಪಭೂತವಾದ ಚಿನ್ಮಯಶರೀರ ಹೊರತು ಬೇರೆ ಶರೀರವಿಲ್ಲ. ಅದರಿಂದ ಅವನಿಗೆ ಕಾಲ ಶರೀರವೆಂಬ ವಿವಕ್ಷೆಯಿಂದ ಅವನು ಕಾಲಾಶ್ರಯನಲ್ಲ. ಕಾಲವು ಅವನನ್ನು ಆಶ್ರಯಿಸಿರುವುದು ನಿಜ. 'ಕಾಲಸ್ಯ ನಾಭಿಃ' ಕಾಲಕ್ಕೆ ಆಶ್ರಯ ಎಂದು ತತ್ಪುರುಷವು ಸರಿಯೆ. ಹಾಗೆಯೇ 'ಕಾಲಃ ನಾಭೌ ಯಸ್ಯ ಸಃ' 'ಕಾಲವು ಹರಿಯ ನಾಭಿಯಲ್ಲಿ ಆಶ್ರಯಿಸಿದೆ' ಎಂದರೂ ತಪ್ಪಿಲ್ಲ, 'ಪದ್ಮಂ ನಾಭೌ ಯಸ್ಯ ಸಃ ಪದ್ಮನಾಭಃ' ಎನ್ನುವಂತೆ. ಏಕೆಂದರೆ ಪರಮಾತ್ಮನ ಅವಯವಗಳಿಗೆ ಪರಮಾತ್ಮನಿಂದ ಭೇದವಿಲ್ಲ. ಅವು ಅವನ ಸ್ವರೂಪವೆ. ಕಾಲ ಅವನ ಸ್ವರೂಪವನ್ನೆ ಆಶ್ರಯಿಸಿರುವುದರಿಂದ ನಾಭಿಯನ್ನಾಶ್ರಯಿಸಿದೆ ಎಂದೂ ಹೇಳಬಹುದು.

ವ್ಯಾಪ್ತವಾದ ಕಾಲವೂ ಕೂಡ ಮಹತೋ ಮಹೀಯನಾದ ಹರಿಯ ಒಂದು ಅಂಶವನ್ನಾಶ್ರಯಿಸಿರುತ್ತದೆ ಎಂದು ಸ್ತುತಿಸುವ ವಿವಕ್ಷೆಯಿಂದ ಈ ಬಹುವ್ರೀಹಿಯನ್ನು ಸ್ವೀಕರಿಸಬಹುದು. ಅದರ ಅರ್ಥ ಕಾಲಾಶ್ರಯ ಎನ್ನುವ ಅಭಿಪ್ರಾಯದಿಂದ ಶ್ರೀಮದಾಚಾರ್ಯರು 'ಕಾಲಾಶ್ರಯಾಯ' ಎಂದು ವಿವರಣೆ ನೀಡಿದ್ದಾರೆ. 'ನಾಭಿ' ಶಬ್ದ ಸಮಾಸಾಂತ ಪ್ರತ್ಯಯದಿಂದ 'ನಾಭ' ಎನಿಸಬಹುದು. ಸ್ವಾರ್ಥತದ್ಧಿತ ಪ್ರತ್ಯಯದಿಂದಲೂ ಹಾಗಾಗಬಹುದು.

ಶ್ರೀಹರಿ ವಿಶ್ವ, ವಿಶ್ವಕರ್ತೃ, ವಿಶ್ವಹೇತು ಇವು ಮೂರೂ ಆಗಿದ್ದಾನೆ ಎನ್ನುತ್ತಾರೆ ನಾಗಿಣಿಯರು.

[೧]ವೀರರಾಘವ ಶುಕದೇವ ಮುಂತಾದವರ ವ್ಯಾಖ್ಯಾನ ಪ್ರಕಾರ 'ವಿಶ್ವಾಯ' ಎಂದರೆ ವಿಶ್ವಕ್ಕಿಂತ ಅಭಿನ್ನನಾದವನು ಶ್ರೀಹರಿ. ವಿಶ್ವಕ್ಕೆ ಅವನು ಉಪಾದಾನ

---

೧ ನ ಕೇವಲಮುಪಾದಾನಕಾರಣಭೂತಾಯ ಅಪಿ ತು ಜಗನ್ನಿಮಿತ್ತಭೂತಾಯ ಚೇತ್ಯಭಿಪ್ರಾಯೇಣಾಹುಃ ತತ್ಕರ್ತ್ರೇ ಇತಿ। ಉಪಕರಣಾಧಿಕರಣಾದಿಕಮಪಿ ತ್ವಮೇವೇತ್ಯಭಿಪ್ರಾಯೇಣೋಕ್ತಂ ವಿಶ್ವಸ್ಯ ಹೇತವ ಇತಿ। ಹೇತುತ್ವಂ ಕಾರಕ ಷಟ್ಕಸಾಧಾರಣಂ। ಗೋ ಬಲೀವರ್ದ ನ್ಯಾಯೇನ ಕರ್ತ್ರೇ ಇತ್ಯುಕ್ತಿಃ। -ವೀರರಾಘವಃ

ವಿಶ್ವಾಯ ವಿಶ್ವಾಭಿನ್ನಾಯ। ಕಾರ್ಯ ಕಾರಣಯೋ ರ್ಭೇದಾಭೇದ ಸಂಬಂಧಾತ್। ವಿಶ್ವಸ್ಯ

ಕಾರಣನಾದ್ದರಿಂದ ಅಭಿನ್ನನಾದರೂ ಕರ್ತನೂ ಆದ್ದರಿಂದ ಭಿನ್ನನೂ ಹೌದು. ಅದಕ್ಕೆಂದೇ 'ಹೇತವೇ' 'ಕರ್ತ್ರೇ' ಎಂದು ಎರಡೂ ವಿಶೇಷಣಗಳು. 'ಹೇತು' ಶಬ್ದ ನಿಮಿತ್ತ ಉಪಾದಾನಗಳೆರಡನ್ನೂ ಹೇಳಬಲ್ಲುದು. ಆರು ಕಾರಕಗಳನ್ನೂ ಹೇಳಬಲ್ಲುದು. ಆದರೂ ಉಪಾದಾನ ಪರವೆಂದಿಟ್ಟುಕೊಂಡು ಕರ್ತನಲ್ಲವೆಂದು ತಿಳಿಯಬಾರದೆಂದು ತಿರುಗಿ 'ಕರ್ತ್ರೇ' ಎಂದು ಹೇಳಿದೆ. ಇಲ್ಲಿ ಗೋಬಲೀವರ್ದ ನ್ಯಾಯವಿದೆ. 'ಗೋ' ಶಬ್ದ ಹಸು ಎತ್ತು ಎರಡನ್ನೂ ಹೇಳುತ್ತಿದೆ. ಆದರೂ ಹಸುವನ್ನು ಮಾತ್ರ ಇಟ್ಟುಕೊಳ್ಳಕೂಡದೆಂದು ಪ್ರತ್ಯೇಕವಾಗಿ 'ಬಲೀವರ್ದ' 'ಎತ್ತು' ಎನ್ನುತ್ತಾರೆ. ಹಾಗೇ ಇದು.

ಆದರೆ ಶ್ರೀಹರಿ ವಿಶ್ವಕ್ಕೆ ಕರ್ತನೇ ಹೊರತು ಉಪಾದಾನನಲ್ಲ. ಅದರಿಂದ 'ವಿಶ್ವಹೇತು' ಶಬ್ದ ವ್ಯರ್ಥ. ಉಪಾದಾನವೆಂದಿಟ್ಟುಕೊಳ್ಳುವ ಪಕ್ಷದಲ್ಲಿಯೂ 'ಹೇತು' ಶಬ್ದ ವೀರರಾಘವ ವ್ಯಾಖ್ಯಾನದಲ್ಲಿ ಹೇಳಿದಂತೆ ಸರ್ವಕಾರಕವನ್ನೂ ಹೇಳುವುದರಿಂದ 'ಕರ್ತೃ' ಶಬ್ದ ವ್ಯರ್ಥ. [೧]ಶ್ರೀಧರವ್ಯಾಖ್ಯಾನದಲ್ಲಿಯೂ 'ಹೇತು ಶಬ್ದದಿಂದ ಸರ್ವಕಾರಕರೂಪನೆಂದು ಸ್ತುತಿಸುತ್ತಾರೆ' ಎಂದಿದೆ. ಕರ್ತೃ ಶಬ್ದ ವೈಯರ್ಥ್ಯ ಪರಿಹಾರಕ್ಕೆ ವೀರರಾಘವ ವ್ಯಾಖ್ಯಾನದಲ್ಲಿ ಗೋಬಲಿವರ್ದ ನ್ಯಾಯವನ್ನು ಆಶ್ರಯಿಸಿದ್ದಾರೆ. ಅದು ಅಗತಿಕಾಗತಿ. ಬೇರೆ ಉಪಾಯವಿಲ್ಲದಿದ್ದಾಗ ಅನುಸರಿಸುವ ಮಾರ್ಗ.

ಶ್ರೀಮದಾಚಾರ್ಯರು ಹೇಳುತ್ತಾರೆ- 'ವಿಶ್ವಹೇತು' ಎಂಬ ಶಬ್ದವು ಪ್ರಪಂಚದ 'ಮೂಲಕಾರಣ' ಶ್ರೀಹರಿ ಎನ್ನುತ್ತದೆ. ಕೇವಲ 'ಕಾರಣ' ಎಂದಿಷ್ಟೇ ಹೇಳಿದರೆ ಬ್ರಹ್ಮಾದಿ ದೇವತೆಗಳೂ, ಮಾತ್ರವಲ್ಲದೆ, ಘಟಾದಿಗಳಿಗೆ, ಕುಲಾಲಾದಿಗಳೂ ಕಾರಣರೇ ಆದ್ದರಿಂದ ಅದು ಸ್ತುತಿ ಎನಿಸುವುದಿಲ್ಲ. ಹೀಗೆ 'ಮೂಲಕಾರಣ'ವೆಂದು ಸ್ತುತಿಸಿದ ಬಳಿಕ ಕೇವಲ ಮೂಲಕಾರಣವೇ ಅಲ್ಲ, ಪ್ರತಿಯೊಂದು ಪದಾರ್ಥದ ನಿರ್ಮಾಣ ಕಾರ್ಯದಲ್ಲಿಯೂ ಕುಲಾಲಾದಿ ಕರ್ತರೊಳಗೆ ನಿಂತು ಮುಖ್ಯವಾಗಿ ಆಯಾ ಪದಾರ್ಥಗಳಿಗೆ ಕರ್ತನೆನಿಸಿದವನೂ ಶ್ರೀಹರಿಯೇ ಎಂದು ತಿಳಿಸಲು 'ಕರ್ತ್ರೇ' ಶಬ್ದವೂ ಪ್ರಯುಕ್ತವಾಗಿದೆ. ಹೀಗೆ

ಬ್ರಹ್ಮಣಿ ದ್ವೈತಾದ್ವೈತ ಸಂಬಂಧಹೇತುಂ ತಜ್ಜತ್ವಾದಿಕಮಾಹುಃ ತತ್ಕರ್ತ್ರೇ ವಿಶ್ವಜನ್ಮಾದಿ ಕರ್ತ್ರೇ। ನಿಮಿತ್ತಕಾರಣ ಮಾತ್ರ ಪಕ್ಷ ನಿರಾಕರಣಾಯಾಹುಃ ವಿಶ್ವಹೇತವೇ। ವಿಶ್ವಸ್ಯ ನಿಮಿತ್ತಕಾರಣಾಯೋಪಾದಾನ ಕಾರಣಾಯ ಚೇತ್ಯರ್ಥಃ। ಹೇತು ಶಬ್ದಸ್ಯ ಉಭಯವಿಧ ಕಾರಣವಾಚಕತ್ವಾತ್। -ಶುಕದೇವಃ

೧ ನ ಚ ದ್ರಷ್ಟೃಮಾತ್ರಾಯ ಕಿಂತು ತತ್‌ಕರ್ತ್ರೇ। ನ ಚ ಕರ್ತೃಮಾತ್ರಾಯ। ವಿಶ್ವಹೇತವೇ ಸರ್ವಕಾರಕ ರೂಪಾಯ। -ಶ್ರೀಧರಃ

ಸರ್ವಕರ್ತನೆನಿಸಿದ ಹರಿಗೆ ವಿಶ್ವವು ಅಧೀನವೇ ಹೊರತು ಅಭಿನ್ನವಲ್ಲ. 'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ ಭಣ್ಯತೇ' ಎಂಬ ನ್ಯಾಯದಂತೆ ವಿಶ್ವವು ಹರಿಯ ಅಧೀನವಾದ್ದರಿಂದ ಹರಿಯನ್ನು ವಿಶ್ವ ಎಂದು ಕರೆಯಲಾಗಿದೆ -'ವಿಶ್ವಾಯ' ಎಂದು.

ಕಾಲನಾಭಾಯ ಕಾಲಾಶ್ರಯಾಯ ।

ವಿಶ್ವಸ್ಯ ತದಧೀನತ್ವಾದ್ ವಿಶ್ವಂ ವಿಷ್ಣುರುದೀರ್ಯತೇ ।
ಮೂಲಹೇತುತ್ವತೋ ಹೇತುಃ ಕರ್ತಾ ಪ್ರಾತಿಸ್ವಿಕಂ ಕೃತೇಃ ॥
ಇತ್ಯಾಗ್ನೇಯೇ ।

'ಕಾಲನಾಭ' ಶಬ್ದಕ್ಕೆ ಕಾಲಾಶ್ರಯ ಎಂದರ್ಥ.

'ವಿಶ್ವವು ಹರಿಯ ಅಧೀನವಾದ್ದರಿಂದ ವಿಶ್ವಶಬ್ದ ಹರಿಯನ್ನು ಹೇಳುತ್ತದೆ. ಮೂಲಕಾರಣನಾದ್ದರಿಂದ 'ಹೇತು' ಎಂದೂ, ಪ್ರತ್ಯೇಕ ಪದಾರ್ಥ ನಿರ್ಮಾಣಕಾರ್ಯದಲ್ಲಿಯೂ ಕರ್ತರೊಳಗೆ ನಿಂತು ಮುಖ್ಯಕರ್ತನೆನಿಸುವುದರಿಂದ 'ಕರ್ತ' ಎಂದೂ ಹರಿಯೇ ಕರೆಸಿಕೊಳ್ಳುತ್ತಾನೆ ಎಂದು ಅಗ್ನಿಪುರಾಣದಲ್ಲಿ ಉಕ್ತವಾಗಿದೆ.

❖ ❖ ❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ನಮೋ ಗುಣಪ್ರದೀಪಾಯ ಗುಣಾತ್ಮಸ್ಥೋದಯಾಯ ಚ ।
ಗುಣಪ್ರತ್ಯುಪಲಕ್ಷ್ಯಾಯ ಗುಣದ್ರಷ್ಟ್ರೇ ಸ್ವಸಂವಿದೇ ॥ ೪೬ ॥

ತನ್ನ ಗುಣಗಳನ್ನು ತಾನೇ ಭಕ್ತರಿಗೆ ತೋರುವವನು, ತ್ರಿಗುಣಾತ್ಮಕ ಪ್ರಕೃತಿಯಲ್ಲಿದ್ದರೂ ಪ್ರಕಾಶರೂಪನಾಗೇ ಇರುವವನು. ಆನಂದಾದಿ ಗುಣಗಳೆಂಬ ಲಕ್ಷಣಗಳಿಂದ ಪರಮಾತ್ಮನೆಂದು ತಿಳಿದುಬರುವವನು. ಜೀವರ ಇಂದ್ರಿಯಗಳಲ್ಲಿ ಇದ್ದು ವಿಷಯಾನುಭವವನ್ನು ಪಡೆಯುವವನು ಸ್ವಪ್ರಕಾಶ ಇಂಥ ನಿನಗೆ ನಮಸ್ಕಾರ.

ಬೇರೆ ವ್ಯಾಖ್ಯಾನಕಾರರು ಇಲ್ಲಿ 'ಗುಣಾತ್ಮಚ್ಛಾದನಾಯ ಚ' ಎಂದು ಪಾಠ ಹಿಡಿದಿದ್ದಾರೆ.

[೧]ಶ್ರೀಧರವ್ಯಾಖ್ಯಾನ ಹೀಗೆ ಹೇಳುತ್ತದೆ- 'ಚಿತ್ತ ಅಹಂಕಾರ ಬುದ್ಧಿ ಮನಸ್ಸೆಂದು

೧ ಗುಣಾಃ ಅಂತಃಕರಣಾನಿ ತಾನಿ ಪ್ರದೀಪಯತೇ ಪ್ರಕಾಶಯತೀತಿ ತಥಾ ತಸ್ಮೈ। ಚಿತ್ತಾದ್ಯಧಿ

ನಾಲ್ಕು ಬಗೆಯಾದ ಅಂತಃಕರಣಗಳಿಗೆ ಅಧಿಷ್ಠಾತೃವಾಗಿ ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂಬ ನಾಲ್ಕು ರೂಪಗಳನ್ನು ತೆಗೆದುಕೊಂಡು ಪರಮಾತ್ಮ ಆ ನಾಲ್ಕು ಬಗೆಯ ಅಂತಃಕರಣಗಳನ್ನು ಜೀವನಿಗೆ ಪ್ರಕಾಶಗೊಳಿಸುತ್ತಾನೆ. ಇದೇ 'ಗುಣ ಪ್ರದೀಪನ'. ಉಪಾಸಕರ ಉಪಾಸನೆಗಳಿಗೆ ಫಲ ನೀಡುವುದಕ್ಕಾಗಿ ಆ ನಾಲ್ಕು ರೂಪಗಳನ್ನು ತೆಗೆದುಕೊಳ್ಳಲು ಆ ನಾಲ್ಕು ಅಂತಃಕರಣಗಳಿಂದ ತನ್ನ ಸ್ವರೂಪವನ್ನು ಮರೆಮಾಡಿಕೊಳ್ಳುತ್ತಾನೆ. ನಾಲ್ಕು ರೂಪಗಳಿಂದ ತನ್ನನ್ನು ಪ್ರಕಾಶಗೊಳಿಸಿ ಕೊಳ್ಳುತ್ತಾನೆ. ಇದೇ ಗುಣಾತ್ಮಛಾದನ' ಎಂದು.

ಆದರೆ ಪರಮಾತ್ಮ ನಾಲ್ಕು ರೂಪಗಳನ್ನು, ಅಂದರೆ ಶರೀರಗಳನ್ನು ಹೇಗೆ ತೆಗೆದುಕೊಳ್ಳುತ್ತಾನೆ? ಸರ್ವವ್ಯಾಪಕನಾದ ಅವನು ಸೂಕ್ಷ್ಮವಾದ ಈ ಶರೀರಗಳೊಳಗೆ ಪ್ರವೇಶಿಸುವಂತಿಲ್ಲ. 'ಆ ಶರೀರಗಳು ತಾನಲ್ಲ ತನಗಿಂತ ಬೇರೆ' ಎಂಬ ತತ್ವಜ್ಞಾನವಿರುವುದರಿಂದ ತಾನೆಂದು ಐಕ್ಯಾಧ್ಯಾಸ ಮಾಡಿಕೊಳ್ಳಲೂ ಬರುವುದಿಲ್ಲ. ವಸ್ತುತಃ ಚೈತನ್ಯವನ್ನು ಆವರಿಸಿ ಅದರ ಸ್ವರೂಪವನ್ನು ಮರೆಮಾಡಿ ಅದರಲ್ಲಿ ಇಲ್ಲದ ಜಡವಾದ ನಾಲ್ಕು ಅಂತಃಕರಣಗಳನ್ನು ತೋರುವುದು ಅವಿದ್ಯೆಯ ಕೆಲಸ. ಅದಕ್ಕೇ ಆವರಣಶಕ್ತಿ ವಿಕ್ಷೇಪಶಕ್ತಿ ಎಂಬ ಎರಡು ಶಕ್ತಿಗಳು ಹೊರತು ಪರಮಾತ್ಮನಿಗೆ ಆ ಶಕ್ತಿಗಳು ಇಲ್ಲ. ಅದರಿಂದ ತನ್ನ ಸ್ವರೂಪವನ್ನು ಮರೆಮಾಡಿ ನಾಲ್ಕು ಶರೀರಗಳನ್ನು ತೆಗೆದುಕೊಂಡು ನಾಲ್ಕು ಅಂತಃಕರಣಗಳನ್ನು ಪರಮಾತ್ಮ ತೋರಿಸುವುದು ಸಂಭವನೀಯವಲ್ಲ. ಹೀಗಾಗಿ 'ಗುಣಪ್ರದೀಪಾಯ' 'ಗುಣಾತ್ಮಚ್ಛಾದನಾಯ' ಎಂಬ ಎರಡೂ ವಿಶೇಷಣಗಳು ನಿರರ್ಥಕ.

೧ ವೀರರಾಘವ ವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ಗುಣ ಪ್ರದೀಪನವೆಂದರೆ ದೀಪ ಕತ್ತಲನ್ನು ಸರಿಸುವಂತೆ ಪರಮಾತ್ಮ ಭಕ್ತರ ಜ್ಞಾನವೆಂಬ ಗುಣವಿಕಾಸಕ್ಕೆ ಪ್ರತಿಬಂಧಕವಾದ ವಿಷಯಾವರಣವನ್ನು ಸರಿಸುತ್ತಾನೆ. ಅಭಕ್ತರಿಗೆ ಮಾಯೆಯಿಂದ ಆಚ್ಛಾದನ ಮಾಡಿ ಅವರ ಜ್ಞಾನವನ್ನು ಸಂಕೋಚಗೊಳಿಸುತ್ತಾನೆ' ಎಂದು. ಆದರೆ ಅಭಕ್ತರಿಗೆ ವಿಷಯ ಕಾಣದಿರಲು ಅವರಿಗೆ ಮಾಯೆಯ ಆವರಣವಿರುವುದು

ಷ್ಠಾತೃತ್ವೇನ ಚತುರ್ಮೂರ್ತಿತೇತ್ಯರ್ಥಃ। ನನು ತಥಾಪ್ಯೇಕಸ್ಯೈವ ಕಥಂ ಚತುಷ್ಟ್ವಮತ ಆಹುಃ ಗುಣಾತ್ಮಚ್ಛಾದನಾಯ। ತೈರೇವ ಗುಣೈರುಪಾಸಕಾನಾಂ ಫಲವೈಚಿತ್ರ್ಯಾಯಾತ್ಮಾನಮಾಚ್ಛಾದ್ಯ ನಾನಾತ್ವೇನ ಪ್ರಕಾಶಮಾನಾಯೇತ್ಯರ್ಥಃ। -ಶ್ರೀಧರಃ

೧ ಸಾತ್ವತಾಮಿತ್ಯನುವರ್ತತೇ । ತೇಷಾಂ ಗುಣಸ್ಯ ಧರ್ಮಭೂತಜ್ಞಾನಸ್ಯ ಪ್ರದೀಪಾಯ ಪ್ರದೀಪವದ್ ವಿಷಯಾವರಕ ನಿವಾರಕಾಯ। ಅಸಾತ್ವತಾಂ ತದ್‌ವೈಪರೀತ್ಯಂ। ಗುಣಾತ್ಮಚ್ಛಾದನಾಯ ಗುಣೇನ ಗುಣಮಯ ಮಾಯಯಾ ಆತ್ಮನೋ ಜೀವಾನಸಾತ್ವತಾಂಶ್ಛಾದಯತಿ ಸಂಕುಚಿತಜ್ಞಾನಾನ್ ಕರೋತಿ। -ವೀರರಾಘವಃ

ಕಾರಣ. ಭಕ್ತರಿಗೆ ವಿಷಯ ಕಾಣದಿರಲು ವಿಷಯಾವರಣ ಕಾರಣ. ಈ ವ್ಯತ್ಯಾಸವೇಕೆ? ಎಲ್ಲರಿಗೂ ವಿಷಯ ಕಾಣದಿರಲು ವಿಷಯಾವರಣವೇ ಕಾರಣವೆನ್ನಬಹುದು, ಅಥವಾ ಮಾಯಾವರಣವೇ ಕಾರಣವೆನ್ನಬಹುದು, ತಾನೆ? ವಸ್ತುತಃ ವಿಷಯಾವರಣವೇ ಕಾರಣವೆಂದರೆ ವಿಷಯಾವರಣ ಹೋದಾಗ ಎಲ್ಲರಿಗೂ ವಿಷಯ ಕಾಣಬೇಕಾದೀತು. ಅಭಕ್ತರಿಗೆ ಕಾಣದಿರಲೆಂದು ವಿಷಯಾವರಣವನ್ನು ಹಾಕಿದರೆ ಭಕ್ತರಿಗೂ ಕಾಣದೆ ಹೋದೀತು. ಮಾಯೆಯ ಆವರಣವೆ ಕಾರಣವೆಂದರೆ ಈ ಸಮಸ್ಯೆ ಬರುವುದಿಲ್ಲ. ಯಾರಿಗೆ ಮಾಯಾವರಣ ಸರಿಯಿತೋ ಅವರಿಗೆ ವಿಷಯ ಕಾಣುತ್ತದೆ. ಆದರಿಂದ ಭಕ್ತರಿಗೆ ಮಾಯೆಯ ಆವರಣ ಸರಿಸುತ್ತಾನೆ ಎನ್ನಬೇಕು ಹೊರತು ದೀಪದಂತೆ ವಿಷಯಾವರಣವನ್ನು ಸರಿಸುತ್ತಾನೆ ಎನ್ನಬಾರದು.

ವಸ್ತುತಃ 'ಗುಣಾತ್ಮಚ್ಛಾದನಾಯ ಚ' ಎಂಬ ಪಾಠವೇ ಸರಿಯಲ್ಲ. 'ಗುಣಾತ್ಮಸ್ಥೋದಯಾಯ ಚ' ಎಂದೇ ಸರಿಯಾದ ಪಾಠವೆಂದು ಶ್ರೀಮದಾಚಾರ್ಯರು ಹೇಳುತ್ತಿದ್ದಾರೆ. [೧]ಸುದರ್ಶನಸೂರಿ ವ್ಯಾಖ್ಯಾನದಲ್ಲಿ ಇದೇ ಪಾಠವನ್ನು ಸ್ವೀಕರಿಸಿದ್ದಾರೆ. ತನ್ನ ಸಂಕಲ್ಪಾನುಸಾರ ವಿಷಯಗಳನ್ನು ತೋರಿಸುವವನು ಅಥವಾ ಗುಣಗಳಲ್ಲಿ ಅಂದರೆ ಅಚೇತನ ಪದಾರ್ಥಗಳಲ್ಲಿ ಅಚೇತನ ಶರೀರಿಯಾಗಿ, ಆತ್ಮಗಳಲ್ಲಿ ಅಂದರೆ ಚೇತನಗಳಲ್ಲಿ ಚೇತನಶರೀರಿಯಾಗಿ ಕಂಡುಬರುವವನು ಪರಮಾತ್ಮ ಎಂದು ವ್ಯಾಖ್ಯಾನ ಮಾಡಿದ್ದಾರೆ. ಅವರು ಮಾಡಿದ ವ್ಯಾಖ್ಯಾನ ಅಯುಕ್ತವಾದರೂ ಅವರು ಹಿಡಿದ ಪಾಠ ಯುಕ್ತವೆ, ಶ್ರೀಮದಾಚಾರ್ಯರು ಹಾಗೇ ಪಾಠವನ್ನು ಹಿಡಿದು ಸರಿಯಾಗಿ ವ್ಯಾಖ್ಯಾನ ಮಾಡಿದ್ದಾರೆ-

ಗುಣಪ್ರದೀಪಾಯ ಗುಣಜ್ಞಾಪಕಾಯ । ಗುಣಾತ್ಮಸ್ಥೋದಯಾಯ ।
ಗುಣಾತ್ಮಿಕಾ ಪ್ರಕೃತಿಃ ತಸ್ಯಾಂ ಸ್ಥಿತ ಉದಯಸ್ವರೂಪೋ ಹರಿಃ ॥

'ಗುಣಪ್ರದೀಪ'ನೆಂದರೆ ತನ್ನ ಆನಂದಾದಿಗುಣಗಳನ್ನು ಸಜ್ಜನರಿಗೆ ತಿಳಿಸುವವನು, ಗುಣಮಯವಾದ ಪ್ರಕೃತಿಯೊಳಗಿದ್ದೂ ಪ್ರಕೃತಿಯಂತೆ ಅಪ್ರಕಾಶರೂಪನಾಗಿರದೆ ಉದಯ ಅಂದರೆ ಚಿನ್ಮಯಪ್ರಕಾಶ ಸ್ವರೂಪನಾಗಿಯೇ ಇರುವವನು 'ಗುಣಾತ್ಮಸ್ಥೋದಯ'ನಾದ ಶ್ರೀಹರಿ.

❖ ❖ ❖

---

೧ ಗುಣಾತ್ಮಸ್ಥೋದಯಾಯ ಆತ್ಮಸಂಕಲ್ಪಸ್ಥ ಗುಣೋನ್ಮೇಷಾಯ। ಯದ್ವಾ ಗುಣೇಷ್ವಾತ್ಮನಿ ಚ ಸ್ಥಿತ ಉಪಲಂಭೋ ಯಸ್ಯ ತಸ್ಮೈ। ಚೇತನಾಚೇತನೇಷ್ವನ್ಯತರಾತ್ಮತಯೋಪಲಭ್ಯಾಯೇತ್ಯರ್ಥಃ।
-ಸುದರ್ಶನಃ

ಕಾಲಿಯಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ಪರಾವರಗತಿಜ್ಞಾಯ ಸರ್ವಾಧ್ಯಕ್ಷಾಯ ತೇ ನಮಃ।
ಅವಿಶ್ವಾಯ ಚ ವಿಶ್ವಾಯ ತದ್ದ್ರಷ್ಟ್ರೇ ವಿಶ್ವಹೇತವೇ ॥ ೪೮ ॥

ಕಾರ್ಯಕಾರಣ ವಸ್ತುಗಳ ಸ್ಥಿತಿಯನ್ನು ತಿಳಿದವನು, ಸರ್ವಾಧಿಪತಿ, ಜೀವನಿಗಿಂತ ವಿಲಕ್ಷಣ, ಜೀವನಿಗೆ ನಿಯಾಮಕ, ಜೀವನನ್ನು ಕಾಣುವವ, ಜೀವನಿಗೆ ಜನ್ಮಾದಿಗಳನ್ನು ಕೊಡುವವ - ಇಂಥ ನಿನಗೆ ನಮಸ್ಕಾರ.

ಇಲ್ಲಿ ಬೇರೆ ವ್ಯಾಖ್ಯಾನಕಾರರು[೧] 'ತದ್ದ್ರಷ್ಟ್ರೇಽಸ್ಯ ಚ ಹೇತವೇ' ಎಂದು ಪಾಠ ಹಿಡಿದಿದ್ದಾರೆ. ಶ್ರೀಧರ ವ್ಯಾಖ್ಯಾನ ಹೀಗಿದೆ- 'ಪರಮಾತ್ಮ, ನೀನು 'ಅವಿಶ್ವ'ನೆನಿಸುವಿ. ಏಕೆಂದರೆ ವಿಶ್ವ ತೈಜಸ ಪ್ರಾಜ್ಞ ತುರೀಯ ಎಂಬ ನಿನ್ನ ನಾಲ್ಕು ಅವಸ್ಥೆಗಳು ಜ್ಞಾನ ಬಂದಾಗ ನಿನಗೆ ಇಲ್ಲವಾಗುತ್ತದೆ. ಮಾಯೆಯಿಂದ ನಿನಗೆ ಆ ಅವಸ್ಥೆಗಳು ಬಂದಿರುತ್ತವೆ. ಅಥವಾ ಜ್ಞಾನ ಬಂದಾಗ ನಿನ್ನಲ್ಲಿ ಪ್ರಪಂಚ ಇಲ್ಲವೆಂದು ತಿಳಿದುಬರುತ್ತದೆ. ಅಜ್ಞಾನವಿರುವಾಗ ನಿನ್ನಲ್ಲಿ ಪ್ರಪಂಚ ಕಾಣುತ್ತದೆ. ಆದರಿಂದ ನೀನು 'ಅವಿಶ್ವ'ನೂ ಹೌದು 'ವಿಶ್ವ'ನೂ ಹೌದು. ಈ ಭ್ರಾಂತಿ ಬಾಧಗಳೆರಡಕ್ಕೂ ಅಜ್ಞಾನ ತತ್ವಜ್ಞಾನಗಳ ಮೂಲಕ ನೀನೇ 'ಹೇತು' ಕಾರಣನಾಗಿರುವೆ.

ಇದು ಸರಿಯಲ್ಲ. 'ಅನಾದಿ ಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ' ಅನಾದಿ ಮಾಯೆಯಿಂದ ಸುಪ್ತನಾಗಿರುವ ಜೀವನೆ ಮಾಯೆಯಿಂದ ಪರಮಾತ್ಮನಲ್ಲಿ ವಿಶ್ವಾದಿ ಅವಸ್ಥೆಗಳನ್ನೂ, ಇಡಿ ಪ್ರಪಂಚವನ್ನೂ ಆರೋಪಿಸಿ ಕಾಣುತ್ತಾನೆ. ಅವನೇ ಎಚ್ಚೆತ್ತು ತತ್ವಮಸ್ಯಾದಿ ವಾಕ್ಯದಿಂದ ತತ್ವಜ್ಞಾನ ಸಂಪಾದಿಸಿ ಅದರ ಬಲದಿಂದ ಆ ಎಲ್ಲ ಪ್ರಪಂಚವನ್ನೂ ಇಲ್ಲವಾಗಿಸುತ್ತಾನೆ. ಪರಮಾತ್ಮನ ಪಾತ್ರ ಇದರಲ್ಲಿ ಏನೂ ಇಲ್ಲ, ಅವನು ಸುಮ್ಮನಿರುತ್ತಾನೆ. ಭ್ರಾಂತಿಗೆ 'ಅಧಿಷ್ಠಾನ' ಬಾಧಕ್ಕೆ 'ಅವಧಿ' ಎನಿಸುತ್ತಾನೆ ಹೊರತು 'ಹೇತು' ಎನಿಸುವುದಿಲ್ಲ.

'ನೈಷ ಸ್ಥಾಣೋರಪರಾಧೋ ಯದೇನಮಂಧೋ ನ ಪಶ್ಯತಿ'

ಕುರುಡನೊಬ್ಬ ಮೋಟು ಮರವನ್ನು ಕಾಣದೆ ತಲೆ ತಾಗಿಸಿಕೊಂಡರೆ ಅದು ಯಾರ ಅಪರಾಧ? ಕುರುಡನದೇ. ಮೋಟುಮರದ್ದಲ್ಲ. ಜೀವನೇ ಭ್ರಮಿಸುತ್ತಾನೆ,

---

೧ ಅವಿಶ್ವಾಯ ನ ವಿಶ್ವಂ ಯಸ್ಮಿನ್ ತನ್ನಿಷೇಧವಿಧಯೇ ವಿಶ್ವಾಯ ಚ। ತದ್ವಿವರ್ತಾಧಿಷ್ಠಾನಾಯ ಚೇತ್ಯರ್ಥಃ। ಅಸ್ಯ ವಿಶ್ವಾಧ್ಯಾಸಸ್ಯ ತದಪವಾದಸ್ಯ ಚಾವಿದ್ಯಾವಿದ್ಯಾಭ್ಯಾಂ ಹೇತವೇ। ಯದ್ವಾ ಅವಿಶ್ವಾಯ ವಿಶ್ವತೈಜಸಾದ್ಯವಸ್ಥಾರಹಿತಾಯ ವಿಶ್ವಾಯ ಚ ಮಾಯಯಾ ಸ್ವಾಂಶೈಸ್ತದವಸ್ಥಾಯ। -ಶ್ರೀಧರಃ

ಜೀವನೇ ಎಚ್ಚೆತ್ತುಕೊಳ್ಳುತ್ತಾನೆ. ಅದರಿಂದ ಭ್ರಾಂತಿ ಬಾಧಗಳಿಗೆ ಪರಮಾತ್ಮ ಕಾರಣನೆಂದು ಸ್ತುತಿಸುವುದು ತಪ್ಪಾಗುತ್ತದೆ.

ಅದರಿಂದ ಶ್ರೀಮದಾಚಾರ್ಯರು ಹೀಗೆ ವ್ಯಾಖ್ಯಾನಿಸುತ್ತಾರೆ-

ಅವಿಶ್ವಾಯ ಜೀವೇಭ್ಯೋಽನ್ಯಸ್ಮೈ ।
ಶರೀರೇಷು ಪ್ರವಿಷ್ಟತ್ವಾದ್ ವಿಶ್ವೋ ಜೀವ ಉದೀರ್ಯತೇ ।
ಜೀವಸ್ಯ ತದಧೀನತ್ವಾದ್ ವಿಶ್ವೋ ವಿಷ್ಣುರಿತಿ ಸ್ಮೃತಃ ।
ತಸ್ಯೋತ್ಪತ್ತ್ಯಾದಿಹೇತುತ್ವಾದ್ ವಿಶ್ವಹೇತುಶ್ಚ ಕೀರ್ತ್ಯತೇ ॥

ಇತಿ ಮಾತ್ಸ್ಯೇ ॥

'ಅವಿಶ್ವ'ನೆಂದರೆ ಜೀವವಿಲಕ್ಷಣನಾದ ಪರಮಾತ್ಮ.

ಅವನು ವಿಶ್ವನೂ ವಿಶ್ವಹೇತುವೂ ಎನಿಸಲು ಕಾರಣವನ್ನು ಮತ್ಸ್ಯಪುರಾಣ ಹೇಳಿದೆ- 'ನಾನಾ ಶರೀರಗಳನ್ನು ಹೊಂದಿ ಅವುಗಳಲ್ಲಿ ಪ್ರವೇಶಮಾಡುವುದರಿಂದ ಜೀವ ವಿಶ್ವನೆನಿಸುತ್ತಾನೆ. ಪರಮಾತ್ಮ ಇಂಥ ಜೀವನಿಗಿಂತ ವಿಲಕ್ಷಣನಾದರೂ ಅವನ ಅಧೀನದಲ್ಲಿ ಜೀವನಿರುವುದರಿಂದ ಅವನೂ 'ವಿಶ್ವ' ಶಬ್ದದಿಂದ ಕರೆಸಿಕೊಳ್ಳುತ್ತಾನೆ. ಜೀವ ಸ್ವರೂಪದಿಂದ ನಿತ್ಯನಾದರೂ ಅವನಿಗೆ ದೇಹಸಂಬಂಧ ರೂಪವಾದ ಉತ್ಪತ್ತಿ ಮುಂತಾದವುಗಳಿಗೆ ಪರಮಾತ್ಮ ಕಾರಣನಾದ್ದರಿಂದ 'ವಿಶ್ವಹೇತು' ಎನಿಸುತ್ತಾನೆ' ಎಂದು.

ಹಿಂದೆ 'ತತ್ಕರ್ತ್ರೇ ವಿಶ್ವಹೇತವೇ' (ಶ್ಲೋ.೪೧) ಎಂದು ಹೇಳಿದ. 'ವಿಶ್ವಹೇತುತ್ವ' ಬೇರೆ. ಇಲ್ಲಿ ಹೇಳಿದ 'ವಿಶ್ವಹೇತುತ್ವ' ಬೇರೆ. ಏಕೆಂದರೆ ಅಲ್ಲಿ 'ವಿಶ್ವ' ಎಂದರೆ ಚೇತನಾಚೇತನಾತ್ಮಕ ಸಮಸ್ತ ಪ್ರಪಂಚ. ಇಲ್ಲಿ 'ವಿಶ್ವ' ಎಂದರೆ ಜೀವ. ಈ ಎರಡು ಬೇರೆಬೇರೆ ವಿವರಣೆಗಳು ಅಗ್ನಿಪುರಾಣ ಮತ್ತು ಮತ್ಸ್ಯಪುರಾಣೋಕ್ತವಾಗಿದ್ದು ಸರಳವಾಗಿವೆ ಸುಂದರವಾಗಿವೆ.

ಬೇರೆ ವ್ಯಾಖ್ಯಾನಕಾರರ ವಿವರಣೆಗಳು ಸ್ವಕಪೋಲ ಕಲ್ಪಿತ, ಕ್ಲಿಷ್ಟವೂ ಆಗಿವೆ. ಉದಾ: [೧]ವೀರರಾಘವ ವ್ಯಾಖ್ಯಾನಪ್ರಕಾರ 'ವಿಶ್ವಹೇತವೇ' ಎಂದೂ ಪಾಠವಿದೆ.

---

೧ ವಿಶ್ವಾಯ ಸಕಲ ಶಬ್ದವಾಚ್ಯಾಯೇತ್ಯರ್ಥಃ। ಅವಿಶ್ವಾಯೇತಿ। ತದನ್ಯತ್ವಮತ್ರ ನ ಹ್ಯರ್ಥಃ। ನ ವಿಶ್ವಃ ಅವಿಶ್ವಃ ತಸ್ಮೈ। ತತ್ತಚ್ಛಬ್ದ ಪ್ರವೃತ್ತಿ ನಿಮಿತ್ತೇಭ್ಯೋ ವಿಲಕ್ಷಣಾಯೇತ್ಯರ್ಥಃ। ವಿಶ್ವಹೇತವ ಇತಿ, ಅಸ್ಯ ಚ ಹೇತವ ಇತಿ ಚ ಪಾಠಃ। ಜಾತಿಗುಣಾದ್ಯಾಶ್ರಯ ನಿಖಿಲವಿಶೇಷ್ಯ ಜಾತಗತ ಸತ್ತಾ ಸ್ಥಿತಿ ಪ್ರವೃತ್ತಿ ಹೇತವೇ। ತತ್ಸತ್ತಾದಿ ಹೇತುತ್ವೇನ ವಿಶ್ವಸ್ಯ ತದಪೃಥಕ್ ಸಿದ್ಧವಿಶೇಷಣಾದಪೃಥಕ್‌ಸಿದ್ಧ ವಿಶೇಷಣವಾಚಿನಾಂ ಮತ್ವರ್ಥೀಯ ಪ್ರತ್ಯಯಮಂತರೇಣಾಪಿ ವಿಶೇಷ್ಯ ಪರ್ಯವಸಾಯಿತ್ವಮಾಕೃತಿನಯಸಿದ್ಧಮಿತಿ ಭಾವಃ। -ವೀರರಾಘವಃ

'ಅಸ್ಯ ಚ ಹೇತವೇ' ಎಂದೂ ಪಾಠವಿದೆ. ಎರಡಕ್ಕೂ ಒಂದೇ ಅರ್ಥ. ಘಟ ಪಟಾದಿ ಸಕಲಶಬ್ದ ಪ್ರವೃತ್ತಿ ನಿಮಿತ್ತ ವಿಲಕ್ಷಣನು ಪರಮಾತ್ಮ ಎಂಬುದು 'ಅವಿಶ್ವ' ಶಬ್ದಾರ್ಥ. 'ಸಕಲ ಶಬ್ದಗಳಿಂದ ಕರೆಸಿಕೊಳ್ಳುತ್ತಾನೆ' ಎನ್ನುವುದು 'ವಿಶ್ವ' ಶಬ್ದಾರ್ಥ. ಪ್ರವೃತ್ತಿ ನಿಮಿತ್ತವಿಲ್ಲದಿದ್ದರೆ ಅವನು ಸಕಲ ಶಬ್ದದಿಂದ ಹೇಗೆ ವಾಚ್ಯ? ಹೇಗೆ ಕರೆಸಿಕೊಳ್ಳುತ್ತಾನೆ? ಎಂದರೆ ಮೀಮಾಂಸಕಮತದಲ್ಲಿ ಘಟ ಪಟಾದಿ ಶಬ್ದಗಳಿಗೆ ಘಟತ್ವ ಪಟತ್ವ ಮುಂತಾದ ಜಾತಿ ಗುಣಾದಿಗಳಲ್ಲಿಯೇ ಶಕ್ತಿ. ಆದರೆ ಮತ್ವರ್ಥೀಯ ಪ್ರತ್ಯಯವಿಲ್ಲದಿದ್ದರೂ ಜಾತಿಗುಣಾದಿ ವಿಶೇಷಣ ವಾಚಕ ಶಬ್ದಗಳು ಜಾತಿಗುಣಾದಿ ಗಳುಳ್ಳ ವಿಶೇಷ್ಯವಾದ ಘಟಪಟಾದಿಗಳನ್ನು ಹೇಳುತ್ತವೆ. ಈ ಘಟಪಟಾದಿಗಳೂ ಕೂಡ ಪರಮಾತ್ಮನಲ್ಲಿ ಅಪೃಥಕ್‌ಸಿದ್ಧ ವಿಶೇಷಣ. ಅಂದರೆ, ಪರಮಾತ್ಮನ ಪ್ರತೀತಿ ಯಿಲ್ಲದೆ ಪ್ರತೀತವಾಗದಂಥ ವಿಶೇಷಣ. ವ್ಯಕ್ತಿ ಪ್ರತೀತಿ ಇಲ್ಲದೆ ಜಾತಿ ಯಾವ ಶಬ್ದದಿಂದಲೂ, ಪ್ರತೀತವಾಗದು. ಹಾಗೇ ಇದು. ಅದರಿಂದ ಘಟಪಟಾದಿ ವಿಶೇಷಣಗಳನ್ನು ಹೇಳುವ ಶಬ್ದಗಳು ವಿಶೇಷ್ಯವಾದ ಪರಮಾತ್ಮನನ್ನು ಹೇಳುತ್ತವೆ. ಶಕ್ತಿ ಇಲ್ಲದಿದ್ದರೂ ಮತ್ವರ್ಥ ಪ್ರತ್ಯಯವಿಲ್ಲದಿದ್ದರೂ ಹೇಳಲೇಬೇಕು, ಎಂದು ತಿಳಿಸಲು 'ವಿಶ್ವ ಹೇತವೇ' 'ಅಂದರೆ, ಎಲ್ಲ ಶಬ್ದಪ್ರವೃತ್ತಿ ನಿಮಿತ್ತಗಳ ವಿಶೇಷ್ಯ ಗಳಲ್ಲಿರುವ ಸತ್ತಾ ಸ್ಥಿತಿ ಪ್ರವೃತ್ತಿಗಳೆಲ್ಲಕ್ಕೂ ಹೇತು ಪರಮಾತ್ಮ' ಎಂದು ಶ್ಲೋಕದಲ್ಲಿ ಹೇಳಿದಂತಾಯಿತು ಎಂದು.

ಆದರೆ ಇದರಿಂದ ಪರಮಾತ್ಮ ಸರ್ವಶಬ್ದ 'ವಾಚ್ಯ'ನೆಂದಾಗುವುದಿಲ್ಲ. ಶಬ್ದಗಳು ಶಕ್ತಿಯಿಂದ ಅವನನ್ನು ಹೇಳುವುದಿಲ್ಲ ಎಂದಂತಾಗುವುದು. ಇದು ಸರಿಯಲ್ಲ. ಬ್ರಹ್ಮಸೂತ್ರದ ತದಧೀನತ್ವ ನ್ಯಾಯದಿಂದಲೇ ಘಟಪಟಾದಿಗಳನ್ನು ಹೇಳುವ ಶಬ್ದಗಳು ಘಟಪಟಾದಿ ನಿಯಾಮಕನನ್ನೂ ಶಕ್ತಿಯಿಂದಲೇ ಹೇಳುತ್ತವೆ ಎಂದು ಸರಳವಾಗಿ ಹೇಳಬಹುದಿತ್ತು. ಪ್ರವೃತ್ತಿನಿಮಿತ್ತಾಶ್ರಯತ್ವದಿಂದ ಘಟಪಟಾದಿ ಗಳು ಆ ಶಬ್ದಕ್ಕೆ ಹೇಗೆ ವಾಚ್ಯವೋ ಹಾಗೇ ಪ್ರವೃತ್ತಿನಿಮಿತ್ತ ಸ್ವಾತಂತ್ರ್ಯದಿಂದ ಪರಮಾತ್ಮನೂ ವಾಚ್ಯನೆ ಎನ್ನಬಹುದಿತ್ತು. ಹೀಗೆ ವೀರರಾಘವ ವ್ಯಾಖ್ಯಾನದಲ್ಲಿ 'ವಿಶ್ವ' ಎಂದರೆ ಸಕಲ ಶಬ್ದವಾಚ್ಯ, 'ಅವಿಶ್ವ' ಎಂದರೆ ಸಕಲಶಬ್ದಪ್ರವೃತ್ತಿನಿಮಿತ್ತ ವಿಲಕ್ಷಣ. 'ವಿಶ್ವಹೇತು' ಎಂದರೆ 'ಶಬ್ದ ಪ್ರವೃತ್ತಿನಿಮಿತ್ತಗಳಿಗೆ ವಿಶೇಷ್ಯವಾದ ಸಕಲ ವಸ್ತುಗಳ ಸತ್ತಾ ಸ್ಥಿತಿ ಪ್ರವೃತ್ತಿಗಳಿಗೆ ಹೇತು' ಎಂದು ವ್ಯಾಖ್ಯಾನಿಸುವುದು ಕ್ಲಿಷ್ಟ ಮಾತ್ರವಲ್ಲದೆ ಪುರಾಣ ಬ್ರಹ್ಮಸೂತ್ರಗಳಿಗೂ ಅಸಮ್ಮತವಾಗಿದೆ.

❖❖❖

ಕಾಲಿಯ ಮರ್ದನ ಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ ವಿಭೋ
ಗುಣೈರನೀಹೋಽಕೃತಕಾಲಶಕ್ತಿಧೃಕ್ ।
ತಸ್ಮಾತ್ಸ್ವಭಾವಾತ್ಪ್ರತಿಬೋಧಯಸ್ವನಃ
ಸಮೀಕ್ಷಯಾಽಮೋಘವಿಹಾರ ಈಹಸೇ ॥ ೪೯ ॥

ಸರ್ವಶಕ್ತನೆ, ನೀನು (ಅನೀಹಃ) ಕ್ಲೇಶವಿಲ್ಲದೆ ಎಲ್ಲ ಕಾರ್ಯ ಮಾಡುವವನು. (ಅಕೃತಕಾಲಶಕ್ತಿಧೃಕ್) ಅನಾದಿಯಾದ ತನ್ನ ಸ್ವರೂಪಭೂತವಾದ ಕಾಲಶಕ್ತಿಯನ್ನೂ ದುರ್ಗಾರೂಪ ವಾಯುರೂಪ ಕಾಲಶಕ್ತಿಗಳನ್ನೂ ಧರಿಸುವವನು. ಅದರಿಂದ ಈ ಜಗತ್ತಿನ ಉತ್ಪತ್ತಿ ಸ್ಥಿತಿ ಸಂಹಾರಗಳನ್ನು ತ್ರಿಗುಣಗಳಿಂದ (ಈಹಸೇ) ಮಾಡುವಿ. ನಿನ್ನ ಲೀಲೆ ಅಮೋಘ. ಅದರಿಂದ (ಸಮೀಕ್ಷಯಾ) ಕರುಣಾರ್ದ್ರ ದೃಷ್ಟಿಯಿಂದ ಕಂಡು ನಮ್ಮನ್ನು ಸರ್ಪಸ್ವಭಾವದಿಂದ ದೂರಮಾಡು, ಉದ್ಧರಿಸು.

ಇಲ್ಲಿ 'ಕಾಲಶಕ್ತಿಧೃಕ್ ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ ಅಕೃತ' ಕಾಲಶಕ್ತಿಧರನಾದ ನೀನು ಈ ಜಗ್ತಿನ ಸೃಷ್ಟಿಸ್ಥಿತಿಸಂಹಾರಗಳನ್ನು 'ಅಕೃತ' ಮಾಡಿರುವೆ' ಎಂದು ಅನ್ವಯ ಮಾಡಲು ಬರುತ್ತದೆ. ಆದರೆ 'ಈಹಸೇ' 'ಮಾಡುತ್ತಿ' ಎಂಬ ಶಬ್ದ ವ್ಯರ್ಥವಾಗುತ್ತದೆ. ಅದರಿಂದ 'ಅಕೃತಕಾಲಶಕ್ತಿಧೃಕ್ ತ್ವಂ ಅಸ್ಯ ಜನ್ಮಸ್ಥಿತಿ ಸಂಯಮಾನ್ ಈಹಸೇ' 'ಅನಾದಿಕಾಲಶಕ್ತಿಧಾರಕನಾದ ನೀನು ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುತ್ತಿ' ಎನ್ನುವುದು ಒಳ್ಳೆಯದು. [೧]ಶ್ರೀಧರ ಮುಂತಾದ ವ್ಯಾಖ್ಯಾನಗಳಲ್ಲಿ ಹಾಗೆ ಹೇಳಿದ್ದಾರೆ.

ಆದರೆ ನೈಯಾಯಿಕರು ಹೇಳುವ ಅಖಂಡವಾದ ಮಹಾಕಾಲ ಮಾತ್ರ ಅನಾದಿ, ಅಕೃತ. ಖಂಡಕಾಲ ಕೃತವೆ. ಅದರಿಂದ ಅಕೃತವಾದ ಮಹಾಕಾಲವೆಂಬ ಶಕ್ತಿಯನ್ನು ಬಳಸಿಕೊಂಡು ಈಶ್ವರ ಸೃಷ್ಟಿಸ್ಥಿತಿಲಯಗಳನ್ನು ಮಾಡುತ್ತಾನೆ ಎಂದು ಹೇಳುವ ಅಭಿಪ್ರಾಯ ಶ್ರೀಧರವ್ಯಾಖ್ಯಾನಕ್ಕೆ ಇರುವುದಾದರೆ ಅದು ಕೂಡುವುದಿಲ್ಲ. ಸೃಷ್ಟಿಕಾಲ, ಸ್ಥಿತಿ ಕಾಲ, ಲಯಕಾಲಗಳೆಂದು ಬೇರೆಬೇರೆ ಖಂಡಕಾಲಗಳನ್ನೇ ಸೃಷ್ಟಿಸ್ಥಿತಿ ಲಯ ಕಾರ್ಯಗಳಲ್ಲಿ ಈಶ್ವರ ಬಳಸಿಕೊಳ್ಳಬೇಕು. ಮಹಾಕಾಲವನ್ನಲ್ಲ. ಪ್ರಾಯಶಃ ಈ ಸಮಸ್ಯೆಯ ಪರಿಹಾರಕ್ಕಾಗಿಯೇ 'ಕಾಲಶಕ್ತಿಧೃಕ್ ಜನ್ಮಸ್ಥಿತಿ ಸಂಯಮಾನ್ ಅಕೃತ'

---

೧ ಅಕೃತಾ ಅನಾದಿರ್ಯಾ ಕಾಲಶಕ್ತಿಸ್ತಾಂ ಧಾರಯತೀತಿ ತಥಾ। -ಶ್ರೀಧರಃ
ಅನಾದಿ ಕಾಲಾಖ್ಯ ಶಕ್ತಿಯುಕ್ತಃ। -ವೀರರಾಘವಃ

'ನೀನು ಕಾಲಶಕ್ತಿಧಾರಕನಾಗಿ ಸೃಷ್ಟಿಸ್ಥಿತಿ ಲಯಗಳನ್ನು ಮಾಡಿರುವಿ' ಎಂದು ಇನ್ನೊಂದು ರೀತಿಯಿಂದ ಅನ್ವಯವನ್ನು ಅವರೇ ತೋರಿಸಿದ್ದಾರೆ-

'ಅಸ್ಯ ಲೋಕಸ್ಯ ಜನ್ಮಾದೀನ್ ತ್ವಮೇವಾಕೃತ ಅಕರೋಃ'

ನಮ್ಮ ಸಿದ್ಧಾಂತದಲ್ಲಿ ಅನಾದಿ ನಿತ್ಯವಾದ ಅಖಂಡವಾದ ಮಹಾಕಾಲ ವೆಂಬುದಿಲ್ಲ. ಅದಕ್ಕೆ ಪ್ರಮಾಣವಿಲ್ಲ. ಅನಿತ್ಯವಾದ ಕ್ಷಣಲವಾದಿ ಕಾಲಗಳ ಪ್ರವಾಹವಿದೆ. ಅದು ಅನಾದಿ ನಿತ್ಯ. ಈಗ ಶ್ಲೋಕದಲ್ಲಿ 'ಅಕೃತಕಾಲಶಕ್ತಿಧೃಕ್' ಎಂಬಲ್ಲಿ 'ಕಾಲ' ಶಬ್ದದಿಂದ ಕಾಲಪ್ರವಾಹವಿಟ್ಟುಕೊಂಡರೆ ಮಾತ್ರ 'ಅಕೃತ' ಎಂಬ ವಿಶೇಷಣ ಕೂಡುತ್ತದೆ. ಪ್ರವಾಹ ಘಟಕವಾದ ಕಾಲವಿಟ್ಟುಕೊಂಡರೆ ಕೂಡುವು ದಿಲ್ಲ.

ಇಲ್ಲಿ ಹೀಗೆ ಏಕೆ ಹೇಳಬಾರದು?

ಪ್ರವಾಹ ಘಟಕವಾದ ಕಾಲವನ್ನೇ ಇಟ್ಟುಕೊಳ್ಳೋಣ. ಅದಕ್ಕೇ 'ಅಕೃತ' ವಿಶೇಷಣ. 'ಅ-ಕೃತ' ಅಕಾರವಾಚ್ಯನಾದ ಪರಮಾತ್ಮನಿಂದ ಕೃತ ತಾನೆ?

ಸೃಷ್ಟಿಯಲ್ಲಿ ಎಲ್ಲವೂ ಅಕಾರವಾಚ್ಯನಾದ ಪರಮಾತ್ಮನಿಂದ ಕೃತವೇ. ಅದನ್ನು ಇಲ್ಲಿ ಏಕೆ ಹೇಳಬೇಕು? ಕಾಗೆ ಕಪ್ಪೇ. ಕಪ್ಪುಕಾಗೆ ಎನ್ನಬೇಕೇನು?

ನಿಜ, ಆದರೆ ಪ್ರವಾಹ ಘಟಕವಾದ ಲಯ ಕಾಲವನ್ನು ಲಯಕಾಲದಲ್ಲಿಯೂ ಸೃಷ್ಟಿ ಮಾಡುತ್ತಾನೆ ಪರಮಾತ್ಮ. ಇದು ಅದ್ಭುತ. ಕಾಲದ ವೈಶಿಷ್ಟ್ಯ. ಇಂಥ ಕಾಲಶಕ್ತಿಧಾರಕನಾದ ಪರಮಾತ್ಮ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುತ್ತಾನೆ ಎಂದು ನಾಗಿಣಿಯರು ಸ್ತುತಿಸಬಹುದು.

ಭಾಗವತ ತಾತ್ಪರ್ಯ ಪ್ರಬೋಧಿನೀ ವ್ಯಾಖ್ಯಾನ ಪ್ರಚಲಿತ ಪಾಠದಲ್ಲಿ ಇದನ್ನು ಹೀಗೇ ಹೇಳಿದೆ-

[೧]'ಈ ಶ್ಲೋಕದಲ್ಲಿ 'ಕೃತಕಾಲಶಕ್ತಿಧೃಕ್' ಎಂದು ಪದಚ್ಛೇದವಿಟ್ಟುಕೊಂಡು

---

೧ ತ್ವಂ ಹ್ಯಸ್ಯ ಜನ್ಮೇತಿ ಶ್ಲೋಕೇ ಕೃತಕಾಲಶಕ್ತಿಧೃಗಿತಿ ಪದಚ್ಛೇದೇನ ಕಾಲೇ ಶಕ್ತಿಃ ಕಾಲಶಕ್ತಿಃ ಕೃತಾ ಚ ಸಾ ಕಾಲಶಕ್ತಿಶ್ಚ ತಾಂ ಧರತೀತಿ ಹರಿಶಕ್ತೇಸ್ತತ್ಕಾಲಜಾತತ್ವ ಭ್ರಾಂತಿರ್ಭವತಿ। ತನ್ನಿರಾಸಾಯ ಪದಚ್ಛೇದಂ ಪ್ರದರ್ಶ್ಯ ವ್ಯಾಚಷ್ಟೇ ಅಕೃತಕಾಲೇತಿ।

ಅಕೃತಕಾಲ ಶಕ್ತಿಧೃಕ್ । ಅಕೃತಂ ಪರಾದ್ಯನಿರ್ಮಿತಂ । ಸ್ವರೂಪಮಿತಿ ಯಾವತ್ । ಅನೇನ ಅಕೃತಾ ಸ್ವರೂಪಭೂತಾ ಕಾಲಾಖ್ಯಾ ಚ ಸಾ ಶಕ್ತಿಶ್ಚ ಅಕೃತಕಾಲಶಕ್ತಿಸ್ತಾಂ ಧರತೀತಿ ವಿಗ್ರಹಃ ಸೂಚಿತೋ ಭವತಿ। -ಪ್ರಬೋಧಿನೀ

ತತ್ಕಾಲದಲ್ಲಿ ಕೃತವಾದ ಶಕ್ತಿಯನ್ನೇ ಪರಮಾತ್ಮ ಧರಿಸುತ್ತಾನೆ ಎನ್ನುತ್ತಿದೆ ಭಾಗವತವೆಂದು ಭ್ರಮೆ ಉಂಟಾಗಲು ಅವಕಾಶವಿದೆ. ಅದಕ್ಕೆ ಶ್ರೀಮದಾಚಾರ್ಯರು 'ಅಕೃತಕಾಲ ಶಕ್ತಿಧೃಕ್' ಎಂದೇ ಪದಚ್ಛೇದ. 'ಅಕೃತ'ವೆಂದರೆ ವರಾದಿಗಳಿಂದ ನಿರ್ಮಿತವಲ್ಲದ ಸ್ವರೂಪ' ಎಂದು ವ್ಯಾಖ್ಯಾನಿಸುತ್ತಾರೆ. ಇದರಿಂದ 'ಅಕೃತವಾದ ಸ್ವರೂಪಭೂತವಾದ ಕಾಲವೆಂಬ ಶಕ್ತಿಯನ್ನು ಧರಿಸುವವನು' ಎಂದು ವಿಗ್ರಹವನ್ನು ಸೂಚಿಸಿದಂತಾಯಿತು.'

ಇಲ್ಲಿ ಒಂದು ಸಮಸ್ಯೆ ಬರುತ್ತದೆ-

'ಗುಣೈರನೀಹೋಕೃತಕಾಲಶಕ್ತಿಧೃಕ್'

ಎಂಬಲ್ಲಿ 'ಅನೀಹಃ ಕೃತಕಾಲಶಕ್ತಿಧೃಕ್' ಎಂದು ಪದಚ್ಛೇದಭ್ರಾಂತಿ ಯಾರಿಗಾದರೂ ಬರುವ ಸಂಭವ ಉಂಟೆ? ಸಂಸ್ಕೃತ ಭಾಷೆಯ ಸಾಮಾನ್ಯಜ್ಞಾನ ಉಳ್ಳವನಿಗೂ ಅದು ಬರಲಾರದು. 'ಕುಪ್ವೋಃ ಕ಼ಃಪೌ ಚ' ಎಂಬ ಪಾಣಿನಿಸೂತ್ರದಂತೆ 'ಅನೀಹಃ ಕೃತ' ಎಂಬುದು ಹಾಗೇ ಉಳಿಯುತ್ತದೆ ಹೊರತು 'ಅನೀಹೋಕೃತ' ಎಂದು ಸಂಧಿ ಯಾಗುವುದಿಲ್ಲ ತಾನೆ?

ಆದರೆ, ಪ್ರಬೋಧಿನೀಕಾರರು 'ಪದಚ್ಛೇದಭ್ರಾಂತಿ' ಎಂದು ಹೇಳದಿರುವುದನ್ನು ಗಮನಿಸಬೇಕು. 'ಹರಿಶಕ್ತಿ ತತ್ಕಾಲಜಾತ' ಎನ್ನುವ ಭ್ರಾಂತಿ ಎಂದಿದ್ದಾರೆ. ಆದರಿಂದ 'ಕೃತಕಾಲ ಶಕ್ತಿಧೃಕ್' ಎಂದು ಪದಚ್ಛೇದವನ್ನು ಅವರು ಹೇಳುತ್ತಿಲ್ಲ. 'ಅಕೃತಕಾಲಶಕ್ತಿಧೃಕ್' ಎಂದೇ ಹೇಳಿದ್ದಾರೆ. ಪ್ರಬೋಧಿನಿಯಲ್ಲಿ,

'ಶ್ಲೋಕೇ ಕೃತಕಾಲಶಕ್ತಿಧೃಕ್'

ಎಂಬಲ್ಲಿ 'ऽ' ಎಂದು ಅವಗ್ರಹವಿಟ್ಟುಕೊಳ್ಳಬೇಕು. ಅದು ಬಿಟ್ಟುಹೋಗಿದೆ. ವಿಗ್ರಹಗಳನ್ನು ಹೇಳುವಾಗಲೂ-

'ಕಾಲೇ ಶಕ್ತಿಃ ಕಾಲಶಕ್ತಿಃ ಕೃತಾ ಚ ಸಾ ಕಾಲಶಕ್ತಿಶ್ಚ'

ಎಂಬಲ್ಲಿ 'ಏನ ಕೃತಾ ಚ ಸಾ' ಎಂದು 'ಏನ' ಶಬ್ದವನ್ನು ಸೇರಿಸಬೇಕು. ಅದೂ ಬಿಟ್ಟುಹೋಗಿದೆ. 'ಏನ' ಎಂದರೆ ಅಕಾರವಾಚ್ಯಪರಮಾತ್ಮನಿಂದ ಎಂದರ್ಥ.

ಹರಿಶಕ್ತಿಗೆ ತತ್ಕಾಲ ಜಾತತ್ವಭ್ರಮವೆಂದರೆ ಹರಿಯ ಸ್ವರೂಪಶಕ್ತಿಯ ಬಗ್ಗೆ ಗೊತ್ತಿಲ್ಲದವನಿಗೆ 'ಹರಿಯಲ್ಲಿ 'ಕಾಲಶಕ್ತಿ' ಎಂದರೆ ಕೇವಲ ಭಿನ್ನವಾದ ಕಾಲಶಕ್ತಿಯೇ ಇರುತ್ತದೆ, ಅದು ತತ್ಕಾಲದಲ್ಲಿ ಹುಟ್ಟುತ್ತದೆ' ಎಂದು ಭ್ರಮ ಬರಬಹುದು. ಅದು ಸರಿಯಲ್ಲ, ಹರಿಯಲ್ಲಿ ಭಿನ್ನವಾದ ಕೃತವಾದ ಶಕ್ತಿ ಮಾತ್ರವಲ್ಲದೆ, ಅಭಿನ್ನವಾದ

ಸ್ವರೂಪಭೂತವಾದ ಅಕೃತವಾದ ಅನಾದಿನಿತ್ಯವಾದ ಕಾಲ ಎಂಬ ಶಕ್ತಿಯೂ ಇದೆ. ಇದನ್ನೇ ಶ್ರೀಮದಾಚಾರ್ಯರು 'ಅಕೃತಂ ವರಾದ್ಯನಿರ್ಮಿತಂ ಸ್ವರೂಪಮಿತಿ ಯಾವತ್' ಎಂದಿದ್ದಾರೆ. ಶ್ಲೋಕದಲ್ಲಿ 'ಅಕೃತಕಾಲಶಕ್ತಿದೃಕ್' ಎಂಬಲ್ಲಿ 'ಅಕೃತ' ಶಬ್ದವನ್ನು ಸ್ತ್ರೀಲಿಂಗದಲ್ಲಿ ಇಟ್ಟುಕೊಂಡೇ ವಿಗ್ರಹಮಾಡಬೇಕು. ಅದನ್ನು ಪ್ರಬೋಧಿನಿಯಲ್ಲಿ ಸ್ಪಷ್ಟ ಹೇಳಿದ್ದಾರೆ. ತಾತ್ಪರ್ಯದಲ್ಲಿ 'ಅಕೃತಂ ವರಾದ್ಯನಿರ್ಮಿತಂ' ಎಂದು ನಪುಂಸಕಲಿಂಗ ಪ್ರಯೋಗ ಮಾಡಿದುದು 'ಸ್ವರೂಪ' ಶಬ್ದ ನಪುಂಸಕವಾದ್ದರಿಂದ. ಇದು ವಿವರಣೆಯೇ ಹೊರತು ವಿಗ್ರಹವಲ್ಲ, ವಿಗ್ರಹ 'ಸೂಚಿತ'ವಾಗುತ್ತದೆ ಎನ್ನುತ್ತಾರೆ ಪ್ರಬೋಧಿನೀಕಾರರು. 'ಚೇಷ್ಟತೇ ಅನೇನೇತಿ ಚೇಷ್ಟಾ' ಎಂದು ಹಿಂದೆ ಶ್ರೀಮದಾಚಾರ್ಯರು ಇದೇ ರೀತಿ ವಿವರಣೆ ನೀಡಿದ್ದುಂಟು (ಅ.೪, ಶ್ಲೋ.೨೭)

ಶ್ರೀಸತ್ಯಧರ್ಮತೀರ್ಥರು ಪ್ರಬೋಧಿನಿಯಲ್ಲಿ ಮೇಲುನೋಟಕ್ಕೆ ಕಾಣುವ ಈ ತೊಡಕನ್ನು ತೋರಿಸಿ, ಕೊನೆಗೆ, 'ಇತಿ ವದಂತಿ' 'ಹೀಗೆ ಹೇಳುತ್ತಾರೆ' ಎನ್ನುತ್ತ ಇದು ತಮ್ಮ ಅಭಿಪ್ರಾಯವಲ್ಲ ಎಂಬುದನ್ನು ಪರ್ಯಾಯವಾಗಿ ಹೇಳಿದ್ದಾರೆ.

ಅಕೃತಕಾಲಶಕ್ತಿದೃಕ್ । ಅಕೃತಂ ವರಾದ್ಯನಿರ್ಮಿತಂ ಸ್ವರೂಪಮಿತಿ ಯಾವತ್ ।

ಹರೇಃ ಸ್ವರೂಪಶಕ್ತಿರ್ಯಾ ಕಾಲಶಕ್ತಿರುದೀರ್ಯತೇ ।
ಸದಾ ಸರ್ವಗುಣಾತ್ಮತ್ವಾದ್ ದುರ್ಗಾ ವಾಽಪ್ಯಪರಾ ತತಃ ।
ಸರ್ವಸಂಹಾರಕಾರಿತ್ವಾದ್ ವಾಯುಃ ಸರ್ವಸ್ಯ ಜೀವನಾತ್ ।
ಕಾಲಾಭಿಮಾನಿನಾವೇತೌ ದುರ್ಗಾ ವಾಯುಶ್ಚ ಕೀರ್ತಿತೌ ॥
ಇತಿ ಪ್ರಕಾಶಸಂಹಿತಾಯಾಂ ॥

ಈ ಶ್ಲೋಕದಲ್ಲಿ 'ಅಕೃತ' 'ಮಾಡಿರುವಿ' ಎಂದು ಬೇರೆ ಪದವಲ್ಲ. 'ಅಕೃತಕಾಲಶಕ್ತಿದೃಕ್' ಎಂದು ಒಂದು ಪದ. 'ಅಕೃತ'ವೆಂದರೆ ವರಾದಿಗಳಿಂದ ನಿರ್ಮಿತವಲ್ಲದ್ದು, ಸ್ವರೂಪ ಎಂದರ್ಥ.

'ಶ್ರೀಹರಿ ಸದಾ ಸರ್ವಗುಣಸ್ವರೂಪನಾಗಿರುವುದರಿಂದ ಅವನ ಸ್ವರೂಪ ಶಕ್ತಿಯು ಕಾಲಶಕ್ತಿ ಎನಿಸುತ್ತದೆ. ಕಾಲ ಎಂಬಲ್ಲಿ ಕಲ ಧಾತು ಸರ್ವಗುಣಗಳನ್ನು ಹೇಳುತ್ತದೆ. ದುರ್ಗಾದೇವಿ ಸರ್ವಸಂಹಾರಕಳಾದ್ದರಿಂದ ಅವಳ ಸ್ವರೂಪ ಭೂತವಾದ ಲಯಶಕ್ತಿ ಇನ್ನೊಂದು ಕಾಲಶಕ್ತಿ ಎನಿಸುತ್ತದೆ. ಕಲಧಾತುವಿಗೆ ಸಂಹಾರ ಎಂಬ ಅರ್ಥವಿದೆ. ವಾಯುದೇವ ಎಲ್ಲರಿಗೂ ಪ್ರಾಣಧಾರಣ ನೀಡುವುದರಿಂದ ಅವನ ಸ್ವರೂಪಭೂತವಾದ ಪಾಲನ ಶಕ್ತಿಯೂ

ಇನ್ನೊಂದು ಕಾಲಶಕ್ತಿ ಎನಿಸುತ್ತದೆ. ಕಲಧಾತು ಪ್ರಾಣಧಾರಣವನ್ನು ಹೇಳುತ್ತದೆ. ಧಾತುಗಳಿಗೆ ಅನೇಕಾರ್ಥಗಳು ಪ್ರಯೋಗಾನುಸಾರ ಇವೆ. ದುರ್ಗೆ ಮತ್ತು ವಾಯು ಕಾಲಾಭಿಮಾನಿಗಳೂ ಆಗಿರುವುದರಿಂದ ಅವರ ಸ್ವರೂಪ ಶಕ್ತಿಗಳು ಕಾಲಶಕ್ತಿ ಎನಿಸುತ್ತವೆ' ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

ಶ್ಲೋಕದಲ್ಲಿ 'ಅಕೃತ' ಎಂಬುದು ಪ್ರತ್ಯೇಕ ಪದವೆನ್ನುವುದು ತಪ್ಪೆಂದು ತಾತ್ಪರ್ಯದ ಅಭಿಪ್ರಾಯವಲ್ಲ. ಅದೂ ಸರಿಯೆ. 'ಅಕೃತಕಾಲಶಕ್ತಿಧೃಕ್' ಎಂದು ಸಮಸ್ತ ಪದವಿಟ್ಟುಕೊಂಡರೆ ಅಕೃತವಾದ ಸ್ವರೂಪಭೂತವಾದ ಕಾಲಶಕ್ತಿ ಎಂದು ವಿಶೇಷಾರ್ಥ ಲಭಿಸುತ್ತದೆ. ಇದು ಪ್ರಕಾಶಸಂಹಿತಾವಚನದಲ್ಲಿ ಹೇಳಿದ ಸ್ವರೂಪಭೂತ 'ಕಾಲಶಕ್ತಿ'ಯೇ ಆಗಿದೆ ಎಂದು ಅಭಿಪ್ರಾಯ.

❖❖❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ನಾಗಪತ್ನಿಯರು ಸ್ತುತಿಸುತ್ತಾರೆ-

ತಸ್ಯೈವ ತೇಽಮೂಸ್ತನವಸ್ತ್ರಿಲೋಕ್ಯಾಂ
ಶಾಂತಾ ಅಶಾಂತಾ ಉತ ಮೂಢಯೋನಯಃ ।
ಶಾಂತಾಃ ಪ್ರಿಯಾಸ್ತೇ ಹ್ಯಧುನಾಽವಿತುಃ ಸತಾಂ
ಸ್ಥಾತುಶ್ಚ ತೇ ಕರ್ಮಪರೀಪ್ಸಯೇಹತಃ ॥ ೫೦ ॥

ಮೂಲೋಕದಲ್ಲಿರುವ ಈ ದೇವ ಮಾನವ ದಾನವರು ನಿನಗೆ ಪ್ರತಿಮೆಗಳಂತೆ ಸನ್ನಿಧಾನ ಪಾತ್ರರು. ಮುಖ್ಯಪ್ರಾಣನ ಮೂಲಕ ಕರ್ಮ ಮಾಡಿಸುವುದಕ್ಕಾಗಿ ಎಲ್ಲರ ಶರೀರಗಳಲ್ಲಿ ನೀನಿದ್ದರೂ ಸಜ್ಜನ ರಕ್ಷಕನಾದ ನಿನಗೆ ಈ ಸ್ಥಿತಿ ಕಾಲದಲ್ಲಿ ದೇವತೆಗಳೇ ಆಂತರಿಕವಾಗಿ ಹೆಚ್ಚು ಪ್ರೀತಿಪಾತ್ರರು. ಅದರಿಂದ ದೇವಸ್ವಭಾವದವನೇ ಆದ ನಮ್ಮ ಪತಿಯನ್ನು ಕಾಪಾಡು.

ಇಲ್ಲಿ ಮೇಲುನೋಟಕ್ಕೆ ಶ್ಲೋಕದ ಅರ್ಥ ಹೀಗೆ ಕಾಣುತ್ತದೆ- 'ಮೂರು ಲೋಕಗಳಲ್ಲಿಯೂ ಸತ್ವಪ್ರಧಾನವಾದ ಶಾಂತ, ರಜಃ ಪ್ರಧಾನವಾದ ಅಶಾಂತ, ತಮಃ ಪ್ರಧಾನವಾದ ಮೂಢ ಎಂಬ ಮೂರು ರೀತಿಯ ಯೋನಿಗಳಿವೆ. ಇವೆಲ್ಲವೂ ನಿನ್ನ ಶರೀರಗಳೆ. ಹೀಗಿದ್ದರೂ ಈಗ ಸ್ಥಿತಿ ಕಾಲದಲ್ಲಿ ಶಾಂತರಾದ ಜನರೇ ನಿನ್ನ ವಿಶೇಷ ಪ್ರೀತಿಗೆ ಪಾತ್ರರು. ಏಕೆಂದರೆ ನೀನೀಗ ಸಜ್ಜನರ ಧರ್ಮಪರಿಪಾಲನೇಚ್ಛೆಯಿಂದ ಅವತರಿಸಿ ಅವರ ರಕ್ಷಣೆಗೆ ನಿಂತಿರುವಿ.'

ಬೇರೆ ವ್ಯಾಖ್ಯಾನಕಾರರು ಹೀಗೇ ಅರ್ಥ ಹೇಳುತ್ತಾರೆ. ಅವರ ಶ್ಲೋಕಪಾಠ ಹೀಗಿದೆ-

ಶಾಂತಾಃ ಪ್ರಿಯಾಸ್ತೇ ಹ್ಯಧುನಾಽವಿತುಂ ಸತಾಂ
ಸ್ಥಾತುಶ್ಚ ತೇ ಧರ್ಮಪರೀಪ್ಸಯೇಹತಃ ॥

ಇಲ್ಲಿ ಶಾಂತ ಅಶಾಂತ ಮೂಢರು ಎಂದರೇನೆಂದು ಶಬ್ದಸ್ವಾರಸ್ಯವನ್ನು ಬೇರೆ ವ್ಯಾಖ್ಯಾನಕಾರರು ಯಾರೂ ಹೇಳಿಲ್ಲ. ಸತ್ವರಜಸ್ತಮ ಪ್ರಧಾನರೆಂದು ಕೇವಲ ಪರಿಚಯಿಸುತ್ತಾರೆ. ಆದರೆ ಅಶಾಂತರೆಂದರೆ ಉಗ್ರರೆಂದಿಟ್ಟುಕೊಂಡರೆ ಸತ್ವಪ್ರಧಾನರಾಗಲಿ ರಜಸ್ತಮ ಪ್ರಧಾನರಾಗಲಿ ಎಲ್ಲರೂ ತಮಗೆ ಬೇಕಾದವರಲ್ಲಿ ಶಾಂತರೇ ಆಗಿರುತ್ತಾರೆ. ಬೇಡವಾದವರಲ್ಲಿ ಉಗ್ರರೇ ಆಗಿರುತ್ತಾರೆ. ಅದರಿಂದ ಹೀಗೆ ಹೇಳಬೇಕು- 'ಶಾಂತ' ಎಂಬಲ್ಲಿ ಶ ಎಂದರೆ ಸುಖ. ಅಂತ ಎಂದರೆ ಕೊನೆ, ಪರಾಕಾಷ್ಠೆ. ಸುಖದ ಪರಾಕಾಷ್ಠೆ ಸತ್ವಪ್ರಧಾನರಲ್ಲಿರುತ್ತದೆ. ಅಶಾಂತರಲ್ಲಿ ಅದಿಲ್ಲ. ಅವರ ಸುಖ ದುಃಖಮಿಶ್ರವಾಗಿರುತ್ತದೆ. ಮೂಢರಲ್ಲಿ ಸುಖವೇ ಇಲ್ಲ. ದುಃಖಸಾಧನವನ್ನೇ ಸುಖಸಾಧನವೆಂದು ತಿಳಿದು ಮೋಹಕ್ಕೊಳಗಾಗಿ ದುಃಖವನ್ನೇ ಪಡೆಯುತ್ತಾರೆ.

ಈ ವಿವರಣೆಯಲ್ಲಿಯೂ ಹಿಂದೆ ಹೇಳಿದ ತೊಡಕು ಕಾಣುತ್ತದೆ. ಮೂಢರು ಮೋಹವನ್ನು ತೊರೆದು ಸುಖಿಗಳಾಗಬಹುದು. ಶಾಂತರೂ ಮೋಹಕ್ಕೊಳಗಾಗಿ ದುಃಖಭಾಗಿಗಳಾಗಬಹುದು. ಆದರೆ ಇದು ಜೀವಸ್ವರೂಪದ ಬಗ್ಗೆ ಹೇಳಿದ ವ್ಯವಸ್ಥೆ. ಸ್ವರೂಪದಲ್ಲಿ ಸಾತ್ವಿಕರಾದ ಉತ್ತಮರು ಮೋಕ್ಷದಲ್ಲಿ ಸ್ವಯೋಗ್ಯ ಸುಖದ ಪರಾಕಾಷ್ಠೆಯನ್ನೇ ಪಡೆಯುತ್ತಾರೆ. ಸ್ವರೂಪದಲ್ಲಿ ತಾಮಸರಾದ ಮೂಢರು ಮೋಹವನ್ನು ಬಿಡಲಾರರು. ತಮಸ್ಸಿನಲ್ಲಿ ಬಿದ್ದು ಕೇವಲ ದುಃಖಿಗಳೇ ಆಗುತ್ತಾರೆ.

ಶಾಂತ ಅಶಾಂತ ಮೂಢ ಶಬ್ದಗಳ ಈ ನಿರ್ವಚನ ಪ್ರಕಾಶಸಂಹಿತೆಯಲ್ಲಿ ಉಕ್ತವಾಗಿದೆ.

'ಅಧುನಾ ಶಾಂತಾಃ ಪ್ರಿಯಾಃ' ಈಗ, ಅಂದರೆ ಸ್ಥಿತಿಕಾಲದಲ್ಲಿ, ಭಗವಂತನಿಗೆ ಸಾತ್ವಿಕರು ಸ್ಥಿತಿಕಾರ್ಯದಲ್ಲಿ ಸಹಕಾರಿಗಳಾಗಿದ್ದು ವಿಶೇಷವಾಗಿ ಪ್ರಿಯರೆಂದು ಶ್ಲೋಕದಲ್ಲಿ ಹೇಳುವುದು ಸರಿಕಾಣುವುದಿಲ್ಲ. ಸ್ಥಿತಿಕಾಲದಲ್ಲಿಯೇ ಪಾಂಡವರಿಗೆ ವನವಾಸ ದುಃಖ ನೀಡಿದ್ದಾನೆ, ಕೃಷ್ಣ. ಕೌರವರಿಗೆ ರಾಜ್ಯಸುಖ ನೀಡಿದ್ದಾನೆ. ಬೇರೆ ವ್ಯಾಖ್ಯಾನಕಾರರು ಈ ವಿಷಯದಲ್ಲಿ ಮೌನವಾಗಿದ್ದಾರೆ. ಶ್ರೀಮದಾಚಾರ್ಯರು ಹೇಳುತ್ತಾರೆ- ಶ್ರೀಕೃಷ್ಣನಿಗೆ ಪಾಂಡವರೇ ಅಂತರಂಗದಲ್ಲಿ ಪ್ರಿಯರು. ಅದರಿಂದ

ಅವರಿಗೆ ಮೊದಲು ಸ್ವಲ್ಪಕಾಲ ವನವಾಸ ದುಃಖ ನೀಡಿದರೂ ಕೊನೆಯಲ್ಲಿ ಅಪಾರವಾದ ರಾಜ್ಯಸುಖ ಸ್ವರ್ಗಸುಖ ಮೋಕ್ಷಸುಖ ನೀಡಿದ್ದಾನೆ. ಕೌರವರಿಗೆ ಹೊರಗೆ ಪ್ರಿಯನಂತೆ ಎನಿಸಿ ಮೊದಲಿಗೆ ಸ್ವಲ್ಪ ಕಾಲವೆ ರಾಜ್ಯ ಸುಖ ನೀಡಿದ. ಕೊನೆಯಲ್ಲಿ ಯುದ್ಧದಲ್ಲಿ ಅಪಾರವಾದ ಮರಣದುಃಖ, ನರಕ ದುಃಖ, ತಮಸ್ಸಿನ ದುಃಖಗಳನ್ನು ಕೊಟ್ಟಿದ್ದಾನೆ. ಹೊರಗೆ ಎಲ್ಲರೂ ಭಗವಂತನಿಗೆ ಪ್ರಿಯರೆ ಯಾರಿಗೂ ದುಃಖದೊಂದಿಗೆ ಸುಖ ನೀಡದಿರುವುದಿಲ್ಲ. ಆದರೆ ಒಳಗೆ ಅಂತರಂಗದಲ್ಲಿ ವಿಶೇಷವಾಗಿ ಪ್ರಿಯರು ಕೇವಲ ಸಾತ್ವಿಕರು. ಈ ವ್ಯವಸ್ಥೆ ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ಶ್ಲೋಕದಲ್ಲಿ 'ಸತಾಂ ಧರ್ಮ ಪರೀಪ್ಸಯಾ ತಾನ್ ಅವಿತುಂ ಈಹತಃ' 'ಸಜ್ಜನರ ಧರ್ಮರಕ್ಷಣೆಗಾಗಿ ಅವರ ರಕ್ಷಣೆ ಮಾಡಲು ಪ್ರವೃತ್ತಿಸುವ' ಎಂದು ಹೇಳಿದ ಬಳಿಕ 'ಸ್ಥಾತುಃ' ಎಂದು ಇನ್ನೊಂದು ಶಬ್ದವಿದೆ. ಅದು ವ್ಯರ್ಥ.

[೧]ಶ್ರೀಧರ ವ್ಯಾಖ್ಯಾನದಲ್ಲಿ 'ಸಜ್ಜನರ ಧರ್ಮರಕ್ಷಣೆಗಾಗಿ ಪ್ರವೃತ್ತಿಸುವ, ಅವರ ರಕ್ಷಣೆಗೆ ನಿಲ್ಲುವ' ಎಂದು ವಾಕ್ಯವನ್ನು ಬೇರೆಬೇರೆ ಮಾಡಿದ್ದಾರೆ. ಅದೇಕೆ? ಒಂದೇ ವಾಕ್ಯವಿಟ್ಟುಕೊಂಡು 'ಸ್ಥಾತುಃ' ಎಂಬ ಶಬ್ದವನ್ನು ಹೇಳದಿರಬಹುದಿತ್ತು. ಈ ಸಮಸ್ಯೆಯನ್ನು ಕಂಡು ಪ್ರಾಯಃ ವೀರರಾಘವ ವ್ಯಾಖ್ಯಾನದಲ್ಲಿ 'ಸ್ಥಾತುಃ' ಎಂದರೆ 'ಸ್ಥಿತಿಕರ್ತ'ನೆಂದು ಅರ್ಥವಿಟ್ಟುಕೊಂಡು, ಸ್ಥಿತಿಕರ್ತನಾದ್ದರಿಂದಲೇ ಧರ್ಮರಕ್ಷಣೆಗೆ ಪ್ರವೃತ್ತಿ ಮಾಡುತ್ತಾನೆ ಭಗವಂತ ಎಂದಿದ್ದಾರೆ. ಆದರೆ 'ಸ್ಥಾತುಃ' ಎಂದರೆ 'ತನ್ನ ಸ್ಥಿತಿಗೆ ಕರ್ತ' ಹೊರತು 'ಇನ್ನೊಬ್ಬರ ಸ್ಥಿತಿಗೆ ಕರ್ತ' ಎಂದು ಅರ್ಥವಾಗುವುದಿಲ್ಲ. ಅದಕ್ಕೆ 'ಸ್ಥಾಪಯಿತುಃ' ಎನ್ನಬೇಕಾಗಿತ್ತು.

ವಸ್ತುತಃ 'ಈಹತಃ' ಚೇಷ್ಟಕನಾದ ಮುಖ್ಯಪ್ರಾಣನಿಂದ 'ಕರ್ಮಪರೀಪ್ಸಯಾ' ಪಾಲನಕರ್ಮ ಮಾಡಿಸುವುದಕ್ಕಾಗಿ ಜೀವಶರೀರಗಳಲ್ಲಿ 'ಸ್ಥಾತುಃ' ಅಂತರ್ಯಾಮಿಯಾಗಿ 'ನಿಲ್ಲುವ' ಭಗವಂತ ಎಂದು ವಿವರಣೆ ನೀಡುವುದು ವಿಶೇಷಾರ್ಥ ಗರ್ಭಿತವಾಗಿದ್ದು ಪ್ರಕಾಶಸಂಹಿತಾವಚನಕ್ಕೂ ಅನುಗುಣವಾಗಿರುತ್ತದೆ.

ಅಂತಃಪ್ರಿಯಂ ಬಹಿಶ್ಚೇತಿ ದ್ವಿಧಾ ಪ್ರಿಯಮುದಾಹೃತಂ ।
ಅಂತಃಪ್ರಿಯಾಃ ಹರೇಃ ಸಂತಃ ಸರ್ವಂ ಚಾಪಿ ಬಹಿಃ ಪ್ರಿಯಂ ।

---

೧ ಸತಾಂ ಧರ್ಮಪರಿಪಾಲನೇಚ್ಛಯಾ ಈಹತಃ ಪ್ರವರ್ತಮಾನಸ್ಯ। ಅತಸ್ತಾನವಿತುಂ ಸ್ಥಾತುಃ ಸ್ಥಿತಸ್ಯ । -ಶ್ರೀಧರಃ

ಸ್ಥಾತುಃ ಸ್ಥಿತಿಕರ್ತುರತ ಏವ ಸತಾಂ ಧರ್ಮ ಪರಿಪಾಲನೇಚ್ಛಯಾ ಈಹತಃ ಪ್ರವರ್ತಮಾನಸ್ಯ। ಕೃತಾವತಾರಸ್ಯೇತಿ ಯಾವತ್ । -ವೀರರಾಘವಃ

ಅಸಂತಶ್ಚಾಪಿ ಸಂಹಾರೇ ಈಷದಂತಃಪ್ರಿಯಾ ಇವ ।
ತದಪೇಕ್ಷಯಾ ತಥಾ ಸಂತೋ ವಿಶೇಷಾಂತಃ ಪ್ರಿಯಾಃ ಸ್ಥಿತೌ ॥
ಇತಿ ಷಾಡ್ಗುಣ್ಯೇ॥

ಸುಖಾಂತಂ ಪ್ರಾಪ್ನುಯುರ್ಯಸ್ಮಾತ್ ದೇವಾಃ ಶಾಂತಾ ಉದಾಹೃತಾಃ ।
ಅಶಾಂತಾ ಮಾನುಷಾಃ ಪ್ರೋಕ್ತಾ ವಿಮೂಢಾ ಆಸುರಾ ಮತಾಃ ॥
ಇತಿ ಪ್ರಕಾಶಸಂಹಿತಾಯಾಂ ॥

ಕರ್ಮಪರೀಪ್ಸಯಾ ಕರ್ಮಪ್ರವರ್ತನಾರ್ಥಂ ಸರ್ವಶರೀರೇಷು ಸ್ಥಾತುಃ ಈಹತಃ ಪ್ರಾಣಸ್ಯ ಸಕಾಶಾತ್। ಪ್ರಾಣಸಕಾಶಾದ್ಧಿ ಕರ್ಮಪ್ರವರ್ತನಮಿಚ್ಛತಿ ಭಗವಾನ್ ।

ವಾಯೋಃ ಸಕಾಶಾಜ್ಜಗತಃ ಪ್ರವೃತ್ತಿಂ ಕಾಮಯತ್ಯಜಃ ।
ಪ್ರಾಣಪ್ರಾಣಮತಃ ಪ್ರಾಹುರ್ವಿಷ್ಣುಂ ವಾಯೋರಪಿ ಪ್ರಭುಂ ॥
–ಇತಿ ಚ ॥

'ಚೇತನರು ಭಗವಂತನಿಗೆ ಅಂತರಂಗದಲ್ಲಿ ಪ್ರಿಯರು ಮತ್ತು ಹೊರಗೆ ಪ್ರಿಯರೆಂದು ಎರಡು ಬಗೆಯಾಗಿದ್ದಾರೆ. ಸಜ್ಜನರು ಅಂತರಂಗದಲ್ಲಿ ಪ್ರಿಯರು. ಹೊರಗೆ ಎಲ್ಲರೂ ಪ್ರಿಯರು. ಸಂಹಾರ ಕಾಲದಲ್ಲಿ ಸಂಹಾರಕ್ಕೆ ಸಹಕಾರಿಗಳೆಂದು ದುರ್ಜನರೂ ಕೂಡ ಸ್ವಲ್ಪ ಅಂತರಂಗದಲ್ಲಿ ಪ್ರಿಯರಂತೆ ಇರುತ್ತಾರೆ. ಅವರಿಗಿಂತ ವಿಶೇಷವಾಗಿ ಸ್ಥಿತಿಯಲ್ಲಿ ಸಹಕಾರಿಗಳಾದ ಲೋಕೋಪಕಾರಕರಾದ ಸಜ್ಜನರು ಅಂತರಂಗದಲ್ಲಿ ಪ್ರಿಯರಾಗಿರುತ್ತಾರೆ.' ಎಂದು ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಹೇಳಿದೆ.

'ಸ್ವಯೋಗ್ಯಸುಖದ ಪರಾಕಾಷ್ಠೆ(ಶ ಅಂತ)ಯನ್ನು ದೇವತೆಗಳು ಮುಕ್ತಿಯಲ್ಲಿ ಹೊಂದುವುದರಿಂದ ಅವರು 'ಶಾಂತ'ರೆನಿಸುತ್ತಾರೆ. ಮಧ್ಯಮಜೀವರು ದುಃಖಮಿಶ್ರ ಸುಖವನ್ನೇ ಹೊಂದುವುದರಿಂದ 'ಅಶಾಂತ'ರು. ತಾಮಸರು ಮೋಹಕ್ಕೊಳಗಾಗಿ ಕೇವಲ ದುಃಖಿಗಳಾಗುವುದರಿಂದ 'ವಿಮೂಢ' ರೆನಿಸುತ್ತಾರೆ' ಎಂದು ಪ್ರಕಾಶಸಂಹಿತೆಯಲ್ಲಿ ಹೇಳಿದೆ.

'ಕರ್ಮಪರೀಪ್ಸಯಾ' ಎಂದರೆ ಜೀವರಿಂದ ಕರ್ಮ ಮಾಡಿಸುವುದಕ್ಕಾಗಿ ಸರ್ವಶರೀರಗಳಲ್ಲಿ 'ಸ್ಥಾತುಃ' ಎಂದರೆ ಇರುವವನು ಭಗವಂತ. 'ಈಹತಃ' ಎಂದರೆ ಚೇಷ್ಟಕನಾದ ಮುಖ್ಯಪ್ರಾಣನಿಂದ ಎಂದರ್ಥ. ಏಕೆಂದರೆ ಪ್ರಾಣನ ಮೂಲಕ ಜೀವರಿಂದ ಕರ್ಮ ಮಾಡಿಸಲು ಭಗವಂತ ಇಚ್ಛಿಸುತ್ತಾನೆ.

'ಮುಖ್ಯಪ್ರಾಣನ ಮೂಲಕ ಜೀವರನ್ನು ಕರ್ಮದಲ್ಲಿ ತೊಡಗಿಸಲು ಬಯಸು ತ್ತಾನೆ ಭಗವಂತ. ಅದರಿಂದಲೆ ವಾಯುವಿಗೂ ಪ್ರಭು ಆತನೆಂದು 'ಪ್ರಾಣ ನಿಗೂ ಪ್ರಾಣ' ಎನ್ನುತ್ತವೆ ಶ್ರುತಿಗಳು' ಎಂದೂ ಪ್ರಕಾಶಸಂಹಿತೆಯಲ್ಲಿ ಹೇಳಿದೆ.

❖ ❖ ❖

ಕಾಲಿಯ ಮರ್ದನ ಶ್ರೀಕೃಷ್ಣನನ್ನು ಕಾಲಿಯನೇ ಸ್ತುತಿಸುತ್ತಾನೆ-

ತ್ವಯಾ ಸೃಷ್ಟಮಿದಂ ವಿಶ್ವಂ ಧಾತುರ್ಗುಣವಿಸರ್ಜನಮ್ ।
ನಾನಾಸ್ವಭಾವವೀರ್ಯೌಜೋಯೋನಿಬೀಜಾಶಯಾಕೃತಿ ॥ ೫೭ ॥

ನಾನಾ ಬಗೆಯ ಸ್ವಭಾವ, ವೀರ್ಯ, ಬಲ, ಯೋನಿ, ಬೀಜ, ಪುಣ್ಯಪಾಪ, ಆಕಾರಗಳಿಂದ ಯುಕ್ತವಾಗಿರುವಂತೆ ಈ ಜಗತ್ತನ್ನು ಸೃಜಿಸಿದವನು ನೀನು. ನಿನ್ನ ಪ್ರಪಂಚಸೃಷ್ಟಿಯೆ ಮುಖ್ಯ. ಬ್ರಹ್ಮನದು ಅಮುಖ್ಯ.

[೧]ಈ ಶ್ಲೋಕದಲ್ಲಿ 'ಧಾತುಃ' ಎಂಬುದನ್ನು 'ಧಾತಃ' ಎಂದು ಓದಿ 'ಹೇಧಾತಃ ಸೃಷ್ಟಿಕರ್ತನೆ, ನಿನ್ನಿಂದ ನಿರ್ಮಿತವಾದ ಈ ಪ್ರಪಂಚವು ಗುಣಗಳಿಂದ ನಿರ್ಮಿತವಾಗಿದೆ' ಎಂದು ಬೇರೆ ವ್ಯಾಖ್ಯಾನಕಾರರು ವಿವರಣೆ ನೀಡುತ್ತಾರೆ. ಆದರೆ 'ಈ ಪ್ರಪಂಚವು ನಿನ್ನಿಂದ ಗುಣಗಳಿಂದ ನಿರ್ಮಿತವಾಗಿದೆ' ಎಂದು ಹೇಳಲು ಶಕ್ಯವಿರುವಾಗ ವ್ಯರ್ಥವಾಗಿ 'ಸೃಷ್ಟಂ' 'ವಿಸರ್ಜನಂ' ಶಬ್ದಗಳಲ್ಲಿ ಒಂದೇ ಸೃಷ್ಟಿ ಕಾರ್ಯದ ಪುನರುಕ್ತಿ ಏಕೆ?

ವಸ್ತುತಃ 'ಧಾತುಃ' ಎಂದೇ ಸರಿಯಾದ ಪಾಠ. ಬ್ರಹ್ಮನ ಎಂದರ್ಥ. 'ಗುಣವಿಸರ್ಜನಂ' ಎಂಬಲ್ಲಿ 'ಗುಣ'ವೆಂದರೆ ತ್ರಿಗುಣವಲ್ಲ, ಗೌಣ, ಅಮುಖ್ಯ ಎಂದರ್ಥ. 'ನಿನ್ನ ಪ್ರಪಂಚಸೃಷ್ಟಿಯೇ ಮುಖ್ಯ. ಗುಣಭೂತವಾದ ಸೃಷ್ಟಿ ಬ್ರಹ್ಮನಿಂದಾಯಿತು. ನಿನ್ನ ಮತ್ತು ಬ್ರಹ್ಮನ ಈ ಎರಡು ಪ್ರಪಂಚ ಸೃಷ್ಟಿಕಾರ್ಯಗಳಲ್ಲಿ ಹೀಗೆ ಮಹಾವೈಲಕ್ಷಣ್ಯವಿದೆ' ಎಂದು ತಿಳಿಸಲು ಎರಡು ಬಾರಿ ಸೃಷ್ಟಿಯನ್ನು ಹೇಳುವ ಶಬ್ದಗಳು ಶ್ಲೋಕದಲ್ಲಿ ಬಂದಿರುವುದು ಉಚಿತವೇ ಆಗಿದೆ.

ಧಾತುರ್ಗುಣವಿಸರ್ಜನಂ ಹಿರಣ್ಯಗರ್ಭಸಕಾಶಾದ್ ಗುಣಭೂತಾ ಸೃಷ್ಟಿರಸ್ಯ ಜಗತಃ। ಪ್ರಾಧಾನ್ಯೇನ ವಿಷ್ಣೋರೇವ ॥

---

೧ ಹೇ ಧಾತಃ ಗುಣೈರ್ವಿವಿಧತಯಾ ಸೃಜ್ಯತ ಇತಿ ಗುಣವಿಸರ್ಜನಮಿದಂ ತಿರಶ್ಚಾಂ ಜಾಲಂ ತ್ವಯಾ ಸೃಷ್ಟಂ। - ವೀರರಾಘವಃ

ವಿಷ್ಣುಃ ಪ್ರಧಾನತಃ ಸ್ರಷ್ಟಾ ಗುಣಸ್ರಷ್ಟಾ ಚತುರ್ಮುಖಃ ||
ಇತಿ ನಾರದೀಯೇ ||

'ಧಾತುರ್ಗುಣ ವಿಸರ್ಜನಂ' ಎಂದರೆ ಈ ಜಗತ್ತಿಗೆ ಚತುರ್ಮುಖನು ಮಾಡಿದ ಸೃಷ್ಟಿ ಅಮುಖ್ಯ. ಮುಖ್ಯಸೃಷ್ಟಿ ವಿಷ್ಣುವಿನದೇ ಎಂದರ್ಥ.

'ವಿಷ್ಣುವೆ ಮುಖ್ಯವಾಗಿ ಸೃಷ್ಟಿಕರ್ತ. ಚತುರ್ಮುಖ ಅಮುಖ್ಯ ಸೃಷ್ಟಿಕರ್ತ' ಎಂದು ನಾರದ ಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಚತುರ್ದಶೋऽಧ್ಯಾಯಃ

❖

ಅಧ್ಯಾಯ - ೧೫

ಅಧ್ಯಾಯ ಸಾರಾಂಶ

ಪ್ರತಿ ಅಮಾವಾಸ್ಯೆಯಂದು ಸರ್ಪಗಳೆಲ್ಲರೂ ತಮ್ಮ ರಕ್ಷಣೆಗಾಗಿ ಗರುಡನಿಗೆ ಸರದಿಯಂತೆ ಅನ್ನ ನೀಡಬೇಕೆಂದು ಒಪ್ಪಂದವಾಗಿತ್ತು. ಕಾಲಿಯ ಮಾತ್ರ ಅಹಂಕಾರದಿಂದ ಗರುಡನನ್ನು ಧಿಕ್ಕರಿಸಿ ಅವನಿಗೆ ಸಲ್ಲಬೇಕಾಗಿದ್ದ ಅನ್ನವನ್ನು ತಾನೇ ಉಂಡ. ಗರುಡ ಸಿಟ್ಟಾಗಿ ಕಾಲಿಯನನ್ನು ಕೊಲ್ಲಲು ಬಂದ. ಕಾಲಿಯ ಹೆಡೆಗಳನ್ನೆತ್ತಿ ಇದಿರಿಸಿ ನಿಂತು ಭಯಂಕರ ನಾಲಿಗೆಗಳನ್ನು ಚಾಚಿ ಫೂತ್ಕರಿಸಿ ಉಗ್ರ ದೃಷ್ಟಿಯಿಂದ ನೋಡಿದ, ವಿಷದ ಹಲ್ಲುಗಳಿಂದ ಕಚ್ಚಿದ. ಗರುಡ ಯಾವುದನ್ನೂ ಲೆಕ್ಕಿಸದೆ ಇವನೇನು ಮಹಾವೀರನೆಂದು ಅಲಕ್ಷ್ಯಭಾವದಿಂದಲೆ ಬಂಗಾರದಂತೆ ಹೊಳೆಯುವ ಒಂದೇ ಎಡರೆಕ್ಕೆಯಿಂದ ಹೊಡೆದು ಬಿಟ್ಟ. ಅದಕ್ಕೇ ಭಯವಿಹ್ವಲನಾಗಿ ಬೇಗನೆ ಯಮುನೆಯ ಮಡುವನ್ನು ಹೊಕ್ಕ ಕಾಲಿಯ. ಏಕೆಂದರೆ ಆ ಮಡು ಗರುಡನಿಗೆ ಅಗಮ್ಯವಾಗಿತ್ತು.

ಅಲ್ಲಿ ಹಿಂದೊಮ್ಮೆ ಗರುಡ ಮೀನನ್ನು ಎತ್ತಿ ತಿನ್ನಲು ಹೊರಟಾಗ ತೀರದಲ್ಲಿ ಕುಳಿತು ನೋಡುತ್ತಿದ್ದ ಸೌಭರಿಮುನಿ ಮೀನುಗಳ ಮೇಲಿನ ಕೃಪೆಯಿಂದ ಗರುಡನನ್ನು ಶಪಿಸಿದ್ದ. 'ನೀನಿಲ್ಲಿ ಬಂದು ಮೀನುಗಳನ್ನು ತಿಂದರೆ ಸಾಯುವೆ' ಎಂದು. ಇದನ್ನು ಕಾಲಿಯ ನೊಬ್ಬನೆ ತಿಳಿದಿದ್ದ. ಮಡುವಿಗೆ ಬಂದು ಅಲ್ಲಿ ನಿರ್ಭೀತಿಯಿಂದ ವಾಸ ಮಾಡಿದ್ದ. ಶ್ರೀಕೃಷ್ಣನೀಗ ಅವನನ್ನು ಅಲ್ಲಿಂದ ಹೊರಗೆ ಹಾಕಿದ್ದಾನೆ.

ಶ್ರೀಕೃಷ್ಣ ಕಾಲಿಯನನ್ನು ಮರ್ದಿಸಿ ವಿಜಯಿಯಾಗಿ ಮಡುವಿನಿಂದ ಮೇಲೆ ಬಂದಾಗ, ದಿವ್ಯ ಗಂಧ ಮಾಲೆ ವಸ್ತ್ರಾಭರಣಗಳಿಂದ ಅಲಂಕೃತನಾಗಿ ಬಂದು ದರ್ಶನ ನೀಡಿದಾಗ ಎಲ್ಲರಿಗೂ ಜೀವ ಬಂದಂತಾಯಿತು. ಎಲ್ಲರೂ ಪ್ರೀತಿಯಿಂದ ತಬ್ಬಿಕೊಂಡರು. ಬಲರಾಮ ಮಾತ್ರ ಆಲಿಂಗಿಸಿ ನಕ್ಕುಬಿಟ್ಟ. ಅವನಿಗೆ ಕೃಷ್ಣನ ಸಾಮರ್ಥ್ಯವೇನೆಂದು ಗೊತ್ತು. ನಂದಗೋಪನನ್ನು ಗುರುಹಿರಿಯರು ಬ್ರಾಹ್ಮಣರು ಅಭಿನಂದಿಸಿದರು.

ಯಶೋದೆ ಮಗನನ್ನು ಬಾಚಿ ತಬ್ಬಿಕೊಂಡು ತೊಡೆಯಲ್ಲಿ ಕೂಡಿಸಿಕೊಂಡು ಆನಂದಬಾಷ್ಪ ಗಳನ್ನು ಸುರಿಸಿದಳು. ಅಷ್ಟರಲ್ಲಿ ಸೂರ್ಯಾಸ್ತವಾದ್ದರಿಂದ ಎಲ್ಲರೂ ಯಮುನಾತೀರದಲ್ಲಿಯೇ ಆ ರಾತ್ರಿ ಕಳೆದರು. ಗೋಕುಲಕ್ಕೆ ಹಿಂತಿರುಗಲಿಲ್ಲ.

ಹಸಿವು ಬಾಯಾರಿಕೆಗಳಿಂದ ಪೀಡಿತರಾಗಿದ್ದ ಗೊಲ್ಲರಿಗೆ ರಾತ್ರಿ ಗಾಢವಾದ ನಿದ್ದೆ ಆವರಿಸಿತು. ಆಗಲೇ ಬೇಸಗೆಯ ಬಿಸಿಲಿಗೆ ಉದ್ಭವಿಸಿದ್ದ ಕಾಳ್ಗಿಚ್ಚು ಸುತ್ತಲೂ ಆವರಿಸಿತು. ಎಲ್ಲರೂ ಗಾಬರಿ ಯಿಂದ ಎದ್ದು ಶ್ರೀಕೃಷ್ಣನನ್ನು ಮೊರೆಹೊಕ್ಕರು. ಅವರ ಗೋಳನ್ನು ಕಂಡು ಶ್ರೀಕೃಷ್ಣ ಬೇಗನೆ ಕಾಳ್ಗಿಚ್ಚನ್ನು ಪಾನಮಾಡಿದ. ಬಳಿಕ ಎಲ್ಲ ಬಂಧುಮಿತ್ರರೊಂದಿಗೆ ಗೋಕುಲವನ್ನು ಪ್ರವೇಶಿಸಿದ.

❖

ಗರುಡನಿಗೆ ಹೆದರಿದ ಕಾಳಿಯನು ಯಮುನೆಯ ಮಡುವನ್ನು ಪ್ರವೇಶಿಸಲು ಗರುಡನಿಗೆ ಸೌಭರಿ ಮುನಿಯ ಶಾಪವಿದ್ದುದೇ ಕಾರಣ ಎಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ಅತ್ರ ಪ್ರವಿಶ್ಯ ಗರುಡೋ ಯದಿ ಮತ್ಸ್ಯಾನ್ ಸ ಖಾದತಿ ।
ಸದ್ಯಃ ಪ್ರಾಣೈರ್ವಿಯುಜ್ಯೇತ ಸತ್ಯಮೇತದ್ ಬ್ರವೀಮ್ಯಹಮ್ ॥ ೧೧ ॥

ತತ್ ಕಾಲಿಯಃ ಪರಂ ವೇದ ನಾನ್ಯಃ ಕಶ್ಚಿತ್ಸ ಲೇಲಿಹಾ ।
ಅವಾತ್ಸೀದ್ ಗರುಡಾದ್ಭೀತಃ ಕೃಷ್ಣೇನ ಚ ವಿವಾಸಿತಃ ॥ ೧೨ ॥

ಗರುಡನಿಲ್ಲಿಗೆ ಬಂದು ಮೀನು ಮುಂತಾದ ಜಲಚರಗಳನ್ನು ತಿಂದರೆ ಒಡನೆ ಅವನಿಗೆ ಪ್ರಾಣವಿಯೋಗವಾಗಲಿ. ನಾನಿದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಈ ಶಾಪವನ್ನು ಕಾಲಿಯನೊಬ್ಬನೆ ತಿಳಿದಿದ್ದ. ಇನ್ನಾರೂ ತಿಳಿದಿರಲಿಲ್ಲ. ಅದರಿಂದ ಅವನು ಮಾತ್ರ ಗರುಡನ ಭಯದಿಂದ ಈ ಮಡುವಿನಲ್ಲಿ ವಾಸವಾಗಿದ್ದ. ಕೃಷ್ಣ ಅವನನ್ನು ಹೊರಗೆ ಕಳಿಸಿದ.

ಇಲ್ಲಿ ಸೌಭರಿಯಂಥ ಒಬ್ಬ ಸಾಮಾನ್ಯ ಋಷಿಯ ಶಾಪಕ್ಕೆ ಇಂದ್ರಾದಿ ಸಕಲ ದೇವತೆಗಳಿಗೆ ಒಡೆಯನಾದ, ಜಗದೀಶ್ವರರೆನಿಸಿದ ಶಿವ ಶೇಷರಿಗೆ ಸಮಾನನಾದ

ಗರುಡ ಭಯಪಡುತ್ತಾನೆ ಎಂದರೆ ಇದು ಸತ್ಯಕ್ಕೆ ದೂರವೆನಿಸದಿರದು. ಹಾಗಾದರೆ ಕಾಲಿಯನ ಮಡುವಿಗೆ ಗರುಡನೇಕೆ ಬಾರ?

ಇಲ್ಲಿ ವೀರರಾಘವ ವ್ಯಾಖ್ಯಾನ ಹೇಳುತ್ತದೆ- 'ಋಷಿಶಾಪವನ್ನು ಸಾಕ್ಷಾತ್ ಭಗವಂತನೇ ಗೌರವಿಸುತ್ತಿರುವಾಗ ಗರುಡನಾದರೂ ಇನ್ನೇನು ಮಾಡಬಲ್ಲ? ಋಷಿ ಶಾಪವನ್ನು ಪರಿಹರಿಸಿಕೊಳ್ಳಲು ಶಕ್ತಿ ಇದ್ದರೂ ಅವನು ಹಾಗೆ ಮಾಡುವುದಿಲ್ಲ'.

ಭೃಗುಮುನಿಯ ಶಾಪದಿಂದ ರುದ್ರನಿಗೆ ಲಿಂಗಪೂಜೆ, ಬ್ರಹ್ಮನಿಗೆ ಪೂಜೆಯೇ ಇಲ್ಲ, ವಿಷ್ಣುವಿಗೂ ಪತ್ನೀವಿಯೋಗ ದುಃಖ, ರಾಮಾವತಾರದಲ್ಲಿ ಎಂದಮೇಲೆ ಜಗದೀಶನಾದ ಗರುಡನಿಗೂ ಯಮುನೆಯ ಮಡುವಿನಲ್ಲಿ ಪ್ರವೇಶ ಸೌಭರಿ ಮುನಿಯ ಶಾಪದಿಂದ ಇಲ್ಲದಂತಾದುದು ಆಶ್ಚರ್ಯವಲ್ಲ. ಆದರೆ ಋಷಿ ಶಾಪವನ್ನು ಎಲ್ಲರೂ ಗೌರವಿಸುತ್ತಾರೆ ಎನ್ನಲಾಗದು. ಇದಕ್ಕೆ ಉದಾಹರಣೆ-

ನಿಮಿರಾಜ ಒಂದು ಸತ್ರಯಾಗವನ್ನು ಮಾಡಲು ಸಂಕಲ್ಪಿಸಿ ಋತ್ವಿಜರಾಗಲು ಗುರು ವಸಿಷ್ಠರನ್ನು ಕೇಳಿಕೊಂಡ. ಅವರು ಹೇಳಿದರು 'ನಿನಗಿಂತ ಮೊದಲು ದೇವೇಂದ್ರ ತನ್ನ ಯಾಗದಲ್ಲಿ ಋತ್ವಿಜನಾಗಲು ನನ್ನನ್ನು ಕೇಳಿಕೊಂಡಿದ್ದಾನೆ. ಅದನ್ನು ಮುಗಿಸಿ ಬರುತ್ತೇನೆ, ಕಾದಿರು' ಎಂದು. ನಿಮಿ ಕಾಯಲಿಲ್ಲ. ಬೇರೆ ಋತ್ವಿಜರಿಂದ ಯಜ್ಞ ಪ್ರಾರಂಭಿಸಿದ. ವಸಿಷ್ಠರು ಸಿಟ್ಟಾಗಿ 'ನಿನ್ನ ಶರೀರ ಬಿದ್ದು ಹೋಗಲಿ' ಎಂದು ಶಪಿಸಿದರು. 'ನಿರಪರಾಧಿಗೆ ಶಾಪ ನೀಡಿದ ನಿಮ್ಮ ಶರೀರವೂ ಬಿದ್ದು ಹೋಗಲಿ' ಎಂದು ನಿಮಿಯೂ ಪ್ರತಿಯಾಗಿ ಶಾಪವಿತ್ತ. ಗುರುಗಳಾದ ಬ್ರಹ್ಮರ್ಷಿ ವಸಿಷ್ಠ ಮಹಾಮುನಿಯ ಶಾಪವನ್ನು ಒಬ್ಬ ಸಾಮಾನ್ಯ ರಾಜ ಪ್ರತಿಭಟಿಸಿದ! ಅದರಿಂದ ಅವನಿಗೆ ಏನೂ ಅನರ್ಥವೂ ಆಗಲಿಲ್ಲ!

ವಸ್ತುತಃ ಋಷಿಗಳ ಶಾಪಗಳನ್ನು ವಿಷ್ಣುವೂ ವಿಷ್ಣುಭಕ್ತರೂ ಅವರ ಮೇಲಿನ ಪ್ರೀತಿಯಿಂದಲೇ ಅಂಗೀಕರಿಸುತ್ತಾರೆ. ಹಾಗೆ ಮಾಡಿದರೆ ಮಾತ್ರ ಇತರರು ಋಷಿ ಶಾಪವೆಂದರೆ ಹೆದರುತ್ತಾರೆ. ಋಷಿಗಳಿಗೆ ದುಷ್ಟರಿಂದ ರಕ್ಷಣೆ ಸಿಗುತ್ತದೆ. ಅವರಿಗೆ ಈ ಶಾಪಬಲವನ್ನು ಬಿಟ್ಟರೆ ಬೇರೆ ಕ್ಷತ್ರಿಯರ ಅಧಿಕಾರ, ವೈಶ್ಯರ ಧನ ಬಲ, ಶೂದ್ರರ ದೇಹಬಲ ಒಂದೂ ಇರುವುದಿಲ್ಲ. ಅದರಿಂದ 'ವಿಪ್ರವಾಕ್ಯೋ ಜನಾರ್ದನಃ' ಎಂಬಂತೆ ವಿಪ್ರರು ನೀಡುವ ಶಾಪಾನುಗ್ರಹಗಳನ್ನು ವಿಫಲವಾಗದಂತೆ ವಿಷ್ಣು ವೈಷ್ಣವರು ನೋಡಿಕೊಳ್ಳುತ್ತಾರೆ, ಹೊರತು ತಾವು ಅವನ್ನು ಗೌರವಿಸುವುದಿಲ್ಲ, ವಿಧೇಯರಾಗುವುದಿಲ್ಲ.

ಋಷಿಗಳು ಉತ್ತಮರಾದ ದೇವತೆಗಳಿಗೆ ಶಾಪವಿತ್ತರೆ, ಆ ಋಷಿಗಳು

ಯೋಗ್ಯತೆಗೆ ಮೀರಿ ಮಾಡಿರಬಹುದಾದ ಹೆಚ್ಚಿನ ಪುಣ್ಯವನ್ನು ಕಳೆದುಕೊಂಡು, ವಿಷ್ಣುಲೋಕಕ್ಕೆ ಹೋಗಲು ಶಕ್ತರೂ ಆಗುತ್ತಾರೆ. ಹೊರತು ಸಣ್ಣವರು ದೊಡ್ಡವರಿಗೆ ಶಾಪವಿತ್ತ ಮಾತ್ರಕ್ಕೆ ದೊಡ್ಡವರು ಸಣ್ಣವರಾಗುವುದಿಲ್ಲ. ದೊಡ್ಡವರು ವರ ನೀಡಿದ ಮಾತ್ರಕ್ಕೆ ಸಣ್ಣವರು ದೊಡ್ಡವರಾಗುವುದೂ ಇಲ್ಲ. ಜೀವಯೋಗ್ಯತೆಯಲ್ಲಿ ಯಾವುದೇ ವ್ಯತ್ಯಾಸ ಮಾಡುವ ಸಾಮರ್ಥ್ಯ ವರ ಶಾಪಗಳಿಗೆ ಇರುವುದಿಲ್ಲ. ಶ್ರೀಹರಿಗೆ ಸಾಮರ್ಥ್ಯವಿದ್ದರೂ ಅವನು ಎಂದೂ ಅಂಥ ವರ-ಶಾಪಗಳನ್ನು ಕೊಡುವುದಿಲ್ಲ. ಇದು ಬ್ರಹ್ಮಾಂಡಪುರಾಣ ವಚನದಿಂದ ಸ್ಪಷ್ಟವಾಗುತ್ತದೆ.

ವಿಷ್ಣುನಾ ವಿಷ್ಣುಭಕ್ತೈಶ್ಚ ಬ್ರಹ್ಮಶಾಪೋಽನುವರ್ತ್ಯತೇ ।
ಬ್ರಾಹ್ಮಣಾನಾಮಪೀಡಾಯೈ ಬಲಿಭಿಃ ಕ್ಷತ್ರಿಯಾದಿಭಿಃ ।
ವಿಷ್ಣೋಶ್ಚ ವಿಷ್ಣುಭಕ್ತಾನಾಂ ಶಾಪಾದ್ ವ್ಯೇತಿ ತಪೋಽಖಿಲಂ ।
ತಥಾಪಿ ಚಾಸುರಾವೇಶಾಚ್ಛಪೇಯು ರ್ಹರಿಮಪ್ಯಹೋ ।
ಅತಸ್ತು ಸೌಭರೇಃ ಶಾಪಂ ನಾತ್ಯವರ್ತತ್ ಖಗೇಶ್ವರಃ ।
ಅನ್ಯಥಾ ತೂತ್ತಮಾನಾಂ ಹಿ ನಾಧಮೈಃ ಶಾಪ ಇಷ್ಯತೇ ।
ವರೋಽಪಿ ದತ್ತಸ್ತ್ವಧಿಕೈರ್ನಾಧಮಾಧಿಕ್ಯಕಾರಣಂ ।
ವಿಷ್ಣೋರಪಿ ವರಸ್ತಸ್ಮಾನ್ನಾಧಿಕ್ಯಂ ಸಂಪ್ರಯಚ್ಛತಿ ।
ಕ್ರಮಶಃ ಶ್ರೀವಿರಿಂಚಾದೇಃ ಕಥಂಚಿತ್ ಕೇನಚಿತ್ ಕ್ವಚಿತ್ ।
ನ ಚ ದದ್ಯಾದ್ಧರಿಸ್ತಾದೃಗ್ ದದ್ಯಾದ್ವಾ ಬಾಹ್ಯಮೇವ ತು ।

ಇತಿ ಬ್ರಹ್ಮಾಂಡೇ ॥

ಬಲಿಷ್ಠರಾದ ದುಷ್ಟ ಕ್ಷತ್ರಿಯರು ಮುಂತಾದವರಿಂದ ಋಷಿಗಳಿಗೆ ಪೀಡೆ ಉಂಟಾಗದಿರಲೆಂಬ ಉದ್ದೇಶದಿಂದ ವಿಷ್ಣುವೂ ವಿಷ್ಣುಭಕ್ತರೂ ಋಷಿಗಳ ಶಾಪವನ್ನು ನಡೆಸಿಕೊಡುತ್ತಾರೆ, ಹೊರತು ಅಶಕ್ತಿಯಿಂದಲ್ಲ. ಆದರೆ ಅವರಿಗೆ ಋಷಿಗಳು ಶಾಪನೀಡಿದಾಗ ಋಷಿಗಳ ಎಲ್ಲ ಅಧಿಕ ಪುಣ್ಯ ನಶಿಸುತ್ತದೆ. ಆದರೂ ಅಸುರಾವೇಶದಿಂದ ಅವರು ವಿಷ್ಣುವನ್ನೇ ಶಪಿಸಬಹುದು, ಇನ್ನು ಉಳಿದವರ ಪಾಡೇನು? ಹಾಗೆ ದುಷ್ಟರಿಂದ ರಕ್ಷಣೆ ಮತ್ತು ಅಧಿಕ ಪುಣ್ಯನಾಶಗಳ ಉದ್ದೇಶದಿಂದಲೆ ಸೌಭರಿಋಷಿಯ ಶಾಪವನ್ನು ಗರುಡ ಮೀರಲಿಲ್ಲ. ಅಸುರಾವೇಶವಿಲ್ಲದಿದ್ದರೆ ಸಣ್ಣವರು ದೊಡ್ಡವರಿಗೆ ಶಾಪ ಕೊಡುವುದಿಲ್ಲ. ದೊಡ್ಡವರು ನೀಡುವ ವರವೂ ಕೂಡ ಸಣ್ಣವರ ಯೋಗ್ಯತೆ ಯನ್ನು ಹೆಚ್ಚಿಸುವುದಿಲ್ಲ. ವಿಷ್ಣುವಿನಿಂದಾಗಲಿ ಲಕ್ಷ್ಮೀಬ್ರಹ್ಮಾದಿಗಳಿಂದಾಗಲಿ ವರ

ಪಡೆದರೂ ಅದು ಯಾವ ಕಾರಣದಿಂದಲೂ ಯಾವ ರೀತಿಯಿಂದಲೂ ಎಲ್ಲಿಯೂ ಯೋಗ್ಯತೆಯನ್ನು ಮೀರಿ ಉತ್ತಮತ್ವವನ್ನು ನೀಡುವುದಿಲ್ಲ. ಶ್ರೀಹರಿ ಅಂಥ ವರವನ್ನು ಕೊಡುವುದೂ ಇಲ್ಲ. ಅವನು ವರ ಕೊಟ್ಟರೂ ಅದು ಹೊರಗಿನ ವೈಭವವನ್ನು ಹೆಚ್ಚಿಸುತ್ತದೆ ಹೊರತು ಒಳಗಿನ ಸ್ವರೂಪ ಯೋಗ್ಯತೆಯನ್ನಲ್ಲ ಎಂದು ಬ್ರಹ್ಮಾಂಡಪುರಾಣದಲ್ಲಿ ಉಕ್ತವಾಗಿದೆ.

ವಿಷ್ಣುಭಕ್ತನಾದ ಗರುಡನಿಗೆ ಶಾಪನೀಡಿದ್ದರಿಂದ ಸೌಭರಿಗೆ ತಪೋಭಂಗಾದಿ ಮಹಾ ಅನರ್ಥ ಉಂಟಾಯಿತು. (ಏತೇನೈವ ಕಿಲ ಶ್ರೀವೈಷ್ಣವಾಪರಾಧೇನ ತಸ್ಯ ತಪೋಭಂಗಾದಿ ಪರಮಾನರ್ಥಃ ಫಲಿತಃ) ಎಂದು ಜೀವಗೋಸ್ವಾಮಿ ವ್ಯಾಖ್ಯಾನದಲ್ಲಿ ಹೇಳಿದ್ದು ಸರಿಯಲ್ಲ. ಸೌಭರಿಗೆ ಅಧಿಕ ಪುಣ್ಯನಾಶ ಅನರ್ಥವಲ್ಲ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಪಂಚದಶೋಽಧ್ಯಾಯಃ

❖

ಅಧ್ಯಾಯ - ೧೬

ಅಧ್ಯಾಯ ಸಾರಾಂಶ

ವೃಂದಾವನದಲ್ಲಿ ಕೃಷ್ಣರಾಮರು ಇದ್ದುದರಿಂದ ಅಲ್ಲಿ ಗ್ರೀಷ್ಮದ ಬಿಸಿಲೂ ವಸಂತದಂತೇ ಹಿತಕರವಾಗಿತ್ತು. ಮರಗಿಡಗಳು ಹಸಿರು ಹುಲ್ಲು ಸುಂದರವಾದ ಮೃಗ ಪಕ್ಷಿಗಳು ಹೂಗಳು ವನಗಳಿಗೆ ಬಹಳ ಶೋಭೆ ತಂದಿದ್ದುವು. ಅಲ್ಲಿ ರಾಮಕೃಷ್ಣರು ಗೊಲ್ಲರೊಂದಿಗೆ ಕುಣಿದರು. ಕುಸ್ತಿಯಾಡಿದರು ಹಾಡಿದರು. ಕೃಷ್ಣನ ಕುಣಿತಕ್ಕೆ ಗೊಲ್ಲರು ತಾಳಹಾಕಿದರು ಕೊಳಲೂದಿದರು ಭಲೆಭಲೆ ಎಂದು ಪ್ರಶಂಸೆ ಮಾಡಿದರು. ಪರಸ್ಪರ ಕೈಹಿಡಿದು ಚಕ್ರದಂತೆ ತಿರುಗುವುದು ಜಿಗಿಯುವುದು ಕವಣೆಕಲ್ಲು ತೂರುವುದು ಗುದ್ದಾಡುವುದು ಎಳೆದಾಡುವುದು ಕುಸ್ತಿಯಾಡುವುದು, ಬೇಲದಕಾಯಿ ಗುಗ್ಗಲ ನೆಲ್ಲಿಕಾಯಿಗಳಿಂದ ಆಟವಾಡುವುದು ಮುಟ್ಟಾಟ ಕಣ್ಣುಮುಚ್ಚಾಲೆ ಮೃಗ ಪಕ್ಷಿಗಳ ಚೇಷ್ಟೆ, ಕಪ್ಪೆಗಳಂತೆ ಕುಪ್ಪಳಿಸುವುದು ಉಯ್ಯಾಲೆಯಾಟ ರಾಜಮಂತ್ರಿಗಳ ಆಟ ಹೀಗೆ ನಾನಾ ಬಗೆಯ ಮಕ್ಕಳಾಟವಾಡಿ ನದಿ ಬೆಟ್ಟಗಳ ತಪ್ಪಲುಗಳಲ್ಲಿ ಉಸುಕಿನಲ್ಲಿ ಸರೋವರಗಳಲ್ಲಿ ಎಲ್ಲೆಡೆ ವಿಹಾರ ಮಾಡಿದರು ಕೃಷ್ಣರಾಮರು.

ಆಗ ಒಮ್ಮೆ ಕಂಸನ ಕಡೆಯ ಪ್ರಲಂಬಾಸುರ ಗೊಲ್ಲನ ವೇಷಧರಿಸಿ ರಾಮಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಬಂದು ಗೊಲ್ಲರ ನಡುವೆ ಸೇರಿಕೊಂಡ. ಶ್ರೀಕೃಷ್ಣ ಸರ್ವಜ್ಞ. ಅವನ ಉದ್ದೇಶವನ್ನು ತಿಳಿದು ಅವನನ್ನು ಕೊಲ್ಲುವ ಉದ್ದೇಶದಿಂದ ಗೆಳೆತನ ಮಾಡಿದ. ಅವನಿಗೆ ತಮ್ಮ ವಧೆಗೆ ಯತ್ನಿಸಲು ಅವಕಾಶ ನೀಡುವುದಕ್ಕಾಗಿ ಶ್ರೀಕೃಷ್ಣ ಎಲ್ಲರನ್ನೂ ಭಾಂಡೀರಕವೆಂಬ ಆಲದ ಮರದ ಬುಡಕ್ಕೆ ಕರೆದೊಯ್ದು ಗೊಲ್ಲ ಹುಡುಗರನ್ನು ಎರಡು ಗುಂಪು ಮಾಡಿದ. ಒಂದು ಕೃಷ್ಣನ ಗುಂಪು. ಇನ್ನೊಂದು ರಾಮನ ಗುಂಪು. ರಾಮನ ಗುಂಪಿನಲ್ಲಿ ಶ್ರೀದಾಮ ವೃಷಭ ಮುಂತಾದವರು. ಕೃಷ್ಣನ ಗುಂಪಿನಲ್ಲಿ ಪ್ರಲಂಬಾಸುರ ಭದ್ರಸೇನ ಮುಂತಾದವರು.

ಆಟದಲ್ಲಿ ಪ್ರಲಂಬಾಸುರ ಬಲರಾಮನೊಂದಿಗೆ ಸ್ಪರ್ಧಿಸಿ

ಸೋತ. ರಾಮನ ಗುಂಪಿನಲ್ಲಿ ಸೇರಿ ಕೃಷ್ಣನಿಗೆ ಸೋತರೆ ಆಟದ ನಿಯಮದಂತೆ ಅವನನ್ನು ಎತ್ತಿಕೊಂಡು ಓಡಲು ಸಾಧ್ಯವಾಗ ಲಾರದು. ಬಲರಾಮನನ್ನಾದರೂ ಹೊರಬಹುದೆಂದುಕೊಂಡು ಅವನಿಗೇ ಸೋತ. ಸೋಲನ್ನು ನೆಪಮಾಡಿಕೊಂಡು ಬಲರಾಮ ನನ್ನು ಹೊತ್ತು ಭಾಂಡೀರ ವೃಕ್ಷದ ಕಡೆಗೆ ಓಡಿದ.

ವೃಕ್ಷದ ಕೆಳಗೇ ಅವನನ್ನು ಇಳಿಸದೆ ಇನ್ನೂ ಮುಂದೆ ಹೊತ್ತು ಧಾವಿಸಿದ. ಬಲರಾಮ ಬೆಟ್ಟದಷ್ಟು ಭಾರವಾದ ಅದರಿಂದ ಪ್ರಲಂಬ ತನ್ನ ನಿಜರೂಪದಲ್ಲಿ ದೈತ್ಯಾಕಾರ ತಳೆದು ನೆಲದಲ್ಲಿ ಓಡುವುದನ್ನು ಬಿಟ್ಟು ಆಕಾಶಕ್ಕೆ ನೆಗೆದ. ಭಯಂಕರವಾದ ಬೆಂಕಿ ಉಗುಳುವ ಕಣ್ಣುಗಳು ಹುಬ್ಬುಗಂಟು ಕೋರೆದಾಡೆ ತಲೆಗೂದಲುಗಳು ಬಂಗಾರದ ಕಡಗ ಕಿರೀಟ ಕುಂಡಲಗಳ ಕಾಂತಿಯಿಂದ ಹೊಳೆಯುವ ಕರಿಮೋಡದಂಥ ಮೈಯ ದೈತ್ಯ ಚಂದ್ರನಂತೆ ಬಿಳಿಬಣ್ಣದ ರಾಮನನ್ನು ಹೊತ್ತಾಗ, ಚಂದ್ರನ ಬಳಿ ಚಲಿಸುವ ಕರಿಮೋಡದಲ್ಲಿ ಮಿಂಚು ಹೊಳೆಯುವ ದೃಶ್ಯ ಗೋಚರವಾಯಿತು. ಈ ದೈತ್ಯ ರಾವಣನಂಥ ಬಲಶಾಲಿ ಷಣ್ಮುಖನ ವರದಿಂದ ಅವಧ್ಯನಾಗಿದ್ದ. ಬಲರಾಮ ಅವನ ಆ ದೈತ್ಯ ಶರೀರ ಕಂಡು ಸ್ವಲ್ಪ ಭೀತನಾದ. ಬಳಿಕ ತಾನು ಆದಿಶೇಷನ ಅವತಾರ ಎಂದು ಸ್ಮರಣೆ ಮಾಡಿಕೊಂಡ. ಶ್ರೀಕೃಷ್ಣನೂ ಅವನಿಗೆ 'ಭಯಪಡಬೇಡ, ನಿನ್ನಲ್ಲಿ ಶುಕ್ಲಕೇಶಾವೇಶವಿದೆ ಎಂಬುದನ್ನು ಅನುಸಂಧಾನ ಮಾಡಿಕೊ' ಎಂದ. ಹೀಗಾಗಿ ಧೈರ್ಯ ತಂದುಕೊಂಡು ಅವನ ತಲೆಯ ಮೇಲೆ ಬಲವಾಗಿ ಮುಷ್ಟಿಯಿಂದ ಗುದ್ದಿದ ಬಲರಾಮ. ಬೆಟ್ಟದ ಮೇಲೆ ವಜ್ರಾಯುಧ ಬಿದ್ದಂತಾ ಯಿತು. ತಲೆ ಒಡೆಯಿತು. ಬಾಯಿಂದ ರಕ್ತಕಾರಿ ದೊಡ್ಡಧ್ವನಿ ಮಾಡಿ ಅಸುರ ಅಸು ನೀಗಿದ. ವಿಜಯಿಯಾದ ಬಲರಾಮನನ್ನು ಸತ್ತು ಬದುಕಿಬಂದಂತೆ ಅಚ್ಚರಿಯಿಂದ ಪ್ರೀತಿಯ ಅಂತಃಕರಣ ದಿಂದ ಗೊಲ್ಲರು ಅಪ್ಪಿಕೊಂಡು ಆಶೀರ್ವದಿಸಿದರು. ಭಲೆಭಲೆ ಎಂದು ಕೊಂಡಾಡಿದರು. ದೇವತೆಗಳು ಹೂಮಳೆಗರೆದು ಪ್ರಶಂಸಿಸಿದರು.

❖

ಬಲರಾಮ ಕೃಷ್ಣರು ವೃಂದಾವನದಲ್ಲಿ ಗೋಪಬಾಲಕರೊಂದಿಗೆ ಹಸುಗಳನ್ನು ಮೇಸುವಾಗ ಆಟವಾಡುತ್ತ ಆಟದ ನಿಯಮದಂತೆ ಸೋತವರು ಗೆದ್ದವರನ್ನು ಬೆನ್ನಮೇಲೆ ಹೊತ್ತು ಓಡುತ್ತಿದ್ದರು. ಒಮ್ಮೆ ಶ್ರೀಕೃಷ್ಣ ಶ್ರೀದಾಮನಿಗೆ ಸೋತು ಅವನನ್ನು ಹೊತ್ತುಕೊಂಡನೆಂದು ಭಾಗವತ ಹೇಳಿದಂತೆ ಕಾಣುತ್ತದೆ-

ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂ ಪರಾಜಿತಃ ।
ವೃಷಭಂ ಭದ್ರಸೇನಸ್ತು ಪ್ರಲಂಬೋ ರೋಹಿಣೀಸುತಮ್ ॥ ೨೩ ॥

ಶ್ರೀದಾಮ ಪರಾಜಿತನಾಗಿ ಭಗವಾನ್ ಶ್ರೀಕೃಷ್ಣನನ್ನೂ, ಭದ್ರಸೇನ ವೃಷಭನನ್ನೂ ಪ್ರಲಂಬಾಸುರ ಬಲರಾಮನನ್ನೂ ಹೊತ್ತುಕೊಂಡ.

ಇಲ್ಲಿ ಮೇಲುನೋಟಕ್ಕೆ ಶ್ಲೋಕದಲ್ಲಿ ಶ್ರೀಕೃಷ್ಣ ಸೋತು ಶ್ರೀದಾಮನನ್ನು ಹೊತ್ತನೆಂದು ಹೇಳಿದಂತೆ ಕಾಣುತ್ತದೆ. ಆದರೆ ಅದು ಭಾಗವತದ ನಿಜವಾದ ಅಭಿಪ್ರಾಯವಲ್ಲ. ಏಕೆಂದರೆ ಹರಿವಂಶ ವಿಷ್ಣುಪುರಾಣಗಳಿಗೆ ವ್ಯತಿರಿಕ್ತವಾಗಿದೆ. ಭಾಗವತ ಹಾಗೆ ವ್ಯತಿರಿಕ್ತವಾಗಿ ಏನೂ ಹೇಳಲು ಹೊರಟಿಲ್ಲ. ಹರಿವಂಶದಲ್ಲಿ ವಿಷ್ಣುಪರ್ವ (೧೪.೨೦) ಹೀಗೆ ಹೇಳುತ್ತದೆ-

ಶ್ರೀದಾಮಮಜಯತ್ ಕೃಷ್ಣಃ ಪ್ರಲಂಬಂ ರೋಹಿಣೀಸುತಃ ।
ಗೋಪಾಲೈಃ ಕೃಷ್ಣಪಕ್ಷೀಯೈರ್ಗೋಪಾಲಾಸ್ತ್ವಪರೇ ಜಿತಾಃ ॥

ವಿಷ್ಣುಪುರಾಣ (೫.೯.೧೪)ವೂ ಹೀಗೇ ಹೇಳುತ್ತದೆ-

ಶ್ರೀದಾಮಾನಂ ತತಃ ಕೃಷ್ಣಃ ಪ್ರಲಂಬಂ ರೋಹಿಣೀಸುತಃ ।
ಜಿತವಾನ್ ಕೃಷ್ಣಪಕ್ಷೀಯೈರ್ಗೋಪೈಶ್ಚಾನ್ಯೇ ಪರಾಜಿತಾಃ ॥

ಹರಿವಂಶ ವಿಷ್ಣುಪುರಾಣಗಳ ಬಳಿಕ ಬಂದ ಭಾಗವತವೇ ಗ್ರಾಹ್ಯವೆಂದು ತಿಳಿಯಬಾರದು. ಬಹುಪ್ರಮಾಣ ವಿರೋಧ ಬಂದಾಗ ಗ್ರಾಹ್ಯವೆನಿಸುವುದಿಲ್ಲ. ಅನಿರುಕ್ತದೇವತೆಗಳೆಂದು ಪ್ರಸಿದ್ಧರಾದ ವಿಷ್ಣುಬ್ರಹ್ಮವಾಯು ಮತ್ತು ಅವರ ಪತ್ನಿಯರ ಮಹಿಮೆಗೆ ಕುಂದು ಬರುವಂತೆ ಬಹು ಪ್ರಮಾಣವಿರುದ್ಧವಾದ ವರ್ಣನೆ ಎಲ್ಲಿ ಯಾದರೂ ಕಂಡುಬಂದರೆ ಅಲ್ಲಿ ಶಬ್ದವನ್ನೋ ಅರ್ಥವನ್ನೋ ವ್ಯತ್ಯಾಸ ಮಾಡಿ ಯಾದರೂ ಸರಿಯಾಗಿ ಹೊಂದಿಸಿಕೊಳ್ಳಬೇಕು ಎಂದು ಬ್ರಹ್ಮತರ್ಕ ಹೇಳುತ್ತಿದೆ.

ಯತೋ ಧರ್ಮಸ್ತತಃ ಕೃಷ್ಣೋ ಯತಃ ಕೃಷ್ಣಸ್ತತೋ ಜಯಃ ।
ಯತ್ರ ಯೋಗೇಶ್ವರಃ ಕೃಷ್ಣೋ ಯತ್ರ ಪಾರ್ಥೋ ಧನುರ್ಧರಃ
ತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾ ನೀತಿರ್ಮತಿರ್ಮಮ ।

ಎಂದು ಮುಂತಾಗಿ ಹೇಳಿದಂತೆ ಕೃಷ್ಣ ಸದಾ ಸರ್ವತ್ರ ವಿಜಯಿಯೇ ಹೊರತು ಎಂದೂ ಎಲ್ಲಿಯೂ ಪರಾಜಿತನಾಗುವುದೇ ಇಲ್ಲ ಎಂಬ ಮಹಿಮೆಗೆ ಕುಂದು ಬರುವಂತೆ ಕಾಣುವ ಈ ಪ್ರಕೃತ ಶ್ಲೋಕದಲ್ಲಿಯೂ ಶಬ್ದವ್ಯತ್ಯಾಸ ಅರ್ಥವ್ಯತ್ಯಾಸಗಳನ್ನು ಮಾಡುವುದು ಉಚಿತ. ಅದರಿಂದ 'ಕೃಷ್ಣೋ ಭಗವಾನ್' ಎಂಬ ಪ್ರಥಮಾವಿಭಕ್ತಿಯನ್ನು ದ್ವಿತೀಯಾವಿಭಕ್ತಿಯಾಗಿಯೂ, 'ಶ್ರೀದಾಮಾನಂ' ಎಂಬ ದ್ವಿತೀಯಾವಿಭಕ್ತಿಯನ್ನು ಪ್ರಥಮಾವಿಭಕ್ತಿಯಾಗಿಯೂ ವ್ಯತ್ಯಾಸ ಮಾಡಿಕೊಳ್ಳಬೇಕು. 'ಶ್ರೀದಾಮ ಪರಾಜಿತನಾಗಿ ಭಗವಾನ್ ಶ್ರೀಕೃಷ್ಣನನ್ನು ಹೊತ್ತುಕೊಂಡ' ಎಂದು ಶಬ್ದಗಳನ್ನು ಸರಿಯಾಗಿ ಹೊಂದಿಸಿಕೊಳ್ಳಬೇಕು.

ಬೇರೆ [೧]ವ್ಯಾಖ್ಯಾನಕಾರರು ಮೇಲುನೋಟಕ್ಕೆ ಕಾಣುವ ಅರ್ಥವನ್ನೇ ತೆಗೆದುಕೊಂಡು 'ಭಗವಾನ್' ಶಬ್ದದ ಸ್ವಾರಸ್ಯವನ್ನು ಹೇಳುತ್ತ 'ನಿಮ್ಮ ಭಗವಂತ ನಮಗೆ ಸೋತನೆಂದು ಹಾಸ್ಯವಿನೋದ ಮಾಡುತ್ತಾರೆ ಗೋಪಬಾಲಕರು' ಎನ್ನುತ್ತಾರೆ. ಆದರೆ ವ್ಯತ್ಯಾಸ ಮುಂತಾದ ಯಾವುದೇ ರೀತಿ ಸಾಧ್ಯವಾಗದಿದ್ದಲ್ಲಿ ಅಸುರ ಮೋಹನಕ್ಕಾಗಿ ನಟನೆ ಸುರರ ವಿನೋದಕ್ಕಾಗಿ ಲೀಲೆ ಇದು ಎಂದು ಗ್ರಹಿಸಬಹುದು. ಅದು ಅಗತಿಕಾಗತಿ. ಪ್ರಕೃತದಲ್ಲಿ ಬಹುಪ್ರಮಾಣಾನುಸಾರವಾಗಿ ವಿಭಕ್ತಿ ವ್ಯತ್ಯಾಸ ಶಕ್ಯವಿದೆ. ಅರ್ಥ ವ್ಯತ್ಯಾಸವೂ ಶಕ್ಯವಿದೆ. ಶ್ರೀಕೃಷ್ಣ ಶ್ರೀದಾಮನನ್ನು 'ಹೊತ್ತ'ನೆಂದರೆ, ಅರ್ಥವ್ಯತ್ಯಾಸ ಮಾಡಿ 'ಹೊರಿಸಿದ' 'ಏರಿದ'ನೆಂದು ಅರ್ಥ ಹೇಳುವುದು ಬ್ರಹ್ಮತರ್ಕಗ್ರಂಥಕ್ಕೆ ಸಮ್ಮತವಾಗಿದೆ. ಇದೊಂದು ಪುರಾಣಸಾಹಿತ್ಯದ ವಿಚಿತ್ರ ಶೈಲಿ. ಹೀಗೆ ಕಗ್ಗಂಟಾಗಿ ಕಾಣುವ ಶೈಲಿಯ ಪುರಾಣ ವಚನಗಳನ್ನು ಸರಿಯಾಗಿ ವ್ಯಾಖ್ಯಾನಿಸುವ ಒಂದು ಹೊಸ ರೀತಿಯನ್ನು ಬ್ರಹ್ಮತರ್ಕವಚನ ಪ್ರಮಾಣ ಪುರಃಸರವಾಗಿ ನಮಗೆ ತೋರಿಸುತ್ತಿದ್ದಾರೆ ಶ್ರೀಮದಾಚಾರ್ಯರು.

ಶ್ರೀದಾಮಾ ಕೃಷ್ಣಮುವಾಹ । ಹರಿವಂಶಾದಿವಚನಾತ್ ।

ಬಹುಮಾನವಿರೋಧೇ ತು ವ್ಯತ್ಯಾಸಃ ಶಬ್ದತೋಽರ್ಥತಃ ।
ಕಾರ್ಯೋಽನಿರುಕ್ತದೇವಾನಾಂ ಗುಣಸಿದ್ಧ್ಯೈ ನ ಚಾನ್ಯಥಾ ।
ವಿಷ್ಣುರ್ಬ್ರಹ್ಮಾ ತಥಾ ವಾಯುರನಿರುಕ್ತಾಃ ಪ್ರಕೀರ್ತಿತಾಃ ।
ತತ್ಪತ್ನ್ಯಶ್ಚೇತರಗುಣಾ ವ್ಯತ್ಯಾಸ್ತೇಷ್ವಸಂಶಯಃ ॥

ಇತಿ ಬ್ರಹ್ಮತರ್ಕೇ ॥

---

೧ ಯುಷ್ಮಾಕಂ ಯೋ ಭಗವಾನ್ ಸೋಽಸ್ಮಾಕಂ ವ್ರಜವಾಸಿಭಿಃ ಪರಾಜಿತ ಇತಿ ನರ್ಮ ಚ ವ್ಯಂಜಿತಂ। -ಜೀವಗೋಸ್ವಾಮಿ

ಕೃಷ್ಣ ಶ್ರೀದಾಮನನ್ನು ಹೊತ್ತನೆಂಬುದನ್ನು ಶ್ರೀದಾಮ ಕೃಷ್ಣನನ್ನು ಹೊತ್ತನೆಂದು ವ್ಯತ್ಯಾಸ ಮಾಡಿ ಸರಿಹೊಂದಿಸಬೇಕು. ಏಕೆಂದರೆ ಹರಿವಂಶ ವಿಷ್ಣುಪುರಾಣ ಗಳು ಹಾಗೇ ಹೇಳುತ್ತವೆ.

ಒಂದು ವಾಕ್ಯಕ್ಕೆ ಬಹುಪ್ರಮಾಣ ವಿರೋಧ ಬಂದಾಗ, ಶಬ್ದವ್ಯತ್ಯಾಸ ಅರ್ಥವ್ಯತ್ಯಾಸಗಳಿಂದ ಅನಿರುಕ್ತ ದೇವತೆಗಳ ಮಹಿಮೆ ಸಿದ್ಧಿಸುವಂತಿದ್ದರೆ, ಶಬ್ದವ್ಯತ್ಯಾಸ ಅರ್ಥವ್ಯತ್ಯಾಸಗಳನ್ನು ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಇಲ್ಲ. ವಿಷ್ಣು ಬ್ರಹ್ಮವಾಯು ಮತ್ತು ಅವರ ಪತ್ನಿಯರು ಅನಿರುಕ್ತ ದೇವತೆಗಳು. ಅವರಲ್ಲಿರುವ ಗುಣಗಳೆಷ್ಟೆಂದು ಹೇಳಲಾಗದು. ಅವರಲ್ಲಿ ಬೇರೆ ರುದ್ರಾದಿಗಳ ಪರಾಜಯಾದಿ ದೋಷಗಳನ್ನು ಹೇಳಿದ್ದರೆ ವ್ಯತ್ಯಾಸ ಮಾಡಿಕೊಳ್ಳಬೇಕು. ಇದರಲ್ಲಿ ಸಂಶಯವಿಲ್ಲ ಎಂದು ಬ್ರಹ್ಮತರ್ಕದಲ್ಲಿ ಹೇಳಿದೆ.

'ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂ' ಎಂಬಲ್ಲಿ ಮಾತ್ರ ವ್ಯತ್ಯಾಸವೇ ಹೊರತು 'ವೃಷಭಂ ಭದ್ರಸೇನಃ' ಎಂಬಲ್ಲಿಯೂ 'ಪ್ರಲಂಬೋ ರೋಹಿಣೇಸುತಂ' ಎಂಬಲ್ಲಿಯೂ ವ್ಯತ್ಯಾಸ ಮಾಡಿಕೊಳ್ಳಲು ಅವಕಾಶವಿಲ್ಲ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಷೋಡಶೋಽಧ್ಯಾಯಃ

❖

ಅಧ್ಯಾಯ - ೧೭

ಅಧ್ಯಾಯ ಸಾರಾಂಶ

ಗೋಪಾಲಕರು ಆಟವಾಡುತ್ತಿದ್ದಾಗ ಇತ್ತ ಗೋವುಗಳು ಮೇಯುತ್ತ ಹುಲ್ಲಿನ ಆಸೆಯಿಂದ ದೂರದ ದಟ್ಟವಾದ ಅರಣ್ಯವನ್ನು ಹೊಕ್ಕವು. ನೊಜೆ ಹುಲ್ಲಿನ ಕಾಡಿಗೆ ಬಂದುವು. ಆಟ ಮುಗಿಸಿದ ಗೊಲ್ಲರು ಗೋವುಗಳನ್ನು ಕಾಣದೆ ಎಲ್ಲ ಕಡೆ ಹುಡುಕಿದರು. ಅವುಗಳ ಹೆಜ್ಜೆ ಗುರುತುಗಳನ್ನು ಅನುಸರಿಸಿ ನಡೆದರು. ಎಲ್ಲರಿಗೂ ಜೀವವೇ ಹೋದಂತಾಗಿತ್ತು. ಎಷ್ಟು ಹುಡುಕಿದರೂ ಕಾಣದೆ ಅಳುತ್ತ ಹಿಂದಿರುಗಿದರು. ಶ್ರೀಕೃಷ್ಣ ಗೋವುಗಳನ್ನು ಹೆಸರು ಹಿಡಿದು ಕೂಗಿ ಕರೆದ. ಒಡನೆ ಅವು ಕೇಳಿ ಸಂತಸದಿಂದ ಪ್ರತಿಯಾಗಿ ಧ್ವನಿ ಮಾಡಿದುವು. ಆದರೆ ಅಷ್ಟರಲ್ಲಿ ಭಯಂಕರ ಕಾಳ್ಗಿಚ್ಚು ಹರಡಿತು. ಗೊಲ್ಲರು ಕೃಷ್ಣನನ್ನು ಮೊರೆ ಹೊಕ್ಕು ಬೇಡಿಕೊಂಡಾಗ ಕೃಷ್ಣನೆಂದ, 'ಹೆದರಬೇಡಿರಿ, ಒಂದು ಕ್ಷಣ ಕಣ್ಣುಮುಚ್ಚಿಕೊಳ್ಳಿರಿ' ಅವರು ಕಣ್ಣುಮುಚ್ಚಿ ತೆರೆಯುವಷ್ಟರಲ್ಲಿ ಯೋಗೇಶ್ವರನಾದ ಶ್ರೀಕೃಷ್ಣ ಕಾಳ್ಗಿಚ್ಚನ್ನು ನುಂಗಿದ. ತಾವೂ ಗೋವುಗಳೂ ಕಾಳ್ಗಿಚ್ಚಿನಿಂದ ಪಾರಾಗಿ ಆಲದಮರದ ಕೆಳಗೇ ನಿಂತಿದ್ದುದನ್ನು ಕಂಡು ಗೊಲ್ಲರು ಅಚ್ಚರಿಗೊಂಡರು. ಬಲು ದೂರಕ್ಕೆ ಹೋಗಿ ದಾರಿತಪ್ಪಿದ್ದ ಹಸುಗಳು ಕ್ಷಣದಲ್ಲಿ ಆಲದ ಮರದ ಬುಡದಲ್ಲಿ ಬಂದು ನಿಂತಿದ್ದುದು ಆಶ್ಚರ್ಯಕರವಾಗಿತ್ತು. ಇದನ್ನು ಕೃಷ್ಣನ ಯೋಗಸಾಮರ್ಥ್ಯವೆಂದೂ ಕೃಷ್ಣ ಶ್ರೀಹರಿಯೇ ಎಂದೂ ತಿಳಿದುಕೊಂಡರು.

ಗೋಕುಲಕ್ಕೆ ಹಿಂದಿರುಗಿದ ಗೋಪಾಲಕರು ತಮ್ಮ ಪತ್ನಿಯರಿಗೆ ರಾಮಕೃಷ್ಣರು ನಡೆಸಿದ ಪ್ರಲಂಬಾಸುರವಧೆ ಮತ್ತು ದಾವಾಗ್ನಿ ಪಾನಲೀಲೆಗಳನ್ನು ತಮ್ಮ ಪತ್ನಿಯರಿಗೆ ಆನಂದದಿಂದ ಬಣ್ಣಿಸಿ ಹೇಳಿದರು. ಗುರುಹಿರಿಯರಿಗೂ ಹೇಳಿದರು. ಎಲ್ಲರೂ ರಾಮಕೃಷ್ಣ ರನ್ನು ಗೋಕುಲದಲ್ಲಿ ಅವತರಿಸಿದ ದೇವೋತ್ತಮರೆಂದು ನಂಬಿದರು.

❖

ಅಧ್ಯಾಯ - ೧೮

ಅಧ್ಯಾಯ ಸಾರಾಂಶ

ಬಳಿಕ ಮಳೆಗಾಲ ಪ್ರಾರಂಭವಾಯಿತು. ಸೂರ್ಯಚಂದ್ರರ ಸುತ್ತಲೂ ಪ್ರಭಾ ವಲಯಗಳು ಕಂಡುಬಂದುವು. ಗುಡುಗು ಮಿಂಚುಗಳಿಂದ ಕೂಡಿದ ಕರಿಮೋಡಗಳು ಆಕಾಶದಲ್ಲಿ ಸೂರ್ಯಚಂದ್ರರನ್ನು ಮುಚ್ಚಿದುವು. ಹೀಗೇ ದುರ್ಮತಗಳೆಂಬ ಕಾರ್ಮೋಡಗಳು ವೇದದಲ್ಲಿ ಬೆಳಗುವ ಭಗವಂತನನ್ನು ಮುಚ್ಚುತ್ತವೆ.

ಸೂರ್ಯ ತನ್ನ ಕಿರಣಗಳಿಂದ ನೆಲದ ಮೇಲಿರುವ ಜಲಸಂಪತ್ತನ್ನು ಬೇಸಗೆಯಲ್ಲಿ ಹೀರಿಕೊಂಡು ಮಳೆಗಾಲದಲ್ಲಿ ನೆಲದ ಮೇಲೆಯೇ ಸುರಿಸುತ್ತಾನೆ. ಮಹಾತ್ಮರು ಆಪತ್ತಿಗೊಳಗಾದರೂ ಅದನ್ನು ಲೆಕ್ಕಿಸದೆ ದೀನರಿಗೆ ತಮ್ಮ ಸರ್ವಸ್ವವನ್ನೇ ಧಾರೆಯೆರೆಯುವಂತೆ ಕರಿಮೋಡಗಳು ಭೀಕರ ಬಿರುಗಾಳಿಗೆ ಸಿಲುಕಿದರೂ ಬಿಸಿಲಬೇಗೆಯಿಂದ ನೊಂದ ಜೀವಿಗಳಿಗೆ ನೀರಧಾರೆಯನ್ನು ಸುರಿಸುತ್ತವೆ.

ಅಭೀಷ್ಟ ಸಿದ್ಧಿಗಾಗಿ ತಪಸ್ಸು ಮಾಡುವಾಗ ಶರೀರ ಕೃಶವಾದರೂ ಸಿದ್ಧಿ ದೊರೆತಾಗ ತಿರುಗಿ ಪುಷ್ಟವಾಗುವಂತೆ ಬೇಸಗೆಯಲ್ಲಿ ಒಣಗಿದ ನೆಲ ಮಳೆ ಬಿದ್ದಾಗ ತಿರುಗಿ ಹಚ್ಚ ಹಸಿರಾಯಿತು. ಕಲಿಯುಗದಲ್ಲಿ ವೇದಧರ್ಮ ಮರೆಯಾಗಿ ಅನ್ಯಧರ್ಮವೇ ಮೆರೆಯುತ್ತದೆ ಹಾಗೇ ಮಳೆಗಾಲದಲ್ಲಿ ರಾತ್ರಿ ಗ್ರಹತಾರೆಗಳು ಮರೆಯಾಗಿ ಮಿಣುಕು ಹುಳುಗಳೇ ಹೊಳೆದುವು. ಜಪಾದಿ ನಿತ್ಯ ಕರ್ಮ ಮುಗಿದ ಬಳಿಕ ಬ್ರಹ್ಮಚಾರಿಗಳ ವೇದಾಧ್ಯಯನ ನಡೆಯುವಂತೆ ಇಷ್ಟರವರೆಗೆ ಮೌನವಾಗಿದ್ದ ಕಪ್ಪೆಗಳು ಮೋಡಗಳ ಧ್ವನಿ ಕೇಳಿಬಂದಾಗ ವಟಗುಟ್ಟಿದುವು. ಇಂದ್ರಿಯ ನಿಗ್ರಹವಿಲ್ಲದ ದರಿದ್ರನಿಗೆ ಸಂಪತ್ತು ಬಂದರೆ ದಾರಿತಪ್ಪಿ ನಡೆಯುವಂತೆ ಬೇಸಗೆಯಲ್ಲಿ ಒಣಗಿದ್ದ ಸಣ್ಣ ನದಿಗಳು ಮಳೆನೀರು ಬಿದ್ದಾಗ ಮೇರೆ ಮೀರಿ ಹರಿದುವು.

ಭೂಮಿ ಹುಲ್ಲಿನಿಂದ ಹಸಿರಾಗಿ ಶಕಲಾತಿಗಳಿಂದ ಕೆಂಪಾಗಿ, ನಾಯಿಕೊಡೆಗಳಿಂದ ಬಿಳಿಯಾಗಿ, ನರರ ಸಂಪತ್ತಿನಂತೆ ನಾನಾ ವರ್ಣಗಳಿಂದ ರಂಜಿತವಾಯಿತು. ಪುಣ್ಯಕ್ಷೇತ್ರಗಳು ಜ್ಞಾನಿಗಳಿಗೆ ಜ್ಞಾನ ಸಂಪತ್ತಿನಿಂದ ಮುದನೀಡಿ ಅಜ್ಞಾನಿಗಳಿಗೆ ಅನರ್ಥಗಳಿಂದ ದುಃಖ. ನೀಡುವಂತೆ ಹೊಲಗಳು ಬೇಸಾಯ ಬಲ್ಲವರಿಗೆ ಬೆಳೆ ನೀಡಿ, ಅನ್ಯರಿಗೆ ನಷ್ಟ ಉಂಟುಮಾಡಿ ದುಃಖ ನೀಡಿದುವು. ಹರಿಸೇವೆಯಿಂದ ಮುಕ್ತಿಯಲ್ಲಿ ಜೀವರು ಚಿನ್ಮಯ ಸುಂದರರೂಪ ಧರಿಸುವಂತೆ. ಪ್ರಾಣಿಗಳು ಹೊಸನೀರಿನ ಸೇವನೆಯಿಂದ ಸುಂದರ ರೂಪು ತಳೆದುವು.

ಅಪಕ್ವ ಯೋಗಿಗೆ ಸುಖಭೋಗ ದೊರೆತಾಗ ಮನಸ್ಸು ಕ್ಷೋಭೆಗೊಳ್ಳುವಂತೆ ಮಳೆಗಾಲದಲ್ಲಿ ನದಿಗಳು ಬಂದು ಸೇರಿದಾಗ ಸಮುದ್ರ ಕ್ಷೋಭೆಗೊಂಡಿತು. ಹರಿಭಕ್ತರು ವ್ಯಸನ ಗಳಲ್ಲಿ ವಿಚಲಿತ ರಾಗುವುದಿಲ್ಲ. ಹಾಗೇ ಮಳೆ ನೀರಿಗೆ ಬೆಟ್ಟ ವಿಚಲಿತವಾಗಲಿಲ್ಲ. ನಿತ್ಯ ವೇದಾಭ್ಯಾಸ ಮಾಡದಿದ್ದರೆ ಮರೆತು ಹೋಗುವಂತೆ ಮಳೆಗಾಲದಲ್ಲಿ ಜನರು ದಾರಿ ತುಳಿಯದಿರುವುದ ರಿಂದ ಅದು ಹುಲ್ಲಿನಿಂದ ಮುಚ್ಚಿಹೋಗಿ ಗುರುತಿಸಲಾಗದಂತಾ ಯಿತು. ಪರೋಪಕಾರಿ ಸತ್ಪುರುಷರಲ್ಲಿಯೂ ಕಾಮಿನಿಯರು ಸ್ಥಿರವಾಗಿ ನಿಲ್ಲಲಾರರು. ಹಾಗೇ ಲೋಕೋಪಕಾರಿಯಾದ ಮೋಡದಲ್ಲಿ ಮಿಂಚು ಸ್ಥಿರವಾಗಿ ನಿಲ್ಲಲೆ ಇಲ್ಲ. ತ್ರಿಗುಣಾತ್ಮಕ ಪ್ರಪಂಚದಲ್ಲಿ ತ್ರಿಗುಣರಹಿತನಾದ ಪರಮಾತ್ಮನಿರುವಂತೆ ನೀಲವರ್ಣವೆಂಬ ಗುಣಉಳ್ಳ ಆಕಾಶದಲ್ಲಿ ಹೆದೆ ಎಂಬ ಗುಣವಿಲ್ಲದ ಮಳೆಬಿಲ್ಲು ಗೋಚರವಾಯಿತು. ಜೀವಾತ್ಮ ತನ್ನ ಸ್ವರೂಪಪ್ರಕಾಶದಿಂದ ಕಾಣುವ ಅಹಂಕಾರದಿಂದ ತಾನೇ ನಿಜರೂಪದಲ್ಲಿ ಮರೆಯಾಗುವಂತೆ ಚಂದ್ರ ತನ್ನ ಪ್ರಕಾಶದಲ್ಲಿ ಕಾಣುವ ಮೋಡಗಳಿಂದ ತಾನೇ ಮರೆಯಾಗಿದ್ದಾನೆ.

ಸಜ್ಜನರಿಗೆ ವಿಷ್ಣುಭಕ್ತರ ಸಮಾಗಮ ಹಬ್ಬವೆನಿಸುವಂತೆ ನವಿಲುಗಳಿಗೆ ಮೋಡಗಳ ಆಗಮನ ಹಬ್ಬವಾಯಿತು. ತಪಸ್ವಿಗಳು ಸುಖಸಂಪತ್ತಿನಾಗಮನದಿಂದ ಅದರ ಭಾರಕ್ಕೆ ಬಾಗುವಂತೆ ಮರಗಿಡಗಳು ಹೂಹಣ್ಣುಗಳ ಭಾರದಿಂದ ಬಾಗಿದುವು. ಮನೆ

ಯಲ್ಲಿ ತಾಪತ್ರಯ ಹೆಚ್ಚಿದರೂ ವಿಷಯಾಸಕ್ತರು ಮನೆ ಬಿಡದಿರುವಂತೆ ಕೊಳಗಳು ಭರ್ತಿಯಗಿ ದಡದಲ್ಲಿ ನೀರು ಹರಿಯುತ್ತಿದ್ದರೂ ಸಾರಸಪಕ್ಷಿಗಳು ಕೊಳಗಳನ್ನು ಬಿಡಲಿಲ್ಲ.

ಕಲಿಯುಗದಲ್ಲಿ ನಾಸ್ತಿಕ ವಾದಗಳಿಂದ ವೇದಮಾರ್ಗ ಕೆಡುವಂತೆ ಮಳೆನೀರಿನ ಪ್ರವಾಹದಿಂದ ಸೇತುಗಳು ಒಡೆದುಹೋದುವು. ಬ್ರಾಹ್ಮಣರ ಉಪದೇಶದಿಂದ ರಾಜರು ಪ್ರಜೆಗಳಿಗೆ ಬಂಗಾರ ನೀಡುವಂತೆ ಗಾಳಿ ಬೀಸುವುದರಿಂದ ಮೋಡಗಳು ಮಳೆ ನೀಡಿದುವು.

ಹೀಗೆ ಮಳೆಗಾಲದಲ್ಲಿ ವೃಂದಾವನದ ಮರಗಿಡಗಳು ಹಣ್ಣುಗಳಿಂದ ತುಂಬಿದಾಗ ರಾಮಕೃಷ್ಣರು ಗೊಲ್ಲರೊಂದಿಗೆ ವಿಹಾರಕ್ಕೆ ತೊಡಗಿದರು. ಕೆಚ್ಚಲ ಭಾರದಿಂದ ನಿಧಾನವಾಗಿ ನಡೆಯುವ ಹಸುಗಳೂ ಕೃಷ್ಣನ ಕರೆಗೆ ಪ್ರೀತಿಯಿಂದ ಹಾಲು ಸುರಿಸುತ್ತ ವೇಗವಾಗಿ ಓಡಿಬಂದುವು.

ಮಳೆಯಾಗುತ್ತಿದ್ದರೆ ಶ್ರೀಕೃಷ್ಣ ಗುಹೆಗಳಲ್ಲಿ ಮರದ ಪೊಟರೆಗಳಲ್ಲಿ ಕುಳಿತು ಹಣ್ಣುಗಡ್ಡೆ ತಿಂದು ವಿಹಾರ ಮಾಡಿದ, ಕೆಲವೊಮ್ಮೆ ಮನೆಯಿಂದ ತಂದ ಮೊಸರನ್ನ ಉಂಡ. ತನ್ನ ಶಕ್ತಿಯಿಂದ ಗೋವುಗಳು ಮೇದು ಹುಲ್ಲುಗಾವಲುಗಳಲ್ಲಿ ಮಲಗಿ ನಿದ್ರಿಸುತ್ತಿದ್ದರೆ ಮಳೆಗಾಲದ ವನ ಸಂಪತ್ತು ಪ್ರಾಣಿಗಳಿಗೆ ಸುಖ ತಂದರೆ ಶ್ರೀಕೃಷ್ಣ ಅದನ್ನು ನೋಡುತ್ತ ತಾನೇ ಹೊಗಳಿದ.

ಮುಂದೆ ಶರತ್ಕಾಲ ಪ್ರಾರಂಭವಾಯಿತು. ಆಕಾಶ ಮೋಡ ಗಳಿಲ್ಲದೆ ನಿರ್ಮಲವಾಯಿತು. ನೀರು ತಿಳಿಯಾಯಿತು. ನೀರಿನ ತುಂತುರುಗಳನ್ನು ಹೊತ್ತು ಗಾಳಿ ಬೀಸಿತು. ಯೋಗ ಭ್ರಷ್ಟ ರಾದವರ ಚಿತ್ತ ತಿರುಗಿ ಯೋಗಾಭ್ಯಾಸದಿಂದ ನಿರ್ಮಲವಾಗು ವಂತೆ ಮಳೆಗಾಲದಲ್ಲಿ ರಾಡಿಯಾಗಿದ್ದ ನೀರು ಶರತ್ಕಾಲದಲ್ಲಿ ತಿಳಿ ಯಾಯಿತು. ಬ್ರಹ್ಮಚರ್ಯ ಮುಂತಾದ ನಾಲ್ಕು ಆಶ್ರಮದವ ರಿಗೂ ವಿಷ್ಣುಭಕ್ತಿ ಅವರ ಅಶುಭಗಳನ್ನು ಕಳೆಯುವಂತೆ ಶರತ್ಕಾಲ ಆಕಾಶದಲ್ಲಿರುವ ಮೋಡ, ಮೋಡಗಳಲ್ಲಿರುವ ಕರಿಬಣ್ಣ ನೆಲದಲ್ಲಿರುವ ಕೆಸರು ಮತ್ತು ನೀರಿನ ರಾಡಿಗಳನ್ನು ಕಳೆಯಿತು.

ದುಷ್ಟಕಾಮನೆಗಳನ್ನು ತ್ಯಜಿಸುವ ಮುನಿಗಳು ಮುಕ್ತರಾಗುವಂತೆ ಮೋಡಗಳು ನೀರನ್ನು ಬರಿದು ಮಾಡಿಕೊಂಡು ಶುಭ್ರವಾದುವು. ಜ್ಞಾನಿಗಳು ಯೋಗ್ಯರಿಗೆ ಮಾತ್ರ ಉಪದೇಶ ಮಾಡುವಂತೆ ಶರತ್ಕಾಲದಲ್ಲಿ ಪರ್ವತಗಳು ನದೀಪಾತ್ರಗಳಲ್ಲಿ ಮಾತ್ರ ನೀರನ್ನು ಹರಿಯಬಿಟ್ಟವು. ಸುಖಭೋಗಾಸಕ್ತರು ತಮ್ಮ ಆಯುಷ್ಯ ವ್ಯರ್ಥವಾಗಿ ಕಳೆಯುವುದನ್ನು ತಿಳಿಯರು. ಹಾಗೇ ಶರತ್ಕಾಲದ ಕೊಳಗಳಲ್ಲಿ ನೀರು ಬತ್ತಿ ಹೋಗುವುದನ್ನು ಜಲಚರಗಳು ತಿಳಿಯಲಿಲ್ಲ. ಇಂದ್ರಿಯ ನಿಗ್ರಹವಿಲ್ಲದವನು ಸಂಸಾರ ದುಃಖವನ್ನು ಅನುಭವಿಸುವಂತೆ ಸ್ವಲ್ಪ ನೀರಿನ ಕೊಳದಲ್ಲಿ ಜಲಚರಗಳು ಬಿಸಿಲಿನ ತಾಪವನ್ನು ಅನುಭವಿಸಿದುವು.

ಮನೋಬಲ ಉಳ್ಳವರು ನಾನು ನನ್ನದೆಂಬ ಅಭಿಮಾನ ತೊರೆದು ಧೀಮಂತರೆನಿಸುವಂತೆ ಶರತ್ಕಾಲದಲ್ಲಿ ನೆಲ ಕೆಸರನ್ನು ನೀಗಿಕೊಂಡು ಗಿಡಮರಗಳಿಂದ ಶೋಭಿಸಿತು. ವಿಷಯಾಸಕ್ತಿಯನ್ನು ತೊರೆದ ಮುನಿ ಲೌಕಿಕವನ್ನು ಬಿಡುವಂತೆ ಶರತ್ಕಾಲದ ಸಮುದ್ರಜಲ ನಿಶ್ಚಲವಾಗಿ ಸುಮ್ಮನಾಯಿತು. ಯೋಗಿಗಳು ಇಂದ್ರಿಯಗಳನ್ನು ನಿಗ್ರಹಿಸಿ ಅವುಗಳಿಂದ ಜ್ಞಾನಸಂಪಾದನ ಮಾಡುವಂತೆ ಬೇಸಾಯಗಾರರು ಅಣೆಕಟ್ಟುಗಳಿಂದ ನೀರನ್ನು ಸಂಗ್ರಹಿಸಿ ಹೊಲಗಳಿಗೆ ನೀರುಣಿಸಿದರು.

ದೇಹಾಭಿಮಾನಿಗಳ ಸಂಸಾರತಾಪವನ್ನು ತತ್ತ್ವಜ್ಞಾನ ಕಳೆಯುವಂತೆ ಗೋಪಿಯರ ವಿರಹ ತಾಪವನ್ನು ಮುಕುಂದ ಕಳೆಯುವಂತೆ ಹಗಲಿನ ಬಿಸಿಲಿನ ತಾಪವನ್ನು ರಾತ್ರಿಯಲ್ಲಿ ಚಂದ್ರ ಕಳೆದ. ನಿರ್ಮಲವಾದ ಮನಸ್ಸು ಭಗವಂತನ ಸಾಕ್ಷಾತ್ಕಾರದಿಂದ ಶೋಭಿಸುವಂತೆ ನಿರ್ಮಲ ಆಕಾಶ ನಕ್ಷತ್ರಗಳಿಂದ ಶೋಭಿಸಿತು. ಶ್ರೀಕೃಷ್ಣ ಭೂಮಿಯಲ್ಲಿ ಶೋಭಿಸಿದಂತೆ ಚಂದ್ರ ಆಕಾಶದಲ್ಲಿ ಶೋಭಿಸಿದ.

ಹೂದೋಟದ ಗಾಳಿಯಿಂದ ಜನರು ತಾಪವನ್ನು ಕಳೆದುಕೊಂಡರು. ಆದರೆ ಗೋಪಿಯರು ಮನಸ್ಸಿನ ತಾಪವನ್ನು ಕಳೆದುಕೊಳ್ಳಲಿಲ್ಲ. ಏಕೆಂದರೆ ಅವರ ಮನವನ್ನು ಮುಕುಂದ ಅಪಹರಿಸಿದ್ದ. ಎತ್ತುಗಳ ಸಹಾಯದಿಂದ ಬೇಸಾಯ ಫಲಯುಕ್ತವಾಗುವಂತೆ ಪುರುಷಸಂಸರ್ಗದಿಂದ ನಾರಿಯರು ಗರ್ಭವತಿಯ

ರಾದರು. ಕಳ್ಳರನ್ನು ಬಿಟ್ಟು ಬೇರೆ ಜನರು ರಾಜನಿಂದ ನಿರ್ಭಯರಾಗುವಂತೆ ಕನ್ನೈದಿಲೆಗಳನ್ನು ಬಿಟ್ಟು ಬೇರೆ ಕಮಲಗಳು ಸೂರ್ಯನಿಂದ ವಿಕಸಿತವಾದುವು. ಕೃಷ್ಣರಾಮರಿಂದ ಭೂಮಿ ಶೋಭಿಸಿದಂತೆ ಇಂದ್ರಯಾಗ ಮತ್ತು ಸಸ್ಯಗಳಿಂದ ಭೂಮಿ ಕಂಗೊಳಿಸಿತು. ಜೀವನ್ಮುಕ್ತರು ಪ್ರಾರಬ್ಧ ತೀರಿದಾಗ ಮುಕ್ತರಾಗಿ ಆವಿರ್ಭೂತವಾದ ಸ್ವರೂಪಶರೀರಗಳನ್ನು ಹೊಂದುವಂತೆ ಮಳೆಗಾಲ ಕಳೆದಾಗ ವರ್ತಕರು ಬೇರೆ ಊರುಗಳಿಗೆ ಹೋಗಿ ಹಣ ಸಂಪಾದಿಸಿದರು.

❖

ಅಧ್ಯಾಯ - ೧೯

ಅಧ್ಯಾಯ ಸಾರಾಂಶ

ಶರತ್ಕಾಲದ ತಿಳಿನೀರ ಕೊಳದ ತಾವರೆ ಕಂಪನ್ನು ಹೊತ್ತು ಗಾಳಿ ಬೀಸುತ್ತಿದ್ದಂತೆ ವೃಂದಾವನವನ್ನು ಶ್ರೀಕೃಷ್ಣ ಗೋ ಗೋಪಾಲಕ ರೊಂದಿಗೆ ಪ್ರವೇಶಿಸಿದ. ಹೂ ಬಿಟ್ಟ ಮರಗಳಲ್ಲಿ ಮತ್ತೇರಿದ ದುಂಬಿಗಳ ಹಕ್ಕಿಗಳ ಧ್ವನಿಗಳ ನಡುವೆ ಶ್ರೀಕೃಷ್ಣನ ಕೊಳಲಗಾನ ವನವನ್ನು ತುಂಬಿತು. ಪ್ರಣಯಿಗಳ ಎದೆ ಕಲಕುವ ಆ ಮೋಹಕ ಮುರಲೀಗಾನವನ್ನು ದೂರದಿಂದಲೇ ಆಲಿಸಿದ ಗೋಪಿಯರು ಒಬ್ಬರಿಗೊಬ್ಬರು ಅದರ ಸವಿಯನ್ನು ಬಣ್ಣಿಸತೊಡಗಿದರು.

'ನಮ್ಮ ಕೃಷ್ಣನ ತಲೆಯಮೇಲೆ ನವಿಲಗರಿ' ಕಿವಿಗಳಲ್ಲಿ ಬೆಟ್ಟಕಣಗಿಲೆ ಹೂಗಳು. ಪೀತಾಂಬರ ಉಟ್ಟು ವೈಜಯಂತೀ ಮಾಲೆ ಧರಿಸುತ್ತಾನೆ. ನಾಟ್ಯವಾಡುವ ನಟನಂಥ ಆಕೃತಿ. ಕೊಳಲಿನ ರಂಧ್ರದಲ್ಲಿ ಅಧರಾಮೃತ ತುಂಬುತ್ತ ಗೋ ಗೋವಳರೊಂದಿಗೆ ವೃಂದಾವನವನ್ನು ಪ್ರವೇಶಿಸುತ್ತಾನೆ. ಅವನ ಹೆಜ್ಜೆ ಗುರುತುಗಳನ್ನು ಕಾಣುವುದೇ ನಮ್ಮ ಕಂಗಳಿಗೆ ಹಬ್ಬ. ಎಡಗೈಯಲ್ಲಿ ಕೊಳಲು ಹಿಡಿದು ಬಲಭುಜದ ಮೇಲೆ ಮುಖವಿಟ್ಟು ಹುಬ್ಬುಗಳನ್ನು ಕುಣಿಸುತ್ತ ಬೆರಳುಗಳಿಂದ ಕೊಳಲಿನ ಧ್ವನಿ ಹೊರಡಿಸುತ್ತಾನೆ.

'ಸಂಜೆ ಗೋವುಗಳೊಂದಿಗೆ ಗೆಳೆಯರೊಂದಿಗೆ ರಾಮಕೃಷ್ಣರು ಹಿಂದಿರುಗುವಾಗ ಅವರು ವೇಣುಗಾನ ಮಾಡುತ್ತ ಒಲವಿನ ಓರೆನೋಟ ವನ್ನು ನಮ್ಮೆಡೆಗೆ ಬೀರುತ್ತಿದ್ದರೆ ಅವರ ಆ ಮುಖದ ಚೆಲುವನ್ನು ಕಣ್ಣುಗಳಿಂದ ಸವಿದರೇ ನಮ್ಮನ್ನು ನಿಜವಾಗಿ ಕಣ್ಣುಳ್ಳವರೆನ್ನಬೇಕು. ಸವಿಯದ ಕಣ್ಣುಗಳಿದ್ದೇನು ಫಲ? ದಾಮೋದರನ ಅಧರಾಮೃತ ಬೆರೆತ ವೇಣುಗಾನದ ಸವಿಯನ್ನು ಕೊಳಲು ಉಣ್ಣುತ್ತದೆ. ಅದು ಉಂಡು ಉಳಿದ ರಸ ಹೊರಗೆ ಹರಿದರೆ ಮರಗಳೂ ರೋಮಾಂಚಗೊಂಡು ಮಕರಂದ ರಸದ ರೂಪದಲ್ಲಿ ಆನಂದ ಬಾಷ್ಪ ಸುರಿಸುತ್ತವೆ. ಆ ವೇಣುಗಾನಕ್ಕೆ ಅನುಗುಣವಾಗಿ ಆನಂದದಿಂದ ನವಿಲು ಕುಣಿಯುತ್ತದೆ. ಬೇರೆ ಪ್ರಾಣಿಗಳೂ ಬೇರೆಬೇರೆ ವಾದ್ಯಧ್ವನಿಗಳನ್ನು ಅನುಕರಣ

ಮಾಡುತ್ತವೆ. ಅರಿಯದ ಜಿಂಕೆ ಜೋಡಿಗಳೂ ಕೃಷ್ಣನ ರೂಪವನ್ನು ಕಣ್ಣಿಂದ, ವೇಣುಧ್ವನಿ ಯನ್ನು ಕಿವಿಯಿಂದ ಸವಿದು ಪ್ರೀತಿಯ ಕಣ್ಣನೋಟಗಳಿಂದ ಆರಾಧಿಸಿ ಧನ್ಯವಾಗುತ್ತವೆ. ವನಿತೆಯರ ಕಣ್ಣಿಗೆ ಹಬ್ಬವೆನಿಸುವ ಸ್ಫುರದ್ರೂಪದ ಕೃಷ್ಣನನ್ನು ಕಂಡು ಅವನ ಮುರಳಿಗಾನವನ್ನು ಕೇಳಿ ವಿಮಾನಚಾರಿಗಳಾದ ದೇವಾಂಗನೆ ಯರು ಕಾಮಬಾಧೆಗೊಳಗಾಗಿ ಮೈಮರೆಯುವರು. ಅವರ ತುರುಬಿಂದ ಹೂಗಳು ಉದುರುವುವು. ಉಟ್ಟಬಟ್ಟೆ ಸಡಿಲಾಗುವುವು, ಧನ್ಯರು ಅವರು. ಕೃಷ್ಣನ ವೇಣುಗಾನದ ಸುಧೆಯನ್ನು ಕಿವಿಗಳ ಬೊಗಸೆಗಳಲ್ಲಿ ಎತ್ತಿ ಎತ್ತಿ ಕುಡಿವ ಹಸುಗಳೂ, ಕೆಚ್ಚಲಿಂದ ಸುರಿವ ಹಾಲಿನ ಗುಟುಕನ್ನು ಬಾಯಲ್ಲಿ ಹಾಗೇ ಇಟ್ಟುಕೊಳ್ಳುವ ಕರುಗಳೂ ತಮ್ಮೆದೆಯಲ್ಲಿ ಕೃಷ್ಣನನ್ನಿರಿಸಿ ಕೊಂಡು ಆನಂದದ ಕಣ್ಣೀರು ಸುರಿಸುವುವು.

'ಕಾಡಿನ ಹಕ್ಕಿಗಳೂ ಮರದ ಕೊಂಬೆಗಳಲ್ಲಿ ಕುಳಿತು ಕೃಷ್ಣನನ್ನೇ ನೋಡುತ್ತ ಮೌನವಾಗಿ, ಕೂಗುವುದನ್ನೇ ನಿಲ್ಲಿಸುತ್ತವೆ. ಮುನಿಗಳಂತೆ ಕಣ್ಣುಮುಚ್ಚಿ ವೇಣುಗಾನವನ್ನು ಆಲಿಸುತ್ತವೆ. ನದಿಗಳೂ ವೇಣುಗಾನಕ್ಕೆ ಮೈಮರೆತು ಮೆಲ್ಲನೆ ಹರಿಯುತ್ತವೆ. ಅಲೆಗಳೆಂಬ ತೋಳುಗಳು ಅವನ ಆಲಿಂಗನಕ್ಕೆ ತವಕಿಸುತ್ತವೆ. ಕಮಲಗಳನ್ನು ಕಾಣಿಕೆಯಾಗಿ ಅರ್ಪಿಸಿ ಪಾದಸ್ಪರ್ಶ ಮಾಡುತ್ತವೆ.

'ಬಲರಾಮನೊಂದಿಗೆ ಗೊಲ್ಲರೊಂದಿಗೆ ಕೃಷ್ಣ ಬಿಸಿಲಿನಲ್ಲಿ ಹಸುಗಳ ಹಿಂದೆ ಹಿಂದೆ ಕೊಳಲು ನುಡಿಸುತ್ತ ನಡೆದರೆ ಮೇಲೆ ಚಲಿಸುವ ಮೋಡವೂ ನೋಡಿ ಪ್ರೇಮ ಉಕ್ಕಿ ರೋಮಾಂಚ ಗೊಂಡು ತುಂತುರು ಹನಿರೂಪದ ಹೂ ಚೆಲ್ಲಿ ಮೈಹರಡಿ ಕೊಡೆಬಿಡಿಸಿದಂತೆ ನಿಲ್ಲುತ್ತದೆ. ತನ್ನಂತೆ ನೀಲವರ್ಣದವನು, ತನ್ನಂತೆ ಲೋಕಕ್ಕೆ ತಂಪು ನೀಡುವವನು' ತನ್ನ ಗೆಳೆಯ ಆತನೆಂಬ ಭಾವನೆ ಅದಕ್ಕೆ!

'ಭೂರಮಣ ಶ್ರೀಕೃಷ್ಣ, ಪರ್ವತಗಳೇ ಭೂದೇವಿಯ ಸ್ತನ ಗಳು. ಅಂಥ ಪರ್ವತಗಳ ಮೇಲೆ ಹತ್ತಿ ನಿಂತು ಶ್ರೀಕೃಷ್ಣ ಹಸು ಗಳನ್ನು ಕೂಗಿ ಕರೆಯುವಾಗ ಅವನ ಪಾದಗಳ ಕುಂಕುಮ ಲೇಪ ಭೂದೇವಿಯ ಸ್ತನಗಳಲ್ಲಿ ಹುಲ್ಲಿನ ಮೇಲೆ ಬಿದ್ದಿರುತ್ತದೆ ಎನ್ನುವುದು ಬೇಡಿತಿಯರಿಗೆ ಗೊತ್ತು. ಅವರು ಆ ಕುಂಕುಮವನ್ನು ಎತ್ತಿ ತಮ್ಮ

ಮುಖದ ಮೇಲೆ ಸ್ತನಗಳ ಮೇಲೆ ಬಳಿದುಕೊಂಡು ವಿರಹ ತಾಪವನ್ನು ಕಳೆಯುತ್ತಾರೆ. ಗೋವರ್ಧನ ಪರ್ವತರಾಜನೊಬ್ಬ ಆದರ್ಶ ಹರಿದಾಸನಾಗಿದ್ದಾನೆ, ಏಕೆಂದರೆ ರಾಮಕೃಷ್ಣರು ತನ್ನಲ್ಲಿಗೆ ಬಂದಾಗ ಅವರ ಪಾದಸ್ಪರ್ಶದಿಂದ ಆನಂದಪಡುತ್ತಾನೆ. ಅವರಿಗೂ ಅವರ ಹಸುಗಳಿಗೂ ನೀರು ಹುಲ್ಲುಗಳನ್ನು ನೀಡುತ್ತಾನೆ. ವಿಶ್ರಮಿಸಲು ಗುಹೆಗಳನ್ನೂ ಉಣಲು ಕಂದ ಮೂಲಗಳನ್ನೂ ನಿವೇದಿಸಿ ಸತ್ಕರಿಸುತ್ತಾನೆ. ರಾಮಕೃಷ್ಣರ ವೇಣುಗಾನ ಬಲುವಿಚಿತ್ರ. ಅದು ಜಂಗಮಗಳನ್ನು ಸ್ಥಾವರಗಳಂತೆ ಸ್ತಬ್ಧಗೊಳಿಸುತ್ತದೆ. ಸ್ಥಾವರಗಳನ್ನು ಜಂಗಮಗಳಂತೆ ರೋಮಾಂಚಗೊಳಿಸುತ್ತದೆ!

❖

ಶ್ರೀಕೃಷ್ಣನ ವೇಣುಗಾನವನ್ನು ಕೇಳಿದ ಗೋಪಿಯರು ಒಬ್ಬರಿಗೊಬ್ಬರು ಅದನ್ನು ಬಣ್ಣಿಸಿಹೇಳುತ್ತ ಆನಂದಿಸಿದರು. ಶ್ರೀಕೃಷ್ಣನ ಕೊಳಲಿನ ಭಾಗ್ಯವನ್ನು ಬಾಯಿತುಂಬ ಹೊಗಳಿದರು.

ಇತಿ ವೇಣುರವಂ ರಾಜನ್ ಸರ್ವಭೂತಮನೋಹರಮ್ ।
ಶ್ರುತ್ವಾ ವ್ರಜಸ್ತ್ರಿಯಃ ಸರ್ವಾ ವರ್ಣಯಂತ್ಯೋಽಭಿರೇಮಿರೇ ॥ ೭ ॥

ರಾಜನೆ, ಎಲ್ಲ ಪ್ರಾಣಿಗಳ ಮನಸೆಳೆವ ಶ್ರೀಕೃಷ್ಣನ ವೇಣುಗಾನವನ್ನು ಕೇಳಿ ಗೋಕುಲ ಸ್ತ್ರೀಯರೆಲ್ಲರೂ ಒಬ್ಬರಿಗೊಬ್ಬರು ಅದನ್ನು ವರ್ಣಿಸುತ್ತ ಆನಂದಿಸಿದರು.

ಗೋಪ್ಯಃ ಕಿಮಾಚರದಯಂ ಕುಶಲಂ ಸ್ಮ ವೇಣು-
ರ್ದಾಮೋದರಾಧರಸುಧಾಸರಸಾಗ್ರ್ಯಗೇಯಮ್ ।
ಭುಂಕ್ತೇ ಸ್ವಯಂ ಯದವಶಿಷ್ಟರಸಾಂಘಮಾರ್ಗೇ
ಹೃಷ್ಯತ್ತ್ವಚೋಽಶ್ರು ಮುಮುಚುಸ್ತರವಃ ಸದರ್ಭಾಃ ॥ ೧೦ ॥

ಗೋಪಿಯರೆ, ದಾಮೋದರನ ಅಧರಾಮೃತದೊಂದಿಗೆ ಸೇರಿ ಇನ್ನೂ ಹೆಚ್ಚು ರಸವತ್ತಾಗಿರುವ ಉತ್ತಮವಾದ ವೇಣುಗಾನವನ್ನು ಕೊಳಲು ತಾನೇ ಸವಿಯುತ್ತಿದೆ. ಅದಕ್ಕೆ ಅದೇನು ಪುಣ್ಯ ಮಾಡಿದೆಯೊ! ಅದು ಸವಿದಮೇಲೆ ಉಳಿದ ರಸವನ್ನು ಅದು ಹರಿಯುವ ಮಾರ್ಗದಲ್ಲಿ ಮರಗಳು ಉಂಡು ದರ್ಭೆಗಳ ರೂಪದಲ್ಲಿ ಮೈ ರೋಮಾಂಚನಗೊಂಡು ಮಕರಂದ ರಸರೂಪದಲ್ಲಿ ಆನಂದಬಾಷ್ಪವನ್ನು ಸುರಿದುವು.

ಇಲ್ಲಿ ಎರಡನೇ ಶ್ಲೋಕದ ಪಾಠ ಬೇರೆ ವ್ಯಾಖ್ಯಾನಗಳ ಪ್ರಕಾರ ಹೀಗಿದೆ-

ಗೋಪ್ಯಃ ಕಿಮಾಚರದಯಂ ಕುಶಲಂ ಸ್ಮ ವೇಣು
ದಾರ್ಮೋದರಾಧರಸುಧಾಮಪಿ ಗೋಪಿಕಾನಾಂ
ಭುಂಕ್ತೇ ಸ್ವಯಂ ಯದವಶಿಷ್ಟರಸಂ ಹ್ರದಿನ್ಯೋ
ಹೃಷ್ಯತ್ತ್ವಚೋಽಶ್ರು ಮುಮುಚುಸ್ತರವೋ ಯಥಾರ್ಯಾಃ ॥

ಇದಕ್ಕೆ ಭಾವಾನುವಾದ ಹೀಗೆ-

ಗೋಪಿಯರೆ, ಈ ಕೊಳಲಿನ ಭಾಗ್ಯವನ್ನಾದರೂ ನೋಡಿರಿ. ವೇಣುವು ಪುರುಷ ಜಾತಿಯದು. ಆದರೂ ಅದು ಹಿಂದಿನ ಜನ್ಮದಲ್ಲಿ ಏನು ಪುಣ್ಯ ಮಾಡಿದೆಯೊ! ನಮಗೆ ಮಾತ್ರವೇ ಮೀಸಲಾಗಿರುವ ದಾಮೋದರನ ಅಧರಾಮೃತವನ್ನು ತಾನೇ ನಮಗೆ ಸ್ವಲ್ಪವಾದರೂ ಉಳಿಯದಂತೆ ಕುಡಿಯುತ್ತಿದೆ. ಈ ವೇಣುವನ್ನು ಬೆಳೆಸಿ ಪೋಷಿಸಿದ ನದಿಗಳು ತಮಗಾದ ರೋಮಾಂಚನವನ್ನು ಕಮಲಗಳ ಮೂಲಕ ವ್ಯಕ್ತಪಡಿಸುತ್ತಿವೆ. ಆರ್ಯರು ತಮ್ಮ ವಂಶದಲ್ಲಿ ಭಗವದ್ಭಕ್ತರು ಜನಿಸಿದರೆ ಆನಂದಿಸುವಂತೆ ಬಿದಿರು ಮೆಳೆಗಳು ತಮ್ಮ ವಂಶಜವಾದ ವೇಣು ಶ್ರೀಕೃಷ್ಣನ ಅಧರಾಮೃತಪಾನ ಮಾಡುವುದನ್ನು ಕಂಡು ಜೇನುಹನಿಗಳ ರೂಪದಲ್ಲಿ ಆನಂದಾಶ್ರುವನ್ನು ಸುರಿಸಿದುವು.

ಇನ್ನೊಂದು ವಿವರಣೆಯಂತೆ ಬಿದಿರು ಮೆಳೆಗಳು ದುಃಖದಿಂದ ಕಣ್ಣೀರು ಸುರಿಸಿದುವು, ಕೊಳಲಿನಂತೆ ನಾವು ಮಾಧವನ ಅಧರಾಮೃತ ಪಾನ ಮಾಡಲು ಅಶಕ್ತರಾಗಿರುವೆವು ಎಂದು.

ಇಲ್ಲಿ ಕೊಳಲು ಜಡವಾದ್ದರಿಂದ ಅದಕ್ಕೆ ಕೃಷ್ಣನ ಅಧರಾಮೃತಪಾನ ಮಾಡುವ ಶಕ್ತಿಯಿಲ್ಲ. ಕೊಳಲು ಹೊರಗೆ ಹೊಮ್ಮಿಸುವ ದಿವ್ಯಗಾನವನ್ನು ಬಿಟ್ಟು ಅಧರಾಮೃತ ಪಾನವನ್ನು ವರ್ಣಿಸುವುದರಲ್ಲಿ ಔಚಿತ್ಯವೂ ಇಲ್ಲ. ನದಿಗಳಲ್ಲಿ ಅಧರಾಮೃತ ಸುರಿಯದಿರುವುದರಿಂದ ಅವುಗಳಿಗೆ ರೋಮಾಂಚವಾಗಲು ಶಕ್ಯವಿಲ್ಲ. ಬಿದಿರು ಮೆಳೆಗಳು ತಮ್ಮ ವಂಶಜವಾದ ವೇಣು ಅಧರಾಮೃತಪಾನ ಮಾಡುತ್ತಿದೆ ಎಂದು ಹಿಗ್ಗಲೂ ಕಾರಣವಿಲ್ಲ. ವೇಣು ಜಡವಾದ್ದರಿಂದ ವಂಶಸಂಭೂತವೆಂದು ಹೇಳುವದಾಗಲಿ, ಅಧರಾಮೃತಪಾನ ಮಾಡುತ್ತದೆ ಎನ್ನುವುದಾಗಲಿ ಯುಕ್ತವಲ್ಲ. ಇನ್ನೊಂದು ವಿವರಣೆಯಂತೆ ಎಲ್ಲ ಬಿದಿರು ಮೆಳೆಗಳೂ ಅಧರಾಮೃತಪಾನವನ್ನು ನಿರೀಕ್ಷಿಸಿ ಹತಾಶರಾಗುವುದೂ ಸರಿಯಲ್ಲ. ಕಾವ್ಯಭಾಷೆಯ ದೃಷ್ಟಿಯಿಂದ ನೋಡಿದರೂ ಪುರುಷಜಾತಿಯ ವೇಣು ಪುರುಷೋತ್ತಮನ ಅಧರಾಮೃತಪಾನ

ಮಾಡುವುದಾಗಲಿ ಅದಕ್ಕೆ ಪುರುಷಜಾತಿಯ ಬಿದಿರುಗಳು. ಅಸೂಯೆಪಡುವುದಾಗಲಿ ಆನಂದಿಸುವುದಾಗಲಿ ಶೃಂಗಾರರಸವಾಗುವುದಿಲ್ಲ. 'ವೇಣು' ಶಬ್ದದಂತೆ 'ತರು' ಶಬ್ದವೂ ಪುಲ್ಲಿಂಗದಲ್ಲಿರುವುದರಿಂದ ಎರಡೂ ಪುರುಷ ಜಾತಿಯವುಗಳು. ಅದರಿಂದ ರಸಭಂಗ, ಆಲಂಕಾರಿಕ ದೃಷ್ಟಿಯಲ್ಲಿ.

ವಸ್ತುತಃ ವೇಣುವಿನ ಅಭಿಮಾನಿನಿ ಸಾಕ್ಷಾದ್ ರಮಾದೇವಿ, ಪರಮಾತ್ಮನ ಪ್ರಿಯತಮೆ. ಅವಳು ವೇಣುವಿನಲ್ಲಿದ್ದು ಪರಮಾತ್ಮನ ಮಧುರವಾದ ಅಧರ ರಸದೊಂದಿಗೆ ಮಧುರವಾದ ಗಾನರಸವನ್ನೂ ಪೂರ್ತಿ ಸವಿಯುತ್ತಾಳೆ. ಅವಳು ತಾನು ಉಂಡ ಗಾನರಸದ ಶೇಷವನ್ನು ಸುತ್ತಲೂ ಪಸರಿಸುವುದರಿಂದ ಮರಗಳ ಅಭಿಮಾನಿ ಗಳಾದ ದೇವತಾಸ್ತ್ರೀಯರೂ ಕೇಳಿ ಆನಂದಿಸಿ ಆನಂದಾಶ್ರು ಸುರಿಸುತ್ತಾರೆ. ಇದು ನಿಜವಾದ ಶೃಂಗಾರರಸ. ಹೀಗೆ ತಂತ್ರಭಾಗವತದಲ್ಲಿ ಸುಂದರವಾದ ವಿವರಣೆ ಇದೆ.

'ಇತಿ ವೇಣುರವಂ ರಾಜನ್' ಎಂಬ ಶ್ಲೋಕವನ್ನು ಕಂಡಾಗ ವೇಣುಗಾನವನ್ನು ಆಲಿಸಿ ಸುಖಪಟ್ಟವರು ಗೋಪಾಂಗನೆಯರು, ಅವರಿಗಾಗಿಯೇ ಕೃಷ್ಣ ಕೊಳಲನ್ನೂದಿದನೆಂದು ಭ್ರಮೆ ಉಂಟಾಗಬಹುದು. ಆದರೆ ಎರಡನೇ ಶ್ಲೋಕದಲ್ಲಿ 'ವೇಣುಃ ಸ್ವಯಂ ಭುಂಕ್ತೇ' ಎಂದು ಹೇಳಿದ್ದನ್ನು ಕಂಡಾಗ ಆ ಭ್ರಮನಿರಸನ ವಾಗುವುದು. ತಂತ್ರಭಾಗವತದಲ್ಲಿ ನೀಡಿದ ವಿವರಣೆಯಂತೆ, ರಮೆಯೇ ವೇಣುಗಾನರಸವನ್ನು ಸವಿಯುವವಳು, ಅವಳಿಗಾಗಿಯೇ ಕೃಷ್ಣ ಕೊಳಲೂದಿದ. ಅವಳ ಆವೇಶದಿಂದ ಗೋಪಾಂಗನೆಯರೂ ಅದನ್ನು ಸವಿದರು' ಎಂದು.

ಶ್ರೀದೇವೀ ವೇಣುಮಾವಿಶ್ಯ ರೇಮೇ ಕೃಷ್ಣಮುಖಾಂಬುಜೇ ।
ಪಪೌ ಚ ತದ್ಗತಂ ಗೀತಂ ಸುರಾ ಇತರ ಭಾಂಡಗಾಃ ॥

ಇತಿ ತಂತ್ರಭಾಗವತೇ ।

ಶ್ರೀಕೃಷ್ಣನ ಮುಖಕಮಲದಲ್ಲಿ ವೇಣುವಿನೊಳಗಿದ್ದು ಶ್ರೀದೇವಿ ರಮಿಸಿದಳು. ಅವನ ಅಧರರಸದೊಂದಿಗೆ ಗಾನರಸವನ್ನು ತಾನೇ ಕುಡಿದಳು. ಇತರ ದೇವತೆಗಳು ಕೌಸ್ತುಭಾದಿ ಇತರ ಆಭರಣಗಳಲ್ಲಿ ಇತರ ವೃಕ್ಷಗಳಲ್ಲಿ ದರ್ಭೆಗಳಲ್ಲಿಯೂ ಇದ್ದು ಗಾನರಸ ಸವಿದರು ಎಂದು ತಂತ್ರಭಾಗವತದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಏಕೋನವಿಂಶೋಽಧ್ಯಾಯಃ

❖

ಅಧ್ಯಾಯ - ೨೦

ಅಧ್ಯಾಯ ಸಾರಾಂಶ

ಹೇಮಂತದ ಮೊದಲನೆ ತಿಂಗಳಲ್ಲಿ ಗೋಕುಲದ ಕನ್ಯೆಯರು ಕೃಷ್ಣನನ್ನು ಪತಿಯಾಗಿ ಪಡೆಯುವ ಬಯಕೆಯಿಂದ ಕಾತ್ಯಾಯನೀ ದೇವಿಯ ವ್ರತವನ್ನು ಆಚರಿಸಿದರು. ಅರುಣೋದಯಕಾಲದಲ್ಲಿ ಯಮುನೆಯಲ್ಲಿ ಮಿಂದು ದಡದಲ್ಲಿ ಮಳಲಿನಿಂದ ದೇವಿಯ ಮೂರ್ತಿಯನ್ನು ಮಾಡಿ ಗಂಧ ಪುಷ್ಪ ಧೂಪ ದೀಪ ನೈವೇದ್ಯಗಳಿಂದಲೂ ಹಣ್ಣು ಚಿಗುರೆಲೆ ಅಕ್ಷತೆಕಾಳುಗಳಿಂದಲೂ ಆರಾಧಿಸಿದರು.

'ದೇವಿ ಕಾತ್ಯಾಯನಿ, ಮಹಾಮಾಯೆ, ಮಹಾಯೋಗಿನಿ, ಜಗದೀಶ್ವರಿ, ನಂದಗೋಪಕುಮಾರನಾದ ಶ್ರೀಕೃಷ್ಣನನ್ನು ನಮಗೆ ಪತಿಯಾಗಿ ದೊರಕಿಸಿಕೊಡು. ನಿನಗೆ ನಮಸ್ಕಾರ' ಎಂದು ಮಂತ್ರ ಜಪಿಸಿದರು. ಮುಂಜಾವಿನಲ್ಲೆದ್ದು ಪರಸ್ಪರ ಕೈಹಿಡಿದುಕೊಂಡು ಯಮುನೆಯ ಕಡೆಗೆ ನಡೆಯುತ್ತ ದಾರಿಯುದ್ದಕ್ಕೂ ಗೋವಿಂದ ನಾಮಸಂಕೀರ್ತನೆ ಮಾಡಿದರು.

ಒಂದುದಿನ ಎಂದಿನಂತೆ ಕುಮಾರಿಯರು ನದಿಗೆ ಬಂದು ದಡದಲ್ಲಿ ಬಟ್ಟೆ ಕಳಚಿಟ್ಟು ನೀರಲ್ಲಿ ಇಳಿದು ಆನಂದದಿಂದ ಕೃಷ್ಣನಾಮ ಸಂಕೀರ್ತನ ವಿಹಾರಕ್ಕೆ ತೊಡಗಿದರು. ಭಗವಾನ್ ಶ್ರೀಕೃಷ್ಣ ಅವರ ಮನೋರಥವನ್ನು ಅರಿತು, ಅವರಿಗೆ ವ್ರತಫಲ ಸಿದ್ಧಿಸುವುದಕ್ಕಾಗಿ, ಗೆಳೆಯರೊಂದಿಗೆ ಅಲ್ಲಿಗೆ ಆಗಮಿಸಿದ. ಅವರು ದಡದ ಮೇಲಿರಿಸಿದ್ದ ಬಟ್ಟೆಗಳನ್ನು ಎತ್ತಿಕೊಂಡು ಹತ್ತಿರದ ಒಂದು ಈಚಲಮರವನ್ನೇರಿದ. ಗೆಳೆಯರೊಂದಿಗೆ ತಾನೂ ಜೋರಾಗಿ ನಗಲುತೊಡಗಿದ. 'ಅಬಲೆಯರೆ, ನಿಮಗೆ ಬಟ್ಟೆ ಬೇಕಿದ್ದರೆ ಮೇಲೆ ಬನ್ನಿ. ನಿಮ್ಮ ನಿಮ್ಮ ಬಟ್ಟೆ ಒಯ್ಯಿರಿ' ಎಂದ. ಭಗವಂತನ ಆ ಪರಿಹಾಸದ ಮಾತನ್ನು ಕೇಳಿ ಅಬಲೆಯರು ತಮ್ಮ ವ್ರತ ಫಲಿಸಿತೆಂದು ಆನಂದ ತುಂದಿಲರಾದರು. ಆದರೆ ಕೃಷ್ಣನ ಗೆಳೆಯರ ಮುಂದೆ ನಗ್ನರಾಗಿ ನೀರಿಂದ ಮೇಲೆ ಬರಲು ನಾಚಿದರು. ಪರಸ್ಪರ ಮುಖವನ್ನು ನೋಡುತ್ತ ನಕ್ಕು ಹಾಗೇ ನಿಂತರು. ಕತ್ತಿನವರೆಗೆ

ತಣ್ಣನೆ ನೀರಲ್ಲಿದ್ದು ಚಳಿಯಿಂದ ನಡುಗುತ್ತ ನುಡಿದರು, 'ಕೃಷ್ಣ, ನೀನಿಂಥ ಅನ್ಯಾಯ ಮಾಡಬಾರದು. ನಮ್ಮ ಬಟ್ಟೆಗಳನ್ನು ಕೊಟ್ಟು ಬಿಡು. ಚಳಿಯಲ್ಲಿ ನಡುಗುತ್ತಿದ್ದೇವೆ! ನಾವು ನಿನ್ನ ದಾಸಿಯರು, ನೀನು ಹೇಳಿದಂತೆ ನಡೆಯುವೆವು, ನೀನು ಬಟ್ಟೆ ಕೊಡದಿದ್ದರೆ ನಂದರಾಜನಲ್ಲಿ ದೂರು ಕೊಡುವೆವು!' ಶ್ರೀಕೃಷ್ಣ ನೆಂದ, 'ನೀವು ನನಗೆ ದಾಸಿಯರಾಗಿರುವಿರಾದರೆ, ನಾನು ಹೇಳಿದಂತೆ ಮಾಡುವಿರಾದರೆ, ಮೇಲೆ ಬಂದು ಬಟ್ಟೆಗಳನ್ನು ತೆಗೆದುಕೊಳ್ಳಿರಿ. ಇಲ್ಲದಿದ್ದರೆ ನಾನು ಕೊಡಲಾರೆ. ರಾಜನಿಗೆ ಹೇಳುವಿರಾ? ಹೇಳಿರಿ. ಆತ ಕೋಪಗೊಂಡರೆ ನನಗೇನು ಮಾಡಬಲ್ಲ?'

ಎಲ್ಲ ಕನ್ಯೆಯರೂ ಈಗ ಎರಡು ಕೈಗಳಿಂದ ಗುಪ್ತಾಂಗವನ್ನು ಮುಚ್ಚಿಕೊಂಡು ನಡುಗುತ್ತ ಮೇಲೆ ಬಂದರು. ಕೃಷ್ಣ ಅವರ ಮುಗ್ಧ ಮೋಹಕ ಚರ್ಯೆಗೆ ಮನಸೋತು ನಕ್ಕು ನುಡಿದ, 'ವ್ರತವನ್ನು ಕೈಗೊಂಡವರು ನೀವು ನಗ್ನರಾಗಿ ನೀರಲ್ಲಿ ಇಳಿದಿರುವಿರಿ. ಇದು ದೇವತೆಗಳಲ್ಲಿ ಮಾಡಿದ ಅಪಚಾರ. ಇದರ ಪರಿಹಾರಕ್ಕಾಗಿ ತಲೆಯ ಮೇಲೆ ಕೈಜೋಡಿಸಿ ನಮಸ್ಕಾರ ಮಾಡಿರಿ.'

ಕನ್ಯೆಯರಿಗೆ ಈಗ ಅರಿವಾಯಿತು. ತಾವು ನಗ್ನರಾಗಿ ವ್ರತಸ್ನಾನ ಮಾಡಿದ್ದರಿಂದ ವ್ರತದಲ್ಲಿ ಲೋಪ ಉಂಟಾಯಿತು! ಕರ್ಮಸಾಕ್ಷಿ ಯಾದ ಕೃಷ್ಣನಿಗೆ ನಮಿಸಿ ಈ ಲೋಪದೋಷವನ್ನು ಪರಿಹರಿಸಿ ಕೊಳ್ಳಬೇಕೆಂದು ಬಯಸಿ ಕೈಜೋಡಿಸಿ ನಮಿಸಿದರು. ದಯಾ ಮಯನಾದ ಶ್ರೀಕೃಷ್ಣ ಅವರಿಗೆ ಬಟ್ಟೆಗಳನ್ನು ಕೊಟ್ಟು ಅನುಗ್ರಹಿಸಿದ.

ಶ್ರೀಕೃಷ್ಣ ಕನ್ಯೆಯರಿಗೆ ತಿಳಿಯದಂತೆ ಬಟ್ಟೆಗಳನ್ನು ಎತ್ತಿ ಕೊಂಡು ವಂಚನೆ ಮಾಡಿದ್ದು ಗೆಳೆಯರ ಮುಂದೆ ಬರಿ ಮೈಯಲ್ಲಿ ಮೇಲೆ ಬರುವಂತೆ ಮಾಡಿ ಲಜ್ಜೆಬಿಡಿಸಿದ್ದು, ಆಟದ ಬೊಂಬೆ ಗಳಂತೆ ಆಟವಾಡಿಸಿದ್ದು ಎಲ್ಲವೂ ಪ್ರಿಯತಮನು ಆಡಿದ ಆಟ ವೆಂದು ಅವರು ಹಿಗ್ಗಿದರು. ಕೋಪಿಸಿಕೊಳ್ಳಲಿಲ್ಲ. ವ್ರತ ಫಲಿಸಿ ತೆಂದು ಸಂತೋಷಗೊಂಡರು. ಪ್ರಿಯತಮನ ಸಹವಾಸವನ್ನು ಹೊಂದಿ ಧನ್ಯರಾದರು.

ಪ್ರಿಯತಮನಾದ ಕೃಷ್ಣ ಕೈಮುಟ್ಟಿಕೊಟ್ಟ ಬಟ್ಟೆಯುಟ್ಟು ಪ್ರೀತಿಯಿಂದ ಹಾಗೇ ನಿಂತುಬಿಟ್ಟರು. ಅಲ್ಲಿಂದ ಕದಲಲಿಲ್ಲ. ಅವರ ಮನವನ್ನು ಆತ ಕದ್ದಿದ್ದ. ಅವನ ಅಂಗಸಂಗವನ್ನು ಬಯಸಿ ಲಜ್ಜೆಯಿಂದ ಅವನನ್ನೇ ನೋಡುತ್ತ ನಿಂತರು. ಅವರ ಮನೋಗತವನ್ನು ಅರಿತ ಶ್ರೀಕೃಷ್ಣ ನುಡಿದ, 'ನಿಮ್ಮ ಬಯಕೆ ನನಗೆ ತಿಳಿದಿದೆ. ಅದನ್ನು ರಮೆ ಅನುಮೋದಿಸಿದ್ದಾಳೆ. ನಾನೂ ಅನುಮೋದಿಸಿದ್ದೇನೆ. ನನ್ನಲ್ಲಿ ಮನಸ್ಸಿಟ್ಟವರಿಗೆ ಅವರ ಕಾಮನೆಗಳು ಹುರಿದ ಬೆಂದ ಕಾಳಿನಂತೆ ಆಗುತ್ತವೆ. ಮೊಳೆಯುವುದಿಲ್ಲ. ಸಾಂಸಾರಿಕ ಸುಖಭೋಗಾಸಕ್ತಿಯನ್ನು ಉಂಟುಮಾಡುವುದಿಲ್ಲ. ನಿಮ್ಮ ವ್ರತ ಫಲಿಸಿದೆ. ಹೊರಟುಹೋಗಿರಿ. ಮುಂದೆ ಶರತ್ಕಾಲದ ಹುಣ್ಣಿಮೆ ರಾತ್ರಿಗಳಲ್ಲಿ ನನ್ನೊಡನೆ ನೀವು ವಿಹರಿಸುತ್ತೀರಿ.'

ಕನ್ಯೆಯರು ತಮ್ಮ ಬಯಕೆಯನ್ನು ಈಡೇರಿಸಿಕೊಂಡು ಭಗವಂತನ ಅಪ್ಪಣೆ ಪಡೆದು ಗೋಕುಲಕ್ಕೆ ಮರಳಿದರು.

ಒಮ್ಮೆ ಬೇಸಗೆಯ ಕಡುಬಿಸಿಲಿನಲ್ಲಿ ನೆರಳು ನೀಡುತ್ತ ಕೊಡೆ ಹಿಡಿದಂತೆ ನಿಲ್ಲುವ ಮರಗಳನ್ನು ಕಂಡು ಶ್ರೀಕೃಷ್ಣ ಗೆಳೆಯರಿಗೆ ಹೇಳಿದ, 'ಪರೋಪಕಾರಕ್ಕೆಂದೇ ಬದುಕುವ ಈ ಮರಗಳನ್ನು ನೋಡಿರಿ. ತಾವು ಗಾಳಿ ಮಳೆ ಬಿಸಿಲುಗಳನ್ನು ಸಹಿಸಿಕೊಂಡು ನಮ್ಮನ್ನು ಕಾಪಾಡುತ್ತವೆ. ಇವುಗಳ ಜನ್ಮವೇ ಸಾರ್ಥಕ. ಸಜ್ಜನರ ಬಳಿಗೆ ಬೇಡಿ ಬಂದವನು ಬರಿಗೈಯಲ್ಲಿ ಹಿಂದಿರುಗುವುದಿಲ್ಲ. ಹಾಗೇ ಈ ಮರಗಳು. ಎಲೆ ಹೂ ಹಣ್ಣು ನೆರಳು ಬೇರು ತೊಗಟೆ ಕಟ್ಟಿಗೆ ವಾಸನೆ ಅಂಟು ಬೂದಿ ಮೊಳಕೆ ಎಂದು ತಮ್ಮ ಸರ್ವಸ್ವವನ್ನು ಕೊಟ್ಟು ಬಿಡುತ್ತವೆ!' ಹೀಗೆ ಹೇಳಿ ಶ್ರೀಕೃಷ್ಣ ಹೂ ಹಣ್ಣು ಚಿಗುರೆಲೆಗಳಿಂದ ಶೋಭಿಸುವ ಮರಗಳೆಡೆಯಿಂದ ಯಮುನಾ ತೀರಕ್ಕೆ ಬಂದ. ಗೊಲ್ಲರು ಸಿಹಿಯಾದ ತಂಪಾದ ಆರೋಗ್ಯಕರವಾದ ನೀರನ್ನು ಹಸುಗಳಿಗೆ ಕುಡಿಸಿ ತಾವೂ ಕುಡಿದರು. ಸಮೀಪದ ಉಪವನದಲ್ಲಿ ಹಸುಗಳನ್ನು ಯಥೇಚ್ಛ ಮೇಯಿಸಿದರು. ಬಹಳ ಹಸಿದು ಕೃಷ್ಣರಾಮರ ಬಳಿಗೆ ಬಂದು ನುಡಿದರು.

❖

ಅಧ್ಯಾಯ - ೨೧

ಅಧ್ಯಾಯ ಸಾರಾಂಶ

'ಹೇ ರಾಮ, ಹೇ ಕೃಷ್ಣ ಹಸಿವು ನಮ್ಮನ್ನು ಕಾಡುತ್ತಿದೆ. ಏನಾದರೂ ಉಪಾಯ ಮಾಡಿರಿ' ಎಂದು ಗೊಲ್ಲರು ನುಡಿದಾಗ ಶ್ರೀಕೃಷ್ಣನೆಂದ, 'ಇಲ್ಲಿಯೆ ಸಮೀಪದಲ್ಲಿ ವಿಪ್ರರು ಆಂಗಿರಸ ಎಂಬ ಸತ್ರಯಾಗ ನಡೆಸುತ್ತಿದ್ದಾರೆ. ಅಲ್ಲಿಗೆ ಹೋಗಿ ಅನ್ನಬೇಡಿರಿ' ಎಂದು. ಗೊಲ್ಲರು ಹಾಗೇ ಮಾಡಿದರು. 'ಪಶುಬಲಿ ಉಳ್ಳ ಯಜ್ಞಗಳಲ್ಲಿ ವಪಾಹೋಮಕ್ಕಿಂತ ಪೂರ್ವದಲ್ಲಿ ದೀಕ್ಷಿತನ ಅನ್ನ ಉಣಬಾರದು. ಸೌತ್ರಾಮಣಿ ಯಾಗದಲ್ಲಿಯೂ ದೀಕ್ಷಿತನ ಅನ್ನ ಉಣಬಾರದು. ಬೇರೆ ಸಂದರ್ಭಗಳಲ್ಲಿ ದೋಷವಿಲ್ಲ' ಎಂದರು. ಆದರೆ ವಿಪ್ರರು ಗೊಲ್ಲರಿಗೆ ಅನ್ನ ನೀಡಿದರೆ ಯಜ್ಞಕಾರ್ಯ ಕೆಟ್ಟು ಹೋದೀತೆಂದು ಭಯಪಟ್ಟರು. ಶ್ರೀಕೃಷ್ಣ ಭಗವಂತನೆಂಬ ಪ್ರಜ್ಞೆ ಅವರಿಗೆ ಆಗ ಇರಲಿಲ್ಲ. ಆದರಿಂದ ಅನ್ನ ನೀಡುವೆವೆಂದಾಗಲಿ ಇಲ್ಲವೆಂದಾಗಲಿ ಹೇಳದೆ ಸುಮ್ಮನಿದ್ದುಬಿಟ್ಟರು. ಗೊಲ್ಲರು ಹಿಂತಿರುಗಿ ಬಂದು ಕೃಷ್ಣರಾಮರಲ್ಲಿ ಎಲ್ಲವನ್ನೂ ಹೇಳಿದರು. 'ಮರಳಿ ಯತ್ನವ ಮಾಡು' ಎಂಬ ಲೋಕರೀತಿಯನ್ನು ಲೋಕಕ್ಕೆ ತಿಳಿಸಲು ಶ್ರೀಕೃಷ್ಣ ಗೊಲ್ಲರನ್ನು ಪುನಃ ಯಜ್ಞಶಾಲೆಗೆ ಕಳಿಸಿದ. ಅಲ್ಲಿ ವಿಪ್ರಪತ್ನಿಯರಲ್ಲಿ ಅನ್ನ ಬೇಡಲು ಆದೇಶಿಸಿದ. ಗೊಲ್ಲರು ಹೋಗಿ ವಿಪ್ರಪತ್ನಿಯರಲ್ಲಿ ಅನ್ನ ಬೇಡಿದರು. 'ಇಲ್ಲಿಯೆ ಸಮೀಪದಲ್ಲಿ ಕೃಷ್ಣ ಬಂದಿದ್ದಾನೆ. ಹಸಿದಿದ್ದಾನೆ. ಅನ್ನ ಬೇಡಲು ಅವನೆ ನಮ್ಮನ್ನು ನಿಮ್ಮಲ್ಲಿಗೆ ಕಳಿಸಿದ್ದಾನೆ' ಎಂದರು.

ವಿಪ್ರಪತ್ನಿಯರು ಜ್ಞಾನಿಗಳು. ಕೃಷ್ಣನನ್ನು ಭಗವಂತನೆಂದು ತಿಳಿದಿದ್ದರು. ಹಿಂದಿನಿಂದಲೂ ಕೃಷ್ಣನ ಕಥೆಗಳಿಗೆ ಮನ ಸೋತವರೆ ಆಗಿದ್ದರು. ಗೋಪಿಯರಂತೆಯೆ ಅವನ ದರ್ಶನಕ್ಕೆ ಉತ್ಸುಕರಾಗಿದ್ದರು. ಆದರಿಂದ ಅವರು ಒಡನೆ ತಾವೇ ಎಲ್ಲ ಷಡ್ರಸಾನ್ನಗಳನ್ನು ಪಾತ್ರೆಗಳಲ್ಲಿ ತುಂಬಿಕೊಂಡು ಸಂಭ್ರಮದಿಂದ ಕೃಷ್ಣನ ಬಳಿಗೆ ಧಾವಿಸಿ ಬಂದರು, ನದಿಗಳು ವೇಗವಾಗಿ ಸಮುದ್ರದ ಕಡೆಗೆ ಹರಿದು ಬರುವಂತೆ. ಪತಿಸುತರು ಬಂಧುಬಾಂಧವರು

ತಡೆದರೂ ಲೆಕ್ಕಿಸದೆ ಯಮುನೆಯ ಸಮೀಪದ ಉಪವನದಲ್ಲಿ ಗೊಲ್ಲರೊಂದಿಗೆ, ಅಣ್ಣ ಬಲರಾಮನೊಂದಿಗೆ ಸಂಚರಿಸುತ್ತಿದ್ದ ಶ್ರೀಕೃಷ್ಣನ ಬಳಿಗೆ ಬಂದರು.

ವಿಪ್ರಪತ್ನಿಯರು ಬಹುಕಾಲದಿಂದ ಕೃಷ್ಣನ ಕಥೆಗಳನ್ನು ಕೇಳಿದವರು. ಇದೀಗ ಕಣ್ಣ ಮುಂದೆ ಅವನ ಅದ್ಭುತ ಸುಂದರ ರೂಪವನ್ನು ಕಂಡು ಒಡನೆ ಅವನನ್ನು ಕಣ್ಣುಗಳೆಂಬ ಮಹಾದ್ವಾರದಿಂದ ಒಳಗೆ ಹೃದಯಕ್ಕೆ ಬರಮಾಡಿಕೊಂಡರು. ಅಲ್ಲಿಯೆ ಮನದಣಿಯೆ ಆಲಿಂಗಿಸಿ ವಿರಹ ತಾಪವನ್ನು ನೀಗಿ ಕೊಂಡರು. ಜ್ಞಾನಿಗಳು ಪರಮಾತ್ಮನನ್ನು ಹೃದಯದಲ್ಲಿ ತುಂಬಿ ಕೊಂಡು ಆಲಿಂಗಿಸಿ ಸಂಸಾರ ತಾಪವನ್ನು ನೀಗಿಕೊಳ್ಳುವಂತೆ.

ಶ್ರೀಕೃಷ್ಣ ನುಡಿದ, ಭಾಗ್ಯವತಿಯರೆ, ನಿಮಗೆ ಸ್ವಾಗತ. ಬನ್ನಿ ಕುಳಿತುಕೊಳ್ಳಿ. ನಾನು ನಿಮಗೇನು ಕಾರ್ಯ ಮಾಡಿಕೊಡಲಿ ಹೇಳಿ. ನನ್ನನ್ನು ನೋಡಲು ನೀವು ಬಂದಿದ್ದು ಯುಕ್ತವೆ. ಪ್ರಾಣ ಬುದ್ಧಿ ಮನಸ್ಸು ಇಂದ್ರಿಯ ಶರೀರ ಹೆಂಡತಿ ಮಕ್ಕಳು ಧನ ಕನಕ ಎಲ್ಲ ಪ್ರಿಯವಸ್ತುಗಳೂ ಪ್ರಿಯವೆನಿಸುವುದು. ಅವುಗಳೊಳಗೆ ಪ್ರಿಯತಮ ನಾದ ನನ್ನ ಸನ್ನಿಧಾನವಿರುವುದರಿಂದಲೆ ಎಂದಮೇಲೆ, ನನಗಿಂತ ಹೆಚ್ಚು ಪ್ರಿಯರು ನಿಮಗೆ ಯಾರಿರಬಲ್ಲರು? ಆದರಿಂದ ಪ್ರಿಯ ನೆಂದು ನನ್ನನ್ನು ಕಾಣಲು ಬಂದಿರಿ. ಇನ್ನು ಹಿಂದಿರುಗಿ ಹೋಗಿರಿ. ಅಲ್ಲಿ ನಿಮ್ಮ ಪತಿಗಳು ನಿಮ್ಮೊಂದಿಗೆ ಸತ್ರಯಾಗವನ್ನು ಮುಂದುವರಿಸಲಿ.'

ವಿಪ್ರಪತ್ನಿಯರೆಂದರು- ಕೃಷ್ಣ ನೀನಿಷ್ಟು ನಿಷ್ಠುರವಾಗಿ ನುಡಿಯ ಬೇಡ. ನಾವು ನಮ್ಮ ಎಲ್ಲ ಬಂಧುಗಳ ವಿರೋಧವನ್ನು ಲೆಕ್ಕಿಸದೆ, ನಿನ್ನ ಪಾದಗಳಿಂದ ಬೀಳುವ ನಿರ್ಮಾಲ್ಯ ತುಲಸಿಮಾಲೆಯನ್ನು ಎತ್ತಿಕೊಂಡು ಮುಡಿಯಲ್ಲಿ ಧರಿಸಲೆಂದೇ ಬಂದ್ದಿದೇವೆ ಹೀಗೆ ಬಂದಿರುವ ನಮ್ಮನ್ನು ಬಂಧುಗಳು ಸ್ವೀಕರಿಸಲಾರರು. ನಿನ್ನ ಕಾಲಿಗೆ ಬೀಳುತ್ತೇವೆ. ಅನುಗ್ರಹ ಮಾಡು. ನಿನ್ನ ಪಾದ ಕಮಲವನ್ನು ಹೊರತು ಬೇರೆ ಆಸರೆಯನ್ನು ನಾವು ಅರಸಿ ಹೋಗದಂತೆ ಮಾಡು.'

ಶ್ರೀಕೃಷ್ಣ ನುಡಿದ- 'ನನ್ನ ಬಳಿಗೆ ಬಂದಿರುವ ನಿಮ್ಮನ್ನು

ಬಂಧುಗಳು ತಿರಸ್ಕರಿಸಲಾರರು. ದೇವತೆಗಳೂ ಕೂಡ ನಿಮ್ಮನ್ನು ಸಾಧ್ವಿಯರೆಂದು ಸ್ವೀಕರಿಸುವರು. ಜೀವಿಗಳಿಗೆ ಪರಸ್ಪರ ಪ್ರೀತಿ ಅನುರಾಗ ಉಂಟಾ ಗಲು ಅಂಗಸಂಗವೇ ಕಾರಣವೆಂದಿಲ್ಲ ನನ್ನಲ್ಲಿ ಮನಸ್ಸಿಟ್ಟು ಬೇಗನೆ ನನ್ನನ್ನು ಹೊಂದುವಿರಿ. ಅದರಿಂದ ಈಗ ಹಿಂತಿರುಗಿರಿ.'

ವಿಪ್ರಪತ್ನಿಯರು ಯಾಗಶಾಲೆಗೆ ಹಿಂತಿರುಗಿದರು. ಅವರ ಪತಿಗಳು ಕೋಪಿಸಿಕೊಳ್ಳಲಿಲ್ಲ. ಅವರೊಂದಿಗೆ ಯಾಗವನ್ನು ಮುಂದುವರಿಸಿದರು.

ವಿಪ್ರ ಸ್ತ್ರೀಯರಲ್ಲಿ ಒಬ್ಬಳು ಮಾತ್ರ ಕೃಷ್ಣನ ಬಳಿಗೆ ಹೋಗಲಿಲ್ಲ. ಅವಳ ಪತಿ ಬಲಾತ್ಕಾರದಿಂದ ತಡೆದು ಬಿಟ್ಟಿದ್ದ. ಅವಳು ಕೃಷ್ಣನನ್ನು ಮನಸ್ಸಿನಲ್ಲೆ ಧ್ಯಾನಿಸಿ ಆಲಿಂಗಿಸಿ ಶರೀರ ತ್ಯಾಗ ಮಾಡಿದಳು. ಇದಕ್ಕಾಗಿಯೇ ಕೃಷ್ಣ ಹಸಿದಂತೆ ನಾಟಕವಾಡಿದ್ದ.

ವಿಪ್ರರು ಎಚ್ಚೆತ್ತುಕೊಂಡರು. ರಾಮಕೃಷ್ಣರು ಭಗವಂತನ ಅವತಾರ ವೆಂದು ನೆನೆದು ತಮ್ಮ ತಪ್ಪಿಗೆ ಪಶ್ಚಾತ್ತಾಪಪಟ್ಟರು. ಮನುಷ್ಯರಂತೆ ಹಸಿವನ್ನು ನಟಿಸಿ ಭಗವಂತ ಅನ್ನ ಬೇಡಿದಾಗ ತಾವು ಕೊಡದಿದ್ದುದು ದೊಡ್ಡ ತಪ್ಪು ಎಂದುಕೊಂಡರು. ತಮ್ಮ ಪತ್ನಿಯರಿಗಿರುವ ಭಕ್ತಿ ತಮಗಿಲ್ಲವಾಯಿತಲ್ಲ ಎಂದು ತಮ್ಮನ್ನು ತಾವೇ ಹಳಿದುಕೊಂಡರು. ನಮ್ಮ ಜನ್ಮಕ್ಕೆ ಕುಲಕ್ಕೆ ಪಾಂಡಿತ್ಯಕ್ಕೆ ಕರ್ಮನಿಷ್ಠೆಗೆ ಎಲ್ಲಕ್ಕೂ ಧಿಕ್ಕಾರವೆಂದರು. ಭಗವಂತನ ಮೋಹಕ ಶಕ್ತಿಗೆ ಬೆರಗಾದರು. ಲೋಕಕ್ಕೆ ಕರ್ತವ್ಯದ ಉಪದೇಶ ಮಾಡುವ ನಾವೇ ಕರ್ತವ್ಯದ ವಿಷಯದಲ್ಲಿ ಮೂಢರಾಗಿ ಕುಳಿತೆವು. ನಮ್ಮ ಪತ್ನಿಯರಿಗೆ ಉಪನಯನಾದಿ ಸಂಸ್ಕಾರವಿಲ್ಲ ಗುರುಕುಲವಾಸವಿಲ್ಲ ಆದರೂ ವಿಷ್ಣುಭಕ್ತಿ ಇದೆ. ನಮಗೆ ಇಲ್ಲ. ನಾವು ಸಂಸಾರ ಸುಖ ಸಂಪಾದನೆಯಲ್ಲಿಯೆ ನಿರತರಾಗಿ ಕರ್ತವ್ಯಚ್ಯುತರಾದೆವು. ಶ್ರೀಕೃಷ್ಣ ಎಚ್ಚರಿಸಿದರೂ ನಾವು ಎಚ್ಚರಗೊಳ್ಳಲಿಲ್ಲ. ಪೂರ್ಣಕಾಮನಾದ ಕೈವಲ್ಯಾದಿ ಸಕಲ ಪುರುಷಾರ್ಥದಾಯಕನಾದ ಜಗದೀಶನಿಗೆ ನಾವು ನೀಡುವ ತುತ್ತು ಅನ್ನದಿಂದ ಏನಾಗಬೇಕಾಗಿದೆ? ನಮ್ಮನ್ನು ಎಚ್ಚರಿಸಲೆಂದೇ ಅವನು ಆಡಿದ ನಾಟಕವಿದು. ಮಹಾಲಕ್ಷ್ಮಿಯೂ ಬೇರೆ ದೇವತೆಗಳನ್ನು ಬಿಟ್ಟು ಹರಿಯಲ್ಲಿಯೇ ಸ್ಥಿರವಾಗಿ ತನ್ನ

ಚಾಂಚಲ್ಯವನ್ನು ಬದಿಗಿಟ್ಟು ಸೇವೆ ಮಾಡುವಳೆಂದ ಮೇಲೆ ಅಂಥ ಶ್ರೀಕೃಷ್ಣ ಅನ್ನ ಬೇಡುವುದೆಂದರೇನು? ಯಾಗಗಳಲ್ಲಿ ದ್ರವ್ಯ ದೇಶ ಕಾಲ ಮಂತ್ರ ತಂತ್ರ ಮುಂತಾದುವೆಲ್ಲವೂ ಅವನ ಅಧೀನ. ಅವನೆ ಸಾಕ್ಷಾದ್ ಭಗವಾನ್ ವಿಷ್ಣು ಎಂಬುದನ್ನು ಕೇಳಿ ತಿಳಿದಿದ್ದರೂ ಮೂಢರಾದ ನಾವು ಅವನನ್ನು ಹಾಗೆ ಗುರುತಿಸದೆ ಹೋದವು. ಶ್ರೀಹರಿ, ನಿನ್ನ ಮೋಹಕ ಶಕ್ತಿಗೊಳಗಾಗಿ ಮೂಢರಾದ ನಾವು ಮಾಡಿದ ಅಪರಾಧವನ್ನು ಮನ್ನಿಸು' ಎಂದರು.

ರಾಮಕೃಷ್ಣರನ್ನು ದರ್ಶನ ಮಾಡಲು ಬಯಸಿದರು. ಆದರೂ ಕಂಸನ ಭಯದಿಂದ ಅಲ್ಲಿಯೇ ನಿಂತರು.

❖

ಅಧ್ಯಾಯ - ೨೨

ಅಧ್ಯಾಯ ಸಾರಾಂಶ

ಒಂದು ದಿನ ಗೋಪಾಲಕರು ಇಂದ್ರಯಜ್ಞ ನಡೆಸಲು ತೊಡಗಿದರು. ಅದನ್ನು ಶ್ರೀಕೃಷ್ಣ ಕಂಡು ವಿನಯದಿಂದ ಕೇಳಿದ, 'ಅಪ್ಪ, ಇದು ಯಾರ ಯಜ್ಞ? ಇದಕ್ಕೆ ಫಲವೇನು, ಸಾಧನವೇನು? ಜನರು ಕೆಲವರು ತಿಳಿದು ಕರ್ಮ ಮಾಡುತ್ತಾರೆ, ಕೆಲವರು ತಿಳಿಯದೇ ಮಾಡುತ್ತಾರೆ. ಆದರೆ ತಿಳಿಯದೆ ಮಾಡಿದರೆ ಫಲವಿಲ್ಲ. ಈಗ ನೀವು ಮಾಡುತ್ತಿರುವ ಕರ್ಮ ಶಾಸ್ತ್ರೋಕ್ತವೆ ಅಥವಾ ಲೋಕದಲ್ಲಿ ಎಲ್ಲರೂ ಮಾಡುತ್ತಿದ್ದಾರೆ ಎಂದು ನೀವೂ ಮಾಡುತ್ತಿರುವಿರ?'

ನಂದಗೋಪ ನುಡಿದ- 'ಭಗವಾನ್ ದೇವೇಂದ್ರ ಮಳೆಯ ದೇವತೆ. ಮಳೆ ಸುರಿಸುವುದಕ್ಕೂ ನಿಲ್ಲಿಸುವುದಕ್ಕೂ ಸಮರ್ಥ. ಅದರಿಂದ ಲೋಕದಲ್ಲಿ ಎಲ್ಲರೂ ಮಳೆಯಿಂದ ಬೆಳೆವ ಆಹಾರವಸ್ತುಗಳಿಂದ ಅವನನ್ನು ಆರಾಧಿಸುತ್ತಾರೆ, ನಾವೂ ಆರಾಧಿಸುತ್ತೇವೆ. ಪರಂಪರಾಗತವಾಗಿ ಬಂದ ಇಂಥ ಧರ್ಮಕಾರ್ಯವನ್ನು ಮಾಡದಿದ್ದರೆ ಕ್ಷೇಮ ವಿಲ್ಲ.'

ಭಗವಂತನ ಮೋಹಕ ಶಕ್ತಿಗೊಳಗಾಗಿ ದೇವೇಂದ್ರ ಶ್ರೀಕೃಷ್ಣನನ್ನು ಮಾನವನೆಂದು ತಿಳಿದಿದ್ದ. ಅವನ ಕಣ್ಣು ತೆರೆಸಲು ಶ್ರೀಕೃಷ್ಣ ಸಂಕಲ್ಪಿಸಿ ಗೊಲ್ಲರ ಮುಂದೆ ನುಡಿದ-

'ಕರ್ಮಫಲದಾಯಕ ಭಗವಂತ. ಕರ್ಮಾನುಸಾರವಾಗಿ ಜೀವಿಗಳನ್ನು ಅವನೆ ಹುಟ್ಟಿಸುತ್ತಾನೆ, ಬದುಕಿಸುತ್ತಾನೆ, ಸಾಯಿಸುತ್ತಾನೆ. ಬದುಕಿರುವಾಗ ಸುಖ ದುಃಖ ಭಯ ಕ್ಷೇಮವೆಲ್ಲವೂ ಅವನ ಅಧೀನವಾಗಿಯೇ ಉಂಟಾಗುತ್ತವೆ. ದೇವತೆಗಳು ಕರ್ಮಫಲ ನೀಡಬಹುದು. ಆದರೆ ಮರದಲ್ಲಿ ಹುಟ್ಟಿ ಮರವನ್ನೇ ಆಶ್ರಯಿಸಿರುವ ಹಣ್ಣಿನಂತೆ ದೇವತೆಗಳೂ ಭಗವಂತನಲ್ಲಿಯೇ ಹುಟ್ಟಿ ಭಗವಂತನನ್ನೇ ಆಶ್ರಯಿಸಿರುತ್ತಾರೆ. ಕಾಮ್ಯಕರ್ಮ ಮಾಡುವ ಅಜ್ಞಾನಿಗಳಿಗೆ ಫಲ ನೀಡುತ್ತಾರೆ.

ಜ್ಞಾನಿಗಳಿಗೆ ಮೋಕ್ಷರೂಪ ಫಲ ನೀಡಲು ಇವರು ಸಮರ್ಥರಲ್ಲ. ಅಜ್ಞಾನಿಗಳಿಗೆ ಫಲ ನೀಡುವಲ್ಲಿಯೂ ಇವರು ಸ್ವತಂತ್ರರಲ್ಲ. ಸ್ವತಂತ್ರವಾಗಿ ಫಲ ನೀಡುವವ ಭಗವಂತ. ಅವನು ನೀಡುವ ಫಲವನ್ನು ವ್ಯತ್ಯಾಸ ಮಾಡಲು ಅಶಕ್ತನಾದ ಈ ಇಂದ್ರನಿಂದ ನಮಗೆ ಏನಾಗಬೇಕಾಗಿದೆ? ಕರ್ಮ ಮಾಡುವ ಜನರು ಹರಿಯ ಅಧೀನರೇ ಆಗಿದ್ದು ಪ್ರವೃತ್ತಿ ಮಾಡುತ್ತಾರೆ. ಎಲ್ಲರಿಗೂ ಶತ್ರು ಮಿತ್ರ ಅಥವಾ ತಟಸ್ಥನು ಅವನೆ. ಶತ್ರುಮಿತ್ರ ತಟಸ್ಥರಲ್ಲಿ ಅವನೇ ಇದ್ದು ದುಃಖ ಸುಖ ಮುಂತಾದುವನ್ನು ಅವನೇ ಉಂಟುಮಾಡುತ್ತಾನೆ. ಹೀಗೆ ಬಂಧಕನೆನಿಸಿ ಗುರುವಾಗಿ ಜ್ಞಾನ ನೀಡಿ ಮೋಕ್ಷವನ್ನೂ ಅವನೇ ನೀಡುತ್ತಾನೆ. ಅವನನ್ನೇ ಆರಾಧಿಸಬೇಕು.

ತಮ್ಮ ಬದುಕಿಗೆ ಯಾವುದರಿಂದ ಹೆಚ್ಚು ಉಪಯೋಗವೋ ಅದೇ ಅವರಿಗೆ ಹರಿಯ ಆರಾಧನೆಗೆ ಮುಖ್ಯ ಪ್ರತೀಕವೆನಿಸುತ್ತದೆ. ಗೋರಕ್ಷಣ ಮಾಡಿ ಬದುಕುವ ವೈಶ್ಯರಿಗೆ ನಮಗೆ ಗೋವುಗಳೇ ಹರಿಯ ಆರಾಧನೆಗೆ ಮುಖ್ಯ ಪ್ರತೀಕ.

ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕಾರಣವಾದ ರಜೋಗುಣ ಸತ್ವಗುಣ ತಮೋಗುಣಗಳಿಗೆ ಮೂರಕ್ಕೂ ಮೂರು ರೂಪ ಗಳಿಂದ ಶ್ರೀಹರಿಯೇ ನಿಯಾಮಕನಾಗಿದ್ದಾನೆ. ಅವನ ರಜೋ ಗುಣ ನಿಯಾಮಕರೂಪದಿಂದ ಸೃಷ್ಟಿಯಾಗುತ್ತದೆ. ಮಳೆಬೆಳೆ ಗಳುಂಟಾಗುತ್ತವೆ. ಇದರಲ್ಲಿ ದೇವೇಂದ್ರನ ಪಾತ್ರವೇನಿದೆ?

ನಮಗೆ ಪಟ್ಟಣವಿಲ್ಲ. ಊರಿಲ್ಲ. ಮನೆ ಮಠಗಳಿಲ್ಲ. ಕಾಡುಗುಡ್ಡ ಗಳಲ್ಲಿ ವಲಸೆ ಹೋಗುವ ವನವಾಸಿಗಳು ನಾವು. ನಮಗೆ ಈ ಗೋವರ್ಧನ ಪರ್ವತವೆ ಆಶ್ರಯ. ಅದರಿಂದ ನಮ್ಮ ಬದುಕಿಗೆ ಮುಖ್ಯ ಆಧಾರರಾದ ಗೋಬ್ರಾಹ್ಮಣರನ್ನೂ ಗೋವರ್ಧನ ಪರ್ವತವನ್ನೂ ಆರಾಧಿಸುವುದೇ ಯುಕ್ತ. ಬೇರೆಯವರನ್ನು ಆರಾಧಿಸುವುದು ಯುಕ್ತವಲ್ಲ. ಪತಿಯನ್ನು ಹೊಂದಿರುವ ನಾರಿ ಪರಪುರುಷನನ್ನು ಆಶ್ರಯಿಸಿದರೆ ಕ್ಷೇಮವಿರುವುದಿಲ್ಲ ತಾನೆ? ಹಾಗೇ ಇದು. ಅದರಿಂದ ನಾವೀಗ ಇಂದ್ರಯಜ್ಞಕ್ಕೆ ಸಿದ್ಧಪಡಿಸಿರುವ ಸಾಮಗ್ರಿಗಳಿಂದ ಗೋವರ್ಧನ ಗಿರಿಯಜ್ಞವನ್ನೇ ನಡೆಸೋಣ. ವೇದ ಓದಿದ ಬ್ರಾಹ್ಮಣರಿಂದ

ಹೋಮ ಮಾಡಿಸಿ ಅವರಿಗೆ ಷಡ್ರಸಾನ್ನ ನೀಡೋಣ. ಗೋದಾನ ಮಾಡಿ ದಕ್ಷಿಣೆ ನೀಡೋಣ. ನಾಯಿ ಚಂಡಾಲ ಪತಿತರೂ ಸೇರಿದಂತೆ ಎಲ್ಲ ಜೀವಿಗಳಿಗೂ ಅನ್ನ ನೀಡಿ ಗೋವುಗಳಿಗೆ ಹುಲ್ಲು ತಿನ್ನಿಸಿ ಗೋವರ್ಧನ ಗಿರಿಗೆ ಅನ್ನ ಬಲಿ ನೀಡೋಣ. ನಾವೂ ಊಟ ಮಾಡಿ ಗಂಧಾಲಂಕಾರಗಳನ್ನು ಧರಿಸಿ ಗೋಬ್ರಾಹ್ಮಣ ಅಗ್ನಿಗಳಿಗೂ ಪರ್ವತಕ್ಕೂ ಪ್ರದಕ್ಷಿಣೆ ಮಾಡೋಣ.

ಅಪ್ಪ ಇದು ನನ್ನ ಅಭಿಪ್ರಾಯ. ಇದು ನಿಮಗೆ ಸರಿಯೆನಿಸಿದರೆ ಹಾಗೇ ಮಾಡಿರಿ. ಈ ಯಜ್ಞ ಗೋಬ್ರಾಹ್ಮಣರಿಗೂ ಪರ್ವತಕ್ಕೂ ನನಗೂ ಪ್ರಿಯವೆನಿಸುತ್ತದೆ.'

ನಂದಗೋಪನಿಗೆ ಕೃಷ್ಣನಾಡಿದ ಮಾತು ಸರಿ ಎನಿಸಿತು. ಎಲ್ಲರೂ ಕೃಷ್ಣ ಹೇಳಿದಂತೆಯೇ ನಡೆದುಕೊಂಡರು. ಸ್ವಸ್ತಿವಾಚನ ಮಾಡಿಸಿ ಇಂದ್ರ ಯಜ್ಞಕ್ಕಾಗಿ ಸಿದ್ಧಪಡಿಸಿದ ಸಾಮಗ್ರಿಗಳಿಂದಲೇ ಗಿರಿಯಜ್ಞ ನಡೆಸಿದರು. ಯಜ್ಞಶೇಷವನ್ನು ಉಂಡು ಗೊಲ್ಲರು ಅಲಂಕೃತರಾಗಿ ಬ್ರಾಹ್ಮಣರ ಆಶೀರ್ವಾದ ಪಡೆದು ಎತ್ತಿನ ಬಂಡಿಗಳನ್ನೇರಿ ಗಿರಿಗೆ ಪ್ರದಕ್ಷಿಣೆ ಗೈದರು.

ಈ ಗಿರಿಯಜ್ಞದಲ್ಲಿ ಗೊಲ್ಲರಿಗೆ ವಿಶ್ವಾಸ ಉಂಟು ಮಾಡುವುದಕ್ಕಾಗಿ ಶ್ರೀಕೃಷ್ಣ ಗಿರಿಯಂತೆ ದೊಡ್ಡ ಆಕಾರದ ರೂಪು ತಾಳಿ 'ನಾನು ಗೋವರ್ಧನಗಿರಿ' ಎನ್ನುತ್ತ ದೊಡ್ಡ ಅನ್ನದ ರಾಶಿಯನ್ನು ಭುಂಜಿಸಿದ. ಆ ರೂಪಕ್ಕೆ ಗೊಲ್ಲರೊಂದಿಗೆ ನಿಂತು ತಾನೂ ನಮಿಸಿ 'ನೋಡಿರಿ, ಇದೇನಾಶ್ಚರ್ಯ! ಗೋವರ್ಧನಗಿರಿ ದೇವತಾರೂಪು ತಳೆದು ನಮಗೆ ಅನುಗ್ರಹ ಮಾಡಿದ್ದಾನೆ! ಈ ಪರ್ವತರೂಪದ ಭಗವಂತ ತನ್ನನ್ನು ಅವಮಾನಿಸುವವರನ್ನು ನಾಶಮಾಡುತ್ತಾನೆ. ನಮ್ಮ ಮತ್ತು ಗೋವುಗಳ ಕ್ಷೇಮಕ್ಕಾಗಿ ಈತನನ್ನು ನಮಸ್ಕರಿಸೋಣ' ಎಂದ. ಹೀಗೆ ಶ್ರೀಕೃಷ್ಣ ಹೇಳಿದಂತೆ ಗೊಲ್ಲರು ಗಿರಿಯಜ್ಞ ಮಾಡಿ ಕೃಷ್ಣನೊಂದಿಗೆ ಗೋಕುಲಕ್ಕೆ ಹಿಂದಿರುಗಿದರು.

❖

ಶ್ರೀಕೃಷ್ಣನನ್ನು ಸಾಮಾನ್ಯ ಮಾನವನೆಂದುಕೊಂಡಿದ್ದ ಇಂದ್ರನ ಕಣ್ಣು ತೆರೆಸಲು ಶ್ರೀಕೃಷ್ಣ ಗೋಪಾಲಕರು ನಡೆಸಲು ಉದ್ದೇಶಿಸಿದ ಇಂದ್ರಯಾಗವನ್ನು ಬೇಡವೆನ್ನುತ್ತಾನೆ-

ಅಸ್ತಿ ಚೇದೀಶ್ವರಃ ಕಶ್ಚಿತ್ ಫಲರೂಪಃ ಸ ಕರ್ಮಣಃ ।
ಕರ್ತಾರಂ ಭಜತೇ ಸೋऽಪಿ ನ ಹ್ಯಕರ್ತುಃ ಪ್ರಭುರ್ಹಿ ಸಃ ॥ ೧೪ ॥

ಕರ್ಮಫಲದಾಯಕರು ಇಂದ್ರಾದಿ ಬೇರೆ ದೇವತೆಗಳಿದ್ದರೂ ಅವರೂ ಕೂಡ ಮರದಿಂದ ಹುಟ್ಟಿ ಮರವನ್ನೇ ಆಶ್ರಯಿಸಿರುವ ಹಣ್ಣಿನಂತೆ, ಭಗವಂತನಿಂದ ಹುಟ್ಟಿ ಭಗವಂತನನ್ನೇ ಆಶ್ರಯಿಸಿರುವವರು ಕಾಮ್ಯಕರ್ಮಕರ್ತನಾದ ಅಜ್ಞಾನಿಗೆ ಫಲ ನೀಡುತ್ತಾರೆ ಹೊರತು ಕಾಮ್ಯಕರ್ಮ ಮಾಡದ ಜ್ಞಾನಿಗೆ ಮೋಕ್ಷಫಲ ನೀಡಲು ಸಮರ್ಥರಾಗುವುದಿಲ್ಲ.

ಇಲ್ಲಿ [೧] ಶ್ರೀಧರ ವ್ಯಾಖ್ಯಾನ ಪ್ರಕಾರ ಕರ್ಮ ತಾನೇ ಫಲ ನೀಡಬಲ್ಲುದು. ಹಾಗೆ ವೇದ ಹೇಳಿದೆ ಎಂದಮೇಲೆ ಅದು ಹೇಗೆ ಎಂದು ಪ್ರಶ್ನೆ ಮಾಡಲು ಅವಕಾಶವಿಲ್ಲ. ಕರ್ಮ ಜಡವಾದ್ದರಿಂದ ಚೇತನನಾದ ಈಶ್ವರ ಬೇಕೆಂದರೂ ಅವನೂ ಕರ್ಮಕ್ಕೆ ಅಧೀನ. ಕರ್ಮ ಮಾಡಿದರೆ ಮಾತ್ರ ಫಲ ನೀಡಬಲ್ಲ. ಅದರಿಂದ ನಾವು 'ಇಂದ್ರ'ನನ್ನು ಅಂದರೆ ಈಶ್ವರನನ್ನು ಏಕೆ ಪೂಜಿಸಬೇಕು? ಎಂದು ಮೀಮಾಂಸಾಮತ ಪ್ರಕಾರ ಈಶ್ವರನನ್ನೇ ನಿರಾಕರಿಸುತ್ತಾರೆ.

ಆದರೆ ಇಂದ್ರಯಾಗ ಬೇಡವೆನ್ನಲು ಇದು ಸರಿಯಾದ ಕಾರಣವಾಗುವುದಿಲ್ಲ. ಜಡವಾದ ಇಂದ್ರಯಾಗವೆಂಬ ಕರ್ಮ ತಾನೇ ಮಳೆಗರೆಯಲಿ, ಇಲ್ಲವೆ, ಇಂದ್ರಯಾಗವನ್ನು ಮಾಡಿದ್ದಕ್ಕೆ ಚೇತನನಾದ ಇಂದ್ರನೇ ಮಳೆಗರೆಯಲಿ, ಎರಡೂ ಪಕ್ಷಗಳಲ್ಲಿ ಇಂದ್ರಯಾಗ ಬೇಕು ತಾನೆ?

'ಕರ್ಮ ತಾನೇ ಫಲ ನೀಡುತ್ತದೆ' ಎಂದು ವೇದ ಹೇಳಿದರೂ ಬ್ರಹ್ಮಸೂತ್ರದ

೧ ನನು ಜಡಾತ್ ಕರ್ಮಣಃ ಕೇವಲಾತ್ ಕಥಂ ಫಲಸಿದ್ಧಿಃ ಸ್ಯಾತ್? ಕರ್ಮಣಃ ಫಲಕರತ್ವೇ ವಚನತೋऽವಗತೇ ಕಿಂ ತತೋऽನುಪಪನ್ನಂ ನಾಮ? ಕೇಚಿತ್ ಪುನರತಿಸಾಹಸಾದ್ ಭೀತಾಃ ಕರ್ಮಪರತಂತ್ರಮೀಶ್ವರಂ ಮನ್ಯಂತೇ। ತನ್ಮತಮನೂದ್ಯ ನಿರಾಕರೋತಿ ಅಸ್ತಿಚೇದಿತಿ। ಸ್ವಯಂ ಕರ್ಮಭಿರ್ಲಿಪ್ತೋऽನ್ಯೇಷಾಂ ಜೀವಾನಾಂ ಕರ್ಮಣಾಂ ಫಲರೂಪೀ ಫಲದಾತಾ। ಸೋऽಪಿ ಕರ್ತಾರಂ ಭಜತೇ ತತ್ತತ್ಕರ್ಮ ಫಲದಾನೇನ। -ಶ್ರೀಧರಃ

ಅಭಿಮಾನ್ಯಧಿಕರಣ ನ್ಯಾಯದಿಂದ 'ಕರ್ಮನಿಯಾಮಕ ಪರಮಾತ್ಮ ತಾನೇ ಫಲ ನೀಡುತ್ತಾನೆ' ಎಂದೇ ಅದರ ಅಭಿಪ್ರಾಯ.

೧ ವೀರರಾಘವ ವ್ಯಾಖ್ಯಾನ ಪ್ರಕಾರ ಇಂದ್ರಾದಿ ದೇವತೆಗಳು ಫಲದಾಯಕರೇ ಅಲ್ಲ. ಅವರ ಅಂತರ್ಯಾಮಿಯಾದ ಭಗವಂತನೇ ಫಲದಾಯಕ. ಅವನೂ ಕರ್ಮಕ್ಕೆ ಅನುಸಾರವೆ ಫಲ ನೀಡುತ್ತಾನೆ. ಅದರಿಂದ ಭಗವಂತನನ್ನೇ ಕರ್ಮದಿಂದ ಆರಾಧಿಸೋಣ. ಇಂದ್ರನನ್ನೇಕೆ ಆರಾಧಿಸಬೇಕು? ಅವನೂ ನಮ್ಮಂತೆಯೆ ಕರ್ಮವಶನಾಗಿದ್ದು ದುಃಖಿಯೇ ಆಗಿದ್ದಾನೆ. ಅದರಿಂದ ಕರ್ಮಫಲದಾಯಕನಲ್ಲ. ಅವನ ಆರಾಧನೆ ನಮಗೆ ಬೇಡ.

ಆದರೆ, 'ತೃಪ್ತ ಏವೈನಮಿಂದ್ರಃ ಪ್ರಜಯಾ ಪಶುಭಿಸ್ತರ್ಪಯತೇ' ಎಂದು ಶ್ರುತಿವಾಕ್ಯವನ್ನು ಉದಾಹರಿಸಿ ಇಂದ್ರ ತೃಪ್ತನಾದರೆ ತನ್ನ ಆರಾಧಕರಿಗೆ ಫಲ ನೀಡುತ್ತಾನೆ ಎಂದು ಈ ವ್ಯಾಖ್ಯಾನಕಾರರೇ ಹೇಳಿದ್ದಾರೆ. ಇಂದ್ರ ಕರ್ಮವಶ, ದುಃಖಿ, ಫಲದಾಯಕನಾಗಲಾರ ಎಂದು ಭಾಗವತ ಶ್ಲೋಕದಲ್ಲಿ ಎಲ್ಲಿಯೂ ಹೇಳಿಲ್ಲ. ತಾವೇ ಹೇಳಿ, ಇಂದ್ರನ ಆರಾಧನೆ ಬೇಡವೆನ್ನುತ್ತಾರೆ. ಏಕೆ?

ಇಂದ್ರ ತೃಪ್ತನಾದರೂ ಫಲ ನೀಡಲು ಶಕ್ತನಲ್ಲ. ಅವನ ಅಂತರ್ಯಾಮಿಯೇ ಫಲ ನೀಡಬೇಕು ಎನ್ನುವುದು ನಿಜವೆ. ಆದರೆ ಅದರಿಂದ ಇಂದ್ರನ ಆರಾಧನೆ ಬೇಡವೆಂದಾಗುವುದಿಲ್ಲ. ಆರಾಧನೆಯಿಂದ ಇಂದ್ರ ತೃಪ್ತನಾದರೆ ತಾನೆ ಅವನ ಅಂತರ್ಯಾಮಿ ಫಲ ನೀಡುತ್ತಾನೆ?

---

೧ ತೃಪ್ತ ಏವೈನಮಿಂದ್ರಃ ಪ್ರಜಯಾ ಪಶುಭಿಸ್ತರ್ಪಯತೇ ಇತ್ಯಾದ್ಯುಕ್ತರೀತ್ಯಾ ಕರ್ಮಜನಿತ ನಿಗ್ರಹಾನುಗ್ರಹವತೀ ದೇವತೈವ ಸುಖದುಃಖಾದಿ ಹೇತುಃ ತತ್ರಾಹ ಅಸ್ತಿ ಚೇದಿತಿ । ಕಶ್ಚಿದೀಶ್ವರೋಽಸ್ತಿಚೇದಿತ್ಯನೇನ ಇಂದ್ರಸ್ಯಾನೀಶ್ವರತ್ವಮಭಿಪ್ರೇತಂ ಸಂಭಾವಿತಸ್ಯೇಶ್ವರಸ್ಯೈಕತ್ವಂ ಹಿ ವಿವಕ್ಷಿತಂ । ಇಂದ್ರಾದೀನಾಂ ಕಾರ್ಯತ್ವಕರ್ಮವಶ್ಯತ್ವ ದುಃಖಿತ್ವಾದೇಃ ಪ್ರತಿಪನ್ನತ್ವೇನ ಫಲದತ್ವಾಸಂಭವಾತ್ । ಅತ ಇಂದ್ರಾದ್ಯಂತರ್ಯಾಮೀ ಕಶ್ಚಿದೀಶ್ವರ ಏಕಃ ಫಲದಃ । ಸೋಽಪಿ ಕರ್ಮಾನುವರ್ತಿತ್ವೇನ ತತ್ಪರತಂತ್ರ ಇತಿ । ನ ಚೈವಮೀಶ್ವರಸ್ಯ ಸ್ವಾತಂತ್ರ್ಯಾದಿ ಭಂಗಃ। ಪೂರ್ವಪೂರ್ವ ಕರ್ಮವಾಸನಾನುರೋಧೇನ ಜೀವಪ್ರೇರಕತ್ವಾತ್ ತಸ್ಯ ಮೂಲಕಾರಣತ್ವಾತ್। ಈಶ್ವರಸ್ಯ ಕರ್ಮಪಾರತಂತ್ರ್ಯಕಥನಮನ್ವಯ ವ್ಯತಿರೇಕಾಭ್ಯಾಂ ಕರ್ಮಣಃ ಫಲಸಾಧನತ್ವಾಭಾವವ್ಯುದಾಸಾರ್ಥಂ। ನ ಚೈತಾವತೇಶ್ವರಸ್ಯ ಫಲದತ್ವವ್ಯುದಾಸಃ। ಕರ್ತಾರಂ ಭಜತೇ ಸೋಽಪೀತ್ಯನೇನ ತಸ್ಯಾಪಿ ಫಲದತ್ವಾವಗಮಾತ್। ಕರ್ಮಣಾಮೀಶ್ವರಾನುಗ್ರಹ ನಿಗ್ರಹ ದ್ವಾರಾ ಸುಖದುಃಖಾದಿ ಫಲಸಾಧನತ್ವಮೀಶ್ವರಸ್ಯ ತು ಸಾಕ್ಷಾದಿತಿ ವಿರೋಧಾಭಾವಾತ್ । - ವೀರರಾಘವಃ

ವಸ್ತುತಃ ಗೋಪಾಲಕರು ಮಾಡಲು ಹೊರಟಿರುವ ಇಂದ್ರಯಾಗವನ್ನು ಬೇಡವೆನ್ನಲು ಶ್ರೀಕೃಷ್ಣ ನೀಡುವ ಕಾರಣವಿದು- ಇಂದ್ರ ಭಗವಂತನಿಂದ ಹುಟ್ಟಿ ಭಗವಂತನನ್ನೇ ಆಶ್ರಯಿಸಿದವನು ಕೇವಲ ಕಾಮ್ಯಕರ್ಮಫಲ ನೀಡುತ್ತಾನೆ. ಇಂದ್ರಯಾಗ ಮಳೆಗಾಗಿ ಮಾಡುವ ಒಂದು ಕಾಮ್ಯಕರ್ಮ. ಅದನ್ನು ಮಾಡಬಾರದು. ನಿಷ್ಕಾಮಕರ್ಮದಿಂದ ಭಗವಂತನನ್ನೇ ಆರಾಧಿಸಬೇಕು. ಅದಕ್ಕೆ ಅವನೊಲಿದರೆ ಮಳೆಬೆಳೆಗಳನ್ನೂ ಅವನೆ ಕೊಡುತ್ತಾನೆ, ಮೋಕ್ಷವನ್ನೂ ಕೊಡುತ್ತಾನೆ. ಭುಕ್ತಿಮುಕ್ತಿ ಫಲಪ್ರದನಾದ ಸ್ವತಂತ್ರನಾದ ಮುಖ್ಯ ಈಶ್ವರನಾದ ಭಗವಂತನನ್ನು ಬಿಟ್ಟು ಕೇವಲ ಕಾಮ್ಯಕರ್ಮಫಲದಾಯಕನಾದ ಅಸ್ವತಂತ್ರನಾದ ಅಮುಖ್ಯ ಈಶ್ವರನಾದ ಇಂದ್ರನನ್ನು ಏಕೆ ಆರಾಧಿಸಬೇಕು? ಎಂದು.

ಫಲರೂಪಃ ಸ ಕರ್ಮಣ ಇತ್ಯವಾಂತರೇಶ್ವರ ವಿಷಯಂ ।

'ಫಲರೂಪಃ ಸ ಕರ್ಮಣಃ' ಎಂದು ಮುಂತಾಗಿ ಮುಖ್ಯಈಶ್ವರನನ್ನು ಮೀಮಾಂಸಾಮತ ಪ್ರಕಾರ ಶ್ರೀಕೃಷ್ಣ ನಿರಾಕರಿಸುತ್ತಿಲ್ಲ. ಮುಖ್ಯ ಈಶ್ವರನನ್ನು ಒಪ್ಪಿಕೊಂಡೇ ಅಮುಖ್ಯ ಈಶ್ವರರಾದ ಇಂದ್ರಾದಿ ದೇವತೆಗಳ ಆರಾಧನೆಯನ್ನು ಫಲಕಾಮನೆಯಿಂದ ಮಾಡುವುದನ್ನೇ ನಿರಾಕರಿಸುತ್ತಿದ್ದಾನೆ.

❖ ❖ ❖

ಗೋಪಾಲಕರು ನಡೆಸಲು ಉದ್ದೇಶಿಸಿದ ಇಂದ್ರಯಾಗವನ್ನು ಬೇಡವೆನ್ನಲು ಶ್ರೀಕೃಷ್ಣ ಕೊಡುವ ಕಾರಣಗಳು-

ಕಿಮಿಂದ್ರೇಣೇಹ ಭೂತಾನಾಂ ಸ್ವಸ್ವಕರ್ಮಾನುವರ್ತಿನಾಮ್ ।
ಅನೀಶೇನಾನ್ಯಥಾ ಕರ್ತುಂ ಸ್ವಭಾವವಿಹಿತಂ ನೃಣಾಮ್ ॥ ೧೫ ॥

ಸ್ವಭಾವತಂತ್ರೋ ಹಿ ಜನಃ ಸ್ವಭಾವಮನುವರ್ತತೇ ।
ಸ್ವಭಾವಸ್ಥಮಿದಂ ಸರ್ವಂ ಸದೇವಾಸುರಮಾನುಷಮ್ ॥ ೧೬ ॥

ದೇಹಾನುಚ್ಚಾವಚಾನ್ ಜಂತುಃ ಪ್ರಾಪ್ಯೋತ್ಸೃಜತಿ ಕರ್ಮಣಾ ।
ಶತ್ರುರ್ಮಿತ್ರಮುದಾಸೀನಃ ಕರ್ಮೈವ ಗುರುರೀಶ್ವರಃ ॥ ೧೭ ॥

ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ ।
ರಜಸೋತ್ಪದ್ಯತೇ ವಿಶ್ವಮನ್ಯೋನ್ಯಂ ವಿವಿಧಂ ಜಗತ್ ॥ ೨೦ ॥

ತಮ್ಮ ತಮ್ಮ ಕರ್ಮಾನುಸಾರವಾಗಿ ಭಗವಂತನಿಂದ ಫಲ ಹೊಂದುವ

ಜನರಿಗೆ, ಅವರ ಕರ್ಮಗಳಿಗೆ ಸ್ವತಂತ್ರನಾದ ಭಗವಂತ ನೀಡುವ ಫಲವನ್ನು, ಇಂದ್ರ ತನ್ನ ಇಚ್ಛಾನುಸಾರ ವ್ಯತ್ಯಾಸ ಮಾಡಲು ಶಕ್ತನಲ್ಲ. ಅಂಥ ಇಂದ್ರನಿಂದ ನಮಗೇನಾಗಬೇಕಾಗಿದೆ? ॥ ೧೫ ॥

ಕರ್ಮ ಮಾಡುವ ಜನರು ಸ್ವತಂತ್ರನಾದ ಹರಿಯ ಅಧೀನರಾಗಿದ್ದು ಸ್ವತಂತ್ರನಾದ ಆ ಹರಿಯನ್ನೇ ಅನುಸರಿಸಿ ಪ್ರವೃತ್ತಿ ಮಾಡುತ್ತಾರೆ. ಹೀಗಾಗಿ ದೇವ ದಾನವ ಮಾನವರಿಂದೊಡಗೂಡಿದ ಈ ಎಲ್ಲ ಜಗತ್ತು ಸ್ವತಂತ್ರನಾದ ಹರಿಯ ಆಸರೆಯಲ್ಲಿಯೇ ನಿಂತಿದೆ. ॥ ೧೬ ॥

ಜೀವಿಯು ಉತ್ತಮ ಅಥವಾ ಅಧಮ ಶರೀರಗಳನ್ನು ಕಾಮ್ಯಕರ್ಮಫಲದಾಯಕನಾದ ಹರಿಯಿಂದಲೇ ಪಡೆದು ಅವನಿಂದಲೇ ತ್ಯಾಗ ಮಾಡುತ್ತಾನೆ. ಅವನಿಗೆ ಶತ್ರು ಮಿತ್ರ ಅಥವಾ ಉದಾಸೀನನು ಆ ಹರಿಯೆ. ಶತ್ರು ಮಿತ್ರಾದಿಗಳಲ್ಲಿದ್ದು ದುಃಖ ಸುಖಾದಿಗಳನ್ನು ಅವನೇ ನೀಡುತ್ತಾನೆ. ಜೀವಿಗೆ ಹೀಗೆ ಬಂಧಕನೆನಿಸುತ್ತಾನೆ. ಮುಂದೆ ನಿಷ್ಕಾಮಕರ್ಮಫಲದಾಯಕನಾಗಿ ಆ ಹರಿಯೇ ಗುರುವಾಗಿ ಜ್ಞಾನ ನೀಡುತ್ತಾನೆ. ಕೊನೆಗೆ ಮೋಕ್ಷ ನೀಡಲು ಶಕ್ತನಾದ ಅವನೆ ಮೋಕ್ಷ ನೀಡುತ್ತಾನೆ. ॥ ೧೭ ॥

ಸತ್ತ್ವ ರಜಸ್ ತಮಸ್ ಎಂಬ ಗುಣಗಳಿಗೆ ನಿಯಾಮಕವಾದ ಮೂರು ವಿಷ್ಣುರೂಪಗಳು ಜಗತ್ತಿನ ಸ್ಥಿತಿ ಸೃಷ್ಟಿ ಲಯಗಳಿಗೆ ಕಾರಣವಾಗಿವೆ. ರಜೋನಿಯಾಮಕ ರೂಪದಿಂದ ಈ ಸಮಸ್ತ ಪ್ರಪಂಚ ಒಂದರಿಂದ ಇನ್ನೊಂದರಂತೆ ಕ್ರಮದಿಂದ ಹುಟ್ಟುತ್ತದೆ. ॥ ೨೧ ॥

ಇಲ್ಲಿ [೧]ಶ್ರೀಧರವ್ಯಾಖ್ಯಾನದಲ್ಲಿ ಹೀಗೆ ಹೇಳಿದೆ- 'ಕರ್ಮದಿಂದಲೆ ಫಲ ಸಿಗುತ್ತಿರುವಾಗ ಕರ್ಮಾಧೀನವಾಗಿಯೇ ಫಲ ನೀಡುವ, ಹೋತನ ಕತ್ತಿನಲ್ಲಿ ನೇತಾಡುವ ಮೊಲೆಯಂತಿರುವ, ಇಂದ್ರನಂಥ ದೇವತೆಯಿಂದ ನಮಗೆ ಏನಾಗ ಬೇಕಾಗಿದೆ? 'ಕರ್ಮದಲ್ಲಿ ನಮಗೆ ಪ್ರವೃತ್ತಿಯಾಗಬೇಕಿದ್ದರೂ ಅಂತರ್ಯಾಮಿಯ

---

೧ ಕರ್ಮಣ ಏವ ಫಲಸಿದ್ಧೇಃ ತತ್ಪಾರತಂತ್ರ್ಯೇಣ ಅಜಾಗಲಸ್ತನತುಲ್ಯತ್ವಾನ್ನ ದೇವತಯಾ ಕೃತ್ಯಮಿತ್ಯಾಹ ಕಿಮಿಂದ್ರೇಣೇತಿ। ನನು ಕರ್ಮಣೋಽಪಿ ಪ್ರವೃತ್ತಿರಂತರ್ಯಾಮ್ಯಪೇಕ್ಷೈವ। ಕಥಂ ಸರ್ವಥಾ ದೇವತಾಯಾ ಅನುಪಯೋಗ ಇತ್ಯಾಶಂಕ್ಯಾಹ ಸ್ವಭಾವವಿಹಿತಮಿತಿ। ಸ್ವಭಾವೇನ ಪ್ರಾಕ್ತನಸಂಸ್ಕಾರೇಣೈವ ವಿಹಿತಂ ಯತ್ಕರ್ಮ ತದನ್ಯಥಾಕರ್ತುಮನೀಶೇನ।

- ಶ್ರೀಧರಃ

ಪ್ರೇರಣೆ ಬೇಕಾಗುತ್ತದೆ' ಎನ್ನಬಾರದು. 'ಸ್ವಭಾವ' ಅಂದರೆ ಪೂರ್ವಕರ್ಮ ಸಂಸ್ಕಾರ. ಅದರಿಂದಲೇ ಕರ್ಮದಲ್ಲಿ ಪ್ರವೃತ್ತಿಯಾಗಬಹುದು. ಅದನ್ನು ವ್ಯತ್ಯಾಸ ಮಾಡಲು ಅಂತರ್ಯಾಮಿಯೂ ಶಕ್ತನಲ್ಲ.'

ಆದರೆ 'ಏಷ ಹ್ಯೇವ ಸಾಧು ಕರ್ಮ ಕಾರಯತಿ' ಎಂದು ಮುಂತಾಗಿ ಅಂತರ್ಯಾಮಿಯೇ ಕರ್ಮದಲ್ಲಿ ಪ್ರವೃತ್ತಿ ಮಾಡಿಸುತ್ತಾನೆ, ಪೂರ್ವಕರ್ಮ ಸಂಸ್ಕಾರಕ್ಕೆ ಅನುಗುಣವಾಗಿ, ಎಂದು ಶ್ರುತಿ ಹೇಳುವುದರಿಂದ ಅದಕ್ಕೆ ವ್ಯತಿರಿಕ್ತವಾಗಿ ವಾದಿಸಿದರೆ ಗೋಪಾಲಕರು ಒಪ್ಪಲಾರರು.

[೧]ವೀರರಾಘವ ವ್ಯಾಖ್ಯಾನದಲ್ಲಿ 'ಅಂತರ್ಯಾಮಿಯೇ ಕರ್ಮಾನುಗುಣ ಫಲದಾಯಕನೆಂಬುದನ್ನು ಒಪ್ಪೋಣ. ಅದಕ್ಕೆ ಅಸಮರ್ಥನಾದ ಇಂದ್ರನನ್ನೇಕೆ ಆರಾಧಿಸಬೇಕು?' ಎಂದು ಹೇಳಿದೆ. ಆದರೆ ಇಂದ್ರ ತೃಪ್ತನಾದಾಗಲೇ ಅವನೊಳಗಿರುವ ಅಂತರ್ಯಾಮಿ ಫಲ ಕೊಡುತ್ತಾನೆ. ಅದರಿಂದ ಇಂದ್ರನ ಆರಾಧನೆಬೇಕು. ಮಳೆ ಬರಬೇಕಾದರೆ ಇಂದ್ರನೊಲಿಯಬೇಕೆಂದು ವೇದ ಹೇಳಿದೆ.

[೨]'ಕರ್ಮವೆಂದರೆ ದೇವತಾರಾಧನೆ, ದೇವತೆಯೆ ಇಲ್ಲವೆಂದರೆ ದೇವತಾರಾಧನೆ ಹೇಗೆ ನಡೆಯುತ್ತದೆ ಎಂದರೆ ದೇವತಾರಾಧನೆ ಎಂಬ ಕರ್ಮದ ಸಿದ್ಧಿಗಾಗಿ ಮಾತ್ರ ದೇವತೆಯನ್ನೊಪ್ಪೋಣ. ಫಲವನ್ನು ಕರ್ಮವೇ ಕೊಡುತ್ತದೆ' ಎಂದು ಶ್ರೀಧರವ್ಯಾಖ್ಯಾನದಲ್ಲಿ ಹೇಳಿದೆ. ಆದರೆ ಹಿಂದೆ ಹೇಳಿದಂತೆ, ದೇವತಾರಾಧನೆಯೇ ಫಲವನ್ನು ಕೊಡಲಿ, ದೇವತೆಯೆ ಫಲ ನೀಡಲಿ, ಎರಡೂ ಪಕ್ಷಗಳಲ್ಲಿ ಇಂದ್ರಯಾಗವನ್ನು ಮಾಡಲೇಬೇಕು ತಾನೆ?

'ಸತ್ವಂ ರಜಸ್ತಮ ಇತಿ' ಎಂಬ ಶ್ಲೋಕದಲ್ಲಿ ನಿರೀಶ್ವರ ಸಾಂಖ್ಯಮತವನ್ನಿಟ್ಟು ಕೊಂಡು ಈಶ್ವರನಿಲ್ಲದಿದ್ದರೂ ಪ್ರಪಂಚದ ಉತ್ಪತ್ತಿಸ್ಥಿತಿಲಯಗಳು ತ್ರಿಗುಣಗಳಿಂದಲೇ ಆಗುತ್ತಿರುವಾಗ ಇಂದ್ರನೇಕೆ ಬೇಕು ಎಂದು ಶ್ರೀಧರವ್ಯಾಖ್ಯಾನ ವಿವರಣೆ ನೀಡುತ್ತದೆ. ಆದರೆ ನಿರೀಶ್ವರ ಸಾಂಖ್ಯ ಮತವನ್ನಿಟ್ಟುಕೊಂಡು ವಾದಿಸಿದರೆ ಈಶ್ವರನನ್ನು ಒಪ್ಪುವ ಗೋಪಾಲಕರು ಸುಮ್ಮನಿರುವರೆ? ಮತ್ತು ಈಶ್ವರನಿಲ್ಲದಿದ್ದರೂ ಇಂದ್ರನಿದ್ದಾನೆ. ಅವನ ಆರಾಧನೆ ಏಕೆ ಬೇಡ?

---

೧ ರಾಜಾದಿ ಸ್ವಭಾವಾನುಗುಣ ಪುಣ್ಯಪಾಪಾತ್ಮಕ ಕರ್ಮಾನುವರ್ತಿನಾಂ ಭೂತಾನಾಮಿಂದ್ರೇಣ ಕಿಂ ? ಕರ್ಮಜನಿತ ನಿಗ್ರಹಾನುಗ್ರಹವಾನೀಶ್ವರ ಏವ ಫಲದ ಇತಿ ಚೇತ್ ಅಸ್ತ್ವೇವಮೀಶ್ವರಃ। ಕಿಮಿಂದ್ರೇಣಾನೀಶ್ವರೇಣ ? -ವೀರರಾಘವಃ

೨ ನನು ದೇವತೋದ್ದೇಶೇನ ದ್ರವ್ಯತ್ಯಾಗಾತ್ಮಕತ್ವಾತ್ ಕರ್ಮಣಃ ಕಥಂ ದೇವತಾಂ ವಿನಾಪಿ ಸಿದ್ಧಿರಿತ್ಯಾಶಂಕ್ಯಾಹ ಕರ್ಮಾಂಗಮಾತ್ರಂ ದೇವತೇತಿ। -ಶ್ರೀಧರಃ

ಅದರಿಂದ ಇಲ್ಲಿ 'ಸ್ವಭಾವ' ಎಂದರೆ ಸ್ವಭಾವ ನಿಯಾಮಕನಾದ ಸ್ವತಂತ್ರನಾದ ಪರಮಾತ್ಮ. 'ಕರ್ಮ' ಎಂದರೆ ಕರ್ಮಫಲದಾತನಾದ ಪರಮಾತ್ಮ. 'ಸತ್ವ ರಜಸ್ ತಮಸ್' ಎಂದರೂ ಆ ಗುಣಗಳನ್ನು ನಿಯಂತ್ರಿಸುವ ಅದೇ ಹೆಸರಿನ ಮೂರು ಭಗವದ್ರೂಪಗಳು. ಅದರಿಂದ ಪರಮಾತ್ಮನೆ ಸ್ವತಂತ್ರವಾಗಿ ಜೀವಿಗಳಿಗೆ ಕರ್ಮಾನುಗುಣವಾಗಿ ಫಲ ನೀಡುತ್ತ ಜಗತ್ತಿನ ಸೃಷ್ಟಿಸ್ಥಿತಿಲಯಗಳನ್ನು ತ್ರಿಗುಣ ನಿಯಾಮಕವಾದ ಮೂರು ರೂಪಗಳಿಂದ ನಡೆಸುತ್ತಿರುವಾಗ ಅಸ್ವತಂತ್ರರಾದ ಇಂದ್ರಾದಿ ದೇವತೆಗಳಿಂದ ನಮಗೆ ಏನಾಗಬೇಕಾಗಿದೆ? ಪರಮಾತ್ಮನನ್ನೇ ಆರಾಧಿಸೋಣ ಎನ್ನುತ್ತಾನೆ ಶ್ರೀಕೃಷ್ಣ. ಇದು ತಂತ್ರಭಾಗವತದಲ್ಲಿ ಸ್ಪಷ್ಟವಿದೆ-

ಸ್ವಭಾವೇ ಕರ್ಮಣಿ ಚ ಯಃ ಸತ್ವಾದಿಷು ಗುಣೇಷು ಚ ।
ಸ್ಥಿತೋ ವಿಷ್ಣುಃ ಸರ್ವಕರ್ತಾ ಪೃಥಕ್ ಸಂಸ್ಥಶ್ಚ ಸರ್ವಶಃ ।
ಗುಣಕರ್ಮಸ್ವಭಾವಾದಿಶಬ್ದವಾಚ್ಯಶ್ಚ ಕೇಶವಃ ।
ತೇನ ಜಾತಂ ಫಲಂ ಯಸ್ಮಾತ್ ಕರ್ಮಣಃ ಫಲಮೀರ್ಯತೇ ।
ನ ಚಾಸೌ ಕರ್ಮಫಲವಾನ್ ನಾಸ್ಯ ಕಿಂಚಿನ್ನ ಶಕ್ಯತೇ ।
ತದನ್ಯಾವಾಂತರೇಶಾನಾಂ ತದ್ವಶತ್ವಂ ಯತಃ ಸದಾ ।
ಕರ್ಮಣಃ ಫಲರೂಪತ್ವಮತಸ್ತೇಷಾಮುದೀರ್ಯತೇ ।
ನಾನ್ಯಕರ್ಮವಶತ್ವಂ ತು ತೇಷಾಂ ವಿಷ್ಣುಂ ವಿನಾ ಕ್ವಚಿತ್ ॥

ಸ್ವಭಾವ ಕರ್ಮ ಮತ್ತು ಸತ್ವಾದಿಗುಣಗಳಲ್ಲಿದ್ದು ಪೂರ್ಣಸುಖನಾಗಿಯೇ ಇರುವ ವಿಷ್ಣು ಅವುಗಳಿಗಿಂತ ಬೇರೆಯಾಗಿಯೂ ಇದ್ದು ಸರ್ವಕರ್ತನೂ ಆಗಿರುತ್ತಾನೆ. ಗುಣ ಕರ್ಮ ಸ್ವಭಾವ ಪ್ರಕೃತಿ ಮುಂತಾದ ಶಬ್ದಗಳಿಂದ ಮುಖ್ಯವಾಗಿ ಕರೆಸಿಕೊಳ್ಳುತ್ತಾನೆ.

'ಫಲರೂಪಃ ಸ ಕರ್ಮಣಃ' ಎಂಬಲ್ಲಿ 'ಕರ್ಮದ ಫಲ'ವೆಂದರೆ ಕರ್ಮನಿಯಾಮಕನಾದ ಪರಮಾತ್ಮನ ಅನುಗ್ರಹದಿಂದ ಶರೀರಾದಿ ಫಲವನ್ನು ಇಂದ್ರಾದಿ ದೇವತೆಗಳು ಪಡೆದಿರುತ್ತಾರೆ ಎಂದರ್ಥ. ಪರಮಾತ್ಮನೇ ಕರ್ಮಫಲಭಾಗಿ ಎಂದಲ್ಲ.

'ನ ಹ್ಯಕರ್ತುಃ ಪ್ರಭುರ್ಹಿ ಸಃ' ಎಂಬಲ್ಲಿ ಹೇಳಿದ್ದು ವಿಷ್ಣುವಿನ ಬಗ್ಗೆ ಅಲ್ಲ. ಅವನಿಗೆ ಅಶಕ್ಯವೇನೂ ಇಲ್ಲದ್ದರಿಂದ 'ನಪ್ರಭುಃ' ಎಂದು ಅವನನ್ನು ಹೇಳುವಂತಿಲ್ಲ. 'ಅಕರ್ತುಃ' ಕಾಮ್ಯಕರ್ಮ ತ್ಯಜಿಸಿರುವ ಜ್ಞಾನಿಗೆ 'ಪ್ರಭುಃ' ಮೋಕ್ಷ ರೂಪಫಲ ಕೊಡಲು ಸಮರ್ಥನು 'ನ' ಇಂದ್ರನಲ್ಲ ಎಂದು ಅಲ್ಲಿ ಹೇಳಿದೆ.

ವಿಷ್ಣುವಿಗಿಂತ ಬೇರೆ ಇಂದ್ರಾದಿ ಅಮುಖ್ಯ ಈಶ್ವರರು ಕರ್ಮನಿಯಾಮಕನಾದ ವಿಷ್ಣುವಿನ ವಶರಾದ್ದರಿಂದ 'ಕರ್ಮಫಲರೂಪ'ರೆಂದು ಅವರನ್ನು ಭಾಗವತ ಕರೆದಿದೆ. ಇಲ್ಲಿ ಕರ್ಮವೆಂದರೆ ಕರ್ಮನಿಯಾಮಕನಾದ ಹರಿಯೇ ಹೊರತು ಜಡವಾದ ಕರ್ಮವಲ್ಲ. ಜಡವಾದ ಕರ್ಮಕ್ಕೆ ಅವರು ವಶರಲ್ಲ. ಅವರು ಅದಕ್ಕೆ ಅಭಿಮಾನಿಗಳು, ನಿಯಾಮಕರು.

❖ ❖ ❖

ಇಂದ್ರಯಜ್ಞ ಬೇಡ ಗಿರಿಯಜ್ಞವನ್ನು ಮಾಡಿರೆಂದು ಶ್ರೀಕೃಷ್ಣ ಗೋಪಾಲಕರಿಗೆ ಉಪದೇಶಿಸುತ್ತಾನೆ-

ತಸ್ಮಾದ್‌ಗವಾಂ ಬ್ರಾಹ್ಮಣಾನಾಮದ್ರೇಶ್ಚಾರಭ್ಯತಾಂ ಮಖಃ।
ಯ ಇಂದ್ರಯಾಗಸಂಭಾರಾಸ್ತೈರಯಂ ಸಾಧ್ಯತಾಂ ಮಖಃ ॥ ೨೫ ॥

ಇಂದ್ರನಿಂದ ನಮಗೆ ಏನೂ ಫಲವಿಲ್ಲದುದರಿಂದ ನಮ್ಮ ಬದುಕಿಗೆ ಮುಖ್ಯ ಆಧಾರವೆನಿಸಿರುವ ಈ ಗೋವುಗಳ ಬ್ರಾಹ್ಮಣರ ಮತ್ತು ಗೋವರ್ಧನ ಪರ್ವತದ ಪ್ರತೀಕದಲ್ಲಿ ಹರಿಯ ಆರಾಧನೆ ಮಾಡೋಣ. ಇಂದ್ರನ ಆರಾಧನೆಗೆ ಸಂಗ್ರಹವಾಗಿರುವ ಸಾಮಗ್ರಿಗಳಿಂದಲೇ ಈ ಆರಾಧನೆ ನಡೆಸೋಣ.

[೧]ಶ್ರೀಧರ ವ್ಯಾಖ್ಯಾನ ಹೇಳುತ್ತದೆ- 'ಶ್ರೀಕೃಷ್ಣ ತಾನೇ ಹೊಸದಾಗಿ ಕಲ್ಪಿಸಿದ ಗಿರಿಯಜ್ಞದ ವಿಧಿವಿಧಾನಗಳನ್ನು ತಾನೇ ಹೇಳುತ್ತಾನೆ' ಎಂದು. ಇದು ಗಿರಿಯಜ್ಞ ಶ್ರುತಿಸ್ಮೃತಿ ವಿಹಿತವಲ್ಲ ಎನ್ನುವ ಅಭಿಪ್ರಾಯದ್ದಾದರೆ ಅದು ತಪ್ಪು. ಶ್ರುತಿಸ್ಮೃತಿ ಎಲ್ಲವೂ ಭಗವಂತನದೇ ಆಜ್ಞೆ. ಇಂದ್ರಯಜ್ಞವನ್ನೂ ಅವನೇ ಕಲ್ಪಿಸಿ ವೇದದ ಮೂಲಕ ಹೇಳಿದ್ದಾನೆ. ಗಿರಿಯಜ್ಞವನ್ನು ಇದೀಗ ಕಲ್ಪಿಸಿ ತಾನೇ ಹೇಳುತ್ತಿದ್ದಾನೆ. ಇಂದ್ರಯಜ್ಞಕ್ಕೆ ಇಂದ್ರನೊಳಗಿರುವ ಇಂದ್ರನಾಮಕ ಶ್ರೀಕೃಷ್ಣ ದೇವತೆ. ಗೋಬ್ರಾಹ್ಮಣಗಿರಿಯಜ್ಞಗಳಿಗೆ ತದಂತರ್ಗತ ಗೋಬ್ರಾಹ್ಮಣಗಿರಿನಾಮಕ ಶ್ರೀಕೃಷ್ಣನೇ ದೇವತೆ. ಇಷ್ಟೇ ವ್ಯತ್ಯಾಸ. ಇದು ತಂತ್ರಭಾಗವತ ವಚನದಿಂದ ಸ್ಪಷ್ಟವಾಗುತ್ತದೆ.

ಸ ಚ ಬ್ರಾಹ್ಮಣಗಿರ್ಯಾದಿನಾಮಾ ವಿಷ್ಣುರಜಃ ಪರಃ।
ಏತಸ್ಮಾತ್ ಕಾರಣಾತ್ ಕೃಷ್ಣಃ ಶಕ್ರಸ್ಯ ವಿಮದಾಯ ತು।
ಗಿರ್ಯಾದಿಸ್ಥಿತಮಾತ್ಮಾನಂ ಪೂಜಯಾಮಾಸ ಬಲ್ಲವೈಃ॥

---

೧ ಸ್ವಯಮುತ್ಪ್ರೇಕ್ಷಿತಯಾಗಕಲ್ಪಮಾಹ ಯ ಇಂದ್ರಯಾಗಸಂಭಾರಾ ಇತಿ। -ಶ್ರೀಧರಃ

'ಇಂದ್ರಾದಿಗಳನ್ನು ಬಿಟ್ಟು, ಕರ್ಮನಾಮಕ ಹರಿಯನ್ನು ಆರಾಧಿಸುವುದು ಉಚಿತವಾಗಿದ್ದರೂ ಗೋ ಬ್ರಾಹ್ಮಣ ಗಿರಿ ಯಜ್ಞಗಳನ್ನು ನಡೆಸುವುದು ಅಯುಕ್ತವಲ್ಲ. ಏಕೆಂದರೆ ಬ್ರಾಹ್ಮಣ ಗಿರಿ ಮುಂತಾದವುಗಳಲ್ಲಿ ಬ್ರಾಹ್ಮಣ ಗಿರಿ ಮುಂತಾದ ನಾಮಗಳಿಂದ ಹರಿಯೇ ಇದ್ದು ಪೂಜಿಸಿಕೊಳ್ಳುತ್ತಾನೆ. ಶ್ರೀಕೃಷ್ಣ ಗೋಪಾಲಕರಿಗೆ ಈ ಕಾರಣವನ್ನು ತೋರಿಸಿ, ಇಂದ್ರನ ಅಹಂಕಾರವನ್ನು ಕಳೆಯುವುದಕ್ಕಾಗಿ, ಗಿರಿ ಮುಂತಾದವುಗಳಲ್ಲಿದ್ದ ತನ್ನನ್ನೇ ಗೋಪಾಲಕರಿಂದ ಪೂಜಿಸಿಕೊಂಡ.'

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ದ್ವಾವಿಂಶೋಽಧ್ಯಾಯಃ

❖

ಅಧ್ಯಾಯ - ೨೩

ಅಧ್ಯಾಯ ಸಾರಾಂಶ

ದೇವೇಂದ್ರ ತನ್ನ ಪೂಜೆ ನಿಂತುಹೋದುದಕ್ಕೆ ಗೊಲ್ಲರ ಮೇಲೆ ಕೋಪಗೊಂಡ. ಗೋಕುಲದ ಮೇಲೆ ಆಕ್ರಮಣ ಗೈಯಲು ಜಲಪ್ರಳಯವನ್ನೇ ಮಾಡಬಲ್ಲ ಪ್ರಳಯಕಾಲದ ಮೋಡಗಳನ್ನು ಕಳಿಸಿದ. 'ಈ ಅಲೆಮಾರಿಗಳಾದ ಗೊಲ್ಲರಿಗೆ ಎಷ್ಟು ಅಹಂಕಾರ? ಸಾಮಾನ್ಯ ಮಾನವನಾದ ಕೃಷ್ಣನ ಆಸರೆಯನ್ನು ನಂಬಿ ದೇವೋತ್ತಮನಾದ ನನ್ನನ್ನು ಅವಮಾನಿಸಿದ್ದಾರೆ! ಅಲ್ಪಜ್ಞಾನದಿಂದ ಅಹಂಕಾರಿಗಳಾದ ಜನರು ಅಪರೋಕ್ಷ ಜ್ಞಾನಸಾಧನವಾದ ಪರವಿದ್ಯೆಯನ್ನು ಬಿಟ್ಟು ಕಾಮ್ಯಕರ್ಮವೆಂಬ ಮುರುಕು ದೋಣಿಯಿಂದ ಸಂಸಾರ ಸಾಗರವನ್ನು ದಾಟಲು ಹೊರಡುತ್ತಾರೆ. ಹಾಗೇ ಈ ಗೊಲ್ಲರು ನನ್ನ ಪೂಜೆಯನ್ನು ಬಿಟ್ಟು ಪರ್ವತವನ್ನು ಪೂಜಿಸಿದ್ದಾರೆ.

ಕೃಷ್ಣ ತುಂಬ ಮಾತನಾಡುತ್ತಾನೆ. ಮಹಾಗರ್ವಿ. ನನ್ನ ಸಾಮರ್ಥ್ಯ ಅವನಿಗೆ ತಿಳಿಯದು. ತಾನೊಬ್ಬನೆ ಪಂಡಿತನೆಂದು ಕೊಂಡು ಅಹಂಕಾರಪಡುತ್ತಾನೆ. ಸ್ವತಃ ತಾನೊಬ್ಬ ಮಾನವ. ಈ ಗೊಲ್ಲರಿಗೂ ಐಶ್ವರ್ಯದ ಮದ. ಕೃಷ್ಣನ ಉಪದೇಶದಿಂದ ಅದು ಇನ್ನೂ ಹೆಚ್ಚಿದೆ. ಮೋಡಗಳೆ, ನೀವು ಇವರ ಐಶ್ವರ್ಯ ಮದವನ್ನು ಇಳಿಸಿರಿ, ಗೋವುಗಳನ್ನು ನಾಶಪಡಿಸಿರಿ. ನಾನೂ ಐರಾವತವನ್ನೇರಿ ಮರುದ್ ಗಣಗಳೊಂದಿಗೆ ಗೋಕುಲಕ್ಕೆ ನಿಮ್ಮ ಹಿಂದೆಯೇ ಬರುತ್ತೇನೆ. ನಂದಗೋಪನ ದನಗಳ ಕೊಟ್ಟಿಗೆಗಳನ್ನು ನಾಶ ಪಡಿಸುತ್ತೇನೆ' ಎಂದ.

ದೇವೇಂದ್ರನ ಆಜ್ಞೆಯಂತೆ ಮೋಡಗಳು ಧಾರಾಕಾರವಾಗಿ ಮಳೆ ಸುರಿಸಿದುವು. ಮಿಂಚು ಗುಡುಗು ಚಂಡಮಾರುತ ಗಳೊಂದಿಗೆ ಭೀಕರ ಆಲಿಕಲ್ಲಿನ ಮಳೆ. ಮನೆಯ ಕಂಬದ ಗಾತ್ರದ ನಿರಂತರ ಜಲಧಾರೆ. ಅತಿವೃಷ್ಟಿ ಚಂಡಮಾರುತಗಳಿಂದ ಗೋವು ಗಳೂ ಗೋಪಗೋಪಿಯರೂ ಚಳಿಯಿಂದ ನಡುಗಿದರು. ಎಲ್ಲರೂ ಕೃಷ್ಣನನ್ನು ಮೊರೆಹೊಕ್ಕರು.

'ಇದು ಕುಪಿತನಾದ ಇಂದ್ರನ ಕೃತ್ಯ. ಆತ ಐಶ್ವರ್ಯ ಮದದಿಂದ ತಾನೆ ಜಗದೊಡೆಯನೆಂದುಕೊಂಡಿದ್ದಾನೆ. ಅವನ ಮದಕ್ಕೆ ಕಾರಣವಾದ ಅಜ್ಞಾನವನ್ನು ನಾನು ತೊಲಗಿಸಬೇಕು. ನನ್ನ ಭಕ್ತರಾದ ಇಂದ್ರನಂಥ ದೇವತೆಗಳಿಗೆ ಇಂಥ ಅಹಂಕಾರ ಸಲ್ಲದು. ಅದರಿಂದ ಅವರ ದರ್ಪ ಮುರಿಯಬೇಕು. ಆಗ ಅವರಿಗೆ ನನ್ನಲ್ಲಿ ಭಕ್ತಿ ಹೆಚ್ಚುವುದು. ಅದರಿಂದ ನನ್ನನ್ನೇ ನಂಬಿರುವ ಗೋಕುಲ ವನ್ನು ಕಾಪಾಡುವೆನು. ಶರಣಾಗತರ ರಕ್ಷಣೆ ನನ್ನದೊಂದು ವ್ರತವಾಗಿದೆ' ಎಂದು ಶ್ರೀಕೃಷ್ಣ ತನಗೆ ತಾನೇ ಹೇಳಿಕೊಂಡ. ಒಂದು ಕೈಯಿಂದ ಗೋವರ್ಧನ ಪರ್ವತವನ್ನು ಕಿತ್ತು ಮಕ್ಕಳು ನಾಯಿಕೊಡೆಯನ್ನು ಎತ್ತಿ ಹಿಡಿಯುವಂತೆ ಅನಾಯಾಸವಾಗಿ ಎತ್ತಿಹಿಡಿದು ನುಡಿದ.

'ಅಮ್ಮ, ಅಪ್ಪ, ಎಲ್ಲ ಗೋಕುಲ ನಿವಾಸಿಗಳೆ, ಎಲ್ಲರೂ ನಿಮ್ಮ ಗೋವುಗಳೊಂದಿಗೆ ಬಂದು ಈ ಬೆಟ್ಟದ ಕೆಳಭಾಗದಲ್ಲಿ ನೆಮ್ಮದಿ ಯಿಂದ ಇರಿ. ಇಲ್ಲಿ ಗಾಳಿ ಮಳೆಗಳ ಭಯವಿಲ್ಲ. ಬೆಟ್ಟ ನನ್ನ ಕೈಯಿಂದ ಬೀಳಬಹುದೆಂದೂ ಭಯಪಡಬೇಕಾಗಿಲ್ಲ.' ಗೊಲ್ಲ ರೆಲ್ಲರೂ ತಮ್ಮ ಗೋವುಗಳೊಂದಿಗೆ ಮತ್ತು ಗೃಹಸಾಮಗ್ರಿ ಗಳೊಂದಿಗೆ ಬೆಟ್ಟದ ಕೆಳಭಾಗದಲ್ಲಿ ವಿಶಾಲವಾದ ಅವಕಾಶದಲ್ಲಿ ಪ್ರವೇಶಿಸಿ ಹಸಿವು ನೀರಡಿಕೆಗಳನ್ನು ಮರೆತು ಕೃಷ್ಣನನ್ನೇ ನೋಡಿದರು. ಅವನೂ ಒಂದು ಹೆಜ್ಜೆಯೂ ಕದಲದೆ ಏಳು ದಿನಗಳ ಕಾಲ ಬೆಟ್ಟವನ್ನು ಎತ್ತಿಹಿಡಿದು ನಿಂತ.

ಶ್ರೀಕೃಷ್ಣನ ಸಾಮರ್ಥ್ಯವನ್ನು ಕಂಡು ದೇವೇಂದ್ರ ಆಶ್ಚರ್ಯ ಪರವಶನಾದ. ದರ್ಪವನ್ನು ಬದಿಗಿಟ್ಟ. ತನ್ನ ಯೋಜನೆಗಳು ಪೂರ್ತಿ ವಿಫಲಗೊಂಡುದರಿಂದ ಮೋಡಗಳನ್ನು ತಡೆದು ನಿಲ್ಲಿಸಿದ.

ಮೋಡವಿಲ್ಲದ ಸ್ವಚ್ಛವಾದ ಆಕಾಶದಲ್ಲಿ ಸೂರ್ಯ ಉದಿಸಿ ದ್ದಾನೆ. ಶ್ರೀಕೃಷ್ಣನೆಂದ, 'ಗೊಲ್ಲರೆ, ಈಗ ನೀವು ನಿಮ್ಮ ಪರಿವಾರ ಸಹಿತವಾಗಿ ಇಲ್ಲಿಂದ ಹೊರಗೆ ಹೋಗಿರಿ. ಭಯಪಡಬೇಡಿರಿ' ಗೊಲ್ಲರೆಲ್ಲರೂ ಹೊರಗೆ ಹೋದ ಬಳಿಕ ಶ್ರೀಕೃಷ್ಣ ಬೆಟ್ಟವನ್ನು ಹಿಂದಿನಂತೆಯೇ ಸ್ವಸ್ಥಾನದಲ್ಲಿ ಇರಿಸಿದ. ಗೊಲ್ಲರು ಪ್ರೀತಿಯಿಂದ

ಕೃಷ್ಣನನ್ನು ಬಿಗಿದಪ್ಪಿಕೊಂಡರು. ಗೋಪಿಯರು ಆನಂದದಿಂದ ಮೊಸರು ಅಕ್ಷತೆ ಕಾಳು ಮತ್ತು ನೀರಿನಿಂದ ಅಲಂಕರಿಸಿ ಹರಸಿದರು. ದೇವತೆಗಳು ಅಂತರಿಕ್ಷದಲ್ಲಿ ನಿಂತು ಸ್ತುತಿಸಿದರು. ಹೂಮಳೆಗರೆದರು. ದುಂದುಭಿ ಮೊಳಗಿಸಿದರು. ಗಂಧರ್ವರು ಗಾನ ಮಾಡಿದರು.

ಶ್ರೀಕೃಷ್ಣ ಬಲರಾಮನೊಂದಿಗೆ ಗೊಲ್ಲರೊಂದಿಗೆ ಗೋಕುಲಕ್ಕೆ ನಡೆದ. ಗೋಪಿಯರು ಕೃಷ್ಣಲೀಲೆಗಳನ್ನು ಹಾಡುತ್ತ ಕೃಷ್ಣನ ಹಿಂದೆ ನಡೆದರು.

❖

ಇಂದ್ರಯಜ್ಞ ನಿಂತುದಕ್ಕೆ ಕುಪಿತನಾದ ದೇವೇಂದ್ರ ಶ್ರೀಕೃಷ್ಣನನ್ನು ನಿಂದಿಸುತ್ತಾನೆ-

ಅಹೋ ಶ್ರೀಮದಮಾಹಾತ್ಮ್ಯಂ ಗೋಪಾನಾಂ ಕಾನನೌಕಸಾಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಯೇ ಚಕ್ರುರ್ದೇವಹೇಲನಮ್ ॥ ೩ ॥

ವನವಾಸಿಗಳಾದ ಗೊಲ್ಲರಲ್ಲಿ ಇಷ್ಟೊಂದು ಐಶ್ವರ್ಯಮದದ ಮಹಿಮೆ ಬಂದುದು ಆಶ್ಚರ್ಯಕರ. ಸಾಮಾನ್ಯ ಮನುಷ್ಯನಾದ ಕೃಷ್ಣನ ಆಸರೆಯನ್ನು ನಂಬಿ ದೇವನಾದ ನನಗೆ ಅವಮಾನ ಮಾಡಿದ್ದಾರೆ!

ವಾಚಾಲಂ ಮಾನಿನಂ ಮತ್ತಮಜ್ಞಂ ಪಂಡಿತಮಾನಿನಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಗೋಪಾ ಮೇ ಚಕ್ರುರಪ್ರಿಯಮ್ ॥ ೫ ॥

ಕೃಷ್ಣ ಬಹಳ ಮಾತನಾಡುವವನು, ಮಹಾಗರ್ವಿ, ನನ್ನ ಸಾಮರ್ಥ್ಯದ ಬಗ್ಗೆ ಅರಿವಿಲ್ಲದವನು. ಆದರೂ ತಾನೊಬ್ಬನೇ ಪಂಡಿತನೆಂದು ತಿಳಿದು ಅಹಂಕಾರ ಪಡುತ್ತಾನೆ. ಇಂಥ ಮಾನವನನ್ನು ಆಶ್ರಯಿಸಿ ದೇವನಾದ ನನಗೆ ಇಷ್ಟವಲ್ಲದ ಗಿರಿಯಜ್ಞವನ್ನು ಗೋಪಾಲಕರು ನಡೆಸಿದರು.

ಇಲ್ಲಿ ದೇವೇಂದ್ರ ಭಗವಂತನನ್ನು ನಿಂದಿಸುತ್ತಿದ್ದಾನೆ. ತಮೋಯೋಗ್ಯ ಅಸುರನಾದ ವೇನರಾಜ ಭಗವಂತನನ್ನು ನಿಂದಿಸಿ ತಮಸ್ಸಿನಲ್ಲಿ ಬಿದ್ದ. ಮೋಕ್ಷಯೋಗ್ಯ ದೇವೋತ್ತಮನಾದ ದೇವರಾಜ ಇಂದ್ರನೂ ಹಾಗೇ ಭಗವಂತನನ್ನು ನಿಂದಿಸಿದನೆಂದು ಭಾಗವತ ಹೇಳುತ್ತಿದೆ ಇದನ್ನು ಹೇಗೆ ನಂಬಬೇಕು?

ಇಂದ್ರ ತಪ್ಪು ಮಾಡಲೆ ಇಲ್ಲ. ಇಂದ್ರಿಯ ಪ್ರೇರಕನಾದ ಭಗವಂತನೆ ಒಳಗೆ ನಿಂತು ತನಗೆ ಮನಬಂದಂತೆ ಅವನಿಂದ ತಪ್ಪು ಮಾಡಿಸಿದ್ದಾನಷ್ಟೆ ಎಂದು ವಲ್ಲಭ ವ್ಯಾಖ್ಯಾನ ಹೇಳಬಹುದು. ಶಿಶುಪಾಲನ ವಿಷಯದಲ್ಲಿ ಹಾಗೇ ಹೇಳಿದ್ದಾರೆ.[೧] ಆದರೆ ಇದನ್ನು ಒಪ್ಪಿದರೆ ಭಗವಂತನಿಗೆ ವೈಷಮ್ಯ ನೈರ್ಘೃಣ್ಯ ದೋಷ ಪ್ರಸಕ್ತಿ ಇದೆ.

ಅದನ್ನು ಬ್ರಹ್ಮಸೂತ್ರ ವೈಷಮ್ಯನೈರ್ಘೃಣ್ಯಾಧಿಕರಣದಲ್ಲಿ ಯುಕ್ತಿಯುಕ್ತನಾಗಿ ನಿರಾಕರಿಸಿದೆ.

ಅದರಿಂದ ಹೀಗೆ ಹೇಳಬೇಕು- ಇಂದ್ರ ವೇನನಂತೆ ಸ್ವಾಭಾವಿಕವಾದ ದುರಹಂಕಾರದಿಂದ ಶ್ರೀಕೃಷ್ಣನನ್ನು ನಿಂದಿಸಲಿಲ್ಲ. ಅಸುರಾವೇಶದಿಂದ ತಾತ್ಕಾಲಿಕ ವಾಗಿ ಅಹಂಕಾರಪಟ್ಟು ಶಿಶುಪಾಲನಂತೆ ನಿಂದಿಸಿದ. ಈ ಅಸುರಾವೇಶವು ಯೋಗ್ಯತೆಯಲ್ಲಿ ಹೆಚ್ಚು ಹೆಚ್ಚಿನವರಲ್ಲಿ ಕಡಿಮೆ ಕಡಿಮೆ. ಜೀವೋತ್ತಮನಲ್ಲಿ ಅದು ಇಲ್ಲವೇ ಇಲ್ಲ. ಇದು ತಂತ್ರಭಾಗವತದಲ್ಲಿ ಸ್ಪಷ್ಟವಿದೆ.

ಅತ್ಯಲ್ಪಸ್ತ್ವಸುರಾವೇಶೋ ದೇವಾನಾಂ ಚ ಭವಿಷ್ಯತಿ ।
ಪ್ರಾಣಮೇಕಂ ವಿನಾऽಸೌ ಹಿ ತ್ವಾಖಣಾಶ್ಮಸಮಃ ಸ್ಮೃತಃ ।
ತಸ್ಮಿನ್ನಪ್ಯಸುರಾವೇಶೇ ಗತೇ ಪ್ರಕೃತಿರೇವ ತು ॥

ಇತಿ ಭಾಗವತತಂತ್ರೇ ॥

'ದೇವತೆಗಳಲ್ಲಿಯೂ ತಾರತಮ್ಯಾನುಗುಣವಾಗಿ ಅತ್ಯಲ್ಪ ಅಸುರಾವೇಶ ಉಂಟಾಗುತ್ತದೆ, ಮುಖ್ಯಪ್ರಾಣನನ್ನು ಹೊರತುಪಡಿಸಿ. ಮುಖ್ಯಪ್ರಾಣ ಅಸುರರ ಆಕ್ರಮಣದ ಮುಂದೆ ಅಭೇದ್ಯವಾದ ಬಂಡೆಗಲ್ಲಿನಂತಿರುತ್ತಾನೆ. ದೇವತೆಗಳಲ್ಲಿ ಉಂಟಾದ ಅಸುರಾವೇಶ ಹೊರಟು ಹೋದಾಗ ಅವರ ಸ್ವಾಭಾವಿಕವಾದ ಜ್ಞಾನ ಭಕ್ತ್ಯಾದಿ ಗುಣಗಳೇ ಗೋಚರಿಸುತ್ತವೆ' ಎಂದು ತಂತ್ರಭಾಗವತದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ತ್ರಯೋವಿಂಶೋऽಧ್ಯಾಯಃ

❖

೧ ನಾಪಿ ತಸ್ಯ ದೋಷೋऽಸ್ತಿ ಕಶ್ಚನ । ದೋಷಾದಯೋऽಪಿ ಭಗವತೈವೋತ್ಪಾದಿತಾಃ । ಇಂದ್ರಿಯಪ್ರೇರಕೋऽಯಂ ಯಥಾಸುಖಂ ಭಾವಾನುತ್ಪಾದಯತಿ । -ವಲ್ಲಭಃ

ಅಧ್ಯಾಯ - ೨೪

ಅಧ್ಯಾಯ ಸಾರಾಂಶ

ಶ್ರೀಕೃಷ್ಣನ ಅದ್ಭುತಕಾರ್ಯಗಳನ್ನು ಕಂಡು ಅವನ ಸಾಮರ್ಥ್ಯದ ಅರಿವಿಲ್ಲದಿದ್ದ ಗೊಲ್ಲರು ಆಶ್ಚರ್ಯಚಕಿತರಾಗಿ ಒಂದೆಡೆ ಸೇರಿ ಪರಸ್ಪರ ಹೇಳಿಕೊಂಡರು.

ಬಾಲಕನಾದ ಕೃಷ್ಣನ ಕಾರ್ಯ ಅತ್ಯದ್ಭುತವಾಗಿದೆ. ಇಂಥ ಮಹಾನ್ ಚೇತನನೊಬ್ಬ ನಮ್ಮಂಥ ಮುಗ್ಧರಾದ ಗೊಲ್ಲರ ಮಧ್ಯದಲ್ಲಿ ಜನ್ಮತಳೆಯಲು ತಕ್ಕವನಲ್ಲ. ಅದು ಅವನಿಗೆ ಶೋಭೆ ತರಲಾರದು ತಾನೆ?

ಮದ್ದಾನೆಯೊಂದು ಕಮಲದ ಹೂವನ್ನು ಎತ್ತಿಕೊಳ್ಳುವಂತೆ ಅನಾಯಾಸವಾಗಿ ಏಳು ವರ್ಷದ ಬಾಲಕನೀತ ಒಂದು ಕೈಯಿಂದ ದೊಡ್ಡ ಬೆಟ್ಟವನ್ನು ಎತ್ತಿಹಿಡಿದ. ಇದು ಹೇಗೆ ಸಾಧ್ಯವಾಯಿತು? ಇನ್ನೂ ಕಣ್ಣುಗಳನ್ನು ಪೂರ್ತಿ ತೆರೆಯದಿದ್ದ ಶಿಶು ಕೃಷ್ಣ ಮಹಾಬಲಿಷ್ಠಳಾದ ಅಸುರೆ ಪೂತನಿಯ ಪ್ರಾಣಾಪಹಾರ ಮಾಡಿದ. ಕಾಲವು ಶರೀರದ ಆಯುಸ್ಸನ್ನು ಹೀರುವಂತೆ ಈತ ಪೂತನೆಯ ಎದೆ ಹಾಲಿನೊಂದಿಗೆ ಅವಳ ಪ್ರಾಣಗಳನ್ನೂ ಹೀರಿಬಿಟ್ಟ. ಇದು ಹೇಗೆ ಸಾಧ್ಯವಾಯಿತು?

ನಾಲ್ಕು ತಿಂಗಳ ಶಿಶುವಾಗಿದ್ದಾಗ ಬಂಡಿಯ ಕೆಳಗೆ ಮಲಗಿ ಅಳುತ್ತ ಕಾಲುಗಳನ್ನು ಮೇಲೆಸೆದ ಮಾತ್ರಕ್ಕೆ ಅವನ ಕಾಲಿನ ತುದಿಗೆ ತಗುಲಿದ ಬಂಡಿ ಬುಡಮೇಲಾಗಿ ಬಿದ್ದಿತು. ಇದು ಹೇಗೆ ಸಾಧ್ಯವಾಯಿತು?

ಒಂದು ವರ್ಷದ ಮಗುವಾಗಿದ್ದಾಗ ತನ್ನನ್ನು ಹಿಡಿದುಕೊಂಡು ಆಕಾಶಕ್ಕೆ ಹಾರಿದ ತೃಣಾವರ್ತದೈತ್ಯನನ್ನು ಕತ್ತು ಹಿಸುಕಿ ಕೊಂದ. ಬೆಣ್ಣೆ ಕದಿಯುತ್ತಾನೆ ಎಂದು ತಾಯಿ ಈತನನ್ನು ಒರಳಿಗೆ ಕಟ್ಟಿದರೆ ಒರಳಿನೊಂದಿಗೇ ಎರಡು ಮತ್ತಿಮರಗಳ ನಡುವೆ ನುಸುಳಿ ಹೋಗಿ ಆ ಮರಗಳನ್ನೇ ಬೀಳಿಸಿದ. ಕಾಡಿನಲ್ಲಿ ಕರುಗಳನ್ನು ಮೇಸುವಾಗ ಶತ್ರು ಬಕಾಸುರನನ್ನು ಕೊಕ್ಕಿನಲ್ಲಿ ಹಿಡಿದು

ಇಬ್ಭಾಗವಾಗಿ ಸೀಳಿಬಿಟ್ಟ. ಕರುವಿನ ರೂಪದಿಂದ ಬಂದ ವತ್ಸಾಸುರನನ್ನು ಎತ್ತಿ ಮೇಲೆ ಒಗೆದು ಅನಾಯಾಸವಾಗಿ ಬೇಲದ ಮರದಿಂದ ಹಣ್ಣುಗಳನ್ನು ಉದುರಿಸಿದ. ಕತ್ತೆಯ ರೂಪದ ಧೇನುಕಾಸುರನನ್ನು ಬಲರಾಮನ ಮೂಲಕ ಕೊಲ್ಲಿಸಿ ಫಲಭರಿತವಾದ ತಾಳೆ ಮರಗಳ ತೋಪನ್ನು ರಕ್ಷಿಸಿದ. ಪ್ರಲಂಬಾಸುರನನ್ನೂ ಬಲರಾಮನಿಂದ ಕೊಲ್ಲಿಸಿದ. ಗೋವುಗಳನ್ನೂ ಗೊಲ್ಲರನ್ನೂ ಕಾಳ್ಗಿಚ್ಚಿನಿಂದ ರಕ್ಷಿಸಿದ. ಕ್ರೂರ ಕಾಳಿಯ ನಾಗನನ್ನು ಮೆಟ್ಟಿ ದಮನ ಮಾಡಿ ಮಡುವಿನಿಂದ ಹೊರಗಟ್ಟಿ ನೀರನ್ನು ವಿಷಮುಕ್ತವನ್ನಾಗಿ ಮಾಡಿದ. ಇದೆಲ್ಲವೂ ಹೇಗೆ ಸಾಧ್ಯವಾಯಿತು?

ಗೋಕುಲ ವಾಸಿಗಳಿಗೆ ಈತನಲ್ಲಿ, ಈತನಿಗೆ ಗೋಕುಲ ವಾಸಿಗಳಲ್ಲಿ ಬಿಡಲಾಗದ ಪ್ರೀತಿಯ ನಂಟು. ಇದಕ್ಕೆ ಏನು ಕಾರಣ?

ಏಳು ವರ್ಷದ ಬಾಲಕನೆಲ್ಲಿ? ದೊಡ್ಡ ಬೆಟ್ಟವನ್ನು ಎತ್ತಿಕೊಳ್ಳುವು ದೆಲ್ಲಿ? ಆದರಿಂದ ನಂದ, ನಮಗೆ ನಿನ್ನ ಮಗನ ವಿಷಯದಲ್ಲಿ ಆತ ಯಾರಿರಬಹುದೆಂದು ಸಂದೇಹ ಉಂಟಾಗಿದೆ.'

ನಂದಗೋಪ ನುಡಿದ, 'ಗೊಲ್ಲರೆ, ನೀವು ನನ್ನ ಮಾತು ಕೇಳಿರಿ. ಆಗ ನಿಮ್ಮ ಸಂದೇಹ ನಿವಾರಣೆಯಾಗುವುದು. ಈ ನನ್ನ ಮಗನ ಬಗ್ಗೆ ಗರ್ಗಮುನಿ ನನಗೆ ಹೀಗೆ ಹೇಳಿದ್ದರು– 'ಈತ ಸಾಕ್ಷಾತ್ ನಾರಾಯಣ. ಪ್ರತಿಯುಗದಲ್ಲಿ ಅವತಾರ ತಳೆಯುತ್ತಾನೆ. ಅವತಾರ ಗಳಲ್ಲಿ ಹಿಂದೆ ಈತನಿಗೆ ಬಿಳಿ ಕೆಂಪು ಹಳದಿ ಬಣ್ಣಗಳಿದ್ದುವು. ಈಗ ನೀಲವರ್ಣನಾಗಿದ್ದಾನೆ. ಈತ ಮಥುರೆಯಲ್ಲಿ ವಸುದೇವನ ಮಗನಾಗಿ ಹುಟ್ಟಿದ್ದಾನೆ. ಬಲ್ಲವರು ವಾಸುದೇವನೆಂದೇ ಇವನನ್ನು ಕರೆಯುತ್ತಾರೆ. ಈತನಿಗೆ ಅನೇಕ ಅವತಾರಗಳೂ ಅನೇಕ ನಾಮಗಳೂ ಇವೆ. ಅವನ್ನು ನಾ ಬಲ್ಲೆ. ಸಾಮಾನ್ಯ ಜನರು ತಿಳಿಯರು. ಗೋವುಗಳಿಗೂ ಗೊಲ್ಲರಿಗೂ ಈತ ಸುಖನೀಡುತ್ತಾನೆ.

ಹಿಂದೆ ದೇಶ ಅರಾಜಕವಾಗಿದ್ದಾಗ ಕಳ್ಳಕಾಕರ ಭಯದಿಂದ ಸಜ್ಜನರಿಗೆ ರಕ್ಷಣೆಯೆ ಇಲ್ಲದಿದ್ದಾಗ ಪೃಥು ಚಕ್ರವರ್ತಿಯಲ್ಲಿ ಈತ ಆವೇಶಗೊಂಡು ಜನರಿಗೆ ರಕ್ಷಣೆ ನೀಡಿದ. ಇವನಲ್ಲಿ

ಪ್ರೀತಿಮಾಡುವ ಮಾನವರಿಗೆ ಶತ್ರುಗಳಿಂದ ಸೋಲೆಂಬುದೇ ಇಲ್ಲ. ವಿಷ್ಣುಪಕ್ಷದ ದೇವತೆಗಳಿಗೆ ಅಸುರರಿಂದ ಸೋಲು ಹೇಗೆ ಇಲ್ಲವೋ ಹಾಗೆ. ಆದರಿಂದ ಈತ ಸಾಕ್ಷಾತ್ ವಿಷ್ಣುವೆ. ಅವನ ಮಹತ್ಕಾರ್ಯಗಳನ್ನು ನೋಡಿ ಆಶ್ಚರ್ಯಪಡಬೇಕಾಗಿಲ್ಲ.'

ಹೀಗೆ ಗರ್ಗಮುನಿ ನನಗೆ ಉಪದೇಶ ಮಾಡಿ ಹೋದ ಬಳಿಕ ಕೃಷ್ಣ ಎಲ್ಲ ಕಾರ್ಯಗಳನ್ನೂ ಅನಾಯಸವಾಗಿ ಮಾಡುವುದನ್ನು ನಾನು ಪ್ರತ್ಯಕ್ಷವಾಗಿ ಕಂಡು ಈತ ನಿಶ್ಚಯವಾಗಿ ನಾರಾಯಣನೆ ಎಂದು ತಿಳಿದಿದ್ದೇನೆ' ನಂದ ಗೋಪನ ಮಾತನ್ನು ಕೇಳಿದ ಗೊಲ್ಲರಿಗೆ ಕೃಷ್ಣ ಯಾರೆಂಬ ವಿಷಯ ದಲ್ಲಿ ಸಂದೇಹ ಪರಿಹಾರವಾಯಿತು. ಅವರು ನಂದಗೋಪನನ್ನೂ ಕೃಷ್ಣನನ್ನೂ ಹೊಗಳಿದರು ಆನಂದಿಸಿದರು.

❖

ಅಧ್ಯಾಯ - ೨೫

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಗೋವರ್ಧನ ಗಿರಿಯನ್ನೆತ್ತಿ ಹಿಡಿದು ಗೋಕುಲ ವನ್ನು ಮಳೆಯಿಂದ ಕಾಪಾಡಿದಾಗ ಗೋಲೋಕದಿಂದ ಕಾಮಧೇನು ಬಂದಳು.

ದೇವೇಂದ್ರ ತಾನು ಭಗವಂತನಲ್ಲಿ ಅಪರಾಧ ಮಾಡಿದ್ದಕ್ಕೆ ನಾಚಿ ಏಕಾಂತದಲ್ಲಿ ಅವನ ಬಳಿಗೆ ಬಂದು ಸೂರ್ಯನಂತೆ ಹೊಳೆಯುವ ಕಿರೀಟದಿಂದ ಅವನ ಪಾದಗಳನ್ನು ಸ್ಪರ್ಶಿಸಿದ. ಕೃಷ್ಣನ ಮಹಿಮೆ ಯನ್ನು ಅವನು ತಿಳಿದವನೆ, ಈಗ ಕಣ್ಣಾರೆ ಕಂಡ ಬಳಿಕ ತಾನು ಮೂಲೋಕದೊಡೆಯನೆಂಬ ಹಮ್ಮು ಬಿಟ್ಟು ಕೈಮುಗಿದು ಸ್ತುತಿಸಿದ.

'ಹೇ ದೇವ, ನಿನ್ನ ಶರೀರ ಪ್ರಕೃತಿಯ ತ್ರಿಗುಣಗಳಿಂದಾದು ದಲ್ಲ. ಕೇವಲ ಜ್ಞಾನಾತ್ಮಕ, ಆನಂದಮಯ. ಭಕ್ತರು ಅಸುರಾವೇಶದಿಂದ ಅಪರಾಧಗೈದರೆ ಕುಪಿತನಾಗದೆ ಶಾಂತ ನಾಗಿರುವವ. ತ್ರಿಗುಣಗಳ ಸಂಬಂಧವೆ ಇಲ್ಲದ ನಿನಗೆ ತ್ರಿಗುಣಜನ್ಯವಾದ ಕೋಪ ಹೇಗೆ ಬಂದೀತು? ಆದರೂ ಧರ್ಮರಕ್ಷಣೆಗಾಗಿ ದುಷ್ಟನಿಗ್ರಹಕ್ಕಾಗಿ ಶಿಕ್ಷೆ ವಿಧಿಸುವಿ. ಇಂದ್ರನಿಂದೇನಾದೀತೆಂದು ಗೊಲ್ಲರ ಮುಂದೆ ನನ್ನ ನಿಂದೆ ಮಾಡಿದುದೇ ನನಗೆ ನೀನು ನೀಡಿದ ಶಿಕ್ಷೆ. ತಾವೇ ಜಗದೊಡೆಯರೆಂದು ಬೀಗುವವರ ಅಹಂಕಾರವನ್ನು ಹೀಗೇ ಮುರಿಯುತ್ತ ಲೀಲೆ ತೋರುವಿ. ಆಗ ನಿನ್ನ ಭಕ್ತರು ಅಹಂಕಾರವನ್ನು ಬಿಟ್ಟು ಭಕ್ತಿಮಾರ್ಗದಲ್ಲಿ ಮುನ್ನಡೆಯುತ್ತಾರೆ. ನೀನು ನೀಡುವ ಶಿಕ್ಷೆ ಸಜ್ಜನರಿಗೆ ಹೀಗೆ ಹಿತಕರ. ದುರ್ಜನರಿಗೆ ಮಾತ್ರ ಅಹಿತಕರ. ನಾನು ಐಶ್ವರ್ಯ ಮದದಿಂದ ನಿನ್ನನ್ನು ಸರಿಯಾಗಿ ತಿಳಿಯದೆ ಅಪರಾಧ ಮಾಡಿದ್ದೇನೆ. ಕ್ಷಮಿಸು. ನನಗೆ ಮುಂದೆ ಇಂಥ ಕೆಟ್ಟ ಬುದ್ಧಿ ಬಾರದಿರಲಿ. ನನ್ನ ಮೇಲೆ ಅನುಗ್ರಹ ಮಾಡಿರುವೆ. ನಿನಗಿದೋ ನಮಸ್ಕಾರ. ನಾನು ನಿನ್ನನ್ನೇ ಶರಣುಹೊಂದಿದ್ದೇನೆ.'

ಶ್ರೀಕೃಷ್ಣನೆಂದ, 'ಐಶ್ವರ್ಯಮದದಿಂದ ಕುರುಡಾಗಿ ನನ್ನನ್ನು ಕಾಣದವನಿಗೆ ನಾನು ಅನುಗ್ರಹ ಮಾಡಲು ಬಯಸಿದರೆ ಅವನ ಐಶ್ವರ್ಯವನ್ನು ಕಳೆಯುತ್ತೇನೆ. ದೇವೇಂದ್ರ, ನೀನಿನ್ನು ಹಿಂತಿರುಗಿ ಹೋಗು. ನಿನಗೆ ಒಳ್ಳೆಯದಾಗಲಿ. ನಿಮ್ಮ ಪದವಿ ಅಧಿಕಾರಗಳು ಶಾಶ್ವತವೆಂದು ತಿಳಿಯದೆ ತಮ್ಮತಮ್ಮ ಅಧಿಕಾರಗಳಲ್ಲಿ ಕರ್ತವ್ಯ ಕರ್ಮ ಚ್ಯುತರಾಗದೆ ಇರಿ.'

ಕಾಮಧೇನು ತನ್ನ ಸಂತಾನಗಳಾದ ಗೋವುಗಳೊಂದಿಗೆ ಸಮಾಲೋಚನೆ ಮಾಡಿ ಶುದ್ಧ ಮನಸ್ಸಿನಿಂದ ಶ್ರೀಕೃಷ್ಣನನ್ನು ನಮಿಸಿ ನುಡಿದಳು.

'ದೇವದೇವ, ನಿನ್ನನ್ನು ನಾಥನನ್ನಾಗಿ ಪಡೆದಿರುವ ನಾವೆಂದೂ ಅನಾಥರಲ್ಲ. ಬ್ರಹ್ಮದೇವನು ಹೇಳಿದಂತೆ ನಾವು ನಿನ್ನನ್ನು ನಮ್ಮೊಡೆಯನೆಂದು ಅಭಿಷೇಕ ಮಾಡುವೆವು.' ಹೀಗೆ ಹೇಳಿ ಕಾಮಧೇನು ತನ್ನ ಹಾಲಿನಿಂದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿದಳು. ದೇವೇಂದ್ರನೂ ದೇವತೆಗಳ ಋಷಿಗಳ ಅಪೇಕ್ಷೆಯಂತೆ ದೇವಮಾತೆ ಅದಿತಿ ಮುಂತಾದವರೊಂದಿಗೆ ಬಂದು ಐರಾವತದ ಸೊಂಡಿಲಿನಿಂದ ಆಕಾಶಗಂಗಾಜಲದ ಅಭಿಷೇಕಮಾಡಿ ಗೋವಿಂದ ನಾಮ ಸಂಕೀರ್ತನ ಮಾಡಿದ. ದೇವತೆಗಳು ಗಂಧರ್ವರು ಮುಂತಾದವರು ಸಕಲ ಪಾಪಪರಿಹಾರಕವಾದ ಹರಿನಾಮ ಸಂಕೀರ್ತನ ಮಾಡಿದರು. ನಾಟ್ಯವಾಡಿದರು. ಹೂಮಳೆಗರೆದರು. ಮೂಲೋಕಗಳೂ ಆನಂದದಿಂದ ತುಂಬಿದುವು. ಗೋವುಗಳು ಹಾಲಿನಿಂದ ನೆಲವನ್ನು ತೊಯಿಸಿದುವು. ನದಿಗಳು ಮಧುರ ರಸಪೂರ್ಣವಾಗಿ ಹರಿದುವು. ಮರಗಳು ಜೇನು ಸುರಿಸಿದುವು. ನೆಲ ಉಳದೆಯೆ ಬೆಳೆ ನೀಡಿತು. ಬೆಟ್ಟಗಳಲ್ಲಿ ರತ್ನಗಳು ಉದ್ಭವಿಸಿದುವು. ಜಾತಿ ಸ್ವಭಾವದಿಂದ ಕ್ರೂರವಾದ ಹುಲಿ ತೋಳ ಮುಂತಾದ ಮೃಗಗಳೂ ವೈರವನ್ನು ಮರೆತುವು.

ಹೀಗೆ ಗೋಕುಲನಾಥನಾದ ಗೋವಿಂದನಿಗೆ ಪಟ್ಟಾಭಿಷೇಕ ಮಾಡಿ ದೇವೇಂದ್ರ ಅವನ ಅನುಮತಿಪಡೆದು ದೇವತೆಗಳೊಂದಿಗೆ ಸ್ವರ್ಗಕ್ಕೆ ಹಿಂತಿರುಗಿದ.

❖

ದೇವೇಂದ್ರ ತನ್ನ ದರ್ಪವನ್ನು ಮುರಿದು ಅನುಗ್ರಹಿಸಿದ್ದಕ್ಕೆ ಶ್ರೀಕೃಷ್ಣನನ್ನು ಸ್ತುತಿಸುತ್ತಾನೆ-

ವಿಶುದ್ಧಸತ್ತ್ವಂ ತವ ಧಾಮ ಶಾಂತಂ
ತಪೋಮಯಂ ಧ್ವಸ್ತರಜಸ್ತಮಸ್ಕಮ್ ।
ಮಾಯಾಮಯೋಽಯಂ ಗುಣಸಂಪ್ರವಾಹೋ
ನ ವಿದ್ಯತೇ ತೇಽಗ್ರಹಣಾನುಬಂಧಃ ॥ ೪ ॥

ಹೇ ದೇವ, ನಿನ್ನ ಶರೀರ ರಜೋಗುಣ ತಮೋಗುಣಗಳಿಂದಾದುದಲ್ಲ. ಏಕೆಂದರೆ ಅದರಲ್ಲಿ ಶುದ್ಧಸತ್ವಗುಣಕ್ಕೇ ಅವಕಾಶವಿಲ್ಲ. ಅದು ಕೇವಲ ಜ್ಞಾನಾತ್ಮಕ, ಆನಂದಮಯ. ಹೀಗಾಗಿ ನಿನ್ನಿಚ್ಛೆಯಿಂದ ಸಂಸಾರಿ ಜೀವರಿಗೆ ಅಂಟಿಕೊಳ್ಳುವ ಅಜ್ಞಾನ ಜನ್ಯವಾದ ತ್ರಿಗುಣಸಂಬಂಧರೂಪವಾದ ಈ ಸಂಸಾರ ನಿನಗೆ ಇಲ್ಲ.

ಬೇರೆ ವ್ಯಾಖ್ಯಾನಕಾರರು ವೀರರಾಘವ ಮುಂತಾದವರು ಪರಮಾತ್ಮನ ಶರೀರ ಶುದ್ಧಸತ್ವಾತ್ಮಕವೆಂದೇ ಪರಿಗ್ರಹಿಸಿದ್ದಾರೆ. ಶ್ರೀಧರವ್ಯಾಖ್ಯಾನದಲ್ಲಿ ಅದನ್ನು ಮಾಯಿಕವೆಂದು ಹಿಂದೆ (ಅ.೩.ಶ್ಲೋ.೩೧) ಹೇಳಿದ್ದಾರೆ. ಅವರಿಗೆ 'ವಿಶುದ್ಧಸತ್ವಂ' ಎಂದು ಇಲ್ಲಿ ಹೇಳುವುದು ವಿರುದ್ಧ. ವೀರರಾಘವ ಮುಂತಾದವರಿಗೂ ಇಲ್ಲಿ 'ಧಾಮ' ಎಂದರೆ ಶರೀರ ಶುದ್ಧಸತ್ವಮಯವೆನ್ನಬಹುದಾದರೂ ಅದನ್ನು 'ತಪೋಮಯ' ಜ್ಞಾನಮಯವೆನ್ನಲಾಗದು. 'ಧಾಮ'ವೆಂದರೆ ಸ್ವರೂಪವೆನ್ನುವುದಾದರೆ ಅದು ಚಿನ್ಮಯ. ವಿಶುದ್ಧಸತ್ವಮಯವಾಗದು. ಈ ಸಮಸ್ಯೆಯ ಪರಿಹಾರಕ್ಕೆ [೧] ವೀರರಾಘವ ವ್ಯಾಖ್ಯಾನದಲ್ಲಿ 'ನಿನ್ನ 'ಧಾಮ' ಮನೆ 'ವಿಶುದ್ಧ' ರಜಸ್ತಮರಹಿತ ಸತ್ವಾತ್ಮಕ. ಕೇವಲ ತಪಸಿನಿಂದ ಪ್ರಾಪ್ಯ. ರಜಸ್ತಮಲೇಶವಿಲ್ಲದ್ದು. ನಿನ್ನ ಮಾಯಾಮಯವಾದ ಈ ಸಂಸಾರ ಅಲ್ಲಿ ಇಲ್ಲ' ಎಂದು ಪುನರುಕ್ತಿ ಅಧ್ಯಾಹಾರ ದೂರಾನ್ವಯಗಳನ್ನು ಮಾಡಿ ಕಷ್ಟದಿಂದ ವಿವರಣೆ ನೀಡಿದ್ದಾರೆ.

'ವಿಶುದ್ಧಸತ್ವ' ಎಂದರೆ 'ವಿ' ಶಬ್ದ ನಿಷೇಧಾರ್ಥಕವೆಂದಿಟ್ಟುಕೊಂಡು

---

೧ ತವ ಧಾಮ ಸ್ಥಾನಂ ಪರಮವ್ಯೋಮೇತಿ ಯಾವತ್ ವಿಶುದ್ಧಂ ರಜಸ್ತಮೋಭ್ಯಾಮನನುವಿದ್ಧಂ। ಸತ್ವಂ ಸತ್ವಮಯಂ। ಅತ ಏವ ಧ್ವಸ್ತರಜಸ್ತಮಸ್ಕಂ ನಿರ್ಧೂತರಜಸ್ತಮೋಗಂಧಂ। ಕೇವಲಂ ತ್ವದುಪಾಸನಾತ್ಮಕ ತಪಸ ಆಗತಂ। ತೇ ತವಾಯಂ ಮಾಯಾಮಯಃ ಸಂಸಾರಃ ನ ವಿದ್ಯತೇ। ಯತ್ರೇತಿ ಶೇಷಃ। -ವೀರರಾಘವಃ

ಬಹುವ್ರೀಹಿ ಮಾಡಿ, 'ಶುದ್ಧಸತ್ವರಹಿತ'ವಾದ ಜ್ಞಾನಮಯವಾದ ಸ್ವರೂಪವನ್ನು 'ಧಾಮ' ಶಬ್ದದಿಂದ ಹೇಳಬೇಕು. 'ವಿಶುದ್ಧಂ ಸತ್ವಂ ಯಸ್ಯ' ಎಂದು ಬಹುವ್ರೀಹಿ ಮಾಡುವ ಪಕ್ಷದಲ್ಲಿ ಶುದ್ಧಸತ್ವಕ್ಕೆ ನಿಯಾಮಕ ಭಗವಂತ ಎಂದಂತಾಗುವುದು. ಸರ್ವನಿಯಾಮಕನಲ್ಲಿ ಇದೇನೂ ವಿಶೇಷವಲ್ಲ, ಸ್ತುತಿಯಾಗುವುದಿಲ್ಲ. 'ಪರಮಾತ್ಮನಲ್ಲಿ ಶುದ್ಧಸತ್ವಕ್ಕೇ ಅವಕಾಶವಿಲ್ಲವೆಂದ ಮೇಲೆ ರಜಸ್‌ತಮಸ್ ಗಳಿಗೆ ಎಲ್ಲಿ ಅವಕಾಶವಿದೆ? ಅದರಿಂದ ತ್ರಿಗುಣವರ್ಜಿತ' ಎಂದು ಈ ಶ್ಲೋಕದ ಪೂರ್ವಾರ್ಧದಲ್ಲಿ ಹೇಳಿ, ಉತ್ತರಾರ್ಧದಲ್ಲಿ 'ಈ ಕಾರಣದಿಂದ, ಗುಣ ಪ್ರವಾಹರೂಪವಾದ ಸಂಸಾರವೂ ಇರಲಾರದು' ಎಂದು ಹೇಳಿದೆ. 'ಮಾಯಾಮಯ' ಶಬ್ದದಿಂದ ಈ ಗುಣಪ್ರವಾಹರೂಪವಾದ ಸಂಸಾರ ಜೀವರಲ್ಲಿ 'ಭಗವಂತನ ಇಚ್ಛೆ'ಯಿಂದ ಇದೆ ಎಂದು ಹೇಳಿದೆ. ಮಾಯೆ ಎಂದರೆ ಭಗವದಿಚ್ಛೆ. ಅಗ್ರಹಣವೆಂದರೆ ಅಜ್ಞಾನ. ಅನುಬಂಧವೆಂದರೆ ನಿಮಿತ್ತ. ಅಜ್ಞಾನ ನಿಮಿತ್ತಕವಾದುದು ಜೀವರಲ್ಲಿ ಸಂಸಾರವೆಂದಮೇಲೆ 'ತಪೋಮಯ' ಜ್ಞಾನಮಯನಾದ ಪರಮಾತ್ಮನಲ್ಲಿ ಅದಕ್ಕೆ ಎಲ್ಲಿ ಅವಕಾಶವಿದ್ದೀತು? ಈ ಅಭಿಪ್ರಾಯದಿಂದ ಶ್ರೀಮದಾಚಾರ್ಯರು ಹೇಳುತ್ತಾರೆ-

ವಿಶುದ್ಧಸತ್ವಂ ವಿಗತಶುದ್ಧಸತ್ವಂ। ಯಸ್ಮಾತ್ ತ್ರಿಗುಣಸಂಬಂಧಸ್ತ್ವಯಿ ನ ವಿದ್ಯತೇ। ಯತ್ರಾಗ್ರಹಣಮನುಬದ್ಧಂ। ತಪೋಮಯಂ ಜ್ಞಾನಾತ್ಮಕಂ ॥

'ವಿ-ಶುದ್ಧಸತ್ವಂ' ಎಂದರೆ ಶುದ್ಧಸತ್ವವಿಲ್ಲದ್ದು. ತ್ರಿಗುಣ ಸಂಬಂಧ ನಿನ್ನಲ್ಲಿಲ್ಲದುದರಿಂದ ನಿನಗೆ ಸಂಸಾರವಿಲ್ಲ. 'ಅಗ್ರಹಣಾನುಬಂಧಃ' ಎಂದರೆ ಅಜ್ಞಾನ ನಿಮಿತ್ತಕ. ತಪೋಮಯವೆಂದರೆ ಜ್ಞಾನಾತ್ಮಕ. ಜ್ಞಾನಾತ್ಮಕದಲ್ಲಿ ಅಜ್ಞಾನ ನಿಮಿತ್ತಕವಾದ ಸಂಸಾರವಿರಲಾರದು.

❖ ❖ ❖

ಗೋವರ್ಧನೋದ್ಧಾರಿಯಾದ ಶ್ರೀಕೃಷ್ಣನನ್ನು ದೇವೇಂದ್ರ ಸ್ತುತಿಸುತ್ತಾನೆ-

ಕುತೋ ನು ತದ್ಧೇತವ ಈಶ ಮನ್ಯು-
ಲೋಭಾದಯೋ ಯೇಽಬುಧಲಿಂಗಭಾವಾಃ।
ಅಥಾಪಿ ದಂಡಂ ಭಗವಾನ್ ಬಿಭರ್ತಿ
ಧರ್ಮಸ್ಯ ಗುಪ್ತ್ಯೈ ಖಲನಿಗ್ರಹಾಯ ॥ ೫ ॥

ಅದರಿಂದ, ಹೇ ಪ್ರಭು, ನಿನಗೆ ತ್ರಿಗುಣಾತ್ಮಕ ಶರೀರ ಸಂಬಂಧವೆ

ಇಲ್ಲವೆಂದಮೇಲೆ ಒಂದು ಶರೀರದಿಂದ ಜನ್ಯವಾಗಿದ್ದು ಇನ್ನೊಂದು ಶರೀರಕ್ಕೆ ಜನಕವಾಗುವ, ಅಜ್ಞಾನಿಗಳ ಲಕ್ಷಣವಾದ ಕೋಪ ಲೋಭ ಮುಂತಾದುವು ನಿನ್ನಲ್ಲಿ ಹೇಗೆ ಇರಬಲ್ಲುವು? ಆದರೂ ಪೂಜ್ಯನಾದ ನೀನು ಧರ್ಮರಕ್ಷಣೆಗಾಗಿಯೂ ದುಷ್ಟನಿಗ್ರಹಕ್ಕಾಗಿಯೂ ನಮ್ಮಂಥ ದುರಹಂಕಾರಿಗಳಿಗೆ ಶಿಕ್ಷೆ ವಿಧಿಸುವಿ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಶ್ಲೋಕದ ಪ್ರಥಮಪಾದ ಪಾಠವನ್ನು

'ಕುತೋ ನು ತದ್ಧೇತವ ಈಶ ತತ್ಕೃತಾಃ'

ಎಂದು ಪರಿವರ್ತನೆ ಮಾಡಿಕೊಂಡು, 'ತತ್ಕೃತಾಃ' ಎಂದರೆ ಹಿಂದಿನ ಶ್ಲೋಕದಲ್ಲಿ ಉಕ್ತವಾದ ತ್ರಿಗುಣಾತ್ಮಕ ದೇಹ ಸಂಬಂಧದಿಂದ ಕೃತವಾದ ಲೋಭಾದಿಗಳು, 'ತದ್ಧೇತವಃ' ಎಂದರೆ ಪುನಃ ಬೇರೆ ಶರೀರ ಸಂಬಂಧಕ್ಕೆ ಕಾರಣವಾಗಿರುವ ಆ ಲೋಭಾದಿಗಳು ಎಂದು ವ್ಯಾಖ್ಯಾನಿಸಿದ್ದಾರೆ.[೧] ಶ್ರೀಮದಾಚಾರ್ಯರೂ 'ಪುನರ್ಗುಣಸಂಪ್ರವಾಹಸ್ಯ' ಎಂದು 'ಪುನಃ' ಶಬ್ದವನ್ನು ಸೇರಿಸಿ ವಿವರಣೆ ನೀಡುವುದರಿಂದ ಬೇರೆ ವ್ಯಾಖ್ಯಾನಕಾರರು ನೀಡುವ ವಿವರಣೆ ಶ್ರೀಮದಾಚಾರ್ಯರಿಗೆ ಸಂಮತವಾಗಬಹುದು. ಆದರೆ ಶ್ರೀಮದಾಚಾರ್ಯರು 'ತದ್ಧೇತವಃ' ಎಂಬ ಶಬ್ದಕ್ಕೆ ತಜ್ಜನ್ಯ, ತದ್ಧೇತು ಎಂದು ಎರಡೂ ಅರ್ಥಗಳನ್ನು ಬಹುವ್ರೀಹಿ ಮತ್ತು ತತ್ಪುರುಷ ಸಮಾಸಗಳಿಂದ ಗ್ರಹಿಸಬೇಕೆಂದು ಸೂಚಿಸುತ್ತಿದ್ದಾರೆ. ಏಕೆಂದರೆ 'ಪುನರ್ಗುಣಸಂಪ್ರವಾಹಸ್ಯ ಕಾರಣತ್ವಾತ್' ಎಂಬಲ್ಲಿ ಷಷ್ಠೀ ವಿಭಕ್ತಿಯನ್ನು ಶೇಷೇ ಷಷ್ಠೀ ಎಂದೂ ಕರ್ಮಣಿ ಷಷ್ಠೀ ಎಂದೂ ಎರಡು ರೀತಿಯಿಂದ ಗ್ರಹಿಸಲು ಅವಕಾಶವಿದೆ. ಹೀಗಾಗಿ ಶ್ಲೋಕದಲ್ಲಿ 'ತತ್ಕೃತಾಃ' ಎಂಬ ಶಬ್ದ ವ್ಯರ್ಥ. ಅದಕ್ಕಿಂತ 'ಮನ್ಯು' ಶಬ್ದವಿದ್ದರೆ ಹೆಚ್ಚು ಉಪಯೋಗವಿದೆ. 'ದಂಡಂ ಬಿಭರ್ಷಿ' 'ಶಿಕ್ಷೆ ವಿಧಿಸುತ್ತಾನೆ' ಎಂದಾಗ ಶಿಕ್ಷೆ ವಿಧಿಸುವುದು 'ಮನ್ಯು'ವಿನಿಂದ ಕೋಪದಿಂದ ಸಾಮಾನ್ಯವಾಗಿ ಲೋಕದಲ್ಲಿ ಕಂಡಿದೆ. ಆದರೆ ಪರಮಾತ್ಮನಿಗೆ ಕೋಪ ಬರುವುದಿಲ್ಲ, ಕೇವಲ ಧರ್ಮರಕ್ಷಣೆಗಾಗಿ ದುಷ್ಟನಿಗ್ರಹ ಮಾಡುವಾಗ ಕೋಪ ಪ್ರದರ್ಶನ ಮಾಡುತ್ತಾನೆ ಎಂದು ಹೇಳುವ ಅಭಿಪ್ರಾಯ ಇಂದ್ರನಿಗೆ ಇದ್ದಂತೆ ಕಾಣುತ್ತದೆ. ಇದು 'ಮನ್ಯು' ಶಬ್ದವಿದ್ದರೆ ಸ್ಪಷ್ಟವಾಗುತ್ತದೆ.

ಪುನರ್ಗುಣಸಂಪ್ರವಾಹಸ್ಯ ಕಾರಣತ್ವಾತ್ ತದ್ಧೇತವಃ।

ಕೋಪಾದಿಗಳು ಶರೀರಸಂಬಂಧ ಜನ್ಯವಾಗಿದ್ದರೂ ಪುನಃ ಶರೀರ ಸಂಬಂಧಕ್ಕೆ

೧ ತತ್ಕೃತಾ ದೇಹಸಂಬಂಧಕೃತಾಃ ತದ್ಧೇತವಃ ಪುನರಪ್ಯನ್ಯಸ್ಯ ದೇಹಸ್ಯ ಹೇತವಃ। -ಶ್ರೀಧರಃ

ಜನಕವೂ ಆಗುವುದರಿಂದ ಶ್ಲೋಕದಲ್ಲಿ ಅವುಗಳನ್ನು 'ತದ್ದೇತವಃ' ಎಂದು ವರ್ಣಿಸಲಾಗಿದೆ. ಆ ಶಬ್ದಕ್ಕೆ ತಜ್ಜನ್ಯ ತಜ್ಜನಕ ಎಂದು ಎರಡೂ ಅರ್ಥವನ್ನು ಇಟ್ಟುಕೊಳ್ಳಬೇಕು.

❖ ❖ ❖

ಗೋವರ್ಧನೋದ್ಧಾರಿ ಶ್ರೀಕೃಷ್ಣನನ್ನು ದೇವೇಂದ್ರ ಸ್ತುತಿಸುತ್ತಾನೆ-

ಪಿತಾ ಗುರುಸ್ತ್ವಂ ಜಗತಾಮಧೀಶೋ
ದುರತ್ಯಯಃ ಕಾಲ ಉಪಾತ್ತದಂಡಃ ।
ಹಿತಾಯ ಚೇಚ್ಛಾತನುಭಿಃ ಸಮೀಹಸೇ
ಮಾನಂ ವಿಧುನ್ವನ್ ಜಗದೀಶಮಾನಿನಾಮ್ ॥ ೬ ॥

ಯೇ ಮದ್ವಿಧಾಃ ಸ್ಯುರ್ಜಗದೀಶ ಮಾನಿನ-
ಸ್ತ್ವಾಂ ವೀಕ್ಷ್ಯ ಕಾಲೇಽಭಯಮಾಶು ತಂ ಮದಮ್ ।
ಹಿತ್ವಾಽಽರ್ಯಮಾರ್ಗಂ ಪ್ರಭಜಂತ್ಯಪಸ್ಮಯಾ
ಈಹಾ ಖಲಾನಾಮಪಿ ತೇಽನುಶಾಸನಮ್ ॥ ೭ ॥

ಶ್ರೀಹರಿ, ನೀನು ಜಗತ್ತಿಗೆ ಜನಕ, ಜ್ಞಾನೋಪದೇಶಕ, ನಿಯಾಮಕ. ಯಾರಿಗೂ ಮೀರಲಾಗದ ಕಾಲರೂಪಿ, ಅಪರಾಧಿಗಳಿಗೆ ಶಿಕ್ಷೆ ಮಾಡುವವ. ತಾವೇ ಜಗದೊಡೆಯರೆಂದು ಬೀಗುವವರ ಅಹಂಕಾರವನ್ನು ಮುರಿಯುತ್ತ, ಸ್ವೇಚ್ಛೆಯಿಂದ ತೋರುವ ಅವತಾರರೂಪಗಳಿಂದ ಸಜ್ಜನರ ಹಿತಕ್ಕಾಗಿಯೂ ದುರ್ಜನರ ಅಹಿತಕ್ಕಾಗಿಯೂ ಲೀಲೆ ಮಾಡುವಿ.

ಹೇ ಜಗನ್ನಾಥ, ಅಸುರಾವೇಶಕಾಲದಲ್ಲಿ ಅಹಂಕಾರಪಡುವ ನಮ್ಮಂಥವರು ಸದಾ ನಿರ್ಭಯನಾಗಿರುವ ನಿನ್ನ ದರ್ಶನ ಮಾಡಿದೊಡನೆ ಆ ಅಹಂಕಾರವನ್ನು ಬಿಟ್ಟು ನಿರಹಂಕಾರಿಗಳಾಗಿ ಜ್ಞಾನಿಗಳ ಭಕ್ತಿಮಾರ್ಗವನ್ನು ಆಶ್ರಯಿಸುತ್ತಾರೆ. ಹೀಗೆ ನೀನು ನೀಡುವ ಶಿಕ್ಷೆ ಸಜ್ಜನರಿಗೆ ಹಿತಕರವೇ ಆದರೂ ದುರ್ಜನರಿಗೆ ಕೇವಲ ಶಿಕ್ಷೆಯೇ ಎನಿಸುತ್ತದೆ. ಅಹಿತವನ್ನೇ ಉಂಟುಮಾಡುತ್ತದೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು ಈ ಪದ್ಯದಲ್ಲಿ ಛಂದೋಭಂಗವಾಗುತ್ತಿದ್ದರೂ,

'ಹಿತಾಯ ಸ್ವೇಚ್ಛಾತನುಭಿಃ ಸಮೀಹಸೇ'

ಎಂದು ಪಾಠವಿಟ್ಟುಕೊಂಡು 'ಸ್ವೇಚ್ಛೆಯಿಂದ ಗ್ರಹಿಸುವ ಶರೀರಗಳಿಂದ ಅಹಂಕಾರಿ

ಗಳ ಅಹಂಕಾರವನ್ನು ಮುರಿದು ಹಿತವನ್ನೇ ಉಂಟುಮಾಡುವೆ' ಎಂದು ವಿವರಣೆ ನೀಡುತ್ತಾರೆ. ಛಂದೋಭಂಗವಿಲ್ಲದ,

'ಹಿತಾಯ ಚೇಚ್ಛಾತನುಭಿಃ ಸಮೀಹಸೇ'

ಎಂಬ ನಮ್ಮ ಪಾಠದಲ್ಲಿ ಚಕಾರದಿಂದ 'ಹಿತವನ್ನೂ' ಉಂಟು ಮಾಡುವೆ, 'ಅಹಿತವನ್ನೂ ಉಂಟುಮಾಡುವೆ' ಎಂದರ್ಥ. ಮುಂದಿನ ಪದ್ಯದಲ್ಲಿ 'ನಮ್ಮಂಥವರು ಅಹಂಕಾರವನ್ನು ಬಿಟ್ಟು ಒಳ್ಳೆಯ ಹಾದಿ ಹಿಡಿಯುತ್ತಾರೆ, 'ಅಪಿ' 'ತಥಾಪಿ' ಆದರೂ, ಖಳರಿಗೆ ನಿನ್ನ ಲೀಲೆ ಕೇವಲ ಶಿಕ್ಷೆ ಎನಿಸುತ್ತದೆ, ಅಹಿತವನ್ನೇ ಉಂಟು ಮಾಡುತ್ತದೆ' ಎಂದಿದೆ. 'ಅಸ್ಮದ್‌ವಿಧಾಃ' ನಮ್ಮಂಥವರು, ಅಂದರೆ ಸಜ್ಜನರು, ಕೆಲವೊಮ್ಮೆ ಅಹಂಕಾರಿಗಳಾಗುವವರು ನಿನ್ನ ಲೀಲೆಯಿಂದ ಎಚ್ಚೆತ್ತುಕೊಂಡು ಒಳ್ಳೆಯ ಹಾದಿ ಹಿಡಿದರೂ, ಖಳರು ಅಂದರೆ, ಸ್ವಭಾವತಃ ಅಹಂಕಾರಿಗಳು ಹಾಗೆ ಮಾಡದೆ ಅನರ್ಥಭಾಜನರಾಗುತ್ತಾರೆ, ಎಂದು ಸ್ಪಷ್ಟವಾಗಿ ಭಾಗವತ ಹೇಳುತ್ತಿದೆ.

ಪರಮಾತ್ಮನ ಲೀಲೆ ಸ್ವಾಭಾವಿಕಸಜ್ಜನರು ಸ್ವಾಭಾವಿಕ ದುರ್ಜನರೆನ್ನದೆ ಎಲ್ಲ ಬಗೆಯ ಅಹಂಕಾರಿಗಳಿಗೂ ಒಂದೇ ರೀತಿ ಹಿತವನ್ನೇ ಉಂಟು ಮಾಡುತ್ತದೆ ಎನ್ನುವ ಪಕ್ಷದಲ್ಲಿ ಮೊದಲನೆ ಶ್ಲೋಕದಲ್ಲಿ 'ಹಿತಾಯ ಚ' ಎಂದು ಚಕಾರ, ಎರಡನೆ ಶ್ಲೋಕದಲ್ಲಿ 'ಖಲಾನಾಮಪಿ' ಎಂದು ಅಪಿಶಬ್ದ ಎರಡನ್ನೂ ಏವಕಾರಾರ್ಥದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಮತ್ತು ಎರಡನೇ ಶ್ಲೋಕದಲ್ಲಿ ಕೊನೆಯ ಸಾಲು ಇಡೀ ವ್ಯರ್ಥವಾಗುವುದು. ಆ ಕೊನೆಯ ಸಾಲು 'ಖಳ'ರ ಬಗ್ಗೆ ಹೇಳುತ್ತದೆ. ಅದರ ಮೊದಲಿನ ಮೂರು ಸಾಲುಗಳು 'ಅಸ್ಮದ್‌ವಿಧ'ರಾದ ಸಜ್ಜನರ ಬಗ್ಗೆ ಹೇಳುತ್ತದೆ ಎಂದಿಟ್ಟುಕೊಂಡರೆ ಕೊನೆಯ ಸಾಲು ಸಾರ್ಥಕವೆನಿಸುತ್ತದೆ. ಅಗ್ನಿಪುರಾಣದಲ್ಲಿ ಈ ಎರಡೂ ಶ್ಲೋಕಗಳ ಆಂತರ್ಯವನ್ನು ಒಂದು ಮಾತಿನಲ್ಲಿ ತೆರೆದು ತೋರಿದ್ದಾರೆ ಬಾದರಾಯಣರು.

ಅಸತಾಂ ಚ ಸತಾಂ ಚೈವ ಹರಿರೇವಾನುಶಾಸಕಃ ।
ಸತಾಂ ತು ಶ್ರೇಯಸೇ ಸೈವ ಹ್ಯನುಶಾಸ್ತಿರ್ಭವಿಷ್ಯತಿ ।
ಅಸತಾಂ ವಿಪರೀತಾಯ ಲಂಘಯಿತ್ವಾನುಶಾಸನಂ ॥

ಇತ್ಯಾಗ್ನೇಯೇ ॥

'ದುರಹಂಕಾರಿಗಳಾಗಿ ವರ್ತಿಸಿದರೆ ಅಂಥ ದುಷ್ಟರಿಗೂ ಸಜ್ಜನರಿಗೂ ಶ್ರೀಹರಿಯೇ ಶಿಕ್ಷೆ ಮಾಡುವವನು. ಆದರೆ ಆ ಶಿಕ್ಷೆ ಸಜ್ಜನರಿಗೆ ಮುಂದೆ ಶ್ರೇಯಸ್ಸಿಗೇ ಕಾರಣವಾಗುತ್ತದೆ. ದುಷ್ಟರಿಗೆ ಅಶ್ರೇಯಸ್ಸಿಗೇ ಕಾರಣವಾಗುತ್ತದೆ.

ಏಕೆಂದರೆ ದುಷ್ಟರು ಶ್ರೀಹರಿ ನೀಡುವ ಶಿಕ್ಷೆಯನ್ನು ಒಪ್ಪಿಕೊಳ್ಳದೆ ಅವನಾಜ್ಞೆಯನ್ನು ಮೀರಿ ವರ್ತಿಸುತ್ತಾರೆ' ಎಂದು ಅಗ್ನಿಪುರಾಣದಲ್ಲಿ ಉಕ್ತವಾಗಿದೆ.

ಜೀವಸ್ವರೂಪಯೋಗ್ಯತೆಗಳಲ್ಲಿ ವೈಲಕ್ಷಣ್ಯವನ್ನು ಒಲ್ಲದ ಬೇರೆ ವ್ಯಾಖ್ಯಾನಕಾರರು ಭಾಗವತದ ಆಂತರ್ಯವನ್ನು ಕಾಣಲು ಬಯಸುವುದಿಲ್ಲ.

❖ ❖ ❖

ಗೋವರ್ಧನೋದ್ಧಾರಿ ಶ್ರೀಕೃಷ್ಣನನ್ನು ದೇವೇಂದ್ರ ಸ್ತುತಿಸುತ್ತಾನೆ-

ಸ್ವಚ್ಛಂದೋಪಾತ್ತದೇಹಾಯ ವಿಶುದ್ಧಜ್ಞಾನಮೂರ್ತಯೇ ।
ಸರ್ವಸ್ಮೈ ಸರ್ವಬೀಜಾಯ ಸರ್ವಭೂತಾತ್ಮನೇ ನಮಃ ॥ ೧೧ ॥

ಸ್ವೇಚ್ಛೆಯಿಂದ ಶರೀರವನ್ನು ಸ್ವೀಕರಿಸುವವನು, ಅಪ್ರಾಕೃತ ಜ್ಞಾನಶರೀರಿ, ಸರ್ವಸ್ವಾಮಿ, ಸರ್ವಕಾರಣ, ಸರ್ವಜೀವಾಂತರ್ಯಾಮಿ. ಇಂಥ ನಿನಗಿದೋ ನಮಸ್ಕಾರ.

ಇಲ್ಲಿ ಸ್ವೇಚ್ಛೆಯಿಂದ ಶರೀರವನ್ನು ಸ್ವೀಕರಿಸುವುದೆಂದರೇನು? 'ಕರ್ಮವಶದಿಂದಲ್ಲದೆ ಕೇವಲ ತನ್ನಿಚ್ಛೆಯಿಂದಲೆ ಅಥವಾ ತನ್ನವರಾದ ಭಕ್ತರ ಇಚ್ಛೆಯಿಂದಲೇ ದೇಹವನ್ನು ಸ್ವೀಕರಿಸುವುದೆಂ'ದು ಶ್ರೀಧರ ವೀರರಾಘವ ಮುಂತಾದ ವ್ಯಾಖ್ಯಾನಗಳು ಹೇಳುತ್ತವೆ.

ಆದರೆ 'ಪರಮಾತ್ಮನ ಅವತಾರಗಳು ವಸುದೇವ ದಶರಥ ಮುಂತಾದವರಿಂದ ಜನಿಸುತ್ತವೆ' ಎಂದು ಪುರಾಣಗಳಲ್ಲಿ ವರ್ಣನೆಗಳು ಬರುತ್ತವೆ. 'ವಸುದೇವನಿಂದ ಶರೀರವನ್ನು ಶ್ರೀಕೃಷ್ಣ ಸ್ವೀಕರಿಸುತ್ತಾನೆ' ಎಂದರೇನರ್ಥ? ಆ ಶರೀರ ವಸುದೇವನ ವೀರ್ಯದಿಂದಾದುದು ತಾನೆ? ಸ್ವೇಚ್ಛೆಯಿಂದಾಗಲಿ, ಭಕ್ತರ ಇಚ್ಛೆಯಿಂದಾಗಲಿ, ವಸುದೇವನಿಂದ ಇಂಥ ಶರೀರವನ್ನು ಪಡೆದರೆ ಅದು ಕರ್ಮಾಧೀನವಾಗಿದ್ದು ಜನ್ಮವೇ ತಾನೆ? ಬೇರೆ ವ್ಯಾಖ್ಯಾನಕಾರರು ಇದನ್ನು ಆಲೋಚಿಸುವುದಿಲ್ಲ.

ವಸ್ತುತಃ ವಸುದೇವನಿಂದ ಶರೀರವನ್ನು ಪಡೆಯುವುದಿಲ್ಲ. ಸ್ವರೂಪ ಶರೀರದಿಂದಲೇ ವಸುದೇವನನ್ನು ಹೊಕ್ಕು ಹೊರಗೆ ಬರುತ್ತಾನೆ. ಒಳಗೆ ಹೋಗುವಾಗ ಕಾಣಿಸಿಕೊಳ್ಳುವುದಿಲ್ಲ. ಹೊರಗೆ ಬಂದಾಗ ಕಾಣಿಸಿಕೊಳ್ಳುತ್ತಾನೆ. ಇದರಿಂದ ವಸುದೇವನಿಂದ ಕೃಷ್ಣ ಶರೀರವನ್ನು ಪಡೆದಂತೆ ಭಾಸವಾಗುತ್ತದೆ. ಇದು ಪದ್ಮಪುರಾಣದಲ್ಲಿ ಸ್ಪಷ್ಟವಿದೆ. ಸ್ವೇಚ್ಛಾನಿರ್ಮಿತ ಶರೀರದಿಂದಲೂ ಹೀಗೇ ಪ್ರವೇಶ

ನಿಗರ್ಮಗಳೆನ್ನಲು ಪ್ರಮಾಣವಿಲ್ಲ. ಸ್ವರೂಪಶರೀರದಿಂದ ಪ್ರವೇಶ ನಿರ್ಗಮಗಳೆನ್ನುವ ವಿಷಯದಲ್ಲಿ ಹಿಂದೆ (ಅ.೩.ಶ್ಲೋ.೧೭) ವಾಮನಪುರಾಣವನ್ನು ಉದಾಹರಿಸಿದ್ದರು.

ಆವೇಶೋ ವಸುದೇವಾದೌ ದೇಹಾದಾನಂ ಹರೇಃ ಸ್ಮೃತಂ ।
ದೇಹಾದಾನಂ ತದನ್ಯೇಷಾಂ ಜನ್ಮೇತಿ ಕವಯೋ ವಿದುಃ ।
ತಥಾಪ್ಯಸುರಮೋಹಾಯ ಗ್ರಂಥೇಷು ಬಹುಧೈವ ತು ॥ಇತಿ ಪಾದ್ಮೇ॥

'ಸ್ವರೂಪದೇಹದಿಂದ ವಸುದೇವ ಮುಂತಾದವರೊಳಗೆ ಪ್ರವೇಶಿಸಿ ಹೊರಗೆ ಬರುವುದು ಮಾತ್ರವೇ ಶ್ರೀಹರಿಗೆ 'ದೇಹಸ್ವೀಕಾರ' ಎನಿಸುವುದು. ಬೇರೆಯವರಿಗೆ ತಂದೆತಾಯಿಗಳಲ್ಲಿ ಪ್ರವೇಶಿಸಿ, ಹೊಸ ಶರೀರ ಪಡೆದು, ಹೊರಗೆ ಬರುವುದೇ ದೇಹ ಸ್ವೀಕಾರ, ಅದೇ ಜನ್ಮ ಎಂದು ಜ್ಞಾನಿಗಳು ತಿಳಿಯುತ್ತಾರೆ. ಹಾಗಿದ್ದರೂ ಕೇವಲ ಅಸುರ ಮೋಹನಕ್ಕಾಗಿ ಪುರಾಣಾದಿಗಳಲ್ಲಿ ವಸುದೇವನಿಂದ ಕೃಷ್ಣ 'ಜನಿಸಿದ'ನೆಂದು ಮುಂತಾಗಿ ನಾನಾ ಬಗೆಯಿಂದ ವರ್ಣಿಸುತ್ತಾರೆ' ಎಂದು ಪದ್ಮಪುರಾಣದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಪಂಚವಿಂಶೋಽಧ್ಯಾಯಃ

❖

ಅಧ್ಯಾಯ - ೨೬

ಅಧ್ಯಾಯ ಸಾರಾಂಶ

ನಂದಗೋಪನೊಮ್ಮೆ ಏಕಾದಶಿ ಉಪವಾಸ ಮಾಡಿ ಮರುದಿನ ಸಾಧನದ್ವಾದಶಿ ಇದ್ದುದರಿಂದ ನಡುರಾತ್ರಿಯಲ್ಲಿ ಯಮುನೆಯಲ್ಲಿ ಸ್ನಾನಕ್ಕೆ ಇಳಿದ. ನಡುರಾತ್ರಿ ಸ್ನಾನಕ್ಕೆ ನಿಷಿದ್ಧಕಾಲವೆಂದು ವರುಣ ಭೃತ್ಯರು ಅವನನ್ನು ತಮ್ಮ ಲೋಕಕ್ಕೆ ಸೆಳೆದೊಯ್ದರು. ಗೊಲ್ಲರು ನಂದರಾಜ ನೀರಲ್ಲಿ ಮುಳುಗಿ ಹೋದನೆಂದು, ಗಾಬರಿಗೊಂಡು ಕೃಷ್ಣ! ರಾಮ! ಎಂದು ಕೂಗಿಕೊಂಡರು. ಶ್ರೀಕೃಷ್ಣ ಅಭಯನೀಡಿ ವರುಣಲೋಕಕ್ಕೆ ನಡೆದ. ವರುಣ ಬಲು ಸಂಭ್ರಮದಿಂದ ಅವನನ್ನು ಪೂಜಿಸಿ ''ತನ್ನ ಭೃತ್ಯನಾದ ಒಬ್ಬ ರಾಕ್ಷಸ ಮೂರ್ಖ, ಅಜ್ಞಾನಿ, ತಿಳಿಯದೆ ನಿನ್ನ ತಂದೆಯನ್ನು ಎಳೆದು ತಂದಿದ್ದಾನೆ, ಕ್ಷಮಿಸು, ಅವನನ್ನು ಕರೆದು ಹೋಗು, ನನ್ನ ಮೇಲೆ ಅನುಗ್ರಹ ಮಾಡು'' ಎಂದು ಬೇಡಿಕೊಂಡ. ಶ್ರೀಕೃಷ್ಣ ಸಂತುಷ್ಟನಾಗಿ, ನಂದನನ್ನು ಗೋಕುಲಕ್ಕೆ ಕರೆತಂದು ಬಂಧುಗಳಿಗೆ ಮುದ ನೀಡಿದ.

ನಂದಗೋಪ ವರುಣನ ದಿವ್ಯವಾದ ಅಪಾರ ಸಂಪತ್ತನ್ನು ಕಂಡು, ಇಂಥ ಲೋಕಪಾಲಕರು ಕೃಷ್ಣನಿಗೆ ವಿಧೇಯರಾಗಿರುವುದಕ್ಕೆ ವಿಸ್ಮಯಪಟ್ಟು ಬಂಧುಗಳ ಮುಂದೆ ನಡೆದ ವೃತ್ತಾಂತವನ್ನೆಲ್ಲ ಬಣ್ಣಿಸಿ ಹೇಳಿದ. ಬಂಧುಗಳು ಶ್ರೀಕೃಷ್ಣನನ್ನು ಸರ್ವೇಶನೆಂದು ತಿಳಿದು ಕುತೂಹಲದಿಂದ ತನ್ನ ದಿವ್ಯವಾದ ವೈಕುಂಠಲೋಕವನ್ನು ನಮಗೆ ತೋರುವನೆ ಎಂದುಕೊಂಡರು.ಸರ್ವಜ್ಞನಾದ ಕೃಷ್ಣ ಅದನ್ನು ತಿಳಿದು 'ಲೋಕದಲ್ಲಿ ಸಜ್ಜನರು ಸಂಸಾರದಲ್ಲಿ ಮುಳುಗಿದ್ದು ನನ್ನ ಲೋಕವನ್ನು ತಿಳಿಯತ್ತಿಲ್ಲ. ನಾನೇ ಅದನ್ನು ಅವರಿಗೆ ತೋರಿಸಬೇಕು' ಎಂದು ಬಗೆದು ಗೊಲ್ಲರನ್ನು ಯಮುನಾ ನದಿಯ ಬ್ರಹ್ಮಹ್ರದವೆಂಬ ಮಡುವಿಗೆ ಕರೆದೊಯ್ದ. ಮುಂದೆ ಅಕ್ರೂರನೂ ಈ ಮಡುವಿನಲ್ಲೇ ಭಗವಂತನ ವಿಶ್ವರೂಪ ಕಾಣುತ್ತಾನೆ. ಅಲ್ಲಿ ಗೊಲ್ಲರನ್ನು ಸ್ನಾನ ಮಾಡಿಸಿ ದಿವ್ಯಚಕ್ಷುಸ್ಸನ್ನಿತ್ತು

ವೈಕುಂಠದ ದರ್ಶನ ಮಾಡಿಸಿದ. ಮುಕ್ತಿಯಲ್ಲಿ ಮಾತ್ರ ಕಾಣುವ ತನ್ನ ಸ್ವರೂಪವನ್ನು ಗೋಪಾಲಕರಿಗೆ ತೋರಿದ. ನಂದಗೋಪ ಮುಂತಾದವರು ವೈಕುಂಠವನ್ನು ಅದರೊಳಗೆ ಶ್ರೀಕೃಷ್ಣನನ್ನು ಕಂಡು ಆನಂದ ತುಂದಿಲರಾದರು.

❖

ಅಧ್ಯಾಯ - ೨೭

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ತಾನು ಹಿಂದೆ ಕಾತ್ಯಾಯನೀವ್ರತ ಮಾಡಿದ ಕನ್ಯೆಯರಿಗೆ ಮಾತು ಕೊಟ್ಟಿದ್ದನ್ನು ನೆನೆದು, ಅವರಲ್ಲಿ ಯೋಗ ಮಾಯೆ ಮಹಾಲಕ್ಷ್ಮಿಯ ಆವೇಶವಾಗಿದ್ದುದನ್ನೂ ಕಂಡು, ಶರತ್ಕಾಲದ ಹುಣ್ಣಿಮೆ ರಾತ್ರಿಯಲ್ಲಿ ಅರಳಿದ ಹೂಗಳ ಕಂಪು ಹೊತ್ತ ಗಾಳಿ ಬೀಸುವಾಗ ಅವರೊಂದಿಗೆ ವಿಹಾರ ಮಾಡಲು ಸಂಕಲ್ಪಿಸಿದ.

ದೂರದ ಪ್ರವಾಸ ಮುಗಿಸಿ ಬಂದ ಪ್ರಿಯಕರ ಪ್ರೇಯಸಿಯ ಕಣ್ಣೀರನ್ನು ಕೆಂಪಾದ ಕೈಯಿಂದ ಒರೆಸಿ ವಿರಹ ದುಃಖವನ್ನು ಕಳೆಯುವಂತೆ ಚಂದ್ರನುದಿಸಿ ಪೂರ್ವದಿಗಂಗನೆಯ ಮುಖವನ್ನು ತನ್ನ ಸುಖಕರವಾದ ಕೆಂಪುಕಿರಣಗಳಿಂದ ಒರೆಸಿ ಹಗಲಿನ ತಾಪವನ್ನು ಕಳೆದ. ಶ್ರೀಕೃಷ್ಣ ಮುರಳೀಗಾನ ಮಾಡಿದ. ಅಬಲೆಯರ ಮನ ಕಲಕುವಂಥ ಆ ಗಾನವನ್ನು ಕೇಳಿ ಗೋಪಿಯರು ಕೃಷ್ಣನ ಬಳಿಗೆ ಓಡೋಡಿ ಬಂದರು. ಹಾಲು ಕರೆಯುತ್ತಿದ್ದವರು, ಶಿಶುಗಳಿಗೆ ಎದೆಹಾಲುಣಿಸುತ್ತಿದ್ದವರು, ಪತಿಸೇವೆ ಮಾಡುತ್ತಿದ್ದವರು, ಊಟ ಮಾಡುತ್ತಿದ್ದವರು, ಮೈಗೆ ಅಂಗರಾಗ ಬಳಿದುಕೊಳ್ಳುತ್ತಿದ್ದವರು, ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿದ್ದವರು, ಎಲ್ಲರೂ ತಮ್ಮತಮ್ಮ ಕೆಲಸಗಳನ್ನು ಅರ್ಧದಲ್ಲೇ ಬಿಟ್ಟು ಬಂದರು. ಸೀರೆ ಆಭರಣಗಳನ್ನು ವ್ಯತ್ಯಾಸವಾಗಿ, ಉಡುವುದನ್ನು ಹೊದ್ದು ಹೊದೆಯುವುದನ್ನು ಉಟ್ಟು, ಕೈಕಡಗ ಕಾಲಿಗೆ ಕಾಲುಕಡಗ ಕೈಗೆ ತೊಟ್ಟು, ಸಂಭ್ರಮದಿಂದ, ಪತಿಸುತರು ಬಂಧುಗಳ ವಿರೋಧವನ್ನೂ ಲೆಕ್ಕಿಸದೆ ಧಾವಿಸಿ ಬಂದರು. ಯೋಗಬಲದಿಂದ ಎರಡು ಶರೀರಗಳನ್ನು ಧರಿಸಿ, ಒಂದು ಶರೀರದಿಂದ ಅದೃಶ್ಯರಾಗಿ ಕೃಷ್ಣನ ಬಳಿಗೇ ಬಂದರು. ಇನ್ನೊಂದು ಶರೀರದಿಂದ ಹಿಂತಿರುಗಿ ಬಂದು ಬಂಧುಗಳ ಜೊತೆಗೆ ಇದ್ದುಬಿಟ್ಟರು. ಕೆಲವರು ಗೋಪಿಯರು ಹಾಗೆ ಮಾಡದೆ ಮನೆಯೊಳಗೇ ಉಳಿದರು. ಅಲ್ಲಿಯೆ ಕಣ್ಣುಮುಚ್ಚಿ

ಕೃಷ್ಣನನ್ನು ಧ್ಯಾನಿಸಿದರು. ವಿರಹತಾಪದಿಂದ ಪ್ರಾರಬ್ಧ ಪಾಪವನ್ನು ದಹಿಸಿಕೊಂಡು, ಧ್ಯಾನದಲ್ಲಿ ದೊರೆತ ಕೃಷ್ಣನ ಆಲಿಂಗನದಿಂದ ಪ್ರಾರಬ್ಧ ಪುಣ್ಯವನ್ನೂ ಉಂಡು ತೀರಿಸಿಕೊಂಡು, ಶರೀರತ್ಯಾಗ ಮಾಡಿ, ಸ್ವರ್ಗವನ್ನು ಸೇರಿದರು. ಕೃಷ್ಣನನ್ನು ಇನ್ನೂ ಚೆನ್ನಾಗಿ ತಿಳಿದುಕೊಂಡು ಅವನನ್ನು ಹೊಂದಿದರು.

ಗೋಪಿಯರು ಕೃಷ್ಣನನ್ನು ಪರಮಾತ್ಮನೆಂದು ಭಜಿಸದೆ ಪ್ರಿಯತಮನೆಂದು ಬಳಿಸಾರಿದರು. ಹಾಗಿದ್ದರೂ ಲೌಕಿಕ ವಿಷಯಗಳಲ್ಲಿ ಕಾಮನೆ ಬಂಧಕವಾದರೂ ಪರಮಾತ್ಮನಲ್ಲಿ ಕಾಮನೆ ಅವರಿಗೆ ಮೋಕ್ಷಕ್ಕೆ ಕಾರಣವಾಯಿತು. ಗೋಪಿಯರು ವಸ್ತುತಃ ಕೃಷ್ಣನನ್ನು ಪರಮಾತ್ಮನೆಂದು ತಿಳಿದೇ ಕಾಮಿಸಿದ್ದರು. ಕೃಷ್ಣನಿಗೂ ಅವನು ಪರಮಾತ್ಮನಾದ್ದರಿಂದ, ಜಾರತನ ದೋಷ ವಾಗಲಿಲ್ಲ. ಮತ್ತು ಗೋಪಿಯರಲ್ಲಿ ಆವಿಷ್ಟಳಾದ ರಮೆಯೊಡನೇ ವಿಹರಿಸಿದ್ದರಿಂದಲೂ ಅವನು ಅಧರ್ಮ ಮಾಡಲಿಲ್ಲ. ವಸ್ತುತಃ ಅವನು ಸ್ವರಮಣ. ರಮೆಯಲ್ಲಿಯೂ ತನ್ನದೇ ಆದ ಇನ್ನೊಂದು ಸ್ತ್ರೀರೂಪದಿಂದಲೆ ತಾನು ರಮಿಸುವುದರಿಂದ ಅಧರ್ಮ ಶಂಕೆಗೇ ಅವಕಾಶವಿಲ್ಲ.

ಗೋಪಿಯರ ಕಾಮಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಅವರಿಗೆ ನೀವೆಲ್ಲರೂ 'ಪತಿಗಳ ಬಳಿಗೆ ಹಿಂತಿರುಗಿರಿ, ಅದೇ ಧರ್ಮ' ಎಂದ. 'ಪತಿಯ ಸೇವೆ ಮಾಡುವುದು, ಪತಿಯ ಬಂಧುಗಳನ್ನು ಆದರಿಸುವುದು, ಮಕ್ಕಳ ಆರೈಕೆ ಮಾಡುವುದು ಸ್ತ್ರೀಯರಿಗೆ ಕರ್ತವ್ಯವಾಗಿದೆ. ಶ್ರೇಯಸ್ಕರವಾಗಿದೆ. ಜಾರಪುರುಷರ ಸಂಗ ಅನರ್ಥಕರ. ನನ್ನಲ್ಲಿ ಭಕ್ತಿಸಂಪಾದನೆ ಅಂಗಸಂಗದಿಂದ ಸುಲಭವೆಂದುಕೊಳ್ಳಬೇಡಿರಿ. ಶ್ರವಣ ಮನನ ಧ್ಯಾನ ನಾಮಸಂಕೀರ್ತನಗಳಿಂದ ಉದಿಸುವಷ್ಟು ಭಕ್ತಿ ಅಂಗಸಂಗದಿಂದ ಉದಿಸಲಾರದು' ಎಂದು ಬೋಧಿಸಿದ.

'ಶರತ್ಕಾಲದ ಹುಣ್ಣಿಮೆ ರಾತ್ರಿಗಳಲ್ಲಿ ನನ್ನೊಡನೆ ವಿಹರಿಸುವಿರಿ' ಎಂದು ಕೃಷ್ಣನೆ ಹಿಂದೆ ಆಶ್ವಾಸನೆ ನೀಡಿದ್ದ. ಇದೀಗ ಬೇರೆಯೆ ಮಾತನಾಡುತ್ತಿದ್ದಾನೆ ಎಂದು ಕಾತ್ಯಾಯನಿ ವ್ರತಗೈದ ಕನ್ಯೆಯರು ಕಳವಳಗೊಂಡರು. ವಿವಾಹಿತ ಸ್ತ್ರೀಯರೂ ಕೂಡ, ಪತಿಸೇವೆಯಿಂದ ವಿಷಯ ಭೋಗದಲ್ಲಿ ಮುಳುಗಿರೆಂದು ಕೃಷ್ಣ ತಮಗೆ

ಬೋಧಿಸುವುದು ವಿಷಾದಕರವೆಂದುಕೊಂಡರು. ಎಲ್ಲರೂ ಒಕ್ಕೊರಲಿನಿಂದ ಕೃಷ್ಣನನ್ನು ಬೇಡಿಕೊಂಡರು.

'ಕೃಷ್ಣ ಎಲ್ಲ ವಿಷಯ ಸುಖಗಳನ್ನೂ ತೊರೆದು ನಿನ್ನ ಪಾದಕಮಲಗಳನ್ನೇ ಭಕ್ತಿಯಿಂದ ಆರಾಧಿಸಲು ಬಂದ ನಮ್ಮನ್ನು ದೂರ ಮಾಡಬೇಡ. ತಂದೆ ತಾಯಿಗಳ ಪತಿಸುತರ ಸೇವೆ ಸ್ತ್ರೀಯರಿಗೆ ಧರ್ಮ ನಿಜ. ಆದರೆ ಅವರೊಳಗೆ ಅಂತರಾತ್ಮನಾಗಿದ್ದು ಸೇವೆ ಸ್ವೀಕರಿಸುವ ನಿನ್ನನ್ನೇ ಸೇವಿಸುವುದು ಇನ್ನೂ ಹೆಚ್ಚಿನ ಧರ್ಮವಾಗುವುದು. ಅವರು ನಮಗೆ ಮುಖ್ಯವಾಗಿ ಬಂಧುಗಳಲ್ಲ, ಸದಾ ಸುಖದಾಯಕರಾಗಿರುವುದೂ ಇಲ್ಲ. ನೀನೇ ಮುಖ್ಯವಾಗಿ ನಮಗೆ ಬಂಧು, ಸುಖದಾಯಕ. ನಮ್ಮ ಮನವನ್ನು ನೀನೇ ಕದ್ದಿರುವುದರಿಂದ ಅದಕ್ಕೆ ಸಂಸಾರಸುಖದಲ್ಲಿ ಆಸಕ್ತಿ ಇಲ್ಲ. ಕೈಗಳು ಗೃಹಕೃತ್ಯಕ್ಕೆ ಎಳಸುವುದಿಲ್ಲ. ಕಾಲುಗಳು ನಿನ್ನ ಪಾದಮೂಲದಿಂದ ಬೇರೆ ಕಡೆಗೆ ಒಂದು ಹೆಜ್ಜೆಯೂ ಕದಲುವುದಿಲ್ಲ.

ನಿನ್ನ ನಗು ನೋಟ ವೇಣುಗಾನಗಳಿಂದ ನಮ್ಮೆದೆಯಲ್ಲಿ ಪ್ರಣಯಾಗ್ನಿ ಜ್ವಾಲೆ ಉರಿಯುತ್ತಿದೆ. ನಿನ್ನ ಅಧರಾಮೃತಧಾರೆ ಯಿಂದ ಅದನ್ನು ತಣಿಸು. ಇಲ್ಲದಿದ್ದರೆ ಆ ವಿರಹಾಗ್ನಿಯಲ್ಲಿಯೇ ಶರೀರವನ್ನು ಸುಟ್ಟುಕೊಂಡು ನಿನ್ನ ಲೋಕವನ್ನೇ ಸೇರುವೆವು. ನೀನು ಒಬ್ಬ ಕೇವಲ ಸುಂದರಪುರುಷನೆಂದು ಕಾಮಪಿಪಾಸೆ ಯಿಂದ ನಾವು ಬಂದಿಲ್ಲ. ಕಮಲಾಕ್ಷ, ಆ ದೇವಿ ಕಮಲೆಗೆ ಕಣ್ಣಿಗೆ ಹಬ್ಬ ಉಂಟು ಮಾಡುವ ಪಾದ ನಿನ್ನದು ಎಂದು ತಿಳಿದಿದ್ದೇವೆ. ಬೇರೆ ಎಲ್ಲರೂ ಲಕ್ಷ್ಮೀಕಟಾಕ್ಷಕ್ಕೆ ತವಕಿಸುತ್ತಿದ್ದರೂ ಆ ಲಕ್ಷ್ಮೀ ನಿನ್ನೆದೆಯಲ್ಲಿ ಸ್ಥಾನ ಪಡೆದಿದ್ದರೂ ನಿನ್ನ ಪಾದಧೂಳಿಯನ್ನು ಸೇವಿಸಲು ಬಯಸುತ್ತಾಳೆ. ಅಂಥ ನಿನ್ನ ಪಾದವನ್ನು ಸೇವಿಸಲು ನಾವು ಮನೆ ಮಠಗಳನ್ನು ತೊರೆದು ಬಂದಿದ್ದೇವೆ.

ನಿನ್ನ ಅಮೃತದಂಥ ವೇಣುಗಾನಕ್ಕೆ, ಮೂಲೋಕದಲ್ಲೇ ಅತ್ಯಂತ ಸುಂದರವಾದ ನಿನ್ನ ರೂಪಕ್ಕೆ ಮೈಮರೆತು, ಮೂಲೋಕ ದಲ್ಲಿ ಯಾವ ಹೆಣ್ಣು ತಾನೇ ಪಾತಿವ್ರತ್ಯದ ಧರ್ಮವನ್ನು ಬದಿಗಿಟ್ಟು ನಿನ್ನ ಬಳಿಗೆ ಬಾರದಿರುತ್ತಾಳೆ? ಈ ಹಸುಗಳು, ಮೃಗಪಕ್ಷಿಗಳು, ಮರಗಿಡಗಳೂ ಕೂಡ ನಿನ್ನ ಸಂಗದಿಂದ ರೋಮಾಂಚಗೊಂಡಿವೆ.

ಹೇ ದೀನಬಂಧು, ದೀನರಾದ ನಮ್ಮ ತಲೆಯ ಮೇಲೂ ಪ್ರಣಯಾಗ್ನಿಯಿಂದ ಸುಡುತ್ತಿರುವ ನಮ್ಮ ಸ್ತನಗಳ ಮೇಲೂ ನಿನ್ನ ಕರಕಮಲವನ್ನಿಡು.'

ಹೀಗೆ ಗೋಪಿಯರು ದೈನ್ಯದಿಂದ ಬೇಡಿದಾಗ ಶ್ರೀಕೃಷ್ಣ ದಯೆ ದೋರಿದ. ಅವರೊಂದಿಗೆ ರಮಿಸಿದ. ಅವರೆಲ್ಲರೂ ಅವನನ್ನು ಸುತ್ತುವರಿದರು. ನಕ್ಷತ್ರಗಳಿಂದ ಸುತ್ತುವರಿದ ಚಂದ್ರನಂತೆ ಆತ ಶೋಭಿಸಿದ.

ಗೋಪಿಯರ ನಡುವೆ ನಾಯಕನಾಗಿ ವೈಜಯಂತೀಮಾಲೆ ಧರಿಸಿ ಮಧುರ ಗಾನಮಾಡುತ್ತ ಯಮುನೆಯ ತಣ್ಣನೆಯ ಅಲೆಗಳಿಂದ ತಂಪಾದ ಉಸುಕಿನ ಪ್ರದೇಶದಲ್ಲಿ ನೈದಿಲೆ ಕಂಪುಹೊತ್ತು ಬೀಸುವ ಗಾಳಿಯನ್ನು ಸೇವಿಸುತ್ತ ವಿಹಾರ ಮಾಡಿದ. ಬರಸೆಳೆದು ತಬ್ಬಿಕೊಳ್ಳುವುದು ತೋಳು ಮುಂಗುರುಳು ತೊಡೆಗಳನ್ನು ಸ್ಪರ್ಶಿಸುವುದು ಸೆರೆಗೆಳೆಯುವುದು ಎದೆಯ ಮೇಲೆ ಕೈಯಿಕ್ಕುವುದು ಹಾಸ್ಯವಾಡುವುದು ಅನುರಾಗದಿಂದ ನೋಡುವುದು ನಗುವುದು ಹೀಗೆ ಎಲ್ಲ ಬಗೆಯಿಂದಲೂ ಚೆಲುವೆಯರ ಕಾಮವನ್ನು ಕೆರಳಿಸಿ ರಮಿಸಿದ. ಪರಮಾತ್ಮನಾದ ಭಗವಾನ್ ಶ್ರೀಕೃಷ್ಣನ ವಿಶೇಷ ಸಲಿಗೆಯನ್ನು ಪಡೆದ ಚೆಲುವೆಯರು ಭೂಮಿಯಲ್ಲಿ ಎಲ್ಲ ಹೆಣ್ಣುಗಳಿಗಿಂತ ತಾವೇ ಹೆಚ್ಚೆಂದುಕೊಂಡರು. ಅವರ ಮದವನ್ನು ಇಳಿಸಿ ಅನುಗ್ರಹಿಸುವುದಕ್ಕಾಗಿ ಶ್ರೀಕೃಷ್ಣ ಅದೃಶ್ಯನಾದ.

❖ ❖ ❖

ಶ್ರೀಕೃಷ್ಣನ ಮುರಳೀಗಾನ ಕೇಳಿ ಬಂದಾಗ ಗೋಪಿಯರೆಲ್ಲರೂ ಅವನ ಬಳಿಗೆ ಧಾವಿಸಿದರು. ಕೆಲವರು ಮಾತ್ರ ಮನೆಯೊಳಗೇ ಉಳಿದು ಧ್ಯಾನದಲ್ಲಿ ಶ್ರೀಕೃಷ್ಣನನ್ನು ಆಲಿಂಗಿಸಿ ಮುಕ್ತರಾದರು-

ತಮೇವ ಪರಮಾತ್ಮಾನಂ ಜಾರಬುದ್ಧ್ಯಾಽಪಿ ಸಂಗತಾಃ |
ಜಹುರ್ಗುಣಮಯಂ ದೇಹಂ ಸದ್ಯಃ ಪ್ರಕ್ಷೀಣಬಂಧನಾಃ || ೧೧ ||

ಧ್ಯಾನದಲ್ಲಿ ಆಲಿಂಗನವಿತ್ತ ಆ ಪರಮಾತ್ಮನನ್ನೇ ಜಾರನೆಂದು ತಿಳಿದು ಕೂಡಿದರು ಗೋಪಿಯರು. ಒಡನೆ ಪ್ರಾಕೃತ ದೇಹವನ್ನು ತೊರೆದರು.

ಸ್ವರ್ಗದಲ್ಲಿ ಇನ್ನೂ ಚೆನ್ನಾಗಿ ಅವನನ್ನು ತಿಳಿದು ಪ್ರಾರಬ್ಧ ಬಂಧನವನ್ನು ನೀಗಿಕೊಂಡು ಮೋಕ್ಷದಲ್ಲಿ ಅವನನ್ನೇ ಸೇರಿದರು.

ಈ ಶ್ಲೋಕದಲ್ಲಿ ಗೋಪಿಯರು ಕೇವಲ ಜಾರಬುದ್ಧಿಯಿಂದ ಕೃಷ್ಣನ ಅಂಗ ಸಂಗಮಾಡಿ ಜಡದೇಹದಿಂದ ಮುಕ್ತರಾದರು ಎಂದಿದೆ. ಇದು ಜ್ಞಾನದಿಂದಲೇ ಮೋಕ್ಷ ಎನ್ನುವ ಶಾಸ್ತ್ರಸಿದ್ಧಾಂತಕ್ಕೆ ವ್ಯತಿರಿಕ್ತವಾಗಿದೆ ಎಂದು ಆಕ್ಷೇಪಕ್ಕೆ ಅವಕಾಶವಿದೆ.

[೧]ಶ್ರೀಧರವ್ಯಾಖ್ಯಾನ ಹೇಳುತ್ತದೆ- 'ಮೋಕ್ಷ ಪಡೆಯಲು ಜ್ಞಾನ ಬೇಕಾಗಿಲ್ಲ. ಪರಮಾತ್ಮನ ಅಂಗಸಂಗ ಮಾಡಿದರೆ ಸಾಕು. ತಿಳಿಯದೆ ಅಮೃತವನ್ನು ಕುಡಿದರೂ ಅದು ಅದರ ಕಾರ್ಯವನ್ನು ಮಾಡಿಬಿಡುತ್ತದೆ. ಪರಮಾತ್ಮ ಪರಬ್ರಹ್ಮಸ್ವರೂಪ. ಅವನು ತನ್ನ ಶಕ್ತಿಯಿಂದ ಮೋಕ್ಷ ಕೊಡುತ್ತಾನೆ. ಪತಿಪುತ್ರಾದಿಗಳೂ ವಸ್ತುತಃ ಪರಬ್ರಹ್ಮ ಸ್ವರೂಪರೇ. ಆದರೂ ಅವರು ಜೀವರು. ಅವರಲ್ಲಿ ಬ್ರಹ್ಮತ್ವ ವ್ಯಕ್ತವಾಗಿಲ್ಲ. ಶ್ರೀಕೃಷ್ಣ ಅವರಂತೆ ಜೀವನಲ್ಲ, ಈಶ್ವರ. ಅದರಿಂದ ಅವನಲ್ಲಿ ಬ್ರಹ್ಮತ್ವ ವ್ಯಕ್ತವಾಗಿದೆ. ಮೋಕ್ಷ ಕೊಡುವ ಶಕ್ತಿ ಅವನಲ್ಲಿ ಇದೆ.[೧]

ಇದನ್ನೇ ಸಮರ್ಥಿಸುತ್ತ [೨]ವಲ್ಲಭವ್ಯಾಖ್ಯಾನದಲ್ಲಿ ಹೇಳಿದೆ- 'ಮೋಕ್ಷ ನೀಡುವುದಕ್ಕೆಂದೇ ಸಚ್ಚಿದಾನಂದರೂಪದಿಂದ ಪ್ರಕಟನಾದ ಪರಮಾತ್ಮ ಶ್ರೀಕೃಷ್ಣ. ಯಾರೇ ಆಗಲಿ ಯಾವುದೇ ರೀತಿಯಿಂದಾಗಲಿ ಅವನ ಸಂಬಂಧ ಮಾಡಿದರೆ ಸಾಕು, ಅವನಿಗೆ ಮೋಕ್ಷ ಲಭಿಸುತ್ತದೆ. ಜ್ಞಾನ ಭಕ್ತಿಗಳಿರುವುದು ಪರಮಾತ್ಮನನ್ನು

---

೧ ನ ಲಬ್ಧೋ ನಿರ್ಗಮೋ ಯಾಭಿಸ್ತಾಃ ಪ್ರಾಗಪಿ ತದ್ಭಾವನಾಯುಕ್ತಾಸ್ತದಾ ನಿತರಾಂ ದಧ್ಯುಃ। ತದಾನೀಮೇವ ತಂ ಪರಮಾತ್ಮಾನಂ ಕೃಷ್ಣಂ ಧ್ಯಾನತಃ ಪ್ರಾಪ್ತಾಃಸತ್ತ್ವೋ ಗುಣಮಯಂ ದೇಹಂ ಜಹುರಿತ್ಯಾಹ ಶ್ಲೋಕದ್ವಯೇನ ದುಃಸಹೇತಿ । ನನು ಕಥಂ ಜಹುಃ ಪರಮಾತ್ಮೇತಿ ಜ್ಞಾನಾಭಾವಾದಿತ್ಯಾಶಂಕ್ಯಾಹ ಜಾರಬುದ್ಧ್ಯಾಪೀತಿ। ನ ಹಿ ವಸ್ತುಶಕ್ತಿರ್ಬುದ್ಧಿಮಪೇಕ್ಷತೇ । ಅನ್ಯಥಾಮತ್ವಾಽಪಿ ಪೀತಾಮೃತವದಿತಿ ಭಾವಃ । ನನು ಯಥಾ ಪತಿ ಪುತ್ರಾದೀನಾಂ ವಸ್ತುತೋ ಬ್ರಹ್ಮತ್ವೇಽಪಿ ನ ತದ್‌ಭಜನಾನ್ಮೋಕ್ಷಸ್ತಥಾ ಬುದ್ಧ್ಯಭಾವಾತ್ ಏವಂ ಕೃಷ್ಣೇಽಪಿ ಬ್ರಹ್ಮ ಬುದ್ಧ್ಯಭಾವೇನ ತತ್‌ಸಂಗತಿಃ ಕಥಂ ಮೋಕ್ಷಹೇತುಃ ? ಜೀವೇಷ್ವಾವೃತಂ ಬ್ರಹ್ಮತ್ವಂ। ಕೃಷ್ಣಸ್ಯ ತು ಹೃಷೀಕೇಶತ್ವಾತ್ ಅನಾವೃತಂ। ಅತೋ ನ ತತ್ರ ಬುದ್ಧ್ಯಪೇಕ್ಷೇತಿ। -ಶ್ರೀಧರಃ

೨ ಭಗವಾನ್ ಹಿ ಮುಕ್ತಿದಾನಾರ್ಥಮೇವಾವತೀರ್ಣಃ ಸಚ್ಚಿದಾನಂದರೂಪೇಣ ಪ್ರಕಟಃ । ಅತೋ ಯಃಕಶ್ಚನ ಯೇನಕೇನಾಪ್ಯುಪಾಯೇನ ಭಗವತಿ ಸಂಬಂಧಂ ಪ್ರಾಪ್ನೋತಿ ಸ ಏವ ಮುಚ್ಯತೇ। ಜ್ಞಾನಭಕ್ತ್ಯೋಸ್ತು ಆವಿರ್ಭಾವಾರ್ಥಮುಪಯೋಗಃ। ಆವಿರ್ಭಾವಶ್ಚೇದನ್ಯಥಾ ಸಿದ್ಧಸ್ತದಾ ನ ಜ್ಞಾನಭಕ್ತ್ಯೋರುಪಯೋಗಃ। ಆವಿರ್ಭಾವಃ ಸ್ವೇಚ್ಛಯಾ ಭಕ್ತ್ಯಾ ಜ್ಞಾನೇನ ವಾ। ಭಗವದವತಾರಾತಿರಿಕ್ತಕಾಲೇ ದ್ವಯಮೇವ ಹೇತುಃ । ಅವತಾರದಶಾಯಾಂ ತು ನ ತಯೋಃ ಪ್ರಯೋಜಕತ್ವಂ। -ವಲ್ಲಭಃ

ಆವಿರ್ಭಾವಗೊಳಿಸುವುದಕ್ಕಾಗಿ. ಪರಮಾತ್ಮ ತಾನೇ ಸ್ವೇಚ್ಛೆಯಿಂದ ಆವಿರ್ಭಾವ ಗೊಳ್ಳುವಾಗ ಈ ಜ್ಞಾನಭಕ್ತಿಗಳಿಂದ ಪ್ರಯೋಜನವಿಲ್ಲ.'

[೧]ವೀರರಾಘವ ವ್ಯಾಖ್ಯಾನ ಹೇಳುತ್ತದೆ- 'ಜ್ಞಾನಭಕ್ತಿಗಳಿಲ್ಲದಿದ್ದರೂ ಜಾರಬುದ್ಧಿಯಿಂದಲೇ ಮೋಕ್ಷ ಲಭ್ಯವಾಗಬಹುದು. ಯಾವುದೇ ಭಾವನೆಯಿಂದ ಅನನ್ಯವಾಗಿ ಭಗವಂತನನ್ನೇ ಧ್ಯಾನಿಸಿದರೆ ಮೋಕ್ಷ ಸುಲಭ.'

[೨]ಜೀವಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ- 'ಈ ದೇಹವಿದ್ದರೆ ತಾನೆ ಕೃಷ್ಣ ನಮಗೆ ಜಾರನೆನಿಸುತ್ತಾನೆ? ಅದರಿಂದ ಈ ದೇಹವನ್ನೇ ಬಿಡೋಣ ಎನ್ನುವ ಜಾರಬುದ್ಧಿಯೇ ದೇಹನಿವೃತ್ತಿಗೆ ಕಾರಣ. ಅದರಿಂದ ಜಾರಬುದ್ಧಿಯಿಂದಲೇ ದೇಹದಿಂದ ಬಿಡುಗಡೆ ಹೊಂದಿದರು ಎಂದು ಶುಕಮುನಿ ಹೇಳಿದಂತೆ ಕಾಣುತ್ತದೆ. ವಸ್ತುತಃ ಇದು ಆಕ್ಷೇಪ. ಜಾರಬುದ್ಧಿಯಿಂದ ದೇಹವನ್ನು ಬಿಟ್ಟರೆ? ಇಲ್ಲ. ಅವರು ನಿತ್ಯಮುಕ್ತರು. ಹೇಯ ಲೌಕಿಕ ಶರೀರ ಅವರದಲ್ಲ. ಅಲೌಕಿಕ ಶರೀರದವರು, ಎಂದು. ಅಥವಾ ಗೋಪಿಯರಲ್ಲಿ ಬ್ರಹ್ಮಜ್ಞಾನವಿಲ್ಲದಿದ್ದರೂ ಕೃಷ್ಣಪ್ರೇಮ ಒಂದಿತ್ತು. ಅದರಿಂದಲೇ ಲೌಕಿಕ ಶರೀರದಿಂದ ಬಿಡುಗಡೆ ಹೊಂದಿ ಅಲೌಕಿಕ ಶರೀರದಿಂದ ಅವನನ್ನು ಸೇರಿದರು.'

[೩]ಸನಾತನಗೋಸ್ವಾಮಿ ವ್ಯಾಖ್ಯಾನ ಹೇಳುತ್ತದೆ- 'ಗೋಪಿಯರಿಗೆ ಜ್ಞಾನವಿಲ್ಲ ದಿದ್ದರೇನಂತೆ? ಕೃಷ್ಣನಲ್ಲಿ ಗಾಢವಾದ ಪ್ರೇಮವಿತ್ತು. ಜ್ಞಾನದಿಂದ ಮೋಕ್ಷ ಮಾತ್ರ

---

೧ ಕೃಷ್ಣಮೇವ ಜಾರಬುದ್ಧ್ಯಾಽಪಿ ಸಂಗತಾಃ ಸತ್ವಾದಿ ಗುಣಪ್ರಚುರಂ ದೇಹಂ ತತ್ಯಜುಃ। ಏವಕಾರಾಪಿಶಬ್ದಾಭ್ಯಾಂ ಕೋಽಪಿ ಭಾವೋ ಭಗವದನನ್ಯವಿಷಯಕೋ ಮುಕ್ತಯೇಽವ ಕಲ್ಪತೇ ಇತ್ಯಭಿಪ್ರೇತಂ। -ವೀರರಾಘವಃ

೨ ಅಸ್ಮಿನ್ ದೇಹೇ ಸತಿ ಅಸೌ ಜಾರೋ ಭವತಿ । ತದಯಂ ದೇಹಸ್ತ್ಯಾಜ್ಯಃ । ಇತಿ ಜಾರಬುದ್ಧಿಸ್ತತ್ತ್ಯಾಗೇ ಕಾರಣಂ। ಗುಣಮಯಂ ಜಹುಃ ನಿರ್ಗುಣಂ ದೇಹಮವಾಪುರಿತ್ಯಾಕ್ಷೇಪಃ। ಏತೇನ ಶುಭಾಶುಭಕರ್ಮಾರಬ್ಧಂ ಲೌಕಿಕಮೇವ ಶರೀರಂ। ಅಲೌಕಿಕಂ ತು ಭಕ್ತಶರೀರಂ ಶ್ರೀಕೃಷ್ಣಲೀಲಾರಬ್ಧ ಮಿತ್ಯಾಯಾತಂ। ಅತ ಏತಾಸ್ತತ್ಕಾಲಸಿದ್ಧಾಃ ಪ್ರಾಗುಕ್ತ ಯಜ್ಞಪತ್ನೀವತ್। ಅತಃ ಪ್ರಕ್ಷೀಣ ಬಂಧನಾ ನಿತ್ಯಮುಕ್ತಾಃ। ಗುಣಮಯಂ ದೇಹಂ ತ್ಯಕ್ತ್ವಾ ನಿರ್ಗುಣಂ ದೇಹಮಾಸಾದ್ಯ ತಂ ಸಂಗತಾ ಇತಿ ಯದುಕ್ತಂ ತತ್ ಸಿದ್ಧಾಂತಾನುವಾದ ಏವ। ನ ತು ಮಯಾಽಽರೋಪ್ಯ ಕಥಿತಂ। ತದತ್ರ ಕಃ ಸಂದೇಹಃ। ಕೃಷ್ಣಪ್ರೇಮ್ಣೈವ ತಥಾ ಸಂಪಾದಯತಿ। ನತು ಬ್ರಹ್ಮಜ್ಞಾನಂ। ಆಸಾಂ ತು ಪ್ರೇಮ್ಣೈವ। -ಜೀವಗೋಸ್ವಾಮಿ

೩ ಜ್ಞಾನೇನ ಮೋಕ್ಷೋ ಭವತೀ । ಪ್ರೀತಿ ಭಕ್ತ್ಯಾದಿನಾ ವೈಕುಂಠಲೋಕಾದಿ ಪ್ರಾಪ್ತಿಃ। ಸಖ್ಯ ಪ್ರೇಮಾದಿನಾ ಶ್ರೀ ಭಗವದ್ ವಶೀಕರಣಂ । ತತ್ರ ಚ ಸಮರ್ಥೇನ ಪ್ರೇಮ ವಿಶೇಷೇಣ ನಿತ್ಯಪ್ರೇಷ್ಠತಯಾ ವ್ರಜೇ ಸಂಯೋಗ ಇತಿ ಸಿದ್ಧಾಂತಃ। -ಸನಾತನ ಗೋಸ್ವಾಮಿ

ಲಭಿಸೀತು. ಪ್ರೀತಿಯಿಂದ ಭಕ್ತಿಯಿಂದ ವೈಕುಂಠಾದಿಲೋಕ ಪ್ರಾಪ್ತಿ. ಸಖ್ಯದಿಂದ ಪ್ರೇಮದಿಂದ ಭಗವಂತನನ್ನು ವಶೀಕರಿಸಿಕೊಳ್ಳಬಹುದು. ಗಾಢವಾದ ಪ್ರೇಮವಿದ್ದರೆ ಅವನನ್ನು ಆಲಿಂಗಿಸಲೂಬಹುದು.'

[೧]ಜೀವಗೋಸ್ವಾಮಿ ವ್ಯಾಖ್ಯಾನ ಪ್ರೇಮಸ್ವರೂಪದ ಬಗ್ಗೆ ಹೀಗೆ ಹೇಳುತ್ತದೆ. 'ಗೋಪಿಯರ ಪ್ರಣಯ ಮೇಲುನೋಟಕ್ಕೆ ಕಾಮದಂತೆ ಕಾಣಬಹುದು. ಕಾಮಿಗಳಂತೆ ಅವರೂ ಆಲಿಂಗನಾದಿ ನಿರತರಾಗುತ್ತಾರೆ. ಭಾಗವತಕ್ಕೆ ಅದರಲ್ಲಿ ತಾತ್ಪರ್ಯವಿಲ್ಲ. ಅವರದು ಶುದ್ಧಪ್ರೇಮ.'

ಈ ಎಲ್ಲ ವ್ಯಾಖ್ಯಾನಕಾರರು 'ಗೋಪಿಯರಲ್ಲಿ ಜ್ಞಾನವಿರಲಿಲ್ಲ. ಆದರೂ ಪ್ರೇಮದಿಂದಲೆ ಭಗವಂತನನ್ನು ಸೇರಿದರು. ಜ್ಞಾನ ಮೋಕ್ಷಕ್ಕೆ ಅನಾವಶ್ಯಕ' ಎನ್ನುತ್ತಿದ್ದಾರೆ. ಆದರೆ ಇದು 'ನಾನ್ಯಃ ಪಂಥಾ' ಎಂದು ಮುಂತಾದ ಪ್ರಮಾಣಗಳಿಗೆ ವಿರುದ್ಧ. ಸಕಲಶಾಸ್ತ್ರಗಳ ಪ್ರವೃತ್ತಿಯ ಮೂಲೋದ್ದೇಶವೇ ಜ್ಞಾನ. ಅದನ್ನೇ ಭಾಗವತ ಅಪಲಾಪಮಾಡುತ್ತಿದೆ ಎಂದಂತಾಯಿತು.

ವಸ್ತುತಸ್ತು ಗೋಪಿಯರು ಜ್ಞಾನವಿಲ್ಲದೆ ಮೋಕ್ಷ ಪಡೆದರೆಂದು ಭಾಗವತ ಹೇಳುತ್ತಿಲ್ಲ. ಏಕೆಂದರೆ ಸ್ಕಂದಪುರಾಣ ಹೇಳುತ್ತದೆ, ಗೋಪಿಯರು ಶರೀರತ್ಯಾಗ ಮಾಡಿದ ಬಳಿಕ ಸ್ವರ್ಗಲೋಕಕ್ಕೆ ಹೋದರು ಹೊರತು ವಿಷ್ಣುಲೋಕಕ್ಕೆ ಅಲ್ಲ. ಸ್ವರ್ಗದಲ್ಲಿ ಇನ್ನೂ ಹೆಚ್ಚು ಜ್ಞಾನ ಸಂಪಾದಿಸಿ ಅದರ ಬಲದಿಂದ ಮೋಕ್ಷ ಪಡೆದರು ಎಂದು.

ಕೃಷ್ಣನಲ್ಲಿ ಪ್ರೇಮ ಮಾಡಿ ಅದರಿಂದ ಮೋಕ್ಷ ಪಡೆದರೆಂದು ಭಾಗವತ ಹೇಳಿದೆ, ನಿಜ. ಅದು ಅಸಂಗತವಲ್ಲ. ಗೋಪಿಯರು ಅಪ್ಸರೆಯರಾದ್ದರಿಂದ ಜ್ಞಾನಿಗಳೇ ಆಗಿದ್ದು ಮೋಕ್ಷದಲ್ಲಿಯೂ ಅವರು ಪ್ರೇಮಯುಕ್ತವಾದ ಭಕ್ತಿಯಿಂದಲೆ ಭಗವಂತನನ್ನು ಸೇರುವವರು. ಹೀಗಾಗಿ ಗೋಪೀಜನ್ಮದಲ್ಲಿ ಪ್ರೇಮಸಾಧನೆ ಮಾಡಿ ಬಳಿಕ ಸ್ವರ್ಗದಲ್ಲಿ ಜ್ಞಾನಭಕ್ತಿ ಸಾಧನೆ ಮಾಡಿದ್ದಾರೆ. ಮೋಕ್ಷಕ್ಕೆ ಹೋಗಿದ್ದಾರೆ. ಅವರಿಗೆ 'ಜ್ಞಾನವಿರಲಿಲ್ಲ' ಎಂದುದು ಮೋಕ್ಷಕ್ಕೆ ಬೇಕಾಗುವಂಥ ಸ್ವಯೋಗ್ಯವಾದ ಪೂರ್ಣಜ್ಞಾನವಿರಲಿಲ್ಲ ಎಂದಿಷ್ಟೇ ಅಭಿಪ್ರಾಯದಿಂದ.

---

೧ ಯೇನ ರಾಗೇಣ ಜಾರಭಾವಮಯಂ ನಿಂದ್ಯಂ ಲೋಕಧರ್ಮಮರ್ಯಾದಾತಿಕ್ರಮಮಪಿ ತಾಃ ಕೃತವತ್ಯಸ್ತಂ ಸೂಚಯಿತ್ವಾ ತಸ್ಯೈವ ಪ್ರಶಸ್ತತ್ವಂ ದರ್ಶಿತಂ। ಚೇಷ್ಟಾವಿಶೇಷಸಾಮ್ಯಾತ್ ಕಾಮತಯಾ ವ್ಯಪದಿಷ್ಟತ್ವೇಽಪಿ ಪ್ರಿಯಾನುಕೂಲ್ಯ ತಾತ್ಪರ್ಯತ್ವೇನ ಪ್ರೇಮೈಕರೂಪತ್ವಂ ಚ। ಏವಂ ಹೇಯಾಂಶ ಪರಿತ್ಯಾಗ ಪೂರ್ವಕ ಮಹಾಪ್ರೇಮರಸನೀಯ ಕೃಷ್ಣ ಲಕ್ಷಣ ಪರಮಪುರುಷಾರ್ಥ ಶಿರೋಮಣಿಪ್ರಾಪ್ತಿರ್ದರ್ಶಿತಾ। -ಜೀವಗೋಸ್ವಾಮಿ

ಕೃಷ್ಣಕಾಮಾಸ್ತದಾ ಗೋಪ್ಯಸ್ತ್ಯಕ್ತ್ವಾದೇಹಂ ದಿವಂಗತಾಃ ।
ಸಮ್ಯಕ್ ಕೃಷ್ಣಂ ಪರಂ ಬ್ರಹ್ಮ ಜ್ಞಾತ್ವಾ ಕಾಲಾತ್ ಪರಂ ಯಯುಃ ।
ಪೂರ್ವಂ ಚ ಜ್ಞಾನಸಂಯುಕ್ತಾಸ್ತತ್ರಾಪಿ ಪ್ರಾಯಶಸ್ತಥಾ ।
ಅತಸ್ತಾಸಾಂ ಪರಬ್ರಹ್ಮಗತಿರಾಸೀನ್ನ ಕಾಮತಃ ।
ನ ತು ಜ್ಞಾನಮೃತೇ ಮೋಕ್ಷೋ ನಾನ್ಯಃ ಪಂಥೇತಿ ಹಿ ಶ್ರುತಿಃ ।
ಕಾಮಯುಕ್ತಾ ತದಾ ಭಕ್ತಿರ್ಜ್ಞಾನಂ ಚಾತೋ ವಿಮುಕ್ತಿಗಾಃ ।
ಅತೋ ಮೋಕ್ಷೇಽಪಿ ತಾಸಾಂ ಚ ಕಾಮೋ ಭಕ್ತ್ಯಾಽನುವರ್ತತೇ॥
ಅತೋದಕತ್ವೇನ ॥

'ಮನೆಯೊಳಗೆ ನಿರ್ಬಂಧದಲ್ಲಿರಿಸಲ್ಪಟ್ಟ ಗೋಪಿಯರು ಕೃಷ್ಣನ ಬಯಕೆಯಿಂದ ಶರೀರ ತ್ಯಾಗಮಾಡಿ ಸ್ವರ್ಗಕ್ಕೆ ಹೋದರು. ಅಲ್ಲಿ (ಸಂ-ಗತಾಃ) ತಮ್ಮ ಯೋಗ್ಯತೆಯಷ್ಟು ಚೆನ್ನಾಗಿ ಪರಬ್ರಹ್ಮಜ್ಞಾನ ಸಂಪಾದಿಸಿ ಕೆಲಕಾಲವಾದ ಬಳಿಕ ಮೋಕ್ಷ ಪಡೆದರು. ಹಿಂದೆಯೂ ಗೋಪೀಜನ್ಮದಲ್ಲಿ (ಸಂ ಗತಾಃ) ಪ್ರಾಯಶಃ ಜ್ಞಾನಿಗಳೇ ಆಗಿದ್ದರು. ಅದರಿಂದ ಅವರಿಗೆ ಸ್ವರ್ಗದಲ್ಲಿ ಹೆಚ್ಚಿನ ಜ್ಞಾನ ಸಂಪಾದನೆಯಿಂದ (ಸಂಗತಾಃ) ಪರಬ್ರಹ್ಮ ಪ್ರಾಪ್ತಿಯಾಯಿತು. ಕೇವಲ ಕಾಮದಿಂದಲೇ ಅಲ್ಲ. ಏಕೆಂದರೆ ಜ್ಞಾನವಿಲ್ಲದೆ ಮೋಕ್ಷವಿಲ್ಲ ಎಂದು 'ನಾನ್ಯಃ ಪಂಥಾ' ಎಂದು ಮುಂತಾದ ಶ್ರುತಿ ಹೇಳುತ್ತಿದೆ. ಕಾಮ, ಕಾಮಯುಕ್ತವಾದ ಭಕ್ತಿ ಮತ್ತು ಜ್ಞಾನ ಇವು ಮೂರು ಇದ್ದುದರಿಂದ ಅವರು ಮೋಕ್ಷ ಭಾಗಿಗಳಾದರು. ಅವರ ಭಕ್ತಿ ಕಾಮಯುಕ್ತವಾದುದರಿಂದ ಮೋಕ್ಷದಲ್ಲಿಯೂ ಭಕ್ತಿಯೊಂದಿಗೆ ಕಾಮವಿರುತ್ತದೆ. ಅದರಿಂದ ಕಾಮಸಾಧನೆಗಾಗಿಯೇ ಗೋಪಿಯರು ಕೃಷ್ಣನೊಂದಿಗೆ ವಿಹರಿಸಿದರು. ಲೋಕದಲ್ಲಿ ಕಾಮ 'ತೋದಕ' ವಿರಹವೇದನೆ ಮುಂತಾದ ದುಃಖಕ್ಕೆ ಕಾರಣವಾದರೂ ಮೋಕ್ಷದಲ್ಲಿ (ಅತೋದಕತ್ವೇನ) ಅದು ಹಾಗಿರುವುದಿಲ್ಲ. ಅದರಿಂದ ಅಪ್ಸರೆಯರಿಗೆ ಭಕ್ತಿಯಂತೆ ಅದರ ಜೊತೆಗೆ ಕಾಮವೂ ವಿಶೇಷ ಸುಖಾಭಿವ್ಯಕ್ತಿಗೆ ಕಾರಣವಾಗುತ್ತದೆ.' ಎಂದು ಸ್ಕಂದಪುರಾಣ ಹೇಳಿದೆ.

❖ ❖ ❖

ಗೋಪಿಯರು ಕಾಮದಿಂದ ಮೋಕ್ಷವನ್ನು ಹೇಗೆ ಪಡೆದರು ಎನ್ನುವ ಪರೀಕ್ಷಿತನ ಪ್ರಶ್ನೆಗೆ ಶುಕಮುನಿಗಳು ಪರಿಹಾರವನ್ನು ಹೇಳುತ್ತಾರೆ-

ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾ ಗತಃ ।
ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ ॥ ೧೩ ॥

ನಿನಗೆ ನಾವು ಹಿಂದೆಯೇ ಹೇಳಿದ್ದೇವೆ, ಶಿಶುಪಾಲ ಕೃಷ್ಣನನ್ನು ದ್ವೇಷಿಸಿದರೂ ಹೇಗೆ ಮೋಕ್ಷ ಪಡೆದನೆಂದು. ಅದರಿಂದ ಕೃಷ್ಣನನ್ನು ಪ್ರೀತಿಸಿದ ಗೋಪಿಯರು ಮೋಕ್ಷ ಪಡೆದರೆಂದರೆ ಅದೇನೂ ಆಶ್ಚರ್ಯವಲ್ಲ.

(ಅತಾದೃಕ್ತ್ವೇನ) ಸದಾ ದ್ವೇಷಿಣಾಮಧರಂ ತಮಃ ।
ಮುಕ್ತಿಶಬ್ದೋದಿತಂ ಚೈದ್ಯಪ್ರಭೃತೌ ದ್ವೇಷಭಾಗಿನಃ ।
ಭಕ್ತಿಭಾಗೀ ಪೃಥಙ್ಮುಕ್ತಿಮಗಾದ್ ವಿಷ್ಣುಪ್ರಸಾದತಃ ।
ಕಾಮಸ್ತ್ವಶುಭಕೃಚ್ಚಾಪಿ ಭಕ್ತ್ಯಾವಿಷ್ಣೋಃ ಪ್ರಸಾದಕೃತ್ ।
ದ್ವೇಷಿಜೀವಯುತಂ ಚಾಪಿ ಭಕ್ತಂ ವಿಷ್ಣುರ್ವಿಮೋಚಯೇತ್ ।
ಅಹೋಽತಿಕರುಣಾ ವಿಷ್ಣೋಃ ಶಿಶುಪಾಲಸ್ಯ ಮೋಕ್ಷಣಾತ್ ॥
ಇತಿ ಸ್ಕಾಂದೇ ॥

'ಸದಾ ಭಗವಂತನಲ್ಲಿ ದ್ವೇಷ ಮಾಡುವವರಿಗೆ ('ಅತೋದಕತ್ವೇನ' ಎಂಬಲ್ಲಿಯೇ ಪಾಠಾಂತರ- ಅತಾದೃಕ್ತ್ವೇನ) ಜ್ಞಾನ ಭಕ್ತ್ಯಾದಿಗಳಿಲ್ಲದಿರುವುದರಿಂದ ಅಂಧಂತಮಸ್ಸೇ ಉಂಟಾಗುತ್ತದೆ. ಲಿಂಗಭಂಗವಿರುವುದರಿಂದ ಅದೂ 'ಮುಕ್ತಿ' ಎನಿಸುತ್ತದೆ. ಶಿಶುಪಾಲ ಮುಂತಾದವರಲ್ಲಿ ಆವಿಷ್ಟರಾಗಿದ್ದ ದ್ವೇಷಿ ಜೀವರಿಗೆ ಈ ಅಂಧಂತಮಸ್ಸೆಂಬ ಮುಕ್ತಿ ಲಭಿಸಿತು. ಭಕ್ತಜೀವರಿಗೆ ಇದಕ್ಕಿಂತ ವಿಲಕ್ಷಣವಾದ ಭಗವತ್ ಪ್ರಾಪ್ತಿರೂಪವಾದ ಮುಕ್ತಿ ಭಗವಂತನ ಅನುಗ್ರಹದಿಂದ ಲಭಿಸಿತು. ಕೇವಲ ಕಾಮ ಅನರ್ಥಕಾರಿಯಾದರೂ ವಿಷ್ಣುಭಕ್ತಿಯಿಂದ ಕೂಡಿದ್ದರೆ ಅದು ವಿಷ್ಣುವಿನ ಅನುಗ್ರಹಕ್ಕೆ ಕಾರಣವಾಗುವುದು. ದ್ವೇಷಿಜೀವನೊಂದಿಗೆ ಇದ್ದರೂ ಭಕ್ತನಿಗೆ ವಿಷ್ಣು ಮೋಕ್ಷ ನೀಡುತ್ತಾನೆ ಎಂದರೆ ಇದು ವಿಷ್ಣು ಅತ್ಯಂತ ಕರುಣಾಳು ಎಂಬುದನ್ನೇ ತೋರಿಸುತ್ತದೆ. ಶಿಶುಪಾಲನಿಗೆ ಮೋಕ್ಷ ನೀಡಿದ್ದೇ ಇದಕ್ಕೆ ಸಾಕ್ಷಿ' ಎಂದು ಸ್ಕಂದಪುರಾಣದಲ್ಲಿ ಹೇಳಿದೆ.

ಜಗತ್ಪ್ರಪಿತಾಮಹೇ ಜಾರಬುದ್ಧಿರ್ನ ಯುಕ್ತಾ । ತಥಾಪಿ ।

ಬೇರೆಯವರು ಲೋಕಪಿತಾಮಹನಾದ ಬ್ರಹ್ಮನಿಗೂ ಪಿತನಾದ ಶ್ರೀಹರಿಯಲ್ಲಿ ಜಾರಬುದ್ಧಿ ಮಾಡುವುದು ಯುಕ್ತವಲ್ಲ. ಆದರೂ, ಅಪ್ಸರೆಯರಾಗಿದ್ದ ಕಾರಣ, ಗೋಪಿಯರು ಶ್ರೀಕೃಷ್ಣನನ್ನು ಜಾರನೆಂದು ತಿಳಿದೇ ಮೋಕ್ಷ ಹೊಂದಿದರು. ಎನ್ನುವುದು 'ಜಾರಬುದ್ಧ್ಯಾಽಪಿ ಸಂಗತಾಃ' ಎಂಬುದರ ಅರ್ಥ.

❖ ❖ ❖

ಗೋಪಿಯರು ಜ್ಞಾನವಿಲ್ಲದೆ ಕೇವಲ ಕಾಮದಿಂದ ಹೇಗೆ ಮೋಕ್ಷ ಪಡೆದರೆಂದು ಪರೀಕ್ಷಿತನ ಪ್ರಶ್ನೆ.

ಕೃಷ್ಣಂ ವಿದುಃ ಪರಂ ಕಾಂತಂ ನ ತು ಬ್ರಹ್ಮತಯಾ ಮುನೇ ।
ಗುಣಪ್ರವಾಹೋಪರಮಸ್ತಾಸಾಂ ಗುಣಧಿಯಾಂ ಕಥಮ್ ॥ ೧೨ ॥

ಗೋಪಿಯರು ಕೃಷ್ಣನನ್ನು ಕೇವಲ ಜಾರನೆಂದು ತಿಳಿದರು. ಪರಬ್ರಹ್ಮನೆಂದಲ್ಲ. ಹೀಗಿದ್ದರೂ, ಮುನಿಯೆ, ವಿಷಯಾಸಕ್ತರಾಗಿದ್ದ ಅವರಿಗೆ ಸಂಸಾರ ನಿವೃತ್ತಿ ಹೇಗಾಯಿತು?

ಈ ಶ್ಲೋಕದಲ್ಲಿ ಗೋಪಿಯರು ಜ್ಞಾನವಿಲ್ಲದೆ ಕೇವಲಕಾಮದಿಂದ ಹೇಗೆ ಮೋಕ್ಷ ಪಡೆದರೆಂದು ಪ್ರಶ್ನೆ. ಅದಕ್ಕೆ ಶಿಶುಪಾಲ ಕೇವಲದ್ವೇಷದಿಂದ ಮೋಕ್ಷಪಡೆದಂತೆ ಎಂದು ಉತ್ತರ ಕಾಣುತ್ತದೆ. ಹಾಗೇ ಬೇರೆ ವ್ಯಾಖ್ಯಾನ ಕಾರರೆಲ್ಲರೂ ಹೇಳುತ್ತಾರೆ. ಇದು ತಪ್ಪು. ಗೋಪಿಯರು ಮುಂದೆ ಕೃಷ್ಣನ ಮುಂದೆ ಹೇಳುವ ಮಾತಿನಲ್ಲಿಯೇ ಅವರಿಗೆ ಶ್ರೀಕೃಷ್ಣ ಪರಮಾತ್ಮನೆಂಬ ಜ್ಞಾನವಿದ್ದಿತು ಕೇವಲ ಕಾಮವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅದರಿಂದ 'ಕೃಷ್ಣಂ ವಿದುಃ ಪರಂ' ಎಂಬಲ್ಲಿ 'ಪರಂ' ಎಂದರೆ ಚೆನ್ನಾಗಿ, ಯೋಗ್ಯತಾನುಸಾರ ಪೂರ್ತಿಯಾಗಿ, ಜ್ಞಾನವಿರಲಿಲ್ಲ. ಹಾಗಿದ್ದರೂ ಅವರಿಗೆ ಮೋಕ್ಷ ಹೇಗೆ ಲಭಿಸಿತೆಂದೇ ಪ್ರಶ್ನೆ. ಮುಂದೆ ಸ್ವರ್ಗಲೋಕದಲ್ಲಿ ಪೂರ್ತಿಜ್ಞಾನ ಪಡೆದೇ ಮುಕ್ತರಾಗುತ್ತಾರೆ ಎಂದು ಉತ್ತರ ಎನ್ನುತ್ತಾರೆ ಶ್ರೀಮದಾಚಾರ್ಯರು.

ಬ್ರಹ್ಮತಯಾ ನ ಸಮ್ಯಕ್। ಪ್ರೇಷ್ಠೋ ಭವಾಂಸ್ತನುಭೃತಾಂ ಸುಹೃದಂತರಾತ್ಮಾ , ರಮಾಯಾ ದತ್ತಕ್ಷಣಮಿತ್ಯಾದಿ ವಚನಾತ್ ॥

'ನ ತು ಬ್ರಹ್ಮತಯಾ ವಿದುಃ' ಎಂದರೆ ಗೋಪಿಯರು ಕೃಷ್ಣನನ್ನು ಪರಬ್ರಹ್ಮನೆಂದು ತಿಳಿದಿದ್ದರೂ 'ಪರಂ' ಚೆನ್ನಾಗಿ ತಿಳಿದಿರಲಿಲ್ಲ ಎಂದರ್ಥ. ಏಕೆಂದರೆ, ಗೋಪಿಯರು ಮುಂದೆ ಕೃಷ್ಣನ ಮುಂದೆ ಹೇಳುತ್ತಾರೆ, 'ನೀನೆ ಎಲ್ಲ ಶರೀರಿಗಳಿಗೂ ಪ್ರಿಯತಮನಾದ ಅಂತರಾತ್ಮನಾದ ಮಿತ್ರನಾಗಿರುವೆ' (ಅ.೨೭.ಶ್ಲೋ.೩೨) ರಮಾದೇವಿಯ ಕಣ್ಣಿಗೆ ಹಬ್ಬ ಉಂಟುಮಾಡುವ ಪಾದ ನಿನ್ನದು (ಅ.೨೭.ಶ್ಲೋ.೩೬) ಎಂದು ಮುಂತಾಗಿ.

❖ ❖ ❖

ಕೇವಲ ಕಾಮಕ್ರೋಧಾದಿಗಳಿಂದ ಮುಕ್ತಿ ಇಲ್ಲ, ಭಕ್ತಿ ಆವಶ್ಯಕವೆಂದು ಶುಕಮುನಿ ಪರೀಕ್ಷಿತನಿಗೆ ಹೇಳುತ್ತಾರೆ-

ಕಾಮಂ ಕ್ರೋಧಂ ಭಯಂ ಮೋಹಂ ಮೈತ್ರೀಂ ಸೌಹೃದಮೇವ ವಾ ।
ನಿತ್ಯಂ ಹರೌ ವಿದಧತೋ ಯಾಂತಿ ತನ್ಮಯತಾಂ ಹಿ ತೇ ॥ ೧೫ ॥

ಹರಿಯಲ್ಲಿ ಸದಾ ಕಾಮ ಕ್ರೋಧ ಭಯ ಮೋಹ ಮೈತ್ರಿಗಳನ್ನಾಗಲಿ ಪ್ರೀತಿಯನ್ನಾಗಲಿ ಮಾಡುವವರು ಮುಕ್ತಿಯಲ್ಲಿ ಆ ಕಾಮಾದಿ ಸ್ವರೂಪರೇ ಆಗುತ್ತಾರೆ.

ಕಾಮಿನಃ ಕಾಮಿತ್ವಂ ಕ್ರೋಧಿನಃ ಕ್ರೋಧಿತ್ವಮೇವ ಸರ್ವದಾ ಭವತೀತಿ ತನ್ಮಯತಾ ।

ವಿಮುಕ್ತಾವಪಿ ಕಾಮಿನ್ಯೋ ವಿಷ್ಣುಕಾಮಾ ವ್ರಜಸ್ತ್ರಿಯಃ ।
ದ್ವೇಷಿಣಶ್ಚ ಹರೌ ನಿತ್ಯಂ ದ್ವೇಷೇಣ ತಮಸಿ ಸ್ಥಿತಾಃ । ಇತಿ ಚ ॥
ಭಕ್ತ್ಯಾ ಹಿ ನಿತ್ಯಕಾಮಿತ್ವಂ ನ ತು ಭಕ್ತಿಂ ವಿನಾ ಭವೇತ್ ।
ಅತಃ ಕಾಮಿತಯಾ ವಾಽಪಿ ಮುಕ್ತಿರ್ಭಕ್ತಿಮತಾಂ ಹರೌ ।
ಸ್ನೇಹಭಕ್ತಾಃ ಸದಾ ದೇವಾಃ ಕಾಮಿತ್ವೇನಾಪ್ಸರಸ್ತ್ರಿಯಃ ।
ಕಾಶ್ಚಿತ್ ಕಾಶ್ಚಿನ್ನ ಕಾಮೇನ ಭಕ್ತ್ಯಾ ಕೇವಲಯೈವ ತು ।
ಮೋಕ್ಷಮಾಯಾಂತಿ ನಾನ್ಯೇನ ಭಕ್ತಿಂ ಯೋಗ್ಯಾಂ ವಿನಾ ಕ್ವಚಿತ್ ।
ಇತಿ ಪಾದ್ಮೇ ॥

'ತನ್ಮಯತಾ' ಎಂದರೆ ಪರಮಾತ್ಮನ ಐಕ್ಯವಲ್ಲ. ಸಂಸಾರದಲ್ಲಿ ಸದಾ ಕಾಮಿಯಾಗಿರುವವನು ಮುಕ್ತಿಯಲ್ಲಿಯೂ ಸದಾ ಕಾಮಮಯ, ಕಾಮ ಸ್ವರೂಪನಾಗಿರುತ್ತಾನೆ. ಸದಾ ಕ್ರೋಧಿಯು ಹಾಗೇ ಕ್ರೋಧಮಯ, ಕ್ರೋಧ ಸ್ವರೂಪನಾಗಿರುತ್ತಾನೆ ಇದೇ ತನ್ಮಯತೆ. ಏಕೆಂದರೆ,

'ಕೃಷ್ಣನನ್ನು ಕಾಮಿಸುವ ಗೋಪಿಯರು ಮುಕ್ತಿಯಲ್ಲಿಯೂ ಅವನನ್ನು ಕಾಮಿಸುತ್ತಾರೆ. ಹರಿಯಲ್ಲಿ ಸದಾ ದ್ವೇಷ ಮಾಡಿದ ಅಸುರರು ಅಂಧಂ ತಮಸ್ಸಿನಲ್ಲಿರುವಾಗಲೂ ಅವನನ್ನು ದ್ವೇಷಿಸುತ್ತಾರೆ' ಎಂದು ಸ್ಕಂದ ಪುರಾಣದಲ್ಲಿ ನಿದರ್ಶನಗಳು ಉಕ್ತವಾಗಿವೆ.

'ನಿತ್ಯ ಕಾಮಿತ್ವ' ಅಂದರೆ ಮುಕ್ತಿಯಲ್ಲಿಯೂ ಹರಿಯನ್ನು ಕಾಮಿಸಬೇಕಾದರೆ ಅದು ಕಾಮದೊಂದಿಗೆ ಭಕ್ತಿ ಇದ್ದರೆ ಮಾತ್ರ ಶಕ್ಯ. ಭಕ್ತಿ ಇಲ್ಲದಿದ್ದರೆ ಶಕ್ಯವಲ್ಲ. ಅದರಿಂದ ಕಾಮದಿಂದ ಮುಕ್ತಿ ಹರಿಯಲ್ಲಿ ಭಕ್ತಿಉಳ್ಳವರಿಗೆ ಮಾತ್ರ.

ಸದಾ ಸ್ನೇಹದಿಂದ ಅಂದರೆ ಮೈತ್ರಿಯಿಂದ ಅಥವಾ ಪ್ರೀತಿಯಿಂದ

ಯುಕ್ತರಾಗಿರುವ ಭಕ್ತರೆಂದರೆ ದೇವತೆಗಳು. ಕೆಲವು ಅಪ್ಸರೆಯರು ಕಾಮಯುಕ್ತವಾದ ಭಕ್ತಿಯಿಂದ ಮೋಕ್ಷ ಪಡೆಯುತ್ತಾರೆ. ಇನ್ನು ಕೆಲವು ಅಪ್ಸರೆಯರು ಮಾತ್ರ ಕಾಮಯುಕ್ತವಲ್ಲದ ಕೇವಲ ಭಕ್ತಿಯಿಂದಲೆ ಮೋಕ್ಷ ಹೊಂದುತ್ತಾರೆ. ಹೀಗಾಗಿ ಯೋಗ್ಯ ಭಕ್ತಿಯಿಲ್ಲದೆ ಬೇರೆ ಯಾವ ಸಾಧನದಿಂದಲೂ ಮುಕ್ತಿ ಇಲ್ಲ' ಎಂದು ಪದ್ಮಪುರಾಣದಲ್ಲಿ ಉಕ್ತವಾಗಿದೆ.

ಭಕ್ತ್ಯಾ ವಾ ಕಾಮಭಕ್ತ್ಯಾ ವಾ ಮೋಕ್ಷೋ ನಾನ್ಯೇನ ಕೇನಚಿತ್ ।
ಕಾಮಭಕ್ತ್ಯಾಽಪ್ಸರಸ್ತ್ರೀಣಾಮನ್ಯೇಷಾಂ ನೈವ ಕಾಮತಃ ।
ಉಪಾಸ್ಯಃ ಶ್ವಶುರತ್ವೇನ ದೇವಸ್ತ್ರೀಣಾಂ ಜನಾರ್ದನಃ ।
ಜಾರತ್ವೇನಾಪ್ಸರಸ್ತ್ರೀಣಾಂ ಕಾಸಾಂಚಿದಿತಿ ಯೋಗ್ಯತಾ ।
ಯೋಗ್ಯೋಪಾಸಾಂ ವಿನಾ ನೈವ ಮೋಕ್ಷಃ ಕಸ್ಯಾಪಿ ಸೇತ್ಸ್ಯತಿ ।
ಅಯೋಗ್ಯೋಪಾಸನಾಕರ್ತುರನರ್ಥಶ್ಚ ಭವಿಷ್ಯತಿ ।
ತಸ್ಮಾತ್ತು ಯೋಗ್ಯತಾಂ ಜ್ಞಾತ್ವಾ ಹರೇಃ ಕಾರ್ಯಮುಪಾಸನಂ ॥

ಇತಿ ಭದ್ರಿಕಾಯಾಂ ॥

'ಕೇವಲ ಭಕ್ತಿಯಿಂದ ಅಥವಾ ಕಾಮ ಸಹಿತಭಕ್ತಿಯಿಂದಲೇ ಮೋಕ್ಷ ಲಭಿಸುತ್ತದೆ ಹೊರತು ಬೇರೆ ಯಾವ ಸಾಧನದಿಂದಲೂ ಅಲ್ಲ. ಅಪ್ಸರ ಸ್ತ್ರೀಯರಿಗೆ ಕಾಮಯುಕ್ತ ಭಕ್ತಿಯಿಂದ ಮೋಕ್ಷ, ಅನ್ಯರಿಗೆ ಕಾಮದಿಂದ ಮೋಕ್ಷವಿಲ್ಲ. ದೇವಸ್ತ್ರೀಯರು ಸರಸ್ವತಿ ಭಾರತಿಯರು ಹರಿಯನ್ನು ಮಾವನೆಂದೂ ಉಳಿದ ಸ್ತ್ರೀಯರು ಮಾವನ ತಂದೆ ಎಂದೂ ಉಪಾಸನ ಮಾಡಬೇಕು. ಅಪ್ಸರ ಸ್ತ್ರೀಯರು ಕೆಲವರು ಜಾರನೆಂದು ಉಪಾಸನ ಮಾಡಬೇಕು. (ಕೆಲವರೆಂದರೆ ಭಗವಂತನ ಆಲಿಂಗನಕ್ಕೆ ಯೋಗ್ಯರಾದ ಪಿಂಗಳೆ ಮುಂತಾದ ಅಪ್ಸರೆಯರು. ಅವರಲ್ಲಿ ರಮಾವೇಶವಿರುತ್ತದೆ. ಊರ್ವಶಿ ಮುಂತಾದ ಬೇರೆ ಅಪ್ಸರೆಯರು ಹೀಗೆ ಉಪಾಸನೆ ಮಾಡುವುದಿಲ್ಲ) ಇದು ಅವರ ಉಪಾಸನೆಯ ಯೋಗ್ಯತೆ. ಯೋಗ್ಯೋಪಾಸನೆ ಇಲ್ಲದೆ ಯಾರಿಗೂ ಮೋಕ್ಷ ಸಿಗುವುದಿಲ್ಲ. ಅಯೋಗ್ಯೋಪಾಸನೆ ಮಾಡುವವನಿಗೆ ಅನರ್ಥವೂ ಉಂಟಾಗುತ್ತದೆ. ಆದರಿಂದ ಯೋಗ್ಯತೆಯನ್ನು ನಿಯತ ಗುರುಗಳಿಂದ ತಿಳಿದು ಅದಕ್ಕನುಗುಣ ಉಪಾಸನೆ ಮಾಡಬೇಕು' ಎಂದು ಭದ್ರಿಕಾ ಗ್ರಂಥದಲ್ಲಿ ಹೇಳಿದೆ.

ಪತಿತ್ವೇನ ಶ್ರಿಯೋಪಾಸ್ಯೋ ಬ್ರಹ್ಮಣಾ ಮೇ ಪಿತೇತಿ ಚ ।
ಪಿತಾಮಹತಯಾಽನ್ಯೇಷಾಂ ತ್ರಿದಶಾನಾಂ ಜನಾರ್ದನಃ ।

ಪ್ರಪಿತಾಮಹೋ ಮೇ ಭಗವಾನ್ ಇತಿ ಸರ್ವಜನಸ್ಯ ತು ।
ಗುರುಃ ಶ್ರೀಬ್ರಹ್ಮಣೋರ್ವಿಷ್ಣುಃ ಸುರಾಣಾಂ ಚ ಗುರೋರ್ಗುರುಃ ।
ಮೂಲಭೂತಗುರುಃ ಸರ್ವಜನಾನಾಂ ಪುರುಷೋತ್ತಮಃ ।
ಗುರುರ್ಬ್ರಹ್ಮಾಽಸ್ಯ ಜಗತೋ ದೈವಂ ವಿಷ್ಣುಃ ಸನಾತನಃ ।
ಇತ್ಯೇವೋಪಾಸನಂ ಕಾರ್ಯಂ ನಾನ್ಯಥಾ ತು ಕಥಂಚನ ॥

ಇತಿ ವಾರಾಹೇ ॥

'ಲಕ್ಷ್ಮೀದೇವಿ ಹರಿಯನ್ನು ಪತಿಯೆಂದು ಉಪಾಸನ ಮಾಡಬೇಕು. ಬ್ರಹ್ಮವಾಯುಗಳು ತಂದೆ ಎಂದು. ಬೇರೆ ದೇವತೆಗಳು ಪಿತಾಮಹನೆಂದು. ಬೇರೆ ಸರ್ವಜೀವರು ಪ್ರಪಿತಾಮಹನೆಂದು ಭಗವಂತನನ್ನು ಉಪಾಸನ ಮಾಡಬೇಕು. ಲಕ್ಷ್ಮೀ ಬ್ರಹ್ಮರಿಗೆ ವಿಷ್ಣು ಗುರು. ಬೇರೆ ದೇವತೆಗಳಿಗೆ ಅವನು ಪರಮಗುರು. ಬೇರೆ ಎಲ್ಲರಿಗೂ ಮೂಲಗುರು. ಇಡೀ ಜಗತ್ತಿಗೆ ಗುರು ಬ್ರಹ್ಮ. ದೈವ ಸನಾತನನಾದ ವಿಷ್ಣು. ಹೀಗೇ ಉಪಾಸನೆ ಮಾಡಬೇಕು ಹೊರತು ಇದಕ್ಕೆ ವ್ಯತಿರಿಕ್ತವಾಗಿ ಅಲ್ಲ' ಎಂದು ವರಾಹಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಸಪ್ತವಿಂಶೋಽಧ್ಯಾಯಃ

❖

ಅಧ್ಯಾಯ - ೨೮

ಅಧ್ಯಾಯ ಸಾರಾಂಶ

ಅನಿರೀಕ್ಷಿತವಾಗಿ ಶ್ರೀಕೃಷ್ಣ ಕಣ್ಮರೆಯಾದಾಗ ಗೋಪಿಯರು ಸಲಗವನ್ನಗಲಿದ ಹೆಣ್ಣಾನೆಗಳಂತೆ ಕಳವಳಗೊಂಡರು. ಅವನಲ್ಲೆ ತನ್ಮಯರಾಗಿ ತಮ್ಮನ್ನೇ ಕೃಷ್ಣನೆಂದು ಭಾವಿಸಿಕೊಂಡು, ಅವನ ನಗು ನೋಟ ನಡೆ ನುಡಿಗಳನ್ನೇ ತೋರುತ್ತ ಅವನು - ನಾನು ಎಂಬ ಭೇದವನ್ನೇ ಮರೆತರು. ಕೃಷ್ಣನಿನ್ನೂ ನಮ್ಮೊಡನೆ ವಿಹರಿಸುತ್ತಿದ್ದಾನೆ ಎಂದೇ ಕಲ್ಪಿಸಿಕೊಂಡರು. ಕೃಷ್ಣನನ್ನೇ ಗಟ್ಟಿಯಾಗಿ ಹಾಡಿ ಹೊಗಳುತ್ತ ಹುಚ್ಚರಂತೆ ಕಾಡಿಂದ ಕಾಡಿಗೆ ಅಲೆದರು. ಆಕಾಶದಂತೆ ಎಲ್ಲರ ಒಳಗೂ ಹೊರಗೂ ಇರುವ ಪರಮಾತ್ಮನನ್ನು ಎಲ್ಲಿರುವನೆಂದು ಗಿಡಮರಗಳನ್ನು ಕೇಳಿದರು. 'ಪರೋಪಕಾರಕ್ಕಾಗಿಯೆ ಜನ್ಮ ವೆತ್ತಿರುವ ಓ ಮರಗಿಡಗಳೆ, ಯಮುನೆಯ ದಡದಲ್ಲಿಯೇ ನಿಂತು ನೋಡುತ್ತಿರುವವರು ನೀವು ಕೃಷ್ಣ ಹೋದ ದಾರಿಯನ್ನಾದರೂ ಹೇಳಿರಿ' ಎಂದರು.

'ಭೂಮಿಯೆ, ನೀನು ವರಾಹಮೂರ್ತಿಯ ಬಾಹುಗಳ ಆಲಿಂಗನ ಪಡೆದಿರುವೆ. ತ್ರಿವಿಕ್ರಮನ ಪಾದಗಳನ್ನು ಹೊತ್ತಿರುವೆ. ಕೃಷ್ಣನ ಪಾದಸ್ಪರ್ಶದ ಸುಖದಿಂದ ಪುಳಕಗೊಂಡು ಫಲಪುಷ್ಪಭರಿತವಾದ ಮರಗಿಡಗಳಿಂದ ಶೋಭಿಸುತ್ತಿರುವೆ. ಅವನೆಲ್ಲಿ ಹೇಳು.

'ಮರಗಳೆ, ನಮ್ಮ ಕೃಷ್ಣ ಪ್ರೇಯಸಿಯ ಹೆಗಲಮೇಲೆ ಒಂದು ಕೈಯಿಟ್ಟು ಇನ್ನೊಂದು ಕೈಯಿಂದ ಕಮಲದ ಹೂ ಹಿಡಿದು ನಡೆದರೆ ಅವನು ಧರಿಸಿದ ತುಲಸಿಯ ಮಕರಂದ ರಸವನ್ನುಂಡು ಮತ್ತೇರಿ ಕುರುಡಾದ ದುಂಬಿಗಳ ಹಿಂಡು ಅವನನ್ನೇ ಹಿಂಬಾಲಿಸುತ್ತದೆ. ನೀವು ಫಲಪುಷ್ಪ ಭರಿತರಾಗಿ ಬಾಗಿ ನಮಿಸಿದರೆ ಅವನು ಅನುರಾಗದ ನೋಟ ಬೀರಿ ನಿಮ್ಮ ಪ್ರಣಾಮವನ್ನು ಅಭಿನಂದಿಸುತ್ತಾನೆ, ಅವನೆಲ್ಲಿ ಹೇಳಿರಿ.'

ಹೀಗೆ ಕೃಷ್ಣನನ್ನು ಅರಸುತ್ತ ಅರಸುತ್ತ ಒಂದು ಕಡೆ ಅವನ ಹೆಜ್ಜೆ ಗುರುತುಗಳನ್ನು ಕಂಡರು. ಧ್ವಜ ಪದ್ಮ ವಜ್ರ ಅಂಕುಶ ಕಲ್ಪಲತೆ ಮುಂತಾದ ಚಿಹ್ನೆಗಳಿಂದ ಅವು ಕೃಷ್ಣನ ಹೆಜ್ಜೆಗಳೆಂದು ತಿಳಿದರು. **ಆ ಹೆಜ್ಜೆ ಗುರುತುಗಳ ಜಾಡನೆ ಹಿಡಿದು ಕ.ಷ ನಡೆದು**

ಹೋದ ದಾರಿಯನ್ನು ಅನುಸರಿಸಿ ಹೋದರು. ಮುಂದೆ ಕೃಷ್ಣನ ಹೆಜ್ಜೆಗಳ ಜೊತೆಗೆ ಒಬ್ಬ ಹೆಣ್ಣಿನ ಹೆಜ್ಜೆ ಗುರುತುಗಳನ್ನೂ ಕಂಡು 'ಯಾರಿವಳು? ಈಕೆ ಕೃಷ್ಣನನ್ನು ಚೆನ್ನಾಗಿ ಆರಾಧಿಸಿದ ರಾಧೆಯೆ ಇರಬೇಕು. ಅವಳು ನಮ್ಮೆಲ್ಲರನ್ನೂ ವಂಚಿಸಿ ಕೃಷ್ಣನ ಅಧರವನ್ನು ತಾನೊಬ್ಬಳೆ ಏಕಾಂತದಲ್ಲಿ ಪಾನ ಮಾಡುತ್ತಾಳೆ. ಇಗೋ, ಇಲ್ಲಿ ಅವಳ ಹೆಜ್ಜೆಗಳು ಕಾಣಿಸುತ್ತಿಲ್ಲ. ಕೃಷ್ಣನ ಹೆಜ್ಜೆಗಳು ಹೆಚ್ಚು ಊರಿವೆ. ಅದರಿಂದ ಅವಳ ಕೋಮಲವಾದ ಪಾದಗಳಿಗೆ ನೋವಾಗುವುದೆಂದು ಕೃಷ್ಣ ಅವಳನ್ನು ಹೊತ್ತು ನಡೆದಿದ್ದಾನೆ ಎನ್ನುವುದು ಸ್ಪಷ್ಟವಾಗುತ್ತದೆ. ಅಗೋ, ಇಲ್ಲಿ ಕೃಷ್ಣನ ಹೆಜ್ಜೆ ಗುರುತು ಆಳವಾಗಿಲ್ಲ. ಪ್ರೇಯಸಿಗೆ ಹೂಗಳನ್ನು ಬಿಡಿಸಿ ಕೊಡಲು ಅವಳನ್ನು ಹೆಗಲಿನಿಂದ ಇಳಿಸಿರುತ್ತಾನೆ. ಅಗೋ, ಇಲ್ಲಿ ಪ್ರಿಯತಮನ ಹೆಜ್ಜೆ ಪೂರ್ತಿಯಾಗಿ ಮೂಡಿಲ್ಲ. ತುದಿಗಾಲು ಮಾತ್ರ ಊರಿವೆ. ಅದರಿಂದ ಇಲ್ಲಿಯೇ ಆತ ಹೂಗಳನ್ನು ಬಿಡಿಸಿದ್ದಾನೆ. ಇಲ್ಲಿಯೆ ಕುಳಿತು ಅವಳ ಮುಡಿಗೇರಿಸಿದ್ದಾನೆ.'

ಹೀಗೆ ಗೋಪಿಯರು ಶೋಕಿಸುತ್ತ ಅಲೆಯುತ್ತಿದ್ದರೆ ಅತ್ತ ಶ್ರೀಕೃಷ್ಣ ಕಾಮುಕನು ಸ್ತ್ರೀವಶನಾಗಿ ಪಾಡು ಪಡುವುದನ್ನೂ ಸ್ತ್ರೀಯು ಗರ್ವದಿಂದ ಬೀಗುವುದನ್ನೂ ಲೋಕಕ್ಕೆ ತೋರಿಸಲು ಸಂಕಲ್ಪಿಸಿದ. ಅವನ ಸಂಕಲ್ಪಕ್ಕೆ ಅನುಸಾರವಾಗಿಯೆ ರಾಧೆಯೂ ಎಲ್ಲ ಸ್ತ್ರೀಯರಿಗಿಂತ ತಾನೆ ಹೆಚ್ಚೆಂದು ಬೀಗಿದಳು. 'ನಾ ನಡೆಯಲಾರೆ. ನೀನೆ ನನ್ನನ್ನು ಎತ್ತಿಕೊಂಡು ನಡೆ' ಎಂದುಬಿಟ್ಟಳು. ಶ್ರೀಕೃಷ್ಣ 'ಹಾಗಾದರೆ ಹೆಗಲ ಮೇಲೇರು' ಎನ್ನುತ್ತಲೆ ಕಣ್ಮರೆಯಾದ. ಅವಳು ಪರಿತಪಿಸಿ ದುಃಖದಿಂದ ಮೈಮರೆತು ಕುಳಿತಳು. ಗೋಪಿಯರು ಕೃಷ್ಣನ ಹಾದಿಯನ್ನು ಹುಡುಕುತ್ತ ಬಂದು ಅವಳನ್ನು ಕಂಡರು. ಅವಳು ದರ್ಪದಿಂದ ಕೃಷ್ಣನನ್ನು ಅವಮಾನಿಸಿದ್ದನ್ನು ಅವಳಿಂದಲೆ ಕೇಳಿ ತಿಳಿದು ನಿರಾಶರಾದರು.

ಬೆಳದಿಂಗಳು ಕಾಣುವವರೆಗೂ ವನದಿಂದ ವನಕ್ಕೆ ತಿರುಗಿ ಕತ್ತಲು ಕವಿದಾಗ ಕೃಷ್ಣನನ್ನು ಅರಸುವ ಯತ್ನವನ್ನು ಕೈಬಿಟ್ಟು ತಿರುಗಿ ಯಮುನೆಯ ಮಳಲದಂಡೆಗೆ ಎಲ್ಲರೂ ಬಂದು ಸೇರಿದರು. ಕೃಷ್ಣನ ಆಗಮವನ್ನು ಬಯಸಿ ಅವನ ಗುಣಗಾನಗೈದರು.

❖

ಅಧ್ಯಾಯ - ೨೯

ಅಧ್ಯಾಯ ಸಾರಾಂಶ

ಗೋಪಿಯರು ಹಾಡಿದರು.

ಓ ಪ್ರಿಯತಮ, ನೀನು ಇಲ್ಲಿ ಜನ್ಮ ತಳೆದುದರಿಂದ ಈ ಗೋಕುಲ ಎಲ್ಲಕ್ಕಿಂತ ಮಿಗಿಲೆನಿಸಿತು. ನಿನ್ನನ್ನೆಂದೂ ಅಗಲದಿರುವ ಲಕ್ಷ್ಮಿಯೂ ಇಲ್ಲಿ ವಾಸ ಮಾಡುತ್ತಿದ್ದಾಳೆ. ನಿನ್ನಲ್ಲಿ ಪ್ರಾಣಗಳನ್ನೇ ಅರ್ಪಿಸಿರುವ ನಾವು ನಿನ್ನನ್ನು ಅರಸುತ್ತಿದ್ದೇವೆ. ಬಾ, ನಮಗೆ ದರ್ಶನ ನೀಡು. ನಾವು ನಿನ್ನ ದಾಸಿಯರು, ಪ್ರಣಯಿನಿಯರು. ನಡುರಾತ್ರಿಯಲ್ಲಿ ಹೀಗೆ ಕಣ್ಮರೆಯಾಗಿ ನಮ್ಮನ್ನು ಕಾಡಬೇಡ. ನಮ್ಮನ್ನು ಪದೇಪದೇ ಎಲ್ಲ ಆಪತ್ತುಗಳಿಂದ ಕಾಪಾಡಿದವ ನೀನು.

ಗೆಳೆಯ, ನೀನು ಗೊಲ್ಲಬಾಲಕನಲ್ಲ. ಎಲ್ಲ ಜೀವಿಗಳ ಅಂತರಾತ್ಮನಾದ ಪರಮಾತ್ಮ ನೀನು. ಬ್ರಹ್ಮನ ಪ್ರಾರ್ಥನೆಯಂತೆ ಜಗತ್ತಿನ ರಕ್ಷಣೆಗಾಗಿ ಅವತರಿಸಿರುವೆ. ಲಕ್ಷ್ಮೀದೇವಿಯ ಕೈಹಿಡಿಯುವ, ಭಕ್ತರಿಗಿಷ್ಟಾರ್ಥವನ್ನು, ಸಂಸಾರಭಯದಿಂದ ಮೊರೆಹೊಕ್ಕವರಿಗೆ ಅಭಯವನ್ನು ನೀಡುವ ನಿನ್ನ ಕರಕಮಲವನ್ನು ನಮ್ಮ ತಲೆಮೇಲಿಡು. ಹುಲ್ಲು ಮೇಯುವ ಹಸುಗಳ ಹಿಂದೆ ಹಿಂದೆ ನಡೆಯುವ, ಕಾಳಿಯನ ಹೆಡೆಗಳನ್ನು ತುಳಿಯುವ, ನಮಿಸುವವರ ಪಾಪಗಳನ್ನು ಕಳೆಯುವ ನಿನ್ನ ಪಾದಕಮಲವನ್ನು ನಮ್ಮ ಸ್ತನಗಳ ಮೇಲಿರಿಸಿ ಕಾಮನ ದರ್ಪವನ್ನು ಮುರಿ. ನಿನ್ನ ಕಥಾಮೃತ ಸಂಸಾರತಾಪದಿಂದ ಬೆಂದವರನ್ನು ಪುನಶ್ಚೇತನಗೊಳಿಸುವುದು. ಶ್ರವಣಮಾತ್ರದಿಂದಲೆ ಪಾಪ ಪರಿಹರಿಸಿ ಮಂಗಳ ಉಂಟು ಮಾಡುವುದು. ಲೋಕದಲ್ಲೆಲ್ಲ ಹರಡುವುದು. ಅದನ್ನು ಪಾನಮಾಡಿಯೇ ನಾವು ಬದುಕಿದ್ದೇವೆ.

ನಿನ್ನ ನಗು ಸವಿಮಾತು ಅನುರಾಗದ ನೋಟ ಆಟವೆಲ್ಲವೂ ನಮ್ಮ ಮನ ಕಲಕಿವೆ. ನೀನು ದನಮೇಸುತ್ತ ನಡೆದರೆ ನಿನ್ನ ಕೋಮಲ ಪಾದ ನೋಯುತ್ತಿರಬಹುದೆಂದು ನಮ್ಮ ಮನ ಕಳವಳಿಸುತ್ತದೆ. ನೀನು ಸಂಜೆ ಕಾಡಿನಿಂದ ಹಿಂತಿರುಗಿ ಬರುವಾಗ

ಗೋದೂಳಿಯಿಂದ ಮುಚ್ಚಿದ ಕಪ್ಪಾದ ಮುಂಗುರುಳ ಮುಖ ಕಮಲವನ್ನು ತೋರಿ ನಮ್ಮ ಮನದಲ್ಲಿ ಅನುರಾಗದ ಹುಚ್ಚೆಬ್ಬಿಸುವಿ.

ದೂಳಿನಲ್ಲಿ ಮೂಡುವ ನಿನ್ನ ಹೆಜ್ಜೆ ಗುರುತುಗಳನ್ನು ಕಂಡಾಗಲೆಲ್ಲ ಸುಂದರವಾದ, ಬ್ರಹ್ಮನಿಂದಲೂ ಪೂಜಿತವಾದ, ಭೂಮಿಗೆ ಅಲಂಕಾರವಾದ, ಆನಂದಮಯವಾದ ಆ ನಿನ್ನ ಪಾದಕಮಲ ನಮಗೆ ಧ್ಯಾನಕ್ಕೆ ಗೋಚರವಾಗುತ್ತದೆ. ಅದನ್ನು ನಮ್ಮ ಸ್ತನಗಳ ಮೇಲಿಡು.

ಒಮ್ಮೆ ಪಾನ ಮಾಡಿದರೆ ಇತರ ಭೋಗಗಳಲ್ಲಿ ಆಸಕ್ತಿ ಇಲ್ಲದಂತೆ ಮಾಡುವ ನಿನ್ನ ಅಧರಾಮೃತವನ್ನು ನಮಗೆ ಉಣಿಸು. ನೀನು ಹಗಲಿನಲ್ಲಿ ಕಾಡಿನಲ್ಲಿ ಸಂಚರಿಸುತ್ತಿದ್ದರೆ ನಮಗೆ ನಿನ್ನನ್ನು ಕಾಣದೆ ಕ್ಷಣವೂ ಯುಗವಾಗುತ್ತದೆ. ನಿನಗಾಗಿ ಬಂಧುಗಳನ್ನೆಲ್ಲ ತೊರೆದು ನಿನ್ನ ಗಾನಕ್ಕೆ ಮನಸೋತು ಬಂದಿರುವ ನಮ್ಮಂಥ ಸ್ತ್ರೀಯರನ್ನು ರಾತ್ರಿಹೊತ್ತಿನಲ್ಲಿ ನೀನಲ್ಲದೆ ಇನ್ನಾರು ಬಿಟ್ಟು ಹೋದಾರು? ನಿನ್ನ ಏಕಾಂತದ ಸರಸ ಸಂಭಾಷಣೆಗೆ, ಬಯಕೆ ಯನ್ನು ಕೆರಳಿಸುವ ಕಿರುನಗೆಗೆ, ಅನುರಾಗದ ಕುಡಿನೋಟಕ್ಕೆ, ಲಕ್ಷ್ಮಿ ನೆಲೆಸಿರುವ ವಿಶಾಲವಾದ ಎದೆಗೆ ನಮ್ಮ ಮನ ಕಲಕಿ ಅತಿಯಾದ ಬಯಕೆಯಿಂದ ಹುಚ್ಚಾಗುತ್ತಿದೆ. ನಿನ್ನ ಬಯಕೆ ಯೊಂದನ್ನೆ ಮನದಲ್ಲಿ ತುಂಬಿಕೊಂಡಿರುವ ನಮಗೆ ನಿನ್ನ ಆ ದಿವ್ಯಮಂಗಳ ರೂಪವನ್ನು ತೋರು.

❖

ಅಧ್ಯಾಯ - ೩೦

ಅಧ್ಯಾಯ ಸಾರಾಂಶ

ಹೀಗೆ ಕೃಷ್ಣದರ್ಶನಕ್ಕಾಗಿ ಹಾತೊರೆದು ಬಲು ಇಂಪಾಗಿ ಗಾನ ಮಾಡುತ್ತ ಕಣ್ಣೀರು ಸುರಿಸುತ್ತಿದ್ದ ಗೋಪಿಯರಿಗೆ ಕೃಷ್ಣ ಮೈದೋರಿದ, ಪೀತಾಂಬರ ಉಟ್ಟು ವನಮಾಲೆ ತೊಟ್ಟಿದ್ದ, ಸಾಕ್ಷಾತ್ ಮನ್ಮಥನಿಗೂ ಮನ್ಮಥನಂತಿದ್ದ ಕೃಷ್ಣ ತನ್ನ ನಗುಮೊಗ ವನ್ನು ತೋರಿದ.

ಪ್ರಿಯತಮನನ್ನು ಕಂಡಾಗ ಗೋಪಿಯರಿಗೆ ಹೋದ ಜೀವ ಮರಳಿ ಬಂದಂತಾಯಿತು. ಎದ್ದುನಿಂತು; ಅರಳಿದ ಕಣ್ಣುಗಳಿಂದ ನೋಡಿದರು. ಎರಡು ಕೈಗಳಿಂದ ಅವನ ಕೈಹಿಡಿದರು. ತೋಳನ್ನು ಹೆಗಲ ಮೇಲೆ ಹಾಕಿಕೊಂಡರು. ಬಾಯ್ದಂಬುಲವನ್ನು ಬೊಗಸೆ ಯಲ್ಲಿ ಹಿಡಿದರು. ಎರಡೂ ಪಾದಗಳನ್ನು ಸ್ತನಗಳ ಮೇಲಿರಿಸಿ ಕೊಂಡರು. ಎವೆಯಿಕ್ಕದ ಕಣ್ಣಿಂದ ನೋಡಿದರು. ನೋಡಿ ಕಣ್ಣುಗಳ ಮೂಲಕ ಎದೆಯೊಳಗೆ ತಂದುಕೊಂಡು ಕಣ್ಣುಮುಚ್ಚಿ ಒಳಗೇ ತಬ್ಬಿಕೊಂಡರು, ರೋಮಾಂಚಗೊಂಡರು. ಆನಂದ ದಿಂದ ತೃಪ್ತರಾಗಿ ವಿರಹ ದುಃಖವನ್ನು ಮರೆತರು.

ಶ್ರೀಕೃಷ್ಣ ಗೋಪಿಯರನ್ನು ಯಮುನಾ ತೀರದಲ್ಲಿ ರಮ್ಯವಾದ ಒಂದು ಮಳಲಿನ ಪ್ರದೇಶಕ್ಕೆ ಕರೆದೊಯ್ದ. ಸಜ್ಜನರು ಭಗವಂತನ ಬಗ್ಗೆ ಶ್ರವಣ ಮಾಡಿ ಸಾಕ್ಷಾತ್ಕಾರ ಪಡೆಯಲಿ ಎನ್ನುವುದು ವೇದಗಳ ಮನೋರಥ. ಅವರು ಹಾಗೆ ಶ್ರವಣ ಮಾಡಿ ಸಾಕ್ಷಾತ್ಕಾರ ಪಡೆದಾಗ ವೇದಗಳ ಮನೋರಥ ಪೂರೈಸುತ್ತದೆ. ಹಾಗೇ ಗೋಪಿಯರಿಗೆ ತಾವು ಕೃಷ್ಣನ ದರ್ಶನ ಪಡೆಯುವುದೇ ಮನೋರಥವಾಗಿತ್ತು. ತಮಗೆ ದರ್ಶನ ದೊರೆತಾಗ ಆ ಮನೋರಥ ಪೂರೈಸಿತು. ತಮ್ಮ ಉತ್ತರೀಯವನ್ನು ಮಳಲಮೇಲೆ ಹಾಸಿ ಪ್ರಾಣನಾಥನಿಗೆ ಆಸನ ಮಾಡಿಕೊಟ್ಟರು. ಮಹಾಮಹಾ ಯೋಗಿಗಳ ಹೃದಯಸಿಂಹಾಸನದಲ್ಲಿ ಕುಳಿತು ಕೊಳ್ಳುವ ಸರ್ವೇಶ್ವರ ಗೋಪಿಯರ ಉತ್ತರೀಯದ ಆಸನದ ಮೇಲೆ ಕುಳಿತ.

ಗೋಪಿಯರು ಕೃಷ್ಣ ಕಣ್ಮರೆಯಾದುದಕ್ಕೆ ಮುನಿಸಿಕೊಂಡು ಕೇಳಿದರು-

'ಲೋಕದಲ್ಲಿ ತಮ್ಮ ಸೇವೆ ಮಾಡುವವರನ್ನು ಸುಖಪಡಿಸುವವರು, ಸೇವೆ ಮಾಡದವರನ್ನೂ ಸುಖಪಡಿಸುವವರು ಮತ್ತು ಇಬ್ಬರನ್ನೂ ಸುಖಪಡಿಸದವರು ಎಂದು ಮೂರು ಬಗೆಯ ಜನರಿರುತ್ತಾರೆ. ಅವರಲ್ಲಿ ನಿನಗೆ ಯಾರು ಒಳ್ಳೆಯವರು, ಹೇಳು.'

ಶ್ರೀಕೃಷ್ಣನೆಂದ, ಸೇವೆ ಮಾಡಿದ ಮಾತ್ರಕ್ಕೆ ಸುಖಪಡಿಸಬೇಕೆನ್ನುವವನು ನಾನಲ್ಲ. ಸೇವೆ ಫಲಾಪೇಕ್ಷೆಯಿಂದ ಕೂಡಿದ್ದರೆ ನೀವು ಸ್ವಾರ್ಥಿಗಳು. ನಿಮಗೆ ನನ್ನಲ್ಲಿ ಸ್ವಾಭಾವಿಕ ಪ್ರೀತಿ ಇಲ್ಲ ಎಂದಾಯಿತು. ಸೇವೆ ಮಾಡದವರನ್ನೂ ಸುಖಪಡಿಸುವವರು ತಂದೆತಾಯಿಗಳಂತೆ ಪ್ರೀತಿಯಿಂದ ಕಾಣುವರು. ಸೇವೆಯನ್ನು ಅಪೇಕ್ಷಿಸುವುದಿಲ್ಲ. ಆದರೆ ನಾನು ಸೇವೆ ಮಾಡಿಸಿಯೇ ಫಲ ನೀಡುವೆನು. ಹೀಗಾಗಿ ನಾನು ಈ ಎರಡೂ ಬಗೆಯ ಜನರಲ್ಲಿ ಸೇರುವುದಿಲ್ಲ.

ಸೇವೆ ಮಾಡಿದವರಿಗೂ ಸುಖನೀಡದವರು ಸೇವೆ ಮಾಡದವರಿಗೆ ಸುಖ ಏಕೆ ನೀಡುತ್ತಾರೆ? ಈ ಬಗೆಯ ಜನರು ಪುನಃ ಎರಡು ಬಗೆಯವರಾಗಿದ್ದಾರೆ. ಕೆಲವರು ಸ್ವರೂಪಾನಂದದಲ್ಲೇ ಮೈಮರೆತ ಜೀವನ್ಮುಕ್ತರು ಮತ್ತು ಮುಕ್ತರು. ಇನ್ನು ಕೆಲವರು ಮಾಡಿದ ಉಪಕಾರವನ್ನು ಸ್ಮರಿಸದಿರುವ ಕೃತಘ್ನರು. ನಾನು ಈ ಎರಡು ಬಗೆಯಲ್ಲಿಯೂ ಸೇರುವುದಿಲ್ಲ. ಏಕೆಂದರೆ ನಾನು ಸ್ವರೂಪಾನಂದ ಮಗ್ನನಾಗಿದ್ದರೂ ತಂದೆತಾಯಿಗಳಂತೆ ಸಜ್ಜನರನ್ನು ಕಾಪಾಡುವವನು. ನಿಮ್ಮ ಸೇವೆಯನ್ನು ಮರೆಯದೆ ತಕ್ಕ ಫಲ ನೀಡುವವನೇ ಹೊರತು ಕೃತಘ್ನನಲ್ಲ. ಕಣ್ಮರೆಯಾದ ಮಾತ್ರಕ್ಕೆ ನಾನು ಕೃತಘ್ನನೆನ್ನಬೇಡಿರಿ. ನನಗೆ ಒಮ್ಮೆ ಸೇವೆ ಮಾಡಿದರೆ ಸಾಲದು. ಮತ್ತೆ ಮತ್ತೆ ಮಾಡಬೇಕು. ನನ್ನಲ್ಲಿ ಪ್ರೀತಿಯೂ ಸ್ವಾಭಾವಿಕವಾಗಿರಬೇಕು. ಆಗ ಕಲ್ಪವೃಕ್ಷದಂತೆ ಎಲ್ಲ ಅಭೀಷ್ಟಗಳನ್ನೂ ನೀಡುವೆನು. ದರಿದ್ರನಿಗೆ ಒಮ್ಮೆ ಸಿಕ್ಕಿದ ಐಶ್ವರ್ಯ ಕಳೆದುಹೋದರೆ ಅದನ್ನೇ ಆತ ಚಿಂತಿಸುತ್ತಾನೆ.

ಬೇರಾವುದನ್ನೂ ಗಮನಿಸುವುದಿಲ್ಲ. ಹಾಗೇ ಬೇರೆ ಎಲ್ಲವನ್ನೂ ಮರೆತು ಎಲ್ಲವನ್ನೂ ನನಗೆ ಅರ್ಪಿಸಿ ನಿರಂತರ ನನ್ನನ್ನೇ ನೀವು ನಿರಂತರ ಸೇವಿಸುವಂತಾಗಬೇಕೆಂದೇ ನಾನು ಕಣ್ಮರೆಯಾದೆ. ಅನ್ಯಥಾ ತಿಳಿಯಬೇಡಿರಿ. ಕೋಪಮಾಡಬೇಡಿರಿ. ನೀವು ನಿಷ್ಕಲ್ಮಷ ಪ್ರೀತಿಯಿಂದ ನಿರ್ಮಲವಾದ ಸೇವೆ ಮಾಡಿರುವಿರಿ. ಅದಕ್ಕೆ ಸರಿಯಾದ ಪ್ರತಿಫಲ ನೀಡಲು ದೇವತೆಗಳ ಆಯುರ್ಮಾನವೂ ಸಾಲದು. ಏಕೆಂದರೆ ನನ್ನನ್ನು ಹೀಗೆ ಸೇವಿಸುವವರು ಲಿಂಗಭಂಗ ಪೂರ್ವಕ ಸ್ವರೂಪಾನಂದವನ್ನೇ ಪಡೆಯಬಲ್ಲರು.

❖

ಅಧ್ಯಾಯ - ೩೧

ಅಧ್ಯಾಯ ಸಾರಾಂಶ

ಶ್ರೀಕೃಷ್ಣನ ಮಾತನ್ನು ಕೇಳಿ ಗೋಪಿಯರಿಗೆ ಸಮಾಧಾನವಾಯಿತು. ವಿರಹತಾಪ ಪೂರ್ತಿ ಕಳೆಯಿತು. ಸಂತುಷ್ಟರಾದ ಆ ಸ್ತ್ರೀರತ್ನ ಗಳೊಂದಿಗೆ ಶ್ರೀಕೃಷ್ಣ ರಾಸಕ್ರೀಡೆಯನ್ನು ಆರಂಭಿಸಿದ.

ಪರಸ್ಪರ ಕೈ ಹಿಡಿದುಕೊಂಡು ವೃತ್ತಾಕಾರದಲ್ಲಿ ಗೋಪಿಯರು ನಿಂತರು. ಯೋಗೇಶ್ವರನಾದ ಶ್ರೀಕೃಷ್ಣ ಇಬ್ಬಿಬ್ಬರು ಗೋಪಿಯರ ನಡುವೆ ಒಂದೊಂದು ರೂಪದಿಂದ ಅವರ ಹೆಗಲಮೇಲೆ ಕೈಹಾಕಿ ನಿಂತ. ಪ್ರತಿಯೊಬ್ಬಳು ಗೋಪಿ ತನ್ನ ಬಳಿಯೇ ಕೃಷ್ಣನಿದ್ದಾನೆ ಎಂದು ಕೊಂಡಳು. ಮೇಲೆ ಆಕಾಶದಲ್ಲಿ ಎಲ್ಲೆಡೆ ದೇವತೆಗಳ ವಿಮಾನಗಳು ಬಂದು ಸೇರಿದುವು. ದೇವದುಂದುಭಿ ಮೊಳಗಿದುವು. ಹೂಮಳೆ ಯಾಯಿತು. ಗಂಧರ್ವಗಾನ ಕೇಳಿ ಬಂದಿತು. ಕೆಳಗೆ ರಾಸ ಮಂಡಲದಲ್ಲಿ ಕೃಷ್ಣನೊಂದಿಗೆ ಕುಣಿವ ಗೋಪಿಯರ ಕೈಬಳೆ ಕಾಲ್ಗೆಜ್ಜೆ ಒಡ್ಯಾಣ ಕಿರುಗಂಟೆಗಳ ಧ್ವನಿ ಎಲ್ಲೆಡೆ ಪಸರಿಸಿತು. ಬಂಗಾರದ ಮಣಿಗಳ ನಡುವೆ ಇಂದ್ರ ನೀಲಮಣಿಯಂತೆ ಗೋಪಿಯರ ನಡುವೆ ಶ್ರೀಕೃಷ್ಣ ಶೋಭಿಸಿದ.

ಹೆಜ್ಜೆಯಿಡುವುದು ತೋಳು ಕುಣಿಸುವುದು ನಸುನಗುವುದು ಹುಬ್ಬು ಹಾರಿಸುವುದು ನಡು ಬಳುಕಿಸುವುದು ಸ್ತನ ಕುಲುಕಾಡಿಸುವುದು ಕಪೋಲಗಳಲ್ಲಿ ಕುಂಡಲಗಳನ್ನು ಕುಣಿಸುವುದು ಇವುಗಳೊಂದಿಗೆ ಕೃಷ್ಣಲೀಲೆಗಳನ್ನು ಹಾಡುತ್ತ ಕುಣಿದರು ಗೋಪಿಯರು. ಅವರ ಮುಖಗಳು ಬೆವರಿದುವು. ತುರುಬು ಬಿಚ್ಚಿದುವು. ಒಡ್ಯಾಣ ಸಡಿಲಿದುವು. ವೇಗದಿಂದ ಕುಣಿಯುತ್ತ ಮೋಡಗಳ ನಡುವೆ ಬಳುಕುವ ಬಳ್ಳಿ ಮಿಂಚುಗಳಂತೆ ಕಂಡರು. ಕೃಷ್ಣನ ಅಂಗಸಂಗದಿಂದ ಆನಂದಿತರಾಗಿ ಕಿವಿಗೆ ಇಂಪಾಗುವಂತೆ ಉಚ್ಚಧ್ವನಿಯಿಂದ ಹಾಡಿದರು. ಅವರ ಗಾನ ವಿಶ್ವವನ್ನೇ ವ್ಯಾಪಿಸಿತು. ಒಬ್ಬಳು ಒಂದು ರಾಗಾಲಾಪವನ್ನು ಶುದ್ಧವಾಗಿ ಮಾಡಿದಾಗ ಶ್ರೀಕೃಷ್ಣ ಭಲೇ ಭೇಷ್ ಎಂದು ಪ್ರಶಂಸಿಸಿ ಅದೇ ರಾಗವನ್ನು ಧ್ರುವತಾಳದಲ್ಲಿ ಹಾಡಿದ. ಹೀಗೆ ರಾಸ ನೃತ್ಯ ನಡೆಯಿತು.

ಗೋಪಿಯರು ಆಯಾಸ ಗೊಂಡರು. ತುರುಬಿಂದ ಹೂಗಳು ಉದುರಿದುವು. ಬಳಿಯಲ್ಲಿ ನಿಂತಿದ್ದ ಕೃಷ್ಣನ ಹೆಗಲಮೇಲೆ ಆಧರಿಸಿ ನಿಂತರು. ತಮ್ಮ ಹೆಗಲಮೇಲಿದ್ದ ನೈದಿಲೆ ಕಂಪು ಬೀರುವ ಸುಗಂಧಲೇಪಿತವಾದ ಕೃಷ್ಣನ ತೋಳನ್ನು ಆಘ್ರಾಣಿಸಿ ರೋಮಾಂಚ ಗೊಂಡು ಮುದ್ದಿಸಿದರು. ತಮ್ಮ ಕಪೋಲಗಳನ್ನು ಕೃಷ್ಣನ ಕಪೋಲಗಳಿಗೆ ಸೇರಿಸಿದರು. ಕೃಷ್ಣ ಜಗಿದ ತಾಂಬೂಲವನ್ನು ಪಡೆದು ಮೆದ್ದರು. ಕೃಷ್ಣನ ಮಂಗಳಕರ ವಾದ ಕರಕಮಲವನ್ನೆತ್ತಿ ತಮ್ಮ ಸ್ತನಗಳ ಮೇಲಿರಿಸಿಕೊಂಡರು.

ಈ ರಾಸನೃತ್ಯದಲ್ಲಿ ಗೋಪಿಯರಿಗೆ ಅವರ ಕೈಬಳೆ ಕಾಲ್ಗೆಜ್ಜೆ ಗಳೇ ವಾದ್ಯಗಳು. ತುರುಬಿನ ಹೂಗಳಿಗೆ ಬರುವ ದುಂಬಿಗಳೇ ಗಾಯಕರು.

ಗೋಪಿಯರ ಮೈಯಿಂದ ಮಾಲೆ ಆಭರಣಗಳು ನೃತ್ಯದ ರಭಸದಲ್ಲಿ ಆಗಲೆ ಬಿದ್ದು ಹೋಗಿದ್ದುವು. ಇದೀಗ ಕೃಷ್ಣನನ್ನು ಸರ್ವಾಂಗಗಳಿಂದ ಚೆನ್ನಾಗಿ ಆಲಿಂಗಿಸಲು ಜಡೆಯ ಆಭರಣ ಗಳನ್ನೂ ಉಟ್ಟ ಸೀರೆ ಕುಪ್ಪುಸಗಳನ್ನೂ ಬಿಟ್ಟರು. ಇದನ್ನು ನೋಡಿ ದೇವಾಂಗನೆಯರು ಗೋಪಿಯರಂತೆ ತಾವೂ ಭಗವಂತನನ್ನು ಸೇರಲು ಬಯಸಿ ಕಾಮಪೀಡಿತರಾಗಿ ಮೈಮರೆತರು.

ಶ್ರೀಕೃಷ್ಣ ರಾಸಕ್ರೀಡೆಯಿಂದ ಬಳಲಿದ ಗೋಪಿಯರ ಮುಖ ವನ್ನು ಸುಖಕರವಾದ ಕೈಯಿಂದ ಒರೆಸಿದ. ಶ್ರಮಪರಿಹಾರಕ್ಕಾಗಿ ಜಲ ಕ್ರೀಡೆಗೆ ತೊಡಗಿದ. ಸ್ವರಮಣನಾದ ಭಗವಂತ ನೀರಿನಲ್ಲಿ ಮದ್ದಾನೆಯಂತೆ ಕ್ರೀಡಿಸಿದ. ಯುವತಿಯರು ಅವನ ಮೇಲೆ ಕೈಗಳಿಂದ ನೀರೆರಚಿದರು. ಅವನ ಮೈಯ ಅಂದವನ್ನು ಕೊಂಡಾಡಿದರು. ಮೇಲೆ ಆಕಾಶದಲ್ಲಿ ವಿಮಾನಗಳಲ್ಲಿ ನಿಂತ ದೇವತೆಗಳು ಹೂಮಳೆ ಗೈದು ಸ್ತೋತ್ರ ಮಾಡಿದರು.

ಜಲಕ್ರೀಡೆಯಾದ ಬಳಿಕ ವನವಿಹಾರ. ನೀರಲ್ಲಿ ನೆಲದಲ್ಲಿ ಬೆಳೆದ ಹೂಗಳ ಸುಗಂಧವನ್ನು ಹೊತ್ತು ಗಾಳಿ ಎಲ್ಲ ದಿಕ್ಕುಗಳಲ್ಲಿ ಬೀಸುತ್ತಿತ್ತು. ಹೆಣ್ಣಾನೆಗಳೊಂದಿಗೆ ವಿಹರಿಸುವ ಮದಜಲ ಸುರಿಸುವ ಗಂಡಾನೆಯನ್ನು ದುಂಬಿಗಳು ಸುತ್ತುವರಿಯುವಂತೆ

ಶ್ರೀಕೃಷ್ಣನನ್ನು ಗೋಪಿಯರು ಸುತ್ತುವರಿದರು. ಸಮಸ್ತ ಸೌಂದರ್ಯವನ್ನು ತನ್ನೊಳಗೆ ತುಂಬಿಸಿಕೊಂಡಿರುವ ಶ್ರೀಕೃಷ್ಣ ಅನುರಕ್ತರಾದ ಗೋಪಿಯರೊಂದಿಗೆ ಶರತ್ಕಾಲದ ಬೆಳದಿಂಗಳ ರಾತ್ರಿಗಳಲ್ಲಿ ವಿಹರಿಸಿದ. ತಾನು ಸತ್ಯಕಾಮ. ಗೋಪಿಯರ ಕಾಮನೆಯನ್ನೂ ಸತ್ಯವಾಗಿಸಿದ.

ಶ್ರೀಕೃಷ್ಣ ಧರ್ಮಸ್ಥಾಪನೆಗಾಗಿ ಅಧರ್ಮ ನಾಶಕ್ಕಾಗಿ ಅವತರಿಸಿ ಧರ್ಮನಿಯಮವನ್ನು ಉಪದೇಶಿಸುವವನು ಅದರಂತೆ ಮಾಡಿ ತೋರಿಸುವವನು. ಸ್ವರಮಣನೂ ಆಗಿರುವನು. ಆದರೂ ಪರಸ್ತ್ರೀಸಂಗದಂಥ ನಿಂದ್ಯಕರ್ಮವನ್ನು ಮಾಡಿ ತೋರಿಸಿದ. ಏಕೆಂದರೆ ಯೋಗೈಶ್ವರ್ಯಶಾಲಿಗಳು ಕೆಲವೊಮ್ಮೆ ಧರ್ಮ ನಿಯಮವನ್ನು ಉಲ್ಲಂಘಿಸಿದರೂ ಜ್ಞಾನಿಗಳಾದುದರಿಂದ ಪಾಪಲೇಪ ವಾಗುವುದಿಲ್ಲ. ಬೆಂಕಿ ಶುಚಿ ಅಶುಚಿ ಎಂದು ಭೇದ ಮಾಡದೆ ಎಲ್ಲ ಪದಾರ್ಥವನ್ನೂ ದಹಿಸಿ ತಾನು ಏನೂ ಲೇಪವಿಲ್ಲದಂತಿರುತ್ತದೆ. ಯೋಗೈಶ್ವರ್ಯವಿಲ್ಲದ ಅಜ್ಞಾನಿ ಎಂದೂ ಹೀಗೆ ಅಧರ್ಮ ಮಾಡ ಬಾರದು. ರುದ್ರ ವಿಷವನ್ನು ಉಂಡನೆಂದು ತಾನೂ ಉಂಡರೆ ನಾಶಹೊಂದುತ್ತಾನೆ.

ಯೋಗೇಶ್ವರರ ಮಾತು ಸತ್ಯ. ನಡತೆಯೂ ದೈತ್ಯ ಮೋಹನ ಕ್ಕಾಗಿ ಮಾಡಿರದಿದ್ದರೆ ಸತ್ಯವೆ. ಅವರು ತಮ್ಮ ಮಾತಿಗೆ ವಿರೋಧವಾಗಿ ವರ್ತಿಸಿದಾಗ ಬುದ್ಧಿವಂತ ಅದನ್ನು ಅನುಕರಿಸ ಬಾರದು.

ಯೋಗೇಶ್ವರರಾದ ಜೀವರಿಗೇ ಅಧರ್ಮಾಚರಣೆಯಿಂದ ಅನರ್ಥ ವಿಲ್ಲವೆಂದ ಮೇಲೆ ಜೀವನಿಯಾಮಕನಾದ ಪರಮಾತ್ಮ ನಿಗೆ ಅನರ್ಥವೆಲ್ಲಿಯದು?

ರಾಸಲೀಲೆ ನಡೆಸಿದ ಶ್ರೀಕೃಷ್ಣ ಪರಮಾತ್ಮನಾದ್ದರಿಂದ ಅವನಿಗೆ ದೋಷವಿಲ್ಲ.

ಗೋಪಿಯರು ಯೋಗೈಶ್ವರ್ಯಶಾಲಿಗಳಾದ ಜ್ಞಾನಿಗಳಾದ್ದ ರಿಂದ ಅವರಿಗೂ ದೋಷವಿಲ್ಲ. ಜ್ಞಾನಿಗಳಾದ ಭಕ್ತರಿಗೆ ಭಗವಂತನೆ ಪ್ರಾರಬ್ಧ ಸುಖವನ್ನು ರಾಸಲೀಲೆಯಿಂದ ಉಣಿಸಿದ್ದಾನೆ.

ಈ ಲೀಲೆ ಯನ್ನು ಮುಮುಕ್ಷು ಶ್ರವಣ ಮಾಡಬೇಕು. ಉಪಾಸನೆ ಮಾಡಬೇಕು. ಅದರಿಂದ ವಿಷಯಾಸೆಯಿಂದ ಉಂಟಾಗುವ ಅನಾದಿ ಮನೋದೋಷವನ್ನು ನೀಗಿಕೊಂಡು ಜ್ಞಾನಿಯಾಗುತ್ತಾನೆ, ಮೋಕ್ಷ ವನ್ನು ಪಡೆಯುತ್ತಾನೆ.

❖

ಅಧ್ಯಾಯ - ೩೨

ಅಧ್ಯಾಯ ಸಾರಾಂಶ

ಒಮ್ಮೆ ದುರ್ಗಾರಣ್ಯದಲ್ಲಿ ಗೊಲ್ಲರೊಂದಿಗೆ ನಂದಗೋಪ ದೇವಿಪಾರ್ವತಿಯನ್ನು ಆರಾಧಿಸಿ ಸರಸ್ವತೀ ತೀರದಲ್ಲಿ ಜಲಪ್ರಾಶನ ಪೂರ್ವಕ ತೀರ್ಥೋಪವಾಸ ವ್ರತವನ್ನು ಕೈಗೊಂಡ. ರಾತ್ರಿ ಅಲ್ಲಿಯೇ ಉಳಿದುಕೊಂಡ. ಆ ಅರಣ್ಯದಲ್ಲಿ ಒಂದು ದೊಡ್ಡ ಹೆಬ್ಬಾವು ಹಸಿದು ಬಂದು ನಂದಗೋಪನನ್ನು ನುಂಗಲು ತೊಡಗಿತು. ಕೃಷ್ಣ! ಕೃಷ್ಣ ಎಂದು ಆತ ಕೂಗಿಕೊಂಡ. ಗೊಲ್ಲರು ಉರಿಯುವ ಕೊಳ್ಳಿಗಳಿಂದ ಹೊಡೆದರೂ ಹಾವು ನಂದನನ್ನು ಬಿಡಲಿಲ್ಲ. ಶ್ರೀಕೃಷ್ಣ ಬಂದು ಕಾಲಿಂದ ಮೆಟ್ಟಿದೊಡನೆ ಅದು ಹಾವಿನ ಶರೀರವನ್ನು ತೊರೆದು ವಿದ್ಯಾಧರ ರೂಪ ತಳೆಯಿತು.

ಆತ ಸುದರ್ಶನನೆಂಬ ವಿದ್ಯಾಧರ. ಒಳ್ಳೆಯ ಸ್ಫುರದ್ರೂಪಿ. ತಪಸ್ಸಿನಿಂದ ಕೃಶರಾಗಿ ರೂಪಸೌಂದರ್ಯವನ್ನು ಕಳೆದು ಕೊಂಡಿದ್ದ ಅಂಗಿರಸ ಮುನಿಯನ್ನು ರೂಪಮದದಿಂದ ಮತ್ತನಾದ ಈತ ಹಾಸ್ಯಮಾಡಿ ನಕ್ಕು ಅವರ ಶಾಪದಿಂದ ಹೆಬ್ಬಾವಾಗಿ ಹುಟ್ಟಿದ್ದ. 'ವಸ್ತುತಃ ಇದು ಶಾಪವೆ ಅಲ್ಲ. ಭಗವಂತನ ಪಾದಸ್ಪರ್ಶವನ್ನು ದೊರಕಿಸಿ ಅನುಗ್ರಹವನ್ನೇ ಮಾಡಿದ್ದರು ಆ ಮುನಿ' ಹೀಗೆ ಹೇಳುತ್ತ ಶ್ರೀಕೃಷ್ಣನ ಅಪ್ಪಣೆ ಪಡೆದು ಆತ ಸ್ವರ್ಗಲೋಕಕ್ಕೆ ಹೊರಟುಹೋದ.

ಒಮ್ಮೆ ರಾಮಕೃಷ್ಣರು ಬೆಳದಿಂಗಳ ರಾತ್ರಿಯಲ್ಲಿ ಗೋಪಿಯ ರೊಂದಿಗೆ ವಿಹಾರ ಮಾಡುತ್ತ ಇಬ್ಬರೂ ಜೊತೆಗೆ ಒಂದು ಸಂಗೀತರಾಗದ ಆಲಾಪ ಮಾಡಿದರು. ಅದನ್ನು ಕೇಳಿ ಗೋಪಿಯರು ಮೈಮರೆತಿದ್ದಾಗ ಕುಬೇರನ ಭೃತ್ಯನಾದ ಶಂಖಚೂಡನೆಂಬ ಯಕ್ಷ ಅವರನ್ನು ಸೆಳೆದೊಯ್ಯಲು ತೊಡಗಿದ. ಅವರು ಭಯದಿಂದ ಕೂಗಿಕೊಂಡರು. ರಾಮಕೃಷ್ಣರು ತಾಳೆಮರವನ್ನು ಕಿತ್ತು ಕೈಯಲ್ಲಿ ಹಿಡಿದು ಯಕ್ಷನನ್ನು ಬೆನ್ನಟ್ಟಿದರು. ಆತ ಭಯದಿಂದ ಗೋಪಿಯರನ್ನು ಬಿಟ್ಟು ಪಲಾಯನ

ಮಾಡತೊಡಗಿದ. ಆದರೂ ಶ್ರೀಕೃಷ್ಣ ಬಿಡದೆ ಬೆನ್ನಟ್ಟಿದ. ಏಕೆಂದರೆ ಅವನ ತಲೆಯಲ್ಲಿದ್ದ ರತ್ನವನ್ನು ಕಿತ್ತುಕೊಳ್ಳಬೇಕಾಗಿತ್ತು. ಬಲರಾಮ ಗೋಪಿಯರ ರಕ್ಷಣೆಗೆ ನಿಂತ. ಶ್ರೀಕೃಷ್ಣ ಯಕ್ಷನನ್ನು ಹಿಡಿದು ಕೊಂದು ಮಣಿಯನ್ನು ಬಲರಾಮನಿಗೆ ಪ್ರೀತಿಯಿಂದ ತಂದಿತ್ತ.

❖

ಅಧ್ಯಾಯ - ೩೩

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಹಗಲಲ್ಲಿ ಹಸುಗಳನ್ನು ಮೇಸಲು ಕಾಡಿಗೆ ಹೋದರೆ ಇತ್ತ ಗೋಪಿಯರು ಅವನ ಗುಣವನ್ನೆ ಗಾನ ಮಾಡುತ್ತ ಕಷ್ಟದಿಂದ ಕಾಲ ಕಳೆದರು. ಪರಸ್ಪರ ಹೀಗೆ ಹೇಳಿಕೊಂಡರು-

'ಸಖಿಯರೆ, ನಮ್ಮ ಕೃಷ್ಣ ಎಡಕೆನ್ನೆಯನ್ನು ಎಡಹೆಗಲ ಮೇಲಿರಿಸಿ ಕೆಳತುಟಿಯಲ್ಲಿ ಕೊಳಲನ್ನಿಟ್ಟುಕೊಂಡು ಕೋಮಲ ವಾದ ಬೆರಳುಗಳಿಂದ ನುಡಿಸಿದರೆ ವಿಮಾನದಲ್ಲಿ ಸಂಚರಿಸುವ ದೇವಾಂಗನೆಯರು ಆಲಿಸುತ್ತಾರೆ. ತಾವೂ ಅದರಂತೆ ಹಾಡಲು ಯತ್ನಿಸಿ ಸಾಧ್ಯವಾಗದೆ ಲಜ್ಜಿತರಾಗುತ್ತಾರೆ. ಆಶ್ಚರ್ಯಚಕಿತರಾಗು ತ್ತಾರೆ. ಕಾಮಪರವಶರಾಗಿ ಮೈಮರೆತು, ಉಟ್ಟಸೀರೆ ಸಡಿಲಾಗುವುದನ್ನೂ ಅರಿಯದವರಾಗುತ್ತಾರೆ.

ಗೋಕುಲದ ಎತ್ತು ಹಸುಗಳೂ ಜಿಂಕೆಗಳೂ ವೇಣುಗಾನಕ್ಕೆ ಮನಸೋತು ಹುಲ್ಲು ಮೇಯುವುದನ್ನೂ ಮರೆತು ಚಿತ್ರದಲ್ಲಿ ಬರೆದಂತೆ ನಿಶ್ಚಲವಾಗುತ್ತವೆ. ಕೃಷ್ಣ ವೇಣುಗಾನದಿಂದ ಆಕಳು ಗಳನ್ನು ಕರೆದರೆ ಹರಿಯುವ ನದಿಗಳು ತಮ್ಮ ನೀರಿನಲ್ಲಿ ಗಾಳಿಯಿಂದ ಬಂದ ಕೃಷ್ಣನ ಪಾದ ದೂಳಿಯನ್ನು ಸ್ಪರ್ಶಿಸಿದಾಗ ಅವನ ಅಂಗಸಂಗದ ಬಯಕೆಯಿಂದ ಪ್ರಣಯಕಾತರತೆಯಿಂದ ಅಲೆಗಳೆಂಬ ಕೈಗಳು ನಡುಗುತ್ತವೆ. ಹರಿಯುವ ವೇಗ ಕುಂಠಿತವಾಗುತ್ತದೆ.

ಕೃಷ್ಣನ ವೇಣುಗಾನವನ್ನು ಆಲಿಸಿ ಗಿಡಬಳ್ಳಿಗಳು ಹೂಹಣ್ಣುಗಳನ್ನು ಸಮೃದ್ಧಿಯಾಗಿ ಹೊತ್ತು ಬಾಗಿ ನಮಿಸುತ್ತವೆ. ಭಕ್ತಿರಸದಿಂದ ರೋಮಾಂಚಗೊಂಡು ಅಮೃತದಂಥ ರಸಧಾರೆ ಗಳ ರೂಪದಲ್ಲಿ ಆನಂದಾಶ್ರುಗಳನ್ನು ಸುರಿಸುತ್ತವೆ. ಸಾರಸ ಹಂಸಪಕ್ಷಿಗಳೂ ಗಾನವನ್ನು ಆಲಿಸಿ ಏಕಾಗ್ರ ಮನಸಿನಿಂದ ಮೌನವಾಗಿ ಕಣ್ಣುಮುಚ್ಚಿ ಧ್ಯಾನಿಸುತ್ತವೆ. ಗೋವರ್ಧನ ಪರ್ವತದ ತಪ್ಪಲಿನಲ್ಲಿ ನಿಂತು ವೇಣು ಗಾನದಿಂದ ಹಸುಗಳನ್ನು ಕರೆದರೆ ಇಡಿ

ವಿಶ್ವವೇ ಓಗೊಡುತ್ತದೆ. ಮೋಡಗಳು ತಾವು ಜೋರಾಗಿ ಗುಡುಗಿದರೆ ಕೃಷ್ಣನಲ್ಲಿ ಅಪರಾಧವೆಸಗಿದಂತಾದೀತೆಂದು ಮೆಲ್ಲನೆ ವೇಣುಗಾನಕ್ಕೆ ಅನುಸಾರವಾಗಿ ಗುಡುಗುತ್ತವೆ. ನಮ್ಮಂತೆ ಶ್ಯಾಮವರ್ಣನೆಂದು ನಮ್ಮ ಮಿತ್ರನೆಂದು ತಿಳಿದು ಅವನ ಮೇಲೆ ಹೂಮಳೆಗರೆದು ಕೊಡೆಯ ಹಾಗೆ ಮೇಲೆ ಹರಡಿ ನಿಂತು ನೆರಳು ನೀಡುತ್ತವೆ.

ಯಶೋದೆ, ನಿನ್ನ ಮಗನ ಗಾನವಿದ್ಯೆ ಕಲಿತು ಬಂದುದಲ್ಲ. ಅವನು ತುಟಿಯಲ್ಲಿ ಕೊಳಲನ್ನಿಟ್ಟುಕೊಂಡನೆಂದರೆ ಮಧುರವಾದ ಗಾನ ಹೊರಹೊಮ್ಮುತ್ತದೆ. ಅದನ್ನು ಆಲಿಸಿ, ಗಾನಕಲಾ ಪಾರಂಗತರಾದ ದೇವಾಂಗನೆಯರೂ ಬ್ರಹ್ಮರುದ್ರಾದಿ ದೇವೋತ್ತಮರೂ ಕೂಡ ಅದರ ಅಪೂರ್ವವಾದ ಮಾಧುರ್ಯದ ರಹಸ್ಯವನ್ನು ತಿಳಿಯಲಾಗದೆ ಲಜ್ಜೆಯಿಂದ ತಲೆ ತಗ್ಗಿಸುತ್ತಾರೆ. ಮೈಮರೆಯುತ್ತಾರೆ.

ಗೋವುಗಳ ಹಿಂದೆ ಹಿಂದೆ ನಡೆದು, ಭೂಮಿಗೆ ಗೋವುಗಳ ಗೊರಸಿನಿಂದಾಗುವ ನೋವನ್ನು ತನ್ನ ಕೋಮಲ ಪಾದಕಮಲ ಸ್ಪರ್ಶದಿಂದ ಕಳೆಯುತ್ತಾನೆ.

ರಾತ್ರಿಯ ರಾಸಕ್ರೀಡೆ ಮುಗಿದೊಡನೆ ಕೃಷ್ಣ ನಮ್ಮನ್ನು ಮನೆಗಳಿಗೆ ಕಳಿಸುತ್ತಾನೆ. ಬಳಿಕ ಹಗಲೆಲ್ಲ ಅವನ ವಿರಹವೆ. ಸಂಜೆ ಹಿಂದಿರುಗುವಾಗ ಅವನು ಕೊಳಲು ಊದುತ್ತ ನಮ್ಮ ಕಡೆಗೆ ಅನುರಾಗದ ನೋಟ ಬೀರಿದರೆ ನಾವು ತೀವ್ರ ಬಯಕೆಯಿಂದ ವಿಹ್ವಲರಾಗಿ ತುರುಬು ಬಿಚ್ಚಿ ಹೋಗುವುದನ್ನಾಗಲಿ ಸೀರೆ ಜಾರುವುದನ್ನಾಗಲಿ ತಿಳಿಯದವರಾಗುತ್ತೇವೆ.

ಸಂಜೆ ಕೃಷ್ಣ ಗೋಕುಲಕ್ಕೆ ಹಿಂತಿರುಗಿ ಬರುವಾಗ ಅವನ ವೇಣು ಗಾನಕ್ಕೆ ಹೆಣ್ಣು ಜಿಂಕೆಗಳೂ ಹಿಂಬಾಲಿಸುತ್ತವೆ, ಮನೆಮಠಗಳನ್ನು ತೊರೆದು ನಾವು ಗೋಪಿಯರು ಅವನನ್ನು ಹಿಂಬಾಲಿಸುವಂತೆ.

ಯಮುನಾತೀರದಲ್ಲಿ ಕೃಷ್ಣ ವಿಹಾರ ಮಾಡುತ್ತಿದ್ದರೆ ಮಂದ ಮಾರುತ ಅವನಿಗೆ ಶ್ರೀಗಂಧದ ಪರಿಮಳವಿತ್ತು ಸತ್ಕರಿಸುತ್ತದೆ.

ಗಂಧರ್ವರು ಸ್ತುತಿಪಾಠಕರಂತೆ ವಾದ್ಯಘೋಷ ಸಂಗೀತಗಳ ಉಪಹಾರ ನೀಡುತ್ತ ಸುತ್ತುವರಿಯುತ್ತಾರೆ.

ಕೃಷ್ಣನ ಮಹಿಮೆ ಅವನಿಗಲ್ಲದೆ ಬೇರಾರಿಗೂ ತಿಳಿಯದು. ಅವನು ಓಡಾಡುವಾಗ ದಾರಿಯಲ್ಲಿ ಜ್ಞಾನವೃದ್ಧರೂ ವಯೋವೃದ್ಧರೂ ಕಾಲು ಮುಟ್ಟಿ ನಮಸ್ಕರಿಸುತ್ತಾರೆ. ಬ್ರಹ್ಮಾದಿ ದೇವತೆಗಳೂ ಅವನನ್ನು ಹೊಗಳುತ್ತಾರೆ.

ಗೋಕುಲದ ಗೋವುಗಳಿಗೆ ಹಗಲಿನ ತಾಪ ಕಳೆವವನು ನಮ್ಮ ಕೃಷ್ಣಚಂದ್ರ.

❖❖❖

ರಾತ್ರಿಯಲ್ಲಿ ರಾಸಕ್ರೀಡೆಯಾಡುವ ಗೋಪಿಯರು ಹಗಲು ಹೊತ್ತು ಪೂರ್ತಿ ಶ್ರೀಕೃಷ್ಣನನ್ನು ಹೀಗೆ ನೆನೆದು ಹಾಡಿ ಆನಂದಿಸುತ್ತಾರೆ-

---

ಮದವಿಘೂರ್ಣಿತಲೋಚನ ಈಷ-
ನ್ಮಾನದಃ ಸ್ವಸುಹೃದಾಂ ವನಮಾಲೀ ।
ಬದರಪಾಂಡುವದನೋ ಮೃದುಗಂಡಂ
ಮಂಡಯನ್ ಕನಕಕುಂಡಲಲಕ್ಷ್ಮ್ಯಾ ॥ ೨೪ ॥

ಮಾದಕ ಮಂದಹಾಸದಿಂದ ಅರಳಿದ ಕಣ್ಣುಗಳಿಂದ ತನ್ನ ಪ್ರೀತಿಯ ಗೋಪಿಯರ ಪ್ರಣಯ ದರ್ಪವನ್ನು ಮುರಿಯಲು ಬರುತ್ತಾನೆ ಕೃಷ್ಣ. ಬಂಗಾರದ ಕರ್ಣಕುಂಡಲ ಕಾಂತಿಯಿಂದ ಮೃದುವಾದ ಕೆನ್ನೆಗೆ ರಂಗೇರಿಸಿಕೊಳ್ಳುತ್ತ, ಉದಿಸುವ ಚಂದ್ರನ ಬೆಳದಿಂಗಳಿನಿಂದ ಶುಭ್ರವಾಗಿ ಹೊಳೆವ ಮುಖದವನು ವನಮಾಲಿ ಬರುತ್ತಾನೆ.

ಇಲ್ಲಿ 'ಬದರಪಾಂಡುವದನ' ಎಂದರೆ ಬೇರೆ ವ್ಯಾಖ್ಯಾನಕಾರರ ಪ್ರಕಾರ 'ಸ್ವಲ್ಪ ಪಕ್ವವಾದ ಎಲಚಿ ಹಣ್ಣಿನಂತೆ ಕಿರುಬಿಳುಪಾದ ಮುಖದವನು.'

ಇದು ಪುರಾಣಗಳಲ್ಲಿಯಾಗಲಿ, ಕವಿಗಳ ವರ್ಣನೆಗಳಲ್ಲಾಗಲಿ ಎಲ್ಲಿಯೂ ಕಂಡರಿಯದ ಒಂದು ಹೀನೋಪಮಾನ. ಇದರಲ್ಲಿ ಏನೂ ಸೊಗಸಿಲ್ಲ. ಎಲಚಿ ಹಣ್ಣು ಮಾಗಿದರೆ ಕೆಂಪು. ಆಗ ಉಪಮಾನವೇ ಆಗುವುದಿಲ್ಲ. ಅದಕ್ಕೆ ದೋರೆಗಾಯಿಯನ್ನಿಟ್ಟುಕೊಳ್ಳಬೇಕು! ಆದರೂ 'ಬದರ' ಎಂಬ ಶಬ್ದಕ್ಕೆ ಎಲಚಿ

ಹಣ್ಣನ್ನು ಬಿಟ್ಟು ಬೇರೆ ಏನೂ ಅರ್ಥ ಅವರಿಗೆ ಸಿಗದಿದ್ದುದರಿಂದ ಹಾಗೇ ವ್ಯಾಖ್ಯಾನಿಸಿದ್ದಾರೆ.

ಸ್ಕಂದಪುರಾಣದಲ್ಲಿ 'ಬದರ' ಎಂದು ಚಂದ್ರನಿಗೆ ಅಪೂರ್ವವಾದ ಹೆಸರನ್ನು ಹೇಳಿದ್ದಾರೆ, ಬಾದರಾಯಣರು. ಪುರಾಣಶಾಸ್ತ್ರದಲ್ಲಿ ಆದರವಿಲ್ಲದವರಿಗೆ ಅದು ತಿಳಿಯದೆ ಹೋದುದು ಸಹಜ. ಶ್ರೀಮದಾಚಾರ್ಯರು ಅದನ್ನು ತಿಳಿಸಿದರೂ ಒಪ್ಪದಿದ್ದರೆ ಅದು ದುರಾಗ್ರಹವೇ ಸರಿ.

ಶ್ರೀಕೃಷ್ಣ ನೀಲಮೇಘಶ್ಯಾಮ. ಅವನ ಮುಖ ಚಂದ್ರನಂತೆ 'ಪಾಂಡು' ಬಿಳಿ ಹೇಗೆ? ಎನ್ನುವ ಸಮಸ್ಯೆ ಬಂದರೆ ಬಲರಾಮನ ಮುಖವನ್ನೇ ಗೋಪಿಯರು ವರ್ಣಿಸುತ್ತಿದ್ದಾರೆ ಎನ್ನೋಣ. ಅವನು ಬಿಳಿ. ಅವನ ಮುಖ ಚಂದ್ರನಂತೆ ಶುಭ್ರ ತಾನೆ? ಕುಡಿದ ಮತ್ತಿನಿಂದ ತಿರುಗುವ ಕಣ್ಣುಗಳೆಂದರೆ ಅವನು ಬಲರಾಮ ನೆನ್ನಬಹುದು.

ವಸ್ತುತಃ 'ಬದರ ಪಾಂಡು ವದನ' ಎಂದರೆ ಉದಿಸುವ 'ಚಂದ್ರನಂತಹ' ಬಿಳಿಯಾದ ಮುಖದವ ಬಲರಾಮನೆಂದರ್ಥವಲ್ಲ. ಉದಿಸುವ 'ಚಂದ್ರನಿಂದ' ಅಂದರೆ ಅವನ ಬೆಳದಿಂಗಳ ಕಾಂತಿಯಿಂದ ಶುಭ್ರವಾಗಿ ಹೊಳೆಯುವ ಮುಖ ದವನು ಶ್ರೀಕೃಷ್ಣ. ಜೊತೆಗೆ ಬಂಗಾರದ ಕುಂಡಲಗಳ ಕಾಂತಿಯೂ ಬೆರೆತಿರುವುದ ರಿಂದ ನಸುಹಳದಿ ಬಣ್ಣವೂ ಬಂದಿದೆ. 'ಪಾಂಡು' ಎಂದರೆ ಇಂಥ ಬಿಳಿಬಣ್ಣ. ದೋರೆಗಾಯಿಯಾದ ಎಲಚಿಹಣ್ಣು ನಸುಗೆಂಪು, 'ಪಾಂಡುರ'ವೆನಿಸುತ್ತದೆ. ಸೂಕ್ಷ್ಮವಾದ ಈ ಅರ್ಥವ್ಯತ್ಯಾಸ-

'ಪಾಂಡುರಸ್ತು ರಕ್ತಪೀತಭಾಗೀ ಪ್ರತ್ಯೂಷಚಂದ್ರವತ್ ।
ಪಾಂಡುಸ್ತು ಪೀತಭಾಗಾರ್ಧಃ ಕೇತಕೀಧೂಲಿಸನ್ನಿಭಃ ॥'

ಎಂದು ಭರತಕೋಶದಲ್ಲಿದೆ. ಕೇದಗೆ ದೂಳಿನ ಬಣ್ಣದ ಕಾಂತಿ, ಕೃಷ್ಣನ ಮುಖದಲ್ಲಿ ಕುಣಿಯುತ್ತಿದೆ ಎಂದು ಗೋಪಿಯರು ಕೃಷ್ಣನ ಮುಖವನ್ನೇ ಪಾಂಡುವರ್ಣದ್ದೆಂದು ವರ್ಣಿಸಬಹುದು.

ವಿಶಾಲವಾದ ಪುರಾಣಪ್ರಪಂಚದಲ್ಲಿ ಎಲ್ಲಿಯೋ ಒಂದು ಕಡೆ ಸಿಗುವ ಈ ಬದರ ಶಬ್ದವನ್ನೇ ಭಾಗವತ ಏಕೆ ಇಲ್ಲಿ ಹೇಳುತ್ತಿದೆ? ಚಂದ್ರನಿಗೆ ನೂರಾರು ಪ್ರಸಿದ್ಧ ಹೆಸರುಗಳಿವೆ. ಅಪ್ರಸಿದ್ಧವಾದ ಈ ಹೆಸರು ಏಕೆ ಇಲ್ಲಿ ಕಂಡುಬರುತ್ತಿದೆ? ಎಂದರೆ, ಈ ಪ್ರಶ್ನೆಗೆ ಸಮಾಧಾನ ಸ್ಕಂದಪುರಾಣವಚನದಲ್ಲಿ ಸೂಚಿತವಾಗುತ್ತದೆ. ಮಾನವ ಬದರ ಸಿಂಧು ಎಂದು ಮೂರು ಚಂದ್ರನಾಮಗಳು 'ರೋಗ' ಪರಿಹಾರಕಗಳೆಂದು

ಅದೇ ವಚನ ತಿಳಿಸುತ್ತದೆ. ಎಲ್ಲ ತಾಪಗಳನ್ನೂ ಪರಿಹರಿಸುವ ಶಕ್ತಿ ಚಂದ್ರನಿಗೆ ಹೇಗೋ ಹಾಗೆ ಅವನ ಈ ಮೂರು ನಾಮಗಳಿಗೂ ಇವೆ. ಹಗಲಿಡೀ ವಿರಹತಾಪದಿಂದ ಬೇಯುತ್ತಿರುವ ಗೋಪಿಯರು ತಾಪಶಾಂತಿಗಾಗಿ 'ಬದರ' ನಾಮವನ್ನು ಉಚ್ಚರಿಸುವುದು ಸಹಜ, ಬಹಳ ಉಚಿತ.

ಮಾನವೋ ಬದರಃ ಸಿಂಧುಃ ಶಶಿನಸ್ತು ತ್ರಿನಾಮಕಂ ।
ಯೋ ವೇದ ಮುಚ್ಯತೇ ರೋಗೈರ್ವಿಷ್ಣುನಾಮ್ನೇವ ಸಂಸೃತೇಃ ।
ಇತಿ ಸ್ಕಾಂದೇ ।

'ಚಂದ್ರನಿಗೆ ಮಾನವ ಬದರ ಸಿಂಧು ಎಂದು ಅಪೂರ್ವವಾದ ಮೂರು ನಾಮಗಳಿವೆ. ವಿಷ್ಣುನಾಮ ಸಂಕೀರ್ತನದಿಂದ ಸಂಸಾರದಿಂದ ಮುಕ್ತಿ ಹೇಗೆ ಸಿಗುವುದೋ ಹಾಗೆಯೇ ಚಂದ್ರನ ಈ ಮೂರು ನಾಮ ಸಂಕೀರ್ತನದಿಂದ ರೋಗಗಳಿಂದ ಮುಕ್ತಿ ದೊರಕುತ್ತದೆ' ಎಂದು ಸ್ಕಂದ ಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ತ್ರಯಸ್ತ್ರಿಂಶೋಽಧ್ಯಾಯಃ

❖

ಅಧ್ಯಾಯ - ೩೪

ಅಧ್ಯಾಯ ಸಾರಾಂಶ

ಎತ್ತರವಾದ ಹಿಳಲುಗಳುಳ್ಳ ಗೂಳಿಯ ರೂಪದ ಅರಿಷ್ಟಾಸುರ ಕೃಷ್ಣನನ್ನು ಕೊಲ್ಲಲು ಬಂದ. ಗೊರಸುಗಳಿಂದ ನೆಲವನ್ನು ಭೇದಿಸುತ್ತ ಕಂಪಿಸುತ್ತ ಬಂದ. ಎತ್ತಿದ ಬಾಲದಿಂದಲೂ ಉನ್ನತವಾದ ಕೋಡಿನ ತುದಿಯಿಂದಲೂ ಮೋಡಗಳನ್ನು ಮೇಲೆತ್ತುವಂತೆ ಕಾಣುತ್ತಿದ್ದ. ಅವನು ಎವೆಯಿಕ್ಕದ ಕಣ್ಣಿಂದ ದುರುಗುಟ್ಟಿ ನೋಡಿ ಕ್ರೂರವಾಗಿ ಗರ್ಜಿಸಿದರೆ ಗರ್ಭಿಣಿ ಹಸುಗಳಿಗೆ ಮಾತ್ರವಲ್ಲದೆ ಸ್ತ್ರೀಯರಿಗೂ ಭಯದಿಂದ ಅಕಾಲದಲ್ಲಿ ಗರ್ಭಪಾತವಾಗುತ್ತಿತ್ತು. ಅವನನ್ನು ಕಂಡು ಗೋಪಗೋಪಿಯರು ಭಯದಿಂದ ನಡುಗಿದರು. ದನಗಳು ಭಯಗೊಂಡು ಗೋಕುಲ ವನ್ನೇ ಬಿಟ್ಟು ಓಡಿದುವು.

ಎಲ್ಲರೂ ಶ್ರೀಕೃಷ್ಣನನ್ನು ಮೊರೆಹೊಕ್ಕರು. ಶ್ರೀಕೃಷ್ಣ ಷಡ್ಡುಹೊಡೆದು ಚಪ್ಪಾಳೆ ತಟ್ಟಿ ಅಸುರನನ್ನು ಸಿಟ್ಟಿಗೆಬ್ಬಿಸಿದ. ಸ್ನೇಹಿತನ ಹೆಗಲಮೇಲೆ ತೋಳನ್ನು ಚಾಚಿ ನಿಂತ. ಅಸುರ ಕೆಂಗಣ್ಣಿಂದ ದುರುಗುಟ್ಟಿ ನೋಡುತ್ತ ವೇಗವಾಗಿ ವಜ್ರಾಯುಧ ದಂತೆ ಶ್ರೀಕೃಷ್ಣನ ಕಡೆಗೆ ನುಗ್ಗಿದ. ಭಗವಂತ ಎರಡೂ ಕೊಂಬು ಗಳಲ್ಲಿ ಹಿಡಿದು, ಗಜಯುದ್ಧದಲ್ಲಿ ಒಂದು ಆನೆ ಇನ್ನೊಂದು ಆನೆಯನ್ನು ಹಿಂದಕ್ಕೆ ತಳ್ಳುವಂತೆ, ಆ ಅಸುರನನ್ನು ಹದಿನೆಂಟು ಹೆಜ್ಜೆಗಳಷ್ಟು ಹಿಂದಕ್ಕೆ ತಳ್ಳಿದ. ಆತ ಬಿದ್ದರೂ ತಿರುಗಿ ಎದ್ದು ಮೈಯೆಲ್ಲ ಬೆವೆತುಕೊಂಡು ಕೋಪದಿಂದ ಮೈಮರೆತು ಬುಸು ಗುಟ್ಟುತ್ತ ಕೃಷ್ಣನ ಮೇಲೆರಗಿದ. ಕೃಷ್ಣ ಅವನನ್ನು ಕೊಂಬುಗಳಲ್ಲಿ ಹಿಡಿದು ಒದ್ದು ಕೆಡವಿ ಕೊಂಬುಗಳನ್ನು ಕಿತ್ತು ಅವುಗಳಿಂದಲೆ ಅವನನ್ನು ಹೊಡೆದು ಕೊಂದ. ಆತ ರಕ್ತಕಾರಿ ಮೂತ್ರ ಸೆಗಣಿ ಗಳನ್ನು ಹಾಕಿ ಕಾಲುಗಳನ್ನು ಜಾಡಿಸುತ್ತ ಕಣ್ಮುಚ್ಚದೆ ಪ್ರಾಣ ಸಂಕಟಪಟ್ಟು ಸತ್ತ. ದೇವತೆಗಳು ಹೂಮಳೆಗರೆದು ಕೃಷ್ಣನನ್ನು ಕೊಂಡಾಡಿದರು.

ಅತ್ತ ಕಂಸನ ಬಳಿಗೆ ನಾರದರು ಬಂದು 'ನೀನು ಅಂದು

ಕೊಲ್ಲಲು ಯತ್ನಿಸಿದ ಹೆಣ್ಣು ಶಿಶು ದೇವಕಿಯದಾಗಿರಲಿಲ್ಲ. ದೇವಕಿಯ ಮಗ ಕೃಷ್ಣ. ವಸುದೇವ ದೇವಕೀಪುತ್ರನಾದ ಕೃಷ್ಣನನ್ನೂ ರೋಹಿಣೀಪುತ್ರನಾದ ಬಲರಾಮನನ್ನೂ ರಹಸ್ಯವಾಗಿ ತನ್ನ ಮಿತ್ರನಾದ ನಂದಗೋಪನಲ್ಲಿ ಇರಿಸಿದ್ದ. ಆ ಕೃಷ್ಣರಾಮರೇ ಇಂದು ಗೋಕುಲದಲ್ಲಿ ನಿನ್ನ ಕಡೆಯವರೆಲ್ಲರನ್ನೂ ಕೊಂದರು' ಎಂದು ಹೇಳಿದರು. ಕಂಸ ಸಿಟ್ಟಾಗಿ ವಸುದೇವ ದೇವಕಿಯರಿಗೆ ಸಂಕೋಲೆ ತೊಡಿಸಿ ಸೆರೆಯಲ್ಲಿಟ್ಟ. ಹೀಗೆ ಅಪರಾಧ ಮಾಡಿ ಆತ ಕೃಷ್ಣನಿಂದ ಹತನಾಗಬೇಕೆನ್ನುವುದು ನಾರದರ ಮನೋಗತ ವಾಗಿತ್ತು.

ರಾಮಕೃಷ್ಣರನ್ನು ಕೊಲ್ಲಲು ಕಂಸ ಕೇಶಿದಾನವನನ್ನು ಕಳಿಸಿದ. ಬಳಿಕ ಚಾಣೂರ ಮುಷ್ಟಿಕ ಛಲ ಕೋಸಲ ಮುಂತಾದ ಜಟ್ಟಿಗಳನ್ನೂ ಆನೆ ಮಾವುತನನ್ನೂ ಕರೆಸಿ 'ಜಟ್ಟಿಗಳು ವಸುದೇವ ದೇವಕಿಯರ ಕಣ್ಣ ಮುಂದೆಯೇ ರಾಮಕೃಷ್ಣರನ್ನು ಮಲ್ಲಯುದ್ಧ ದಲ್ಲಿ ಕೊಲ್ಲಬೇಕು, ಮತ್ತು ಮೊದಲಿಗೇ ರಂಗಸ್ಥಳದ ದ್ವಾರದಲ್ಲಿ ಕುವಲಯಾಪೀಡ ಆನೆಯ ಮೂಲಕ ಮಾವುತ ಅವರನ್ನು ಕೊಲ್ಲಿಸಬೇಕು. ಅಲ್ಲಿ ಅವರು ಪಾರಾದರೆ ಜಟ್ಟಿ ಕಾಳಗ ನಡೆಯಲಿ' ಎಂದು ಆದೇಶಿಸಿದ.

ಮಾವುತ ಕೇಳಿದ, 'ರಾಮಕೃಷ್ಣರು ಜಗದೀಶ್ವರನಾದ ನಿನ್ನ ತಂಗಿಯ ಮಕ್ಕಳೆಂದ ಮೇಲೆ ನಾನು ಹೇಗೆ ಆನೆಯಿಂದ ಕೊಲ್ಲಿಸಲಿ?'

ಅದಕ್ಕೆ ಕಂಸ ತಾನು ತನ್ನ ಜನ್ಮವೃತ್ತಾಂತವನ್ನು ತಿಳಿದಿದ್ದೇನೆ ಎಂದು ತುಂಬಿದ ಸಭೆಯಲ್ಲಿ ಬಣ್ಣಿಸಿ ಹೇಳಿದ. 'ಒಮ್ಮೆ ನನ್ನ ತಾಯಿ ಒಬ್ಬಳೆ ಅರಮನೆಯ ಉದ್ಯಾನದಲ್ಲಿ ಸಂಚರಿಸುತ್ತಿದ್ದುದನ್ನು ದ್ರುಮಿಲನೆಂಬ ಒಬ್ಬ ಗಂಧರ್ವ ಕಂಡ. ಅವನು ಪರರ ಮನೋಗತವರಿಯ ಬಲ್ಲವನಾಗಿದ್ದ. ತಾಯಿ ಋತುಸ್ನಾನ ಮಾಡಿ ಪತಿಯ ಬಯಕೆಯಿಂದ ಚೆನ್ನಾಗಿ ಅಲಂಕರಿಸಿಕೊಂಡು ಓಡಾಡುತ್ತಿದ್ದುದನ್ನು ತಿಳಿದು ಪತಿಯಂತೆಯೆ ರೂಪತಳೆದು ಎದುರಿಗೆ ಬಂದು ನಿಂತ. ನಿಜಸ್ಥಿತಿಯನ್ನು ಅರಿಯದೆ ತಾಯಿ ಅವನನ್ನು ಸೇರಿದಳು. ಬಳಿಕ ಹೇಗೋ ಈತ ತನ್ನ ಪತಿಯಲ್ಲವೆಂದು ತಿಳಿದು ಸಿಟ್ಟಾದಳು. ಪಾತಿವ್ರತ್ಯ ಕೆಟ್ಟಿತೆಂದು ಪರಿತಪಿಸಿದಳು.

ದ್ರುಮಿಲ ತಾನೊಬ್ಬ ಗಂಧರ್ವ. ಮನುಷ್ಯಸ್ತ್ರೀಯರಿಗೆ ಗಂಧರ್ವ ಸಂಗ ದುರ್ಲಭ. ದೇವತೆಗಳಿಗೆ ಮನುಷ್ಯಸ್ತ್ರೀಯರ ಸಂಗ ಪಾಪಕರ ವಲ್ಲವಾದ್ದರಿಂದ ನಿನ್ನಲ್ಲಿ ನನ್ನಿಂದ ಹುಟ್ಟುವ ಮಗ ಶ್ರೀಮಂತ ಧೀಮಂತ ಮಹಾ ಉತ್ಸಾಹಶಾಲಿಯಾಗುತ್ತಾನೆ' ಎಂದು ಹೇಳುತ್ತ ಸಮಾಧಾನಪಡಿಸಲು ಯತ್ನಿಸಿದ. ಆದರೆ ತಾಯಿ ಕೋಪದಿಂದ ಶಾಪವಿತ್ತಳು. 'ನೀನು ಪಾಪಿ, ಶೀಲಗೆಟ್ಟವನು. ನಿನ್ನ ಮಗ ಕ್ರೂರಿ, ನಿರ್ದಯಿ, ಅಕಾರ್ಯದಲ್ಲಿ ಜುಗುಪ್ಸೆ ಇಲ್ಲದವ ನಾಗುವನು. ದೇವತೆಗಳ ಋಷಿಗಳ ತಪಸ್ವಿಗಳ ಅನುಗ್ರಹಕ್ಕೆ ಅಪಾತ್ರನೆನಿಸುವನು' ಎಂದು.

ಮಗನಿಗೆ ಶಾಪವಿತ್ತ ತಾಯಿ ತನಗೂ ಶಾಪ ನೀಡಬಹುದೆಂದು ಹೆದರಿ ದ್ರುಮಿಲ 'ನಿನ್ನವರಿಗೆ ಶತ್ರುವೂ ಆಗುವನೆಂ'ದು ಹೇಳಿ ಒಡನೆ ಕಣ್ಮರೆಯಾದ. ದುಃಖದಿಂದ ಅರಮನೆಗೆ ನಡೆದಳು ತಾಯಿ. ಈ ವೃತ್ತಾಂತ ಯಾರಿಗೂ ತಿಳಿಯಲಿಲ್ಲ. ಪೂಜ್ಯ ನಾರದರು ನನಗೆ ಹೇಳಿದರು. ಅದರಿಂದ ದುರ್ಬುದ್ಧಿಗಳಾದ ಉಗ್ರಸೇನ ವಸುದೇವ ಮುಂತಾದವರನ್ನು ನಾನು ಕೊಂದರೆ ದೋಷ ಉಂಟಾಗಲಾರದು. ಏಕೆಂದರೆ ನಾನು ಗಂಧರ್ವನಿಂದ ಜನಿಸಿದವನು.

ಮುಂದಿನ ಚತುರ್ದಶಿದಿನ ವಿಧ್ಯುಕ್ತವಾಗಿ ಧನುರ್ಯಾಗ ಆರಂಭವಾಗಲಿ. ರುದ್ರನಿಗೆ ಪಶುಬಲಿ ನಡೆಯಲಿ. ರಾಮಕೃಷ್ಣರನ್ನು ಕೊಲ್ಲಲು ಕೇಶಿಯನ್ನು ಕಳಿಸಿದ್ದೇನೆ. ಅವನಿಂದ ಈ ಕೆಲಸವಾಗದಿದ್ದರೆ ಆನೆಯಿಂದ ಅವರನ್ನು ಕೊಲ್ಲಿಸುತ್ತೇನೆ. ಮಾವುತ, ನೀನು ಆನೆಯನ್ನು ರಂಗದ್ವಾರದಲ್ಲಿ ನಿಲ್ಲಿಸು.

ಕಂಸ ಅಕ್ರೂರನನ್ನು ಕರೆಸಿ ಹೇಳಿದ. 'ನಂದಗೋಕುಲಕ್ಕೆ ಹೋಗು. ಅಲ್ಲಿ ವಸುದೇವನ ಮಕ್ಕಳಿದ್ದಾರೆ. ಅವರಿಂದ ನನಗೆ ಮೃತ್ಯು ಎಂದು ಹರಿಯ ಕಡೆಯ ದೇವತೆಗಳು ನಿಶ್ಚಯಿಸಿದ್ದಾರೆ. ಅವರನ್ನು ಈ ರಥದಿಂದ ಧನುರ್ಯಾಗವನ್ನು ನೋಡುವ ನೆಪದಿಂದ ಕರೆದು ತಾ, ಯಾಗಕ್ಕೆ ಕಪ್ಪಕಾಣಿಕೆಗಳನ್ನು ಹಿಡಿದು ಬರಲು ನಂದಗೋಪ ಮುಂತಾದ ಗೊಲ್ಲರಿಗೂ ತಿಳಿಸು. ಆ ಮಕ್ಕಳು ಬಂದೊಡನೆ ಆನೆಯಿಂದ ಕೊಲ್ಲಿಸುತ್ತೇನೆ. ಅದಾಗದಿದ್ದರೆ ಜಟ್ಟಿಗಳಿಂದ ಕೊಲ್ಲಿಸುತ್ತೇನೆ. ಅದಾದ ಬಳಿಕ ವಸುದೇವ

ಮುಂತಾದ ಬಂಧುಗಳನ್ನೂ ಕೊಲ್ಲುತ್ತೇನೆ. ಜರಾಸಂಧ ಮುಂತಾದವರ ಸಹಾಯದಿಂದ ದೇವಪಕ್ಷಪಾತಿ ಗಳನ್ನೆಲ್ಲ ಕೊಂದು ನಿಷ್ಕಂಟಕವಾಗಿ ಭೂಮಿಯನ್ನು ಆಳುತ್ತೇನೆ.'

ಅಕ್ರೂರ ನುಡಿದ, 'ರಾಜನೆ, ನಿನ್ನ ಆಲೋಚನೆ ಸರಿಯಾಗಿಯೇ ಇದೆ. ಆದರೆ ಅದರ ಫಲ ದೈವಾಧೀನ. ಹರ್ಷವಾಗಬಹುದು. ಶೋಕವೂ ಉಂಟಾಗಬಹುದು. ಆದರೂ ನಾನು ನಿನ್ನಾಜ್ಞೆಯನ್ನು ನೆರವೇರಿಸುತ್ತೇನೆ'.

❖

ಅಧ್ಯಾಯ - ೩೫

ಅಧ್ಯಾಯ ಸಾರಾಂಶ

ಕುದುರೆಯ ರೂಪದ ಕೇಶಿದಾನವ ಗೊರಸುಗಳಿಂದ ನೆಲವನ್ನು ಸೀಳುತ್ತ ಕುತ್ತಿಗೆಯ ಕೂದಲಿನಿಂದ ಮೋಡಗಳನ್ನೂ ವಿಮಾನ ಗಳನ್ನೂ ಚದುರಿಸುತ್ತ ಕೆನೆಯುವ ಧ್ವನಿಯಿಂದ ಎಲ್ಲರನ್ನೂ ಭಯಪಡಿಸುತ್ತ ಗೋಕುಲವನ್ನು ಪ್ರವೇಶಿಸಿದ. ಶ್ರೀಕೃಷ್ಣ ಸಿಂಹಗರ್ಜನದಿಂದ ಅವನನ್ನು ಯುದ್ಧಕ್ಕೆ ಆಹ್ವಾನಿಸಿದ. ಆತ ಕೃಷ್ಣನಿಗೆ ಎದುರಾಗಿ ಆಕಾಶವನ್ನೇ ನುಂಗಿಬಿಡುವಂತೆ ಬಾಯಿ ತೆರೆದುಕೊಂಡು ನುಗ್ಗಿದ. ವೇಗದಿಂದ ಬಂದು ಹಿಂಗಾಲುಗಳಿಂದ ಒದ್ದ. ಶ್ರೀಕೃಷ್ಣ ಆ ಹಿಂಗಾಲುಗಳನ್ನು ಹಿಡಿದೆತ್ತಿ ತಿರುಗಿಸಿ ನೂರು ಮಾರುಗಳಷ್ಟು ದೂರಕ್ಕೆ ಎಸೆದ. ಆತ ಪ್ರಜ್ಞೆ ತಪ್ಪಿ ಬಿದ್ದರೂ ತಿರುಗಿ ಎದ್ದು ಬಾಯಿ ತೆರೆದುಕೊಂಡು ಶ್ರೀಕೃಷ್ಣನ ಮೇಲೆ ಬಿದ್ದ. ಶ್ರೀಕೃಷ್ಣ ಅವನ ಬಾಯೊಳಗೆ ಎಡಗೈ ತೂರಿಸಿ ನಗುತ್ತ ನಿಂತ. ಹಾವು ಬಿಲದೊಳಗೆ ಹೋಗುವಂತೆ ಭಗವಂತನ ಕೈ ಸುಖವಾಗಿ ಅವನ ಬಾಯೊಳಗೆ ಹೋಯಿತು. ಕಾದ ಕಬ್ಬಿಣದಂತಾಯಿತು. ಅದನ್ನು ಕಡಿಯಲು ಯತ್ನಿಸಿದಾಗ ಕೇಶಿಯ ಹಲ್ಲುಗಳೆಲ್ಲ ಉದುರಿದುವು. ಬಳಿಕ ಕೈಯ ಗಾತ್ರ ಬೆಳೆಯಿತು, ಉದಾಸೀನ ಮಾಡಿ ಬಿಟ್ಟರೆ ರೋಗ ಬೆಳೆಯುವಂತೆ. ಅದರಿಂದ ಕೇಶಿಗೆ ಉಸಿರುಕಟ್ಟಿತು. ಆತ ಕಾಲುಗಳನ್ನು ಝಾಡಿಸುತ್ತ ಮೈಬೆವರಿಕೊಂಡು ಕಣ್ಣಾಲಿ ತಿರುಗಿಸುತ್ತ ಮಲಮೂತ್ರ ವಿಸರ್ಜಿಸುತ್ತ ಸತ್ತುಬಿದ್ದ. ಅವನ ಶರೀರ ಆಗ ಸೀಳಿದ ಸೌತೆಕಾಯಿಯಂತೆ ಎರಡು ಹೋಳಾಗಿತ್ತು. ದೇವತೆಗಳು ಹೂಮಳೆಗರೆರು. ಕೊಂಡಾಡಿದರು.

ದೇವರ್ಷಿ ನಾರದರು ಬಂದು ಏಕಾಂತದಲ್ಲಿ ಶ್ರೀಕೃಷ್ಣನ ಮುಂದಿನ ಅವತಾರ ಲೀಲೆಗಳನ್ನೆಲ್ಲ ಪಟ್ಟಿಮಾಡಿ ಆ ಎಲ್ಲ ಲೀಲೆಗಳನ್ನು ಮಾಡಿ ತೋರಿಸಲು ಬೇಡಿಕೊಂಡರು.

ಬಳಿಕ ಒಮ್ಮೆ ಗೊಲ್ಲರು ಕಣ್ಣುಮುಚ್ಚಾಲೆಯಾಟವಾಡಿದರು. ತಮ್ಮಲ್ಲಿ ಕೆಲವರು ಕುರಿಗಳು, ಕೆಲವರು ಅವರನ್ನು ಕದ್ದು ಬಚ್ಚಿಡುವ ಕಳ್ಳರು. ಉಳಿದವರು ಅವರನ್ನು ಪತ್ತೆ ಹಚ್ಚುವವರು ಎಂದು ಮೂರು ಗುಂಪುಗಳಾಗಿ ತಮ್ಮಲ್ಲಿ ವಿಭಾಗ ಮಾಡಿಕೊಂಡು

ಆಟವಾಡಿದರು. ಆಗ ಮಯಾಸುರನ ಮಗನಾದ ಮಹಾ ಮಾಯಾವಿ ವ್ಯೋಮಾಸುರ ಗೊಲ್ಲರ ರೂಪ ಧರಿಸಿ ಕಳ್ಳರ ಗುಂಪಿನಲ್ಲಿ ಸೇರಿಕೊಂಡ. ಕುರಿಗಳ ಪಾತ್ರ ವಹಿಸುತ್ತಿದ್ದ ಗೊಲ್ಲರನ್ನೆಲ್ಲ ಅಪಹರಿಸಿ ಬೆಟ್ಟದ ಗುಹೆ ಯೊಂದರಲ್ಲಿ ಇಟ್ಟು ಅದರ ಬಾಗಿಲನ್ನು ಬಂಡೆಗಲ್ಲಿನಿಂದ ಮುಚ್ಚಿಬಿಟ್ಟ. ಇನ್ನೂ ಉಳಿದಿದ್ದ ಐದಾರು ಗೊಲ್ಲರನ್ನೂ ಹಾಗೇ ಅಪಹರಿಸಿ ಒಯ್ಯುತ್ತಿದ್ದಾಗ ಶ್ರೀಕೃಷ್ಣ ಸಿಂಹ ತೋಳವನ್ನು ಹಿಡಿಯುವಂತೆ ಹಿಡಿದುಬಿಟ್ಟ. ಆತ ತನ್ನನ್ನು ಬಿಡಿಸಿಕೊಳ್ಳ'ಲು ಬೆಟ್ಟದಷ್ಟು ಗಾತ್ರದ ನಿಜರೂಪ ತಳೆದ. ಆದರೂ ಶ್ರೀಕೃಷ್ಣ ಅವನನ್ನು ನೆಲದ ಮೇಲೆ ಕೆಡವಿ ಯಜ್ಞಪಶುವನ್ನು ಹೇಗೋ ಹಾಗೆ ಕತ್ತು ಹಿಸುಕಿ ಕೊಂದ. ಮೇಲೆ ಆಕಾಶದಲ್ಲಿ ದೇವತೆಗಳು ಇದನ್ನು ಕಂಡು ಅಭಿನಂದಿಸಿದರು. ಬಳಿಕ ಗುಹೆಗೆ ಮುಚ್ಚಿದ್ದ ಕಲ್ಲನ್ನು ಸರಿಸಿ ಗೊಲ್ಲರನ್ನು ಸಂಕಟದಿಂದ ಪಾರುಮಾಡಿದ ಶ್ರೀಕೃಷ್ಣ

❖

ಕೇಶಿ ದಾನವನನ್ನು ಮಡುಹಿದ ಶ್ರೀಕೃಷ್ಣನನ್ನು ನಾರದರು ಸ್ತುತಿಸುತ್ತಾರೆ.

ತ್ವಾಮೀಶ್ವರಂ ಸ್ವಾಶ್ರಯಮಾತ್ಮಮಾಯಯಾ
ವಿನಿರ್ಮಿತಾಶೇಷವಿಶೇಷಕಲ್ಪನಮ್ ।
ಕ್ರೀಡಾರ್ಥಮಾದ್ಯಂತ ಮನುಷ್ಯವಿಗ್ರಹಂ
ನತೋಽಸ್ಮಿ ಧುರ್ಯಂ ಯದುವೃಷ್ಣಿಸಾತ್ವತಾಮ್ ॥ ೨೪ ॥

ಹೇ ರಾಕ್ಷಸಾಂತಕ, ಚತುರ್ಮುಖನನ್ನು ಆಳುವವನು ನೀನು ಸ್ವತಂತ್ರ. ತನ್ನಿಚ್ಛೆಯಿಂದ ದೇವಾಸುರಾದಿ ಸಮಸ್ತ ಪ್ರಪಂಚವನ್ನು ಸೃಜಿಸುವವನು. ಲೀಲೆಗಾಗಿ ಮನುಷ್ಯನಂತೆ ಕಾಣುವ ಶರೀರವನ್ನು ಸ್ವೀಕರಿಸಿದವನು ಯಾದವರಿಗೂ ವೃಷ್ಣಿಗಳಿಗೂ ಸಾತ್ವತರಿಗೂ ನೇತಾರ. ಇಂಥ ನಿನ್ನನ್ನು ನಮಿಸುತ್ತೇನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು, 'ಆದ್ಯಂತ' ಶಬ್ದಾರ್ಥವನ್ನು ತಿಳಿಯಲಾಗದೆ

'ಕ್ರೀಡಾರ್ಥಮದ್ಯಾತ್ತ ಮನುಷ್ಯವಿಗ್ರಹಂ'

ಎಂದು ಅಪಪಾಠವಿಟ್ಟುಕೊಂಡಿದ್ದಾರೆ. 'ಕ್ರೀಡೆಗಾಗಿ ಈಗ ಧರಿಸಿದ ಮನುಷ್ಯ ವಿಗ್ರಹ

ಉಳ್ಳವನು' ಎಂದು ವ್ಯಾಖ್ಯಾನ. ನಮ್ಮ ಪಾಠದಲ್ಲಿಯೂ 'ಕ್ರೀಡಾರ್ಥಂ ಮನುಷ್ಯವಿಗ್ರಹಂ' ಅಂದರೆ, 'ಕ್ರೀಡೆಗಾಗಿ ಮನುಷ್ಯಾಕಾರದ ಶರೀರವನ್ನು ಧರಿಸಿದವನು.' ಎಂದರ್ಥ. ಅರ್ಥದಲ್ಲಿ ಏನೂ ವ್ಯತ್ಯಾಸವಿಲ್ಲ. 'ಅದ್ಯ ಆತ್ತ' ಎಂಬ ಎರಡು ಶಬ್ದಗಳು ಅವರ ಪಾಠದಲ್ಲಿ ಬೇರೆ ಇವೆ. ಅದು ವ್ಯರ್ಥ. ನಮ್ಮ ಪಾಠದಲ್ಲಿ ಆ ಎರಡು ಶಬ್ದಗಳ ಬದಲಿಗೆ 'ಆದ್ಯಂತ' ಎಂದು ಒಂದು ಶಬ್ದವಿದೆ. 'ಆದಿ' ಎಂದರೆ ಬಹಳ ಉಣ್ಣುವವರು, ನರಭಕ್ಷಕರು ರಾಕ್ಷಸರು. ಅವರಿಗೆ 'ಅಂತ' ಅಂತಕ, ರಾಕ್ಷಸಾಂತಕ ಶ್ರೀಕೃಷ್ಣ. ಯಾದವರಿಗೆ 'ಧುರ್ಯ'ನಾಗಿ ಸಜ್ಜನರನ್ನು ರಕ್ಷಿಸುವವನು 'ಆದ್ಯಂತ'ನಾಗಿ ದುರ್ಜನರನ್ನು ಶಿಕ್ಷಿಸುವವನು. ಇದಕ್ಕಾಗಿಯೇ ಮನುಷ್ಯಾಕಾರದ ಶರೀರವನ್ನು ಧರಿಸಿದ್ದಾನೆ. ಅದೂ ಕರ್ಮವಶದಿಂದಲ್ಲ 'ಆತ್ಮ ಮಾಯಯಾ' ಸ್ವೇಚ್ಛೆಯಿಂದ, 'ಕ್ರೀಡಾರ್ಥಂ' ಲೀಲೆಗಾಗಿ.

'ಆದ್ಯಂತ' ಶಬ್ದಕ್ಕೆ ಹೀಗೆ ರಾಕ್ಷಸಾಂತಕ ಎಂಬ ಅರ್ಥ ಹೇಳುವುದು ಕ್ಲಿಷ್ಟವೆನಿಸಬಹುದು. ಆದರೆ ಪುರಾಣದ ಭಾಷೆಯನ್ನು ಪುರಾಣವೇ ವಿವರಿಸುತ್ತದೆ. ಬ್ರಹ್ಮಪುರಾಣ ಈ ವಿಶೇಷಾರ್ಥವನ್ನು ಹೇಳಿದೆ. ಜೊತೆಗೆ 'ಈಶ್ವರ' ಶಬ್ದಕ್ಕೂ 'ಚತುರ್ಮುಖ ಬ್ರಹ್ಮನನ್ನು ಆಳುವ ದೊರೆ' ಎಂದು ಅರ್ಥವನ್ನು ಸೂಚಿಸಲು ಅದಕ್ಕೆ ಸಮಾನಾರ್ಥಕವಾದ 'ಪರೇಶ' ಶಬ್ದಕ್ಕೆ ಅದೇ ಬ್ರಹ್ಮಪುರಾಣವಚನ ವ್ಯಾಖ್ಯಾನ ಮಾಡುತ್ತದೆ-

ಆದಿನೋ ರಾಕ್ಷಸಾಃ ಪ್ರೋಕ್ತಾಸ್ತದಂತತ್ವಾಜ್ಜನಾರ್ದನಃ ।
ಆದ್ಯಂತ ಇತಿ ವಿಜ್ಞೇಯಃ ಪರೇಶೋ ಬ್ರಹ್ಮಣೇಶನಾತ್ ॥

ಇತಿ ಬ್ರಾಹ್ಮೇ ।

"ಆ' ಉಪಸರ್ಗಪೂರ್ವಕ 'ಅದ' ಭಕ್ಷಣೇ ಧಾತು ನಿಷ್ಪನ್ನವಾದ ಆದಿಶಬ್ದಕ್ಕೆ ಬಹಳ ಉಣ್ಣುವ ರಾಕ್ಷಸ ಎಂಬ ಅರ್ಥದಲ್ಲಿ ರೂಢಿ. ರಾಕ್ಷಸಾಂತಕನಾದ್ದರಿಂದ ಜನಾರ್ದನ 'ಆದ್ಯಂತ'ನೆನಿಸುತ್ತಾನೆ. 'ಪರ' ಜೀವೋತ್ತಮನಾದ ಬ್ರಹ್ಮನನ್ನೂ 'ಈಶ'. ಆಳುವ ದೊರೆಯಾದ್ದರಿಂದ 'ಪರೇಶ'ನೂ ಅವನೇ' ಎಂದು ಬ್ರಹ್ಮಪುರಾಣ ದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಪಂಚತ್ರಿಂಶೋಽಧ್ಯಾಯಃ

❖

ಅಧ್ಯಾಯ - ೩೬

ಅಧ್ಯಾಯ ಸಾರಾಂಶ

ಕಂಸನ ಆಜ್ಞೆಯಂತೆ ಅಕ್ರೂರ ಮರುದಿನ ಬೆಳಿಗ್ಗೆ ರಥವನ್ನೇರಿ ನಂದಗೋಕುಲಕ್ಕೆ ಪ್ರಯಾಣ ಮಾಡಿದ. 'ನಾನಿಂದು ಶ್ರೀಕೃಷ್ಣನ ದರ್ಶನ ಮಾಡುತ್ತಿದ್ದೇನೆ. ಅದಕ್ಕೆ ಪೂರ್ವಜನ್ಮದಲ್ಲಿ ನಾನೇನು ಪುಣ್ಯ ಮಾಡಿದೆನೋ!' ಎಂದುಕೊಂಡ. ಕಂಸ ತನಗೆ ಕೃಷ್ಣನ ಪಾದಕಮಲ ದರ್ಶನ ಮಾಡಿಸಿ ಪರಮಾನುಗ್ರಹ ಮಾಡಿದಂತಾಯಿತೆಂದು ಆಶ್ಚರ್ಯಪಟ್ಟ. ದಾರಿಯಲ್ಲಿ ಮೃಗಗಳು ಬಲಕ್ಕೆ ಬಂದುವು. ಬೆಳಗಿನಿಂದಲೂ ಇಂಥ ಶುಭಶಕುನಗಳಾಗುತ್ತಿದ್ದುದನ್ನು ಕಂಡು ತನಗೆ ಕೃಷ್ಣನ ದರ್ಶನವಾಗುವುದು ನಿಶ್ಚಿತವೆಂದುಕೊಂಡ. ತಾನು ಕೃಷ್ಣನ ಪಾದಕಮಲಗಳಿಗೆರಗಿದಾಗ ಆತ ತಲೆಯಮೇಲೆ ಕರಕಮಲ ವನ್ನಿಡುತ್ತಾನೆ. ಕಾಲಮೃತ್ಯುವೆಂಬ ಸರ್ಪದ ವೇಗಕ್ಕೆ ಭಯಪಟ್ಟು ಮೊರೆಹೊಕ್ಕವರಿಗೆ ಅಭಯ ನೀಡುವುದು ಆ ಕರಕಮಲ. ಆ ಕರಕಮಲದಲ್ಲಿಯೇ ದೇವೇಂದ್ರನಾಗಲಿ ಬಲಿಚಕ್ರವರ್ತಿಯಾಗಲಿ ಸರ್ವಸ್ವದಾನ ಸಂಕಲ್ಪಪೂರ್ವಕ ಅರ್ಘ್ಯವನ್ನಿತ್ತಿದ್ದರಿಂದ ಅವರು ಮೂರೋಕದ ಒಡೆಯರೆನಿಸಿದರು. ಆ ಕರಕಮಲವೆ ಇಂದು ರಾಸಕ್ರೀಡೆಯಲ್ಲಿ ಆಯಾಸಗೊಳ್ಳುವ ವ್ರಜಯುವತಿಯರ ಮೈ ಸ್ಪರ್ಶಿಸಿ ಶ್ರಮವನ್ನು ಕಳೆಯುತ್ತಿದೆ.

ಕಂಸನ ಕಡೆಯವನೆಂದು ನನ್ನನ್ನು ಶ್ರೀಕೃಷ್ಣ ಉಪೇಕ್ಷಿಸಬಹುದೆ? ಇಲ್ಲ. ಅವನು ಎಲ್ಲರೊಳಗೆ ಅಂತರ್ಯಾಮಿಯಾಗಿದ್ದು ನಮ್ಮ ಮನದ ಆಲೋಚನೆಗಳೆಲ್ಲವನ್ನೂ ನೇರವಾಗಿ ನೋಡುವವನು. ಅದರಿಂದ ನಾನು ಕಾಲಿಗೆರಗುವಾಗ ನಸುನಕ್ಕು ದಯೆಯ ಕಣ್ಣುಗಳಿಂದ ಕಾಣುತ್ತಾನೆ. ನನ್ನ ಪಾಪಗಳನ್ನು ತರಿದು ಸಂಶಯಗಳನ್ನೂ ಹರಿದು ಪರಮಾನಂದ ನೀಡುತ್ತಾನೆ. ಬಂಧುವೆಂದು ಭಕ್ತನೆಂದು ಬಿಗಿದಪ್ಪಿ ನನ್ನ ಮೈಯನ್ನು ಪಾವನಗೊಳಿಸುತ್ತಾನೆ, ವಿಷಯಾಭಿಲಾಷೆಯ ಪಾಶವನ್ನು ಹರಿದೊಗೆದು ಬಿಡುತ್ತಾನೆ. 'ಅಪ್ಪ ಅಕ್ರೂರ!' ಎಂದು ಪ್ರೀತಿಯಿಂದ

ಆದರಿಸುತ್ತಾನೆ. ಅವನಿಂದ ಹೀಗೆ ಆದರಿಸಲ್ಪಡದವನ ಜನ್ಮಕ್ಕೆ ಧಿಕ್ಕಾರ.

ಜೀವಯೋಗ್ಯತೆಯನ್ನು ಮೀರಿ ಅವನಿಗೆ ಪ್ರೀತಿ ದ್ವೇಷಗಳಿಗಾಗಲಿ ಉಪೇಕ್ಷೆಗಾಗಲಿ ಪಾತ್ರನಾಗುವವನು ಯಾರೂ ಇಲ್ಲ. ಅವನು ಕಲ್ಪವೃಕ್ಷದಂತೆ, ಸೇವೆ ಮಾಡುವವರಿಗೆ ತಕ್ಕ ಫಲ ನೀಡಿ ಸುಖಪಡಿಸುತ್ತಾನೆ.'

ದಾರಿಯುದ್ದಕ್ಕೂ ಅಕ್ರೂರ ಕೃಷ್ಣನನ್ನೇ ಧ್ಯಾನ ಮಾಡುತ್ತ ಸಂಜೆಯ ವೇಳೆಗೆ ಗೋಕುಲವನ್ನು ಪ್ರವೇಶಿಸಿದಾಗ ಅಲ್ಲಿ ಕೃಷ್ಣನ ಹೆಜ್ಜೆ ಗುರುತುಗಳು ಕಂಡು ಬಂದುವು. ಒಡನೆ ಅವನಿಗೆ ಮೈನವಿರೆದ್ದುವು. ಆನಂದಬಾಷ್ಪಗಳು ಸುರಿದುವು. ಸಂಭ್ರಮದಿಂದ ರಥದಿಂದಿಳಿದು ಓ! ಪ್ರಭುವಿನ ಪಾದ ಧೂಳಿಗಳೆನ್ನುತ್ತ ಅವುಗಳ ಮೇಲೆ ಹೊರಳಾಡಿದ. ಕೊಟ್ಟಿಗೆಯಲ್ಲಿ ಹಾಲು ಕರೆಯಲು ಬಂದ ರಾಮಕೃಷ್ಣರನ್ನು ಕಂಡ. ಒಬ್ಬ ಶ್ವೇತವರ್ಣ ನೀಲಾಂಬರಧಾರಿ, ಇನ್ನೊಬ್ಬ ಶ್ಯಾಮವರ್ಣ ಪೀತಾಂಬರಧಾರಿ. ಇಬ್ಬರೂ ಸೌಂದರ್ಯದ ಖನಿಗಳು, ಆಜಾನು ಬಾಹುಗಳು, ಮರಿ ಯಾನೆಯ ನಡಿಗೆಯವರು. ಧ್ವಜವಜ್ರಾಂಕುಶ ಕಮಲ ಚಿಹ್ನೆ ಗಳಿಂದೊಪ್ಪುವ ಪಾದಗಳಿಂದ ಗೋಕುಲದ ನೆಲವನ್ನು ಅಲಂಕರಿಸುವ ಮಹಾತ್ಮರು. ಸ್ನಾನಮಾಡಿ ನಿರ್ಮಲ ಬಟ್ಟೆ ಧರಿಸಿ ಮೈಗೆ ಗಂಧ ಬಳಿದುಕೊಂಡು ವನ ಮಾಲೆ ತೊಟ್ಟಿದ್ದರು.

ರಾಮಕೃಷ್ಣರನ್ನು ನೋಡುತ್ತಲೇ ರಥದಿಂದ ಕೆಳಗೆ ಧುಮುಕಿ ದಂಡಪ್ರಣಾಮಗೈದ. ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿಕೊಂಡು ರೋಮಾಂಚಿತನಾಗಿ ಉತ್ಕಂಠೆಯಿಂದ ಏನೂ ಮಾತನಾಡಲಾರ ದವನಾದ. ಅವನ ಭಕ್ತಿಪರವಶತೆಯನ್ನು ಕಂಡು ಚಕ್ರಚಿಹ್ನೆ ಯಿಂದೊಪ್ಪುವ ಕೈಗಳಿಂದ ಬರಸೆಳೆದು ಆಲಿಂಗಿಸಿದ ಭಕ್ತವತ್ಸಲ ನಾದ ಶ್ರೀಕೃಷ್ಣ

ರಾಮಕೃಷ್ಣರು ಅಕ್ರೂರನನ್ನು ಕೈಹಿಡಿದು ಮನೆಯೊಳಗೆ ಕರೆತಂದು ವಿಧ್ಯುಕ್ತವಾಗಿ ಆಸನ ಪಾದ್ಯ ಮಧುಪರ್ಕಗಳನ್ನು ನೀಡಿ ಷಡ್ರಸಾನ್ನವನ್ನು ಉಣಿಸಿ ಮುಖವಾಸ ತಾಂಬೂಲ

ಗಂಧಮಾಲ್ಯಗಳನ್ನು ನೀಡಿ ಸತ್ಕರಿಸಿದರು.

❖

ಅಕ್ರೂರ ಬಿಲ್ಲ ಹಬ್ಬಕ್ಕೆ ರಾಮಕೃಷ್ಣರನ್ನು ಕರೆದೊಯ್ಯಲು ವೃಂದಾವನಕ್ಕೆ ಬರುವಾಗ ದಾರಿಯಲ್ಲಿ ಶ್ರೀಕೃಷ್ಣನ ಬಗ್ಗೆ ತನ್ನೊಳಗೆ ಆಲೋಚಿಸುತ್ತಾನೆ.

ಯ ಈಕ್ಷಿತಾಽಹಂರಹಿತೋಽಪ್ಯಸತ್ಸತೋಃ
ಸ್ವತೇಜಸಾಽಪಾಸ್ತತಮೋಭಿದಾಭ್ರಮಃ ।
ಸ್ವಮಾಯಯಾಽಽತ್ಮನ್ ರಚಿತೇಷು ತತ್ಸನ್
ಪ್ರಾಣಾದಿಭಿರ್ಜಂತುಷು ಭಾತಿ ಚಿತ್ರಧಾ ॥ ೧೧ ॥

ಶ್ರೀಹರಿ ಅಭಿಮಾನರಹಿತನಾಗಿದ್ದು ಜೀವರು ಉಣ್ಣುವ ಶುಭಾಶುಭ ಫಲಗಳಿಗೆ ಕೇವಲ ಸಾಕ್ಷಿಭೂತನಾಗಿರುತ್ತಾನೆ. ಏಕೆಂದರೆ ಸ್ವಸಾಮರ್ಥ್ಯ ದಿಂದ ಅಜ್ಞಾನ ಮಿಥ್ಯಾಜ್ಞಾನ ಸಂಸಾರಗಳನ್ನು ಸದಾ ದೂರಮಾಡಿ ಕೊಂಡವನು. ತನ್ನಿಚ್ಛೆಯಿಂದಲೇ ತನ್ನಲ್ಲಿ ಇಂದ್ರಿಯಾದಿಗಳೊಂದಿಗೆ ಜೀವಿಗಳನ್ನು ಸೃಷ್ಟಿಮಾಡಿ ಅವರೊಳಗೆ ಅವರಂತೇ, ತಾನು ನಿರ್ವಿಕಾರ ನಾಗಿಯೇ, ಇದ್ದು ನಾನಾ ರೂಪಗಳಿಂದ ಗೋಚರನಾಗುತ್ತಾನೆ, ಪೂಜ್ಯ ಪೂಜಕ ಪೂಜಾಸಾಧನಗಳ, ಭೋಜ್ಯ ಭೋಕ್ತೃ ಭೋಗಸಾಧನಗಳ ರೂಪದಿಂದ ಅವನೇ ಕಾಣುತ್ತಾನೆ.

ಇಲ್ಲಿ ಬೇರೆ ವ್ಯಾಖ್ಯಾನಕಾರರು, ಶ್ಲೋಕದ ಉತ್ತರಾರ್ಧ ಪಾಠವನ್ನು ಹೀಗೆ ಇಟ್ಟುಕೊಂಡಿದ್ದಾರೆ-

ಸ್ವಮಾಯಯಾಽಽತ್ಮನ್ ರಚಿತೈಸ್ತದೀಕ್ಷಯಾ
ಪ್ರಾಣಾಕ್ಷಧೀಭಿಃ ಸದನೇಷ್ವಭೀಯತೇ ॥

'ತನ್ನ ತೇಜಸ್ಸಿನಿಂದ ಅಂದರೆ ನಿತ್ಯಸ್ವರೂಪ ಸಾಕ್ಷಾತ್ಕಾರದಿಂದ ಭೇದಪ್ರಪಂಚ ಭ್ರಮವನ್ನು ಶಾಶ್ವತವಾಗಿ ನೀಗಿಕೊಂಡ ಪರಮಾತ್ಮ ತನ್ನ ಅಧೀನವಾದ ಮಾಯೆ ಯಿಂದ ಅವನ ಜ್ಞಾನದಿಂದ ಇಂದ್ರಿಯಾದಿಯುಕ್ತರಾದ ಜೀವರನ್ನು ಸೃಜಿಸಿ ಅವ ರೊಂದಿಗೆ ಗೋಕುಲದ ಮನೆಗಳಲ್ಲಿ ಲೀಲೆಯಿಂದ ಕರ್ಮಗಳನ್ನು ಮಾಡುತ್ತ ಅದ ರಲ್ಲಿ ಆಸಕ್ತನಂತೆ ತೋರಿಕೊಳ್ಳುತ್ತಿದ್ದಾನೆ' ಎಂದು [೧] ಶ್ರೀಧರವ್ಯಾಖ್ಯಾನ ಹೇಳುತ್ತದೆ.

---

೧ ಸ್ವತೇಜಸಾ ಚಿಚ್ಛಕ್ತ್ಯಾ ನಿತ್ಯಸ್ವರೂಪಸಾಕ್ಷಾತ್ಕಾರೇಣ। ತಥಾಪಿ ಸ್ವಮಾಯಯಾ ಸ್ವಾಧೀನಯಾ ಮಾಯಯಾ ತದೀಕ್ಷಯಾ ತಸ್ಯೈವೇಕ್ಷಯಾ ಪ್ರಾಣಾಕ್ಷಧೀಭಿಃ ಸಹಿತೈಃ ಆತ್ಮನ್ ಆತ್ಮನಿ ಸ್ವಸ್ಮಿನ್ನೇವ

ಆದರೆ ಪರಮಾತ್ಮ 'ಸ್ವಮಾಯಯಾ' 'ತನ್ನ ಮಾಯೆಯಿಂದ' ಜೀವರನ್ನು ಸೃಜಿಸುತ್ತಾನೆ ಎಂದರೆ ಸಾಕು, 'ತದೀಕ್ಷಯಾ' 'ಅವನ ಜ್ಞಾನದಿಂದ' ಎಂದು ಬೇರೆ ಹೇಳಬೇಕಾಗಿಲ್ಲ, ಅದು ವ್ಯರ್ಥ. 'ಸ್ವ-ಮಾಯೆ', 'ಸ್ವ-ತೇಜ' ಎಂದ ಬಳಿಕ 'ಸ್ವ-ಈಕ್ಷಾ' 'ತನ್ನ ಜ್ಞಾನದಿಂದ' ಎನ್ನದೇ 'ಅವನ ಜ್ಞಾನದಿಂದ' ಎನ್ನಲೂ ಕಾರಣವಿಲ್ಲ. ಮತ್ತು ಜ್ಞಾನವೆಂದರೆ ಪ್ರಪಂಚದ ಜ್ಞಾನ. ಇದು ಭೇದಭ್ರಮ ರೂಪವಾಗಿದೆ. ಸ್ವಪ್ನದಂತಿದೆ. ಎಲ್ಲ ಭೇದಭ್ರಮವನ್ನೂ ನಿತ್ಯ ಸ್ವರೂಪ ಸಾಕ್ಷಾತ್ಕಾರದಿಂದ ನೀಗಿಕೊಂಡಿರುವ ಪರಮಾತ್ಮನಲ್ಲಿ ಇನ್ನೂ ಆ ಭ್ರಮವಿರಲು ಅವಕಾಶವಿಲ್ಲ. ಸ್ವಪ್ನದಿಂದ ಎಚ್ಚತ್ತವನಿಗೆ ತಿರುಗಿ ಸ್ವಪ್ನ ಕಾಣುವುದಿಲ್ಲ. ಹೀಗಾಗಿ 'ತದೀಕ್ಷಯಾ' ಎಂಬುದಕ್ಕಿಂತ 'ತತ್‌ಸನ್' ಎಂಬ ನಮ್ಮ ಪಾಠ ಉತ್ತಮವಾಗಿದೆ. ಅದಕ್ಕೆ ಅರ್ಥ ತಿಳಿಯದೆ ಅಪಪಾಠ ಮಾಡಿಕೊಂಡಿದ್ದಾರೆ.

'ತತ್' ಶಬ್ದ ಅವ್ಯಯ. 'ತಥೈವ' 'ಹಾಗೇ' 'ಸನ್' 'ಇದ್ದು' ಎಂದರ್ಥ. ಪರಮಾತ್ಮ ಇಂದ್ರಿಯಾದಿ ಯುಕ್ತರಾದ ಜೀವಿಗಳನ್ನು ಸೃಜಿಸಿ ಅವರೊಳಗೆ 'ಹಾಗೇ' ಅಂದರೆ ಅವರ ಆಕಾರದಿಂದಲೇ 'ಇದ್ದು', ಅವರಂತೆಯೇ ಕರ್ಮ ಮಾಡುತ್ತ, ತಾನು ಮಾತ್ರ 'ಹಾಗೇ' ಹಿಂದೆ ಹೇಗಿದ್ದನೋ ಹಾಗೇ ನಿರ್ವಿಕಾರನಾಗಿಯೇ 'ಇರುತ್ತಾನೆ', ಎಂದು ಪರಮಾತ್ಮನ ಅದ್ಭುತ ಸಾಮರ್ಥ್ಯವನ್ನು 'ತತ್‌ಸನ್' ಎಂಬ ಪಾಠ ಸುಂದರವಾಗಿ ವರ್ಣಿಸುತ್ತದೆ.

'ಸದನೇಷ್ವಭೀಯತೇ' ಎಂಬ ಶ್ರೀಧರಪಾಠದಲ್ಲಿಯೂ 'ತತ್‌ಸನ್' ಎಂಬ ಅಂಶವಿದ್ದರೆ ಮಾತ್ರ, 'ಜೀವರನ್ನು ಸೃಜಿಸಿ ಅವರೊಂದಿಗೆ 'ಹಾಗೇ ಇದ್ದು', ಅಂದರೆ ಅವರಂತೆಯೇ ಕರ್ಮಮಾಡುತ್ತ, ಅವರಂತೇ ಕರ್ಮಾಸಕ್ತನಾಗಿ ತೋರಿ ಕೊಳ್ಳುತ್ತಾನೆ' ಎಂದು ಸ್ಪಷ್ಟಶಬ್ದದಿಂದ ಹೇಳಿದಂತಾದೀತು. ಇಲ್ಲದಿದ್ದರೆ ಅದೆಲ್ಲವನ್ನೂ ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ.

ತತ್ ಸನ್ ತಥೈವ ಸನ್ ।

'ತತ್‌ಸನ್' ಎಂದರೆ 'ಹಾಗೇ ಇದ್ದು' ಎಂದರ್ಥ.

❖ ❖ ❖

ಬಿಲ್ಲ ಹಬ್ಬಕ್ಕೆ ರಾಮಕೃಷ್ಣರನ್ನು ಕರೆದೊಯ್ಯಲು ಗೋಕುಲಕ್ಕೆ ಬರುವಾಗ ದಾರಿಯಲ್ಲಿ ಅಕ್ರೂರ ಕೃಷ್ಣನನ್ನು ಸಾಕ್ಷಾದ್ ಭಗವಂತನೆಂದು ಚಿಂತಿಸುತ್ತಾನೆ.

ರಚಿತೈರ್ಜೀವೈಃ ಸದನೇಷು ವೃಂದಾವನ ತರುಷು ಗೋಪೀಗೃಹೇಷು ಚ ಲೀಲಯಾ ಕರ್ಮಾಣಿ ಕುರ್ವನ್ ಸಕ್ತವದಭೀಯತೇ ಆಭಿಮುಖ್ಯೇನ ಪ್ರತೀಯತೇ। -ಶ್ರೀಧರಃ

ಯಸ್ಯಾಖಿಲಾಮೀವಹಭಿಃ ಸುಮಂಗಲೈ
ರ್ವಾಚೋ ವಿಮಿಶ್ರಾ ಗುಣಕರ್ಮಜನ್ಮಭಿಃ ।
ಪ್ರಾಣಂತಿ ಶುಂಭಂತಿ ಪುನಂತಿ ವೈ ಜಗದ್
ಯಾಸ್ತದ್ವಿರಕ್ತಾಃ ಸ್ಯುರಶೋಭನಾ ಮತಾಃ ॥ ೧೨ ॥

ಶ್ರೀಹರಿಯ ಗುಣಗಳು ಲೀಲೆಗಳು ಅವತಾರಗಳು ಎಲ್ಲವೂ ಸಮಸ್ತ ಪಾಪ ಪರಿಹಾರಕವಾಗಿದ್ದು ಪರಮಮಂಗಳಕರವಾಗಿವೆ. ಅವನ್ನು ಕೊಂಡಾಡಲು ಹೊರಡುವ ಮಾತುಗಳು ಜಗತ್ತನ್ನು ಚೆನ್ನಾಗಿ ಬದುಕಿಸುತ್ತವೆ. ಬೆಳಗಿಸುತ್ತವೆ. ಪವಿತ್ರಗೊಳಿಸುತ್ತವೆ. ಹೊರತು, ಹರಿಯ ಗುಣ ಲೀಲೆ ಅವತಾರಗಳ ಬಗ್ಗೆ ಹೇಳದ ಮಾತುಗಳು ಹಾಗೆ ಮಾಡುವುದಿಲ್ಲ. ಅವು ಅಮಂಗಳಕರವಾಗಿರುತ್ತವೆ.

ಇಲ್ಲಿ 'ಶುಂಭಂತಿ' ಎಂಬುದು 'ಶುಂಭ' ಶೋಭಾರ್ಥೇ ಬೆಳಗುವುದು ಎಂಬ ಅರ್ಥದ ಧಾತುವಿನ ಅಂತರ್ಣೀತಣಿಜಂತ ರೂಪ. ಭಾಷಣ ಭಾಸನ ಹಿಂಸಾ ಮುಂತಾದ ಅರ್ಥವೂ ಈ ಧಾತುವಿಗೆ ಇರುವುದರಿಂದ ಧಾತುಪಾಠ ಅರ್ಥವನ್ನು ನಿಖರವಾಗಿ ಹೇಳುವುದಿಲ್ಲ. [೧]ಧಾತುಪಾಠಗಳಲ್ಲಿ ಒಮ್ಮತವಿಲ್ಲ. 'ಶೋಭಾರ್ಥದಲ್ಲಿಯೇ ಹೆಚ್ಚು ರೂಢಿ' ಎಂದು ಅಭಿಧಾನ ಗ್ರಂಥವಚನವನ್ನು ಶ್ರೀಮದಾಚಾರ್ಯರು ತೋರಿಸುತ್ತಾರೆ-

ಶುಂಭಂತಿ ಶೋಭಯಂತಿ ।
ಶುಂಭನಂ ಶೋಭನಂ ಶುಂಭಂ ಶುಭ ಪರ್ಯಾಯವಾಚಕಾಃ ॥
ಇತ್ಯಭಿಧಾನಂ ॥

'ಶುಂಭಂತಿ' ಎಂದರೆ ಶೋಭೆ ಉಂಟುಮಾಡುತ್ತವೆ, ಬೆಳಗುತ್ತವೆ.

'ಶುಂಭನ ಶೋಭನ ಶುಂಭ ಈ ಮೂರು ಶಬ್ದಗಳು ಶುಭ ಶಬ್ದಕ್ಕೆ ಸಮಾನಾರ್ಥಕವಾಗಿ ಹೆಚ್ಚು ರೂಢಿಯಲ್ಲಿ ಇವೆ' ಎಂದು ಅಭಿಧಾನಗ್ರಂಥ ಹೇಳುತ್ತದೆ.

❖ ❖ ❖

---

೧ ಶುಭ ಶುಂಭ-ಭಾಷಣೇ। ಭಾಸನೇ ಇತ್ಯೇಕೇ। ಹಿಂಸಾಯಾಮಿತ್ಯನ್ಯೇ।
-ಸಿದ್ಧಾಂತಕೌಮುದೀ

ಬಿಲ್ಲ ಹಬ್ಬಕ್ಕೆ ರಾಮಕೃಷ್ಣರನ್ನು ಕರೆಯಲು ಗೋಕುಲಕ್ಕೆ ಬಂದ ಅಕ್ರೂರ ಅವರನ್ನು ಕಾಣುತ್ತಾನೆ.

ಪ್ರಧಾನಪುರುಷಾವಾದ್ಯೌ ಜಗದ್ಧೇತೂ ಜಗತ್ಪತೀ ।
ಅವತೀರ್ಣೌ ಜಗತ್ಯರ್ಥೇ ಸ್ವಾಂಶೇನ ಬಲಕೇಶವೌ ॥ ೩೦ ॥

ಈ ಬಲರಾಮ ಕೃಷ್ಣರು ಉತ್ತಮ ಪುರುಷರು. ಸೃಷ್ಟಿಯ ಆದಿಯಲ್ಲೂ ಇದ್ದವರು. ಜಗತ್ಕರ್ತರು ಜಗದೊಡೆಯರು ಜಗತ್ತಿನ ಕ್ಷೇಮಕ್ಕಾಗಿ ಶುಕ್ಲಕೇಶ ಕೃಷ್ಣಕೇಶಗಳೆಂಬ ತಮ್ಮ ಅಂಶಗಳಿಂದ ಅವತರಿಸಿದವರು.

ಉತ್ತಮಪುರುಷರು ಸೃಷ್ಟಿಯ ಆದಿಯಲ್ಲಿದ್ದವರು ಎಂದು ಮುಂತಾಗಿ ಹೇಳಿದ ಎಲ್ಲ ವಿಶೇಷಣಗಳು ಶ್ರೀಕೃಷ್ಣನಲ್ಲಿ ಮಾತ್ರ ಬರುತ್ತವೆ. ಬಲರಾಮ ಶೇಷಾವತಾರಿ. ಅದರಿಂದ ಅವನಲ್ಲಿ ಬರಲಾರವು. ಆದರೂ ಬಲರಾಮನಲ್ಲಿ ಹರಿಯ ಶುಕ್ಲಕೇಶವೆಂಬ ಒಂದು ರೂಪದ ಆವೇಶ ವಿಶೇಷವಾಗಿ ಇರುವುದರಿಂದ ಅದನ್ನು ತಿಳಿಸುವುದಕ್ಕಾಗಿ ಅವನನ್ನು ಕೃಷ್ಣನೊಂದಿಗೆ ಅವನಂತೆಯೇ ಪುರಾಣಗಳು ವರ್ಣಿಸುತ್ತವೆ. ಬೇರೆ ವ್ಯಾಖ್ಯಾನಕಾರರು ಈ ಅಂಶವನ್ನು ಗಮನಿಸುವುದಿಲ್ಲ.

ವೈನ್ಯಪಾರ್ಥಬಲೇಶಾದಾವಾವಿಷ್ಟಂ ಪುರುಷೋತ್ತಮಂ ।
ಅಪೇಕ್ಷ್ಯ ತದ್ಗುಣಾಃ ಸರ್ವೇ ತಜ್ಜೀವಾನಾಮಭಾವಿನಃ ।
ಅಪ್ಯುಚ್ಯಂತೇ ಪುರಾಣೇಷು ವಿಶೇಷಾತ್ ಸನ್ನಿಧಿರ್ಯತಃ ॥

ಇತಿ ಮಾಹಾತ್ಮ್ಯೇ ॥

'ಪೃಥು ಅರ್ಜುನ ಬಲರಾಮ ರುದ್ರ ಇಂದ್ರಾದಿಗಳಲ್ಲಿ ಆವಿಷ್ಟನಾದ ಶ್ರೀಹರಿಯಲ್ಲಿ ಶ್ರೀಹರಿಯ ಗುಣಗಳೆಲ್ಲವೂ ಇವೆ ಎಂಬ ಅಭಿಪ್ರಾಯದಿಂದ ಪುರಾಣಗಳಲ್ಲಿ ಆ ಗುಣಗಳು ಆ ಜೀವರಲ್ಲಿ ವರ್ಣಿಸಲ್ಪಡುತ್ತವೆ. ಆ ಜೀವರಲ್ಲಿ ಆ ಗುಣಗಳಿಲ್ಲದಿದ್ದರೂ ಆ ಗುಣಯುಕ್ತನಾದ ಶ್ರೀಹರಿಯ ವಿಶೇಷ ಸನ್ನಿಧಾನವಿರುವುದೇ ಇದಕ್ಕೆ ಕಾರಣ' ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಷಟ್‌ತ್ರಿಂಶೋಽಧ್ಯಾಯಃ

❖

ಅಧ್ಯಾಯ - ೩೭

ಅಧ್ಯಾಯ ಸಾರಾಂಶ

ರಾತ್ರಿ ಭೋಜನವಾದ ಬಳಿಕ ರಾಮಕೃಷ್ಣರು ಅಕ್ರೂರನ ಬಳಿಗೆ ಬಂದು, ಬಂಧುಗಳ ವಿಷಯದಲ್ಲಿ ಕಂಸನ ವರ್ತನೆ ಏನು? ಅವನು ಮುಂದೆ ಏನು ಮಾಡಲು ಬಯಸಿರುವನು? ಎಂದು ಕೇಳಿದರು. ಯಾದವರ ವಿಷಯದಲ್ಲಿ ಕಂಸನ ವೈರಪ್ರವೃತ್ತಿ, ಆತ ವಸುದೇವನನ್ನು ಕೊಲ್ಲಲು ಹೊರಟಿದ್ದು ನಾರದರು ತಡೆದುದರಿಂದ ಅವನನ್ನು ಬಂಧಿಸಿಟ್ಟಿದ್ದು, ತಾನು ದೂತನಾಗಿ ತಂದಿರುವ ಕಂಸನ ಸಂದೇಶ, ಅವನ ನಿಜವಾದ ಉದ್ದೇಶ, ವಸುದೇವನಿಂದ ಕೃಷ್ಣ ಹುಟ್ಟಿದ ವೃತ್ತಾಂತವನ್ನು ನಾರದರು ಕಂಸನಿಗೆ ಹೇಳಿದ್ದು ಇವೆಲ್ಲವನ್ನೂ ಅಕ್ರೂರ ಹೇಳಿದಾಗ ಅದನ್ನು ಕೇಳಿ ಶತ್ರುಸಂಹಾರಕರಾದ ರಾಮಕೃಷ್ಣರು ನಕ್ಕರು. ನಂದಗೋಪನಿಗೆ ಕಂಸನ ಆದೇಶವನ್ನು ತಿಳಿಸಿದರು.

ನಂದ ಗೊಲ್ಲರಿಗೆ ಆಜ್ಞೆ ಮಾಡಿದ. 'ಹಾಲು ಬೆಣ್ಣೆ ಮುಂತಾದುವನ್ನೂ ರಾಜನಿಗೆ ಕೊಡುವ ಕಪ್ಪಕಾಣಿಕೆಗಳನ್ನೂ ಎತ್ತಿಕೊಳ್ಳಿರಿ, ಬಂಡಿಗಳನ್ನು ಕಟ್ಟಿರಿ. ನಾಳೆ ಮಧುರೆಗೆ ಎಲ್ಲರೂ ಹೋಗಿ ರಾಜನಿಗೆ ಕಪ್ಪಕಾಣಿಕೆ ಹಾಲು ಮೊಸರು ಮುಂತಾದುವನ್ನು ಸಲ್ಲಿಸಬೇಕು. ಅಲ್ಲಿ ನಡೆಯುವ ದೊಡ್ಡ ಉತ್ಸವವನ್ನೂ ನೋಡಬೇಕು' ಎಂದು.

ಗೋಪಿಯರು ಇದನ್ನು ಕೇಳಿ ತಲ್ಲಣಗೊಂಡರು. ರಾಮಕೃಷ್ಣರು ಮಧುರೆಗೆ ಹೋಗುವರೆಂದು ವ್ಯಥೆಯಿಂದ ನಿಟ್ಟುಸಿರಿಟ್ಟರು. ಅವರ ಮುಖ ಬಾಡಿತು. ಕೃಷ್ಣಧ್ಯಾನದಲ್ಲಿ ಉಟ್ಟಸೀರೆ ತುರುಬುಗಳು ಸಡಿಲಗೊಂಡವು. ಶರೀರದ ಚಟುವಟಿಕೆಗಳು ಸ್ತಬ್ಧವಾದುವು. ಶ್ರೀಕೃಷ್ಣನ ನಡೆ ನುಡಿ ನಗು ನೋಟಗಳನ್ನು ಹಾಸ್ಯಚಟಾಕಿಗಳನ್ನು ಅನುಪಮ ಕಾರ್ಯಗಳನ್ನು ನೆನೆದು ಅವನ ವಿರಹಭೀತಿಯಿಂದ ಕಾತರರಾದರು. ಓ ಬ್ರಹ್ಮದೇವ, ನೀನು ಪ್ರಣಯಿಗಳನ್ನು ಒಮ್ಮೆ ಸೇರಿಸಿ ಅಗಲಿಸುವಿ, ಇದು ನಿನಗೆ ಮಕ್ಕಳಾಟ. ಅದರಿಂದ ನಿನಗೇನು

ಪ್ರಯೋಜನವಿದೆ? ಸುಂದರವಾದ ಕೃಷ್ಣನ ಮುಖವನ್ನು ತೋರಿಸಿ ಒಡನೆ ಮರೆ ಮಾಡುವಿ. ಇದು ಸರಿಯಲ್ಲ. ಓ ಅಕ್ರೂರ, ನೀನು ಕ್ರೂರ, ಹೆಸರಿಗೆ ಮಾತ್ರ ಅಕ್ರೂರ. ಕೃಷ್ಣನ ಒಂದೊಂದು ಅಂಗ ದಲ್ಲಿಯೂ ಸೃಷ್ಟಿಯ ಎಲ್ಲ ಸೌಂದರ್ಯವನ್ನು ಕಾಣುತ್ತಿದ್ದ ನಮ್ಮ ಕಣ್ಣನ್ನೇ ಕಳೆಯುತ್ತಿರುವೆ. ಅಯ್ಯೋ ಇನ್ನು ಕೃಷ್ಣ ನಮ್ಮ ಕಡೆಗೆ ನೋಡುವುದಿಲ್ಲ. ಮಧುರೆಯ ಹೆಣ್ಣುಗಳಿಗೆ ಈ ರಾತ್ರಿ ಕಳೆದರೆ ಸುಪ್ರಭಾತವೆ ನಿಶ್ಚಿತ. ಕೃಷ್ಣನ ಓರೆನೋಟದ ನಸುನಗೆಯ ಅಮೃತ ವನ್ನು ಅವರು ನೋಟದಿಂದ ಸವಿಯುತ್ತಾರೆ. ಕೃಷ್ಣ ಸ್ಥಿರಚಿತ್ತನಾದರೂ ಅವರ ಜೇನಿನಂಥ ಸವಿನುಡಿಗೆ ಮಾರು ಹೋಗುತ್ತಾನೆ. ನಾಚಿಕೆ ಇಲ್ಲದ ಹಳ್ಳಿ ಹುಡುಗಿಯರಾದ ನಮ್ಮನ್ನು ಅವನು ತಿರುಗಿ ಸೇರಲಾರ. ಇಂಥ ನಿಷ್ಕರುಣಿ ಅಕ್ರೂರ ನಾವು ಕೃಷ್ಣನ ವಿರಹವಾಗುವುದೆಂದು ಸಂಕಟಪಡುತ್ತಿದ್ದರೂ ಒಂದು ಸಮಾಧಾನದ ಮಾತನ್ನು ಆಡುತ್ತಿಲ್ಲ.

ಕೃಷ್ಣನಿಗೂ ಮನ ಕರಗುತ್ತಿಲ್ಲ. ರಥವನ್ನೇರಿ ಬಿಡುತ್ತಾನೆ. ಗೊಲ್ಲರೂ ಬಹಳ ಕೊಬ್ಬಿದ್ದಾರೆ. ಬಂಡಿಗಳನ್ನೇರಿ ಕೃಷ್ಣನೊಂದಿಗೆ ಹೋಗಲು ಅವಸರಪಡಿಸುತ್ತಾರೆ. ವೃದ್ದರಂತೂ ನಮಗಾಗುತ್ತಿರುವ ಅನ್ಯಾಯ ವನ್ನು ನೋಡಿಯೂ ನೋಡದಂತಿರುತ್ತಾರೆ. ಯಾರೇನು ಮಾಡುವರು? ನಮಗೆ ದೈವವೇ ಪ್ರತಿಕೂಲವಾಗಿದೆ. ನಾವೀಗ ಕೃಷ್ಣನನ್ನು ತಡೆಯೋಣ. ವೃದ್ಧರು ನಮ್ಮನ್ನು ಶೀಲಗೆಟ್ಟವರೆಂದು ತಿಳಿಯಲಿ. ತಿಳಿದು ಏನು ಮಾಡಬಲ್ಲರು?

ಗೆಳತಿಯರೆ, ನಾವಿನ್ನು ಕೃಷ್ಣನ ವಿರಹ ದುಃಖವನ್ನು ಹೇಗೆ ಕಳೆಯಲಿ? ಇಂದಿನವರೆಗೆ ಸಂಜೆ ಹೊತ್ತಿನಲ್ಲಿ ಕೃಷ್ಣ ಹಿಂತಿರುಗಿ ಬಂದು ಹಗಲಿನ ವಿರಹ ದುಃಖವನ್ನು ಕಳೆಯುತ್ತಿದ್ದ. ಇನ್ನು ಕೃಷ್ಣನನ್ನು ಬಿಟ್ಟು ನಾವು ಹೇಗೆ ಬದುಕಿರೋಣ? ಹೇ ಗೋವಿಂದ! ದಾಮೋದರ! ಮಾಧವ!' ಎಂದು ಲಜ್ಜೆ ತೊರೆದು ರೋದನ ಮಾಡಿದರು.

ಗೋಪಿಯರು ರಾತ್ರಿ ಎಲ್ಲ ಅಳುತ್ತಿದ್ದಂತೆಯೆ ಸೂರ್ಯೋದಯವಾಯಿತು. ಅಕ್ರೂರ ರಾಮಕೃಷ್ಣರನ್ನು ಏರಿಸಿಕೊಂಡು ರಥವನ್ನು ನಡೆಸಿದ. ಗೊಲ್ಲರು ಬಂಡಿಗಳಲ್ಲಿ

ಅವನನ್ನು ಹಿಂಬಾಲಿಸಿದರು. ಗೋಪಿಯರು ಸ್ವಲ್ಪದೂರ ಕೃಷ್ಣನನ್ನು ಹಿಂಬಾಲಿಸಿದಾಗ ಕೃಷ್ಣ ಸ್ವಲ್ಪ ಹಿಂತಿರುಗಿ ನೋಡಿದ. 'ಬೇಗನೆ ಹಿಂತಿರುಗಿ ಬರುವೆನೆನ್ನಲಿ ಕೃಷ್ಣ' ಎಂದು ಆಸೆಯಿಂದ ನಿಂತರು. ಕೃಷ್ಣ 'ಬೇಗನೆ ಬರುವೆನೆ'ಂದು ಆಪ್ತದೂತರ ಮೂಲಕ ಹೇಳಿಕಳಿಸಿದ. ರಥದ ಧ್ವಜ, ದೂಳು ಕಾಣುವವರೆಗೂ ನೋಡುತ್ತ ಹಾಗೇ ನಿಂತರು. ಸ್ವಲ್ಪ ದೂರ ಹೋಗಿ ಮರಳಿ ಬರುವನೇನೋ ಎನ್ನುವ ಆಸೆ ಕೊನೆಗೂ ನಿರಾಸೆ ಯಾಯಿತು. ಪ್ರಿಯನಾದ ಕೃಷ್ಣನ ಲೀಲೆಗಳನ್ನು ಹಾಡುವ ಮೂಲಕ ಮನಸ್ಸನ್ನು ಹಗುರ ಮಾಡಿಕೊಂಡು ಹಗಲು ರಾತ್ರಿಗಳನ್ನು ಕಳೆದರು.

ಅಕ್ರೂರನ ರಥ ಯಮುನಾ ತೀರಕ್ಕೆ ಬಂದಾಗ ರಾಮಕೃಷ್ಣರು ನದಿಯಲ್ಲಿ ಆಚಮನ ಮಾಡಿ ನೀರು ಕುಡಿದು ರಥದಲ್ಲಿ ಕುಳಿತರು. ಅಕ್ರೂರ ಸ್ನಾನ ಮಾಡಿದ. ನೀರಲ್ಲಿ ಮುಳುಗಿ ಪ್ರಣವವನ್ನು ಜಪಿಸಿದ. ಆಗ ನೀರೊಳಗೆ ರಾಮಕೃಷ್ಣರು ಕಂಡುಬಂದರು. ರಥದಲ್ಲಿ ಕುಳಿತವರು ಇಲ್ಲಿ ಹೇಗೆ ಬಂದರು? ಹಾಗಾದರೆ ಈಗ ರಥದಲ್ಲಿ ಅವರಿಲ್ಲವೆ? ಎಂದು ಎದ್ದು ರಥವನ್ನು ನೋಡಿದರೆ ಅವರಿನ್ನೂ ಅಲ್ಲೇ ಕುಳಿತೇ ಇದ್ದಾರೆ! ಹಾಗಾದರೆ ನೀರಲ್ಲಿ ನಾನು ಕಂಡಿದ್ದು ಸುಳ್ಳೇನು? ಎಂದು ಸಂಶಯಪಟ್ಟು ಮುಳುಗಿ ನೋಡಿದರೆ ತಿರುಗಿ ಅಲ್ಲಿ ರಾಮಕೃಷ್ಣರ ದರ್ಶನವಾಗುತ್ತಿದೆ! ಶ್ರೀಕೃಷ್ಣ ವಿಶ್ವರೂಪ ತೋರುತ್ತಿ ದ್ದಾನೆ! ಹಿಂದೆ ಬಲರಾಮನೊಬ್ಬನೆ ಶೇಷರೂಪದಿಂದ ನೀರೊಳಗೆ ಅವನಿಗೆ ದರ್ಶನ ಕೊಡುತ್ತಿದ್ದ. ಇಂದು ಆ ಶೇಷನಲ್ಲಿ ಶ್ರೀಕೃಷ್ಣನೂ ದರ್ಶನ ನೀಡುತ್ತಿದ್ದಾನೆ. ಅವನ ಸುತ್ತಲೂ ಸುನಂದ ನಂದ ಮುಂತಾದ ಪಾರ್ಷದರು ಸನಕಾದಿ ಮುನಿಗಳು ಬ್ರಹ್ಮರುದ್ರಾದಿ ದೇವತೆಗಳು ಮರೀಚಿ ಮುಂತಾದ ಬ್ರಾಹ್ಮಣೋತ್ತಮರು ಪ್ರಹ್ಲಾದ ನಾರದ ಮುಂತಾದ ಭಾಗವತೋತ್ತಮರು ನಿಂತು ಪ್ರಭುವನ್ನು ಸ್ತುತಿಸುತ್ತಿದ್ದಾರೆ. ಶ್ರೀ ಪುಷ್ಟಿ ಮುಂತಾದ ಮಹಾಲಕ್ಷ್ಮೀ ರೂಪಗಳು ಅವನ ಸೇವೆ ಮಾಡುತ್ತಿದ್ದಾರೆ. ಅಕ್ರೂರ ಕಂಡು ರೋಮಾಂಚ ಗೊಂಡ, ಆನಂದಬಾಷ್ಪ ಸುರಿಸಿದ. ಕೈಜೋಡಿಸಿ ಸ್ತೋತ್ರಗೈದ.

❖

ಅಧ್ಯಾಯ - ೩೮

ಅಧ್ಯಾಯ ಸಾರಾಂಶ

ಜಗಜ್ಜನ್ಮಾದಿಕರ್ತನಾದ ಪರಮಪುರುಷ ನಾರಾಯಣನಿಗೆ ಇದೊ ನಮಸ್ಕಾರ. ಅವನ ನಾಭಿಯಿಂದ ಸೃಷ್ಟಿಕರ್ತನಾದ ಬ್ರಹ್ಮ ಆವಿರ್ಭವಿಸಿದ. ಅವನ ಅಂಗಗಳಿಂದಲೆ ಬೇರೆ ಎಲ್ಲ ತತ್ತ್ವಾಭಿಮಾನಿ ದೇವತೆಗಳು ಜನಿಸಿದರು. ಅವರು ಯಾರೂ ಅವನ ಮಹಿಮೆ ಗಳನ್ನು ಪೂರ್ತಿ ತಿಳಿಯಲಾರರು. ಅವನನ್ನೇ ಎಲ್ಲ ಜಡಗಳಲ್ಲಿ ಚೇತನರಲ್ಲಿ ಜ್ಞಾನಯೋಗಿಗಳು ಉಪಾಸನೆ ಮಾಡುತ್ತಾರೆ. ಕರ್ಮಯೋಗಿಗಳೂ ಎಲ್ಲ ದೇವತಾನಾಮಗಳಿಂದಲೂ ಅವನನ್ನೇ ಆರಾಧಿಸುತ್ತಾರೆ. ಶ್ರೀಹರಿ, ಪಂಚರಾತ್ರವಿಧಿಯಿಂದ ಬಾಹ್ಯ ಆಂತರದೀಕ್ಷೆ ಪಡೆದವರು ಶರೀರ ಮನಸ್ಸುಗಳಿಗೆ ಸಂಸ್ಕಾರ ಮಾಡಿಕೊಂಡು ಪಂಚ ಕಾಲಾರ್ಚನೆಯ ಮೂಲಕ ನಿನ್ನನ್ನೇ ಸರ್ವೋತ್ತಮನೆಂದು ಪೂಜಿಸುತ್ತಾರೆ. ನವನಾರೀಕುಂಜರದಂತೆ ಬಹುಮೂರ್ತಿಯುಕ್ತವಾದ ನಿನ್ನ ಏಕಮೂರ್ತಿಗಳನ್ನು ಚಿಂತಿಸುತ್ತಾರೆ.

ಶೈವಾಗಮದವರೂ ಕೂಡ ಶಿವರೂಪ ಶಿವನಾಮಗಳಿಂದ ಶಿವನಲ್ಲಿ ನಿಯಾಮಕನಾಗಿರುವ ನಿನ್ನನ್ನೇ ಆರಾಧಿಸುತ್ತಾರೆ. ಅನ್ಯದೇವತಾ ಭಕ್ತರೂ ಕೂಡ ಆ ದೇವತೆಗಳನ್ನು ಪೂಜಿಸಿ ಕೊನೆಯಲ್ಲಿ ಸರ್ವದೇವೇಶ್ವರನಾದ ನಿನಗೇ ಆ ಪೂಜೆಯನ್ನು ಅರ್ಪಿಸುತ್ತಾರೆ. ಮಳೆ ನೀರಿನಿಂದ ತುಂಬಿ ಹರಿಯುವ ಎಲ್ಲ ನದಿಗಳೂ ಸಮುದ್ರವನ್ನೇ ಸೇರುವಂತೆ ಎಲ್ಲ ಆರಾಧನೆಗಳೂ ಎಲ್ಲ ಶಾಸ್ತ್ರ ವಿಧಿಗಳೂ ಎಲ್ಲ ದೇವತಾನಾಮಗಳೂ ನಿನ್ನನ್ನೇ ಸೇರುತ್ತವೆ. ನಿನ್ನ ವಿರಾಡ್ರೂಪದಲ್ಲಿಯೇ ಎಲ್ಲ ಲೋಕಗಳೂ ಲೋಕ ಪಾಲಕರೂ ಜನಿಸಿ ನೆಲೆಸಿದ್ದಾರೆ. ಹಯಗ್ರೀವಮೂರ್ತಿಯಾಗಿ ಮತ್ಸ್ಯಾದಿ ದಶಮೂರ್ತಿಯಾಗಿ ಲೀಲೆ ಮಾಡಿದ ನಿನಗೆ ನಮಸ್ಕಾರ.

ನಾನು ಮೂಢನಾಗಿ ನಿನ್ನನ್ನು ಬಿಟ್ಟು ನಶ್ವರವಾದ ಸಂಸಾರ ಸುಖವನ್ನು ನಿತ್ಯವೆಂದು ಭ್ರಮಿಸಿದೆ. ಪಾಚಿಯಿಂದ ಮುಚ್ಚಿಹೋದ

ನೀರನ್ನು ತಿಳಿಯದೆ ಮರುಮರೀಚಿಕೆಯ ಬೆನ್ನುಹತ್ತಿದೆ. ಕಾಮ ಕರ್ಮಗಳಿಂದ ದೂಷಿತವಾದ ನನ್ನ ಮನಸ್ಸನ್ನು ಇಂದ್ರಿಯಗಳು ಅತ್ತ ಇತ್ತ ಸೆಳೆಯುತ್ತಿದ್ದರೂ ವಿಷಯಸುಖ ಉಂಡು ಬಲಗುಂದಿದ ಬುದ್ಧಿಯವನು ನಾನು ಮನಸ್ಸನ್ನು ಹಿಡಿದಿಟ್ಟುಕೊಳ್ಳಲಾರದವನಾಗಿ ಹೋದೆ. ಅಂಥ ನನಗೆ ಇಂದು ನಿನ್ನ ದರ್ಶನ ದೊರಕಿದುದು ಕೇವಲ ನಿನ್ನ ಅನುಗ್ರಹವೆ. ಮೋಕ್ಷದಾಯಕನಾದ ನಿನಗಿದೋ ನಮಸ್ಕಾರ !

❖

ಅಕ್ರೂರ ಯಮುನೆಯಲ್ಲಿ ಸ್ನಾನ ಮಾಡುವಾಗ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತೋತ್ರ ಮಾಡುತ್ತಾನೆ-

ಭೂಸ್ತೋಯಮಗ್ನಿಃ ಪವನಃ ಖಮಾದಿ
ರ್ಮಹಾನಜಾದಿರ್ಮನ ಇಂದ್ರಿಯಾಣಿ ।
ಸರ್ವೇಂದ್ರಿಯಾರ್ಥಾ ವಿಬುಧಾಶ್ಚ ಸರ್ವೇ
ಯೇ ಹೇತವಸ್ತೇ ಜಗತೋಽಂಗಭೂತಾಃ ॥ ೩ ॥

ಪೃಥಿವಿ ಜಲ ಅಗ್ನಿ ವಾಯು ಆಕಾಶ ಭೂತೇಂದ್ರಿಯಾದಿಕಾರಣವಾದ ಅಹಂಕಾರ ಮಹತ್ತತ್ವ ಪ್ರಕೃತಿ ಮನಸ್ಸು ಇಂದ್ರಿಯಗಳು ಶಬ್ದಾದಿ ವಿಷಯಗಳು ಮತ್ತು ಈ ಎಲ್ಲ ಜಡತತ್ವಗಳಿಗೆ ಅಭಿಮಾನಿಗಳಾದ ದೇವತೆಗಳು ಇವರೆಲ್ಲರೂ ಜಗತ್ತಿಗೆ ಕಾರಣರಾಗಿದ್ದರೂ ನಿನ್ನ ಅಂಗಗಳಿಂದಲೇ ಜನಿಸಿದವರು.

ಇಲ್ಲಿ ವೀರರಾಘವ ಸುದರ್ಶನಸೂರಿ ವ್ಯಾಖ್ಯಾನಗಳ ಪ್ರಕಾರ 'ಪೃಥಿವ್ಯಾದಿಗಳೂ ಅವುಗಳ ಅಭಿಮಾನಿಗಳೂ ಪರಮಾತ್ಮನ ಶರೀರದ ಅವಯವಗಳು. ಶರೀರಾವಯವಗಳೆಂದು ಹೇಳುವ ಮೂಲಕ ಅವುಗಳಿಗೆ ಪರಮಾತ್ಮ ಉಪಾದಾನ ನಿಮಿತ್ತ ಎರಡೂ ಆಗುತ್ತಾನೆ ಎಂದು ಭಾಗವತ ತಿಳಿಸುತ್ತಿದೆ. ಮೂಲಪ್ರಕೃತಿಶರೀರಿ ಮಹದಾದಿಶರೀರಿರೂಪದಿಂದ ಪರಿಣಾಮ ಹೊಂದುವುದರಿಂದ ಉಪಾದಾನ ಎನಿಸುವನೆಂದೂ ಮೂಲಪ್ರಕೃತಿ ಮಹದಾದಿಗಳು ಶರೀರವಾಗಿರುವುದರಿಂದ ಅವುಗಳಿಗೆ ನಿಯಾಮಕನಾಗಿ ನಿಮಿತ್ತ ಎನಿಸುವನೆಂದೂ ಹೇಳಿದಂತಾಗುವುದು. 'ಜಗತೋ ಹೇತವಃ' ಎನ್ನುವಲ್ಲಿ ಜಗದಂತರ್ಭೂತರಾದ ಜೀವರಿಗೂ ಪರಮಾತ್ಮ

ಉಪಾದಾನ ನಿಮಿತ್ತ ಎಂದು ತಿಳಿಸಿದಂತಾಗುವುದು. ಏಕೆಂದರೆ ಜ್ಞಾನಸಂಕೋಚಾವಸ್ಥೆಯಲ್ಲಿರುವ ಜೀವರು ಪರಿಣಾಮ ಹೊಂದಿ ಜ್ಞಾನವಿಕಾಸಾವಸ್ಥೆಗೆ ಬಂದಾಗ ಆ ಅವಸ್ಥೆಯಲ್ಲಿರುವ ತಮಗೇ ತಾವು ಉಪಾದಾನರೆನಿಸುತ್ತಾರೆ. ಇಂಥ ಜೀವರಿಗೆ ಶರೀರಿಯಾದ ಪರಮಾತ್ಮ ಅವರಿಗೆ ಉಪಾದಾನನೆನಿಸುತ್ತಾನೆ. ಶರೀರಿ ಎನಿಸುವುದರಿಂದ ನಿಯಾಮಕನಾಗಿ ನಿಮಿತ್ತನೆಂದೂ ಕರೆಸಿಕೊಳ್ಳುತ್ತಾನೆ' ಎಂದು.

ಆದರೆ ಭಾಗವತಕ್ಕೆ ಈ ಅಭಿಪ್ರಾಯವಿರಲಾರದು. ಹಿಂದಿನ ಪದ್ಯದಲ್ಲಿ ಬ್ರಹ್ಮ 'ನಾಭಿಯಿಂದ ಜನಿಸಿದ'ನೆಂದಿದೆ. ಬ್ರಹ್ಮಾದಿಗಳೆಲ್ಲರೂ ಅವಯವಗಳೇ ಆಗಿ ಇರುತ್ತಿದ್ದರೆ 'ಬ್ರಹ್ಮನೇ ನಾಭಿ' ಎನ್ನಬಹುದಿತ್ತು. ಈ ಪದ್ಯದ್ದಲಿಯೂ 'ಅಂಗಭೂತಾಃ' ಎನ್ನದೆ 'ಅಂಗಾನಿ' ಎನ್ನಬಹುದಿತ್ತು. 'ಅಂಗಭೂತಾಃ' ಎಂದಿರುವುದರಿಂದ 'ಅಂಗೇಭ್ಯೋ ಭೂತಾಃ' ಎಂದು ವಿಗ್ರಹಮಾಡುವ ಅಭಿಪ್ರಾಯ ಕಾಣುತ್ತದೆ. 'ಅಂಗಾತ್ ಶ್ರೀಮೂರ್ತೇಃ ಭೂರ್ತಾಃ' ಎಂದೇ ಶ್ರೀಧರವ್ಯಾಖ್ಯಾನದಲ್ಲಿಯೂ ವಿಗ್ರಹವನ್ನು ತೋರಿಸಿದ್ದಾರೆ. 'ಅಂಗಗಳಿಂದ ಭೂತ' ಅಂದರೆ, ಉತ್ಪನ್ನ, ಕುಂಬಾರನಿಂದ ಗಡಿಗೆ ಉತ್ಪನ್ನವಾಗುವಂತೆ. ಹೀಗಾಗಿ ಕೇವಲ ನಿಮಿತ್ತಕಾರಣ, ಕರ್ತೃ ಪರಮಾತ್ಮನೆಂದೇ ಹೇಳಿದಂತಾಗುತ್ತದೆ.

ತವಾಂಗೇಭ್ಯೋ ಭೂತಾಃ।

> 'ಪೃಥಿವ್ಯಾದಿ ತತ್ವಗಳೂ ಅವುಗಳ ಅಭಿಮಾನಿಗಳೂ ನಿನ್ನ ಅಂಗಗಳಿಂದ ಜನಿಸಿದವರು' ಎನ್ನುವ ಅಭಿಪ್ರಾಯದಿಂದಲೆ 'ತವ ಅಂಗಭೂತಾಃ' ಎಂದಿದೆ.

ಪರಮಾತ್ಮನ ಅಂಗಗಳು ಪ್ರತಿಯೊಂದು ಪರಮಾತ್ಮನಿಗೆ ಅಭಿನ್ನವಾದ ಅವನ ರೂಪಗಳು. ಅವೆಲ್ಲವೂ ಚೇತನಾಚೇತನ ಪ್ರಪಂಚಕ್ಕೆ ಸೃಷ್ಟಿಕರ್ತೃಗಳು. ಹೀಗಾಗಿ ಒಬ್ಬನೇ ಪರಮಾತ್ಮ ಸರ್ವಸೃಷ್ಟಿಕರ್ತೃ.

❖ ❖ ❖

ಅಕ್ರೂರ ಯಮುನೆಯಲ್ಲಿ ಸ್ನಾನ ಮಾಡುವಾಗ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ-

ನೈತೇ ಸ್ವರೂಪಂ ವಿದುರಾತ್ಮನಸ್ತೇ
ಅಜಾದಯೋಽನ್ಯಾತ್ಮತಯಾ ಗೃಹೀತಾಃ।
ಅಜೋಽನುಬದ್ಧಃ ಸ ಗುಣೈರಜಾ ಯಾ
ಗುಣಾತ್ಪರಂ ವೇದ ನ ತೇ ಸ್ವರೂಪಮ್ ॥ ೪ ॥

ಈ ರಮಾ ಬ್ರಹ್ಮಾದಿ ತತ್ವಾಭಿಮಾನಿ ದೇವತೆಗಳು ನಿನ್ನ ಜಗತ್ಕರ್ತೃತ್ವ ಸ್ವರೂಪವನ್ನು ಪೂರ್ತಿಯಾಗಿ ತಿಳಿದಿಲ್ಲವೆಂದಮೇಲೆ ಆ ಸ್ವರೂಪವನ್ನು ತಾವು ಎಂದಾದರೂ ಪಡೆಯಲಾರರೆಂದು ಬೇರೇನು ಹೇಳಬೇಕು? ನೀನು ಅವರನ್ನು ತನಗಿಂತ ಬೇರೆ ಎಂದು ಪ್ರತ್ಯಕ್ಷವಾಗಿಯೆ ತಿಳಿದಿರುವೆ. ಮತ್ತು ನಿತ್ಯಮುಕ್ತಳಾದ ರಮೆಯೂ ನಿನ್ನ ಸ್ವರೂಪವನ್ನು ನಿನ್ನಂತೆ ಅರಿಯಳೆಂದಮೇಲೆ ಗುಣಬದ್ಧನಾದ ಬ್ರಹ್ಮ ಗುಣಾತೀತನಾದ ನಿನ್ನ ಸ್ವರೂಪವನ್ನು ಪೂರ್ತಿ ತಿಳಿಯಲಾರ ಎಂದು ಬೇರೇನು ಹೇಳಬೇಕು? ಈ ಕಾರಣದಿಂದ ರಮಾಬ್ರಹ್ಮಾದಿಗಳು ಯಾರೂ ನಿನ್ನ ಸ್ವರೂಪವನ್ನು ಎಂದೂ ಪಡೆಯಲಾರರು.

ಇಲ್ಲಿ ಶ್ರೀಧರಾದಿ ವ್ಯಾಖ್ಯಾನಕಾರರು,

'ಅಜಾದಯೋಽನಾತ್ಮತಯಾ ಗೃಹೀತಾಃ'

ಎಂದು ಅಪಪಾಠವಿಟ್ಟುಕೊಂಡಿದ್ದಾರೆ.

---

[1]ಶ್ರೀಧರ ವ್ಯಾಖ್ಯಾನ ಈ ಶ್ಲೋಕಕ್ಕೆ ನೀಡುವ ವಿವರಣೆ- 'ಈ ಪ್ರಕೃತ್ಯಾದಿಗಳು 'ಆತ್ಮನಾದ' ನಿನ್ನ ಸ್ವರೂಪವನ್ನು ತಿಳಿಯಲಾರವು. ಏಕೆ? ಜಡವಾದ್ದರಿಂದ. ಜಡ ಏಕೆ? ಪ್ರತ್ಯಕ್ಷಾದಿ ಪ್ರಮಾಣಗಳಿಂದ ದೃಷ್ಟವಾಗಿರುವುದರಿಂದ. ಚೇತನ ದೃಷ್ಟವಾಗುವುದಿಲ್ಲ ತಾನೆ? ಜಡಗಳು ತಿಳಿಯದಿದ್ದರೇನಂತೆ, ಚೇತನ ತಿಳಿಯುತ್ತಾನೆ, ಎಂದರೆ ಚತುರ್ಮುಖ ಬ್ರಹ್ಮನೂ ಕೂಡ ಪ್ರಕೃತಿಯ ಗುಣಗಳಿಂದ ಆವೃತನಾಗಿರುವುದರಿಂದ ಗುಣಾತೀತವಾದ ನಿನ್ನ ಸ್ವರೂಪವನ್ನು ತಿಳಿಯುವುದಿಲ್ಲ. ಇನ್ನು ಅನ್ಯ ಚೇತನರ ಪಾಡೇನು? ಅಥವಾ ಪ್ರಕೃತಿ ಮುಂತಾದವು ತಮ್ಮ ಸ್ವರೂಪವನ್ನೂ ನಿನ್ನ ಸ್ವರೂಪವನ್ನೂ ತಿಳಿಯುವುದಿಲ್ಲ, ಜಡವಾದ್ದರಿಂದ. ಜೀವನು ಅವುಗಳನ್ನೂ ತನ್ನನ್ನೂ ತಿಳಿಯಬಲ್ಲವನೆ. ಆದರೂ ನಿನ್ನ ಸ್ವರೂಪವನ್ನು ತಿಳಿಯುವುದಿಲ್ಲ.'

[1] ಏತೇ ಅಜಾಆದಿರ್ಯೇಷಾಂ ತೇ ಆತ್ಮನಸ್ತೇ ಸ್ವರೂಪಂ ನ ವಿದುಃ। ಅನಾತ್ಮತಯಾ ಜಡತ್ವೇನ ಕಾರಣೇನ । ಜಡತ್ವೇ ಹೇತುಃ ಗೃಹೀತಾಃ ಪ್ರತ್ಯಕ್ಷಾದಿಭಿರ್ದೃಷ್ಟಾಃ । ನ ಹ್ಯಜಡೋ ದೃಗ್ಗೋಚರ ಇತಿಭಾವಃ। ನನು ಜಡಾ ಮಾಂ ಮಾ ಜಾನಂತು। ಜೀವಸ್ತು ಜ್ಞಾಸ್ಯತಿ ಇತ್ಯತ ಆಹ ಅಜ ಇತಿ। ಸೋಽಜೋ ಬ್ರಹ್ಮಾಽಪ್ಯಜಾಯಾ ಗುಣೈರನು ಬದ್ಧ ಆವೃತೋ ಗುಣಾತೀತಂ ತೇ ತವ ಸ್ವರೂಪಂ ನ ವೇದ। ಅನ್ಯಃ ಕುತೋ ಜ್ಞಾಸ್ಯತೀತಿ। ಯದ್ವಾ ಪ್ರಕೃತ್ಯಾದಯ ಆತ್ಮನಃ ಸ್ವರೂಪಂ ತವ ಸ್ವರೂಪಂ ಚ ನ ವಿದುಃ ಜಡತ್ವಾದೇವ। ಜೀವಸ್ತು ತಾನಾತ್ಮಾನಂ ಚ ವೇತ್ತಿ ನ ಪುನಸ್ತ್ವತ್ಸ್ವರೂಪಮಿತಿ। -ಶ್ರೀಧರಃ

ಇಲ್ಲಿ ಜಡಪದಾರ್ಥಗಳು ಏನನ್ನೂ ತಿಳಿಯದವುಗಳು, ಪರಮಾತ್ಮನನ್ನು ತಿಳಿಯುವುವೆ ಇಲ್ಲವೆ ಎಂಬ ಚರ್ಚೆ ಅರ್ಥಶೂನ್ಯ. 'ಜಡಪದಾರ್ಥ ಏಕೆ ತಿಳಿಯುವುದಿಲ್ಲ? ಜಡವಾದ್ದರಿಂದ. ಜಡ ಏಕೆ? ಎಂದರೆ 'ಗೃಹೀತಾಃ' ಜ್ಞಾನಗೋಚರವಾಗುವುದರಿಂದ. ಜ್ಞಾನಗೋಚರವಾದ ಮಾತ್ರಕ್ಕೆ ಅವು ಜಡವೇಕೆ ಎಂದರೆ, ಚೇತನವೆಂದೂ ಜ್ಞಾನಗೋಚರವಾಗುವುದಿಲ್ಲ ತಾನೆ?' ಎಂದು ಗಂಭೀರ ವಾಕ್ಯಾರ್ಥಶೈಲಿಯಲ್ಲಿ 'ಪ್ರಕೃತ್ಯಾದಿ ಜಡಪದಾರ್ಥಗಳು ಪರಮಾತ್ಮನನ್ನು ತಿಳಿಯಲಾರ'ವೆಂಬ ಒಂದು ಸಣ್ಣ ಸಂಗತಿಯನ್ನು ನಿರೂಪಿಸುವುದು ನಗು ಬರಿಸುತ್ತದೆ. ಜಡವನ್ನು ಜಡವೆಂದು ಯುಕ್ತಿಯಿಂದ ಸಾಧನೆ ಮಾಡಬೇಕೆ?' 'ಚೇತನವು ಜ್ಞಾನಗೋಚರವಾಗುವುದಿಲ್ಲ' ಎನ್ನುವ ಅಂಶವೂ ಅನುಭವ ವಿರುದ್ಧ. ಚೇತನ ಸ್ವಪ್ರಕಾಶ. ಎಲ್ಲರೂ ತಮ್ಮನ್ನು ತಾವು ಅನುಭವದಿಂದ ಕಾಣುತ್ತಾರೆ. ಪರರನ್ನೂ ಅವರ ಶರೀರ ಚಟುವಟಿಕೆಗಳಿಂದ ಊಹಿಸಿ ತಿಳಿಯುತ್ತಾರೆ. ಮಾತಿನಿಂದ ತಿಳಿಯುತ್ತಾರೆ. ಆದರೂ ಚೇತನ ಜ್ಞಾನಗೋಚರನಲ್ಲ ಎನ್ನುತ್ತಾರೆ! ಈ ಜ್ಞಾನಾಗೋಚರತ್ವ 'ಯದ್ ದೃಶ್ಯಂ ತನ್ಮಿಥ್ಯಾ' ಎನ್ನುವ ಅದ್ವೈತಸಿದ್ಧಿಗ್ರಂಥವನ್ನು ನೋಡದೆ ಏನೂ ಅರ್ಥವಾಗದು. ನೋಡಿದರೂ ಅರ್ಥವಾಗದು. ಹೀಗಿದ್ದರೂ ಚೇತನ ಜಡವನ್ನೂ ತನ್ನನ್ನೂ ತಿಳಿಯಬಲ್ಲನೆಂದೂ ಇವರೇ ಇಲ್ಲಿ ಹೇಳುತ್ತಾರೆ.

ಈ ಅನುಪಪತ್ತಿಗಳನ್ನು ಆಲೋಚಿಸಿ [೧] ವೀರರಾಘವ ವ್ಯಾಖ್ಯಾನ 'ಅನ್ಯಾತ್ಮತಯಾ' ಎಂದು ಪಾಠವಿಟ್ಟುಕೊಂಡಿದೆ. 'ಅನಾತ್ಮತಯಾ' ಎಂದರೂ ಸರಿಯೆ,

---

೧ ಏತೇ ತ್ವಚ್ಛರೀರ ಭೂತಾ ಅಜಾದಯೋ ಜೀವಾದಯಃ ಅಂತರಾತ್ಮನಸ್ತವ ಸ್ವರೂಪಂ ನ ವಿದುః। ಅಜಾದಯ ಇತ್ಯತ್ರ ಆದಿಶಬ್ದಃ ಪ್ರಕೃತಿ ತತ್ಕಾರ್ಯ ಸಂಗ್ರಾಹಕః। ಸ ಚ ದೃಷ್ಟಾಂತಾರ್ಥః। ಜಡಾಃ ಪ್ರಕೃತ್ಯಾದಯೋ ಯಥಾ ನ ತವ ಸ್ವರೂಪಂ ವಿದುಃ ಏವಂ ಜೀವಾ ಅಪಿ ನ ವಿದುರಿತ್ಯರ್ಥಃ। ನನು ಜಡತ್ವಾತ್ ಪ್ರಕೃತ್ಯಾದಯೋ ನ ವಿದುರಿತಿ ಯುಕ್ತಂ। ಅಜಡಾ ಜೀವಾಸ್ತು ಕುತೋ ನ ವಿದುರಿತ್ಯತ್ರಾಹ ಅನ್ಯಾತ್ಮತಯಾ ಗೃಹೀತಾ ಇತಿ। ಅನ್ಯಸ್ಮಿನ್ ಸ್ವಸ್ಮಾದ್ ಭಿನ್ನೇ ದೇಹೇ ಆತ್ಮತಯಾ ಆತ್ಮಾಭಿಮಾನೇನ, ತಥಾ ಸ್ವತಂತ್ರಾತ್ ತ್ವತ್ತೋಽನ್ಯಸ್ಮಿನ್ ಸ್ವಾತ್ಮನ್ಯಾತ್ಮತಯಾ ಸ್ವಾತಂತ್ರ್ಯಾಭಿಮಾನೇನ ಚ ಗೃಹೀತಾ ಗ್ರಸ್ತಾಃ । ಸ್ವಾತ್ಮಾನಮೇವ ದೇಹವಿಲಕ್ಷಣಮೀಶ್ವರಪರತಂತ್ರಂ ಚ ನ ಜಾನಂತಿ, ಕಥಂ ನು ತ್ವಾ ವಿದುರಿತ್ಯರ್ಥಃ । ಇತ್ಥಮೇವ ಬ್ರಹ್ಮಾಪಿ ನ ವೇದ, ಕಿಮುತ ತತ್ಸೃಜ್ಯಾಸ್ತದರ್ವಾಚೀನಾ ಇತಿ ಕೈಮುತ್ಯನ್ಯಾಯೇನಾಹ ಅಜ ಇತಿ। ಅಜೋ ಬ್ರಹ್ಮಾಪಿ ಸ್ವಗುಣೈಃ ಸ್ವಶರೀರಾರಂಭಕ ಸತ್ವರಜಸ್ತಮೋಗುಣೈರನುಬದ್ಧಸ್ತತ್ಪರವಶ ಇತಿ ಯಾವತ್ । ಅನಾತ್ಮತಯೇತಿ ಪಾಠೇ ಜಡತ್ವೇನ ದೃಷ್ಟಾ ಅಜಾದಯಃ ಪ್ರಕೃತ್ಯಾದಯೋ ಯಥಾ ನ ವಿದುರೇವಮಜೋಽಪಿ ಬ್ರಹ್ಮಾಽಪಿ ನ ವೇದ ಕಿಮುತಾನ್ಯ ಇತಿ।

-ವೀರರಾಘವಃ

'ಅನಾತ್ಮತ್ವವನ್ನು, ಜಡತ್ವವನ್ನು 'ಗೃಹೀತಾಃ' ಎಂದು ಜ್ಞಾನಗೋಚರತ್ವದಿಂದ ಸಾಧನೆ ಮಾಡಬೇಕಾಗಿಲ್ಲ, 'ಅನಾತ್ಮತಯಾ ಗೃಹೀತಾಃ' ಜಡವೆಂದು ಅನುಭವ ಸಿದ್ಧವಾಗಿದೆ' ಎನ್ನುತ್ತಾರೆ. 'ಜಡವು ಪರಮಾತ್ಮನ ಸ್ವರೂಪವನ್ನು ತಿಳಿಯುವುದಿಲ್ಲ' ಎಂದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆದರೂ ಅದನ್ನು ಇಲ್ಲಿ ಹೇಳುವುದು ದೃಷ್ಟಾಂತಕ್ಕಾಗಿ. ಜಡ ಹೇಗೆ ತಿಳಿಯುವುದಿಲ್ಲವೋ ಹಾಗೇ ಜೀವನೂ ತಿಳಿಯುವುದಿಲ್ಲ ಎಂದೂ ಹೇಳುತ್ತಾರೆ. ಆದರೆ ಜೀವ ಪರಮಾತ್ಮನನ್ನು ತಿಳಿಯುವುದಿಲ್ಲ ಎನ್ನಲು ದೃಷ್ಟಾಂತ ಏಕೆ ಬೇಕು? ಜಡ ಜೀವ ಸ್ವಭಾವಗಳು ವಿಲಕ್ಷಣವಾಗಿರುವಾಗ, ಜಡ ದೃಷ್ಟಾಂತವಾಗುವುದಾದರೂ ಹೇಗೆ?

ಇವರು 'ಚತುರ್ಮುಖ ಬ್ರಹ್ಮನಿಗೂ ಪರಮಾತ್ಮ ಸ್ವರೂಪ ತಿಳಿದಿಲ್ಲ' ಎನ್ನುತ್ತಾರೆ. ಬ್ರಹ್ಮನೂ 'ತನ್ನ ಗುಣ' ದಿಂದ ಬದ್ಧನಂತೆ! 'ಅಜೋನುಬದ್ಧಃ ಸ್ವಗುಣೈಃ' ಎಂದು ಪಾಠವಿಟ್ಟುಕೊಂಡಿದ್ದಾರೆ. ಸತ್ವಾದಿಗಳು ಪ್ರಕೃತಿಯ ಗುಣಗಳು. ಅವು ಬ್ರಹ್ಮನಿಗೆ ಸ್ವಗುಣ ಹೇಗೆ? ತನಗೆ ಬಂಧಕವಾದ್ದರಿಂದ ಎನ್ನುತ್ತಾರೆ! ಜಗದ್ಗುರುವಾಗಿರುವ ಚತುರ್ಮುಖನನ್ನೂ ಪರಮಾತ್ಮನನ್ನು ಕಂಡರಿಯದವನೆನ್ನುತ್ತಾರೆ! ಇದು ಪ್ರಮಾಣ ವಿರುದ್ಧ. ದೇವತೆಗಳೆಲ್ಲರೂ ಪರಮಾತ್ಮನನ್ನು ಕಂಡವರೇ. ಅವನ ಸ್ವರೂಪವನ್ನು ಬಲ್ಲವರೆ.

ನೈವ ದೇವಪದಂ ಪ್ರಾಪ್ತಾ ಬ್ರಹ್ಮದರ್ಶನ ವರ್ಜಿತಾಃ ।

ಬ್ರಹ್ಮಾಪರೋಕ್ಷವಿಲ್ಲದವರು ದೇವತೆ ಎನಿಸುವುದಿಲ್ಲ. ದೇವೋತ್ತಮನಾದ ಚತುರ್ಮುಖನಿಗೇ ಪರಮಾತ್ಮ ಸ್ವರೂಪ ತಿಳಿದಿಲ್ಲ ಎನ್ನುವುದು ಸಾಹಸದ ಮಾತಾಗುತ್ತದೆ.

ಗುಣಬದ್ಧರೂ ಪರಮಾತ್ಮನನ್ನು ಶ್ರವಣಾದಿಗಳಿಂದ ತಿಳಿಯುತ್ತಾರೆ. ಇಲ್ಲದಿದ್ದರೆ ಮೋಕ್ಷ ಹೇಗೆ?

ನಮ್ಮ ವ್ಯಾಖ್ಯಾನದಲ್ಲಿ 'ರಮಾ ಬ್ರಹ್ಮಾದಿಗಳು ಯಾರೂ ಭಗವಂತನನ್ನು ಪೂರ್ತಿಯಾಗಿ, ಸ್ವತಂತ್ರವಾಗಿ ತಿಳಿಯುವುದಿಲ್ಲ. ಸ್ವಯೋಗ್ಯತಾನುಸಾರ ಅಲ್ಪವೆ ತಿಳಿಯುತ್ತಾರೆ, ಅದೂ ಅವನ ದಯೆಯಿಂದ' ಎನ್ನುತ್ತೇವೆ.

'ಅನ್ಯಾತ್ಮತಯಾ ಗೃಹೀತಾಃ' ಮತ್ತೋಽನ್ಯೇ ಜೀವಾತ್ಮಾನ ಏತೇ ಇತಿ ಭಗವತಾ ಗೃಹೀತಾಃ॥

ಅಹಂ ಪರೋ ಹಿ ಮದ್ಭಿನ್ನಾ ಜೀವಾತ್ಮಾನೋಽಲ್ಪಬುದ್ಧಯಃ ।

ಮದ್ವಶಾಃ ಸರ್ವ ಏವೇತಿ ಬ್ರಹ್ಮಾದೀನ್ ಮನ್ಯತೇ ಹರಿಃ ॥

ಇತಿ ಸ್ಕಾಂದೇ ।

ಯಥಾ ಹರಿಃ ಸ್ವಮಾತ್ಮಾನಂ ವೇದ ತದ್ವದ್ ರಮಾಽಪಿ ನ ।

ಬ್ರಹ್ಮಾ ಚ ಕುತ ಏವಾನ್ಯೇ ವಿದಂತ್ಯೇವ ತಥಾಪಿ ತು ।

ಇತಿ ಮಾಹಾತ್ಮ್ಯೇ ॥

'ಅನ್ಯಾತ್ಮತಯಾ ಗೃಹೀತಾಃ' ಎಂದರೆ 'ಈ ಬ್ರಹ್ಮಾದಿ ಜೀವಾತ್ಮರು ನನಗಿಂತ ಬೇರೆ ಎಂದು ಭಗವಂತನ ಪ್ರತ್ಯಕ್ಷಕ್ಕೆ ಗೋಚರವಾಗಿದ್ದಾರೆ ಎಂದರ್ಥ.

'ನಾನು ಸರ್ವೋತ್ತಮ. ಜೀವಾತ್ಮರು ಎಲ್ಲರೂ ಅಲ್ಪಜ್ಞರು, ನನ್ನ ಅಧೀನರು. ಆದರಿಂದ ನನಗಿಂತ ಭಿನ್ನರು ಎಂದು ಶ್ರೀಹರಿ ಬ್ರಹ್ಮಾದಿಗಳ ವಿಷಯದಲ್ಲಿ ಪ್ರತ್ಯಕ್ಷದಿಂದ ಕಾಣುತ್ತಾನೆ' ಎಂದು ಸ್ಕಂದಪುರಾಣದಲ್ಲಿ ಹೇಳಿದೆ.

'ಶ್ರೀಹರಿ ತನ್ನನ್ನು ಹೇಗೆ ಪೂರ್ತಿಯಾಗಿ ಸ್ವತಂತ್ರವಾಗಿ ತಿಳಿಯುವನೋ ಹಾಗೆ ರಮೆಯೂ ತಿಳಿಯಲಾರಳು, ಬ್ರಹ್ಮನೂ ತಿಳಿಯಲಾರ, ಇನ್ನು ಅನ್ಯರ ಪಾಡೇನು? ಆದರೂ ಅವನ ದಯೆಯಿಂದ ತಮ್ಮ ಯೋಗ್ಯತೆ ಇದ್ದಷ್ಟು ಎಲ್ಲರೂ ಅವನನ್ನು ತಿಳಿಯುತ್ತಾರೆ, ಉಪಾಸನೆ ಮಾಡುತ್ತಾರೆ' ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅಕ್ರೂರ ಯಮುನೆಯಲ್ಲಿ ಸ್ನಾನ ಮಾಡುವಾಗ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ.

ತ್ವಾಂ ಯೋಗಿನೋ ಯಜಂತ್ಯದ್ಧಾ ಮಹಾಪುರುಷಮೀಶ್ವರಮ್ ।
ಸಾಧ್ಯಾತ್ಮಂ ಸಾಧಿಭೂತಂ ಚ ಸಾಧಿದೈವಂ ಚ ಸಾಧವಃ ॥ ೫ ॥

ಜೀವಾತ್ಮರಲ್ಲಿ ಆಕಾಶಾದಿಭೂತಗಳಲ್ಲಿ ಮತ್ತು ಬ್ರಹ್ಮಾದಿ ದೇವತೆಗಳಲ್ಲಿ ಅವರಿಂದ ಉತ್ತಮನಾಗಿ ನೆಲೆಸಿರುವ ನಿನ್ನ ರೂಪಗಳೊಂದಿಗೆ ಮಹಾಪುರುಷ ಜಗದೀಶ್ವರನಾದ ನಿನ್ನನ್ನು ಜ್ಞಾನಯೋಗಿಗಳಾದ ಸಜ್ಜನರು ಚೆನ್ನಾಗಿ ಉಪಾಸನ ಮಾಡುತ್ತಾರೆ.

'ಅಧ್ಯಾತ್ಮ' ಎಂದರೆ, ಅಧಿಕವಾದ ಅಂದರೆ ಶ್ರೇಷ್ಠವಾದ ಜೀವಾತ್ಮನಿಷ್ಠ ಭಗವದ್ರೂಪ. 'ಅಧಿಭೂತ' ಎಂದರೆ ಅಧಿಕವಾದ ಪಂಚಭೂತನಿಯಾಮಕ

ರೂಪ. 'ಅಧಿದೈವ' ಎಂದರೆ ಅಧಿಕವಾದ ಬ್ರಹ್ಮಾದಿದೇವಗತ ಭಗವದ್ರೂಪ. ಇವುಗಳೊಂದಿಗೆ ನಿನ್ನನ್ನು ಯೋಗಿಗಳು ಆರಾಧಿಸುತ್ತಾರೆ. ಈ ವಿವರಣೆ ಪ್ರಮಾಣ ಸಮ್ಮತ. ಬೇರೆ ವ್ಯಾಖ್ಯಾನಕಾರರು ನೀಡುವ ವಿವರಣೆ ಪ್ರಮಾಣ ಸಮ್ಮತವಲ್ಲ.

ಸ್ಥಿತೋ ಬ್ರಹ್ಮಾದಿದೇವೇಷು ಖಾದಿಭೂತೇಷು ಚೇಶ್ವರಃ।
ಆತ್ಮಶಬ್ದೋದಿತನರೇಷ್ವಪಿ ಯಸ್ಮಾಜ್ಜನಾರ್ದನಃ।
ಸಾಧ್ಯಾತ್ಮಃ ಸಾಧಿಭೂತಶ್ಚ ಸಾಧಿದೈವೇತಿ ಚೋಚ್ಯತೇ।

ಇತ್ಯಧ್ಯಾತ್ಮೇ॥

'ಬ್ರಹ್ಮಾದಿ ದೇವತೆಗಳಲ್ಲಿಯೂ ಆಕಾಶಾದಿ ಭೂತಗಳಲ್ಲಿಯೂ ಆತ್ಮಶಬ್ದದಿಂದ ಉಕ್ತವಾಗುವ ಜೀವಾತ್ಮರಲ್ಲಿಯೂ ನಿಯಾಮಕನಾಗಿ ಉತ್ತಮನಾಗಿ ಇರುವುದರಿಂದ ಜನಾರ್ದನನು ಸಾಧ್ಯಾತ್ಮ ಸಾಧಿಭೂತ ಸಾಧಿದೈವ ಶಬ್ದಗಳಿಂದ ಕರೆಯಲ್ಪಡುತ್ತಾನೆ' ಎಂದು ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅಕ್ರೂರ ಯಮುನೆಯಲ್ಲಿ ಸ್ನಾನ ಮಾಡುವಾಗ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ-

ತ್ರಯ್ಯಾ ಚ ವಿದ್ಯಯಾ ಕೇಚಿತ್ ತ್ವಾಂ ವೈ ವೈತಾನಿಕಾ ದ್ವಿಜಾಃ।
ಯಜಂತೇ ವಿತತೈರ್ಯಜ್ಞೈರ್ನಾನಾರೂಪಾಮರಾಖ್ಯಯಾ ॥ ೬ ॥

ಕರ್ಮಯೋಗಿಗಳಾದ ಯಾಜ್ಞಿಕರಾದ ಕೆಲವು ದ್ವಿಜರು ಮೂರು ವೇದಗಳಿಂದ ವಿಸ್ತಾರವಾದ ಯಜ್ಞಗಳಿಂದ ನಾನಾರೂಪರಾದ ದೇವತೆಗಳ ನಾಮಗಳಿಂದ ನಿನ್ನನ್ನೇ ಆರಾಧಿಸುತ್ತಾರೆ.

ಇಲ್ಲಿ [೧]ಶ್ರೀಧರವ್ಯಾಖ್ಯಾನ ಹೇಳುತ್ತದೆ- 'ಯಾಜ್ಞಿಕರು ವಿಷ್ಣುಯಜ್ಞವನ್ನೇ ಮಾಡುತ್ತಾರೆ' ಎನ್ನುವುದರ ಅಭಿಪ್ರಾಯ, ವೇದದಲ್ಲಿ ಇಂದ್ರಯಜ್ಞ ವರುಣ ಯಜ್ಞಾದಿಗಳನ್ನು ಹೇಳಿರಬಹುದು. ಆದರೆ 'ಇಂದ್ರ' ಎಂದರೆ ಪರಮೈಶ್ವರ್ಯಶಾಲಿ, ದೇವೇಂದ್ರನಲ್ಲಿ ಪರಮೈಶ್ವರ್ಯವಿದೆಯೆ? ಇದೆ ಎಂದು

---

೧ ವೈತಾನಿಕಾಃ ಕರ್ಮಯೋಗಿನಸ್ತ್ವಾಂ ವೈ ತ್ವಾಮೇವ ಯಜಂತೇ। ನನು ತೇ ಇಂದ್ರ ವರುಣ ವಾಯ್ವಾದೀನ್ ಯಜಂತೇ, ನತು ಮಾಮಿತ್ಯತ ಆಹ ನಾನೇತಿ। ಅಯಂ ಭಾವಃ ಇಂದ್ರ ವಾರುಣಾದಿ ಸೂಕ್ತೈರಿಂದ್ರಾದಯಃ ಸರ್ವೈಶ್ವರ್ಯೇಣ ಪ್ರಕಾಶ್ಯಂತೇ। ನ ಚ ಸರ್ವೇಶ್ವರಾ ಬಹವಃ ಸಂಭವಂತಿಃ। ಅತೋ ನಾಮ ಭೇದೇನ ತ್ವಾಮೇವ ಯಜಂತ ಇತಿ। -ಶ್ರೀಧರಃ

ಒಪ್ಪುವುದಾದರೆ, 'ವರುಣ' ಎಂದರೆ ಸರ್ವಸೇವ್ಯ. ಸಮುದ್ರರಾಜನಲ್ಲಿ ಸರ್ವಸೇವ್ಯತ್ವವಿದೆಯೆ? 'ಪರಮೈಶ್ವರ್ಯ' ಮತ್ತು ಸರ್ವರನ್ನು ಆಳುವ ಶಕ್ತಿ ಸರ್ವರಿಂದಲೂ ಸೇವ್ಯನೆನಿಸುವ ಶಕ್ತಿ. ಎರಡೂ ಸರ್ವೇಶ್ವರನಿಗೆ ಮಾತ್ರ ಇರಬಲ್ಲುದು. ಇಂದ್ರ ವರುಣ ಮುಂತಾದವರೆಲ್ಲರೂ ಸರ್ವೇಶ್ವರರೆನಿಸುವುದು ಅಸಂಭವ. ಒಬ್ಬನೇ ಸರ್ವೇಶ್ವರ, ಅವನು ವಿಷ್ಣು. ಅವನನ್ನೇ ಇಂದ್ರ ವರುಣ ಮುಂತಾದ ನಾಮಗಳಿಂದ ಕರೆದು, 'ಇಂದ್ರಯಜ್ಞ' 'ವರುಣಯಜ್ಞ' ಮುಂತಾದ ಹೆಸರಿನಿಂದ ವಿಷ್ಣುಯಜ್ಞವನ್ನೇ ಮಾಡುತ್ತಿದ್ದಾರೆ.' ಎಂದು.

ಆದರೆ ಎಲ್ಲ ಶಬ್ದಗಳೂ ಸರ್ವೇಶ್ವರನನ್ನೇ ಹೇಳುವುದಾದರೆ ಲೋಕವ್ಯವಹಾರ ನಡೆಯುವುದು ಹೇಗೆ? ಇಂದ್ರಶಬ್ದ ಸರ್ವೇಶ್ವರನನ್ನೇ ಹೇಳುವುದಾದರೆ 'ಅಹಲ್ಯಾಯ್ಯೆ ಜಾರ' ಎಂದು ಅಹಲ್ಯೆಯನ್ನು ಕೆಡಿಸಿದವನು ಸರ್ವೇಶ್ವರನೆ? ಅದರಿಂದ 'ಪರಮ' ಐಶ್ವರ್ಯ ಎನ್ನುವುದು, ಬೇರೆ ದೇವತೆಗಳಿಗೆ ಹೋಲಿಸಿದಾಗ, ದೇವರಾಜನಾದ ಇಂದ್ರನ ಐಶ್ವರ್ಯ, ಅಂದರೆ ಆಳುವ ಶಕ್ತಿ ಪರಮವೆನಿಸುತ್ತದೆ ಎಂಬ ಅಭಿಪ್ರಾಯದಿಂದ. ಇಂಥ ಐಶ್ವರ್ಯ ಇಂದ್ರನಲ್ಲಿರುವುದರಿಂದ ಇಂದ್ರಯಾಗ ಇಂದ್ರನದೇ ಯಾಗವಾಗಬಹುದು. ಇದೇರೀತಿ ವರುಣಯಾಗ ಮುಂತಾದುವೂ 'ವಿಷ್ಣುಯಾಗ'ವಾಗಿರಬೇಕಾಗಿಲ್ಲ.

[೧] ವಲ್ಲಭವ್ಯಾಖ್ಯಾನ ಪ್ರಕಾರ ಇಂದ್ರಾದಿ ದೇವತೆಗಳೆಲ್ಲರೂ 'ಅಂಗಾನ್ಯನ್ಯಾ ದೇವತಾಃ' ಎಂಬಂತೆ ಪರಮಾತ್ಮನ ಅಂಗಗಳಾದ್ದರಿಂದ ಅಂಗಗಳಿಗೆ ಮಾಡುವ ಆರಾಧನೆ ಪರಮಾತ್ಮನ ಆರಾಧನೆಯೇ ಹೊರತು ಅಂಗಾರಾಧನೆಯಲ್ಲ, ರಾಜನ ತಲೆಗೆ ಕಿರೀಟ ತೊಡಿಸಿದರೆ ರಾಜನಿಗೇ ಕಿರೀಟ ತೊಡಿಸಿದಂತೆ ತಾನೆ? ಎನ್ನುತ್ತಾರೆ. ಆದರೆ ಭಾಗವತ ಹೀಗೆ ಹೇಳುತ್ತಿಲ್ಲ. 'ನಾನಾರೂಪಾಮರಾಖ್ಯಯಾ' ಎಂದರೆ, ದೇವತೆಗಳ ಹೆಸರಿನಿಂದ ಪರಮಾತ್ಮನನ್ನು ಆರಾಧಿಸುತ್ತಾರೆ ಎನ್ನುತ್ತಿದೆ. 'ತಲೆ' ಎಂಬ ಹೆಸರಿನಿಂದ ರಾಜನನ್ನು ಕರೆಯುವುದಿಲ್ಲ, ರಾಜನ ತಲೆಗೂದಲನ್ನು ಕತ್ತರಿಸಿದರೆ ರಾಜನನ್ನು ಕತ್ತರಿಸಿದಂತಾಗುವುದಿಲ್ಲ. ರಾಜನ ಕಾಲೊತ್ತಿದರೆ ರಾಜನನ್ನೊತ್ತಿದಂತಾಗುವುದಿಲ್ಲ, ವಸ್ತುತಃ ರಾಜನಿಗೆ ಅವನ ತಲೆಯಂತೆ ಪರಮಾತ್ಮನಿಗೆ ದೇವತೆಗಳು ಅಂಗಗಳಲ್ಲ. ಅಂಗಗಳಂತೆ.

---

೧ ನಾನಾವಿಧಾನಿ ರೂಪಾಣಿ ಯೇಷಾಮಮರಾಣಾಮಿಂದ್ರಾದೀನಾಂ ತೇಷಾಮಾಖ್ಯಯಾ ಭಗವಾನೇವೇಜ್ಯತೇ । ಯಥಾ ರಾಜ್ಞಃ ಶಿರಸ್ಯೇವ ಪರಿಚರ್ಯಾಂ ಕರೋತಿ, ಏವಂ ಕರ್ಣಾದಿಷ್ವಪಿ । ತಥಾಪಿ ರಾಜಸೇವಕ ಏವೋಚ್ಯತೇ । ನ ತ್ವಂಗ ಸೇವಕ ಇತಿ । ತಥಾ ಪ್ರಕೃತೇಽಪಿ ಇಂದ್ರಾದೀನಾಮಂಗತ್ವಶ್ರುತೇರ್ಭಗವಾನೇವೇಜ್ಯತೇ । -ವಲ್ಲಭಃ

ದೇವತೆಗಳ ಹೆಸರಿನಿಂದ ದೇವತೆಗಳಿಗೆ ಮಾತ್ರವಲ್ಲದೆ ಅವರೊಳಗಿರುವ ಪರಮಾತ್ಮನಿಗೂ ಆರಾಧನೆ ಮಾಡುತ್ತಾರೆ, ಪರಮಾತ್ಮನಿಗೆ ಮುಖ್ಯವಾಗಿ, ದೇವತೆಗಳಿಗೆ ಅಮುಖ್ಯವಾಗಿ ಆ ಆರಾಧನೆ ಸಲ್ಲುತ್ತದೆ ಎನ್ನಬೇಕು.

ಸರ್ವದೇವೇಷ್ವಪಿ ಹರಿಃ ಸರ್ವದೇವ ನಿಯಾಮಕಃ ।
ನಾಮವಾನ್ ಸರ್ವದೇವಾನಾಂ ಸರ್ವಪೂಜಾಂ ತಥಾಽತ್ತ್ಯಸೌ ॥
ಇತಿ ಚ ।

'ಸರ್ವದೇವತೆಗಳಲ್ಲಿದ್ದು ಸರ್ವದೇವನಿಯಾಮಕನಾಗಿರುವ ಹರಿಯೆ ಸರ್ವದೇವನಾಮಧಾರಿಯಾಗಿದ್ದಾನೆ. ಸರ್ವದೇವರಿಗೆ ಮಾಡಿದ ಆರಾಧನೆಯನ್ನೂ ಅವನೇ ಮುಖ್ಯವಾಗಿ ಸ್ವೀಕರಿಸುತ್ತಾನೆ' ಎಂದೂ ಅಧ್ಯಾತ್ಮಗ್ರಂಥದಲ್ಲಿ ಉಕ್ತವಾಗಿದೆ.

❖ ❖ ❖

ಅಕ್ರೂರ ಯಮುನೆಯಲ್ಲಿ ಸ್ನಾನ ಮಾಡುವಾಗ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ-

ತುಭ್ಯಂ ನಮಸ್ತೇಽಸ್ತ್ವವಿಷಕ್ತದೃಷ್ಟಯೇ
ಸರ್ವಾತ್ಮನೇ ಸರ್ವಧಿಯಾಂ ಚ ಸಾಕ್ಷಿಣೇ ।
ಗುಣಪ್ರವಾಹೋಽಯಮವಿದ್ಯಯಾಽಸಕೃತ್
ಪ್ರವರ್ತತೇ ದೇವನೃತಿರ್ಯಗಾತ್ಮಸು ॥ ೧೩ ॥

ಈ ಪ್ರಕೃತಿ ಗುಣಕಾರ್ಯ ಜ್ಞಾನಾದಿ ಪ್ರವಾಹರೂಪವಾದ ಸಂಸಾರಬಂಧ ಉತ್ತಮ ಮಧ್ಯಮ ಅಧಮ ಜೀವರಲ್ಲಿ ಮತ್ತೆ ಮತ್ತೆ ನಿನ್ನಿಚ್ಛೆಯಿಂದಲೇ ಆಗುತ್ತದೆ. ಆದರಿಂದ ಅದು ನಿನ್ನಲ್ಲಿ ಆಗಲು ಶಕ್ಯವಿಲ್ಲ. ನೀನು ಅಪ್ರತಿಹತ ಜ್ಞಾನ ಉಳ್ಳವನು. ಏಕೆಂದರೆ ಸರ್ವೇಶ್ವರ. ಎಲ್ಲರ ಜ್ಞಾನಗಳಿಗೆ ನೀನೇ ಸಾಕ್ಷಿ. ಇಂಥ ನಿನಗೇ ನಮ್ಮ ನಮಸ್ಕಾರವಿರಲಿ.

ಇಲ್ಲಿ [೧]ವೀರರಾಘವ ವ್ಯಾಖ್ಯಾನದಲ್ಲಿ 'ಯದವಿದ್ಯಯಾ' ಎಂದು ಪಾಠ. 'ಅವಿದ್ಯೆ ಎಂದರೆ ಮಾಯಾವಾದಿಗಳ ಅನಿರ್ವಚನೀಯ ಅವಿದ್ಯೆಯಲ್ಲ.

೧ ಯದವಿದ್ಯಯಾ ಯದೀಯಯಾ ಪ್ರಕೃತ್ಯಾ ಹೇತುಭೂತಯಾ ಕ್ಷೇತ್ರಜ್ಞೇಷ್ವಯಂ ಪರಿದೃಶ್ಯಮಾನೋ ಗುಣಪ್ರವಾಹಃ। -ವೀರರಾಘವಃ

ಅದರಿಂದಾಗುವ ಗುಣಪ್ರವಾಹರೂಪವಾದ ಸಂಸಾರ ಮಿಥ್ಯೆಯಲ್ಲ. ಅವಿದ್ಯೆ ಎಂದರೆ ಪ್ರಕೃತಿ. ತ್ರಿಗುಣಾತ್ಮಕವಾದ ಪ್ರಕೃತಿಯೆ ಮಾಯೆ, ಅವಿದ್ಯೆ ಎಂದು ಕರೆಸಿಕೊಳ್ಳುತ್ತದೆ. ಅದರಿಂದಾಗುವ ಸಂಸಾರ ಬಂಧ ಸತ್ಯ.' ಎಂದಿದೆ. ಆದರೆ 'ಅವಿದ್ಯಯಾ ಗುಣಪ್ರವಾಹಃ' ಎಂದು ಶ್ಲೋಕದಲ್ಲಿ ತೃತೀಯಾವಿಭಕ್ತಿ ಕೂಡುವುದಿಲ್ಲ. ಪ್ರಕೃತಿ ತ್ರಿಗುಣಾತ್ಮಕವೆಂದ ಮೇಲೆ 'ಪ್ರಕೃತಿಯ ಗುಣ'ಗಳೆಂದು ತಿಳಿಸಲು ಷಷ್ಠೀವಿಭಕ್ತಿ ಯುಕ್ತ.

'ಹೇತು ಎಂಬ ಅರ್ಥದಲ್ಲಿ ತೃತೀಯಾ, 'ಪ್ರಕೃತ್ಯಾ ಹೇತುಭೂತಯಾ' ಎನ್ನುತ್ತಾರೆ ಇವರು. ಅವಿದ್ಯಾಶಬ್ದಕ್ಕೆ ಪ್ರಕೃತಿ ಎಂಬ ಅರ್ಥ ಇದೆ. ಆದರೆ ಇಲ್ಲಿ ತೃತೀಯಾ ವಿಭಕ್ತ್ಯಂತವಾದ ಅವಿದ್ಯಾಶಬ್ದಕ್ಕೆ ಭಗವದಿಚ್ಛಾ ಎಂಬ ಅರ್ಥವೇ ಸ್ವರಸವಾಗಿ ಕೂಡುತ್ತದೆ. ಪ್ರಕೃತಿಯ ಗುಣಪ್ರವಾಹಕ್ಕೆ ಭಗವದಿಚ್ಛೆಯೇ ಮುಖ್ಯ ಹೇತು. ಹಾಗೆ ಹೇಳಿದರೇ ಇದು ಸ್ತುತಿ ಯಾದೀತು. 'ಅವಿದ್ಯಾ' ಶಬ್ದಕ್ಕೆ ಭಗವದಿಚ್ಛೆ ಎಂಬ ಅರ್ಥ ಸ್ಕಂದ ಪುರಾಣದಲ್ಲಿ ಉಕ್ತವಾಗಿದೆ-

ಮಹಾಮಾಯೇತ್ಯವಿದ್ಯೇತಿ ನಿಯತಿ ರ್ಮೋಹಿನೀತಿ ಚ ।
ಪ್ರಕೃತಿರ್ವಾಸನೇತ್ಯೇವಂ ತವೇಚ್ಛಾನಂತ ಕಥ್ಯತೇ ॥

'ಮಹಾಮಾಯೆ, ಅವಿದ್ಯೆ, ನಿಯತಿ, ಮೋಹಿನಿ, ಪ್ರಕೃತಿ, ವಾಸನಾ ಎಂದು ಈ ಎಲ್ಲ ಶಬ್ದಗಳಿಂದ, ಹೇ ಅನಂತ, ನಿನ್ನ ಇಚ್ಛೆಯೇ ಕರೆಸಿಕೊಳ್ಳುತ್ತದೆ' ಎಂದು ಶ್ರೀಮದಾಚಾರ್ಯರು ಹಿಂದೆಯೇ (ಭಾಗ.ತಾ.೪.೧೧.೧೫) ಅದನ್ನು ತಿಳಿಸಿದ್ದಾರೆ. ಈ ಅರ್ಥವನ್ನಿಟ್ಟುಕೊಂಡರೆ ಹೇತ್ವರ್ಥಕ ತೃತೀಯಾ ವಿಭಕ್ತಿ ಕೂಡುತ್ತದೆ. ಅದರಿಂದ ಪ್ರಕೃತಿ ಎಂದಾಗಲಿ ಅನಿರ್ವಚನೀಯ ಅವಿದ್ಯೆ ಎಂದಾಗಲಿ ಅರ್ಥವಲ್ಲ.

ಅವಿದ್ಯಯಾ ಭಗವದಿಚ್ಛಯಾ ।

'ಅವಿದ್ಯಯಾ' ಎಂದರೆ ಭಗವದಿಚ್ಛೆಯಿಂದ ಎಂದರ್ಥ ಇಲ್ಲಿ ವಿವಕ್ಷಿತವಾಗಿದೆ.

❖ ❖ ❖

ಅಕ್ರೂರ ಯಮುನಾಸ್ನಾನ ಕಾಲದಲ್ಲಿ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ-

ಅಗ್ನಿರ್ಮುಖಂ ತೇಽವನಿರಂಘ್ರಿರೀಕ್ಷಣಂ
ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ ।

ದ್ಯೌಃ ಕಂ ಸುರೇಂದ್ರಾಸ್ತವ ಬಾಹವೋಽರ್ಣವಃ
ಕುಕ್ಷಿರ್ಮರುತ್ಪ್ರಾಣಬಲಂ ಪ್ರಕಲ್ಪಿತಮ್ ॥ ೧೪ ॥

ಅಗ್ನಿ ನಿನ್ನ ಮುಖದಿಂದ ಜನಿಸಿದವನು. ಪೃಥಿವಿ ಪಾದದಿಂದ. ಸೂರ್ಯ ಕಣ್ಣಿನಿಂದ, ಆಕಾಶ ನಾಭಿಯಿಂದ, ದಿಕ್ಕುಗಳು ಕಿವಿಗಳಿಂದ, ದ್ಯುಲೋಕ ಶಿರಸ್ಸಿನಿಂದ, ದೇವೋತ್ತಮರು ಬಾಹುಗಳಿಂದ, ಸಮುದ್ರ ಉದರದಿಂದ, ವಾಯು ಪ್ರಾಣಬಲಗಳಿಂದ. ಹೀಗೆ ಎಲ್ಲರೂ ನಿನ್ನಿಂದಲೇ ಚೆನ್ನಾಗಿ ಸೃಜಿಸಲ್ಪಟ್ಟಿದ್ದಾರೆ.

ರೋಮಾಣಿ ವೃಕ್ಷೌಷಧಯಃ ಶಿರೋರುಹಾ
ಮೇಘಾಃ ಪರಸ್ಯಾಸ್ಥಿನಖಾನಿ ತೇಽದ್ರಯಃ ।
ನಿಮೇಷಣಂ ರಾತ್ರ್ಯಹನೀ ಪ್ರಜಾಪತಿ
ರ್ಮೇಢ್ರಂ ತು ವೃಷ್ಟಿಸ್ತವ ವೀರ್ಯಮಿಷ್ಯತೇ ॥ ೧೫ ॥

ವೃಕ್ಷ ಓಷಧಿಗಳು ರೋಮಗಳಿಂದ, ಮೋಡಗಳು ತಲೆಗೂದಲುಗಳಿಂದ, ಪರ್ವತಗಳು ಅಸ್ಥಿ ನಖಗಳಿಂದ, ರಾತ್ರಿ ಹಗಲುಗಳು ಕಣ್ಮುಚ್ಚುವುದು ತೆರೆಯುವುದರಿಂದ, ದಕ್ಷಪ್ರಜಾಪತಿ ಜನನೇಂದ್ರಿಯದಿಂದ, ಮಳೆ ವೀರ್ಯದಿಂದ ಹೀಗೆ ಎಲ್ಲವೂ ನಿನ್ನಿಂದಲೇ ಚೆನ್ನಾಗಿ ಸೃಜಿಸಲ್ಪಟ್ಟಿವೆ.

ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾ
ಲೋಕಾಃ ಸಪಾಲಾ ಬಹುಜೀವಸಂಕುಲಾಃ ।
ಯಥಾ ಜಲೇ ಸಂಜಿಹತೇ ಜಲೌಕಸೋಽ
ಪ್ಯುದುಂಬರೇ ವಾ ಮಶಕಾ ಮನೋಮಯೇ ॥ ೧೬ ॥

ನಾಶ ರಹಿತ ಸ್ವರೂಪನೆ, ನೀರಲ್ಲಿ ನೀರಿಂದ ಜಲಜಂತುಗಳು ಹೇಗೋ, ಅತ್ತಿಹಣ್ಣಿನಲ್ಲಿ ಅತ್ತಿಹಣ್ಣಿನಿಂದ ಸೊಳ್ಳೆಗಳು ಹೇಗೋ ಹಾಗೇ ಜ್ಞಾನಸ್ವರೂಪನೂ ಪೂರ್ಣಷಡ್ಗುಣನೂ ಆದ ನಿನ್ನಲ್ಲಿ ನಿನ್ನಿಂದಲೇ ಅನೇಕ ಜೀವರಾಶಿಗಳಿಂದ ಯುಕ್ತವಾದ ಲೋಕಗಳೂ ಲೋಕಪಾಲಕರೂ ಹುಟ್ಟುತ್ತಾರೆ.

ಇಲ್ಲಿ [೧] ಶ್ರೀಧರ ವ್ಯಾಖ್ಯಾನ ಹೇಳುತ್ತದೆ- ಈ ಇಡೀ ಪ್ರಪಂಚ ಪರಮಾತ್ಮನ

೧ ಸರ್ವೋಽಪ್ಯಯಂ ಪ್ರಪಂಚ ಸ್ತ್ವದವಯವ ಭೂತ ಏವೇತಿ ವದನ್ ಏವಂ ಸತ್ಯಪಿ ಪ್ರಪಂಚಸ್ಯ ಷಡ್ ಜನ್ಮಾದಯೋ ವಿಕಾರಾಸ್ತ್ವಯಿ ನ ಪ್ರಸಜ್ಯಂತೇ ತಸ್ಯ ತ್ವಯಿ

ಅವಯುವವೇ ಆಗಿದ್ದರೂ ಪ್ರಪಂಚದಲ್ಲಿ ಆಗುವ ಜನನ ಮರಣಾದಿ ವಿಕಾರಗಳು ಪರಮಾತ್ಮನಲ್ಲಿ ಆಗುವುದಿಲ್ಲ. ಏಕೆಂದರೆ ಪ್ರಪಂಚ ಪರಮಾತ್ಮನಲ್ಲಿ ಕಲ್ಪಿತವಾಗಿದೆ. ಅನಂತ ಕೋಟಿ ಬ್ರಹ್ಮಾಂಡಗಳು ಹೀಗೇ ನಿನ್ನಲ್ಲಿ ನೆಲೆಸಿವೆ. ನೀರಿನಲ್ಲಿ ಜಲಚರ ಗಳಂತೆ, ಅತ್ತಿಯ ಹಣ್ಣಿನಲ್ಲಿ ಸೊಳ್ಳೆಗಳಂತೆ.

ಆದರೆ ಪ್ರಕೃತ ಅಕ್ರೂರ ಕಂಡ ವಿಶ್ವರೂಪ ಸಗುಣ ಬ್ರಹ್ಮ ಹೊರತು ಶುದ್ಧಬ್ರಹ್ಮನಲ್ಲ. ಶುದ್ಧಬ್ರಹ್ಮನಲ್ಲಿ ಲೋಕಗಳು 'ಪ್ರಕಲ್ಪಿತ'ವೆಂದರೆ ಹಗ್ಗದಲ್ಲಿ ಹಾವನ್ನು ಕಲ್ಪಿಸಿಕೊಂಡಂತೆ ಭ್ರಮವೆನಿಸುತ್ತಿತ್ತು. ಸಗುಣ ಬ್ರಹ್ಮನಲ್ಲಿ ಲೋಕಗಳು 'ಪ್ರಕಲ್ಪಿತ' ಎಂದರೆ 'ಚೆನ್ನಾಗಿ ಸೃಜಿಸಲ್ಪಟ್ಟಿವೆ' ಎಂದೇ ಅರ್ಥ. ಸಗುಣಬ್ರಹ್ಮನಲ್ಲಿಯೂ ಲೋಕಗಳು ಹಗ್ಗದಲ್ಲಿ ಹಾವಿನಂತೆ ಮಿಥ್ಯೆಯಾಗಿದ್ದು ಕಲ್ಪಿತಗಳಾಗಿದ್ದರೆ ಹಾಗೇ ದೃಷ್ಟಾಂತ ಕೊಡಬೇಕಾಗಿತ್ತು. ಆದರೆ ಮುಂದಿನ 'ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾಃ' ಎಂಬ ಶ್ಲೋಕದಲ್ಲಿ 'ನೀರಲ್ಲಿ ಜಲಜಂತುಗಳಂತೆ ಅತ್ತಿಯ ಹಣ್ಣಿನಲ್ಲಿ ಸೊಳ್ಳೆಗಳಂತೆ ಲೋಕಗಳಿವೆ' ಎಂದು ದೃಷ್ಟಾಂತ ನೀಡಲಾಗಿದೆ. ಅದರಿಂದ 'ತ್ವಯಿ ಪ್ರಕಲ್ಪಿತಾಃ' ಎಂದರೆ, 'ನಿನ್ನಲ್ಲಿ ಕಲ್ಪಿತ'ವಾಗಿವೆ ಎಂದರ್ಥವಲ್ಲ, ಲೋಕಗಳು ನಿನ್ನಲ್ಲಿ ಹಗ್ಗದಲ್ಲಿ ಹಾವಿನಂತೆ, ತನ್ನಿಂದ ತಾನೇ ಗೋಚರವಾಗುವುದಿಲ್ಲ. 'ತ್ವಯ್ಯೆವ' ನಿನ್ನಿಂದಲೇ ಪ್ರ- ಚೆನ್ನಾಗಿ,[1] ಕಲ್ಪಿತಾಃ-ಸೃಜಿಸಲ್ಪಡುತ್ತವೆ. ಅರ್ಥಾನುಸಾರವಾಗಿ 'ತ್ವಯಿ' ಎಂಬಲ್ಲಿ ವಿಭಕ್ತಿ ವ್ಯತ್ಯಾಸ ಮಾಡಿಕೊಳ್ಳಬೇಕು. ಅಥವಾ 'ತ್ವಯ್ಯೆವ' ಎಂದು ಅಧ್ಯಾಹಾರ ಮಾಡಿದರೂ ಸರಿಯೆ. 'ತ್ವಯಿ ತ್ವಯ್ಯೆವ ಪ್ರಕಲ್ಪಿತಾಃ' 'ನಿನ್ನಲ್ಲಿ ನೀನೇ ಲೋಕಗಳನ್ನು ಸೃಜಿಸಿರುವೆ' ಎಂದರ್ಥ. ಹಿಂದೆ 'ಭೂಸ್ತೋಯಮಗ್ನಿಃ' (೧೦.೩೮.೩) ಎಂಬ ಶ್ಲೋಕದಲ್ಲಿ 'ಅಂಗಭೂತಾಃ' ಲೋಕವೆಲ್ಲವೂ ಪರಮಾತ್ಮನ 'ಅಂಗ'ಗಳಿಂದ 'ಭೂತ' ಉದ್ಭೂತ, ಹುಟ್ಟಿದವುಗಳು ಎಂದು ಹೇಳಿ, ಈಗ ಈ ಶ್ಲೋಕಗಳಲ್ಲಿ 'ಮುಖಾದಿಅಂಗಗಳಿಂದ ಹುಟ್ಟಿದ ಪ್ರಯುಕ್ತ ಅಗ್ನ್ಯಾದಿಗಳು ಮುಖಾದಿ ಅಂಗಗಳೆಂದೇ ಗೌಣವ್ಯವಹಾರ'ವೆಂದು ಹೇಳಿದೆ. ಹೀಗಾಗಿ ಲೋಕ ಗಳು ಅಂಗಗಳಿಂದ ಸೃಜಿಸಲ್ಪಟ್ಟಿವೆಯೇ ಹೊರತು ಅಂಗಗಳಲ್ಲಿ ಕಲ್ಪಿತವಾಗಿಲ್ಲ.

ತ್ವಯ್ಯೆವ ಪ್ರಕಲ್ಪಿತಾಃ ।

ವಿಷ್ಣೋರಂಗಸಮುದ್ಭೂತಾ ವಿಷ್ಣೋರಂಗಾನಿ ದೇವತಾಃ ।
ಉಚ್ಯಂತೇ ಸರ್ವವೇದೇಷು ಸ್ವರೂಪಾದ್ ಭೇದಿನೋಽಪಿ ತು ॥

ಇತಿ ಚ ।

---

[1] ಕಲ್ಪಿತತ್ವಾದಿತ್ಯಾಹ । ಜಲೇ ಯಥಾ ಜಲೌಕಸಃ ಸೂಕ್ಷ್ಮ ಪ್ರಾಣ್ಯಂಡರಾಶಯಃ, ಯಥಾ ವಾ ಉದುಂಬರಾಂತಃ ಕೇಸರೇಷು ಮಶಕಾಃ ಪರಸ್ಪರ ವಾರ್ತಾನಭಿಜ್ಞಾ ಏವಮನಂತಾನಿ ಬ್ರಹ್ಮಾಂಡಾನಿ ಚರಂತೀತ್ಯರ್ಥಃ । - ಶ್ರೀಧರಃ

'ತ್ವಯಿ ಪ್ರಕಲ್ಪಿತಾಃ' ಎಂದರೆ 'ನಿನ್ನಲ್ಲಿ ನಿನ್ನಿಂದಲೇ ಸೃಜಿಸಲ್ಪಟ್ಟಿವೆ' ಎಂದರ್ಥ.

'ದೇವತೆಗಳು ವಿಷ್ಣುವಿನ ಅಂಗಗಳಿಂದ ಉದ್ಭೂತರಾಗಿರುವುದರಿಂದ ಅವರು ವಿಷ್ಣುವಿನ ಸ್ವರೂಪಕ್ಕಿಂತ ಭಿನ್ನರೇ ಆದರೂ ವಿಷ್ಣುವಿನ ಅಂಗಗಳೆಂದು ಎಲ್ಲ ವೇದಗಳಲ್ಲಿ ಗೌಣವಾಗಿ ಹೇಳಲ್ಪಡುತ್ತಾರೆ' ಎಂದೂ ಅಧ್ಯಾತ್ಮ ಎಂಬ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅಕ್ರೂರ ಯಮುನಾ ಸ್ನಾನಕಾಲದಲ್ಲಿ ಶ್ರೀಕೃಷ್ಣನ ವಿಶ್ವರೂಪ ಕಂಡು ಸ್ತುತಿಸುತ್ತಾನೆ-

ಯಾನಿಯಾನೀಹ ರೂಪಾಣಿ ಕ್ರೀಡನಾರ್ಥಂ ಬಿಭರ್ಷಿ ಹಿ ।
ತೈರಾಮೃಷ್ಟಶುಚೋ ಲೋಕಾ ಮುದಾ ಗಾಯಂತಿ ತೇ ಯಶಃ ॥ ೧೨ ॥

ನೀನು ಯಾವ ಯಾವ ಅವತಾರ ರೂಪಗಳನ್ನು ಕ್ರೀಡೆಗಾಗಿ ಸ್ವೀಕರಿಸುವೆಯೋ ಆ ರೂಪಗಳಿಂದ ಲೋಕದ ಜನರು ತಮ್ಮ ಕಷ್ಟಗಳನ್ನು ಪರಿಹರಿಸಿಕೊಂಡು ಸಂತೋಷದಿಂದ ನಿನ್ನ ಕೀರ್ತಿಯನ್ನು ಕೊಂಡಾಡು ತ್ತಾರೆ.

ಇಲ್ಲಿ ಅವತಾರ ರೂಪಗಳನ್ನು ಪರಮಾತ್ಮ ಸ್ವೀಕರಿಸುವುದೆಂದರೆ ತತ್ಕಾಲದಲ್ಲಿ ಮಾಯೆಯಿಂದ ಅಥವಾ ಶುದ್ಧ ಸತ್ವದಿಂದ ಒಂದು ಶರೀರವನ್ನು ಸೃಷ್ಟಿ ಮಾಡಿ ಅದರಲ್ಲಿ ಪ್ರವೇಶ ಮಾಡುತ್ತಾನೆ ಎನ್ನಬೇಕು. ಆ ಶರೀರ ಅನಾದಿ ನಿತ್ಯವೆನ್ನುವ ಪಕ್ಷದಲ್ಲಿ ತತ್ಕಾಲದಲ್ಲಿ ಸ್ವೀಕಾರ ಕೂಡುವುದಿಲ್ಲ ಎಂದು ಬೇರೆ ವ್ಯಾಖ್ಯಾನಕಾರರೆಲ್ಲರೂ ಭಾವಿಸುತ್ತಾರೆ. ಅದು ಸರಿಯಲ್ಲ. ಪರಮಾತ್ಮನ ಅವತಾರರೂಪಗಳು ಪರಮಾತ್ಮ ಸ್ವರೂಪವೇ ಆಗಿದ್ದು ಅವನಂತೇ ಅನಾದಿನಿತ್ಯವೇ ಆಗಿರುತ್ತವೆ. ಆಯಾಕಾಲದಲ್ಲಿ ಅವುಗಳನ್ನು ಲೋಕದ ಕಣ್ಣಿಗೆ ತೋರಿಸುತ್ತಾನೆ. ಪುರಾಣಗಳು, ಪರಮಾತ್ಮ ತನ್ನ ಸ್ವರೂಪಶರೀರವನ್ನು ಹೀಗೆ ತೋರಿಸುವುದನ್ನೇ 'ಶರೀರ ಸ್ವೀಕಾರ'ವೆಂಬಂತೆ ಬಣ್ಣಿಸಿ ಅಜ್ಞರಿಗೆ ಮೋಹ ಉಂಟು ಮಾಡುತ್ತವೆ. ಇದು ತತ್ವನಿರ್ಣಯ ಗ್ರಂಥದಲ್ಲಿ ಸ್ಪಷ್ಟವಿದೆ.

ಭೃತಾಮೇವ ಬಿಭರ್ತೀಶೋ ಹ್ಯವತಾರತನುಂ ಸದಾ ।
ಬಿಭರ್ತೀತ್ಯುಚ್ಯತೇಽಥಾಪಿ ಮೋಹಾಯ ವ್ಯಕ್ತ್ಯಪೇಕ್ಷಯಾ ॥

ಇತಿ ತತ್ವನಿರ್ಣಯೇ ॥

'ಅನಾದಿಕಾಲದಿಂದಲೂ ಸದಾ ಸ್ವೀಕರಿಸಿಯೇ ಇರುವ ಸ್ವರೂಪಭೂತವಾದ ಅವತಾರ ಶರೀರವನ್ನೇ ಆಯಾ ಕಾಲದಲ್ಲಿ ಹರಿ ವ್ಯಕ್ತ ಮಾಡುತ್ತಾನೆ ಎಂಬ ಅಭಿಪ್ರಾಯದಿಂದ, ಅಜ್ಞರ ಮೋಹಕ್ಕಾಗಿ, 'ತತ್ಕಾಲದಲ್ಲಿ ಶರೀರ ಸ್ವೀಕಾರ ಮಾಡುತ್ತಾನೆ ಎಂದು ಪುರಾಣಗಳಲ್ಲಿ ಹೇಳುವುದುಂಟು' ಎಂದು ತತ್ವನಿರ್ಣಯ ಗ್ರಂಥದಲ್ಲಿ ಹೇಳಿದೆ.

❖ ❖ ❖

ಅಕ್ರೂರ ಯಮುನಾ ಸ್ನಾನಕಾಲದಲ್ಲಿ ಶ್ರೀಕೃಷ್ಣನ ವಿಶ್ವರೂಪವನ್ನು ಕಂಡು ಸ್ತುತಿಸುತ್ತಾನೆ.

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂಪತಯೇ ನಮಃ ॥ ೨೨ ॥

ಯಾದವರೊಡೆಯನಾದ ವಸುದೇವಪುತ್ರ ಶ್ರೀಕೃಷ್ಣನಿಗೆ ನಮಸ್ಕಾರ. ಬಲರಾಮಾಂತರ್ಗತನಾದ ಸಂಕರ್ಷಣನಿಗೆ, ಪ್ರದ್ಯುಮ್ನಾಂತರ್ಗತನಾದ ಪ್ರದ್ಯುಮ್ನನಿಗೆ, ಅನಿರುದ್ಧಾಂತರ್ಗತನಾದ ಅನಿರುದ್ಧನಿಗೆ ನಮಸ್ಕಾರ.

ಇಲ್ಲಿ [೧]ವೀರರಾಘವ ವ್ಯಾಖ್ಯಾನ ಹೇಳುತ್ತದೆ- 'ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧ ಎಂದು ನಾಲ್ಕು ವ್ಯೂಹರೂಪಗಳಲ್ಲಿ ಮೊದಲಿನ ಎರಡನ್ನು ವಾಸುದೇವ ಸಂಕರ್ಷಣ ಶಬ್ದಗಳಿಂದ ಹೇಳಿ, ಜೊತೆಗೆ, ಕೃಷ್ಣ ಬಲರಾಮರೆಂಬ ಎರಡು ಅವತಾರರೂಪಗಳನ್ನೂ ಅವೇ ಶಬ್ದಗಳಿಂದ ಹೇಳುತ್ತಾನೆ ಅಕ್ರೂರ. ಪ್ರದ್ಯುಮ್ನ ಅನಿರುದ್ಧ ಶಬ್ದಗಳಿಂದ ಆ ಹೆಸರಿನ ವ್ಯೂಹರೂಪಗಳನ್ನು ಮಾತ್ರ ಹೇಳುತ್ತಾನೆ. ಈ ಎಲ್ಲ ವ್ಯೂಹ ಅವತಾರ ರೂಪಗಳಿಗೂ ಪ್ರಯೋಜನ ಒಂದೇ 'ಸಾತ್ವತಾಂ ಪತಯೇ' ಸಜ್ಜನರಕ್ಷಕರು ಎಂದು. ಅಥವಾ ವಾಸುದೇವ ಮುಂತಾದ ನಾಲ್ಕು ನಾಮಗಳಿಂದಲೂ ವ್ಯೂಹಗಳನ್ನೇ ಹೇಳುತ್ತಾನೆ. 'ಸಾತ್ವತಾಂ ಪತಯೇ' ಎಂದು ಯಾದವೋತ್ತಮರಾದ ಬಲರಾಮ ಕೃಷ್ಣರೆಂಬ ಅವತಾರ ರೂಪಗಳನ್ನು

೧ ರಾಮಕೃಷ್ಣೌ ವಿಭವೌ ವಾಸುದೇವ ಸಂಕರ್ಷಣೌ ವ್ಯೂಹೌ ಚ ತಂತ್ರೇಣಾಭಿಪ್ರೇತ್ಯ ನಮಸ್ಕರೋತಿ ನಮಸ್ತೇ ವಾಸುದೇವಾಯೇತ್ಯರ್ಧೇನ । ಪ್ರದ್ಯುಮ್ನಾನಿರುದ್ಧೌ ವ್ಯೂಹೌ ನಮಸ್ಕರೋತಿ ಪ್ರದ್ಯುಮ್ನಾಯಾನಿರುದ್ಧಾಯೇತಿ। ಸರ್ವೇಷಾಂ ಪ್ರಯೋಜನಾಭಿಪ್ರಾಯೇಣ ವಿಶಿನಷ್ಟಿ ಸಾತ್ವತಾಂ ಪತಯ ಇತಿ । ಸಾಧು ಪರಿತ್ರಾತ್ರೇ ಇತ್ಯರ್ಥಃ ಯದ್ವಾ ವಾಸುದೇವಾಯೇತ್ಯಾದಿಭಿಶ್ಚತುರ್ಭಿರ್ವ್ಯೂಹಚತುಷ್ಟಯಂ ನಮಸ್ಕ್ರಿಯತೇ । ಸಾತ್ವತಾಂ ಪತಯ ಇತ್ಯನೇನ ರಾಮಕೃಷ್ಣನಮಸ್ಕೃತಿಃ। ತೇನೈವ ಪ್ರಯೋಜನಂ ಚಾಭಿಪ್ರೇತಂ।
- ವೀರರಾಘವಃ

ಹೇಳುತ್ತಾನೆ. ಅದೇ ಶಬ್ದ ಅವತಾರ ಪ್ರಯೋಜನವನ್ನೂ ಹೇಳುತ್ತದೆ, 'ಸಜ್ಜನ ರಕ್ಷಕರು' ಎಂದು.

ಆದರೆ ಏಕೆ ಈ ಕ್ಲೇಶ? ವಾಸುದೇವ ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರೆಂದು ನಾಲ್ಕು ವ್ಯೂಹ ರೂಪಗಳಿರುವಂತೆ ಅವೇ ಹೆಸರುಗಳ ನಾಲ್ಕು ಅವತಾರ ರೂಪಗಳೂ ಇವೆ. ಕೃಷ್ಣನೆ ವಾಸುದೇವ, ಕೃಷ್ಣನ ಪುತ್ರ ಪ್ರದ್ಯುಮ್ನ, ಪ್ರದ್ಯುಮ್ನನ ಪುತ್ರ ಅನಿರುದ್ಧ. ಮತ್ತು ಬಲರಾಮನೆ ಸಂಕರ್ಷಣ ಎಂದು. ಹೀಗಾಗಿ ನಾಲ್ಕು ಶಬ್ದಗಳಿಂದ ನಾಲ್ಕು ವ್ಯೂಹಗಳೊಂದಿಗೆ ನಾಲ್ಕು ಅವತಾರಗಳನ್ನೂ ಏಕೆ ಹೇಳಬಾರದು? ಪ್ರಾಯಶಃ ಪ್ರದ್ಯುಮ್ನ ಅನಿರುದ್ಧ ಅವತಾರಗಳಿನ್ನೂ ಆಗಿಲ್ಲದಿರುವುದು ಈ ವ್ಯಾಖ್ಯಾನಕಾರರಿಗೆ ಸಮಸ್ಯೆಯಾಗಿದೆ. ಆದರೆ ಮುಂದೆ ಆಗುತ್ತಿವೆ. ವಿಶ್ವರೂಪವನ್ನು ಕಾಣಬಲ್ಲ ದಿವ್ಯದೃಷ್ಟಿ ಉಳ್ಳವನು ಅಕ್ರೂರ ಮುಂದೆ ಆಗಲಿರುವ ಅವತಾರಗಳನ್ನೂ ಅದೇ ದಿವ್ಯದೃಷ್ಟಿಯಿಂದ ನೋಡಬಾರದೆ? 'ಸಾತ್ವತಾಂ ಪತಯೇ' ಯಾದವರರಸ ರೆಂದು ನಾಲ್ಕು ಅವತಾರಗಳನ್ನು ಹೇಳುವಾಗಲೇ ಅದೇ ಶಬ್ದದಿಂದ 'ಸಜ್ಜನ ರಕ್ಷಕರೆಂದು' ನಾಲ್ಕು ವ್ಯೂಹಗಳನ್ನೂ ಹೇಳಲು ಶಕ್ಯವಿದೆ. ಮುಂದೆ ಆಗಲಿರುವ ರೂಪಗಳನ್ನೂ ಮುಂದೆ 'ನಮೋ ಬುದ್ಧಾಯ, ನಮಸ್ತೇ ಕಲ್ಕಿರೂಪಿಣೇ' ಎಂದು ನಮಿಸುತ್ತಾನೆ ಅಕ್ರೂರ.

ಇಲ್ಲಿ ವಾಸುದೇವ ಶಬ್ದದಿಂದ ಹೇಳಿದ ಕೃಷ್ಣನು ಸ್ವರೂಪಾವತಾರವೆ. ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧ ಶಬ್ದಗಳಿಂದ ಹೇಳಿದ ಬಲರಾಮ, ಕೃಷ್ಣಪುತ್ರ ಪ್ರದ್ಯುಮ್ನ, ಪ್ರದ್ಯುಮ್ನಪುತ್ರನಾದ ಅನಿರುದ್ಧ ಈ ಮೂವರು ಹರಿಯ ಆವೇಶಾವತಾರರು. ಮೂರೂ ಶಬ್ದಗಳು ಈ ಮೂವರನ್ನು ಮುಖ್ಯವೃತ್ತಿಯಿಂದ ಹೇಳುತ್ತಲೆ, ಪರಮ ಮುಖ್ಯವೃತ್ತಿಯಿಂದ ಮೂವರಲ್ಲಿ ಆವೇಶಗೊಂಡಿರುವ ಮೂರು ವಿಷ್ಣುರೂಪ ಗಳನ್ನೂ ಹೇಳುತ್ತವೆ. ಲಕ್ಷಣಾವೃತ್ತಿಯ ಆವಶ್ಯಕತೆ ಇಲ್ಲ.

'ಕೇವಲ ವ್ಯೂಹರೂಪಗಳನ್ನೇ ಅಕ್ರೂರ ನಮಿಸುತ್ತಾನೆ ಎನ್ನೋಣ. ಅವತಾರ ರೂಪಗಳನ್ನೂ ನಮಿಸುತ್ತಾನೆ ಎನ್ನುತ್ತ ಏಕೆ ಕ್ಲೇಶಪಡಬೇಕು?' ಎಂದರೆ, ಅದು ಸರಿಯಲ್ಲ. 'ನಮಃ ಕಾರಣ ಮತ್ಸ್ಯಾಯ' ಎಂದು ಪ್ರಾರಂಭಿಸಿ ದಶಾವತಾರಗಳನ್ನು ಹೇಳುತ್ತಿದ್ದಾನೆ ಅಕ್ರೂರ. ಅದರಿಂದ ವ್ಯೂಹರೂಪಗಳನ್ನಾದರೂ ಬಿಡಬಹುದು, ಅವತಾರಗಳನ್ನು ಬಿಡುವಂತಿಲ್ಲ. ಮತ್ತು ಬಲರಾಮನಲ್ಲಿ ಆವಿಷ್ಟವಾದ ಸಂಕರ್ಷಣ ಮೂರ್ತಿಯ ಉಪಾಸನೆಯ ಬಲದಿಂದ ಅಕ್ರೂರ ಈಗ ವಿಶ್ವರೂಪವನ್ನು ಕಾಣುತ್ತಿದ್ದಾನೆ. ಅಂದಿನವರೆಗೆ ಸ್ನಾನ ಕಾಲದಲ್ಲಿ ಕೇವಲ ಶೇಷದೇವನನ್ನು ಮಾತ್ರ ಕಾಣುತ್ತಿದ್ದವನು ಇದೀಗ ಶೇಷಶಾಯಿಯ ವಿಶ್ವರೂಪವನ್ನು ಕಾಣುವಾಗ ತನ್ನ

ಉಪಾಸ್ಯಮೂರ್ತಿಯಾದ ಸಂಕರ್ಷಣಾವತಾರವನ್ನು ಅವಶ್ಯ ಕಾಣುತ್ತಾನೆ ಎನ್ನಬೇಕು.

ಪ್ರದ್ಯುಮ್ನೇ ಚಾನಿರುದ್ಧೇ ಚ ಬಲದೇವೇ ಚ ಕೇಶವಃ ।
ಸನ್ನಿಧಾನಂ ವಿಶೇಷೇಣ ಕರೋತಿ ಜಗತಾಂ ಪತಿಃ ।
ತತ್ರ ಕೃಷ್ಣಃ ಸ್ವಯಂ ವಿಷ್ಣುಃ ಪರಮಾನಂದಲಕ್ಷಣಃ ।
ಪಾರಾಶರ್ಯಶ್ಚ ಭಗವಾನ್ ಸ್ವಯಮೇವ ಜನಾರ್ದನಃ ।

ಇತಿ ಚ ।

ತತ್ತದ್‌ಗತಸ್ಯೈವ ಹರೇಸ್ತತ್ತನ್ನಾಮಾನಿ ಚಾಂಜಸಾ ।
ಔಪಚಾರಿಕನಾಮಾನಿ ತದನ್ಯೇಷಾಮಿತಿ ಸ್ಥಿತಿಃ ।

ಇತಿ ಶಬ್ದನಿರ್ಣಯೇ॥

'ಪ್ರದ್ಯುಮ್ನನಲ್ಲಿ ಅನಿರುದ್ಧನಲ್ಲಿ ಮತ್ತು ಬಲರಾಮನಲ್ಲಿ ಜಗನ್ನಾಥನಾದ ಶ್ರೀಹರಿ ವಿಶೇಷ ಆವೇಶವನ್ನು ಮಾಡುತ್ತಾನೆ. ಆದರೆ ಕೃಷ್ಣನು ಪೂರ್ಣಾನಂದವೆಂಬ ಅಸಾಧಾರಣ ಲಕ್ಷಣ ಯುಕ್ತನಾದ ಸಾಕ್ಷಾತ್ ವಿಷ್ಣು. ಪೂಜ್ಯರಾದ ವೇದವ್ಯಾಸರೂ ಹಾಗೇ ಸಾಕ್ಷಾತ್ ವಿಷ್ಣುವೇ' ಎಂದು ತತ್ವನಿರ್ಣಯದಲ್ಲಿ ಹೇಳಿದೆ.

'ಸಂಕರ್ಷಣ ಪ್ರದ್ಯುಮ್ನ ಅನಿರುದ್ಧರಲ್ಲಿ ಆವಿಷ್ಟನಾದ ಹರಿಗೇ ಸಂಕರ್ಷಣಾದಿ ನಾಮಗಳು ಪರಮ ಮುಖ್ಯ ವೃತ್ತಿಯಿಂದ ಸಲ್ಲುತ್ತವೆ. ಉಳಿದ ಸಂಕರ್ಷಣಾದಿ ಜೀವರಿಗೆ ಔಪಚಾರಿಕವಾಗಿ, ಅಂದರೆ, ಪರಮ ಮುಖ್ಯ ವೃತ್ತಿ ಇಲ್ಲದೆ ಕೇವಲ ಮುಖ್ಯ ವೃತ್ತಿಯಿಂದ ಮಾತ್ರ, ಆ ನಾಮಗಳು ಸಲ್ಲುತ್ತವೆ ಎಂದು ವ್ಯವಸ್ಥೆ' ಎನ್ನುತ್ತದೆ ಶಬ್ದನಿರ್ಣಯ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಅಷ್ಟತ್ರಿಂಶೋऽಧ್ಯಾಯಃ

❖

ಅಧ್ಯಾಯ - ೩೯

ಅಧ್ಯಾಯ ಸಾರಾಂಶ

ಭಗವಾನ್ ಶ್ರೀಕೃಷ್ಣ ವಿಶ್ವರೂಪವನ್ನು ಮರೆಮಾಡಿದಾಗ ಅಕ್ರೂರ ನೀರಿಂದ ಮೇಲೆದ್ದು ನಿತ್ಯಾಹ್ನಿಕವನ್ನು ತೀರಿಸಿ ಬಂದು ರಥವನ್ನೇರಿದ. ಶ್ರೀಕೃಷ್ಣ ಕೇಳಿದ, ನೀನೇನಾದರೂ ಅದ್ಭುತವನ್ನು ಕಂಡೆ ಏನು? ನೆಲದಲ್ಲಿ ಆಕಾಶದಲ್ಲಿ ಅಥವಾ ನೀರಿನಲ್ಲಿ? ಅಕ್ರೂರನೆಂದ, 'ನೆಲದಲ್ಲಿ ಆಕಾಶದಲ್ಲಿ ಅಥವಾ ನೀರಲ್ಲಿ ಏನೇನು ಅದ್ಭುತಗಳಿವೆಯೋ ಅವೆಲ್ಲ ವಿಶ್ವರೂಪನಾದ ನಿನ್ನಲ್ಲಿಯೆ ಇರುವಾಗ ನಿನ್ನನ್ನು ಕಂಡ ಬಳಿಕ ನಾನು ಕಾಣದಿದ್ದುದು ಬೇರೆ ಏನಿದ್ದೀತು?'

ಸಂಜೆ ಹೊತ್ತಿಗೆ ರಾಮಕೃಷ್ಣರನ್ನು ಮಧುರೆಗೆ ಕರೆತಂದ ಅಕ್ರೂರ. ಪ್ರಯಾಣಕಾಲದಲ್ಲಿ ದಾರಿಯಲ್ಲಿ ಅಲ್ಲಲ್ಲಿ ಜನರು ಅವರ ಬಳಿಗೆ ಗುಂಪು ಗುಂಪಾಗಿ ಬಂದು ಸೇರಿದರು. ಅವರ ಮೇಲಿಂದ ದೃಷ್ಟಿಯನ್ನು ಹಿಂತಿರುಗಿಸಲಾರದೆ ಹೋದರು. ಗೊಲ್ಲರು ಮೊದಲೇ ಮಥುರೆಯನ್ನು ತಲುಪಿ ಊರ ಹೊರಗಿನ ಉದ್ಯಾನದಲ್ಲಿ ರಾಮಕೃಷ್ಣರ ಬರವಿಗೆ ಕಾಯುತ್ತಿದ್ದರು. ಅವರ ಬಳಿಗೆ ಬಂದೊಡನೆ ಶ್ರೀಕೃಷ್ಣ ಅಕ್ರೂರನನ್ನು ಅವನ ಮನೆಗೆ ಕಳುಹಿಸಿದ. ಅವನು, ತನ್ನ ಮನೆಗೆ ಬಂದು ಪಾದಧೂಳಿ ಹಾಕಿರೆಂದು ರಾಮಕೃಷ್ಣರನ್ನು ಬೇಡಿಕೊಂಡ. ಆಗಲಿ ಕಂಸನನ್ನು ಕೊಂದು ಬಂಧುಗಳಿಗೆ ಸುಖನೀಡಿ ಬರುವೆನೆಂದ ಶ್ರೀಕೃಷ್ಣ.

ಅಕ್ರೂರ ಕಂಸನ ಮುಂದೆ ತಾನು ಕೃಷ್ಣನನ್ನು ಕರೆತಂದಿರುವುದಾಗಿ ಹೇಳಿ ಮನೆಗೆ ಹೊರಟುಹೋದ. ಕೃಷ್ಣರಾಮರು ಗೊಲ್ಲರೊಂದಿಗೆ ಮಧುರಾನಗರದರ್ಶನಕ್ಕೆ ಹೊರಟರು. ಸ್ಫಟಿಕದ ಎತ್ತರವಾದ ಗೋಪುರಗಳು ಚಿನ್ನದ ಕಿಟಕಿ ಬಾಗಿಲುಗಳು ತಾಮ್ರ ಹಿತ್ತಾಳೆಗಳ ಪ್ರಾಕಾರಗಳು ಅಗಮ್ಯವಾದ ಕಂದಕಗಳು ಉದ್ಯಾನ ಉಪವನಗಳು ನೀರು ಸಿಂಪಡಿಸಿ ಹೂವು ಅಂಕುರ ಅರಳು ಅಕ್ಷತೆಕಾಳುಗಳಿಂದ ಅಲಂಕರಿಸಲ್ಪಟ್ಟ ರಥಬೀದಿ ಅಂಗಡಿ

ಬೀದಿಗಳು ಪೂರ್ಣಕುಂಭ ದೀಪಗಳ ಸಾಲು ಗೊನೆಸಹಿತವಾದ ಬಾಳೆಕಂಬ ಅಡಿಕೆಗೊಂಚಲು ಮುಂತಾದವುಗಳಿಂದ ಅಲಂಕೃತವಾದ ಮನೆ ಬಾಗಿಲುಗಳು ಇವೆಲ್ಲವನ್ನೂ ನೋಡುತ್ತ ಕೃಷ್ಣರಾಮರು ರಾಜಬೀದಿಯಲ್ಲಿ ಸಂಚರಿಸಿದರು. ನಗರದ ನಾರಿಯರು ದಾರಿಯುದ್ದಕ್ಕೂ ಉಪ್ಪರಿಗೆಗಳಲ್ಲಿ ನಿಂತು ಅವರನ್ನು ನೋಡಿದರು. ಆತುರದಿಂದ ವಸ್ತ್ರಾಭರಣಗಳನ್ನು ವ್ಯತ್ಯಾಸವಾಗಿ ಧರಿಸಿ, ಊಟ ಮಾಡುವುದು ಮಗುವಿಗೆ ಹಾಲುಣಿಸುವುದು ಮುಂತಾದುವನ್ನು ಅರ್ಧಕ್ಕೇ ಬಿಟ್ಟು ಸಂಭ್ರಮದಿಂದ ಉಪ್ಪರಿಗೆ ಗಳನ್ನು ಏರಿನಿಂತರು. ಬಹುದಿನಗಳಿಂದ ಕೃಷ್ಣನ ಬಗ್ಗೆ ಕೇಳಿ ತಿಳಿದು ಅವನಲ್ಲಿ ಮನಸ್ಸಿಟ್ಟಿದ್ದರು ಆ ನಾರಿಯರು. ಓರೆನೋಟ ನಸುನಗೆ ಗಳ ಅಮೃತಸಿಂಚನದಿಂದ ಕೃಷ್ಣ ತಮ್ಮನ್ನು ಆದರಿಸಿದನೆಂದು ತಿಳಿದು ರೋಮಾಂಚನಗೊಂಡರು. ಕಣ್ಣಿನ ಮೂಲಕ ಆನಂದಮೂರ್ತಿಯನ್ನು ಹೃದಯದೊಳಗೆ ತುಂಬಿಕೊಂಡು ಆಲಿಂಗಿಸಿ ವಿರಹ ದುಃಖವನ್ನು ಮರೆತರು. ಪ್ರೀತಿಯಿಂದ ರಾಮಕೃಷ್ಣರ ಮೇಲೆ ಹೂಮಳೆ ಚೆಲ್ಲಿದರು. ಅಲ್ಲಲ್ಲಿ ಬ್ರಾಹ್ಮಣರು ಪೂರ್ಣಕುಂಭ ಹಿಡಿದು ಸ್ವಾಗತಿಸಿದರು.

ಕಂಸನಿಗಾಗಿ ಮಡಿ ಮಾಡಿದ ಅತ್ಯುತ್ತಮ ಬಟ್ಟೆಗಳ ಗಂಟುಗಳನ್ನು ಹಿಡಿದು ಪರಿವಾರ ಸಮೇತನಾಗಿ ಅಗಸರವನೊಬ್ಬ ಬರುತ್ತಿದ್ದ. ಶ್ರೀಕೃಷ್ಣ 'ಬಟ್ಟೆಗಳನ್ನು ಕೊಡು, ನಿನಗೆ ಶ್ರೇಯಸ್ಸಾಗು ವುದು' ಎಂದ. ಸರ್ವೇಶ್ವರನಾದ ಭಗವಂತ ಬೇಡಿದಾಗ ಆ ಮೂರ್ಖ ತಾನು ಕಂಸರಾಜನ ಆಪ್ತಸೇವಕನೆಂದು ಸೊಕ್ಕಿನಿಂದ ಸಿಟ್ಟಾಗಿ ಬೈದುಬಿಟ್ಟ. 'ಇವು ರಾಜಯೋಗ್ಯವಾದ ಬಟ್ಟೆಗಳು. ಅಲೆಮಾರಿಗಳಾದ ನೀವು ಬದುಕುವಾಸೆ ಇರುವುದಾದರೆ ಹೀಗೆ ಕೇಳಬೇಡಿ. ಆಚೆ ತೊಲಗಿರಿ. ಇಲ್ಲವಾದರೆ ಭಟರು ನಿಮ್ಮನ್ನು ಹಿಡಿದು ಕಟ್ಟಿಹಾಕಿ ಹೊಡೆದು ಸರ್ವಸ್ವವನ್ನು ಕಿತ್ತುಕೊಳ್ಳುತ್ತಾರೆ' ಎಂದ. ಅಸಂಬದ್ಧವಾಗಿ ಮಾತನಾಡುತ್ತಿದ್ದ ಅವನ ತಲೆಯನ್ನು ಒಂದು ಕೈ ಏಟಿನಿಂದ ಶ್ರೀಕೃಷ್ಣ ಹಾರಿಸಿದ. ಅವನ ಆಳುಗಳು ಭಯದಿಂದ ಬಟ್ಟೆ ಮೂಟೆಗಳನ್ನು ಬಿಟ್ಟು ಪಲಾಯನ

ಮಾಡಿದರು. ಕೃಷ್ಣರಾಮರು ತಮಗೆ ಬೇಕಾದ ಬಟ್ಟೆಗಳನ್ನು ಎತ್ತಿಕೊಂಡು ಗೊಲ್ಲರಿಗೂ ಕೊಟ್ಟು ಉಳಿದುವನ್ನು ನೆಲಕ್ಕೆ ಹಾಸಿ ಅದರ ಮೇಲೆ ನಡೆದರು. ಕ್ಷೌರಿಕನೊಬ್ಬ ಅವರಿಗೆ ಪ್ರೀತಿಯಿಂದ ಕೇಶಾಲಂಕಾರ ಮಾಡಿ ಅಂಗರಾಗ ಆಭರಣಗಳಿಂದಲೂ ಅಲಂಕರಿಸಿದ. ಅಲಂಕೃತವಾದ ಕರಿಯ ಮತ್ತು ಬಿಳಿಯ ಆನೆ ಮರಿಗಳಂತೆ ಅವರು ಕಂಡುಬಂದರು. ಶ್ರೀಕೃಷ್ಣ ಅವನಿಗೆ ಅಷ್ಟೈಶ್ವರ್ಯವನ್ನೂ ಭಗವಂತನ ಸ್ಮರಣೆಯನ್ನೂ ಮೋಕ್ಷವನ್ನೂ ಅನುಗ್ರಹಿಸಿದ.

ಬಳಿಕ ಸುದಾಮನೆಂಬ ಹೂವಾಡಿಗ ಅವರನ್ನು ತನ್ನ ಮನೆಗೆ ಕರೆದೊಯ್ದು ಆದರದಿಂದ ಸತ್ಕರಿಸಿ ಹೂಮಾಲೆಗಳನ್ನಿತ್ತ. ಬೇಕಾದ ವರಗಳನ್ನು ಕೇಳು ಎಂದಾಗ ಶ್ರೀಕೃಷ್ಣನಲ್ಲಿ ಅವನು ನಿಶ್ಚಲವಾದ ಭಕ್ತಿಯನ್ನೂ ಭೂತದಯೆಯನ್ನೂ ಬೇಡಿ ಪಡೆದ. ಶ್ರೀಕೃಷ್ಣ ಅವನಿಗೆ ಅವನ ವಂಶಪರಂಪರೆಗೂ ಬರುವಂಥ ಸಂಪತ್ತನ್ನು ಬಲ ಕೀರ್ತಿ ವರ್ಚಸ್ಸುಗಳನ್ನು ಮೋಕ್ಷವನ್ನು ಕರುಣಿಸಿದ.

❖

ಅಧ್ಯಾಯ - ೪೦

ಅಧ್ಯಾಯ ಸಾರಾಂಶ

ಮುಂದೆ ದಾರಿಯಲ್ಲಿ ಕಂಸನ ಸೈರಂಧ್ರಿ ಗಂಧಲೇಪದ ಪಾತ್ರೆ ಹಿಡಿದು ಎದುರಾದಳು. ಅವಳು ಸುಂದರ ಯುವತಿ. ಆದರೆ ಗೂನು ಬೆನ್ನಿನವಳು, ಕುಬ್ಜೆ, ಹೆಸರು ತ್ರಿವಕ್ರೆ ಎಂದು. ಭಗವಂತನ ರೂಪ ಸೌಂದರ್ಯ ರಸಿಕತೆ ನಗು ನೋಟಗಳಿಗೆ ಮಾರುಹೋಗಿ ಇಬ್ಬರಿಗೂ ಗಂಧವನ್ನು ನೀಡಿದಳು. ಶ್ರೀಕೃಷ್ಣ ಒಲಿದು ಮೂರುಕಡೆ ವಕ್ರಳಾಗಿದ್ದ ತ್ರಿವಕ್ರೆಯನ್ನು ನೀಟಾಗಿ ಮಾಡಿದ. ಅವಳ ಮುಂಗಾಲುಗಳ ಮೇಲೆ ಕಾಲಿಂದ ಒತ್ತಿಹಿಡಿದು ಗದ್ದದಲ್ಲಿ ಎರಡು ಬೆರಳುಗಳನ್ನಿಟ್ಟು ಮುಖವನ್ನು ಹಿಡಿದು ಮೇಲೆತ್ತಿದ. ಅವಳ ಶರೀರ ನೆಟ್ಟಗಾಯಿತು. ಮೊದಲೇ ಅವಳು ಸುಂದರಿ, ಈಗ ಅಪ್ಸರೆ ಯಂತಾದಳು. ಅವಳು ಕಾಮಪೀಡಿತಳಾಗಿ ಕೃಷ್ಣನ ಉತ್ತರೀಯವನ್ನು ಹಿಡಿದೆಳೆದು ನಸುನಗುತ್ತ 'ಬಾ, ಮನೆಗೆ ಹೋಗೋಣ' ಎಂದಳು. ನಾನು ಬಂದ ಕೆಲಸ ಮುಗಿಸಿ ಬರುವೆನೆಂದ ಶ್ರೀಕೃಷ್ಣ

ಮುಂದೆ, ಬಿಲ್ಲು ಇದ್ದ ಜಾಗವನ್ನು ಜನರಿಂದ ಕೇಳಿ ತಿಳಿದು ಅಲ್ಲಿಗೆ ಹೋದರು ರಾಮಕೃಷ್ಣರು. ಅಲ್ಲಿ ಮಳೆಬಿಲ್ಲಿನಂತೆ ಅದ್ಭುತವಾದ ಬಿಲ್ಲನ್ನು ಕಂಡರು. ಅದಕ್ಕೆ ಪೂಜೆ ನಡೆಯುತ್ತಿದ್ದು ಬಹುಮಂದಿ ಕಾವಲು ಕಾಯುತ್ತಿದ್ದರು. ಅವರು ತಡೆಯುತ್ತಿದ್ದಂತೆಯೇ ಶ್ರೀಕೃಷ್ಣ ಬಿಲ್ಲನ್ನು ಬಲಾತ್ಕಾರವಾಗಿ ಎಡಗೈಯಿಂದ ಎತ್ತಿ ಹೆದೆ ಏರಿಸಿ ಸೆಳೆದ. ಮದ್ದಾನೆ ಕಬ್ಬಿನ ಜಲ್ಲೆಯನ್ನು ಹೇಗೋ ಹಾಗೆ ಕ್ಷಣಾರ್ಧದಲ್ಲಿ ಮಧ್ಯದಲ್ಲಿ ಮುರಿದು ಬಿಟ್ಟ. ಆಗ ಉಂಟಾದ ಶಬ್ದ ಆಕಾಶ ಪೃಥಿವಿ ಅಂತರಿಕ್ಷಗಳನ್ನೆಲ್ಲ ತುಂಬಿತು. ಅದನ್ನು ಕೇಳಿ ಕಂಸ ಭಯದಿಂದ ತತ್ತರಿಸಿ ಹೋದ. ಕಾವಲುಗಾರರು ಕೃಷ್ಣರಾಮರನ್ನು ಸೆರೆಹಿಡಿಯಲು ಬಂದಾಗ ರಾಮಕೃಷ್ಣರು ಬಿಲ್ಲಿನ ತುಂಡುಗಳಿಂದಲೇ ಅವರನ್ನು ಸಂಹರಿಸಿದರು. ಅವರ ಸಹಾಯಕ್ಕೆ ಬಂದ ಕಂಸನ ಸೈನಿಕರನ್ನೂ ಸಂಹರಿಸಿದರು.

ಸೂರ್ಯ ಅಸ್ತಮಿಸಿದಾಗ ರಾಮಕೃಷ್ಣರು ನಗರದ ಹೊರಭಾಗದಲ್ಲಿ ಬಂಡಿಗಳನ್ನು ನಿಲ್ಲಿಸಿದ ಪ್ರದೇಶಕ್ಕೆ ಬಂದರು. ಕ್ಷೀರಾನ್ನ ಉಂಡರು. ಕಂಸನೇನು ಮಾಡಲು ಹೊರಟಿದ್ದಾನೆ ಎಂದು ತಿಳಿದೂ ಕೂಡ ಸುಖವಾಗಿ ಆ ರಾತ್ರಿಯನ್ನು ಕಳೆದರು.

ಕಂಸ ಮಾತ್ರ ರಾತ್ರಿ ನಿದ್ದೆ ಬಾರದೆ ದೀರ್ಘಜಾಗರಣೆ ಮಾಡಿದ. ತನ್ನ ಶರೀರದಲ್ಲಿಯೂ ಹೊರಗೂ ಮರಣ ಸೂಚಕವಾದ ಅರಿಷ್ಟಗಳನ್ನು ಕಂಡ. ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ಬೀಳುತ್ತಿದ್ದರೂ ಅದರಲ್ಲಿ ತಲೆ ಕಾಣಲಿಲ್ಲ. ಜ್ಯೋತಿಗಳೆಲ್ಲವೂ ಎರಡೆರಡಾಗಿ ಕಾಣುವುದು, ತನ್ನ ನೆರಳಲ್ಲಿ ರಂಧ್ರಗಳು ಕಾಣುವುದು, ಇಂಥ ಅರಿಷ್ಟಗಳು ಕಂಡು ಬಂದುವು. ಕನಸಿನಲ್ಲಿಯೂ ಶವವನ್ನು ಅಪ್ಪಿಕೊಂಡಂತೆ ಕತ್ತೆಯ ಮೇಲೆ ಸವಾರಿ ಮಾಡಿದಂತೆ ಕಮಲನಾಳವನ್ನು ತಿಂದಂತೆ ಕೆಂಪು ಹೂಮಾಲೆ ಧರಿಸಿದಂತೆ ಎಣ್ಣೆ ಬಳಿದುಕೊಂಡು ದಿಗಂಬರನಾಗಿ ದಕ್ಷಿಣ ದಿಕ್ಕಿಗೆ ನಡೆದಂತೆ ಕಂಡು ತನಗೆ ಮರಣ ಸನ್ನಿಹಿತ ವಾಯಿತೆಂದು ತಿಳಿದ.

ಮರುದಿನ ಬೆಳಿಗ್ಗೆ ಮಲ್ಲಕ್ರೀಡೆಯ ಹಬ್ಬ ನಡೆಯಿತು. ಭಟರು ರಂಗಮಂಟಪವನ್ನು ಪೂಜಿಸಿದರು. ವಾದ್ಯಗಳನ್ನು ಮೊಳಗಿಸಿದರು. ಪ್ರೇಕ್ಷಕರು ನಾಗರಿಕರು ದೇಶವಾಸಿಗಳು ಆಸನಗಳಲ್ಲಿ ಕುಳಿತರು. ಕಂಸನೂ ಪರಿವಾರ ಸಮೇತನಾಗಿ ರಾಜಸಿಂಹಾಸನದಲ್ಲಿ ಕುಳಿತ. ವಾದ್ಯಘೋಷಗಳೊಂದಿಗೆ ಚಾಣೂರ ಮುಷ್ಟಿಕ ಕೂಟ ಛಲ ಕೋಸಲ ಮುಂತಾದ ಮಲ್ಲರು ರಂಗಸ್ಥಳಕ್ಕೆ ಬಂದರು. ಕಂಸನ ಆಮಂತ್ರಣದ ಮೇರೆಗೆ ಬಂದಿದ್ದ ನಂದಗೋಪ ಮುಂತಾದ ಗೊಲ್ಲರು ತಾವು ತಂದಿದ್ದ ಕಪ್ಪಕಾಣಿಕೆಗಳನ್ನು ಕಂಸನಿಗೆ ಸಲ್ಲಿಸಿ ಒಂದು ಕಡೆ ಆಸನಗಳಲ್ಲಿ ಕುಳಿತರು.

❖

ಅಧ್ಯಾಯ - ೪೧

ಅಧ್ಯಾಯ ಸಾರಾಂಶ

ಮಲ್ಲಯುದ್ಧದ ನಗಾರಿ ಶಬ್ದವನ್ನು ಕೇಳಿ ರಾಮಕೃಷ್ಣರು ನೋಡಲು ಬಂದರು. ದ್ವಾರದಲ್ಲಿ ಕುವಲಯಾಪೀಡ ಆನೆಯನ್ನು ಮಾವುತ ನಿಲ್ಲಿಸಿದ್ದ. ಶ್ರೀಕೃಷ್ಣ ಕೋಪದಿಂದ 'ಮಾವುತ, ನಮಗೆ ದಾರಿಬಿಡು. ಇಲ್ಲದಿದ್ದರೆ ನಿನ್ನನ್ನು ಆನೆಯೊಂದಿಗೆ ಯಮಲೋಕಕ್ಕೆ ಕಳಿಸುವೆವು' ಎಂದ. ಮಾವುತ ಸಿಟ್ಟಾಗಿ ಆನೆಯನ್ನು ಅಂಕುಶದಿಂದ ತಿವಿದು ಕೆರಳಿಸಿ ಶ್ರೀಕೃಷ್ಣನ ಮೇಲೆ ಹರಿಹಾಯಿಸಿದ. ಮದ್ದಾನೆ ಕೃಷ್ಣನ ಕಡೆಗೆ ನುಗ್ಗಿ ಸೊಂಡಿಲಿನಿಂದ ಹಿಡಿಯಿತು. ಆದರೆ ಕೃಷ್ಣ ತಪ್ಪಿಸಿಕೊಂಡು ಹೊಡೆದು ನಾಲ್ಕು ಕಾಲುಗಳ ನಡುವೆ ಅಡಗಿ ನಿಂತ. ಆನೆ ಕೃಷ್ಣನನ್ನು ಕಾಣದೆ ಸಿಟ್ಟಾಯಿತು. ವಾಸನೆಯಿಂದ ತಿಳಿದು ಅವನನ್ನು ಹಿಡಿ ಯಿತು. ಆದರೆ ಪುನಃ ಕೃಷ್ಣ ತಪ್ಪಿಸಿಕೊಂಡು ಬಾಲದಲ್ಲಿ ಹಿಡಿದು ಗರುಡ ಹಾವನ್ನು ಎಳೆಯುವಂತೆ ಅನಾಯಾಸವಾಗಿ ಇಪ್ಪತ್ತೈದು ಬಿಲ್ಲಳತೆ ಯಷ್ಟು ದೂರಕ್ಕೆ ಎಳೆದುಕೊಂಡು ಹೋದ. ಕರುವಿನ ಬಾಲ ಹಿಡಿದು ಆಡುವ ಬಾಲಕನಂತೆ ಶ್ರೀಕೃಷ್ಣ ಆನೆಯ ಬಾಲ ಹಿಡಿದು ಅದು ಎಡಕ್ಕೆ ತಿರುಗಲೆತ್ನಿಸಿದರೆ ಬಲಕ್ಕೆ, ಬಲಕ್ಕೆ ತಿರುಗಲೆತ್ನಿಸಿದರೆ ಎಡಕ್ಕೆ ಹೀಗೆ ತಿರುಗಿಸುತ್ತ ತಿರುಗಿದ. ಬಳಿಕ ಎದುರಿಗೆ ಬಂದು ಕೈಯಿಂದ ಗುದ್ದಿ ಓಡಿದ.

ಓಡುತ್ತ ಆಗಾಗ ಸಮೀಪದಲ್ಲಿ ಸಿಗುತ್ತ ಅದು ತನ್ನ ಹಿಂದೆ ಹಿಂದೆಯೇ ಧಾವಿಸಿ ಬರುವಂತೆ ಮಾಡಿ, ಬೇಕೆಂದೇ ನೆಲದಲ್ಲಿ ಬಿದ್ದು ತಟ್ಟನೆ ಎದ್ದು ಓಡಿಹೋದ. ಆನೆ ಕೃಷ್ಣ ಬಿದ್ದನೆಂದು ತಿಳಿದು ಬಗ್ಗಿ ಎರಡೂ ದಾಡೆಗಳಿಂದ ತಿವಿಯಿತು. ದಾಡೆಗಳು ನೆಲದಲ್ಲಿ ಹೂತುಹೋದವು. ಬಾಯಿಗೆ ಮಣ್ಣು ತಗುಲಿತು. ಈಗ ಆನೆ ಅತಿಯಾಗಿ ಕೆರಳಿತು. ರೋಷದಿಂದ ಕೃಷ್ಣನ ಕಡೆಗೆ ನುಗ್ಗಿತು. ಕೃಷ್ಣನೆ ಮುಂದೆ ಬಂದು ಸೊಂಡಿಲಲ್ಲಿ ಹಿಡಿದು ಅದನ್ನು ನೆಲದಲ್ಲಿ ಕೆಡವಿದ. ಸಿಂಹದಂತೆ ಆಕ್ರಮಿಸಿ ದಂತಗಳನ್ನು ಕಿತ್ತು ತೆಗೆದ. ದಂತದಿಂದಲೆ ಆನೆಯನ್ನೂ ಮಾವುತನನ್ನೂ ಕೊಂದ.

ರಾಮಕೃಷ್ಣರು ದಂತಗಳನ್ನು ಹೆಗಲ ಮೇಲಿಟ್ಟುಕೊಂಡು ಶೋಭಿಸುತ್ತ ರಂಗಸ್ಥಳವನ್ನು ಪ್ರವೇಶಿಸಿದರು.

ಶ್ರೀಕೃಷ್ಣ ಪ್ರೇಕ್ಷಕರಿಗೆ ಒಬ್ಬೊಬ್ಬರಿಗೆ ಒಂದೊಂದು ರಸದ ಸಾಕಾರಮೂರ್ತಿಯಾಗಿ ಕಂಡುಬಂದ. ಪರ್ವತಗಾತ್ರದ ಮಲ್ಲರಿಗೆ ವಜ್ರಾಯುಧದಂತೆ ರೌದ್ರಮೂರ್ತಿ. ಪುರುಷರಿಗೆ ಮಹಾಪುರುಷನಾಗಿ ಅದ್ಭುತ ಮೂರ್ತಿ. ಸ್ತ್ರೀಯರಿಗೆ ಮನ್ಮಥನಂತೆ ಶೃಂಗಾರ ಮೂರ್ತಿ. ಗೊಲ್ಲರಿಗೆ ಪ್ರಿಯಬಂಧುವಾಗಿ ನಗಿಸುವ ಹಾಸ್ಯ ಮೂರ್ತಿ. ದುಷ್ಟರಾಜರಿಗೆ ಶಾಸನ ಮಾಡುವ ವೀರಮೂರ್ತಿ. ತಂದೆತಾಯಿಗಳಿಗೆ ಮಗನಾಗಿ ವಾತ್ಸಲ್ಯಮೂರ್ತಿ. ಕಂಸನಿಗೆ ವಿಧಾತ ಕಳಿಸಿದ ಮೃತ್ಯುವಾಗಿ ಭಯಾನಕಮೂರ್ತಿ. ಸನಕಾದಿ ಮುನಿಗಳಿಗೆ ಪರತತ್ವ ವೆನಿಸಿ ಶಾಂತಮೂರ್ತಿ. ಯಾದವರಿಗೆ ರಕ್ಷಕನಾಗಿ ಭಕ್ತಿರಸಮೂರ್ತಿ. ಹೀಗೆ ನವರಸಮೂರ್ತಿಯಾಗಿ ರಂಗಸ್ಥಳದಲ್ಲಿ ಶ್ರೀಕೃಷ್ಣ ಶೋಭಿಸಿದ.

ಕುವಲಾಯಪೀಡ ಹತವಾದಾಗ ಕಂಸ ಗಾಬರಿಗೊಂಡ. ಪ್ರೇಕ್ಷಕರು ಮಾತ್ರ ರಾಮಕೃಷ್ಣರ ಮುಖ ಸೌಂದರ್ಯವನ್ನು ಕಣ್ಣುಗಳಿಂದ ಎಷ್ಟು ಕುಡಿದರೂ ತೃಪ್ತಿ ಹೊಂದಲಿಲ್ಲ. ಕಣ್ಣುಗಳಿಂದ ಕುಡಿಯುವಂತೆ ನಾಲಿಗೆಯಿಂದ ಸವಿಯುವಂತೆ ಮೂಗಿನಿಂದ ಮೂಸುವಂತೆ ತೋಳುಗಳಿಂದ ಆಲಿಂಗಿಸುವಂತೆ ಕಂಡುಬಂದರು. ಅವರ ಲೀಲೆಗಳನ್ನು ಸ್ಮರಣೆಗೆ ತಂದುಕೊಂಡು ಪರಸ್ಪರ ಹೇಳಿಕೊಂಡರು.

'ಇವರಿಬ್ಬರೂ ಶ್ರೀಹರಿಯ ಅಂಶದಿಂದ ವಸುದೇವನ ಪುತ್ರರಾಗಿ ಅವತರಿಸಿದವರು. ಕೃಷ್ಣ ದೇವಕಿಯ ಉದರದಲ್ಲಿ ಜನಿಸಿದ. ಆದರೆ ವಸುದೇವ ಅವನನ್ನು ನಂದನ ಮನೆಯಲ್ಲಿ ರಹಸ್ಯವಾಗಿ ಬೆಳೆಸಿದ. ಅವನೆ ಪೂತನೆ, ತೃಣಾವರ್ತ ಮತ್ತಿಮರ ಧೇನುಕ ಕೇಶಿ ಶಂಖಚೂಡ ಮುಂತಾದ ದುಷ್ಟರನ್ನು ಸಂಹರಿಸಿದ. ಗೋ ಗೋಪರನ್ನು ಕಾಳ್ಗಿಚ್ಚಿನಿಂದ ಪಾರುಮಾಡಿದ. ಕಾಲಿಯನನ್ನು ಮರ್ದಿಸಿದ. ಇಂದ್ರನ ದರ್ಪವನ್ನು ಮುರಿದ. ಏಳು ದಿನಗಳ ಕಾಲ ಒಂದು ಕೈಯಿಂದ ಬೆಟ್ಟವನ್ನೆತ್ತಿ ಹಿಡಿದು ಗೋಕುಲವನ್ನು

ಮಳೆಗಾಳಿ ಸಿಡಿಲುಗಳಿಂದ ರಕ್ಷಿಸಿದ. ಗೋಪಿಯರು ಸದಾ ಇವನ ಮುಖದರ್ಶನದಿಂದಲೇ ಎಲ್ಲ ತಾಪಗಳನ್ನು ನೀಗಿಕೊಂಡರು. ಯದುವಂಶಕ್ಕೆ ಕೀರ್ತಿತಂದವನು ಈ ಕೃಷ್ಣ ಬಲರಾಮನೂ ಪ್ರಲಂಬ ಧೇನುಕ ಮುಂತಾದ ಅಸುರರನ್ನು ಸದೆ ಬಡಿದ' ಎಂದು.

ಚಾಣೂರ ಕೃಷ್ಣರಾಮರನ್ನು ಕರೆದು ಹೇಳಿದ. 'ನೀವಿಬ್ಬರೂ ಮಲ್ಲ ಯುದ್ಧದಲ್ಲಿ ಕುಶಲರು ಎಂದು ಕೇಳಿ ರಾಜ ನಿಮ್ಮನ್ನು ಕರೆಸಿದ್ದಾನೆ. ನಿಮ್ಮಂಥ ಗೊಲ್ಲರು ಯಾವಾಗಲೂ ಸಂತೋಷದಿಂದ ಜಟ್ಟಿ ಕಾಳಗವಾಡುತ್ತಲೆ ದನ ಮೇಸುತ್ತಾರೆ. ಅದರಿಂದ ನೀವೂ ನಾವೂ ಸೇರಿ ಜಟ್ಟಿಕಾಳಗವಾಡಿ ರಾಜನನ್ನು ಸಂತೋಷ ಪಡಿಸೋಣ.'

ಶ್ರೀಕೃಷ್ಣನಿಗೂ ಜಟ್ಟಿಕಾಳಗವೇ ಬೇಕಾಗಿತ್ತು. ಆದರೂ ಲೋಕೋಚಿತವಾಗಿ ನುಡಿದ. 'ನಾವು ನೀವು ಎಲ್ಲರೂ ಕಂಸನ ಪ್ರಜೆಗಳು. ಅದರಿಂದ ಅವನಿಗೆ ಇಷ್ಟವಾದುದನ್ನೇ ನಾವು ಮಾಡ ಬೇಕು. ಆದರೆ ನಾವು ಬಾಲಕರು. ನೀವು ದೊಡ್ಡವರು. ಪಂದ್ಯಗಳನ್ನು ಸಮಬಲರೊಳಗೆ ನಡೆಸಬೇಕು. ಇಲ್ಲದಿದ್ದರೆ ಪ್ರೇಕ್ಷಕರಿಗೆ ಪಾಪ ಬರುವುದು' ಎಂದು. ಚಾಣೂರ ನುಡಿದ. 'ನೀವೇನೂ ಬಾಲಕರಲ್ಲ. ಸಾವಿರ ಆನೆಗಳ ಬಲಉಳ್ಳ ಕುವಲಯಾಪೀಡವನ್ನು ಅನಾಯಾಸವಾಗಿ ಕೊಂದಿರಿ. ಅದರಿಂದ ನೀವು ದೊಡ್ಡವರೊಂದಿಗೆ ಪಂದ್ಯವಾಡಿದರೆ ತಪ್ಪೇನೂ ಇಲ್ಲ. ಕೃಷ್ಣ ನೀನು ನನ್ನಲ್ಲಿ ಪರಾಕ್ರಮ ತೋರು; ಬಲರಾಮ ಮುಷ್ಟಿಕನಲ್ಲಿ ಕುಸ್ತಿಯಾಡಲಿ.'

❖

ಅಧ್ಯಾಯ - ೪೨

ಅಧ್ಯಾಯ ಸಾರಾಂಶ

ಚಾಣೂರನ ಮಾತಿಗೆ ಒಪ್ಪಿ ಶ್ರೀಕೃಷ್ಣ ಅವರೊಡನೆ ಕುಸ್ತಿಗೆ ನಿಂತ. ಬಲರಾಮ ಮುಷ್ಟಿಕನ ಕಡೆಗೆ ನಡೆದ. ಇಬ್ಬರೂ ಸ್ಪರ್ಧಿಗಳು ತೊಳು ತೊಡೆಗಳನ್ನು ತಟ್ಟಿಕೊಂಡು ಒಬ್ಬರಿಗೊಬ್ಬರು ದೂರ ಸರಿಯುವುದು ಜೊತೆ ಸೇರುವುದು, ಸುತ್ತಲೂ ತಿರುಗುವುದು ತೋಳುಗಳಿಂದ ತೋಳುಗಳಲ್ಲಿ ಕಾಲುಗಳಿಂದ ಕಾಲುಗಳಲ್ಲಿ ಬಂಧಿಸುವುದು ಎಳೆದಾಡುವುದು ಮುಷ್ಟಿಗಳನ್ನು ಮುಷ್ಟಿಗಳಿಂದ ಮೊಣಕಾಲುಗಳನ್ನು ಮೊಣಕಾಲುಗಳಿಂದ ತಲೆಯನ್ನು ತಲೆಯಿಂದ ಎದೆಯನ್ನು ಎದೆಯಿಂದ ಹೊಡೆದುಕೊಳ್ಳುವುದು ಹಿಡಿದೆತ್ತಿ ಗಿರಗಿರನೆ ಸುತ್ತಿಸಿ ಎಸೆಯುವುದು, ಅಪ್ಪಿಹಿಡಿದು ಕೆಡಹುವುದು ಮೇಲೆ ಹಾರುವುದು ದೂರ ಸರಿಯುವುದು ದೂರ ತಳ್ಳುವುದು ಮಿಸುಕಾಡದಂತೆ ಒತ್ತಿ ಹಿಡಿಯುವುದು ಹೀಗೆ ಮಲ್ಲಯುದ್ಧದ ವರಸೆಗಳನ್ನು ತೋರಿದರು.

'ಬಾಲಕರೊಡನೆ ದೊಡ್ಡವರು ಸ್ಪರ್ಧಿಸುವುದು ಮಹಾ ಅನ್ಯಾಯ' ವೆಂದು ಸ್ತ್ರೀಯರು ಗುಂಪುಗುಂಪಾಗಿ ಸೇರಿ ಪರಸ್ಪರ ಹೇಳಿ ಕೊಂಡರು. 'ಇದು ಅನ್ಯಾಯ. ವಜ್ರದಂತೆ ಕಠೋರ ಶರೀರಉಳ್ಳ ದೊಡ್ಡ ಬೆಟ್ಟಗಳಂತಿರುವ ಮಲ್ಲರು ಎಲ್ಲಿ? ಇನ್ನೂ ಯೌವನವನ್ನು ಹೊಂದದಿರುವ ಅತ್ಯಂತ ಕೋಮಲ ಶರೀರದ ಬಾಲಕರು ಎಲ್ಲಿ? ಈ ಅನ್ಯಾಯ ನಡೆಯುತ್ತಿರುವುದನ್ನು ನೋಡಿ ಸುಮ್ಮನಿರುವುದು ಮಹಾಪಾಪ. ಅದನ್ನು ಪ್ರೋತ್ಸಾಹಿಸುವುದು ಇನ್ನೂ ಹೆಚ್ಚಿನ ಪಾಪ. ಆ ಮಕ್ಕಳ ಮುಖಕಮಲಗಳನ್ನು ನೋಡಿರಿ. ಎಷ್ಟು ಮನೋಹರ ವಾಗಿವೆ? ಕೃಷ್ಣ ಸುಂದರವಾದ ವನಮಾಲೆ ಧರಿಸಿ ಕೊಳಲೂದುತ್ತ ಬಲರಾಮನೊಂದಿಗೆ ಗೋವರ್ಧನ ಬೆಟ್ಟದಲ್ಲಿ ದನ ಮೇಸುತ್ತಾನೆ. ದೇವತೆಗಳು ಅವನ ಪಾದವನ್ನು ಅರ್ಚಿಸುತ್ತಾರೆ. ಗೋಪಿಯರು ಅದೇನು ಪುಣ್ಯ ಮಾಡಿರುವರೋ! ಲಾವಣ್ಯರಸವನ್ನು ಕಡೆದಾಗ ಆವಿರ್ಭವಿಸಿದಂತಿರುವ ಅವನ

ರೂಪ ಸೌಂದರ್ಯವನ್ನು ಕಣ್ಣುಗಳಿಂದ ಕುಡಿಯುತ್ತಾರೆ. ಆಭರಣ ವಸ್ತ್ರಗಳಿಂದಲ್ಲದೆ ಸ್ವಭಾವ ಸಿದ್ಧವೆ ಆಗಿರುವ ಸೌಂದರ್ಯ ಅದು. ಕ್ಷಣಕ್ಷಣಕ್ಕೂ ಹೊಸದಾಗಿ ಕಾಣುವಂಥಹದು. ಅವನ ಅನುಗ್ರಹವಿಲ್ಲದೆ ಅನ್ಯರಿಗೆ ನೋಡಲು ಸಿಗಲಾರದುದು. ಗೋಪಿಯರು ಹಾಲು ಕರೆಯುವುದು ಧಾನ್ಯ ಕುಟ್ಟುವುದು ಮೊಸರು ಕಡೆಯುವುದು ಮುಂತಾದ ಎಲ್ಲ ಗೃಹಕೃತ್ಯಗಳನ್ನು ಮಾಡುವಾಗಲೂ ಕೃಷ್ಣನನ್ನೇ ನೆನೆದು ಆನಂದಬಾಷ್ಪ ಸುರಿಸುತ್ತ ಗದ್ಗದ ಕಂಠದಿಂದ ಅವನ ಲೀಲೆಗಳನ್ನು ಹಾಡುತ್ತಾರೆ. ಕಾಲ ಕಳೆಯುತ್ತಾರೆ. ಅವನು ಬೆಳಿಗ್ಗೆ ಗೋವುಗಳೊಂದಿಗೆ ಗೋಕುಲ ದಿಂದ ಹೊರಗೆ ಹೋಗುವಾಗಲೂ ಸಂಜೆ ಹಿಂತಿರುಗಿ ಬರುವಾಗಲೂ ತಪ್ಪದೆ ಅವನ ನಗುಮೊಗವನ್ನು ನೋಡುತ್ತಾರೆ. ಅವರೆ ಪುಣ್ಯವತಿಯರು.'

ಹೀಗೆ ಸ್ತ್ರೀಯರು ಆತಂಕಪಡುವುದನ್ನು ಕಂಡು ಶ್ರೀಕೃಷ್ಣ ಚಾಣೂರನನ್ನು ಕೊಲ್ಲಲು ಸಂಕಲ್ಪಿಸಿದ. ವಜ್ರಾಯುಧ ದೇಟಿಗಿಂತಲೂ ಕಠೋರವಾದ ಕೃಷ್ಣನ ಮೈಏಟುಗಳಿಂದ ಚಾಣೂರನ ಮೈ ಜರ್ಜರಿತವಾಯಿತು. ಮತ್ತೆಮತ್ತೆ ಏಟುಗಳು ಬೀಳುತ್ತಿದ್ದುದರಿಂದ ಆತ ಪ್ರಾಣಸಂಕಟಕ್ಕೀಡಾದ. ಅವನು ಸಿಟ್ಟಿನಿಂದ ಎರಡೂ ಕೈಗಳನ್ನು ಮುಷ್ಟಿಮಾಡಿ ಗಿಡುಗದ ವೇಗದಿಂದ ಮೇಲೆ ನೆಗೆದು ಕೃಷ್ಣನ ಎದೆಗೆ ಗುದ್ದಿದ. ಕೃಷ್ಣನಿಗೆ ಅದು ಹೂಮಾಲೆಯಿಂದ ಆನೆಗೆ ಹೊಡೆ ದಂತಾಯಿತು. ಅವನು ಎರಡೂ ಕಾಲುಗಳಲ್ಲಿ ಹಿಡಿದು ಎತ್ತಿ ಗಿರಗಿರನೆ ತಿರುಗಿಸಿ ನೆಲಕ್ಕೆ ಅಪ್ಪಳಿಸಿದಾಗ ಚಾಣೂರ ತಲೆ ಒಡೆದು ಸತ್ತ. ಮುಷ್ಟಿಕನನ್ನೂ ಬಲರಾಮ ತಲೆಯಮೇಲೆ ಮುಷ್ಟಿಯಿಂದ ಬಲವಾಗಿ ಹೊಡೆದ. ಆಗ ಅವನೂ ಜರ್ಜರಿತನಾಗಿ ನಡುಗುತ್ತ ಬಾಯಿಂದ ರಕ್ತ ಕಾರುತ್ತ ಸತ್ತು ಬಿರುಗಾಳಿಗೆ ಸಿಲುಕಿದ ಮರದಂತೆ ನೆಲಕ್ಕೆ ಒರಗಿದ.

ಬಳಿಕ ಕೂಟನನ್ನು ಬಲರಾಮ ಎಡಗೈ ಮುಷ್ಟಿಯಿಂದ ಹೊಡೆದು ಕೊಂದ. ಛಲನನ್ನು ಕೃಷ್ಣ ಕಾಲಿಂದ ಹೊಡೆದು ತಲೆಯನ್ನು ಹಾರಿಸಿದ. ಕೋಸಲನನ್ನು ಎರಡು ತುಂಡಾಗಿ ಸೀಳಿ

ಒಗೆದ. ಪ್ರಧಾನಮಲ್ಲರು ಹೀಗೆ ಹತರಾದಾಗ ಉಳಿದವರು ಹೆದರಿ ಪಲಾಯನ ಮಾಡಿದರು. ಬಳಿಕ ಕೃಷ್ಣರಾಮರು ತಮ್ಮ ಜೊತೆಯ ಬಾಲಕರನ್ನೇ ಎಳೆದೆಳೆದು ತಂದು ಕುಸ್ತಿಯಾಡಿದರು. ವಾದ್ಯಗಳಿಗೆ ಸರಿಯಾಗಿ ಕಾಲುಕಡಗಗಳ ಧ್ವನಿ ಮಾಡುತ್ತ ಕುಣಿದರು. ಕಂಸನೊಬ್ಬನು ಹೊರತು ಎಲ್ಲ ಪ್ರೇಕ್ಷಕರೂ ಭಲೆಭಲೆ ಎಂದರು.

ಕಂಸ ಅಸಹನೆಯಿಂದ ಎಲ್ಲ ವಾದ್ಯ ಘೋಷಗಳನ್ನು ನಿಲ್ಲಿಸಿ 'ಈ ವಸುದೇವನ ಮಕ್ಕಳನ್ನು ನಗರದಿಂದಲೆ ಹೊರಗೆ ಅಟ್ಟಿರಿ. ಗೊಲ್ಲರ ಹಣಗಳನ್ನು ಕಸಿಯಿರಿ. ದುರ್ಬುದ್ಧಿಯಾದ ನಂದನನ್ನು ಸೆರೆಹಿಡಿಯಿರಿ. ವಸುದೇವ ಉಗ್ರಸೇನರನ್ನು ಪರಿವಾರ ಸಮೇತ ವಧ ಮಾಡಿರಿ' ಎಂದು ಕೂಗಾಡಿದ. ಆಗಲೆ ಶ್ರೀಕೃಷ್ಣ ಛಂಗನೆ ಹಾರಿ ಎತ್ತರವಾದ ಕಂಸನ ಸಿಂಹಾಸನದ ಮೇಲೇರಿ ಹೋದ. ಕಂಸ ತಟ್ಟನೆ ಎದ್ದು ಕತ್ತಿಗುರಾಣಿಗಳನ್ನು ಹಿಡಿದು ಆಗಸದಲ್ಲಿ ವೇಗವಾಗಿ ಗಿಡುಗನಂತೆ ಬಲಕ್ಕೂ ಎಡಕ್ಕೂ ತಿರುಗಿದ. ಆದರೆ ಗರುಡ ಹಾವನ್ನು ಹಿಡಿಯುವಂತೆ ಶ್ರೀಕೃಷ್ಣ ಕಂಸನನ್ನು ಹಿಡಿದ. ಅವನ ಕಿರೀಟ ಜಾರಿತು. ಕೂದಲುಗಳಲ್ಲಿ ಹಿಡಿದು ಸಿಂಹಾಸನ ದಿಂದ ಕೆಳಗೆ ರಂಗಸ್ಥಳಕ್ಕೆ ಎಸೆದ. ಅವನ ಮೇಲೆ ಧೊಪ್ಪನೆ ಬಿದ್ದ. ಎದೆಗೆ ಒದ್ದ. ಕ್ಷಣದಲ್ಲಿ ಅವನ ಪ್ರಾಣಗಳನ್ನು ಹೊರಗೆ ಕಳಿಸಿದ. ಸಿಂಹ ಆನೆಯನ್ನು ಸೆಳೆಯುವಂತೆ ಎಲ್ಲರ ಸಮಕ್ಷಮದಲ್ಲಿ ನೆಲದ ಮೇಲೆ ದರದರನೆ ಸೆಳೆದ. ಎಲ್ಲೆಡೆ ಹಾಹಾಕಾರವೆದ್ದಿತು.

ಕಂಸ ಭಯದಿಂದ ನೀರು ಕುಡಿವಾಗ ಉಣ್ಣುವಾಗ ಓಡಾಡುವಾಗ ಮಲಗುವಾಗ ಶ್ವಾಸೋಚ್ಛ್ವಾಸ ಮಾಡುವಾಗಲೂ ಕೂಡ ಕೃಷ್ಣನನ್ನೇ ನೆನೆಯುತ್ತಿದ್ದುದರಿಂದ ಅವನ ಶರೀರದಿಂದ ಅಲ್ಲಿ ಆವಿಷ್ಟನಾಗಿದ್ದ ಭೃಗುಮುನಿ ಹೊರಗೆ ಬಂದು ಕೃಷ್ಣನ ಸಾರೂಪ್ಯವನ್ನು ಪಡೆದ.

ಕಂಸನ ಎಂಟು ಮಂದಿ ಸೋದರರು ಕಂಕ ನ್ಯಗ್ರೋಧ ಮುಂತಾದವರು ಕೂಡ ಶ್ರೀಕೃಷ್ಣನಿಂದ ಹತರಾದರು. ದೇವದುಂದುಭಿ ಮೊಳಗಿದುವು. ಹೂಮಳೆಗರೆದು ದೇವತೆಗಳು ಸ್ತುತಿಸಿದರು. ಅಪ್ಸರೆಯರು ನಾಟ್ಯವಾಡಿದರು.

ಕಂಸ ಮೊದಲಾದವರ ಹೆಂಡಂದಿರು ಪತಿಗಳ ಶವಗಳನ್ನು ತಬ್ಬಿಕೊಂಡು 'ಹಾ ನಾಥ! ನೀನೂ ಸತ್ತೆ ನಮ್ಮನ್ನು ಸಾಯಿಸಿಬಿಟ್ಟೆ!' ಎಂದು ಮುಂತಾಗಿ ಗೋಳಾಡಿದರು. ಶ್ರೀಕೃಷ್ಣ ಅವರಿಗೆ ಸಮಾಧಾನ ಹೇಳಿ ಮೃತರಿಗೆ ಅಂತ್ಯ ಸಂಸ್ಕಾರ ಮಾಡಿಸಿದ.

ತಂದೆತಾಯಿಗಳನ್ನು ಬಂಧನದಿಂದ ಬಿಡಿಸಿ ಅವರ ಪಾದಗಳಿಗೆ ತಲೆಬಾಗಿ ನಮಿಸಿದರು ರಾಮಕೃಷ್ಣರು. ಅವರು ಮಕ್ಕಳನ್ನು ಜಗದೀಶ್ವರರೆಂದು ತಿಳಿದು ಕೈಮುಗಿದರು.

❖

ಅಧ್ಯಾಯ - ೪೩

ಅಧ್ಯಾಯ ಸಾರಾಂಶ

ದೇವಕೀ ವಸುದೇವರು ತನ್ನನ್ನು ಸಾಕ್ಷಾತ್ ಭಗವಂತನೆಂದು ತಿಳಿದಿ ದ್ದಾರೆ. ಅದಿನ್ನು ಸಾಕೆಂದು ಶ್ರೀಕೃಷ್ಣ ತನ್ನ ಬಂಧಕಶಕ್ತಿಯನ್ನು ಅವರ ಮೇಲೆ ಪ್ರಯೋಗಿಸಿ ಪುತ್ರವ್ಯಾಮೋಹವನ್ನು ಉಂಟು ಮಾಡಿದ.

'ಅಮ್ಮ ಅಪ್ಪ' ಎನ್ನುತ್ತ ಅವರಿಗೆ ಆನಂದ ಉಂಟುಮಾಡಿದ. 'ಅಮ್ಮ ಅಪ್ಪ! ನೀವು ನಮ್ಮ ಒಡನಾಟವನ್ನು ಸದಾ ಬಯಸು ತ್ತಿದ್ದರೂ ನಾವು ಪೌಗಂಡ ಕೈಶೋರ ವಯಸ್ಸುಗಳಲ್ಲಿ ನಿಮ್ಮ ಬಳಿ ಇರಲಾರದೆ ಹೋದೆವು. ತಂದೆತಾಯಿಗಳ ಬಳಿ ಅವರ ಲಾಲನೆಯಲ್ಲಿ ಸುಖ ಕಾಣಲಿಲ್ಲ. ಅವರ ಸೇವೆ ಮಾಡಲಿಲ್ಲ. ತಂದೆತಾಯಿಗಳ ಸೇವೆ ಮಾಡದವನು ಸತ್ತಮೇಲೆ, ನರಕದಲ್ಲಿ ಯಮದೂತರು ಅವನ ಶರೀರದ ಮಾಂಸವನ್ನೇ ಅವನಿಗೆ ತಿನ್ನಿಸುವರು. ವೃದ್ಧರಾದ ತಾಯಿತಂದೆಗಳು ಪತಿವ್ರತೆಯಾದ ಮಡದಿ ಎಳೆವಯಸಿನ ಮಗ. ಗುರು ಬ್ರಾಹ್ಮಣ ಶರಣಾಗತನಾದ ವ್ಯಕ್ತಿ- ಇವರನ್ನು ತಾನು ಸಮರ್ಥನಾಗಿದ್ದೂ ರಕ್ಷಣೆ ಮಾಡದಿದ್ದರೆ ಅವನು ಬದುಕಿದ್ದೂ ಸತ್ತಂತೆಯೆ. ಕಂಸನ ಭಯದಲ್ಲಿ ಉದ್ವಿಗ್ನರಾಗಿ ಬದುಕುತ್ತಿದ್ದ ನಿಮ್ಮನ್ನು ಕಾಪಾಡಲು ನಾವು ಸಣ್ಣವರು ಪರತಂತ್ರರಾಗಿದ್ದು ಅಸಮರ್ಥರಾಗಿದ್ದುದರಿಂದ ನಿಮ್ಮ ಸೇವೆ ಮಾಡದೆ ಇಷ್ಟುದಿನಗಳನ್ನು ವ್ಯರ್ಥವಾಗಿ ಕಳೆದು ಬಿಟ್ಟೆವು. ಅದನ್ನು ಕ್ಷಮಿಸಿರಿ.'

ಶ್ರೀಕೃಷ್ಣನ ಈ ಮಾತು ಕೇಳಿ ದೇವಕೀವಸುದೇವರು ಇನ್ನಷ್ಟು ಪುತ್ರಮೋಹದಲ್ಲಿ ಸಿಲುಕಿದರು. ತೊಡೆಯೇರಿಸಿಕೊಂಡು ಆಲಿಂಗಿಸಿ ಪರಮಾನಂದವನ್ನು ಹೊಂದಿದರು. ಅವರ ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿತು. ಕಂಠ ಗದ್ಗದವಾಯಿತು. ಏನೂ ಹೇಳಲು ತೋಚದೆ ಸುಮ್ಮನೆ ಇದ್ದರು.

ಶ್ರೀಕೃಷ್ಣ ಉಗ್ರಸೇನನನ್ನು ಸೆರೆಯಿಂದ ಬಿಡಿಸಿ

ರಾಜಸಿಂಹಾಸನದಲ್ಲಿ ಕೂಡಿಸಿ ಹೇಳಿದ, 'ಯಯಾತಿರಾಜನ ಶಾಪದಿಂದ ಯಾದವರು ಸಿಂಹಾಸನ ವೇರಬಾರದು. ನೀವೇ ಆಳಬೇಕು. ನಾನು ಸೇವೆ ಮಾಡುತ್ತಿರುವಾಗ ದೇವತೆಗಳೂ ಕೂಡ ತಲೆಬಾಗಿ ನಿಮಗೆ ಕಪ್ಪಕಾಣಿಕೆ ನೀಡುವರು' ಎಂದು. ಬಳಿಕ ಕಂಸನ ಭಯದಿಂದ ದಿಕ್ಕುದಿಕ್ಕುಗಳಿಗೆ ಓಡಿ ಹೋಗಿದ್ದ ಯದು ವೃಷ್ಣಿ ಅಂಧಕ ಮಧು ದಾಶಾರ್ಹ ಕುಕುರ ಮುಂತಾದ ಯಾದವರನ್ನು ಎಲ್ಲರನ್ನೂ ಕರೆಸಿಕೊಂಡು ಮಧುರೆಯಲ್ಲಿ ಸುಖವಾಗಿ ನೆಲೆಸುವಂತೆ ಮಾಡಿದ. ಅವರು ಎಲ್ಲ ದುಃಖಗಳಿಂದ ಮುಕ್ತರಾಗಿ ಮುಕ್ತರಂತೆ ವಾಸ ಮಾಡಿದರು. ಸದಾ ಶ್ರೀಕೃಷ್ಣನ ನಗುಮೊಗವನ್ನು ಕಂಡು ಆನಂದಿಸಿದರು. ಮುಕುಂದನ ಮುಖಕಮಲ ದರ್ಶನದಿಂದ ವೃದ್ಧರೂ ತರುಣರಂತಾದರು.

ಕೃಷ್ಣರಾಮರು ನಂದಗೋಪನ ಬಳಿಗೆ ಬಂದು, 'ಅಪ್ಪ ನಮ್ಮ ಬಂಧುಗಳು ನಮ್ಮ ಪೋಷಣೆ ರಕ್ಷಣೆಯಲ್ಲಿ ಅಶಕ್ತರಾಗಿ ನಿಮ್ಮಲ್ಲಿ ಬಿಟ್ಟು ಹೋದಾಗ ನೀವು ಸ್ವಂತ ಮಕ್ಕಳಂತೆ ನಮ್ಮನ್ನು ಸಾಕಿ ಬೆಳೆಸಿದಿರಿ. ನೀವೇ ನಮಗೆ ತಂದೆತಾಯಿಗಳು. ನೀವೀಗ ಗೋಕುಲಕ್ಕೆ ಹಿಂದಿರುಗಿರಿ. ನಾವು ಇಲ್ಲಿ ಬಂಧುಗಳು ಸುಖವಾಗಿ ವಾಸವಾಗಿರುವಂತೆ ಏರ್ಪಾಡು ಮಾಡಿ ನಿಮ್ಮನ್ನು ಕಾಣಲು ಬರುವೆವು.' ಹೀಗೆ ಹೇಳಿ ನಂದಗೋಪನಿಗೆ ವಸ್ತ್ರ ಆಭರಣ ಪಾತ್ರೆ ಪಗಡಿಗಳನ್ನು ನೀಡಿ ಅವನನ್ನೂ ಎಲ್ಲ ಗೊಲ್ಲರನ್ನೂ ಆದರದಿಂದ ಸತ್ಕರಿಸಿದರು. ನಂದಗೋಪ ಅವರನ್ನು ಅಪ್ಪಿಕೊಂಡು ಕಣ್ಣುಗಳಲ್ಲಿ ಆನಂದಬಾಷ್ಪ ತುಂಬಿಕೊಂಡು ಗೊಲ್ಲರೊಂದಿಗೆ ಗೋಕುಲಕ್ಕೆ ಪ್ರಯಾಣ ಮಾಡಿದ.

ವಸುದೇವ ಪುರೋಹಿತರಾದ ಗರ್ಗಾಚಾರ್ಯ ಮುಂತಾದ ಬ್ರಾಹ್ಮಣರಿಂದ ರಾಮಕೃಷ್ಣರಿಗೆ ಉಪನಯನ ಮಾಡಿಸಿದ. ದನಕರುಗಳನ್ನು ಚಿನ್ನದ ಹಾರ ರೇಶಿಮೆವಸ್ತ್ರ ಹೂಮಾಲೆಗಳಿಂದ ಅಲಂಕರಿಸಿ ಬ್ರಾಹ್ಮಣರಿಗೆ ದಕ್ಷಿಣೆಯಾಗಿ ನೀಡಿದ. ಕೃಷ್ಣರಾಮರ ಜನ್ಮದಿನದಂದು ಬ್ರಾಹ್ಮಣರಿಗೆ ಕೊಡಲು ಸಂಕಲ್ಪಿಸಿದ್ದ ಗೋದಾನ ವನ್ನೂ ಈಗ ಕೊಟ್ಟ ಜೊತೆಗೆ ಬ್ರಾಹ್ಮಣರಿಂದ ಕಂಸ ಅಪಹರಿಸಿದ್ದ ಗೋವುಗಳನ್ನೂ ತರಿಸಿ ಅವರಿಗೆ ಒಪ್ಪಿಸಿದ.

ರಾಮಕೃಷ್ಣರು ಉಪನೀತರಾಗಿ ಗುರುಕುಲವಾಸಕ್ಕೆ ಮೊದಲು ಗಾಯತ್ರಬ್ರಹ್ಮಚರ್ಯ ವ್ರತದೀಕ್ಷೆ ಪಡೆದು ಗಾಯತ್ರೀ ಮಂತ್ರಾಧ್ಯಯನ ಮಾಡಿದರು. ಮುಂದೆ ಉಜ್ಜಯಿನಿಯಲ್ಲಿ ಕಶ್ಯಪಗೋತ್ರದ ಸಾಂದೀಪನಿ ಮುನಿಯ ಬಳಿ ಗುರುಕುಲ ವಾಸರೂಪವಾದ ಬ್ರಾಹ್ಮ ಬ್ರಹ್ಮಚರ್ಯ ವ್ರತವನ್ನು ನಡೆಸಿದರು. ವೇದ ವೇದಾಂಗ ಉಪನಿಷತ್ತು ಧನುರ್ವೇದ ಧರ್ಮಶಾಸ್ತ್ರ ನ್ಯಾಯಶಾಸ್ತ್ರ ಮೀಮಾಂಸಾಶಾಸ್ತ್ರ ರಾಜನೀತಿಗಳನ್ನು ಅರವತ್ತ ನಾಲ್ಕು ದಿನಗಳಲ್ಲಿ ಎಲ್ಲ ಅರವತ್ತನಾಲ್ಕು ಲಲಿತಕಲೆಗಳನ್ನು ಸರ್ವ ವಿದ್ಯೆಗಳಿಗೂ ಆದ್ಯಪ್ರವರ್ತಕರಾದ ರಾಮಕೃಷ್ಣರು ಗುರುಗಳಿಂದ ಒಮ್ಮೆ ಕೇಳಿದ ಮಾತ್ರಕ್ಕೇ ಕರಗತ ಮಾಡಿಕೊಂಡರು. ಗುರುದಕ್ಷಿಣೆ ಕೇಳಲು ಗುರುಗಳನ್ನು ಒತ್ತಾಯಿಸಿದರು. ಗುರುಗಳು ಗುರುಪತ್ನಿಯೊಂದಿಗೆ ಸಮಾಲೋಚಿಸಿ ಅದ್ಭುತ, ಮಹಿಮರಾದ ಕೃಷ್ಣರಾಮರಲ್ಲಿ ಪ್ರಭಾಸದ ಬಳಿ ಮಹಾಸಮುದ್ರ ದಲ್ಲಿ ಮುಳುಗಿ ಸತ್ತಿದ್ದ ಮಗನನ್ನು ಬದುಕಿಸಿ ತಂದು ಕೊಡಲು ಕೇಳಿಕೊಂಡರು. ಹಾಗೇ ಆಗಲಿ ಎಂದು ಹೇಳಿ ರಾಮಕೃಷ್ಣರು ರಥವನ್ನೇರಿ ಪ್ರಭಾಸಕ್ಕೆ ಹೋಗಿ ಸಮುದ್ರತೀರದಲ್ಲಿ ಕ್ಷಣಕಾಲ ಕುಳಿತರು. ಇದನ್ನು ತಿಳಿದ ಸಮುದ್ರರಾಜ ಬೇಗನೆ ಕಾಣಿಕೆಗಳನ್ನು ತಂದು ಹಿಡಿದು ನಿಂತ. 'ನೀನು ತೆರೆಗಳ ಮೂಲಕ ನುಂಗಿರುವ ಬಾಲಕನಾದ ಗುರುಪುತ್ರನನ್ನು ತಂದೊಪ್ಪಿಸು' ಎಂದು ಶ್ರೀಕೃಷ್ಣ ಆಜ್ಞೆ ಮಾಡಿದ. 'ಗುರುಪುತ್ರನನ್ನು ನುಂಗಿದವನು ನಾನಲ್ಲ, ಪಂಚಜನನೆಂಬ ಅಸುರ' ಎಂದ ಸಮುದ್ರರಾಜ. ಶಂಖರೂಪಧಾರಿ ಜಲಚರ ರೂಪನಾದ ಆ ಅಸುರನನ್ನು ಶ್ರೀಕೃಷ್ಣ ಕೊಂದು ಅವನ ಮೈಯಲ್ಲಿ ಉಂಟಾಗಿದ್ದ ಪಾಂಚಜನ್ಯ ಶಂಖವನ್ನು ಎತ್ತಿಕೊಂಡು ಬಲರಾಮನೊಂದಿಗೆ ಯಮಧರ್ಮರಾಜನ ಸಂಯಮನೀ ನಗರಕ್ಕೆ ಪ್ರಯಾಣ ಮಾಡಿದ. ಅಲ್ಲಿ ಯಮ ಗುರುಪುತ್ರನನ್ನು ನೀಡಿದ. ಅವನನ್ನು ಗುರುವಿಗೆ ತಂದೊಪ್ಪಿಸಿದರು ರಾಮಕೃಷ್ಣರು.

❖

ಕಂಸವಧ ಮಾಡಿ ವಸುದೇವ-ದೇವಕಿಯರ ಬಳಿಗೆ ಬಂದ ಕೃಷ್ಣ ಅವರಿಗೆ ತನ್ನಲ್ಲಿ ಸಾಕ್ಷಾತ್ ಭಗವಂತನೆಂಬ ಭಾವನೆ ಬಂದಿರುವುದನ್ನು ಕಂಡು ಅದನ್ನು ಮರೆಮಾಡಲು ಮುಗ್ಧ ಬಾಲಕನಂತೆ ತನ್ನನ್ನು ತೋರಿಕೊಂಡ.

ತತ್ ಕ್ಷಂತುಮರ್ಹಥಸ್ತಾತ ಮಾತರ್ನೌ ಪರತಂತ್ರಯೋಃ।
ಅಕುರ್ವತೋರ್ವಾಂ ಶುಶ್ರೂಷಾಂ ಕ್ಲಿಷ್ಟಯೋರ್ದುರ್ಹೃದೋರ್ಭೃಶಮ್ ೯

ಅಪ್ಪ! ಅಮ್ಮ! ನಾವು ಸಣ್ಣವರಾಗಿದ್ದು ಪರತಂತ್ರರಾಗಿದ್ದರಿಂದ, ನೀವು ಕಂಸನಿಂದ ಬಹಳ ಕಷ್ಟ ಅನುಭವಿಸುತ್ತಿದ್ದರೂ ಬಲು ದುಃಖಿತರಾಗಿದ್ದರೂ, ನಿಮ್ಮ ಸೇವೆಯನ್ನು ನಾವು ಮಾಡದೆ ಹೋದೆವು. ಅದನ್ನು ನೀವು ಕ್ಷಮಿಸಿರಿ.

ಇಲ್ಲಿ 'ದೊಡ್ಡವರಲ್ಲಿ ಶ್ರೀಕೃಷ್ಣನು ತೋರಿದ ಈ ಬಗೆಯ ವಿನೀತ ವರ್ತನೆ ನಿಜವಾಗಿ ಅವನು ಸಣ್ಣವನೇ ಎನ್ನುವ ಭಾವನೆಯನ್ನು ಉಂಟುಮಾಡುತ್ತದೆ. ನಿಜವಾಗಿ ಮಾನವನಾದ ಕೃಷ್ಣನನ್ನು ಭಾಗವತ ಅಮಾನುಷ ದೇವತ್ವಕ್ಕೆ ಏರಿಸಿರಬಹುದೇನೋ ಎನಿಸುತ್ತದೆ. ಗೋವರ್ಧನೋದ್ಧಾರ ಮುಂತಾದುದು ಅತಿಮಾನುಷವಾಗಿರುವುದರಿಂದ ಹೀಗೇ ಹೇಳಬೇಕೆನಿಸುತ್ತದೆ! ಅಥವಾ ಅವೆಲ್ಲವೂ ಪ್ರಕ್ಷಿಪ್ತವಿರಬಹುದು. 'ಕೃಷ್ಣನೊಬ್ಬ ಆದರ್ಶ ಮಾನವ'ನೆನ್ನುವುದನ್ನು ಬಿಟ್ಟು, ಹೀಗೆ ಅವನ ವ್ಯಕ್ತಿತ್ವವನ್ನು ಅದ್ಭುತ ಅನೈಸರ್ಗಿಕ ಅತಿಮಾನುಷವಾಗಿ ಅತಿರಂಜಿತವಾಗಿ ಬಣ್ಣಿಸುವುದು ಭಾಗವತದಲ್ಲಿ ಬಹಳವಾಗಿ ಕಂಡುಬರುತ್ತದೆ' ಎಂದು ಆಧುನಿಕ ವಿಮರ್ಶಕರು ಹೇಳುತ್ತಾರೆ. ಅದಕ್ಕೆ ಭಾಗವತ ಹೇಳುತ್ತದೆ- 'ಸರ್ವೋತ್ತಮನಾದ ಕೃಷ್ಣ 'ಅಪ್ಪ, ಅಮ್ಮ!' ಎಂದು ಹಿರಿಯರಲ್ಲಿ ಭಕ್ತಿ ತೋರುವುದು ತನ್ನ ನಿಜವಾದ ದೊಡ್ಡತನವನ್ನು ಮರೆಮಾಚುವುದಕ್ಕಾಗಿ, ಹೊರತು ನಿಜವಾದ ಸಣ್ಣತನವನ್ನು ಪ್ರದರ್ಶಿಸುವುದಕ್ಕಾಗಿ ಅಲ್ಲ. ಅವನಲ್ಲಿ ನಿಜವಾಗಿ ಸಣ್ಣತನವಿಲ್ಲ' ಎಂದು-

'ಮಾ ಭೂದಿತಿ ನಿಜಾಂ ಮಾಯಾಂ ತತಾನ' (ಭಾಗ.೧೦.೪೩.೧)

'ಇತಿ ಮಾಯಾಮನುಷ್ಯಸ್ಯ ಹರೇರ್ವಿಶ್ವಾತ್ಮನೋ ಗಿರಾ ಮೋಹಿತೌ '
(ಭಾಗ.೧೦.೪೩.೧೦)

'ಭಾಗವತ ಹೇಳುವುದರಲ್ಲಿ ನಂಬಿಕೆಯಿಲ್ಲ, ಅದು ತಾನೇ ಕೃಷ್ಣನನ್ನು ದೇವತ್ವಕ್ಕೆ ಏರಿಸಿದ ಪುರಾಣ' ಎನ್ನುವುದಾದರೆ, ವಾಮನಪುರಾಣ ವಚನವನ್ನು ನೋಡಬಹುದು. ಅದು ಕೃಷ್ಣನ ವ್ಯಕ್ತಿತ್ವವನ್ನು ವೈಭವೀಕರಿಸಲೆಂದು ಹೊರಟ ಪುರಾಣವಲ್ಲ ಎಂದು ಈ ವಿಮರ್ಶಕರು ಒಪ್ಪಿದ್ದಾರೆ. ಅಲ್ಲಿ ಹೇಳಿದೆ-

ಸರ್ವೋತ್ತಮೋಽಪಿ ಭಗವಾನ್ ಗುಣಭಾವಂ ಜನಾರ್ದನಃ।
ದರ್ಶಯೇದ್ ವಸುದೇವಾದೇರಾತ್ಮನೋ ಜೀವತಾಮಪಿ।

ಅಜ್ಞಾಶಕ್ತ್ಯಾದಿ ಭಾವಸ್ತು ಕುತಸ್ತಸ್ಯಾಖಿಲೇಶಿತುಃ ।
ಕುತೋ ದೋಷಾಃ ಸರ್ವಗುಣಪೂರ್ಣಸ್ಯಾನಂದವಾರಿಧೇಃ ॥
ಇತಿ ವಾಮನೇ ॥

'ಭಗವಾನ್ ಶ್ರೀಕೃಷ್ಣ ತಾನು ನಿಜವಾಗಿ ಸರ್ವೋತ್ತಮನಾಗಿದ್ದರೂ ವಸುದೇವ ಮುಂತಾದವರ ಮುಂದೆ ತಾನು ಸಣ್ಣವನೆಂದು ತೋರಿಕೊಳ್ಳುತ್ತಾನೆ. ತನ್ನನ್ನು ಜೀವನೆಂದೂ ಕೂಡ 'ಆತ್ಮಾನಂ ಮಾನುಷಂ ಮನ್ಯೇ' ಎಂದು ಶ್ರೀರಾಮ ಹೇಳಿದಂತೆ, ಪ್ರದರ್ಶಿಸುತ್ತಾನೆ. ಆದರೆ ನಿಜವಾಗಿ ಸರ್ವೇಶನಾದ ಅವನಲ್ಲಿ ಅಜ್ಞಭಾವ ಅಶಕ್ತಭಾವ ಮುಂತಾದುದು ಹೇಗೆ ಇರಲು ಸಾಧ್ಯ? ಸಕಲಗುಣಪೂರ್ಣನಾದ ಆನಂದಸಾಗರನಾದ ಆತನಲ್ಲಿ ದೋಷಗಳು ಹೇಗೆ ಇರಲು ಸಾಧ್ಯ?' ಎಂದು ವಾಮನಪುರಾಣ ಹೇಳಿದೆ.

ಈ ನಿರ್ಣಯವಾಕ್ಯ ವಿಜಯಧ್ವಜೀಯಪ್ರಕಾರ, ಶ್ರೀಕೃಷ್ಣ ಸಾಕ್ಷಾದ್ ಭಗವಂತನೆನ್ನುವ ಬಗ್ಗೆ ಎಲ್ಲ ಸಂದೇಹ ಪರಿಹಾರಕವಾಗಿ ಸ್ಕಂಧದ ಕೊನೆಯಲ್ಲಿದೆ. ಬೇರೆ ವ್ಯಾಖ್ಯಾನಕಾರರ ಪ್ರಕಾರ ಇಲ್ಲಿಯೇ ಕಾಣುತ್ತದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ತ್ರಿಚತ್ವಾರಿಂಶೋಽಧ್ಯಾಯಃ

❖

ಅಧ್ಯಾಯ - ೪೪

ಅಧ್ಯಾಯ ಸಾರಾಂಶ

ಬೃಹಸ್ಪತಿಯ ಅವತಾರನೂ ಅವನ ಶಿಷ್ಯನೂ ಆದ ಉದ್ಧವ ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯನಾದ ಏಕಾಂತ ಭಕ್ತನಾದ ಮಹಾಬುದ್ಧಿಶಾಲಿಯಾದ ಮಂತ್ರಿ. ಶ್ರೀಕೃಷ್ಣ ಅವನ ಮೂಲಕ ಗೋಪಿಯರಿಗೆ ತನ್ನ ಸಂದೇಶವನ್ನು ಕಳಿಸಿದ. ಉದ್ಧವ ಪ್ರಭುವಿನ ಸಂದೇಶವನ್ನು ಹೊತ್ತು ರಥವನ್ನೇರಿ ಸೂರ್ಯಾಸ್ತಸಮಯದಲ್ಲಿ ನಂದಗೋಕುಲಕ್ಕೆ ಹೋಗಿ ಸೇರಿದ. ಆಗ ಗೋಕುಲಕ್ಕೆ ಹಿಂತಿರುಗಿ ಬರುತ್ತಿದ್ದ ಗೋವುಗಳ ಗೊರಸಿನ ದೂಳಿಗಳಿಂದ ಉದ್ಧವನ ರಥ ಮುಚ್ಚಿಹೋಯಿತು. ಹಸುಗಳ ಸಂಗಕ್ಕಾಗಿ ಕೊಬ್ಬಿದ ಗೂಳಿಗಳು ಪರಸ್ಪರ ಸ್ಪರ್ಧಿಸುತ್ತಿದ್ದುವು. ಹಸುಗಳು ಕೆಚ್ಚಲ ಭಾರದಿಂದ ನಡೆಯಲು ಕಷ್ಟವಾಗುತ್ತಿದ್ದರೂ ಕರುಗಳ ಬಳಿಗೆ ಧಾವಿಸುತ್ತಿದ್ದವು. ಕರುಗಳು ಅತ್ತಇತ್ತ ನೆಗೆಯುತ್ತಿದ್ದುವು.

ಹಸುಗಳ ಹಾಲು ಕರೆಯುವ ಧ್ವನಿ ವೇಣುಧ್ವನಿ ಗೋಪಿಯರು ರಾಮಕೃಷ್ಣರ ಲೀಲೆಗಳನ್ನು ಹಾಡುವಧ್ವನಿ ಗೊಲ್ಲರು ಅಗ್ನಿ ಸೂರ್ಯ ಅತಿಥಿ ಗೋ ವಿಪ್ರ ಪಿತೃ ದೇವತೆಗಳನ್ನು ಅರ್ಚಿಸುವ ಧ್ವನಿಗಳಿಂದ ಗೋಕುಲ ಎಲ್ಲೆಡೆ ತುಂಬಿಹೋಗಿತ್ತು. ಸುತ್ತಲೂ ಹಕ್ಕಿಗಳ ದುಂಬಿಗಳ ಧ್ವನಿಯಿಂದ ತುಂಬಿದ ಅರಳಿದ ಹೂಗಳ ವನಗಳು ಹಂಸಕಾರಂಡವಗಳಿಂದ ತುಂಬಿದ ತಾವರೆಕೊಳಗಳು ಗೋಕುಲಕ್ಕೆ ಶೋಭೆ ತಂದಿದ್ದವು.

ಶ್ರೀಕೃಷ್ಣನ ಪ್ರೀತಿಯ ಸೇವಕನಾದ ಉದ್ಧವ ಬಂದೊಡನೆ ನಂದ ಆಲಿಂಗಿಸಿ ಸತ್ಕರಿಸಿದ. ಪರಮಾನ್ನ ಉಣಿಸಿ ಮೆತ್ತೆಯ ಮೇಲೆ ಕೂಡಿಸಿ ಕಾಲೊತ್ತಿ ಕುಶಲಪ್ರಶ್ನೆ ಮಾಡಿದ. 'ನಮ್ಮ ಗೆಳೆಯ ವಸುದೇವ ಬಂಧಮುಕ್ತನಾಗಿ ಮಕ್ಕಳೊಂದಿಗೆ ಬಂಧುಗಳೊಂದಿಗೆ ಸುಖವಾಗಿರುವನೆ? ಸಜ್ಜನರಾದ ಧಾರ್ಮಿಕರಾದ ಯಾದವರನ್ನು ಸದಾ ದ್ವೇಷಿಸಿದ ಕಂಸ ಪರಿವಾರ ಸಮೇತನಾಗಿ ಹತನಾದುದು ನಮ್ಮ ಭಾಗ್ಯ. ನಮ್ಮ ಕೃಷ್ಣನೀಗ ನಮ್ಮನ್ನೂ ಗೋಕುಲವನ್ನೂ ನೆನೆಯುತ್ತಿರುವನಲ್ಲವೆ? ನಮ್ಮನ್ನು ನೋಡಲು ಇಲ್ಲಿಗೆ

ಬರುವನಲ್ಲವೆ? ಆಗ ಅವನ ಸುಂದರವಾದ ನಗುಮೊಗವನ್ನು ನಾವು ನೋಡುವೆವು. ಅವನು ನಮ್ಮನ್ನು ಕಾಳ್ಗಿಚ್ಚಿನಿಂದ ಗಾಳಿ ಮಳೆಗಳಿಂದ ವೃಷಭಾಸುರ ಕಾಲಿಯ ಮುಂತಾದ ಭಯಂಕರ ಮೃತ್ಯುದೂತರಿಂದ ಕಾಪಾಡಿದ್ದಾನೆ. ಅವನ ಲೀಲೆಗಳನ್ನು ಕುಡಿನೋಟ ನಗು ಮಾತುಗಳನ್ನು ನೆನೆದು ನಾವು ನಮ್ಮೆಲ್ಲ ಕೆಲಸಕಾರ್ಯಗಳನ್ನೂ ಲೋಪ ಮಾಡಿಕೊಂಡಿದ್ದೇವೆ. ಈ ನದೀತೀರ ಬೆಟ್ಟ ವೃಂದಾವನ ಪ್ರದೇಶಗಳಲ್ಲಿ ಮೂಡಿರುವ ಕೃಷ್ಣನ ಹೆಜ್ಜೆ ಗುರುತುಗಳನ್ನು ಕಂಡಾಗಲೆಲ್ಲ ನಮ್ಮ ಮನಸ್ಸು ಅವನಲ್ಲಿ ತನ್ಮಯವಾಗುತ್ತದೆ.

ಕೃಷ್ಣರಾಮರು ಗೋಕುಲಕ್ಕೆ ಬಂದುದು ಮಹತ್ತಾದ ದೇವಕಾರ್ಯ ಸಾಧನೆಗಾಗಿ ಎನ್ನುವುದು ನನಗೆ ಗೊತ್ತು. ಗರ್ಗಾಚಾರ್ಯರು ಅಂದೇ ನನಗೆ ಹಾಗೆ ಹೇಳಿದ್ದರು. ಹತ್ತು ಸಾವಿರ ಆನೆಬಲವುಳ್ಳ ಕಂಸನನ್ನು ಚಾಣೂರ ಮುಷ್ಟಿಕ ಮಲ್ಲರನ್ನು ಕುವಲಯಾಪೀಡ ಆನೆಯನ್ನು ಅನಾಯಾಸವಾಗಿ ಕೊಂದ. ಮುನ್ನೂರು ಮೊಳಗಳಷ್ಟು ಉದ್ದವಾದ ದೃಢವಾದ ಶಿವಧನುಸ್ಸನ್ನು ಎತ್ತಿ ಮದ್ದಾನೆ ಕಬ್ಬಿನ ಜಲ್ಲೆಯನ್ನು ಮುರಿಯುವಂತೆ ಮುರಿದ. ಒಂದು ಕೈಯಿಂದ ಏಳುದಿನಗಳ ಕಾಲ ಬೆಟ್ಟವನ್ನು ಎತ್ತಿಹಿಡಿದ. ಪ್ರಲಂಬ ಧೇನುಕ ಅರಿಷ್ಟ ತೃಣಾವರ್ತ ಬಕ ಮುಂತಾದ ದೈತ್ಯರು ದೇವತೆಗಳನ್ನೂ ಅಸುರರನ್ನೂ ಪರಾಭವಗೊಳಿಸಿದವರು. ಅವರನ್ನು ಕೂಡ ಅನಾಯಾಸವಾಗಿ ಇವರು ವಧಿಸಿದರು.'

ಮಗನ ಲೀಲೆಗಳನ್ನು ಒಂದೊಂದಾಗಿ ನಂದಗೋಪ ಬಣ್ಣಿಸುವಾಗ ಯಶೋದೆ ಕೇಳಿ ಕಣ್ಣೀರು ಸುರಿಸಿದಳು. ಪುತ್ರವಾತ್ಸಲ್ಯದಿಂದ ಅವಳ ಸ್ತನಗಳಿಂದ ಹಾಲು ಸುರಿಯಿತು.

ಉದ್ಧವನೆಂದ 'ನಂದ, ಯಶೋದೆ, ನೀವೇ ಧನ್ಯರು. ಗಾಢವಾದ ವಿಷ್ಣುಭಕ್ತಿ ನಿಮ್ಮಲ್ಲಿ ಇದೆ. ಕೃಷ್ಣರಾಮರು ಪ್ರಪಂಚಕ್ಕೆ ಮೂಲ ಕಾರಣರು. ಮೂಲಕಾರಣವಾದ ಪ್ರಕೃತಿಗೂ ನಿಯಾಮಕರು. ಸರ್ವಾಂತರ್ಯಾಮಿಗಳು. ಅಂತ್ಯಕಾಲದಲ್ಲಿ ನೆನೆದವರಿಗೆ ಮುಕ್ತಿ ಕೊಡುವವರು. ಭೂಭಾರಹರಣಕ್ಕಾಗಿ ಬಂದು ಮನುಷ್ಯರಂತೆ ತೋರಿಕೊಳ್ಳುತ್ತಾರೆ. ಅವರಲ್ಲಿ ನೀವು ಭಕ್ತಿ

ಮಾಡಿರುವಿರಿ ಎಂದ ಮೇಲೆ ನೀವಿನ್ನೇನೂ ಮಾಡಬೇಕಾಗಿಲ್ಲ. ಅವರು ಸ್ವಲ್ಪಕಾಲದಲ್ಲಿಯೇ ಗೋಕುಲಕ್ಕೆ ಬರುತ್ತಾರೆ. ಅವರಿಗೆ ಜೀವಿಗಳಲ್ಲಿ ಯೋಗ್ಯತೆ ಮೀರಿ ಯಾರೂ ಪ್ರಿಯರೂ ಇಲ್ಲ, ಆಗದವರೂ ಇಲ್ಲ. ಸಜ್ಜನರು ಅವನಿಗೆ ಪ್ರೀತಿಪಾತ್ರರು. ಅವರ ರಕ್ಷಣೆಗಾಗಿ ಅವತಾರ ಮಾಡುತ್ತಾನೆ.

ಹೀಗೆ ಉದ್ಧವ ನಂದಗೋಪರು ಮಾತನಾಡಿಕೊಳ್ಳುತ್ತಿದ್ದಂತೆ ರಾತ್ರಿಯೇ ಕಳೆಯಿತು. ಗೋಪಿಯರು ಎದ್ದು ದೀಪಗಳನ್ನು ಹಚ್ಚಿ ಮನೆ ಸಾರಿಸಿ ರಂಗೋಲಿ ಹಾಕಿ ಮೊಸರು ಅಕ್ಷತೆಕಾಳುಗಳಿಂದ ಮನೆಯ ಹೊಸ್ತಿಲು ಮುಂತಾದವುಗಳ ದೇವತೆಗಳನ್ನು ಪೂಜಿಸಿದರು. ಮೊಸರು ಕಡೆದರು. ದೀಪದ ಬೆಳಕಿನಲ್ಲಿ ಅವರು ಧರಿಸಿದ ಆಭರಣಗಳ ರತ್ನಗಳು ಹೊಳೆದುವು. ಮೊಸರು ಕಡೆವಾಗ ಕೈಬಳೆಗಳು ಚಲಿಸಿದುವು. ನಿತಂಬ ಸ್ತನ ಹಾರಗಳು ಚಲಿಸಿದುವು. ಕೆಂಪು ಕುಂಕುಮದಿಂದ ಲೇಪಿತವಾದ ಕೆನ್ನೆಗಳಲ್ಲಿ ಓಲೆಗಳು ಶೋಭಿಸಿದುವು. ಅವರು ಕೃಷ್ಣಲೀಲೆಗಳನ್ನು ಹಾಡುವ ಧ್ವನಿಯೂ ಮೊಸರು ಕಡೆಯುವ ಧ್ವನಿಯೂ ಮುಗಿಲು ಮುಟ್ಟುತ್ತಿತ್ತು. ಎಲ್ಲ ದಿಕ್ಕುಗಳ ಅಮಂಗಳಗಳನ್ನು ಕಳೆಯುತ್ತಿತ್ತು.

ಸೂರ್ಯೋದಯವಾದಾಗ ಗೋಕುಲದ ದ್ವಾರದಲ್ಲಿ ಬಂಗಾರದ ರಥ ನಿಂತಿದ್ದುದನ್ನು ಕಂಡು ಇದು ಯಾರ ರಥ? ಅಕ್ರೂರನೆ ತಿರುಗಿ ಬಂದನೇನು? ನಮ್ಮನ್ನು ಪ್ರತ್ಯಕ್ಷವಾಗಿ ಸಾಯಿಸಿ ತನ್ನ ಒಡೆಯನಾದ ಕಂಸನ ಪ್ರೇತಕ್ಕೆ ತೃಪ್ತಿ ನೀಡಲು ಬಂದನೇನು? ಎಂದು ಗೋಪಿಯರು ಹೇಳಿಕೊಳ್ಳುತ್ತಿದ್ದಾಗ ಉದ್ಧವ ನಿತ್ಯಕರ್ಮಗಳನ್ನು ತೀರಿಸಿ ಅಲ್ಲಿಗೆ ಬಂದ.

❖

ಅಧ್ಯಾಯ - ೪೫

ಅಧ್ಯಾಯ ಸಾರಾಂಶ

ಕಮಲನಯನನಾದ ಉದ್ಧವ ಪೀತಾಂಬರ ಉಟ್ಟು ಕಮಲದ ಮಾಲೆ ಧರಿಸಿದ್ದ. ಹೊಳೆವ ಚಿನ್ನದ ಕರ್ಣಕುಂಡಲಗಳನ್ನು ಧರಿಸಿದ್ದ. 'ಯಾರಿವನು? ಕೃಷ್ಣನಂತೆ ವೇಷ ಭೂಷಣಗಳನ್ನು ಧರಿಸಿದ್ದಾನೆ, ಸುಂದರನಾಗಿದ್ದಾನೆ!' ಎಂದು ಉತ್ಸುಕತೆಯಿಂದ ಗೋಪಿಯರು ಬಂದು ಸುತ್ತುವರಿದರು. ಕೃಷ್ಣನ ಸಂದೇಶವನ್ನು ಹೊತ್ತು ತಂದ್ದಿದಾನೆ ಎಂದು ತಿಳಿದಾಗ ಅವರು ಚೆನ್ನಾಗಿ ಸತ್ಕರಿಸಿದರು. ಏಕಾಂತದಲ್ಲಿ ಕೂಡಿಸಿ ಲಜ್ಜೆಯಿಂದ ನಸುನಕ್ಕು ಓರೆನೋಟ ಬೀರಿ ಭಕ್ತಿಯಿಂದ ತಲೆಬಾಗಿ ಕೇಳಿದರು.

'ತಂದೆತಾಯಿಗಳ ಸಂತೋಷಕ್ಕಾಗಿ ಪ್ರಭು ನಿನ್ನನ್ನು ಕಳಿಸಿದನೆ? ಏಕೆಂದರೆ ನಮ್ಮ ನೆನೆಪು ಅವನಿಗೆ ಬರಲಾರದು. ಬಂಧುಗಳ ಸ್ನೇಹಪಾಶವನ್ನು ಸನ್ಯಾಸಿಗಳಿಗೂ ಬಿಡುವುದು ಕಷ್ಟ. ಬೇರೆ ನಮ್ಮಂಥವರಲ್ಲಿ ಮಾಡುವ ಪ್ರೀತಿ ಸ್ವಾರ್ಥಪೂರಿತ ವಾದುದು. ಅದು ಸ್ವಾರ್ಥಸಿದ್ಧಿಯಾಗುವವರೆಗೆ ಮಾತ್ರ ಪ್ರದರ್ಶನಗೊಳ್ಳುತ್ತದೆ. ಹೂಗಳಲ್ಲಿ ದುಂಬಿಗಳು ಮಾಡುವ ಪ್ರೀತಿಯಂತೆ. ಐಶ್ವರ್ಯವನ್ನು ಕಳಕೊಂಡಾಗ ವಿಟನನ್ನು ವೇಶ್ಯೆ ಬಿಡುತ್ತಾಳೆ. ಬಲಹೀನನಾದ ರಾಜನನ್ನು ಪ್ರಜೆಗಳು, ಅಧ್ಯಯನ ವಾದ ಬಳಿಕ ಗುರುವನ್ನು ಶಿಷ್ಯರು, ದಕ್ಷಿಣೆ ಕೊಟ್ಟ ಬಳಿಕ ಯಜಮಾನನನ್ನು ಋತ್ವಿಜರು, ಮರದಲ್ಲಿ ಹಣ್ಣು ತೀರಿದಾಗ ಹಕ್ಕಿಗಳು, ಊಟವಾದ ಬಳಿಕ ಮನೆಯನ್ನು ಅತಿಥಿಗಳು, ಕಾಡು ಸುಟ್ಟುಹೋದಾಗ ಅದನ್ನು ಮೃಗಗಳು ಬಿಟ್ಟುಹೋಗುವುದು ಸಹಜ ತಾನೇ?'

ಹೀಗೆ ಪ್ರಣಯಕೋಪದಿಂದ ಕೃಷ್ಣನನ್ನು ಆಕ್ಷೇಪಿಸುತ್ತಲೇ ಗೋಪಿಯರು ಕೃಷ್ಣನಲ್ಲೆ ತನ್ಮಯರಾಗಿ, ಪರಪುರುಷರ ಮುಂದೆ ಸಡಿಲಾದ ತಮ್ಮ ಬಟ್ಟೆಗಳನ್ನು ಸರಿಪಡಿಸಿಕೊಳ್ಳುವ ಲೋಕಾಚಾರದ ಪರಿವೆಯೂ ಇಲ್ಲದವರಾಗಿದ್ದರು.

ಒಬ್ಬಳು ಗೋಪಿ ಕೃಷ್ಣನ ಸಮಾಗಮವನ್ನೇ ಚಿಂತಿಸುತ್ತ ಒಂದು

ದುಂಬಿಯನ್ನು ನೋಡಿ ಅದನ್ನು ಕೃಷ್ಣನ ದೂತನೆಂದು ಕಲ್ಪಿಸಿ ಕೊಂಡು ನುಡಿದಳು.

ಓ ದುಂಬಿಯೆ, ಮೋಸಗಾರನಾದ ಕೃಷ್ಣನ ಕಡೆಯವನು ನೀನು. ನಮ್ಮ ಸವತಿಯರಾದ ಮಧುರೆಯ ಹೆಣ್ಣುಗಳ ಎದೆಯಲ್ಲಿ ಚಲಿಸುವ ಮಾಲೆಯ ಕುಂಕುಮದಿಂದ ಕೆಂಪಾದ ನಿನ್ನ ಮೀಸೆಗಳಿಂದ ನಮ್ಮನ್ನು ಸ್ಪರ್ಶಿಸಬೇಡ. ಮುನಿಸಿಕೊಂಡಿರುವ ನಮ್ಮನ್ನು ಸ್ಪರ್ಶಿಸಿ ಮರುಳು ಮಾಡಿ ಕೃಷ್ಣನ ಬಳಿಗೆ ಕರೆದೊಯ್ಯಲು ಯತ್ನಿಸಬೇಡ. ಅವನು ಮಧುರೆಯ ಹೆಣ್ಣುಗಳ ಅಧರಾಮೃತವನ್ನೆ ಪಾನಮಾಡಲಿ. ಆ ನಾಗರಿಕ ಸ್ತ್ರೀಯರ ಒಡನಾಟ ಸಿಕ್ಕಾಗ ನಾವು ಹಳ್ಳಿಯ ಹೆಣ್ಣುಗಳು ಅವನಿಗೆ ಏಕೆ? ಅವರ ಒಡನಾಟವೇ ಅವನಿಗೆ ಯಾದವರ ಸಭೆಯಲ್ಲಿ ಗೌರವದಿಂದ ಹೇಳಕೊಳ್ಳಲು ಯೋಗ್ಯತಾನೆ?

ಹೊಸಹೊಸ ಹೂಗಳನ್ನೇ ಅರಸುತ್ತ ಹೋಗುವ ನಿನಗೆ ಸರಿಯಾದ ಜೊತೆಗಾರ ಅವನು. ಇಂಥ ಕೃಷ್ಣನ ಪಾದಗಳನ್ನು ಲಕ್ಷ್ಮಿ ಹೇಗೆ ಆಶ್ರಯಿಸಿರುವಳೊ! ಅದೂ ಸರಿಯೆ. ಏಕೆಂದರೆ ಅವಳೂ ನಮ್ಮಂತೆಯೆ ಅವನ ಸರಸೋಕ್ತಿಗಳಿಗೆ ಮರುಳಾಗಿದ್ದಾಳೆ.

ಮನೆ ಮಠವಿಲ್ಲದ ವನವಾಸಿಗಳಾದ ನಮ್ಮ ಮುಂದೆ ಕೃಷ್ಣನ ಲೀಲೆಗಳನ್ನು ಏಕೆ ಹಾಡುವಿ? ಮಧುರೆಯ ಹೆಣ್ಣುಗಳ ಮುಂದೆ ಹಾಡು. ಅವರನ್ನಾಲಿಂಗಿಸಿ ಅವರೆದೆಯ ಸಂತಾಪವನ್ನು ಕಳೆಯುತ್ತಾನೆ ಕೃಷ್ಣ. ಅದರಿಂದ ಕೃಷ್ಣನ ಯಶೋಗಾನವನ್ನು ಕೇಳಿ ಸಂತುಷ್ಟರಾಗಿ ಅವರು ನಿನಗೆ ಏನು ಬೇಕಾದರೂ ಕೊಡಬಲ್ಲರು. ನಾವೇನು ಕೊಡಬಲ್ಲೆವು? ಮೂಲೋಕದಲ್ಲಿ ಕೃಷ್ಣನ ಕಪಟದ ನಗುವಿಗೆ ವಶರಾಗದ ಹೆಣ್ಣುಗಳು ಯಾರು? ಮಹಾಲಕ್ಷ್ಮಿಯೆ ಅವನ ಚರಣದಾಸಿ ಯಾಗಿದ್ದಾಳೆ. ಹೀಗಾಗಿ ಅವನು ನಮ್ಮ ಬಳಿಗೆ ಬರಲಾರ. ನಮಗೆ ಇನ್ನು ಕೃಷ್ಣ ಕೃಷ್ಣ ಎಂಬ ನಾಮಜಪ ಒಂದೇ ಉಳಿದಿದೆ.

ರಾಮನಾಗಿ ಇವನೇ ಕಪಟದಿಂದ ವಾಲಿಯನ್ನು ಕೊಂದ. ಶೂರ್ಪಣಖೆಯ ಕಿವಿ ಮೂಗುಗಳನ್ನು ತರಿದ. ಬಲಿಯನ್ನು ಪಾತಾಳಕ್ಕೆ ಮೆಟ್ಟಿದ. ಬಣ್ಣದಲ್ಲಿ ಮಾತ್ರವಲ್ಲದೆ ಚಾರಿತ್ರ್ಯದಲ್ಲಿಯೂ

ಕಪ್ಪಾದ ಈತನೊಂದಿಗೆ ಮೈತ್ರಿಯ ಒಪ್ಪಂದದ ಮಾತೇ ಇಲ್ಲ. ಆದರೂ ಅವನ ಲೀಲೆಗಳನ್ನು ಹೇಳುವ ಕೇಳುವ ಸುಖವನ್ನು ಮಾತ್ರ ನಾವು ಬಿಟ್ಟಿರಲಾರೆವು. ಏಕೆಂದರೆ ಅವನು ಜನಿಸಿದಂದಿನಿಂದಲೇ ಮಾಡಿದ ಲೀಲೆಗಳು ಒಂದೊಂದೂ ಕೇಳಲು ಕಿವಿಗೆ ಅಮೃತದಂತಿದೆ. ಒಮ್ಮೆ ಸವಿದರೆ ಸಾಕು, ರಾಗದ್ವೇಷಗಳು ಕಳೆಯುತ್ತವೆ, ಜ್ಞಾನಭಕ್ತ್ಯಾದಿಗಳು ಬೆಳೆಯುತ್ತವೆ. ಜ್ಞಾನಾಮೃತವನ್ನು ಸವಿದು ಭಗವಂತನೆಂಬ ಆಕಾಶದಲ್ಲಿ ಆನಂದದಿಂದ ಹಕ್ಕಿಗಳಂತೆ ಹಾರುತ್ತದೆ ಮನಸ್ಸು. ಅಂಥ ಶ್ರೀಕೃಷ್ಣ ನಮ್ಮನ್ನು ಪ್ರತ್ಯಕ್ಷವಾಗಿ ಸ್ಪರ್ಶಿಸಿದ್ದಾನೆ, ಆಲಿಂಗಿಸಿದ್ದಾನೆ ಎಂದರೆ ಅವನ ಕಾರುಣ್ಯಕ್ಕೆ ಎಣೆಯುಂಟೆ?

ಬೇಡನ ಸಂಗೀತಕ್ಕೆ ಮಾರುಹೋಗುವ ಮುಗ್ಧ ಹೆಣ್ಣುಜಿಂಕೆಗಳಂತೆ ನಾವು ಕೃಷ್ಣನ ಏಕಾಂತದ ಸರಸೋಕ್ತಿಯನ್ನು ಆಲಿಸಿ ನಿಜವೆಂದು ನಂಬಿದೆವು. ಏಕೆಂದರೆ ನಾವು ಅಜ್ಞರು. ಆದರೂ ಒಂದು ಬಾರಿಯಾದರೂ ಅವನ ನಖಕ್ಷತದ ಸುಖಕರವಾದ ಪೀಡೆಯನ್ನು ನಾವು ಅನುಭವಿಸಿದ್ದೇವೆ. ಅವನ ವೃತ್ತಾಂತವನ್ನು ಹೇಳು.

ಪ್ರಿಯಮಿತ್ರ, ನಾವು ನಿನಗೇನು ಬೇಕೋ ಅದನ್ನು ಕೊಡುತ್ತೇವೆ. ನಮ್ಮನ್ನು ಕೃಷ್ಣನ ಬಳಿಗೆ ಹೇಗೆ ಕರೆದೊಯ್ಯುವೆ, ಹೇಳು. ನಾವು ಅವನನ್ನು ಬಿಟ್ಟಿರಲಾರೆವು. ಅಗುರುಚಂದನ ಪರಿಮಳಯುಕ್ತವಾದ ಅವನ ಹಸ್ತವನ್ನು ನಾವು ಹಿಂದೆ ಹಿಡಿದುಕೊಂಡಿದ್ದೆವು. ಮುಂದೆ ಎಂದಾದರೂ ಅದನ್ನು ನಮ್ಮ ತಲೆ ಮೇಲಿಡುವನೆ? ಎಂದು? ಹೇಗೆ? ಹೇಳು.

ಹೀಗೆ ಕೃಷ್ಣದರ್ಶನಾಕಾಂಕ್ಷಿಗಳಾದ ಗೋಪಿಯರು ನುಡಿದುದನ್ನು ಉದ್ಧವ ಕೇಳಿ ಕೃಷ್ಣನ ಸಂದೇಶಗಳಿಂದ ಸಂತೈಸುತ್ತ ನುಡಿದ.

ನಿಮ್ಮ ಮನಸ್ಸು ಕೃಷ್ಣನಲ್ಲಿ ಸಮರ್ಪಿತವಾಗಿರುವುದರಿಂದ ನೀವೆ ಧನ್ಯರು, ಲೋಕಪೂಜ್ಯರು. ದಾನ ವ್ರತ ತಪಸ್ಸು ಮುಂತಾದವುಗಳಿಂದ ಮಾತ್ರ ಲಭ್ಯವಾದ ಉತ್ತಮವಾದ ಭಕ್ತಿಯನ್ನು ನೀವು ಸಂಪಾದಿಸಿಕೊಂಡಿರುವಿರಿ. ಇಂಥ ಭಕ್ತಿ ಮುನಿಗಳಿಗೂ ದುರ್ಲಭ. ಪತಿ ಪುತ್ರ ಮಿತ್ರ ಬಂಧು ಎಲ್ಲವೂ

ಶ್ರೀಕೃಷ್ಣನೆ ಎನ್ನುವ ಸರ್ವಾತ್ಮಭಾವ ನಿಮಗೆ ಲಭಿಸಿದೆ. ವಿರಹದ ಮೂಲಕ ಪ್ರಭು ನಿಮಗೆ ಮಾಡಿದ ಪರಮಾನುಗ್ರಹವಿದು. ನಾನೀಗ ನಿಮಗಾಗಿ ತಂದಿರುವ ಪ್ರಭುವಿನ ಪ್ರಿಯಸಂದೇಶವನ್ನು ಹೇಳುವೆನು ಕೇಳಿರಿ-

'ನಿಮಗೆ ನನ್ನ ವಿಯೋಗ ಯಾವ ಕಾಲದಲ್ಲಿಯೂ ಸರ್ವಥಾ ಇಲ್ಲ. ಏಕೆಂದರೆ ನಾನು ಎಲ್ಲರೊಳಗೂ ಇದ್ದೇನೆ. ಸ್ವಪ್ನ ಸುಷುಪ್ತಿ ಜಾಗರಗಳನ್ನು ಜೀವಿಗಳಿಗೆ ನಾನೇ ಉಂಟುಮಾಡುತ್ತೇನೆ. ಅವು ಜೀವಿಗಳ ವಶವಲ್ಲ. ಜ್ಞಾನಸಾಧನವಾದ ಯೋಗ ಸಮಾಧಿ ತಪಸ್ಸು ಇಂದ್ರಿಯ ನಿಗ್ರಹಗಳೆಲ್ಲವೂ ಜ್ಞಾನಿಗಳಿಗೆ ನನ್ನ ಸಾಕ್ಷಾತ್ಕಾರ ಕ್ಕಾಗಿಯೇ ಇವೆ. ನದಿಗಳೆಲ್ಲವೂ ಹರಿಯುವುದು ಸಮುದ್ರವನ್ನು ಸೇರುವುದ ಕ್ಕಾಗಿ. ನಿಮ್ಮ ಹೊರಗಣ್ಣಿಗೆ ನಾನು ದೂರವಿರುವುದು ನಿಮ್ಮ ಮನಸ್ಸಿಗೆ ಹತ್ತಿರವಾಗುವುದಕ್ಕಾಗಿ, ಧ್ಯಾನದಲ್ಲಿ ನಿಮಗೆ ಲಭ್ಯನಾಗುವುದಕ್ಕಾಗಿ. ಸ್ತ್ರೀಯರಿಗಾಗಲಿ, ಪುರುಷರಿಗಾಗಲಿ, ಅವರ ಮನಸ್ಸು ಪ್ರಿಯತಮರು ದೂರದಲ್ಲಿದ್ದರೆ ಅವರಲ್ಲಿ ಆಸಕ್ತವಾಗುವಷ್ಟು ಹತ್ತಿರವಿದ್ದರೆ ಆಸಕ್ತವಾಗುವುದಿಲ್ಲ. ಅದರಿಂದ ಬೇರೆ ಎಲ್ಲ ಆಲೋಚನೆಗಳನ್ನು ಬಿಟ್ಟು ನನ್ನನ್ನೇ ಧ್ಯಾನಿಸಿ ನೀವು ನನ್ನನ್ನು ಹೊಂದುವಿರಿ. ಹಿಂದಿನ ಜನ್ಮದಲ್ಲಿ ಹೀಗೆ ನನ್ನನ್ನು ಧ್ಯಾನಿಸಿದ್ದರಿಂದಲೇ ಈ ಜನ್ಮದಲ್ಲಿ ನನ್ನೊಂದಿಗೆ ರಾಸಕ್ರೀಡೆ ಯಾಡಿದಿರಿ.'

ಹೀಗೆ ಕೃಷ್ಣನ ಸಂದೇಶವನ್ನು ಕೇಳಿದಾಗ ಗೋಪಿಯರಿಗೆ ಸಂತೋಷವಾಯಿತು. ಅವರು ಪುನಃ ಕೇಳಿದರು, 'ಉದ್ಧವ, ಕೃಷ್ಣನೀಗ ಮಧುರೆಯ ಹೆಣ್ಣುಗಳಿಗೆ ಪ್ರಿಯನೇ ಆಗಿರುತ್ತಾನೆ, ಅವರ ಪ್ರೇಮ ಪಾಶಕ್ಕೆ ವಶನಾಗಿರುತ್ತಾನೆ. ಹೇಗೆ ವಶನಾಗದಿರು ತ್ತಾನೆ? ಆಗಲಿ. ಅವರು ಗುಂಪು ಸೇರಿ ಮಾತನಾಡುವಾಗ ಪ್ರಣಯಕ್ರೀಡೆಯಲ್ಲಿ ಆಡುವ ಸರಸೋಕ್ತಿಗಳ ಪ್ರಸ್ತಾಪ ಬಂದಾಗ ಕೃಷ್ಣ ನಮ್ಮನ್ನು ಆಗ ಸ್ಮರಿಸುವನೆ? ನಮ್ಮೊಡನೆ ರಾಸಕ್ರೀಡೆಯಾಡಿದ ಆ ರಾತ್ರಿಗಳನ್ನು ಸ್ಮರಿಸುವನೆ? ವಿರಹ ದುಃಖದಿಂದ ಒಣಗುವ ಗೋಕುಲವನ್ನು ತನ್ನ ಅಂಗಸ್ಪರ್ಶದಿಂದ ಪುನಶ್ಚೇತನಗೊಳಿಸಲು ಬರುವನೆ? ಏಕೆ ಬರುತ್ತಾನೆ? ಅವನಿಗೆ ರಾಜ್ಯ ಸಿಕ್ಕಿದೆ, ಶತ್ರುಗಳು

ಹತರಾಗಿದ್ದಾರೆ. ನಗರದ ನಾರಿಯರೊಡನೆ ವಿಹರಿಸಿ ತೃಪ್ತನಾಗುತ್ತಾನೆ, ತಾನೆ? ಎಲ್ಲ ಬಂಧುಗಳೂ ಜೊತೆಗೆ ಇರುತ್ತಾರೆ. ಸ್ವತಃ ಲಕ್ಷ್ಮೀಪತಿ, ಆಪ್ತಕಾಮ, ವನವಾಸಿಗಳಾದ ನಮ್ಮಿಂದಾಗಲಿ ಪುರವಾಸಿಗಳಾದ ಸ್ತ್ರೀಯರಿಂದಾಗಲಿ ಅವನಿಗೆ ಏನು ಪ್ರಯೋಜನ?

ಆಸೆಗಳನ್ನು ತೊರೆಯುವುದರಲ್ಲಿಯೇ ಪರಮಸುಖವೆಂದು ವೇಶ್ಯೆಯಾದ ಪಿಂಗಳೆ ಹೇಳಿದ್ದಾಳೆ. ಅದನ್ನು ತಿಳಿದಿದ್ದರೂ ಕೃಷ್ಣನ ಆಗಮನದ ಆಸೆ ಬಿಡಲು ನಮಗೆ ಸಾಧ್ಯವಾಗುತ್ತಿಲ್ಲ. ಸ್ವರಮಣನಾದ್ದ ರಿಂದ ತನ್ನನ್ನು ಅಪೇಕ್ಷಿಸದಿದ್ದರೂ ಲಕ್ಷ್ಮಿ ಅವನನ್ನು ಆಗಲುವುದಿಲ್ಲ ವೆಂದ ಮೇಲೆ ನಾವೆಷ್ಟರವರು? ಕೃಷ್ಣ ಆಟವಾಡಿದ ಈ ನದೀತೀರ ಬೆಟ್ಟ ವನಪ್ರದೇಶಗಳು ಗೋವುಗಳು ವೇಣುಧ್ವನಿಗಳು ನಮಗೆ ಪುನಃ ಪುನಃ ಕೃಷ್ಣನ ನೆನಪುಗಳನ್ನು ತರುವುವು. ಸೌಂದರ್ಯದ ನೆಲೆವೀಡಾದ ಅವನ ಹೆಜ್ಜೆ ಗುರುತುಗಳನ್ನು ಮರೆಯಲು ನಾವು ಶಕ್ತರಾಗಲಾರೆವು. ಕೃಷ್ಣನ ನಸುನಗೆ ನೋಟ ಸರಸೋಕ್ತಿಗಳನ್ನು ಹೇಗೆ ಮರೆಯಬಲ್ಲೆವು? ಹೇ ನಾಥ, ರಮಾನಾಥ ಗೋವಿಂದ. ನಿನ್ನನ್ನು ಕಾಣದೆ ದುಃಖ ಸಾಗರದಲ್ಲಿ ಮುಳುಗಿರುವ ಗೋಕುಲವನ್ನು ಉದ್ಧರಿಸು.'

❖

ಅಧ್ಯಾಯ - ೪೬

ಅಧ್ಯಾಯ ಸಾರಾಂಶ

ಕೃಷ್ಣನ ಸಂದೇಶಗಳಿಂದ ಗೋಪಿಯರು ವಿರಹದುಃಖವನ್ನು ಮರೆತರು. ಕೃಷ್ಣಭಕ್ತನೆಂದು ಉದ್ಧವನನ್ನು ಸತ್ಕರಿಸಿದರು. ಗೋಪಿಯರನ್ನು ಸಂತೈಸುವುದಕ್ಕಾಗಿ ಉದ್ಧವ ಗೋಕುಲದಲ್ಲಿ ಕೆಲವು ತಿಂಗಳ ಕಾಲ ವಾಸಮಾಡಿದ. ಕೃಷ್ಣಲೀಲೆಗಳನ್ನು ಹಾಡುತ್ತ ಸಂತೋಷಪಡಿಸಿದ. ಅದರಿಂದ ಅವನು ವಾಸಮಾಡಿದ ದಿನಗಳೆಲ್ಲವೂ ಅವರಿಗೆ ಕ್ಷಣಗಳಂತೆ ಕಳೆದುವು. ನದಿ ಬೆಟ್ಟ ವನ ಪ್ರದೇಶಗಳನ್ನು ತೋರಿಸಿ 'ಕೃಷ್ಣ ಇಲ್ಲಿ ಹೇಗೆ ವಿಹಾರ ಮಾಡಿದ, ಇಲ್ಲಿ ಹೇಗೆ ವಿಹಾರಮಾಡಿದ' ಎಂದು ಕೇಳುತ್ತ ಅವರಿಗೆ ಮತ್ತೆಮತ್ತೆ ಕೃಷ್ಣನ ಸ್ಮರಣೆಯನ್ನು ತಂದುಕೊಟ್ಟ .

ಕೃಷ್ಣನಲ್ಲೇ ತನ್ಮಯರಾಗಿದ್ದ ಗೋಪಿಯರಿಗೆ ನಮಸ್ಕರಿಸಿ ಹೇಳಿದ 'ಸ್ತ್ರೀಯರಾದರೂ ನೀವು ಕೃಷ್ಣನಲ್ಲಿ ದೃಢಭಕ್ತಿಯನ್ನು ಹೊಂದಿರುವಿರಿ. ಅದರ ಫಲವಾಗಿ ರಾಸೋತ್ಸವದಲ್ಲಿ ಕೃಷ್ಣ ನಿಮ್ಮ ಮೇಲೆ ಮಾಡಿದ ಪರಮಾನುಗ್ರಹವನ್ನು ಸದಾ ಗಾಢವಾಗಿ ಪ್ರೀತಿಸುವ ಲಕ್ಷ್ಮಿಗಾಗಲಿ ಸುಂದರ ದೇವಾಂಗನೆಯರಿಗಾಗಲಿ ಮಾಡಲಿಲ್ಲ. ಇನ್ನು ಬೇರೆ ಸ್ತ್ರೀಯರ ಪಾಡೇನು? ನಿಮ್ಮ ಪಾದಧೂಳಿ ನನಗೆ ಸಿಗಲಿ. ಅದಕ್ಕಾಗಿ ನಿಮ್ಮ ಪಾದಧೂಳಿಯನ್ನು ಹೊರುವ ವೃಂದಾವನದ ಗಿಡಬಳ್ಳಿಗಳಲ್ಲಿ ಏನಾದರೊಂದಾಗಿ ನಾನು ಜನಿಸಲು ಬಯಸುತ್ತೇನೆ. ರಮಾಬ್ರಹ್ಮಾದಿ ದೇವತೆಗಳು ಹೃದಯದಲ್ಲಿ ಆರಾಧಿಸುವ ಕೃಷ್ಣನ ಪಾದಕಮಲಗಳನ್ನು ನೀವು ಸ್ತನಗಳ ಮೇಲಿರಿಸಿಕೊಂಡು ಆಲಿಂಗಿಸಿ ತಾಪಗಳನ್ನು ಕಳೆದುಕೊಂಡಿರುವಿರಿ. ಮೂಲೋಕವೂ ಪಾವನವಾಗುವಂತೆ ಕೃಷ್ಣಲೀಲೆಗಳನ್ನು ಹಾಡುವ ನಿಮ್ಮ ಪಾದದೂಳಿಯನ್ನು ಪುನಃ ಪುನಃ ವಂದಿಸುವೆನು.'

ಉದ್ಧವ ಗೋಪಿಯರ ಅನುಜ್ಞೆ ಪಡೆದು ನಂದ ಯಶೋದೆಯರನ್ನೂ ಗೊಲ್ಲರನ್ನೂ ಬೀಳ್ಕೊಂಡು ರಥವನ್ನೇರಿದ. ನಂದ ಮುಂತಾದವರು ಬಗೆಬಗೆಯ ಕಾಣಿಕೆಗಳನ್ನು ತಂದು

ಹೇಳಿದರು. 'ನಮ್ಮ ಮನೋ ವಾಕ್ ಕಾಯಗಳು ಕೃಷ್ಣನ ಆರಾಧನೆಯಲ್ಲಿಯೇ ತೊಡಗಿರಲಿ. ಜನ್ಮಜನ್ಮಗಳಲ್ಲಿ ಕೃಷ್ಣಭಕ್ತಿ ದೊರಕಲಿ'

ಉದ್ಧವ ಮಧುರೆಗೆ ಹಿಂತಿರುಗಿದ. ಶ್ರೀಕೃಷ್ಣನಿಗೆ ಪ್ರಣಾಮ ಮಾಡಿ ಗೋಕುಲವಾಸಿಗಳ ಭಕ್ತ್ಯುದ್ರೇಕವನ್ನು ಬಣ್ಣಿಸಿ ಹೇಳಿದ. ಕೃಷ್ಣ ಬಲರಾಮ ಉಗ್ರಸೇನರಿಗೆ ಗೋವಳರು ನೀಡಿದ ಕಾಣಿಕೆಗಳನ್ನು ಅರ್ಪಿಸಿದ.

❖

ಅಧ್ಯಾಯ - ೪೭

ಅಧ್ಯಾಯ ಸಾರಾಂಶ

ತನ್ನ ಅಂಗಸಂಗದ ಬಯಕೆಯಿಂದ ಪೀಡಿತಳಾಗಿದ್ದ ಕುಬ್ಜೆಯ ಮನೆಗೆ ಶ್ರೀಕೃಷ್ಣ ಉದ್ಧವನೊಂದಿಗೆ ಬಂದ. ಅವಳು ಒಡನೆ ಆಸನದಿಂದ ಎದ್ದು ಸಖಿಯರೊಂದಿಗೆ ಇದಿರುಗೊಂಡಳು. ಆಸನ ಮುಂತಾದ ಉಪಚಾರಗಳಿಂದ ಸತ್ಕರಿಸಿದಳು. ಉದ್ಧವನನ್ನೂ ಹಾಗೇ ಸತ್ಕರಿಸಿದಳು. ಉದ್ಧವ ಅವಳು ಕೊಟ್ಟ ಆಸನವನ್ನು ಸ್ಪರ್ಶಿಸಿ, ಪ್ರಭುವಿನ ಬಳಿ ಸಮಾನವಾಗಿ ಕುಳ್ಳಿರಬಾರದೆಂದು ನೆಲದಲ್ಲಿ ಕುಳಿತ.

ಬಳಿಕ ಶ್ರೀಕೃಷ್ಣ ಬೆಲೆಬಾಳುವ ದಂತದ ಮಂಚವನ್ನೇರಿದ. ಕುಬ್ಜೆ ಸ್ನಾನ ಅನುಲೇಪನ ವಸ್ತ್ರಾಭರಣಾದಿಗಳಿಂದ ಸುಸಜ್ಜಿತಳಾಗಿ ನಾಚಿ ನಸುನಗುತ್ತ ಓರೆನೋಟ ಬೀರುತ್ತ ಕೃಷ್ಣನ ಬಳಿಗೆ ಬಂದಳು. ಕೃಷ್ಣ ಅವಳ ಕೈಹಿಡಿದು ಮಂಚದಲ್ಲಿ ಕೂಡಿಸಿಕೊಂಡ. ಕೃಷ್ಣನಿಗೆ ಗಂಧ ನೀಡಿದ ಪುಣ್ಯಲೇಶದಿಂದ ಅವಳಿಗೆ ಈ ಭಾಗ್ಯ ದೊರಕಿತ್ತು.

ಕಾಮತಪ್ತವಾದ ಎದೆ ಕಣ್ಣುಗಳಿಗೆ ಕೃಷ್ಣನ ಪಾದಗಳನ್ನು ಒತ್ತಿಕೊಂಡು ಅವುಗಳ ಸುಗಂಧವನ್ನು ಆಘ್ರಾಣಿಸಿ ತಾಪವನ್ನು ಕಳೆದುಕೊಂಡಳು. ಆನಂದಮೂರ್ತಿಯಾದ ಭಗವಂತನನ್ನು ಎದೆಯ ಮೇಲಿರಿಸಿಕೊಂಡು ಆಲಿಂಗಿಸಿದಳು.

'ಪ್ರಿಯತಮ, ನೀನು ಕೆಲವು ದಿನಗಳ ಕಾಲ ಇಲ್ಲಿ ಇರು, ನನ್ನೊಂದಿಗೆ ರಮಿಸು. ನಿನ್ನ ಸಂಗವನ್ನು ನಾನು ಬಿಟ್ಟಿರಲಾರೆ' ಎಂದಳು.

ಅವಳಿಗೆ ಶ್ರೀಕೃಷ್ಣ ಕಾಮತೃಪ್ತಿಯ ವರ ನೀಡಿ ಉದ್ಧವನೊಂದಿಗೆ ತನ್ನ ಸರ್ವಸಂಪದ್‌ಭರಿತವಾದ ಅರಮನೆಗೆ ನಡೆದ. ಸರ್ವೇಶ್ವರೇಶ್ವರನಾದ ಕೃಷ್ಣನನ್ನು ಒಲಿಸುವುದು ಬಲುಕಷ್ಟ. ಒಲಿಸಿಯೂ ಅಲ್ಪವಾದ ವಿಷಯಸುಖವನ್ನು ಬಯಸುವವನು ಮೂರ್ಖನೆ ಸರಿ.

ಶ್ರೀಕೃಷ್ಣ ಅಕ್ರೂರನನ್ನು ಪಾಂಡವರ ವೃತ್ತಾಂತವನ್ನು ತಿಳಿದು ಬರಲು ಹಸ್ತಿನಾವತಿಗೆ ಕಳಿಸುವ ಉದ್ದೇಶದಿಂದ ಅವನ ಮನೆಗೆ ಬಂದ. ಬಲರಾಮ ಉದ್ಧವರೂ ಜೊತೆಗೆ ಬಂದರು.

ಬಂಧುಗಳಾದ ಮೂವರು ಪುರುಷೋತ್ತಮರು ತನ್ನ ಮನೆಗೆ ಬರುವುದನ್ನು ದೂರದಿಂದಲೆ ಕಂಡು ಅಕ್ರೂರ ಸಂಭ್ರಮದಿಂದ ಇದಿರುಗೊಂಡು ಆಲಿಂಗಿಸಿ ಅಭಿನಂದಿಸಿದ. ಅಕ್ರೂರ ಕೃಷ್ಣನನ್ನೂ ಬಲರಾಮನನ್ನೂ ನಮಿಸಿದ. ಉದ್ಧವನನ್ನು ಆಲಿಂಗಿಸಿದ. ಅವರು ಮೂವರೂ ಅಕ್ರೂರನನ್ನು ನಮಸ್ಕರಿಸಿದರು. ಅಕ್ರೂರ ಕೃಷ್ಣರಾಮರ ಕಾಲು ತೊಳೆದು ಆ ನೀರನ್ನು ಆಸ್ವಾದಿಸಿ ತಲೆಯಲ್ಲಿ ಧರಿಸಿದ. ದಿವ್ಯಗಂಧ ಮಾಲ್ಯ ಅಭರಣಾದಿಗಳಿಂದ ಸತ್ಕರಿಸಿದ. ಪಾದಗಳನ್ನು ತೊಡೆಯ ಮೇಲಿರಿಸಿಕೊಂಡು ಒತ್ತಿ ಹೇಳಿದ- 'ನಮ್ಮ ಅದೃಷ್ಟದಿಂದ ನೀವು ಪಾಪಿ ಕಂಸನನ್ನು ವಧಿಸಿದಿರಿ. ಯದುಕುಲವನ್ನು ಪಾವನಗೊಳಿಸಿದಿರಿ. ನೀವು ಜಗತ್ತಿಗೆ ಕಾರಣರು, ಜಗದ್ ವ್ಯಾಪಕರು. ನೀವು ನಿರ್ಮಿಸಿದ ವಿಶ್ವವನ್ನು ನೀವೇ ಪ್ರವೇಶಿಸಿರುವಿರಿ. ಎಲ್ಲ ಚೇತನ ಅಚೇತನಗಳಲ್ಲಿಯೂ ಆಯಾ ಆಕಾರನಾಮಗಳಿಂದ ಪ್ರವೇಶಿಸಿ ಜ್ಞಾನಿಗಳಿಗೆ ಗೋಚರವಾಗುವಿರಿ. ತ್ರಿಗುಣಗಳಿಂದಲೂ ಕರ್ಮಗಳಿಂದಲೂ ಬದ್ಧರಾಗದೆ ಇರುವುದರಿಂದ ನಿಮಗೆ ದೇಹ ಸಂಬಂಧ ರೂಪವಾದ ಸಂಸಾರ ಬಂಧವೂ ಇಲ್ಲ, ದೇಹವಿಯೋಗ ರೂಪವಾದ ಮೋಕ್ಷವೂ ಇಲ್ಲ. ನೀವು ಜಗತ್ತಿನ ಹಿತಕ್ಕಾಗಿ ವ್ಯಕ್ತಮಾಡಿದ ವೇದಮಾರ್ಗ ದುರ್ಜನರಿಂದ ಹಾಳಾಗುವಾಗಲೆಲ್ಲ ಅವತಾರ ಮಾಡುವಿರಿ. ಭೂಭಾರಹರಣ ಮಾಡುವಿರಿ. ನೀವು ಭಕ್ತಪ್ರಿಯರು. ಭಕ್ತರಿಗೆ ಸಕಲಾಭೀಷ್ಟದಾಯಕರು. ಅವರಿಗೆ ಸ್ವರೂಪಾನಂದವನ್ನೂ, ಆನಂದಸ್ವರೂಪನಾದ ತನ್ನನ್ನೂ ನೀಡುವವರು. ಇಂಥ ನಿಮ್ಮನ್ನು ಬಿಟ್ಟು ಇನ್ನೊಬ್ಬರನ್ನು ಯಾವ ವಿವೇಕಿ ಭಜಿಸುವನು? ಯೋಗೇಶ್ವರರಿಗೂ ಅಚಿಂತ್ಯವಾದ ಮಹಿಮೆ ಉಳ್ಳ ನೀವು ನನ್ನ ಮನೆಗೆ ಬಂದಿರುವಿರಿ. ಇನ್ನು ವಿಷಯಾಸೆ ಎಂಬ ನಿಮ್ಮ ಬಂಧಕ ಶಕ್ತಿಯನ್ನು ನನ್ನಿಂದ ದೂರಮಾಡಿರಿ.'

ಅಕ್ರೂರ ಹೀಗೆ ಸ್ತೋತ್ರ ಮಾಡಿ ಪ್ರಾರ್ಥಿಸಿದಾಗ ಶ್ರೀಕೃಷ್ಣ

ಅವನಲ್ಲಿ ತತ್ವಜ್ಞಾನ ಹೀಗೆ ವ್ಯಕ್ತವಾಗಿರಲು ಇದು ಕಾಲವಲ್ಲವೆಂದು ಬಗೆದು ಅದನ್ನು ಮರೆಮಾಡಲು ಹೀಗೆ ನುಡಿದ-

'ಚಿಕ್ಕಪ್ಪ ನೀವು ನಮ್ಮ ಬಂಧುಗಳು. ನಿಮ್ಮ ರಕ್ಷಣೆ ಪೋಷಣೆಗಳಲ್ಲಿರುವ ಮಕ್ಕಳು ನಾವು. ನೀವು ನಮ್ಮಲ್ಲಿ ದಯೆದೋರಬೇಕು. ನಿಮ್ಮಂಥ ಸಜ್ಜನರನ್ನೇ ಜನರು ಆರಾಧಿಸಬೇಕು. ಅವರು ಬೇಗನೆ ಫಲ ಕೊಡುತ್ತಾರೆ. ದೇವತೆಗಳನ್ನು ಬಹುಕಾಲ ಸೇವೆ ಮಾಡಬೇಕಾಗುತ್ತದೆ. ಆಗಲೆ ಅವರು ಫಲ ಕೊಡುತ್ತಾರೆ. ಈಗ ನಮ್ಮ ಬಂಧುಗಳಾದ ಪಾಂಡವರಿಗೆ ಹಿತ ಉಂಟುಮಾಡಲು ಬಯಸಿದ್ದೇವೆ. ಅದಕ್ಕೆ ಅವರ ಕ್ಷೇಮ ಸಮಾಚಾರವನ್ನು ತಿಳಿಯಲು ಹಸ್ತಿನಾಪುರಕ್ಕೆ ನೀವು ಹೋಗಬೇಕು. ತಂದೆ ಮರಣ ಹೊಂದಿದ ಬಳಿಕ ಆ ಬಾಲಕರು ತಾಯಿಯೊಂದಿಗೆ ಶತಶೃಂಗ ಪರ್ವತದಲ್ಲಿ ಬಹಳ ದುಃಖದಿಂದ ವಾಸಿಸುತ್ತಿದ್ದರು. ರಾಜಾ ಧೃತರಾಷ್ಟ್ರ ಅವರನ್ನು ಮುನಿಗಳ ಮೂಲಕ ಪಟ್ಟಣಕ್ಕೆ ಕರೆಸಿಕೊಂಡ. ಆದರೆ ಕುರುಡ ದುರ್ಬಲ ಹೃದಯದವನಾದ ಆ ರಾಜ ದುಷ್ಟನಾದ ಪುತ್ರ ದುರ್ಯೋಧನನ ಅಧೀನನಾಗಿದ್ದು ತನ್ನ ತಮ್ಮನ ಮಕ್ಕಳಾದ ಪಾಂಡವರಲ್ಲಿ ತನ್ನ ಪುತ್ರರಂತೆ ಸಮಾನವಾಗಿ ವರ್ತಿಸುತ್ತಿಲ್ಲ ಎಂದು ಕೇಳಿದ್ದೇವೆ. ನೀವು ಹೋಗಿ ಈಗಿನ ವಿದ್ಯಮಾನಗಳನ್ನು ತಿಳಿದು ಬನ್ನಿ. ಬಳಿಕ ಪಾಂಡವ ರಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡೋಣ' ಎಂದು. ಹೀಗೆ ಅಕ್ರೂರನಿಗೆ ಆದೇಶ ನೀಡಿ ಶ್ರೀಕೃಷ್ಣ ಬಲರಾಮ ಉದ್ಧವರೊಂದಿಗೆ ಅಲ್ಲಿಂದ ಹೊರಟು ತನ್ನ ಅರಮನೆಗೆ ಹಿಂತಿರುಗಿದ.

❖

ಅಧ್ಯಾಯ - ೪೮

ಅಧ್ಯಾಯ ಸಾರಾಂಶ

ಅಕ್ರೂರ ಹಸ್ತಿನಾವತಿಗೆ ಹೋಗಿ ಧೃತರಾಷ್ಟ್ರ ಭೀಷ್ಮ ವಿದುರ ಕುಂತಿಯರನ್ನೂ ಬಾಹ್ಲೀಕ ಸೋಮದತ್ತ ದ್ರೋಣ ಕೃಪ ಕರ್ಣ ದುರ್ಯೋಧನ ಅಶ್ವತ್ಥಾಮರನ್ನೂ ಪಾಂಡವರನ್ನೂ ಇತರ ಬಂಧುಗಳನ್ನೂ ಭೆಟ್ಟಿಮಾಡಿದ. ಧೃತರಾಷ್ಟ್ರನ ವರ್ತನೆಯನ್ನು ತಿಳಿಯುವ ಉದ್ದೇಶದಿಂದ ಕೆಲವು ತಿಂಗಳ ಕಾಲ ಹಸ್ತಿನಾವತಿಯಲ್ಲೇ ಉಳಿದುಕೊಂಡ.

''ಧೃತರಾಷ್ಟ್ರ ತನ್ನ ದುಷ್ಟಪುತ್ರರ ಕೈಗೊಂಬೆ, ಕೌರವರು ಪಾಂಡವರ ಬಲಪರಾಕ್ರಮವಿನಯಾದಿ ಸದ್ಗುಣಗಳನ್ನೂ ಪ್ರಜಾನುರಾಗವನ್ನೂ ನೋಡಿ ಸಹನೆಯಾಗದೆ ವಿಷ ಉಣಿಸುವುದು ಮುಂತಾದ ಅಪಚಾರಗಳನ್ನು ಈವರೆಗೆ ಎಷ್ಟೋ ಮಾಡಿರುವರು. ಮುಂದೆಯೂ ಮಾಡಲಿರುವರು'' ಎಂದು ಕುಂತಿಯೂ ವಿದುರನೂ ಹೇಳಿದರು. ತಮ್ಮನಾದ ಅಕ್ರೂರ ಕುಂತಿಯ ಬಳಿಗೆ ಬಂದಾಗ ಅವಳು ತವರು ಮನೆಯನ್ನು ನೆನೆದು ಕಣ್ಣಲ್ಲಿ ನೀರು ತುಂಬಿಕೊಂಡು ಬಂಧುಗಳ ಕ್ಷೇಮಸಮಾಚಾರವನ್ನು ಕೇಳಿದಳು. 'ಕೃಷ್ಣ ಸೋದರತ್ತೆಯ ಮಕ್ಕಳಾದ ಪಾಂಡವರನ್ನು ನೆನೆಯುತ್ತಿರುವನೆ? ಅವನು ಈ ಸಣ್ಣಮಕ್ಕಳೊಂದಿಗೆ ಕಷ್ಟಪಡುತ್ತಿರುವ ನನ್ನನ್ನು ಕಾಪಾಡಲಿ' ಎನ್ನುತ್ತ ಕೃಷ್ಣನನ್ನು ಮೊರೆಹೊಕ್ಕಳು. ದುಃಖದಿಂದ ಅತ್ತಳು. ''ಪಾಂಡವರು ಭೂಭಾರಹರಣಕ್ಕಾಗಿ ಅವತರಿಸಿದ ದೇವತೆಗಳು. ಅವರಿಗೆ ಯಾವ ಭಯವೂ ಇಲ್ಲ'' ಎಂದು ಅಕ್ರೂರ ವಿದುರರು ಸಮಾಧಾನ ಹೇಳಿದರು.

ಮಧುರೆಗೆ ಹೊರಡುವ ಮುನ್ನ ಅಕ್ರೂರ ತುಂಬಿದ ಸಭೆಯಲ್ಲಿ ಧೃತರಾಷ್ಟ್ರನಿಗೆ ಯಾದವರ ಸಂದೇಶವನ್ನು ಹೇಳಿದ. ''ಧರ್ಮದಿಂದ ರಾಜ್ಯವಾಳು. ಪ್ರಜೆಗಳ ಪ್ರೀತಿಯನ್ನು ಸಂಪಾದಿಸು. ನಿನ್ನ ಮಕ್ಕಳೊಂದಿಗೆ ತಮ್ಮನ ಮಕ್ಕಳನ್ನೂ ಸಮನಾಗಿ ಕಾಣು. ಆಗಲೆ ನಿನಗೆ ಸುಖಕೀರ್ತಿಗಳು ಲಭಿಸುತ್ತವೆ. ಇದಕ್ಕೆ

ವಿಪರೀತವಾಗಿ ವರ್ತಿಸಿದರೆ ನಿಂದ್ಯನೆನಿಸುವಿ. ಪುತ್ರನಾಶದಿಂದ ಮಹಾದುಃಖಕ್ಕೆ ಭಾಗಿಯಾಗುವಿ. ನಿನ್ನ ಮಕ್ಕಳ ಒಡನಾಟ ಶಾಶ್ವತವಿರಲೆಂದು ತಮ್ಮನ ಮಕ್ಕಳನ್ನು ನಾಶಮಾಡಬೇಡ. ತನ್ನ ಶರೀರವೇ ತನಗೆ ಶಾಶ್ವತವಲ್ಲ ವೆಂದಮೇಲೆ ಶರೀರಸಂಬಂಧಿಗಳಾದ ಹೆಂಡತಿ ಮಕ್ಕಳು ಶಾಶ್ವತವಾಗಿರಬಲ್ಲರೆ? ಜೀವಿ ಹುಟ್ಟುವಾಗ ಒಬ್ಬನೇ ಹುಟ್ಟುತ್ತಾನೆ ಸಾಯುವಾಗ ಒಬ್ಬನೆ ಸಾಯುತ್ತಾನೆ. ತಾನು ಮಾಡಿದ ಪುಣ್ಯಪಾಪಗಳನ್ನು ತಾನೊಬ್ಬನೆ ಉಣ್ಣುತ್ತಾನೆ. ನಿನ್ನ ಪಾಪದ ಹಣವನ್ನು ಮಾತ್ರ ಹೆಂಡತಿಮಕ್ಕಳು ಭೋಗಿಸುತ್ತಾರೆ. ಪಾಪವನ್ನು ನೀನೆ ಭೋಗಿಸಬೇಕು. ಬದುಕಿರುವಾಗ ನಿನ್ನಾಸೆಯನ್ನು ಈಡೇರಿಸಿಕೊಳ್ಳಲಾರದೆ ಸತ್ತಮೇಲೂ ಮಹಾದುಃಖವನ್ನೇ ಅನುಭವಿಸಬೇಕಾಗುತ್ತದೆ. ಈ ಲೋಕದ ಸೌಖ್ಯವನ್ನು ಸ್ವಪ್ನದಂತೆ ಕ್ಷಣಿಕವೆಂದು ಬಗೆದು ಭಗವಂತನನ್ನು ನಿಷ್ಠೆಯಿಂದ ಸೇವಿಸುತ್ತ ಪಾಂಡವರನ್ನು ನಿನ್ನ ಮಕ್ಕಳಂತೆಯೇ ಕಾಣು.''

ಧೃತರಾಷ್ಟ್ರನೆಂದ ''ಅಕ್ರೂರ, ನೀನು ಹೇಳಿದ್ದೆಲ್ಲವೂ ನಿಜ. ಕೇಳಲು ಕಿವಿಗಳಿಗೆ ಅಮೃತದಂತಿದೆ. ಆದರೆ, ನಾನು ಪುತ್ರವ್ಯಾಮೋಹ ಕ್ಕೊಳಗಾಗಿ ನಿನ್ನ ಮಾತನ್ನು ಮರೆತುಬಿಡುತ್ತೇನೆ. ಭೂಭಾರವನ್ನು ಕಳೆಯಲು ಅವತರಿಸಿರುವ ಶ್ರೀಕೃಷ್ಣನ ಸಂಕಲ್ಪ ಅನ್ಯಥಾ ಆಗುವುದಿಲ್ಲ. ಎಲ್ಲರನ್ನೂ ಹುಟ್ಟಿಸಿ ಎಲ್ಲರ ಒಳಗೆ ನಿಯಾಮಕನಾಗಿ ನೆಲೆಸಿ ಅವರವರ ಕರ್ಮಾನುಗುಣವಾಗಿ ಫಲನೀಡುವವನು ಅವನು. ಅವನಿಗೆ ಇದೋ ನಮಸ್ಕಾರ!''

ಅಕ್ರೂರ ಮಧುರೆಗೆ ಹಿಂತಿರುಗಿ ಪಾಂಡವರ ವಿಷಯದಲ್ಲಿ ಧೃತರಾಷ್ಟ್ರನ ವರ್ತನೆಯನ್ನು ರಾಮಕೃಷ್ಣರಿಗೆ ತಿಳಿಸಿದ.

❖

ಅಧ್ಯಾಯ - ೪೯

ಅಧ್ಯಾಯ ಸಾರಾಂಶ

ಅಸ್ತಿ ಮತ್ತು ಪ್ರಾಸ್ತಿ ಎಂಬ ಇಬ್ಬರು ಜರಾಸಂಧನ ಹೆಣ್ಣುಮಕ್ಕಳು ಕಂಸನ ರಾಣಿಯರು. ಕಂಸ ಸತ್ತ ಬಳಿಕ ಅವರು ಜರಾಸಂಧನ ಬಳಿಗೆ ಹೋಗಿ ಅತ್ತರು. ಜರಾಸಂಧ ಎಲ್ಲವನ್ನೂ ತಿಳಿದು ಭೂಮಿಯಲ್ಲಿ ಯಾದವರೆ ಇಲ್ಲದಂತೆ ಮಾಡಲು ಬಹಳ ಯತ್ನಿಸಿದ. ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯಗಳೊಂದಿಗೆ ಮಧುರೆಗೆ ಹದಿನೆಂಟು ಬಾರಿ ಮುತ್ತಿಗೆ ಹಾಕಿದ. ಆದರೆ ಪ್ರತಿಬಾರಿಯೂ ಸೋತು ಎಲ್ಲ ಸೈನ್ಯವನ್ನೂ ಕಳೆದುಕೊಂಡ.

ಉಕ್ಕಿಬರುವ ಸಮುದ್ರದಂತಿದ್ದ ಜರಾಸಂಧನ ಸೈನ್ಯ ತನ್ನ ಪಟ್ಟಣವನ್ನು ಸುತ್ತುವರಿದಾಗ ಕೃಷ್ಣ 'ಭೂಭಾರಭೂತವಾಸ ಈ ಸೈನ್ಯವನ್ನು ಪೂರ್ತಿ ಸಂಹರಿಸುತ್ತೇನೆ, ಜರಾಸಂಧನನ್ನು ಮಾತ್ರ ಕೊಲ್ಲುವುದಿಲ್ಲ. ಅವನು ಬದುಕಿದ್ದರೆ ಪುನಃ ಪುನಃ ಇಷ್ಟು ಸೈನ್ಯಗಳನ್ನು ತರುತ್ತಾನೆ. ಅವೆಲ್ಲವನ್ನೂ ಸಂಹರಿಸಬಹುದು. ಅದಕ್ಕಾಗಿ ತಾನೆ ನಾನು ಅವತರಿಸಿದ್ದೇನೆ?' ಎಂದು ಆಲೋಚಿಸಿದ. ಅಷ್ಟರಲ್ಲಿ ಶತ್ರುಸೈನ್ಯ ಮಧುರೆಯ ನಾಲ್ಕೂ ದ್ವಾರಗಳಲ್ಲಿ ಬಂದುನಿಂತುವು.

ಕಲಿಂಗ ಚೇಕಿತಾನ ದಂತವಕ್ರ ವಿದೂರಥ ಉಲ್ಮುಕ ವೇಣುದಾರಿ ಸಾಲ್ವ ಚೈದ್ಯರು ಪೂರ್ವದ್ವಾರದಲ್ಲಿ, ವಿಂದ ಅನುವಿಂದರೆಂಬ ಅವಂತಿಯ ರಾಜರು ವಿರಾಟ ದರದ ಏಕಲವ್ಯ ಬಾಹ್ಲಿಕ ಪಂಚನದರಾಜರು ದಕ್ಷಿಣದ್ವಾರದಲ್ಲಿ, ಪೌಂಡ್ರಕ ಯುಧಾಮನ್ಯು ಬೃಹತ್‌ಕ್ಷತ್ರ ಶಲ್ಯ ಭೂರಿಶ್ರವ ಉತ್ತಮೌಜ ರುಕ್ಮಿ ದ್ರುಮ ಸುದಕ್ಷಿಣರು ಪಶ್ಚಿಮ ದ್ವಾರದಲ್ಲಿ, ದ್ರುಪದ ಶಿಶುಪಾಲ ತ್ರಿಗರ್ತ ಜಯದ್ರಥ ಶಕುನಿ ಸೋಮದತ್ತ ಕುಲಿಂದರೊಂದಿಗೆ ಸ್ವತಃ ಜರಾಸಂಧ ಉತ್ತರದ್ವಾರದಲ್ಲಿ ಮುತ್ತಿಗೆ ಹಾಕಿದರು.

ಪ್ರಳಯ ಸಮುದ್ರದ ಘೋಷದಂತೆ ಕೋಲಾಹಲ ಮಾಡುತ್ತಿದ್ದ ಸೈನ್ಯದ ಧ್ವನಿಯನ್ನು ಕೇಳಿಯೂ ಶ್ರೀಕೃಷ್ಣ

ಎದೆಗುಂದಲಿಲ್ಲ, ಮದಿಸಿದ ಸಿಂಹ ನರಿಗಳ ಕೂಗಿಗೆ ಹೆದರುವುದೆ?

ಇದೇ ಸಮಯದಲ್ಲಿ ಆಕಾಶದಿಂದ ಎರಡು ದಿವ್ಯರಥಗಳು ಇಳಿದು ಶ್ರೀಕೃಷ್ಣನ ಬಳಿಗೆ ಬಂದುವು. ಅವುಗಳಲ್ಲಿ ಸಾರಥಿ ಕುದುರೆಗಳು ಯುದ್ಧಸಾಮಗ್ರಿಗಳಿದ್ದುವು. ಚಕ್ರ ಗದೆ ಖಡ್ಗ ಬಿಲ್ಲು ಬತ್ತಳಿಕೆಗಳು ಶ್ರೀಕೃಷ್ಣನಿಗೂ, ಹಲ ಮುಸಲಗಳು ಬಲರಾಮನಿಗೂ ಬಂದಿದ್ದುವು. ಶ್ರೀಕೃಷ್ಣನ ರಥಕ್ಕೆ ಶೈಬ್ಯ ಸುಗ್ರೀವ ಮೇಘಪುಷ್ಪ ಬಲಾಹಕ ಎಂದು ನಾಲ್ಕು ಕುದುರೆಗಳು. ದಾರುಕ ಸಾರಥಿ.

ಒಂದು ಸಣ್ಣ ಸೈನ್ಯದೊಂದಿಗೆ ಕೃಷ್ಣರಾಮರು ಯುದ್ಧಕ್ಕೆ ಹೊರಟರು. ವಸುದೇವ ನಿಶಠ ಕೃತವರ್ಮ ಉದ್ಧವರನ್ನು ಪೂರ್ವದ್ವಾರದಿಂದ, ಉಗ್ರಸೇನ ಸುದಾಮ ಪೃಥು ವಿಪೃಥುಗಳನ್ನು ದಕ್ಷಿಣದ್ವಾರದಿಂದ, ಸಾತ್ಯಕಿ ಗದ ಪ್ರಸೇನ ಅಕ್ರೂರರನ್ನು ಪಶ್ಚಿಮದ್ವಾರದಿಂದ ಕಳಿಸಿ ತಾನು ಬಲರಾಮನೊಂದಿಗೆ ಉತ್ತರದ್ವಾರದಿಂದ ನಿರ್ಗಮಿಸಿದ, ಶ್ರೀಕೃಷ್ಣ

ರೋಮಾಂಚಕರವಾದ ಯುದ್ಧ ನಡೆಯಿತು. ಗೆದ್ದರೆ ಇಹದಲ್ಲಿ ಸಾಮ್ರಾಜ್ಯ, ಸತ್ತರೆ ಪರದಲ್ಲಿ ಸ್ವಾರಾಜ್ಯ ಎಂದುಕೊಂಡು ಯಾದವರು ವೀರಾವೇಶದಿಂದ ಕಾದಿದರು. ಶ್ರೀಕೃಷ್ಣನ ಪಾಂಚಜನ್ಯ ಶಂಖಧ್ವನಿಯಿಂದ ಶತ್ರುರಾಜರು ಎದೆಗುಂದಿದರು. ಯಾದವರು ಉತ್ಸಾಹ ಗೊಂಡರು.

ಶಿಶುಪಾಲ ಶ್ರೀಕೃಷ್ಣನನ್ನು ಇದಿರಿಸಿ ನಾಲ್ಕು ಕುದುರೆಗಳಿಗೆ ನಾಲ್ಕು ಬಾಣಗಳು, ಸಾರಥಿಗೆ ಒಂದು, ಶ್ರೀಕೃಷ್ಣನಿಗೆ ಹತ್ತು ಬಾಣಗಳು ಹೀಗೆ ಹೊಡೆದ. ಒಮ್ಮೆಲೆ ಎಲ್ಲ ರಾಜರುಗಳೂ ಕೂಡ ಶ್ರೀಕೃಷ್ಣನ ಮೇಲೆ ಬಾಣಗಳ ಮಳೆಗರೆದರು. ಶ್ರೀಕೃಷ್ಣ ಆ ಎಲ್ಲ ಬಾಣಗಳನ್ನೂ ತನ್ನ ಬಾಣಗಳಿಂದ ತುಂಡರಿಸಿದ. ಐದು ಬಾಣಗಳಿಂದ ಶಿಶುಪಾಲನ ಸಾರಥಿಯನ್ನೂ ನಾಲ್ಕು ಕುದುರೆಗಳನ್ನೂ ಯಮಲೋಕಕ್ಕೆ ಅಟ್ಟಿದ. ಮೂವತ್ತು ಮಂದಿ ರಾಜರನ್ನೂ ಮೂರುಮೂರು ಬಾಣಗಳಿಂದ ಎದೆ ಬಾಯಿ ಹಣೆಗಳಲ್ಲಿ ಹೊಡೆದು ಅವರ ಮೂವತ್ತು ಬಿಲ್ಲುಗಳನ್ನೂ

ಮೂವತ್ತು ಬಾಣಗಳಿಂದ ಕತ್ತರಿಸಿದ. ಶಿಶುಪಾಲನ ಬಿಲ್ಲನ್ನೂ ಕಡಿದು ಮೂರು ಬಾಣಗಳಿಂದ ಧ್ವಜ ಛತ್ರ ಕಿರೀಟಗಳನ್ನು ಉರುಳಿಸಿದ. ಒಮ್ಮೆಲೆ ಹತ್ತು ಈಟಿಗಳನ್ನು ಶಾಂರ್ಗಧನುಸ್ಸಿನಲ್ಲಿ ಹೂಡಿ ಶಿಶುಪಾಲನ ಮೇಲೆ ಎಸೆದ. ಬಾಣಗಳನ್ನೆಸೆಯುತ್ತ ಶಂಖಊದುತ್ತ ಧನುಷ್ಟಂಕಾರ ಮಾಡುತ್ತ ಉರಿಯುವ ಬೆಂಕಿಯ ಕೊಳ್ಳಿಯಂತೆ ಶ್ರೀಕೃಷ್ಣ ಜರಾಸಂಧನ ಸೈನ್ಯವನ್ನು ನಾಶಮಾಡುತ್ತ ತಿರುಗಿದ. ರಣರಂಗದಲ್ಲಿ ಶತ್ರುಸೈನ್ಯಗಳ ನೆತ್ತರ ಹೊಳೆಗಳೇ ಹರಿದುವು. ಯೋಧರ ದೀರ್ಘ ಬಾಹುಗಳೇ ನೀರು ಹಾವುಗಳು ತಲೆಗಳೇ ಆಮೆಗಳು ಸತ್ತ ಆನೆಗಳು ನಡುಗಡ್ಡೆಗಳು ಕುದುರೆಗಳೇ ಮೊಸಳೆಗಳು. ಕತ್ತರಿಸಿ ಬಿದ್ದ ಕೈಕಾಲುಗಳೇ ಮೀನುಗಳು, ತಲೆಕೂದಲು ಪಾಚಿಗಳು, ಬಿಲ್ಲುಗಳೇ ಅಲೆಗಳು ಆಯುಧಗಳೇ ದಡಗಳಲ್ಲಿ ಬೆಳೆದ ಪೊದೆಗಳು. ಮಹಾರತ್ನಾಭರಣಗಳೇ ಬಂಡೆಗಳು ಮರಗಳು. ಕೆನ್ನೀರ ಜಲಪಾತ ಸುಳಿಗಳಿಂದ ಆ ನೆತ್ತರ ಹೊಳೆಗಳು ಭಯಾನಕವಾಗಿದ್ದುವು. ಸಮುದ್ರದಂತೆ ಅಪಾರ ಭೀಕರವಾಗಿದ್ದ ಜರಾಸಂಧನ ಸೈನ್ಯ ಕ್ಷಣದಲ್ಲಿ ನಾಶವಾಯಿತು. ಜಗದೊಡೆಯನಿಗೆ ಇದೊಂದು ಕೇವಲ ಆಟ.

ಜರಾಸಂಧನ ಸೈನ್ಯವೆಲ್ಲ ನಾಶವಾದಾಗ ಅಳಿದುಳಿದವರೂ ಪಲಾಯನ ಮಾಡಿದಾಗ ಜರಾಸಂಧ ಬಲರಾಮನೊಂದಿಗೆ ಹೋರಾಡಿದ. ಭಾರವಾದ ಗದೆಯನ್ನೆತ್ತಿ ನೂರು ಬಾರಿ ತಿರುಗಿಸಿ ಬಲರಾಮನ ಮೇಲೆ ಎಸೆದ. ಬಲರಾಮ ನಗುತ್ತ ತಪ್ಪಿಸಿಕೊಂಡು ಅದನ್ನು ವ್ಯರ್ಥಗೊಳಿಸಿದ. ಮುಸಲದಿಂದ ಅವನ ರಥವನ್ನು ಮುರಿದ. ಸಾರಥಿಯನ್ನೂ ಕೊಂದ. ಒಂದು ಸಿಂಹ ಇನ್ನೊಂದು ಸಿಂಹವನ್ನು ಹಿಡಿಯುವಂತೆ ಜರಾಸಂಧನನ್ನು ಹಿಡಿದು ವರುಣಪಾಶ ಮಾನುಷ ಪಾಶಗಳಿಂದ ಬಂಧಿಸಲು ತೊಡಗಿದ. ಶ್ರೀಕೃಷ್ಣ ತಡೆದ. ಅವನು ಇನ್ನಷ್ಟು ಸೈನ್ಯ ತರಲಿ. ಭೂಭಾರಹರಣಕ್ಕೆ ಸಹಾಯ ಮಾಡಲಿ ಎನ್ನುತ್ತ ಬಿಡಿಸಿದ.

ಲಜ್ಜೆಯಿಂದ ತಪಸ್ಸಿಗಾಗಿ ಕಾಡಿಗೆ ಹೊರಟ ಜರಾಸಂಧನನ್ನು ರಾಜರು ತಡೆದು ಹಿಂದಿರುಗಿಸಿದರು.

ಶ್ರೀಕೃಷ್ಣ ತನ್ನ ಸೈನ್ಯವನ್ನು ಸ್ವಲ್ಪವೂ ನಾಶವಾಗಗೊಡಲಿಲ್ಲ.

ಜರಾಸಂಧನ ಶಿಬಿರದಿಂದ ಧನ ಸ್ತ್ರೀ ಕೋಶ ವಾಹನಗಳನ್ನು ಅಪಹರಿಸಿದ. ಅವನ ಮೇಲೆ ದೇವತೆಗಳು ಹೂಮಳೆಗರೆದು ಅಭಿನಂದಿಸಿದರು. ಮಧುರೆಯ ಪ್ರಜೆಗಳು ಸೂತ ವಂದಿ ಮಾಗಧರು ಹಾಡಿ ಹೊಗಳಿದರು. ವಾದ್ಯ ಘೋಷಗಳೊಂದಿಗೆ ಶ್ರೀಕೃಷ್ಣ ಅಲಂಕೃತವಾದ ಪಟ್ಟಣವನ್ನು ಪ್ರವೇಶಿಸಿದ. ಶತ್ರುರಾಜರ ಅಪಾರವಾದ ಧನ ಆಭರಣ ಮುಂತಾದುವನ್ನು ರಾಜಾ ಉಗ್ರಸೇನ ನಿಗೆ ನೀಡಿದ.

❖

ಅಧ್ಯಾಯ - ೫೦

ಅಧ್ಯಾಯ ಸಾರಾಂಶ

ಜರಾಸಂಧ ತನಗೆ ಉಂಟಾದ ಸೋಲನ್ನು ಹಗಲು ರಾತ್ರಿ ನೆನೆದು ಸಂಕಟಪಡುತ್ತ ಮತ್ತೆ ಎಲ್ಲ ರಾಜರುಗಳನ್ನೂ ಕರೆಸಿಕೊಂಡು ಯುದ್ಧಕ್ಕೆ ಅಣಿಯಾದ. ಕುಲಿಂದ ಕುಂತಲ ಅವಂತಿ ಕಾಶಿ ಗಾಂಧಾರ ಸೃಂಜಯ ಕಲಿಂಗ ಕೇಕಯ ಆಂಧ್ರ ದಶಾರ್ಣ ವಂಗ ಸೈಂಧವ ಮಾದ್ರ ತ್ರಿಗರ್ತ ಸೌವೀರ ಪಾರ್ವತೇಯ ರಾಜರನ್ನು ಕರೆಸಿಕೊಂಡು ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯವನ್ನು ಕೂಡಿಹಾಕಿದ. ಮಧುರೆಗೆ ಬಂದು ಹೊರವಲಯದಲ್ಲಿ ರಾತ್ರಿ ಶಿಬಿರಹಾಕಿಕೊಂಡು ವಿಶ್ರಾಂತಿ ಪಡೆದ. ಸೂತ ಮಾಗಧ ಬಂದಿಗಳಿಂದ ಸ್ತುತಿಸಿಕೊಳ್ಳುತ್ತ ಸುಖವಾಗಿ ಮಲಗಿದ.

ಈ ಸಮಾಚಾರ ತಿಳಿದೊಡನೆ ಶ್ರೀಕೃಷ್ಣ ರಾತ್ರಿಯಲ್ಲಿಯೇ ಬಲರಾಮ ವಸುದೇವ ಉದ್ಧವ ಅಕ್ರೂರ ಸಾತ್ಯಕಿ ಆಹುಕ ಸಾರಣ ಮುಂತಾದವರೊಂದಿಗೆ ಮಂತ್ರಾಲೋಚನೆ ಮಾಡಿದ. ಸೂರ್ಯೋದಯಕ್ಕೆ ಮುಂಚಿತವಾಗಿ ಉಷಃ ಕಾಲದಲ್ಲಿಯೇ ತನ್ನ ಚತುರಂಗ ಸೈನ್ಯವನ್ನು ಮೂರುಭಾಗ ಮಾಡಿ ಶತ್ರು ಸೈನ್ಯವನ್ನು ಆಕ್ರಮಿಸಲು ಆಜ್ಞೆ ಮಾಡಿದ. ಬಲರಾಮ ಕೃತವರ್ಮ ಸಾರಣರನ್ನು ಶತ್ರು ಶಿಬಿರದ ಎಡಭಾಗದಲ್ಲಿ, ಸಾತ್ಯಕಿ ವಿಪೃಥು ಪೃಥು ಉದ್ಧವರನ್ನು ಬಲಭಾಗದಲ್ಲಿ ಕಳಿಸಿ ತಾನು ಮಧ್ಯಭಾಗದಲ್ಲಿ ಪ್ರವೇಶಿಸಿದ.

ಸೂರ್ಯನಿನ್ನೂ ಉದಯಾಚಲವನ್ನು ಏರುವಷ್ಟರಲ್ಲಿ ಇನ್ನೂ ಗಾಢನಿದ್ರೆಯಲ್ಲಿ ಮಲಗಿದ್ದ ಜರಾಸಂಧ ಮತ್ತು ಅವನ ಸೈನ್ಯದವರೆಲ್ಲರೂ ಅನಿರೀಕ್ಷಿತವಾಗಿ ಮೂರು ಕಡೆಗಳಿಂದ ದಾಳಿಗೆ ತುತ್ತಾದರು. ಕುದುರೆಗಳಿಗೆ ಕಡಿವಾಣ ಹಾಕಿರಲಿಲ್ಲ. ಆನೆಗಳ ಬೆನ್ನಮೇಲೆ ಪಂಜರಗಳನ್ನು ಏರಿಸಿರಲಿಲ್ಲ. ಭಟರು ಕವಚ ತೊಟ್ಟಿರಲಿಲ್ಲ. ವಾಹನವೇರಿರಲಿಲ್ಲ. ಆಯುಧ ಧರಿಸಿರಲಿಲ್ಲ. ರಥಗಳಿಗೆ ಕುದುರೆಗಳನ್ನು ಹೂಡಿರಲಿಲ್ಲ. ಧ್ವಜವೇರಿಸಿರಲಿಲ್ಲ. ಮಲಗಿದ್ದ ಯೋಧರು ಎದ್ದು ದಿಕ್ಕೆಟ್ಟು ಓಡಿದರು. ಕೆಲವರು

ಆಯುಧಗಳನ್ನೆತ್ತಿಕೊಂಡರು. ಕೆಲವರು ಜೀನು ಲಗಾಮಿಲ್ಲದ ಕುದುರೆಗಳನ್ನೇ ಏರಿದರು. ಹೆಚ್ಚಿನವರು ಪಲಾಯನ ಮಾಡಿದರು. ಕೆಲವರು ಜರಾಸಂಧನ ಬಳಿಗೆ ಬಂದು 'ನಿನಗೆ ಜಯವಾಗಲಿ' ಎಂದು ಆಕ್ರೋಶದಿಂದ ನುಡಿದರು. ಅವರನ್ನು ಸಾತ್ಯಕಿ ಐದು ಯೋಜನಗಳಷ್ಟು ದೂರಕ್ಕೆ ಬೆನ್ನಟ್ಟಿ ಹೋಗಿ ನಾಶ ಮಾಡಿ ಜಯಶಾಲಿಯಾಗಿ ಹಿಂತಿರುಗಿದ.

ಅಂಬಾರಿ ತೋಮರ ಅಂಕುಶಗಳಿಂದ ಕೂಡಿದ ಬೆಟ್ಟದಷ್ಟು ದೊಡ್ಡ ಆನೆಗಳನ್ನೂ ಆಯುಧ ಧ್ವಜ ಕುದುರೆಗಳಿಂದ ಕೂಡಿದ ರಥಗಳನ್ನೂ ವಸ್ತ್ರ ಆಭರಣಗಳನ್ನೂ ಶ್ರೀಕೃಷ್ಣ ಮಧುರೆಗೆ ಸಾಗಿಸಿದ. ಅವನ ಸೂಚನೆಯಿಂದ ಬಲರಾಮ ಅವೆಲ್ಲವನ್ನೂ ಉಗ್ರಸೇನನಿಗೆ ನೀಡಿದ.

❖

ಅಧ್ಯಾಯ - ೫೧

ಅಧ್ಯಾಯ ಸಾರಾಂಶ

ಜರಾಸಂಧ ಪುನಃ ಕೃಷ್ಣನೊಡನೆ ಯುದ್ಧಮಾಡಲು ಬಲಿ ಚಕ್ರವರ್ತಿಯ ಮಗನಾದ ಬಾಣಾಸುರನ ಸಹಾಯ ಕೇಳಬೇಕೆಂದು ಶೋಣಿತಪುರಕ್ಕೆ ನಡೆದ. ಸಾವಿರ ಕೈಗಳುಳ್ಳ ಬಾಣಾಸುರ ಚತುರಂಗ ಸೈನ್ಯದೊಂದಿಗೆ ಸೂತ ವಂದಿ ಮಾಗಧರೊಂದಿಗೆ ವಾದ್ಯಘೋಷ ದೀಪ ಕಲಶ ದರ್ಪಣ ಗಳೊಂದಿಗೆ ಬಂದು ಜರಾಸಂಧನನ್ನು ಇದಿರುಗೊಂಡ. ಅವರಿಬ್ಬರೂ ಪರಸ್ಪರ ಪರಮಸ್ನೇಹದಿಂದ ಸತ್ಕಾರ ಮಾಡಿಕೊಂಡರು.

'ದುರಾತ್ಮನಾದ ಗೊಲ್ಲ ಕೃಷ್ಣ ಕಳ್ಳನಂತೆ ರಾತ್ರಿವೇಳೆ ನುಗ್ಗಿಬಂದು ನಮ್ಮ ಸೈನ್ಯವನ್ನು ಪರಾಭವಗೊಳಿಸಿದ. ನಮ್ಮ ಎಲ್ಲ ಸಂಪತ್ತನ್ನೂ ಲೂಟಿ ಮಾಡಿದ. ಅವನೊಡನೆ ದ್ವಂದ್ವ ಯುದ್ಧಕ್ಕೆ ನಾನು ಸನ್ನದ್ಧನಾಗುತ್ತಿದ್ದಂತೆ ರಾಜರುಗಳು ತಡೆದರು. ಅವರು ನನ್ನ ಸುಖದುಃಖಗಳನ್ನು ತಮ್ಮವೇ ಎಂದು ಭಾವಿಸುವ ಆಪ್ತರು. ಅದರಿಂದ ನಾನು ನಿನ್ನ ಬಳಿಗೆ ಬಂದಿದ್ದೇನೆ. ಸಹಾಯಮಾಡು' ಎಂದ ಜರಾಸಂಧ. ಬಾಣಾಸುರ ಅವನನ್ನು ಪಟ್ಟಣದೊಳಗೆ ಕರೆತಂದು ಸತ್ಕರಿಸಿದ. ಅರವತ್ತು ಸಾವಿರ ಗಜ ಸೈನ್ಯವನ್ನೂ ಒಂದು ಲಕ್ಷ ರಥ ಸೈನ್ಯವನ್ನೂ ಹತ್ತು ಲಕ್ಷ ಕುದುರೆಗಳನ್ನೂ ಮಾಯಾ ಯುದ್ಧದಲ್ಲಿ ನುರಿತವರಾದ ಮುನ್ನೂರು ದಾನವರನ್ನೂ ಜರಾಸಂಧನಿಗೆ ಒಪ್ಪಿಸಿದ. ಪಲ್ಲಕ್ಕಿ ಛತ್ರ ವ್ಯಜನ ಆಭರಣ ವಸ್ತ್ರಪಾತ್ರೆ ಹಾಸಿಗೆ ಆಸನ ಮುಂತಾದ ವಸ್ತುಗಳನ್ನೂ ಕೊಟ್ಟ. ತನ್ನ ಮಂತ್ರಿಗಳಾದ ಕುಭಾಂಡ ಕೂಪಕರ್ಣರನ್ನು ಸಹಾಯಕ್ಕಾಗಿ ಜೊತೆಗೆ ಕಳಿಸಿಕೊಟ್ಟ. ಪ್ರಳಯಕಾಲದಲ್ಲಿ ಸುರ ಅಸುರರನ್ನೆಲ್ಲ ಸಂಹರಿಸಬಲ್ಲ ಸರ್ವಶಕ್ತನಾದ ಕೃಷ್ಣನೆಲ್ಲಿ, ಶೋಚನೀಯರಾದ ಈ ಬಾಣಮಂತ್ರಿಗಳೆಲ್ಲಿ?

ಬಾಣನ ಮತ್ತು ರಾಜರುಗಳ ಸೈನ್ಯ ಸಮೇತನಾಗಿ ಕೆಲವೇ ದಿನಗಳಲ್ಲಿ ಜರಾಸಂಧ ಮಧುರೆಗೆ ಬಂದ. ಸುಂದರವಾದ

ಪಟ್ಟಣವನ್ನು ಕೊಡಲಿ ಪಿಕಾಶಿ ಹಾರೆಗಳಿಂದ ನಾಶಮಾಡಲು ತೊಡಗಿದ.

ಜರಾಸಂಧ ಬಂದನೆಂದು ತಿಳಿದೊಡನೆ ರಾಮಕೃಷ್ಣರು ಕುಪಿತರಾಗಿ ರಣಭೇರಿಗಳನ್ನು ಹೊಡೆಸಿ ಚತುರಂಗ ಸೈನ್ಯದೊಂದಿಗೆ ಸಾತ್ಯಕಿ ಕೃತವರ್ಮ ಉಗ್ರಸೇನ ಗದ ಆಹುಕ ವಸುದೇವರನ್ನು ಮುಂದೆ ಮಾಡಿಕೊಂಡು ನಿರ್ಭಯರಾಗಿ ಪಟ್ಟಣದಿಂದ ಹೊರಗೆ ಬಂದರು. ಕೆರಳಿದ ಸಿಂಹಗಳಂತೆ ಶೋಭಿಸಿದರು. ಶ್ರೀಕೃಷ್ಣ ಶತ್ರುಭಯಂಕರವಾದ ಪಾಂಚಜನ್ಯ ಶಂಖವನ್ನೂದಿದೊಡನೆ ಯುದ್ಧ ಪ್ರಾರಂಭ ವಾಯಿತು. ಕುಭಾಂಡ ಕೂಪಕರ್ಣರ ಮಾಯೆಯನ್ನು ಶ್ರೀಕೃಷ್ಣ ವಿಜ್ಞಾನಾಸ್ತ್ರದಿಂದ ನಾಶಮಾಡಿ ಸಾತ್ಯಕಿ ಕೃತವರ್ಮರಿಗೆ ಅವರೊಡನೆ ಹೋರಾಡಲು ಆದೇಶಿಸಿದ. ತಾನು ಒಂದೇ ಬಿಲ್ಲಿನಿಂದ ನೂರಾರು ರಾಜರೊಂದಿಗೆ ಹೋರಾಡಿದ. ಪ್ರತಿಯೊಬ್ಬ ಯೋಧನ ಮೇಲೆ ಹತ್ತು ಬಾಣಗಳು, ಕುದುರೆಯ ಮೇಲೆ ನೂರು, ರಥದ ಮೇಲೆ ಸಾವಿರ, ಆನೆಯ ಮೇಲೆ ಹತ್ತು ಸಾವಿರ ಹೀಗೆ ಒಂದೇ ಶಾರ್ಙ್ಗದಿಂದ ಒಮ್ಮೆಲೆ ಬಾಣಗಳು ಬಿದ್ದುವು.

ವರಾಹಧ್ವಜ ಯುಕ್ತವಾದ ರಥದಿಂದ ಜರಾಸಂಧ ತಾಳಧ್ವಜನಾದ ಬಲರಾಮನನ್ನು ಇದಿರಿಸಿದ. ಬಲರಾಮ ಮುಸಲವನ್ನು ಸಾವಿರಬಾರಿ ತಿರುಗಿಸಿ ವೇಗವಾಗಿ ಜರಾಸಂಧನ ಮೇಲೆ ಎಸೆದ. ಸಿಂಹದಂತೆ ಘರ್ಜಿಸಿದ. ಆ ಮುಸಲ ಕ್ಷಣದಲ್ಲಿ ಜರಾಸಂಧನ ರಥ ಕುದುರೆ ಸಾರಥಿಗಳನ್ನು ನಾಶಮಾಡಿತು. ಜರಾಸಂಧ ತಪ್ಪಿಸಿಕೊಂಡ. ಗದೆಯನ್ನು ಹಿಡಿದು ನೆಲದಮೇಲೆ ನಡೆದು ಬಂದ. ಬಲರಾಮ ತಾನೂ ರಥದಿಂದಿಳಿದು ಕಾಲುನಡಿಗೆಯಿಂದ ಬಂದ. ಜರಾಸಂಧನ ಗದೆ ಎದೆಯ ಮೇಲೆ ಬೀಳುತ್ತಿದ್ದಂತೆಯೇ ಅದನ್ನು ಎಡಗೈಯಿಂದ ಹಿಡಿದು ಆಚೆಗೆ ಒಗೆದ ಮತ್ತು ಜರಾಸಂಧನ ಎದೆಗೆ ಗುದ್ದಿ ತಬ್ಬಿ ಹಿಡಿದುಕೊಂಡು ಅವನ ಹೊಟ್ಟೆಯನ್ನು ಅವನ ಕಾಲು ಗಳಿಂದಲೇ ಬಂಧಿಸಿ ಕುತ್ತಿಗೆಯನ್ನು ಹೊಟ್ಟೆಗೆ ತಾಗಿಸಿದ. ನೆಲದಲ್ಲಿ ಕೆಡವಿದ. ಇಬ್ಬರೂ ಪರಸ್ಪರ ಎದೆಯಿಂದ ಎದೆಗೆ ಹೊಡೆದುಕೊಂಡರು. ಪರಸ್ಪರ

ನೂರು ನೂರು ಬಿಲ್ಲಳತೆಯಷ್ಟು ದೂರಕ್ಕೆ ಎಳೆದಾಡಿ ಹತ್ತಿರವಿದ್ದ ಗಿಡಮರ ಗುಡ್ಡಗಳನ್ನು ಪುಡಿಮಾಡಿದರು.

ಬಳಿಕ ಜರಾಸಂಧ ಗದೆಯನ್ನು ಬಲರಾಮ ಮುಸಲವನ್ನು ಎತ್ತಿಕೊಂಡರು. ಪರಸ್ಪರ ಸರ್ವಾಂಗಗಳಿಗೆ ಹೊಡೆದುಕೊಂಡರು. ಜರಾಸಂಧ ಸಾವನ್ನು ಸಮೀಪಿಸುತ್ತಿದ್ದಾನೆ ಎಂದು ರಾಜರು ಭೀತರಾಗಿ ಯುದ್ಧವನ್ನೇ ಕೈಬಿಟ್ಟರು.

ಅತ್ತ ಸಾತ್ಯಕಿ ಕುಭಾಂಡನಿಂದ ಮೂರು ಬಾಣಗಳಿಂದ ಹೊಡೆಸಿ ಕೊಂಡು ಸಿಟ್ಟಿನಿಂದ ಬುಸುಗುಟ್ಟುತ್ತ ಐದು ಉದ್ದದ ಬಾಣಗಳನ್ನು ಎತ್ತಿಕೊಂಡ. ನಾಭಿ ಕಂಠ ಹಣೆ ಎದೆಗಳಲ್ಲಿ ಹೊಡೆದು ಮೂರ್ಛೆಗೊಳಿಸಿದ. ಸಾರಥಿ ಅವನನ್ನು ಬೇಗನೆ ರಣರಂಗದಿಂದ ದೂರಕ್ಕೆ ಒಯ್ದ.

ಕೃತವರ್ಮನೊಡನೆ ಹೋರಾಡುತ್ತಿದ್ದ ಕೂಪಕರ್ಣ ಕುಭಾಂಡನ ದುರವಸ್ಥೆಯನ್ನು ಕಂಡು ತಾನೂ ಪಲಾಯನ ಮಾಡಿದ. ಇಬ್ಬರೂ ಜರಾಸಂಧನಿಗೆ ಹೇಳದೆಯೆ ಅಳಿದುಳಿದ ಸೈನ್ಯದೊಂದಿಗೆ ಶೋಣಿತಪುರಕ್ಕೆ ನಡೆದರು.

❖

ಅಧ್ಯಾಯ - ೫೨

ಅಧ್ಯಾಯ ಸಾರಾಂಶ

ದಾನವರ ಸೈನ್ಯ ಪಲಾಯನ ಮಾಡಿದ್ದನ್ನೂ ರಾಜರೆಲ್ಲರೂ ಶಸ್ತ್ರಗಳಿಂದ ಹೊಡೆಸಿಕೊಂಡು ಆಯಾಸಗೊಂಡಿದ್ದನ್ನೂ ಕೃಷ್ಣನಿನ್ನೂ ಯುದ್ಧ ಮಾಡುವುದನ್ನೂ ಕಂಡು ಬಲರಾಮನ ಬಲ ಉತ್ಸಾಹಗಳು ಹೆಚ್ಚಿದುವು. ಆತ ಜರಾಸಂಧನನ್ನು ಹಿಡಿದು ಎಡಗೈಯಿಂದ ಮುಸಲವನ್ನೆತ್ತಿ ತಲೆಯ ಮೇಲೆ ಹೊಡೆಯ ಬೇಕೆನ್ನುವಷ್ಟರಲ್ಲಿ ಅಶರೀರವಾಣಿಯೊಂದು ನುಡಿಯಿತು. 'ರಾಮ, ಜರಾಸಂಧ ನಿನ್ನ ಕೈಯಿಂದ ಹತನಾಗುವವನಲ್ಲ. ಯುದ್ಧದಿಂದ ಹಿಂತಿರುಗಿ ಹೋಗು' ಎಂದು. ಬಲರಾಮ ಜರಾಸಂಧನನ್ನು ಬಿಟ್ಟು ರಥವೇರಿ ಋಷಿಗಳು ಸಿದ್ಧರು ಸೂತ ಮಾಗಧ ಬಂದಿಗಳಿಂದ ಸ್ತುತಿಸಿಕೊಳ್ಳುತ್ತ ಯುದ್ಧರಂಗದಿಂದ ಹೊರಟು ಹೋದ. ಜರಾಸಂಧ ಲಜ್ಜೆಯಿಂದ ತಲೆತಗ್ಗಿಸಿಕೊಂಡು ಅಳಿದುಳಿದ ಸೈನ್ಯದೊಂದಿಗೆ ತನ್ನ ಪಟ್ಟಣಕ್ಕೆ ಹಿಂತಿರುಗಿದ.

ಕೃಷ್ಣರಾಮರು ಅಕ್ರೂರ ಉಗ್ರಸೇನ ಉದ್ಧವ ಮುಂತಾದ ಯಾದವರೊಂದಿಗೆ ಸಮಾಲೋಚನ ಮಾಡಿ ಮಧುರೆಯನ್ನು ಜರಾಸಂಧನ ಆಕ್ರಮಣದಿಂದ ಕಾಪಾಡುವುದಕ್ಕೆ ತಾವಿಬ್ಬರೇ ಗೋಮಂತ ಪರ್ವತದ ಕಡೆಗೆ ಹೊರಟರು. ದಾರಿಯಲ್ಲಿ ಮಹೇಂದ್ರಬೆಟ್ಟದಲ್ಲಿ ಪರಶುರಾಮನನ್ನು ಬೆಟ್ಟಿ ಮಾಡಿದರು. ಅವನ ಸಲಹೆಯಂತೆ ಜರಾಸಂಧನನ್ನು ಯುದ್ಧದಲ್ಲಿ ಗೆದ್ದು ಗೋಮಂತದ ಬುಡದಲ್ಲಿ ಕೊಲ್ಲಾಪುರವನ್ನು ಆಳುವ ಸೃಗಾಲ ವಾಸುದೇವನನ್ನು ಯುದ್ಧದಲ್ಲಿ ವಧಿಸಿದರು.

❖

ಶ್ರೀಕೃಷ್ಣ ಬಲರಾಮರು ಗೋಮಂತಪರ್ವತಕ್ಕೆ ಹೋಗುವಾಗ ದಾರಿಯಲ್ಲಿ ಪರಶುರಾಮನನ್ನು ಕಂಡು ನಮಿಸಿದರು.

ಪ್ರಣಾಮಂ ಚಕ್ರತುರ್ವೀರೌ ಯಥಾನ್ಯಾಯಮತಂದ್ರಿತೌ ।
ಇದಂ ಚೋವಾಚ ಭಗವಾನ್ ಕೃಷ್ಣಸ್ತಂ ಮುನಿಪುಂಗವಮ್ ॥ ೨೧ ॥

ನಮಸ್ತೇ ಭಾರ್ಗವ ಶ್ರೀಮನ್ ಜಾಮದಗ್ನ್ಯ ತಪೋಧನ ।
ರಾಮಕೃಷ್ಣೌ ಸ್ಮೃತಾವಾವಾಂ ಕ್ವಚಿತ್ತೇ ಶ್ರವಣಂ ಗತೌ ॥ ೨೨ ॥

ವೀರರಾದ ರಾಮಕೃಷ್ಣರು ಪರಶುರಾಮನನ್ನು ಕಂಡು ಆಲಸ್ಯವಿಲ್ಲದೆ ಲೋಕನೀತಿಯಂತೆ ಪ್ರಣಾಮಗೈದರು. ಭಗವಾನ್ ಶ್ರೀಕೃಷ್ಣ ಆ ಮುನಿಶ್ರೇಷ್ಠನಿಗೆ ಹೀಗೆ ನುಡಿದ-

'ಭೃಗುಕುಲದಲ್ಲಿ ಅವತರಿಸಿದ ಜಮದಗ್ನಿಸುತನಾದ ತಪೋಧನನಾದ ಕಾಂತಿಶಾಲಿ ಪರಶುರಾಮನೆ, ನಿನಗೆ ನಮಸ್ಕಾರ. ರಾಮ ಮತ್ತು ಕೃಷ್ಣರೆಂದು ಪ್ರಸಿದ್ಧರಾದ ನಾವು ಎಲ್ಲಿಯಾದರೂ ನಿಮ್ಮ ಕಿವಿಗೆ ಬಿದ್ದಿರುವೆವೇನು?'

ಇಲ್ಲಿ ಶ್ರೀಕೃಷ್ಣ ಮತ್ತು ಪರಶುರಾಮರು ಸಾಕ್ಷಾತ್ ಭಗವಂತನ ಸ್ವರೂಪಾವತಾರರು. ಇಬ್ಬರಲ್ಲಿ ಭೇದವಿಲ್ಲ. ಆದರೂ ಪರಸ್ಪರ ಬೇರೆಯವರಂತೆ ಕಂಡು ಒಬ್ಬರಿಗೊಬ್ಬರು ನಮಸ್ಕಾರ ಮಾಡುತ್ತಾರೆ. 'ನಮಸ್ತೇ ಭಾರ್ಗವ' ಎಂದು ಕೃಷ್ಣ ಪರಶುರಾಮನಿಗೆ, 'ನಮಸ್ತೇ ಪುಂಡರೀಕಾಕ್ಷ' ಎಂದು ಪರಶುರಾಮ ಕೃಷ್ಣನಿಗೆ ನಮಸ್ಕಾರ ಮಾಡುತ್ತಾರೆ. ಪರಸ್ಪರ ಬೇರೆ ಎನ್ನುವುದಾದರೆ ಯಾರು ಹಿರಿಯ, ಯಾರು ಕಿರಿಯ ಎನ್ನುವುದರ ನಿರ್ಣಯವಾಗದು. ಇಬ್ಬರೂ ಸಮಾನರೆನ್ನಬೇಕಾಗುವುದು. ಇದು ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ ಸಮಾಧಾನ-

ಸರ್ವಾವತಾರಾಭಿನ್ನೋಽಪಿ ಸಮಶಕ್ತಿರಪಿ ಸ್ವಯಂ ।
ಪೂಜ್ಯಪೂಜಕ ನೀಚೋಚ್ಚಂ ಮೋಹನಾಯ ದುರಾತ್ಮನಾಂ ।
ಅಖಂಡೈಕರಸೋ ವಿಷ್ಣುರ್ದರ್ಶಯೇತ್ ತತ್ರತತ್ರ ಹಿ ॥

ಇತಿ ಷಾಡ್ಗುಣ್ಯೇ ।

'ಶ್ರೀಹರಿ ಎಲ್ಲ ಅವತಾರಗಳಲ್ಲಿಯೂ ಅಭಿನ್ನನೇ ಆಗಿದ್ದರೂ ಸಮಾನ ಶಕ್ತಿಶಾಲಿಯೇ ಆಗಿದ್ದರೂ ದುರ್ಜನರಿಗೆ ಮೋಹನಕ್ಕಾಗಿ ತನ್ನನ್ನೇ ತನಗೆ ಪೂಜ್ಯ ಪೂಜಕ, ನೀಚ ಉಚ್ಚ ಎಂದು ಮುಂತಾಗಿ ತಾನೇ ಭೇದವನ್ನು ಅಲ್ಲಲ್ಲಿ ತೋರಿಸುತ್ತಾನೆ. ಇಬ್ಬರ ಸ್ವರೂಪವೂ ಒಂದೇ ಆಗಿದೆ' ಎಂದು ಷಾಡ್ಗುಣ್ಯ ಎಂಬ ಗ್ರಂಥದಲ್ಲಿ ಹೇಳಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ದ್ವಿಪಂಚಾಶತ್ತಮೋಽಧ್ಯಾಯಃ

❖

ಅಧ್ಯಾಯ - ೫೩

ಅಧ್ಯಾಯ ಸಾರಾಂಶ

ರಾಮಕೃಷ್ಣರು ಗೋಮಂತ ಪರ್ವತವನ್ನೇರಿದರು. ಮತ್ತಿ ತಾಳೆ ಹೊಂಗೆ ಮೂರಟೆ ಅಶೋಕ ಬೇವು ಹಿಂತಾಲ ಅಡಿಕೆ ಸುರಗಿ ನಾಗಸಂಪಿಗೆಗಳಿಂದ ಶೋಭಿಸುವ ಆ ಬೆಟ್ಟದ ಮನೋಹರವಾದ ಒಂದು ಪ್ರದೇಶದಲ್ಲಿ ಬಾಳೆತೋಟಗಳು ಕೋಗಿಲೆ ದುಂಬಿಗಳು ಕಪಿಗಳು ಫಲಭರಿತವಾದ ವೃಕ್ಷಗಳು ನಿರ್ಮಲ ಜಲಾಶಯಗಳು ಝುರಿಗಳು ಎಲ್ಲೆಡೆ ಕಂಡುಬಂದುವು. ಅದು ಪ್ರವರ್ಷಣ ಎಂಬ ಶಿಖರ. ಅಲ್ಲಿ ವರ್ಷದ ಎಲ್ಲ ದಿನಗಳಲ್ಲಿಯೂ ಮಳೆಯಾಗುತ್ತದೆ. ಅಲ್ಲಿ ರಾಮಕೃಷ್ಣರು ವಿಹರಿಸಿದರು.

ಅದೇ ಸಮಯದಲ್ಲಿ ಶ್ವೇತದ್ವೀಪದಲ್ಲಿ ಬಲಿಚಕ್ರವರ್ತಿ ಶ್ರೀಹರಿಯ ಕಿರೀಟವನ್ನು ಕದ್ದು ಓಡಿದ. ಗರುಡ ಬೆನ್ನಟ್ಟಿ ಹೋಗಿ ಪಾತಾಳದಲ್ಲಿ ಹಿಡಿದು ಘೋರ ಯುದ್ಧ ಮಾಡಿದ. ಕಿರೀಟವನ್ನು ಕಸಿದುಕೊಂಡು ಬರುತ್ತಾ ದಾರಿಯಲ್ಲಿ ಗೋಮಂತದ ಶಿಖರದಲ್ಲಿ ವಿಹರಿಸುತ್ತಿದ್ದ ಶ್ರೀಕೃಷ್ಣನನ್ನು ಕಂಡ. ಕಿರೀಟವನ್ನು ಅವನ ಶಿರದಲ್ಲಿಟ್ಟು ತಲೆಬಾಗಿ ನಮಿಸಿ ಸ್ತುತಿಸಿದ.

'ಶ್ರೀಹರಿ ನೀನು ಬ್ರಹ್ಮನಲ್ಲಿ ಬ್ರಹ್ಮರೂಪದಿಂದ ಇದ್ದು ಸೃಷ್ಟಿ ಮಾಡುವಿ. ವಿಷ್ಣುರೂಪದಿಂದ ರಕ್ಷಣೆ ಮಾಡುವಿ. ಶಿವನಲ್ಲಿ ಶಿವರೂಪದಿಂದ ಇದ್ದು ಲಯ ಮಾಡುವಿ. ಈಗ ಕೃಷ್ಣನಾಗಿ ಅವತರಿಸಿರುವಿ. ನಾನು ಗರುಡ. ನಿನ್ನ ಸೇವಕ. ಹೇಳು, ನಾನು ನಿನಗೆ ಏನು ಸೇವೆ ಮಾಡಲಿ?

ಶ್ರೀಕೃಷ್ಣ ಪ್ರೀತಿಯಿಂದ ಗರುಡನ ಮೈಯನ್ನು ಎರಡೂ ಕೈಗಳಿಂದ ತಡವಿ 'ನೀನೀಗ ಹೋಗು, ಬೇಕಾದಾಗ ನೆನೆಯುತ್ತೇನೆ, ಬಾ' ಎಂದು ಹೇಳಿ ಕಳಿಸಿದ. ಮುಂದೆ ನಾಲ್ಕು ತಿಂಗಳಕಾಲ ಪ್ರವರ್ಷಣ ಶಿಖರದಲ್ಲಿಯೇ ವಾಸವಾಗಿದ್ದು ಬಳಿಕ ಕೆಳಗಿಳಿದು ಕರವೀರಪುರಕ್ಕೆ ಹೋದರು ರಾಮಕೃಷ್ಣರು. ಸೃಗಾಲವಾಸುದೇವನನ್ನು ಕೊಂದು ಮಧುರೆಗೆ ಹೋದರು.

ಸೃಗಾಲ ವಾಸುದೇವ ಹತನಾದುದನ್ನು ಕೇಳಿ ಜರಾಸಂಧ ಕುಪಿತನಾಗಿ ಇಪ್ಪತ್ತ ಮೂರು ಅಕ್ಷೋಹಿಣಿ ಸೈನ್ಯವನ್ನು ತಂದು ಏಳು ದಿನಗಳ ಕಾಲ ಯುದ್ಧ ಮಾಡಿದ. ಬಹಳ ಸೈನ್ಯವನ್ನು ಕಳೆದುಕೊಂಡು ಸೋತು ಹಿಂದಿರುಗಿದ. ಅವನ ಸಹಾಯಕ್ಕೆ ಬಂದಿದ್ದ ರಾಜರೂ ಸೋತು ಓಡಿದರು. ಸೋತು ಓಡುವವರನ್ನು ಕೊಲ್ಲದಿರುವುದು ಧರ್ಮವೆಂದು ರಾಮಕೃಷ್ಣರು ಅವರನ್ನು ಬಿಟ್ಟುಬಿಟ್ಟರು. ಹೀಗೆ ಹದಿನೇಳು ಬಾರಿ ಜರಾಸಂಧ ಯುದ್ಧ ಮಾಡಿದ. ಪ್ರತಿಬಾರಿಯೂ ಇಪ್ಪತ್ತ ಮೂರು ಅಕ್ಷೋಹಿಣಿ ಸೈನ್ಯವನ್ನು ಕಳೆದುಕೊಂಡು ಸೋತು ಓಡಿದ. ಹದಿನೆಂಟನೆ ಬಾರಿಯೂ ಆತ ಬರುತ್ತಾನೆ, ಅದರಿಂದ ಬದುಕಿಕೊಳ್ಳಲಿ ಎಂದು ರಾಮಕೃಷ್ಣರು ಅವನನ್ನು ಕೊಲ್ಲದೆ ಬಿಟ್ಟರು.

ಹದಿನೆಂಟನೆ ಯುದ್ಧದಲ್ಲಿ ನಾರದರು ಕಳಿಸಿದ ವೀರನಾದ ಕಾಲಯವನ ಮೂರು ಕೋಟಿ ಮ್ಲೇಚ್ಛರೊಂದಿಗೆ ಮಧುರೆಗೆ ದಂಡೆತ್ತಿ ಬಂದ. ನರಲೋಕದಲ್ಲಿ ನನಗೆ ಇದಿರಾಳಿಗಳೆ ಇಲ್ಲವೆಂದು ತಿಳಿದಿದ್ದ ಆತನಿಗೆ ಯಾದವರು ತನಗೆ ಸಮಾನರೆಂದು ಜನರು ಆಡಿಕೊಳ್ಳುವುದು ಸಹನೆಯಾಗಲಿಲ್ಲ. ಆತ ಬರುವ ಸಮಾಚಾರವನ್ನು ತಿಳಿದೊಡನೆ ಕೃಷ್ಣರಾಮರು ಆಲೋಚನೆ ಮಾಡಿದರು. ನಾಳೆ ಕಾಲಯವನ ಬರಬಹುದು. ನಾಡದು ಜರಾಸಂಧ ಬರಬಹುದು. ಯಾದವರಿಗೆ ಈಗ ಎರಡೂ ಕಡೆಯಿಂದ ಅಪಾಯ, ದೊಡ್ಡ ಸಂಕಟ ಬರುತ್ತಿದೆ. ನಾವು ಯವನರೊಡನೆ ಹೋರಾಡುವಾಗ ಅತ್ತ ಜರಾಸಂಧ ಬಂದು ನಮ್ಮ ಬಂಧುಗಳನ್ನು ಕೊಲ್ಲಬಹುದು, ಸೆರೆ ಹಿಡಿದು ಒಯ್ಯಬಹುದು. ಅದಕ್ಕೆ ನಾವು ಇಂದೇ ಮನುಷ್ಯರಿಗೆ ಅಗಮ್ಯವಾದ ಒಂದು ಸುರಕ್ಷಿತವಾದ ನಗರವನ್ನು ನಿರ್ಮಿಸೋಣ. ಅಲ್ಲಿ ಬಂಧುಗಳನ್ನು ಇರಿಸಿ ಇತ್ತ ಕಾಲಯವನನನ್ನು ನಾಶಮಾಡೋಣ ಎಂದು ಶ್ರೀಕೃಷ್ಣ ಬಲರಾಮನಿಗೆ ಹೇಳಿದ.

ಬಳಿಕ ಸಮುದ್ರದ ಮೇಲೆ ಹನ್ನೆರಡು ಯೋಜನ ವಿಸ್ತಾರದ ಅದ್ಭುತವಾದ ದ್ವಾರಕಾನಗರವನ್ನು ವಿಶ್ವಕರ್ಮನಿಂದ ವಾಸ್ತು ನಿಯಮದಂತೆ ನಿರ್ಮಾಣ ಮಾಡಿಸಿದ. ಗಗನ ಚುಂಬಿಗಳಾದ

ರತ್ನಮಯ ಶಿಖರ ಗೋಪುರಗಳು ಬಂಗಾರದ ಮನೆಗಳು ವಾಸ್ತುದೇವತಾಮಂದಿರ ಚಂದ್ರಶಾಲೆಗಳು ಎಲ್ಲೆಡೆ ಶೋಭಿಸಿದುವು. ಸುಧರ್ಮ ಎಂಬ ಸಭಾಂಗಣವನ್ನೂ ಪಾರಿಜಾತ ವೃಕ್ಷವನ್ನೂ ದೇವೇಂದ್ರ ಅಲ್ಲಿ ತಂದಿರಿಸಿದ. ಅಲ್ಲಿ ವಾಸಮಾಡುವ ಜನರಿಗೆ ಮಾನವ ಸಹಜವಾದ ಜರೆ ಮರಣ ರೋಗಗಳಿಲ್ಲ. ಕ್ಷೀರ ಸಾಗರಶಾಯಿಯಾದ ದೇವದೇವನಾದ ಶ್ರೀವಿಷ್ಣುವಿಗೆ ಪ್ರಿಯವಾದ ನಗರ ಅದು. ವರುಣ ದೇವದೇವನಿಗೆ ಒಂದು ಸಾವಿರ ಸುಂದರವಾದ ಕಿವಿಕಪ್ಪಾದ ಬಿಳಿ ಕುದುರೆಗಳನ್ನಿತ್ತ. ಕುಬೇರ ಅಷ್ಟನಿಧಿಗಳನ್ನಿತ್ತ. ಬೇರೆ ಲೋಕಪಾಲಕರೂ ತಮ್ಮ ಸಂಪತ್ತುಗಳನ್ನು ದ್ವಾರಕಾಧೀಶನಿಗೆ ಅರ್ಪಿಸಿದರು. ಅವನು ತನ್ನ ಅಚಿಂತ್ಯಶಕ್ತಿಯಿಂದ ಬಂಧುಗಳೆಲ್ಲರನ್ನೂ ಮಧುರೆಯಿಂದ ದ್ವಾರಕೆಗೆ ಅನಾಯಾಸವಾಗಿ ತಂದಿರಿಸಿದ. ಬಲರಾಮನನ್ನು ಅಲ್ಲಿ ಇರಲು ಹೇಳಿ ತಾನೊಬ್ಬನೆ ಮಧುರೆಯ ಬಳಿಯಲ್ಲಿ ಕಾಲಯವನನೊಡನೆ ಹೋರಾಡಲು ಕಮಲದ ಹಾರವನ್ನು ಧರಿಸಿ ನಿರಾಯುಧನಾಗಿ ಹೊರಟ.

❖

ರಾಮಕೃಷ್ಣರು ಗೋಮಂತ ಪರ್ವತದಲ್ಲಿ ವಿಹಾರ ಮಾಡುತ್ತಿದ್ದಾಗ ಅತ್ತ ಕ್ಷೀರಸಮುದ್ರದಲ್ಲಿರುವ ಶ್ವೇತದ್ವೀಪದ ಅರಮನೆಯಲ್ಲಿ ಬಲಿ ಚಕ್ರವರ್ತಿ ಪರಮಾತ್ಮನ ಕಿರೀಟವನ್ನು ಕದ್ದು ಗರುಡನ ಕೈಗೆ ಸಿಕ್ಕಿಬಿದ್ದು ಹೋರಾಟದಲ್ಲಿ ಸೋತ-

ಏತಸ್ಮಿನ್ನೇವ ಕಾಲೇ ತು ಕ್ಷೀರೋದೇ ಸಾಗರೋತ್ತಮೇ ।
ನಿವಾಸೇ ದೇವದೇವಸ್ಯ ಶಂಖಚಕ್ರಗದಾಭೃತಃ ॥ ೭ ॥
ಉಪಾಸೀನೋ ಮಹಾಬಾಹುಃ ಶ್ರೀಮಾನ್ ವೈರೋಚನೋ ಬಲಿಃ ।
ಜಹಾರ ದೇವದೇವಸ್ಯ ಕಿರೀಟಂ ರತ್ನಚಿತ್ರಿತಮ್ ॥ ೮ ॥
ಹೃತಂ ದಾನವವೀರೇಣ ವಿದಿತ್ವಾ ಪುರಪಾಲಕಃ ॥
ತಮನ್ವಧಾವತ್ ತ್ವರಿತಂ ವೈನತೇಯೋ ವಿಹಂಗರಾಟ್ ॥ ೧೦ ॥

ಇದೇ ಸಮಯದಲ್ಲಿ ಕ್ಷೀರಸಾಗರದಲ್ಲಿ ಶಂಖಚಕ್ರಗದಾಧಾರಿಯಾದ ದೇವದೇವನ ಅರಮನೆಯಲ್ಲಿ ಕುಳಿತಿದ್ದ ಮಹಾಬಾಹುವಾದ ಶ್ರೀಮಾನ್

ಬಲಿಚಕ್ರವರ್ತಿ ದೇವದೇವನ ರತ್ನಖಚಿತವಾದ ಕಿರೀಟವನ್ನು ಅಪಹರಿಸಿದ. ದಾನವವೀರನಾದ ಬಲಿ ಪರಮಾತ್ಮನ ಕಿರೀಟವನ್ನು ಅಪಹರಿಸಿದ್ದನ್ನು ತಿಳಿದು ನಗರ ರಕ್ಷಕನಾದ ಗರುಡ ಅವನನ್ನು ಬೆನ್ನಟ್ಟಿದ.

ಇಲ್ಲಿ ಅನೇಕ ಪ್ರಶ್ನೆಗಳಿಗೆ ಅವಕಾಶವಿದೆ. ಕ್ಷೀರಸಾಗರ ಧಾಮತ್ರಯಗಳಲ್ಲಿ ಒಂದು. ಅಲ್ಲಿ ಮುಕ್ತರು ವಾಸಿಸುತ್ತಾರೆ. ಅಮುಕ್ತನಾದ ಬಲಿ ಚಕ್ರವರ್ತಿ ಅಲ್ಲಿಗೆ ಹೇಗೆ ಹೋದನೆಂದು ಒಂದು ಪ್ರಶ್ನೆ. ಕರ್ಮಜ ದೇವತೆಯಾದ ಬಲಿ ಚಕ್ರವರ್ತಿಗೆ ಪರಮಾತ್ಮನ ಕಿರೀಟವನ್ನು ಅಪಹರಿಸುವಂಥ ಪಾಪಬುದ್ಧಿ ಹೇಗೆ ಬಂದಿತು? ಶ್ರೀಹರಿಯ ಕಣ್ಣೆದುರೇ ಅವನ ಕಿರೀಟವನ್ನು ಕದಿಯಲು ಬಲಿಗೆ ಹೇಗೆ ಸಾಧ್ಯವಾಯಿತು? ಶ್ರೀಹರಿ ಆಗ ಏಕೆ ಸುಮ್ಮನಿದ್ದ? ಅವನ ಬಳಿಯಲ್ಲಿದ್ದ ಬೇರೆ ದೇವತೆಗಳು ಏಕೆ ಸುಮ್ಮನಿದ್ದರು? ಎಂದು ಪ್ರಶ್ನೆಗಳು ಬರುತ್ತವೆ. ಇವೆಲ್ಲಕ್ಕೂ ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಸಮಾಧಾನ ಸಿಗುತ್ತದೆ.

ಬಹೂನಿ ಸ್ಥಾನಜಾತಾನಿ ಕೃಷ್ಣಸ್ಯ ಕ್ಷೀರಸಾಗರೇ ।
ಕಾನಿಚಿನ್ಮುಕ್ತಗಮ್ಯಾನಿ ನಾಮುಕ್ತೈಸ್ತ್ರಿದಶೈರಪಿ ।
ಗಂತುಂ ಶಕ್ಯಾನ್ಯಥಾನ್ಯಾನಿ ಗಮ್ಯಾನ್ಯನ್ಯೈರಪಿ ಕ್ವಚಿತ್ ।
ತತ್ರ ದೇವಾಶ್ಚ ಯೋಗೀಂದ್ರಾ ಭಕ್ತಾಶ್ಚಾನ್ಯೇ ಜನಾರ್ದನಂ ।
ಗತ್ವಾಽರ್ಚಯಂತಿ ದೇವೇಶಂ ಬಲಿಸ್ತತ್ರಾಗಮತ್ ಕ್ವಚಿತ್ ।
ತಸ್ಯ ತತ್ರಾಸುರಾವೇಶಾತ್ ಪಾಪಬುದ್ಧಿರಜಾಯತ ।
ತದ್ವ್ಯಕ್ತ್ಯರ್ಥಂ ಜಗನ್ನಾಥಃ ಶಿಶ್ಯೇ ಸುಪ್ತವದವ್ಯಯಃ ।
ತದಾ ಸ ಪಾಪಯಾ ಬುದ್ಧ್ಯಾ ಕಿರೀಟಮಹರತ್ಪ್ರಭೋಃ ।
ತಂ ಜಿತ್ವಾ ಗರುಡಸ್ತತ್ತು ಹೃತ್ವಾ ಗೋಮಂತಮಾವ್ರಜತ್ ।
ತತ್ರ ಕೃಷ್ಣಸ್ಯ ಶಿರಸಿ ಕಿರೀಟಮಮುಚತ್ ಪ್ರಭೋಃ ॥

ಇತಿ ಮಾಹಾತ್ಮ್ಯೇ ॥

'ಶ್ರೀಹರಿಗೆ ಕ್ಷೀರಸಾಗರದಲ್ಲಿ ಅನೇಕ ವಾಸ ಸ್ಥಾನಗಳಿವೆ. ಅವುಗಳಲ್ಲಿ ಕೆಲವು ಮುಕ್ತಗಮ್ಯವೆನಿಸಿವೆ. ಅಲ್ಲಿಗೆ ಅಮುಕ್ತರಾದ ದೇವತೆಗಳಿಗೂ ಪ್ರವೇಶವಿಲ್ಲ. ಇನ್ನು ಕೆಲವು ಅಮುಕ್ತರಿಗೂ ಪ್ರವೇಶವಿರುವ ಸ್ಥಾನಗಳು. ಅಲ್ಲಿ ದೇವತೆಗಳೂ ಯೋಗೀಂದ್ರರೂ ಇತರ ಭಕ್ತರೂ ಹೋಗಿ ಪರಮಾತ್ಮನನ್ನು ಪೂಜಿಸುತ್ತಾರೆ. ಒಮ್ಮೆ ಅಲ್ಲಿಗೆ ಬಲಿ ಚಕ್ರವರ್ತಿ ಬಂದಾಗ ಅವನಿಗೆ ಅಸುರಾವೇಶದಿಂದ ದುರ್ಬುದ್ಧಿ ಉಂಟಾಗಿತ್ತು. ಅದನ್ನು ಲೋಕಕ್ಕೆ ತೋರಿಸುವ ಉದ್ದೇಶದಿಂದ

ಶ್ರೀಹರಿ ನಿದ್ದೆ ಬಂದವನಂತೆ ಪವಡಿಸಿದ. ಆಗ ಬಲಿ ಚಕ್ರವರ್ತಿ ದುರ್ಬುದ್ಧಿಯಿಂದ ಪ್ರಭುವಿನ ಕಿರೀಟವನ್ನು ಅಪಹರಿಸಿದ. ಗರುಡ ಅವನನ್ನು ಪರಾಭವಗೊಳಿಸಿ ಆ ಕಿರೀಟವನ್ನು ಕಿತ್ತುಕೊಂಡು ಗೋಮಂತ ಪರ್ವತದ ವರೆಗೆ ಬಂದಾಗ ಅಲ್ಲಿ ಶ್ರೀಕೃಷ್ಣನನ್ನು ಕಂಡು ಅವನ ತಲೆಯಲ್ಲಿಯೇ ಕಿರೀಟವನ್ನು ತೊಡಿಸಿದ' ಎಂದು ಮಾಹಾತ್ಮ್ಯ ಎಂಬ ಗ್ರಂಥದಲ್ಲಿ ಉಕ್ತವಾಗಿದೆ.

ಕ್ಷೀರಸಾಗರದಲ್ಲಿ ಅಮುಕ್ತ ಸ್ಥಾನವೂ ಇರುವುದರಿಂದ ಅಲ್ಲಿಗೆ ಬಲಿ ಚಕ್ರವರ್ತಿ ಬಂದಿದ್ದಾನೆ. ಅವನಿಗೆ ಅಸುರಾವೇಶದಿಂದ ದುರ್ಬುದ್ಧಿ ಬಂದಿತ್ತು. ಅವನ ಅಸುರಾವೇಶವನ್ನು ಲೋಕಕ್ಕೆ ತಿಳಿಸಲು ಹರಿ ನಿದ್ದೆ ಬಂದವನಂತೆ ಮಲಗಿದ್ದರಿಂದ ಬಲಿಚಕ್ರವರ್ತಿ ಕಿರೀಟವನ್ನು ಕದ್ದ. ದೇವತೆಗಳು ಏಕೆ ಸುಮ್ಮನಿದ್ದರೆಂಬ ಪ್ರಶ್ನೆಗೆ ಮಾತ್ರ ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ಕೊಟ್ಟಿರುವ ಸಮಾಧಾನವನ್ನು ಇಲ್ಲಿ ಇಟ್ಟುಕೊಳ್ಳಬೇಕು. ಶ್ರೀಹರಿ ತಾನು ನಿದ್ದೆ ಬಂದವನಂತೆ ನಟಿಸುವಾಗ ದೇವತೆಗಳಿಗೂ ಹಾಗೆ ನಟಿಸಲು ಸೂಚನೆ ಮಾಡಿದ್ದ. ಹೀಗಾಗಿ ದೇವತೆಗಳೆಲ್ಲರೂ ಕಣ್ಣುಮುಚ್ಚಿ ಮಲಗಿದ್ದರು. ಬಲಿ ಆಗ ಕಿರೀಟವನ್ನು ಕದ್ದ. ಗರುಡ ಅವನಿಂದ ಕಿತ್ತುತಂದ ಆ ಕಿರೀಟವನ್ನು ಕೃಷ್ಣನ ತಲೆಗೆ ತೊಡಿಸಿದ. ಏಕೆಂದರೆ ಶ್ವೇತದ್ವೀಪಪ್ರಭುವಿಗೂ ಕೃಷ್ಣನಿಗೂ ಏನೂ ಭೇದವಿಲ್ಲ. ಹರಿಯ ರೂಪಗಳಿಗೆ ಸದಾ ಅತ್ಯಂತ ಅಭೇದವೇ ಇರುವುದರಿಂದ ಆ ದೊಡ್ಡ ಗಾತ್ರದ ಕಿರೀಟವೂ ಬಾಲಕೃಷ್ಣನ ಪುಟ್ಟ ತಲೆಯ ಮೇಲೆ ಸರಿಯಾಗಿಯೇ ಕುಳಿತಿತ್ತು. ಅತ್ತ ಶ್ವೇತದ್ವೀಪಪ್ರಭುವಿನ ತಲೆಯ ಮೇಲೂ ಅದೇ ಕಿರೀಟ ಬಂದಿತ್ತು.

❖❖❖

ಬಲಿಚಕ್ರವರ್ತಿ ಕದ್ದ ಪರಮಾತ್ಮನ ಕಿರೀಟವನ್ನು ಗರುಡ ಕಿತ್ತು ತಂದು ಗೋಮಂತ ಪರ್ವತದಲ್ಲಿ ಕೃಷ್ಣನ ತಲೆಯಲ್ಲಿ ತೊಡಿಸಿದ, ತಲೆಬಾಗಿ ನಮಿಸಿ ಸ್ತುತಿಸಿದ-

ಹಿರಣ್ಯಗರ್ಭತ್ವಮುಪೇತ್ಯ ಮೂಲೇ
ಸೃಜಸ್ಯಶೇಷಂ ಭುವನಂ ಸ ಏವ ।
ನಾರಾಯಣಾತ್ಮನ್ ಪರಿಪಾಸಿ ಭೂಯೋ
ಜಹಾರ ಚಾಂತೇ ಭಗವನ್ ಶಿವಾತ್ಮನ್ ॥ ೧೫ ॥

ಸೃಷ್ಟಿಯ ಆದಿಯಲ್ಲಿ ಬ್ರಹ್ಮನೊಳಗೆ ನಿಯಾಮಕನಾಗಿದ್ದು ಬ್ರಹ್ಮನ ನಾಮಗಳನ್ನು ಧರಿಸಿ ಸಮಸ್ತ ಜಗತ್ತನ್ನು ಸೃಜಿಸುವಿ. ನಾರಾಯಣನೇ ಆಗಿರುವ ನೀನು ಪಾಲನ ಮಾಡುವಿ. ಮತ್ತೆ ಕೊನೆಯಲ್ಲಿ ಶಿವನೊಳಗೆ ನಿಯಾಮಕನಾಗಿದ್ದು ಶಿವನ ನಾಮಗಳನ್ನು ಧರಿಸಿ ಸಂಹಾರವನ್ನು ಮಾಡುವಿ.

ಇಲ್ಲಿ ಮೇಲುನೋಟಕ್ಕೆ ನೀನೇ ಬ್ರಹ್ಮನಾಗುವಿ. ನೀನೆ ಶಿವನಾಗುವಿ, ತ್ರಿಮೂರ್ತಿಗಳಿಗೆ ಭೇದವಿಲ್ಲ ಎಂದು ಹೇಳಿದಂತೆ ಕಾಣುತ್ತದೆ. ಬೇರೆ ವ್ಯಾಖ್ಯಾನಕಾರರು ಹಾಗೇ ಹೇಳುತ್ತಾರೆ. ಆದರೆ ಬ್ರಹ್ಮರುದ್ರರು ಜೀವರು, ಪರಮಾತ್ಮನಿಂದ ಭಿನ್ನರೆ. ಅವರೊಳಗೆ ನಿಯಾಮಕರಾಗಿರುವ 'ಬ್ರಹ್ಮ' 'ರುದ್ರ' ಎಂಬ ವಿಷ್ಣುರೂಪಗಳು ಮತ್ತು ಹೊರಗೆ ಪ್ರತ್ಯೇಕವಾಗಿರುವ 'ವಿಷ್ಣು' ಎಂಬ ವಿಷ್ಣುರೂಪ ಈ ಮೂರೂ ಒಬ್ಬನೇ ಪರಮಾತ್ಮ. ಅವರಲ್ಲಿ ಭೇದವಿಲ್ಲ.

ಬ್ರಹ್ಮಸ್ಥೋ ಬ್ರಹ್ಮನಾಮಾಽಸೌ ರುದ್ರಸ್ಥೋ ರುದ್ರನಾಮಕಃ।
ತಯೋರಪಿ ನಿಯಂತೈಕಃ ಸ್ವಯಮೇವ ಜನಾರ್ದನಃ।

ಇತಿ ಸ್ಕಾಂದೇ ॥

'ಬ್ರಹ್ಮನಲ್ಲಿದ್ದು ಬ್ರಹ್ಮನ ನಾಮಗಳನ್ನು ಪರಮಮುಖ್ಯ ವೃತ್ತಿಯಿಂದ ಧರಿಸುವವನು ಶ್ರೀಹರಿಯೆ. ರುದ್ರನಲ್ಲಿದ್ದು ರುದ್ರನಾಮಗಳನ್ನು ಪರಮಮುಖ್ಯವೃತ್ತಿಯಿಂದ ಧರಿಸುವವನೂ ಶ್ರೀಹರಿಯೆ. ಅವನೊಬ್ಬನೇ ಅವರಿಬ್ಬರಿಗೂ ನಿಯಾಮಕನಾಗಿದ್ದು ಸ್ವತಃ ವಿಷ್ಣು ಎನಿಸುತ್ತಾನೆ.' ಎಂದು ಸ್ಕಂದಪುರಾಣದಲ್ಲಿ ಉಕ್ತವಾಗಿದೆ.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ತ್ರಿಪಂಚಾಶತ್ತಮೋಽಧ್ಯಾಯಃ

❖❖❖

ಅಧ್ಯಾಯ - ೫೪

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಮಧುರೆಯಿಂದ ಹೊರಗೆ ಬಂದುದನ್ನು ಕಾಲಯವನ ನೋಡಿದ. ಎದೆಯಲ್ಲಿ ಶ್ರೀವತ್ಸ ನಾಲ್ಕು ಕೈಗಳುಳ್ಳವನು, ಕಮಲಾಕ್ಷ ವನಮಾಲಿ ಅತ್ಯಂತ ಸುಂದರ. ನಾರದರು ಹೇಳಿದ ಲಕ್ಷಣಗಳೇ ಇರುವುದರಿಂದ ಈತ ಕೃಷ್ಣನೆ, ನಿರಾಯುಧನಾಗಿ ಕಾಲುನಡೆಯಿಂದ ಹೋಗುತ್ತಾನೆ. ನಾನೂ ನಿರಾಯುಧನಾಗಿಯೇ ಹೋಗಿ ಹಿಡಿದು ಅವನೊಂದಿಗೆ ಹೋರಾಡುತ್ತೇನೆ ಎಂದು ನಿಶ್ಚಯಿಸಿದ, ಕಾಲಯವನ.

ತನಗೆ ಬೆನ್ನುಹಾಕಿ ಓಡುತ್ತಿದ್ದ ಕೃಷ್ಣನನ್ನು ಬೆನ್ನಟ್ಟಿ ಧಾವಿಸಿದ. ಕೃಷ್ಣ ನಡುನಡುವೆ ಕೈಗೆ ಸಿಗುವಂತೆ ಹತ್ತಿರವಾಗುತ್ತಾನೆ, ಒಡನೆ ದೂರ ಓಡುತ್ತಾನೆ. ಹೀಗೆ ವಂಚಿಸಿ ಕಾಲಯವನನ್ನು ದೂರದ ಒಂದು ಬೆಟ್ಟದ ಗುಹೆಗೆ ಕರೆತರುತ್ತಾನೆ. 'ನಿಲ್ಲು ನಿಲ್ಲು ಯದುವಂಶದಲ್ಲಿ ಜನಿಸಿದ ನೀನು ಹೀಗೆ ಪಲಾಯನ ಮಾಡು ವುದು ಉಚಿತವಲ್ಲ' ಎಂದು ಕಾಲಯವನ ಹೇಳುತ್ತಿದ್ದಂತೆಯೇ ಕೃಷ್ಣ ಗುಹೆಯನ್ನು ಪ್ರವೇಶಿಸುತ್ತಾನೆ. ಕಾಲಯವನನೂ ಒಳಗೆ ಪ್ರವೇಶಿಸಿ ಒಬ್ಬ ವ್ಯಕ್ತಿ ಮಲಗಿದ್ದುದನ್ನು ಕಂಡು ಈತ ಕೃಷ್ಣನೆ ಎಂದು ಭ್ರಮಿಸುತ್ತಾನೆ. ನನ್ನನ್ನು ಇಷ್ಟು ದೂರಕ್ಕೆ ಕರೆತಂದು ಸಭ್ಯನಂತೆ ಇಲ್ಲಿ ಮಲಗಿಕೊಂಡೆಯ' ಎನ್ನುತ್ತ ಕಾಲಿಂದ ಒದೆಯುತ್ತಾನೆ.

ಅಲ್ಲಿ ಮಲಗಿದ್ದವನು ಮುಚುಕುಂದ ಮಹಾರಾಜ. ಆತನೆದ್ದು ಕೋಪದಿಂದ ಕಣ್ತೆರೆದು ಕಂಡೊಡನೆ ಕಾಲಯವನನು ಕ್ಷಣದಲ್ಲಿ ಸುಟ್ಟು ಬೂದಿಯಾದ.

ಮುಚುಕುಂದ ಇಕ್ಷ್ವಾಕು ಕುಲದವನು, ಮಾಂಧಾತೃರಾಜನ ಮಗ. ವಿಷ್ಣುಭಕ್ತ ಸತ್ಯಸಂಧ. ದೇವಾಸುರ ಸಂಗ್ರಾಮದಲ್ಲಿ ದೇವಸೇನೆಗೆ, ಷಣ್ಮುಖ ಬರುವವರೆಗೆ ಇವನೇ ಸೇನಾಧಿಪತಿಯಾಗಿ ಸೇವೆ ಮಾಡಿದವನು. ನಿಷ್ಕಂಟಕವಾದ ಭೂಲೋಕಸಾಮ್ರಾಜ್ಯ ವನ್ನೂ ಸಮಸ್ತ ಭೋಗೈಶ್ವರ್ಯವನ್ನೂ ಬಿಟ್ಟು ನಿಷ್ಕಾಮನೆಯಿಂದ ಸೇವೆಗೈದ ರಾಜನಿಗೆ ದೇವತೆಗಳು ಹೇಳಿದರು, 'ರಾಜನೆ, ನಿನ್ನ

ಬಂಧುಗಳು, ಪ್ರಜೆಗಳು ನಿನ್ನ ಕಾಲದವರು ಯಾರೂ ಈಗ ಇಲ್ಲ. ನಿನಗೆ ಒಳ್ಳೆಯದಾಗಲಿ. ಮುಕ್ತಿಯೊಂದನ್ನು ಬಿಟ್ಟು ಬೇರೆ ಯಾವುದೇ ವರವನ್ನಾದರೂ ಕೇಳು ಕೊಡುತ್ತೇವೆ. ಮುಕ್ತಿ ಕೊಡುವುದಕ್ಕೆ ನಾಶರಹಿತನಾದ ವಿಷ್ಣು ಒಬ್ಬನೇ ಸಮರ್ಥ.' ಮುಚುಕುಂದನೆಂದ, 'ಗುಹೆಯನ್ನು ಪ್ರವೇಶಿಸಿ ಬಹುಕಾಲ ನಿದ್ದೆ ಮಾಡುವೆನು. ಯಾರೇ ಆಗಲಿ ನನ್ನ ನಿದ್ರೆಗೆ ಭಂಗ ಮಾಡಿದರೆ ಕೂಡಲೆ ಸುಟ್ಟು ಬೂದಿಯಾಗಲಿ' ಎಂದು. 'ನೀನು ನಿದ್ದೆ ಮಾಡುವಾಗ ಎಚ್ಚರ ಗೊಳಿಸುವವನು ನೀನು ನೋಡಿದ ಮಾತ್ರಕ್ಕೆ ತಕ್ಷಣದಲ್ಲಿ ಬೂದಿಯಾಗುವನು' ಎಂದು ದೇವತೆಗಳು ವರವಿತ್ತರು. ಬಳಿಕ ರಾಜ ಗುಹೆಯಲ್ಲಿ ಮಲಗಿದ. ಕಾಲಯವನ ಒದ್ದು ಎಚ್ಚರಗೊಳಿಸಿದ್ದರಿಂದ ಅವನ ನೋಟಕ್ಕೆ ಸುಟ್ಟು ಬೂದಿಯಾದ.

ಭಗವಾನ್ ಶ್ರೀಕೃಷ್ಣ ರಾಜನಿಗೆ ತನ್ನ ದರ್ಶನ ನೀಡಿದ. ರಾಜ 'ಯಾರೀತ?' ಎಂದು ಸಂದೇಹಪಟ್ಟು ಕೇಳಿದ, 'ನೀನು ಸಾಕ್ಷಾತ್ ಭಗವಂತನೆ ಅಥವಾ ಅಗ್ನಿಯೆ, ಸೂರ್ಯನೆ, ಚಂದ್ರನೆ, ಇಂದ್ರನೆ ಅಥವಾ ಬೇರೆ ಲೋಕಪಾಲಕನೆ? ನೀನು ಭಗವಂತನೇ ಇರಬಹುದೆಂದು ಭಾವಿಸುತ್ತೇನೆ. ನಿನ್ನ ಅವತಾರ ನಾಮ ಗೋತ್ರಗಳನ್ನು ಹೇಳುವುದು ನಿನಗೆ ಉಚಿತವೆನಿಸಿದರೆ ಹೇಳು. ನಾನು ಮಾಂಧಾತೃ ರಾಜನ ಪುತ್ರ ಮುಚುಕುಂದ. ನಿರ್ಜನವಾದ ಈ ಗುಹೆಯಲ್ಲಿ ಹಾಯಾಗಿ ಮಲಗಿದ್ದೆ. ಯಾರೋ ಒಬ್ಬ ನನ್ನನ್ನು ಎಬ್ಬಿಸಿ ತನ್ನ ಪಾಪದಿಂದ ತಾನೇ ಸುಟ್ಟು ಬೂದಿಯಾಗಿದ್ದಾನೆ'.

ಶ್ರೀಕೃಷ್ಣನೆಂದ, 'ನನ್ನ ಅವತಾರಗಳು, ಕರ್ಮಗಳು ನಾಮಗಳು ಎಲ್ಲವೂ ಅನಂತ. ಇಷ್ಟೇ ಎಂದು ನಾನು ಎಣಿಸಲಾರೆ. ಯಾರಾದರೂ ಭೂಮಿಯಲ್ಲಿ ಮಣ್ಣಿನ ಧೂಳು ಇಷ್ಟೇ ಎಂದು ಎಣಿಸಿಯಾನು. ನನ್ನ ಗುಣ ಕರ್ಮ ನಾಮಗಳನ್ನು ಯಾರೂ ಎಣಿಸಲಾರ. ನಾನು ಈಗ ಭೂಭಾರನಾಶಕ್ಕಾಗಿ ಧರ್ಮರಕ್ಷಣೆಗಾಗಿ ಯದುಕುಲದಲ್ಲಿ ವಸುದೇವಸುತ ವಾಸುದೇವನಾಗಿ ಜನಿಸಿದ್ದೇನೆ. ಸಜ್ಜನರನ್ನು ದ್ವೇಷಿಸುವ ಕಂಸನನ್ನೂ ಅವನ ಕಡೆಯ ಪ್ರಲಂಬ ಮುಂತಾದ ಅಸುರರನ್ನೂ ಸಂಹರಿಸಿದ್ದೇನೆ. ನಿನ್ನ ತೀಕ್ಷ್ಣವಾದ

ದೃಷ್ಟಿಯಿಂದ ಕಾಲಯವನ ಸುಟ್ಟು ಹೋಗಿದ್ದಾನೆ. ಈ ದುಷ್ಟಸಂಹಾರ ಕಾರ್ಯವನ್ನು ಮಾಡಿಸಿ ನಿನ್ನನ್ನು ಅನುಗ್ರಹಿಸಲೆಂದೇ ನಾನು ಇಲ್ಲಿಗೆ ಬಂದಿದ್ದೇನೆ. ಬೇಕಾದ ವರವನ್ನು ಕೇಳು' ಎಂದು.

ಮುಚುಕುಂದ ತನಗೆ ಗರ್ಗಮುನಿ ಹೇಳಿದ್ದ ಮಾತನ್ನು ನೆನೆದು ಈತ ನಾರಾಯಣನೇ ಎಂದು ತಿಳಿದು ಸಂತೋಷದಿಂದ ನಮಸ್ಕರಿಸಿ ನುಡಿದ. 'ಪ್ರಭು, ನಾನು ನಿನ್ನಿಚ್ಛೆಯಿಂದ ಎಲ್ಲ ಸ್ತ್ರೀಪುರುಷರಂತೆ ವಿಷಯಾಸಕ್ತಿಯಲ್ಲಿ ಸಿಲುಕಿದ್ದೇನೆ ನಿನ್ನನ್ನು ಭಜಿಸುತ್ತಿಲ್ಲ. ಈ ಕರ್ಮಭೂಮಿಯಲ್ಲಿ ದುರ್ಲಭವಾದ ಮಾನವಜನ್ಮವನ್ನು ಪಡೆದೂಕೂಡ ಬುದ್ಧಿಶೂನ್ಯರಾಗಿ ಮನೆ ಎಂಬ ಕತ್ತಲು ಬಾವಿಯಲ್ಲಿ ಬೀಳುತ್ತಾರೆ ಜನರು. ನಾನೂ ಹಾಗೇ ನಶ್ವರವಾದ ಈ ಪಾರ್ಥಿವ ದೇಹದಲ್ಲಿ ರಾಜನೆಂದು ಅಭಿಮಾನಪಟ್ಟು ಸೈನ್ಯಗಳೊಂದಿಗೆ ಗರ್ವದಿಂದ ಸಂಚರಿಸಿದೆ. ನಿನ್ನನ್ನು ಭಜಿಸದೆ ಆಯುಷ್ಯವನ್ನು ವ್ಯರ್ಥವಾಗಿ ಕಳೆದೆ. ಹೀಗೆ ಆಯುಷ್ಯ ಕಳೆದೊಡನೆ ವಿಷಯ ಭೋಗದಲ್ಲಿ ಮೈಮರೆತಿರುವ ಮಾನವನನ್ನು ಹಾವು ಇಲಿಯನ್ನು ನುಂಗುವಂತೆ ನೀನು ಮೃತ್ಯುರೂಪದಿಂದ ಬಂದು ನುಂಗುವೆ. ಅಂದಿನವರೆಗೆ ರಾಜನೆಂದು ಮೆರೆದ ದೇಹ ನರಿ ನಾಯಿಗಳ ಪಾಲಾಗುತ್ತದೆ. ಅಥವಾ ಸುಟ್ಟು ಬೂದಿಯಾಗುತ್ತದೆ. ಅಥವಾ ಮಣ್ಣಿನಲ್ಲಿ ಕೊಳೆಯುತ್ತದೆ. ಬದುಕಿರುವಾಗಲೂ ರಾಜ, ಊರಿಗೆ ಅರಸನಾಗಿ ಮೆರೆದರೂ ಹೆಂಡತಿಗೆ ಗುಲಾಮನಾಗಿ ಆಟದ ಸಾಕುಪ್ರಾಣಿಯಂತಾಗುತ್ತಾನೆ. ಇಹದಲ್ಲಿ ವಿಷಯಸುಖವನ್ನು ತ್ಯಜಿಸಿದರೂ ಪರಲೋಕದ ವಿಷಯಭೋಗಕ್ಕಾಗಿ ಕಾಮ್ಯಕರ್ಮವನ್ನು ನಡೆಸಿ ತಿರುಗಿ ವಿಷಯಾಸಕ್ತಿಯನ್ನೇ ಬೆಳೆಸಿಕೊಳ್ಳುತ್ತಾನೆ ಹೊರತು ಸುಖವನ್ನು ಸಂಪಾದಿಸುವುದಿಲ್ಲ. ಮುಕ್ತಿ ಸಿಗುವ ಕಾಲ ಬಂದಾಗಲೇ ಸಜ್ಜನರೊಡನಾಟ ದೊರೆತು ಅದರಿಂದ ಜ್ಞಾನ ಭಕ್ತ್ಯಾದಿ ಸಾಧನಸಂಪತ್ತು ಲಭಿಸುತ್ತದೆ. ರಾಜ್ಯಸುಖದ ಸಂಬಂಧವನ್ನು ಕಡಿದುಕೊಳ್ಳುವ ಬಯಕೆ ಮೂಡುತ್ತದೆ. ನನಗೆ ನಿನ್ನ ಅನುಗ್ರಹದಿಂದ ರಾಜ್ಯದ ಸಂಬಂಧ ಕಡಿದುಹೋಗಿದೆ. ಬೇಕಾದ ವರವನ್ನು ಕೇಳೆಂದು ನೀನು ಆಜ್ಞೆ ಮಾಡಿರುವುದರಿಂದ

ನಾನು ಮೋಕ್ಷವನ್ನೇ ಬೇಡುತ್ತೇನೆ. ಮೋಕ್ಷದಾಯಕನಾದ ನಿನ್ನಿಂದ ಸಂಸಾರವನ್ನು ಯಾವ ವಿವೇಕಿ ತಾನೆ ಬಯಸಿಯಾನು? ಸಂಸಾರಭಯವಿಲ್ಲದ ನಿನ್ನ ಪಾದಕಮಲವನ್ನೇ ನಾನು ಮೊರೆಹೊಕ್ಕಿದ್ದೇನೆ, ನನ್ನನ್ನು ಕಾಪಾಡು.'

ಶ್ರೀಕೃಷ್ಣನೆಂದ 'ರಾಜನೆ, ನೀನು ವಿರಕ್ತನೆಂದು ನನಗೆ ತಿಳಿದಿದೆ. ಆದರೂ ಪರೀಕ್ಷೆಗಾಗಿ 'ಬೇಕಾದ ವರವನ್ನು ಕೇಳು' ಎಂದಿದ್ದೇನೆ. ನೀನಿನ್ನು ನನ್ನಲ್ಲೇ ಮನಸ್ಸಿಟ್ಟು ಭೂಮಿಯಲ್ಲಿ ಯಥೇಚ್ಛವಾಗಿ ಸಂಚರಿಸುತ್ತಿರು. ಕ್ಷಾತ್ರಧರ್ಮಾನುಸಾರವಾಗಿ ಬೇಟೆ ಮುಂತಾದವು ಗಳಿಂದ ನೀನು ಮಾಡಿರುವ ಪ್ರಾಣಿಹಿಂಸೆಯ ಪಾಪಗಳನ್ನು ತಪಸ್ಸಿನಿಂದ ನೀಗಿಕೊಳ್ಳು. ಮುಂದಿನ ಜನ್ಮದಲ್ಲಿ ಎಲ್ಲ ಜೀವಿಗಳಿಗೂ ಪ್ರಿಯತಮನಾದ ಬ್ರಾಹ್ಮಣಶ್ರೇಷ್ಠನಾಗಿ ಜನಿಸಿ ನನ್ನನ್ನು ಪಡೆಯುವಿ.'

❖❖❖

ಅಧ್ಯಾಯ - ೫೫

ಅಧ್ಯಾಯ ಸಾರಾಂಶ

ಹೀಗೆ ಮುಚುಕುಂದ ಮಹಾರಾಜ ಶ್ರೀಕೃಷ್ಣನಿಂದ ಅನುಗೃಹೀತನಾಗಿ ಅವನಿಗೆ ಪ್ರದಕ್ಷಿಣೆ ಮಾಡಿ ನಮಿಸಿ ಗುಹೆಯಿಂದ ನಿರ್ಗಮಿಸಿದ. ಮನುಷ್ಯರು ಪ್ರಾಣಿಗಳು ಮರಗಿಡಗಳೆಲ್ಲವೂ ನೋಡಿದರೆ ಗಾತ್ರದಲ್ಲಿ ಬಹಳ ಸಣ್ಣಗಾಗಿರುವುದನ್ನು ಕಂಡು ಕಲಿಯುಗ ಬಂದಿದೆ ಎಂದು ತಿಳಿದ. ಉತ್ತರದಲ್ಲಿ ಗಂಧಮಾದನ ಪರ್ವತದ ಬದರಿಕಾಶ್ರಮದಲ್ಲಿರುವ ನರನಾರಾಯಣಾಶ್ರಮದಲ್ಲಿ ತಪಸ್ಸಿಗೆ ಕುಳಿತ.

ಶ್ರೀಕೃಷ್ಣ ಪುನಃ ಮಧುರೆಗೆ ಬಂದು ಕಾಲಯವನನ ಮ್ಲೇಚ್ಛ ಸೈನ್ಯವನ್ನು ಪೂರ್ತಿ ಸಂಹರಿಸಿ ಅವನ ಸಂಪತ್ತನ್ನು ದ್ವಾರಕೆಗೆ ಕಳಿಸಿದ. ಆಗಲೆ ಜರಾಸಂಧ ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯ ಸಮೇತನಾಗಿ ಬಂದು ಕೃಷ್ಣನ ಸುತ್ತಲೂ ಮಕರವ್ಯೂಹದಲ್ಲಿ ಸೈನ್ಯವನ್ನು ನಿಲ್ಲಿಸಿದ. ಶ್ರೀಕೃಷ್ಣ ಒಂದು ಮರವನ್ನು ಕಿತ್ತು ಅದರಿಂದಲೆ ಆನೆ ರಥ ಕದುರೆಗಳನ್ನು ಹೊಡೆದು ಕೆಡವಿದ. ಕ್ಷಣದಲ್ಲಿ ಎಲ್ಲವೂ ಪುಡಿಪುಡಿಯಾದುವು. ಬಲರಾಮನೂ ಮುಷ್ಟಿಯಿಂದಲೇ ಆನೆಗಳನ್ನು ಹೊಡೆದು ಕೊಂದ. ರಥಗಳನ್ನೂ ಪುಡಿಗೈದ.

ಕಾಲಯವನನ ಸಂಪತ್ತು ದ್ವಾರಕೆಗೆ ಸಾಗುತ್ತಿದ್ದಂತೆ ಜರಾಸಂಧ ಯಾದವರನ್ನು ಬಡಿದು ಆ ಸಂಪತ್ತನ್ನು ಕೈವಶಮಾಡಿಕೊಂಡ. ರಾಮಕೃಷ್ಣರ ಮೇಲೆ ಏರಿಹೋದ. ಸೈನ್ಯದೊಂದಿಗೆ ರಾಜರೂ ಆಕ್ರಮಣ ಮಾಡಿದರು. ಅದರಿಂದ ರಾಮಕೃಷ್ಣರು ರಥ ಆಯುಧ ಕವಚ ಒಂದೂ ಇಲ್ಲದೆ ಸೈನಿಕರಿಲ್ಲದೆ, ಮಳೆಯಲ್ಲಿ ನೆನೆಯುವ ಮರಿಯಾನೆಗಳಂತೆ ಬಾಣಗಳ ಮಳೆಯಲ್ಲಿ ಸಿಲುಕಿದರು. ಮನುಷ್ಯರಂತೆ ನಟನೆ ಮಾಡಲು ಓಡಲು ತೊಡಗಿದರು. ಜರಾಸಂಧ ಹಾಸ್ಯಮಾಡುತ್ತ ಬೆನ್ನಟ್ಟಿದ. ಬಹಳ ಯೋಜನ ದೂರದವರೆಗೂ ಓಡಿ ರಾತ್ರಿಯಲ್ಲಿ ಕೊಲ್ಹಾಪುರದಲ್ಲಿ ವಿಶ್ರಾಂತಿ ತೆಗೆದುಕೊಂಡು ಸೂರ್ಯ

ಉದಿಸಿದಾಗ ಗೋಮಂತ ಪರ್ವತವನ್ನೇರಿದರು ರಾಮಕೃಷ್ಣರು. ಪ್ರವರ್ಷಣ ಶಿಖರದಲ್ಲಿ ಹೋಗಿ ನಿಂತರು. ಜರಾಸಂಧ ಬೆನ್ನಟ್ಟಿ ಬಂದು ದೊಡ್ಡ ಸೈನ್ಯ ದೊಂದಿಗೆ ಬೆಟ್ಟವನ್ನು ಸುತ್ತುವರಿದು ನಿಂತ. ರಾಜರುಗಳನ್ನು ನಾಲ್ಕು ದಿಕ್ಕುಗಳಲ್ಲಿ ಬೆಟ್ಟವನ್ನೇರಲು ಆಜ್ಞಾಪಿಸಿದ.

ಪೂರ್ವದಿಕ್ಕಿನಲ್ಲಿ ಕುಂಜರದೇಶಾಧಿಪತಿ ಕಲಿಂಗ, ಸುರಾಷ್ಟ್ರ ರಾಜ, ಸಿಂಧುರಾಜ ಜಯದ್ರಥ, ಕುರುರಾಜ ಸೋಮದತ್ತ ಗಾಂಧಾರ ರಾಜ ಶಕುನಿ, ವಿದರ್ಭರಾಜಕುಮಾರ ರುಕ್ಮಿ, ಕಾಂಬೋಜರಾಜ ಸುದಕ್ಷಿಣ ಮತ್ತು ಮತ್ಸ್ಯರಾಜ ವಿರಾಟರನ್ನು ಕಳಿಸಿದ.

ದಕ್ಷಿಣದಿಕ್ಕಿನಲ್ಲಿ ಪಾಂಚಾಲರಾಜ ದ್ರುಪದ, ಚೇದಿರಾಜ ದಮಘೋಷ, ಸಾಲ್ವರಾಜ ಬ್ರಹ್ಮದತ್ತ, ನಿಷಾದರಾಜ ಏಕಲವ್ಯ, ಕುರುರಾಜ ಬಾಹ್ಲೀಕ, ಯುಧಾಮನ್ಯು, ಅವಂತಿರಾಜರಾದ ವಿಂದ ಅನುವಿಂದರು, ಕಾಶಿರಾಜ ಪೌಂಡ್ರಕರನ್ನು ಕಳಿಸಿದ.

ಪಶ್ಚಿಮದಿಕ್ಕಿನಲ್ಲಿ ಕಿಂಪುರುಷರಾಜ ದ್ರುಮ, ದಂತವಕ್ರ ವಿದೂರಥರು, ವಿದೇಹರಾಜ, ಭೂರಿಶ್ರವ, ಕರೂಶರಾಜ ಬೃಹಚ್ಚಾಪ, ದಶಾರ್ಣರಾಜ ಶತಧ್ವಜ, ಸುವೀರರಾಜ ಶೈಬ್ಯ ಮತ್ತು ಮಹಾರಥ ದರದರನ್ನು ಕಳಿಸಿದ.

ಉತ್ತರದಿಕ್ಕಿನಲ್ಲಿ ತ್ರಿಗರ್ತರಾಜ ಸುಶರ್ಮ, ವೇಣುದಾರಿ ಕುಲಿಂದ, ಕೇಕಯರಾಜರು, ಶಿಶುಪಾಲ, ಭೀಷ್ಮಕರನ್ನು ಮುಂದೆ ಮಾಡಿಕೊಂಡು ಜರಾಸಂಧ ತಾನೇ ಬೆಟ್ಟವನ್ನೇರಿದ.

ಪ್ರವರ್ಷಣ ಶಿಖರದ ಕೆಳಗೆ ಎಲ್ಲೆಡೆ ರಾಮಕೃಷ್ಣರನ್ನು ಸೈನಿಕರು ಹುಡುಕಿದರು. ಎಲ್ಲ ವೃಕ್ಷಗಳನ್ನು ಕಡಿದುಹಾಕಿದರು. ಆದರೆ ಅವರು ಸಿಗಲಿಲ್ಲ. ಬೆಟ್ಟದಲ್ಲಿ ಅಡಗಿದ್ದಾರೆ ಎಂದು ಗೊತ್ತು. ಆದರೂ ಕಣ್ಣಿಗೆ ಕಾಣಲಿಲ್ಲ. ಅದಕ್ಕೆ ಕಟ್ಟಿಗೆಗಳಿಂದ ಸುತ್ತಲೂ ಬೆಂಕಿ ಇಟ್ಟು ಬೆಟ್ಟವನ್ನೇ ಸುಟ್ಟ ಜರಾಸಂಧ. ಬೆಟ್ಟ ಸುಡುತ್ತಿದ್ದಂತೆ ಹನ್ನೊಂದು ಯೋಜನ ಎತ್ತರದ ಶಿಖರದಿಂದ ರಾಮಕೃಷ್ಣರು ಜಿಗಿದು ಸಮುದ್ರ ಮಾರ್ಗವಾಗಿ ದ್ವಾರಕೆಗೆ ಹಿಂತಿರುಗಿದರು. ಜರಾಸಂಧನಿಗಾಗಲಿ ಅವನ ಕಡೆಯವರಿಗಾಗಲಿ ಇದು

ತಿಳಿಯಲಿಲ್ಲ. ಇಬ್ಬರೂ ಸುಟ್ಟು ಹೋದರೆಂದೇ ಜರಾಸಂಧ ತಪ್ಪಾಗಿ ತಿಳಿದು ಸೈನ್ಯದೊಂದಿಗೆ ಮಗಧದೇಶಕ್ಕೆ ಹಿಂತಿರುಗಿದ. ಈ ಹದಿನೆಂಟನೆ ಯುದ್ಧದಲ್ಲಾದರೂ ತಾನು ರಾಮಕೃಷ್ಣರನ್ನು ಗೆದ್ದೆನೆಂದು ಭ್ರಮಿಸಿ ದೃಪ್ತನಾದ. ಇತ್ತ ರಾಮಕೃಷ್ಣರು ದ್ವಾರಕೆಯಲ್ಲಿ ಸುಖವಾಗಿ ವಾಸ ಮಾಡಿದರು.

❖ ❖ ❖

ಅಧ್ಯಾಯ - ೫೬

ಅಧ್ಯಾಯ ಸಾರಾಂಶ

ಬಾಲಕರಾದ ಕುಂತೀಪುತ್ರರು ಯುದ್ಧದಲ್ಲಿ ಪಾಂಚಾಲ ರಾಜನಾದ ದ್ರುಪದನನ್ನು ಸೆರೆ ಹಿಡಿದ ಸಮಾಚಾರವನ್ನು ಸತ್ರಯಾಗ ಮಾಡಿಸುವ ಬ್ರಾಹ್ಮಣರ ಮೂಲಕ ಕೃಷ್ಣರಾಮರು ಕೇಳಿ ಸಂತೋಷಪಟ್ಟು ಅದರ ವಿವರವನ್ನು ತಿಳಿದು ಬರಲು ಕೃತವರ್ಮನನ್ನು ಹಸ್ತಿನಾಪುರಕ್ಕೆ ಕಳಿಸಿದರು. ಕೃತವರ್ಮ ಹಸ್ತಿನಾಪುರಕ್ಕೆ ಹೋಗಿ ಭೀಷ್ಮ ದ್ರೋಣ ವಿದುರ ಧೃತರಾಷ್ಟ್ರ ಕೃಪರನ್ನು ಭೆಟ್ಟಿ ಮಾಡಿದ. ಪಾಂಡವರನ್ನೂ ಕುಂತಿಯನ್ನೂ ಗೌರವಿಸಿದ. ಯುಧಿಷ್ಠಿರ ಕೇಳಿದಾಗ ಕೃಷ್ಣನ ಕಾಲಯವನ ಸಂಹಾರ, ಜರಾಸಂಧ ಪರಾಭವ, ಸೃಗಾಲವಾಸುದೇವ ವಧ, ದ್ವಾರಕಾನಿರ್ಮಾಣ, ಹಂಸ ಡಿಭಿಕ ಸಾಲ್ವರಾಜರ ವಧ ವೃತ್ತಾಂತಗಳನ್ನು ಕೃತವರ್ಮ ಬಣ್ಣಿಸಿ ಹೇಳಿದ. ಅದನ್ನು ಕೇಳಿ ಯುಧಿಷ್ಠಿರನಿಗೆ ಮೂಲೋಕದ ಸಾಮ್ರಾಜ್ಯವೆ ಹಸ್ತಗತವಾದಷ್ಟು ಸಂತೋಷವಾಯಿತು. ಬಳಿಕ ಕೃತವರ್ಮ ಎಲ್ಲರ ಅನುಜ್ಞೆ ಪಡೆದು ದ್ವಾರಕೆಗೆ ಹಿಂತಿರುಗಿದ. ಸುಧರ್ಮ ಸಭೆಯಲ್ಲಿ ತಾನು ಕಂಡ ಕೇಳಿದ ಕೌರವರ ಎಲ್ಲ ವೃತ್ತಾಂತವನ್ನು ವಿವರವಾಗಿ ಬಣ್ಣಿಸಿದ. ಪಾಂಡವರ ಪೌರುಷವನ್ನು ಕೇಳಿ ಶ್ರೀಕೃಷ್ಣ ಆನಂದ ತುಂದಿಲನಾದ.

❖❖❖

ಅಧ್ಯಾಯ - ೫೭

ಅಧ್ಯಾಯ ಸಾರಾಂಶ

ರೇವತ ರಾಜ ತನ್ನ ಮಗಳಾದ ರೇವತಿಯನ್ನು ನಾನಾ ದೇಶದ ರಾಜಕುಮಾರರು ಕೇಳಿದರೂ ಕೊಡದೆ, ಯಾರಿಗೆ ಕೊಡಲಿ ಎಂದು ಕೇಳುವುದಕ್ಕಾಗಿ ಬ್ರಹ್ಮನ ಬಳಿಗೆ ಹೋದ. ಆಗ ಬ್ರಹ್ಮನ ಸಭೆಯಲ್ಲಿ ಹಹಾ ಹುಹು ಎಂಬ ಇಬ್ಬರು ಗಂಧರ್ವರು ಗಾಂಧಾರ ಗ್ರಾಮದಲ್ಲಿ ಹಾಡುತ್ತಿದ್ದರು. ರಾಜ ಸ್ವಲ್ಪ ಕಾಲ ಸಂಗೀತ ಮುಗಿಯುವುದನ್ನೇ ಕಾದು ನಿಂತು ಅದು ಮುಗಿದೊಡನೆ ಬ್ರಹ್ಮನ ಬಳಿಯಲ್ಲಿ ತನ್ನ ಮಗಳನ್ನು ಯಾರಿಗೆ ಕೊಡಲಿ ಎಂದು ಕೇಳಿದ. ಅದಕ್ಕೆ ಬ್ರಹ್ಮ 'ನಿನಗೆ ಯಾವ ರಾಜಕುಮಾರ, ಇಷ್ಟನಾಗಿದ್ದಾನೆ, ಹೇಳು. ಜೊತೆಗೆ ಬೇರೆ ರಾಜಕುಮಾರರ ಹೆಸರನ್ನೂ ಹೇಳು' ಎಂದಾಗ ರಾಜ ಅನೇಕ ಹೆಸರುಗಳನ್ನು ಹೇಳಿದ. ಬ್ರಹ್ಮ ನಕ್ಕು ನುಡಿದ. 'ರಾಜನೆ, ಮಾನವರಿಗೆ ಕೇಳಲು ಅಯೋಗ್ಯವಾದ ಈ ಗಂಧರ್ವಗಾನವನ್ನು ನೀನು ಕೇಳುತ್ತಿದ್ದಂತೆಯೇ ಅನೇಕ ಚತುರ್ಯುಗಗಳು ಕ್ಷಣದಂತೆ ಕಳೆದುಹೋಗಿವೆ. ನೀನು ಹೇಳಿದ ರಾಜರು ಈಗ ಯಾರೂ ಭೂಲೋಕದಲ್ಲಿ ಇಲ್ಲ. ಈಗ ವಸುದೇವಪುತ್ರರಾಗಿ ಅವತರಿಸಿದ ರಾಮಕೃಷ್ಣರು ಭೂಮಿಯಲ್ಲಿ ಇದ್ದಾರೆ. ರಾಮನಿಗೆ ನಿನ್ನ ಕನ್ಯೆಯನ್ನು ದಾನಮಾಡು' ಎಂದು. ರಾಜ ಬ್ರಹ್ಮನನ್ನು ನಮಿಸಿ ಅವನು ಹೇಳಿದಂತೆ ಬಲರಾಮನಿಗೆ ರೂಪವತಿಯಾದ ಕನ್ಯೆ ರೇವತಿಯನ್ನು ಮದುವೆ ಮಾಡಿಕೊಟ್ಟ. ರೇವತಿ ಮೊದಲನೆ ಚತುರ್ಯುಗದವಳು. ಬಹಳ ಎತ್ತರವಾಗಿದ್ದಳು. ಇಪ್ಪತ್ತೆಂಟನೆ ಚತುರ್ಯುಗದವನಾದ ಬಲರಾಮ ಅವಳ ಹೆಗಲಿನಲ್ಲಿ ಹಲಾಯುಧ ವನ್ನಿಟ್ಟು ಎಳೆದು ತನ್ನೆತ್ತರಕ್ಕೆ ಸಮಳನ್ನಾಗಿ ಮಾಡಿಕೊಂಡ.

ವಿದರ್ಭರಾಜ ಭೀಷ್ಮಕನಿಗೆ ರುಕ್ಮಿ ರುಕ್ಮರಥ ರುಕ್ಮಬಾಹು ರುಕ್ಮಕೇಶ ರುಕ್ಮಮಾಲಿ ಎಂದು ಐದು ಮಂದಿ ಪುತ್ರರು, ರುಕ್ಮಿಣಿ ಒಬ್ಬಳು ಕನ್ಯೆ. ಅರಮನೆಗೆ ಬಂದ ನಾರದಾದಿ ಮುನಿಗಳ ಮುಖದಿಂದ ಶ್ರೀಕೃಷ್ಣನ ಬಗ್ಗೆ ಕೇಳಿ, ರುಕ್ಮಿಣಿ ಅವನನ್ನೇ ತನಗೆ

ಯೋಗ್ಯನಾದ ಪತಿ ಎಂದು ತಿಳಿದಳು. ಶ್ರೀಕೃಷ್ಣನೂ ರುಕ್ಮಿಣಿಯನ್ನು ತನ್ನ ಪತ್ನಿಯಾಗಲು ಯೋಗ್ಯಳೆಂದು ತಿಳಿದು ಅವಳನ್ನು ಬಯಸಿದ. ರುಕ್ಮಿಣಿಯನ್ನು ಕೃಷ್ಣನಿಗೆ ಕೊಡಲು ಬಂಧುಗಳೂ ಬಯಸಿದ್ದರು. ಆದರೂ ಕೃಷ್ಣದ್ವೇಷಿಯಾದ ರುಕ್ಮಿ ಅವಳನ್ನು ಶಿಶುಪಾಲನಿಗೆ ಕೊಡಲು ಬಯಸಿದ. ಅದನ್ನು ತಿಳಿದು ರುಕ್ಮಿಣಿ ಆಪ್ತನಾದ ಒಬ್ಬ ಬ್ರಾಹ್ಮಣನನ್ನು ಕೃಷ್ಣನ ಬಳಿಗೆ ಕಳಿಸಿದಳು. ಅವನು ದ್ವಾರಕೆಗೆ ಬಂದು ಕೃಷ್ಣನನ್ನು ಭೆಟ್ಟಿ ಮಾಡಿದ. ಕೃಷ್ಣ ಅವನನ್ನು ಸತ್ಕರಿಸಿ ಕಾಲೊತ್ತುತ್ತ ಕೇಳಿದ, 'ಅತಿಯಾಗಿ ಶರೀರದಂಡನೆ ಮಾಡದೆ ಇದ್ದುದರಲ್ಲಿ ತೃಪ್ತಿ ಪಡುತ್ತ ಧರ್ಮಾಚರಣೆ ಮಾಡುವವನು ಯಾವಾಗಲೂ ಸುಖದಿಂದ ಇರುತ್ತಾನೆ. ಏನೂ ಇಲ್ಲದವನು ಏನೂ ಚಿಂತೆಯಿಲ್ಲದೆ ತೃಪ್ತಿಯಿಂದ ಮಲಗುತ್ತಾನೆ. ಎಷ್ಟಿದ್ದರೂ ಸಾಲದೆನ್ನುವವನಿಗೆ ದೇವರಾಜ ಪದವಿ ಬಂದರೂ ಸುಖವಿಲ್ಲ. ಅದರಿಂದ ಇದ್ದುದರಲ್ಲಿ ತೃಪ್ತಿಯಿಂದಿದ್ದು ಎಲ್ಲ ಜೀವಿಗಳಿಗೆ ಉಪಕಾರ ಮಾಡುತ್ತ ಪರಮಾತ್ಮನಲ್ಲಿ ನಿಷ್ಠೆಯಿಂದ ಧರ್ಮಾಚರಣ ಮಾಡುವ ಬ್ರಾಹ್ಮಣರನ್ನು ಕಂಡರೆ ನಾನು ಪುನಃ ಪುನಃ ತಲೆಬಾಗುತ್ತೇನೆ. ನೀನೂ ಹಾಗೇ ಧರ್ಮಾಚರಣೆ ಮಾಡುವಿ ತಾನೆ? ನಿಮಗೆ ನಿಮ್ಮ ರಾಜನಿಂದ ಕ್ಷೇಮವಾಗುತ್ತಿದೆ ತಾನೆ? ಪ್ರಜೆಗಳಿಗೆ ಕ್ಷೇಮ ಉಂಟುಮಾಡುವ ರಾಜರು ನನಗೆ ಪ್ರಿಯರು. ನೀನು ಸಮುದ್ರ ದಾಟಿ ಇಷ್ಟು ದೂರಕ್ಕೆ ಬಂದ ಉದ್ದೇಶವೇನು? ಹೇಳಬಾರದುದು ಅಲ್ಲದಿದ್ದರೆ ಹೇಳು. ನಾನೇನು ಕಾರ್ಯವನ್ನು ನಿನಗೆ ಮಾಡಿಕೊಡಲಿ?' ಎಂದು.

ಬ್ರಾಹ್ಮಣ ರುಕ್ಮಿಣೀದೇವಿ ಬರೆದಿದ್ದ ಪತ್ರವನ್ನು ಕೃಷ್ಣನ ಪಾದಗಳಲ್ಲಿಟ್ಟು ನಮಸ್ಕರಿಸಿದ. ಶ್ರೀಕೃಷ್ಣ ಆ ಪತ್ರವನ್ನು ಎತ್ತಿಕೊಂಡು ಓದಿದ.

'ತ್ರಿಲೋಕಸುಂದರನೆ, ಕೇಳಿದಾಗ ಕಿವಿಗಳನ್ನು ಹೊಕ್ಕು ಮೈಯ ಸಂತಾಪವನ್ನು ಕಳೆಯುವ ನಿನ್ನ ಗುಣಗಳನ್ನು ನಾನು ಕೇಳಿದ್ದೇನೆ. ಮಂಗಲವಸ್ತುಗಳಿಗೆ ಮಂಗಲತ್ವವನ್ನು ಕೊಡುವ ಅನುಪಮವಾದ ನಿನ್ನ ರೂಪದ ಬಗ್ಗೆಯೂ ಕೇಳಿದ್ದೇನೆ. ಹೀಗಾಗಿ ಹೇ ಅಚ್ಯುತ, ನನ್ನ ಚಿತ್ತ ನಿನ್ನಲ್ಲಿಯೆ ನೆಟ್ಟಿದೆ. ಸತ್ಕುಲ ಪ್ರಸೂತಳಾದ

ಲಜ್ಜೆಯುಳ್ಳ ಗುಣವತಿಯಾದ ಯಾವ ಕನ್ಯೆ, ಗುಣ ಶೀಲ ರೂಪ ವಿದ್ಯೆ ವಯಸ್ಸು ಐಶ್ವರ್ಯ ಕಾಂತಿ ಈ ಎಲ್ಲ ದೃಷ್ಟಿಯಿಂದಲೂ ತನಗೆ ಅನುರೂಪನಾದ, ಮುಕ್ತ ಅಮುಕ್ತರೆಲ್ಲರ ಮನಸೆಳೆದ ನಿನ್ನಂಥ ವರನನ್ನು ಯೌವನಕಾಲದಲ್ಲಿ ನಾಚಿಕೆ ಬಿಟ್ಟು ವರಿಸದಿರಲಾರಳು? ನೀನು ನನ್ನ ಮನೋಗತವನ್ನು ಅರಿತು ನಿನ್ನ ಚರಣಕಮಲ ದಾಸಿಯಾಗಿರುವ ನನ್ನ ಅಭೀಷ್ಟವನ್ನು ನೆರವೇರಿಸು. ನಾನು ವೀರನಾದ ನಿನಗೇ ಸೇರಬೇಕಾದವಳು. ಶಿಶುಪಾಲ ನನ್ನನ್ನು ಮುಟ್ಟದಿರಲಿ. ಸಿಂಹದ ಪಾಲಿನ ಬೇಟೆಯನ್ನು ನರಿ ಒಯ್ಯಬಾರದು.

ನಾಳೆ ನಡೆಯುವ ವಿವಾಹದಲ್ಲಿ ನೀನು ವಿದರ್ಭರಾಜ್ಯಕ್ಕೆ ಬಂದು ಶಿಶುಪಾಲ ಜರಾಸಂಧಾದಿಗಳ ಸೈನ್ಯವನ್ನು ಮುರಿದು ಬಲಾತ್ಕಾರದಿಂದ ನನ್ನನ್ನು ಸೆಳೆದುಒಯ್ದು ರಾಕ್ಷಸವಿಧಿಯಿಂದ ವಿವಾಹವಾಗು. ಪರಾಕ್ರಮವನ್ನು ಕನ್ಯಾಶುಲ್ಕವಾಗಿ ಕೊಡು.

ಅಂತಃಪುರದಲ್ಲಿ ನನ್ನನ್ನು ಬಂಧುಗಳು ಕಾಯುತ್ತಿರುವಾಗ ಅವರನ್ನು ಕೊಲ್ಲದೆ ನನ್ನನ್ನು ಹೇಗೆ ಪಡೆಯಲಿ ಎನ್ನುವಿಯಾದರೆ ಅದಕ್ಕೆ ಉಪಾಯವನ್ನು ಹೇಳುತ್ತೇನೆ. ಹಿಂದಿನ ದಿನ ಕುಲದೇವಿಯ ದೊಡ್ಡ ಜಾತ್ರೆಯಲ್ಲಿ ನವವಧು ನಾನು ಗಿರಿಜಾಮಂದಿರದರ್ಶನಕ್ಕೆ ಹೋಗುತ್ತಿದ್ದೇನೆ. ಅಲ್ಲಿಗೆ ನೀನು ಸೈನ್ಯ ಸಮೇತವಾಗಿ ಬಂದು ಸಾಲ್ವ ಮಗಧ ಚೇದಿ ಅರಸರ ಸೈನ್ಯವನ್ನು ಮಣಿಸಿ ಸಖಿಯ ರೊಂದಿಗೆ ನನ್ನನ್ನು ವಶಪಡಿಸಿಕೊಳ್ಳು. ತನ್ನ ಪಟ್ಟಣಕ್ಕೊಯ್ದು ಪಾಣಿಗ್ರಹಣ ಮಾಡು. ಹೀಗೆ ನೀನು ಮಾಡದಿದ್ದಲ್ಲಿ ನಾನು ವ್ರತೋಪವಾಸಗಳಿಂದ ಕೃಶಳಾಗಿ ಪ್ರಾಣತ್ಯಾಗ ಮಾಡುವೆನು. ನೂರು ಜನ್ಮಗಳ ತಪಸ್ಸಿನಿಂದಲಾದರೂ ನಿನ್ನನ್ನು ಪಡೆದೇ ತೀರುವೆನು.''

❖❖❖

ಅಧ್ಯಾಯ - ೫೮

ಅಧ್ಯಾಯ ಸಾರಾಂಶ

ಶ್ರೀಕೃಷ್ಣ ಬ್ರಾಹ್ಮಣನ ಕೈಹಿಡಿದು ನಗುತ್ತ ಹೇಳಿದ, 'ನಾನೂ ಹಾಗೇ ಅವಳಲ್ಲಿ ಮನಸ್ಸನ್ನಿಟ್ಟಿದ್ದೇನೆ. ರಾತ್ರಿ ನನಗೆ ನಿದ್ದೆ ಬರುತ್ತಿಲ್ಲ. ನನ್ನ ಮೇಲಿನ ದ್ವೇಷದಿಂದ ರುಕ್ಮಿ ನಮ್ಮ ವಿವಾಹವನ್ನು ವಿರೋಧಿಸುತ್ತಿದ್ದಾನೆ. ನಾನೇ ಬಂದು ದುಷ್ಟರಾಜರನ್ನು ಚೆನ್ನಾಗಿ ಮಣಿಸಿ, ಅರಣಿ ಮಥನ ಮಾಡಿ ಅಗ್ನಿಯನ್ನು ಪಡೆಯುವಂತೆ, ರುಕ್ಮಿಣಿಯನ್ನು ಪಡೆದುಕೊಳ್ಳುತ್ತೇನೆ'

ವಿವಾಹದಿನವನ್ನು ತಿಳಿದುಕೊಂಡು ಶ್ರೀಕೃಷ್ಣ ಶೈಬ್ಯ ಸುಗ್ರೀವ ಮೇಘಪುಷ್ಪ ಬಲಾಹಕ ಎಂಬ ಕುದುರೆಗಳನ್ನು ಕಟ್ಟಿದ ತನ್ನ ರಥವನ್ನೇರಿ ಬ್ರಾಹ್ಮಣನೊಂದಿಗೆ ದಾರುಕನ ಸಾರಥ್ಯದಲ್ಲಿ ಕುಂಡಿನ ಪುರಕ್ಕೆ ಪ್ರಯಾಣ ಮಾಡಿದ. ಒಂದೇ ರಾತ್ರಿಯಲ್ಲಿ ಅಲ್ಲಿಗೆ ಬಂದು ಸೇರಿದ. ಅಲ್ಲಿ ಭೀಷ್ಮಕರಾಜ ಶಿಶುಪಾಲನಿಗೆ ಕನ್ಯಾದಾನ ಮಾಡಲು ಸಕಲಸಿದ್ಧತೆಗಳನ್ನು ನಡೆಸಿದ್ದ. ಪಟ್ಟಣವನ್ನು ಚೆನ್ನಾಗಿ ಸಿಂಗರಿಸಿದ್ದರು. ಸ್ತ್ರೀಪುರುಷರು ತಮ್ಮನ್ನು ಅಲಂಕರಿಸಿಕೊಂಡಿದ್ದರು. ರಾಜ ಪಿತೃಗಳನ್ನೂ ದೇವತೆಗಳನ್ನೂ ಪೂಜಿಸಿ ಬ್ರಾಹ್ಮಣರಿಗೆ ಭೋಜನ ನೀಡಿ ಸ್ವಸ್ತಿವಾಚನ ಮಾಡಿಸಿದ್ದ. ಕನ್ಯೆ ರುಕ್ಮಿಣಿಗೆ ಮಂಗಳ ಸ್ನಾನ ಮಾಡಿಸಿ ಜೋಡಿ ವಸ್ತ್ರ ಉಡಿಸಿದ್ದ. ಆಭರಣಗಳಿಂದ ಅಲಂಕರಿಸಿದ್ದ. ಬ್ರಾಹ್ಮಣರು ಅವಳಿಗೆ ರಕ್ಷಾಬಂಧನ ಮಾಡಿ ನವಗ್ರಹ ಹೋಮವನ್ನು ಮಾಡಿದ್ದರು. ಚೇದಿರಾಜ ದಮಘೋಷನೂ ಮದುಮಗನಾದ ಶಿಶುಪಾಲನಿಗೆ ಬ್ರಾಹ್ಮಣರಿಂದ ಮಾಂಗಲಿಕ ಕಾರ್ಯಗಳನ್ನು ಮಾಡಿಸಿದ. ಚತುರಂಗ ಸೈನ್ಯದೊಂದಿಗೆ ಕುಂಡಿನಪುರಕ್ಕೆ ಪ್ರಯಾಣ ಮಾಡಿದ. ಭೀಷ್ಮಕ ಅವನನ್ನು ಇದಿರುಗೊಂಡು ಅವನಿಗಾಗಿ ಸಜ್ಜುಗೊಳಿಸಿದ್ದ ಮನೆಯಲ್ಲಿ ಇಳಿಸಿದ. ಶಿಶುಪಾಲನ ಕಡೆಯವರು ಸಾಲ್ವ ಜರಾಸಂಧ ದಂತವಕ್ರ ವಿದೂರಥ ಪೌಂಡ್ರಕ ಮೊದಲಾದವರು ಸಾವಿರಾರು ಸಂಖ್ಯೆಯಲ್ಲಿ ಬಂದು ಸೇರಿದರು. ಎಲ್ಲರೂ ಕೃಷ್ಣರಾಮರ ದ್ವೇಷಿಗಳು ಕನ್ಯೆಯನ್ನು ಶಿಶುಪಾಲನಿಗೆ ಸಿಗುವಂತೆ ಮಾಡಲು,

ಕೃಷ್ಣ ಅವಳನ್ನು ಒಯ್ಯಲು ಬಂದರೆ ಎಲ್ಲರೂ ಸೇರಿ ಅವನೊಡನೆ ಯುದ್ಧ ಮಾಡಲು, ಸನ್ನದ್ಧರಾಗಿದ್ದರು.

ಸಾಲ್ವ ಜರಾಸಂಧ ಮುಂತಾದ ರಾಜರು ಮಾಡುತ್ತಿದ್ದ ಪ್ರಯತ್ನ ಬಲರಾಮನಿಗೆ ತಿಳಿಯಿತು. ಕೃಷ್ಣನೊಬ್ಬನೇ ಕನ್ಯೆಯನ್ನು ಬಲಾತ್ಕಾರದಿಂದ ಅಪಹರಿಸಲು ಹೋಗಿರುವುದೂ ತಿಳಿಯಿತು. ಒಡನೆ ಆತ ದೊಡ್ಡ ಸೈನ್ಯದೊಂದಿಗೆ ಕುಂಡಿನಪುರಕ್ಕೆ ಪ್ರಯಾಣ ಮಾಡಿದ.

ಕನ್ಯೆ ರುಕ್ಮಿಣಿ ಶ್ರೀಕೃಷ್ಣನ ಆಗಮನವನ್ನು ಕಾತರದಿಂದ ಇದಿರು ನೋಡುತ್ತಿದ್ದಳು. ಬ್ರಾಹ್ಮಣನಿನ್ನೂ ಬಾರದಿದ್ದುದರಿಂದ ಬಹಳ ಚಿಂತೆಯಾಯಿತು. ವಿವಾಹಕ್ಕೆ ಒಂದು ರಾತ್ರಿ ಮಾತ್ರ ಉಳಿದಿದೆ. ಶ್ರೀಕೃಷ್ಣ ಬರುತ್ತಿಲ್ಲ. ಕಾರಣವೇನೂ ತಿಳಿಯದಾಗಿದೆ. ಅವನಿಗೆ ನನ್ನಲ್ಲಿ ಏನಾದರೂ ಕುಂದು ಕಂಡುಬಂದಿದೆಯೆ? ದುರ್ದೈವದಿಂದ ಬ್ರಹ್ಮ ನನಗೆ ಪ್ರತಿಕೂಲನಾಗಿರುವನೆ? ರುದ್ರ ಪ್ರತಿಕೂಲನೆ? ದೇವಿ ಗಿರಿಜೆ ಪ್ರತಿಕೂಲಳೆ? ಎಂದು ಕಳವಳಪಟ್ಟು ಕಣ್ಣುಗಳಲ್ಲಿ ನೀರು ತುಂಬಿಕೊಂಡಳು. ಅಷ್ಟರಲ್ಲಿ ಅವಳಿಗೆ ಎಡ ತೊಡೆ ತೋಳು ಕಣ್ಣುಗಳು ಶುಭಸೂಚಕವಾಗಿ ಅದುರಿದುವು. ಒಡನೆ ಬ್ರಾಹ್ಮಣ ಬಂದು ದೇವಿಯನ್ನು ಅಂತಃಪುರದಲ್ಲಿ ಭೆಟ್ಟಿಮಾಡಿದ. 'ಶ್ರೀಕೃಷ್ಣ ಬಂದಿದ್ದಾನೆ, ದೇವಿಯನ್ನು ಒಯ್ಯುವುದಾಗಿ ಶಪಥ ಮಾಡಿದ್ದಾನೆ' ಎಂದು ತಿಳಿಸಿದ. ಪ್ರಿಯವಾದ ಆ ವಾರ್ತೆಯನ್ನು ತಂದ ಬ್ರಾಹ್ಮಣನಿಗೆ ಕೊಡಲು ತಕ್ಕುದಾದ ಪ್ರಿಯವಾದ ವಸ್ತು ಒಂದನ್ನೂ ಕಾಣದೆ ಉಬ್ಬಿದ ಮನದಿಂದ ನಮಸ್ಕಾರ ಮಾಡಿದಳು ದೇವಿ.

ಮಗಳ ವಿವಾಹ ನೋಡಲು ಕೃಷ್ಣರಾಮರು ಬಂದಿರುವರೆಂದು ಭಾವಿಸಿ ಭೀಷ್ಮಕ ಅವರನ್ನು ವಾದ್ಯ ಘೋಷದೊಂದಿಗೆ ಇದಿರು ಗೊಂಡು ಮಧುಪರ್ಕವನ್ನೂ ಉಡುಗೊರೆಗಳನ್ನೂ ನೀಡಿ ಸತ್ಕರಿಸಿ ನಗರದ ಹೊರ ಉದ್ಯಾನದಲ್ಲಿ ವಿಶಾಲವಾದ ಭವ್ಯವಾದ ಮನೆಯಲ್ಲಿ ವಸತಿಯನ್ನು ಕಲ್ಪಿಸಿಕೊಟ್ಟ. ನಗರದ ಒಳಗೆ ನಿವೇಶನಗಳೆಲ್ಲವೂ ಜರಾಸಂಧನ ಕಡೆಯವರಿಂದ ಭರ್ತಿಯಾಗಿದೆ ಎಂದ.

ಶ್ರೀಕೃಷ್ಣ ಬಂದಿರುವನೆಂಬ ವಾರ್ತೆಯನ್ನು ಕೇಳಿದ ಕುಂಡಿನಪುರ ವಾಸಿಗಳು ಧಾವಿಸಿ ಬಂದು ಕಣ್ಣುಗಳೆಂಬ ಬೊಗಸೆಗಳಿಂದ ಅವನ ಮುಖಕಮಲದ ಸೌಂದರ್ಯವನ್ನು ಎತ್ತಿ ಎತ್ತಿ ಕುಡಿದರು. 'ಕೃಷ್ಣನಿಗೆ ರುಕ್ಮಿಣಿಯೆ, ರುಕ್ಮಿಣಿಗೆ ಕೃಷ್ಣನೆ ಸರಿಯಾದ ಜೋಡಿ. ನಮ್ಮಲ್ಲಿ ಒಂದಿಷ್ಟು ಏನಾದರೂ ಪುಣ್ಯವಿರುವುದಾದರೆ ಶ್ರೀಕೃಷ್ಣ ಒಲಿದು ರುಕ್ಮಿಣಿಯ ಪಾಣಿಗ್ರಹಣ ಮಾಡಲಿ' ಎಂದು ಹಾರೈಸಿದರು.

ಕನ್ಯೆ ರುಕ್ಮಿಣಿ ರಾಜಭಟರ ರಕ್ಷಣೆಯಲ್ಲಿ ಅಂತಃಪುರದಿಂದ ದುರ್ಗಾಲಯದ ಕಡೆಗೆ ಹೊರಟಳು. ಶ್ರೀಕೃಷ್ಣನೂ ಕೆಲವೇ ಪರಿವಾರದೊಂದಿಗೆ ಅಲ್ಲಿಗೆ ಹೊರಟ. ದೇವಿ ಮುಕುಂದನ ಪಾದಕಮಲಗಳನ್ನೇ ಭಕ್ತಿಯಿಂದ ನೆನೆಯುತ್ತ ಮೌನವಾಗಿ ತಾಯಂದಿರೊಂದಿಗೆ ಮತ್ತು ಸಖಿಯರೊಂದಿಗೆ ನಡೆದಳು.

ಆಯುಧಗಳನ್ನು ಎತ್ತಿಕೊಂಡಿರುವ ರಾಜಭಟರು, ಬೆತ್ತಗಳನ್ನು ದಂಡಗಳನ್ನು ಹಿಡಿದ ಅಂತಃಪುರದ ರಕ್ಷಕರು, ಮೃದಂಗ ಶಂಖ ಪಣವ ಭೇರಿಗಳನ್ನು ಬಾರಿಸುವವರು, ಕಾಣಿಕೆ ಪೂಜಾಸಾಮಗ್ರಿಗಳನ್ನು ಹಿಡಿದ ವಾರಾಂಗನೆಯರು ಹೂಮಾಲೆ ಗಂಧ ವಸ್ತ್ರಾಭರಣಗಳಿಂದ ಅಲಂಕೃತರಾದ ಬ್ರಾಹ್ಮಣಸ್ತ್ರೀಯರು ಗಾಯಕರು ಸೂತ ಮಾಗಧ ವಂದಿಗಳು ಎಲ್ಲರೂ ವಧುವನ್ನು ಸುತ್ತುವರಿದು ನಡೆದರು.

ವಧು ಕೈಕಾಲುಗಳನ್ನು ತೊಳೆದುಕೊಂಡು ಆಚಮನ ಮಾಡಿ ಶುಚಿಯಾಗಿ ಭಗವಂತನಲ್ಲಿ ಮನಸ್ಸಿಟ್ಟು ದುರ್ಗೆಯ ಬಳಿಗೆ ಬಂದಳು. 'ದೇವಿ, ಭಗವಾನ್ ಶ್ರೀಕೃಷ್ಣ ನನಗೆ ಪತಿಯಾಗಲಿ. ಅದಕ್ಕೆ ನೀನು ಅನುಮೋದಿಸು' ಎಂದು ಪ್ರಾರ್ಥಿಸಿ ನಮಸ್ಕರಿಸಿದಳು. ನೀರು ಗಂಧ ಅಕ್ಷತೆ ಧೂಪ ದೀಪಾದಿಗಳಿಂದ ಪೂಜಿಸಿದಳು. ಮುತ್ತೈದೆಯರಿಗೆ ನಮಿಸಿದಳು. ಕನ್ಯೆಯರನ್ನು ಆಲಿಂಗಿಸಿದಳು. ಮೌನವ್ರತವನ್ನು ಬಿಟ್ಟು ಕುಲದೇವತೆಗಳಾದ ಇಂದ್ರಶಚಿಯರ ಮಂದಿರಕ್ಕೆ ನಡೆದಳು. ಅಲ್ಲಿ ನಮಸ್ಕಾರ ಮಾಡಿ ಸಖಿಯ ಕೈಹಿಡಿದುಕೊಂಡು ಛತ್ರಚಾಮರಗಳಿಂದೊಡಗೂಡಿ ಹೊರಗೆ ನಡೆದಳು.

ಸುಂದರವಾದ ನಡು, ಕುಂಡಲಗಳಿಂದೊಪ್ಪುವ ಮುಖ, ನಡುವಿನಲ್ಲಿ ಕಟ್ಟಿದ ರತ್ನಖಚಿತವಾದ ವಡ್ಯಾಣ ಉನ್ನತವಾದ ಸ್ತನಗಳು , ಮುಂಗುರುಳಿನಿಂದ ಚಂಚಲವಾದ ಕಣ್ಣುಗಳು, ಆಗತಾನೆ ಯೌವನಕ್ಕೆ ಕಾಲಿರಿಸಿದ್ದಳು ಷೋಡಶಿ. ವೀರರನ್ನು ಮೋಹ ಗೊಳಿಸಲು ಬಂದ ಭಗವಂತನ ಮಾಯೆ ಬಂಧಕಶಕ್ತಿ ಎನ್ನುವಂತಿದ್ದಳು ಕನ್ಯೆ ರುಕ್ಮಿಣಿ. ರಾಜಹಂಸದಂತೆ ಮೆಲ್ಲಡಿ ಇಟ್ಟು ನಡೆಯುವ ಆ ದೇವಿಯನ್ನು ಕಂಡು ವೀರರು ಮನ್ಮಥಬಾಧೆಗಳೊಗಾಗಿ ಮೈಮರೆತರು. ಕುಲದೇವಿಯಾತ್ರೆ ನೆಪಮಾತ್ರ. ತನ್ನ ಅಪಾರ ಸೌಂದರ್ಯವನ್ನು ವ್ಯಕ್ತಮಾಡಿ, ಪ್ರತ್ಯಕ್ಷ ಬಂದಿರುವ ಶ್ರೀಕೃಷ್ಣನಿಗೆ ಅರ್ಪಿಸಲೆಂದೇ ಅಂತಃಪುರದಿಂದ ಹೊರಗೆ ಬಂದಿದ್ದಳು. ಅವಳ ನಸುನಗೆಗೆ ಲಜ್ಜೆಯ ಓರೆನೋಟಗಳಿಗೆ ಮನಸೂರೆಗೊಂಡ ರಾಜರುಗಳು ಮೈಮರೆತು ತಾವು ಕುಳಿತಿದ್ದ ಗಜ ರಥ ಅಶ್ವಗಳಿಂದ ನೆಲಕ್ಕೆ ಬಿದ್ದರು. ನೆಲದಲ್ಲಿ ನಿಂತವರು ಆಯುಧಗಳನ್ನು ಕೆಳಗೆಬಿಟ್ಟರು.

ದೇವಿ ಮೆಲ್ಲಮೆಲ್ಲನೆ ನಡೆಯುತ್ತ ಶ್ರೀಕೃಷ್ಣ ಬಂದಿರುವನೆ? ಎಂದು ಅರಸಿ ನೋಡುತ್ತ ಮುಂಗುರುಳುಗಳನ್ನು ಎಡಗೈ ಬೆರಳುಗಳಿಂದ ಸರಿಸುತ್ತ ರಾಜರುಗಳ ಕಡೆಗೆ ಲಜ್ಜೆಯ ಓರೆನೋಟವನ್ನು ಬೀರುತ್ತಲೆ ಶ್ರೀಕೃಷ್ಣನನ್ನು ಕಂಡಳು. ಅವನ ರಥವನ್ನೇರಲು ತವಕಿಸಿದಳು. ಶ್ರೀಕೃಷ್ಣ ಶತ್ರುಗಳ ಕಣ್ಣೆದುರಿನಲ್ಲಿಯೇ ದೇವಿಯನ್ನು ಎತ್ತಿ ತನ್ನ ರಥವನ್ನೇರಿಸಿಕೊಂಡ. ಶತ್ರುಗಳನ್ನು ಅಲಕ್ಷ್ಯ ಮಾಡಿ ಬಲರಾಮ ಮುಂತಾದವರೊಂದಿಗೆ ಮೆಲ್ಲನೆ ದ್ವಾರಕೆಗೆ ಹೊರಟ, ಆನೆಯನ್ನು ಬೇಟೆಯಾಡಿದ ಸಿಂಹ ನರಿಗಳನ್ನು ಅಲಕ್ಷ್ಯಮಾಡಿ ಮೆಲ್ಲನೆ ನಡೆಯುವಂತೆ.

❖❖❖

ಅಧ್ಯಾಯ - ೫೪

ಅಧ್ಯಾಯ ಸಾರಾಂಶ

ಜರಾಸಂಧನ ಕಡೆಯವರು ಮಹಾ ದುರಭಿಮಾನಿಗಳು. ತಮ್ಮ ಅಭಿಮಾನಕ್ಕೆ ಪೆಟ್ಟು ಬೀಳುವಂಥ ಈ ಪರಾಭವ ಅವರಿಗೆ ಸಹನೆಯಾಗಲಿಲ್ಲ. ಅಯ್ಯೋ ನಮಗೆ ಧಿಕ್ಕಾರ! ಬಿಲ್ಲು ಹಿಡಿದ ಕ್ಷತ್ರಿಯರ ಕಣ್ಣ ಮುಂದೇ ಗೊಲ್ಲರು ಕನ್ಯೆಯನ್ನು ಅಪಹರಿಸಿಬಿಟ್ಟರು. ಸಿಂಹಗಳ ಮುಂದೆ ಜಿಂಕೆಗಳು ಪರಾಕ್ರಮ ತೋರಿದುವು! ಎಂದರು. ಎಲ್ಲರೂ ವಾಹನಗಳನ್ನೇರಿ ಬಿಲ್ಲು ಹಿಡಿದು ಕೃಷ್ಣನನ್ನು ಹಿಂಬಾಲಿಸಿದರು.

ಯಾದವರು ಧನುಸ್ಸುಗಳನ್ನು ಠೇಂಕಾರ ಮಾಡಿ ಇದಿರಾಗಿ ನಿಂತರು. ಅವರ ಮೇಲೆ ರಾಜರು ಬಾಣಗಳ ಮಳೆಗರೆದರು. ಪತಿಯ ಸೈನ್ಯ ಬಾಣಗಳಿಂದ ಮುಚ್ಚಿಹೋಗುವುದನ್ನು ಕಂಡು ರುಕ್ಮಿಣಿ ಭಯವಿಹ್ವಲವಾದ ಕಣ್ಣುಗಳಿಂದ ಲಜ್ಜೆಯಿಂದ ಕೃಷ್ಣನ ಮುಖವನ್ನು ನೋಡಿದಳು. ಭಗವಾನ್ ಶ್ರೀಕೃಷ್ಣ ನಕ್ಕು ನುಡಿದ. 'ಹೆದರಬೇಡ ಕ್ಷಣದಲ್ಲಿ ಈ ಶತ್ರುಸೈನ್ಯ ಯಾದವರಿಂದ ನಾಶಹೊಂದುವುದು' ಬಲರಾಮ ಗದ ಮುಂತಾದ ವೀರರು ಶತ್ರುಗಳ ತಲೆಗಳನ್ನು ಉರುಳಿಸಿದರು. ರಾಜರು ಬೆದರಿ ಬೆನ್ನುಹಾಕಿ ಓಡಿದರು. ಶಿಶುಪಾಲ ಹೆಂಡತಿಯನ್ನು ಕಳೆದುಕೊಂಡವನಂತೆ ಕಳವಳಿಸುತ್ತ ಕಾಂತಿಹೀನನಾಗಿ ಉತ್ಸಾಹ ಕಳೆದುಕೊಂಡ. ಜರಾಸಂಧಾದಿ ರಾಜರು ಸಂತೈಸಿದರು.

'ದೇಹಿಗಳಿಗೆ ಸುಖದುಃಖಗಳು ಸ್ಥಿರವಲ್ಲ. ಅವರು ಪರಮಾತ್ಮನ ವಶದಲ್ಲಿ ಸೂತ್ರದ ಬೊಂಬೆಗಳಂತೆ ಕುಣಿಯುತ್ತಾರೆ' 'ನಾನು ಪ್ರತಿಸಲ ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯದೊಂದಿಗೆ ಹೋಗಿ ಹದಿನೇಳು ಬಾರಿ ಸೋತರೂ ಹದಿನೆಂಟನೆ ಬಾರಿ ಗೆದ್ದೆ ತಾನೆ? ಎಲ್ಲವೂ ದೈವಾಧೀನವೆಂದು ತಿಳಿದವನು ನಾನು ಎಂದೂ ಕುಗ್ಗುವುದಿಲ್ಲ ಹಿಗ್ಗುವುದೂ ಇಲ್ಲ. ಈಗಲೂ ವೀರಾಧಿವೀರರಾದ ನಾವು ಅಲ್ಪಸೇನಾಬಲಉಳ್ಳ ಯಾದವರಿಂದ ಪರಾಜಿತರಾಗಿರುವೆವು

ನಿಜ. ಅವರಿಗೆ ಈಗ ಕಾಲ ಅನುಕೂಲವಾಗಿದೆ. ಆದರೆ ಕಾಲ ಅನುಕೂಲವಾದಾಗ ನಾವೂ ಗೆಲ್ಲುವೆವು.'

ಶಿಶುಪಾಲನೂ ಜರಾಸಂಧ ಮುಂತಾದ ರಾಜರೂ ಹೀಗೆ ಸೋತು ತಮ್ಮ ಊರುಗಳಿಗೆ ಹಿಂತಿರುಗಿದರು. ಕೃಷ್ಣದ್ವೇಷಿಯಾದ ರುಕ್ಮಿ ಮಾತ್ರ 'ಯುದ್ಧದಲ್ಲಿ ಕೃಷ್ಣನನ್ನು ಕೊಲ್ಲದೆ ರುಕ್ಮಿಣಿಯನ್ನು ಬೇರೆಯವರಿಗೆ ಮದುವೆ ಮಾಡಿಕೊಡದೆ ನಾನು ಕುಂಡಿನಪುರವನ್ನು ಪ್ರವೇಶಿಸಲಾರೆ ಈ ಮಾತು ಸತ್ಯವೆಂದು ನಿಮ್ಮ ಮುಂದೆ ಹೇಳುತ್ತಿದ್ದೇನೆ' ಎಂದು ರಾಜರ ಮುಂದೆ ಶಪಥ ಮಾಡಿ ಕೃಷ್ಣನನ್ನು ಹಿಂಬಾಲಿಸಿದ.

ನರ್ಮದಾ ತೀರದಲ್ಲಿ ರುಕ್ಮಿ ಕೃಷ್ಣನನ್ನು ಇದಿರಿಸಿದ. ಆದರೆ ಶ್ರೀಕೃಷ್ಣ ಅವನ ಬಾಣಗಳಿಂದ ಹೊಡೆಸಿಕೊಂಡು ರುಕ್ಮಿಯ ಬಿಲ್ಲನ್ನು ಕಡಿದ. ಆತ ಇನ್ನೊಂದು ಬಿಲ್ಲನ್ನೆತ್ತಿಕೊಂಡರೆ ಅದನ್ನೂ ಕಡಿದ. ಅವನ ಎಲ್ಲ ಬಿಲ್ಲುಗಳನ್ನೂ ಪರಿಘ ಪಟ್ಟಿಶ ಶೂಲ ಮುಂತಾದ ಎಲ್ಲ ಆಯುಧಗಳನ್ನೂ ಕಡಿದುಹಾಕಿದ. ಅವನು ಈಗ ರಥದಿಂದ ಕೆಳಗೆ ಹಾರಿ ಕತ್ತಿ ಗುರಾಣಿಗಳನ್ನು ಹಿಡಿದು ಶ್ರೀಕೃಷ್ಣನ ಮುಂದೆ ನುಗ್ಗಿ ಬಂದ., ದೀಪದ ಹುಳು ದೀಪದ ಮೇಲೆ ಬೀಳುವಂತೆ. ಶ್ರೀಕೃಷ್ಣ ಅವನ ಕತ್ತಿ ಗುರಾಣಿಗಳನ್ನು ಕತ್ತರಿಸಿ ಅವನನ್ನು ಕೊಲ್ಲಲು ಕತ್ತಿಯನ್ನೆತ್ತಿದ. ರುಕ್ಮಿಣಿ ಭಯದಿಂದ ಶ್ರೀಕೃಷ್ಣನ ಪಾದಗಳಿಗೆ ಬಿದ್ದು 'ದೇವದೇವ ಜಗನ್ನಾಥ, ನಮ್ಮಣ್ಣನನ್ನು ಕೊಲ್ಲಬೇಡ ಎಂದು ಬೇಡಿಕೊಂಡಳು. ದಯಾಳುವಾದ ಶ್ರೀಕೃಷ್ಣ ಅವನನ್ನು ಬಿಟ್ಟುಬಿಟ್ಟ. ಆದರೆ ಬಟ್ಟೆಯಿಂದ ಕೈಕಾಲು ಕಟ್ಟಿ ಕತ್ತಿಯಿಂದ ಅವನ ಮೀಸೆ ಕೂದಲುಗಳನ್ನು ಕತ್ತರಿಸಿ ಐದು ಜುಟ್ಟುಗಳಾಗುವಂತೆ ವಿರೂಪ ಗೊಳಿಸಿದ. ಅವನ ಸೈನ್ಯವನ್ನು ಯಾದವರು ನಾಶಪಡಿಸಿದರು.

ರುಕ್ಮಿಯ ದುರವಸ್ಥೆಯನ್ನು ಕಂಡು ಬಲರಾಮನೆಂದ, 'ಕೃಷ್ಣ ನೀನು ಮಾಡಿದುದು ತಪ್ಪು ಬಂಧುವಿಗೆ ಮೀಸೆ ಕೂದಲು ಬೋಳಿಸಿ ಅವಮಾನಿಸುವುದು ಹತ್ಯೆಗೆ ಸಮಾನ. ರುಕ್ಮಿಣಿ,

ಅಣ್ಣನಿಗೆ ಅಪಮಾನವಾಯಿತೆಂದು ಕೋಪಿಸಬೇಡ. ಎಲ್ಲರೂ ತಾವು ಮಾಡಿದ್ದನ್ನು ತಾವೇ ಉಣ್ಣುತ್ತಾರೆ.

ಬಂಧುವು ವಧಾರ್ಹವಾದ ಅಪರಾಧ ಮಾಡಿದರೂ ವಧಿಸಬಾರದು. ಪರಿತ್ಯಾಗ ಮಾಡಬೇಕು. ಕ್ಷತ್ರಿಯರಿಗೆ ಈ ನಿಯಮವಿಲ್ಲ. ಅದರಿಂದಲೆ ಕ್ಷತ್ರಿಯಧರ್ಮ ಬಲುಘೋರ ನಿಜ. ಆದರೆ ಅವರೂ ಆ ಧರ್ಮವನ್ನು ಅನುಸರಿಸಬಾರದು. ಶರೀರವನ್ನು ಆತ್ಮವೇ ಎಂದು ಅಭಿಮಾನದಿಂದ ಕಾಣುವವರು ಶರೀರದಲ್ಲಿರುವ ಶತ್ರುತ್ವ ಮಿತ್ರತ್ವ ಮುಂತಾದುವನ್ನು ಆತ್ಮನಲ್ಲಿ ತಿಳಿಯುತ್ತಾರೆ. ಎಲ್ಲರ ಅಂತರ್ಯಾಮಿ ಒಬ್ಬನೆ ಆದರೂ ಬೇರೆ ಬೇರೆ ಎಂದೂ ತಿಳಿಯು ತ್ತಾರೆ. ಅಜ್ಞಾನದಿಂದ ರಾಗ ದ್ವೇಷಗಳಿಗೆ ಸಿಲುಕಿ ಕರ್ಮಮಾಡಿ ಸಂಸಾರದಲ್ಲಿ ಬಳಲುತ್ತಾರೆ. ಸ್ವಪ್ನದಲ್ಲಿಯೂ ಜಾಗರದಲ್ಲಿಯೂ ಪರಮಾತ್ಮನೆ ಸ್ವತಂತ್ರಕರ್ತ. ಜೀವ ಅವನು ನಿರ್ಮಿಸುವ ಕ್ಷಣಿಕವಾದ ವಿಷಯ ಪದಾರ್ಥಗಳನ್ನು ಕೇವಲ ನೋಡುವವನು. ಆದರೂ ಜನರು ತಾವೇ ಕರ್ತರೆಂದು ಭ್ರಮಿಸುತ್ತಾರೆ. ಇದೆಲ್ಲವು ಪರಮಾತ್ಮನ ಬಂಧಕ ಶಕ್ತಿಯ ಪ್ರಭಾವ. ರುಕ್ಮಿಣಿ, ನೀನು ಅಜ್ಞಾನ ಜನ್ಯವಾದ ಶೋಕವನ್ನು ಜ್ಞಾನದಿಂದ ಪರಿಹರಿಸಿಕೊಂಡವಳು. ಸ್ವಸ್ಥಳಾಗು' ಹೀಗೆ ಬಲರಾಮನಾಡಿದ ಮಾತನ್ನು ಕೇಳಿ ರುಕ್ಮಿಣಿ ಶಾಂತಳಾದಳು.

ರುಕ್ಮಿ ಮಾತ್ರ ತನಗಾದ ಅಪಮಾನವನ್ನು ಮರೆಯಲಿಲ್ಲ. ಕುಂಡಿನಪುರವನ್ನು ಪ್ರವೇಶಿಸದೆ ಹೊರಗೇ ಭೋಜಕಟ ಎಂಬ ಬೇರೆಯೆ ಪಟ್ಟಣವನ್ನು ನಿರ್ಮಿಸಿಕೊಂಡು ಅಲ್ಲಿ ವಾಸ ಮಾಡಿದ.

ಶ್ರೀಕೃಷ್ಣ ರುಕ್ಮಿಣಿಯನ್ನು ದ್ವಾರಕೆಗೆ ಕರೆತಂದು ವಿಧಿಪೂರ್ವಕವಾಗಿ ವಿವಾಹ ಮಾಡಿಕೊಂಡ. ದ್ವಾರಕೆಯ ಮನೆ ಮನೆಗಳಲ್ಲಿಯೂ ಜನರಿಗೆ ದೊಡ್ಡ ಹಬ್ಬವಾಯಿತು. ಎಲ್ಲರೂ ವಧೂವರರಿಗೆ ಉಡುಗೊರೆಗಳನ್ನು ತಂದಿತ್ತರು. ಪಟ್ಟಣದಲ್ಲಿ ಎಲ್ಲ ಕಡೆ ಇಂದ್ರಧ್ವಜಗಳು ತೋರಣಗಳು ಪೂರ್ಣಕುಂಭಗಳು ಧೂಪದೀಪ ಮುಂತಾದ ಮಂಗಳದ್ರವ್ಯಗಳು ಶೋಭಿಸಿದುವು.

ಕುರು ಸೃಂಜಯ ಕೇಕಯ ವಿದರ್ಭ ಯದು ಕುಂತಿ ದೇಶಗಳ ಜನರು ಪರಸ್ಪರ ಸೇರಿ ಸುಖಿಸುತ್ತ ಸಂಭ್ರಮದಿಂದ ಓಡಾಡಿದರು. ಅಲ್ಲಲ್ಲಿ ರುಕ್ಮಿಣೀಹರಣವನ್ನು ಹಾಡಿ ಹೊಗಳುತ್ತಿದ್ದುದನ್ನು ಕೇಳಿ ರಾಜರೂ ರಾಜಕುಮಾರಿಯರೂ ಬಲು ವಿಸ್ಮಿತರಾದರು. ರುಕ್ಮಿಣಿ ಕೃಷ್ಣನನ್ನು, ಕೃಷ್ಣ ರುಕ್ಮಿಣಿಯನ್ನು ಸೇರಿದಾಗ ಅದನ್ನು ಕಣ್ತುಂಬ ಕಂಡ ದ್ವಾರಕೆಯ ಪ್ರಜೆಗಳಿಗೆ ದೊಡ್ಡ ಹಬ್ಬವಾಯಿತು.

ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇ
ಶ್ರೀಮದ್ ಭಾಗವತತಾತ್ಪರ್ಯ ನಿರ್ಣಯೇ
ದಶಮಸ್ಕಂಧೇ ಏಕೋನಷಷ್ಟಿತಮೋऽಧ್ಯಾಯಃ

॥ ಶ್ರೀಕೃಷ್ಣಾರ್ಪಣಮಸ್ತು ॥